KPSC Vaani

# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ



**ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ**

**ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ**

**ನಮ್ಮ ಗುಂಪುಗಳನ್ನು ಸೇರಿಕೊಳ್ಳಿ**

Click here To Join

To Download Our App

Follow Us on Facebook

Follow Us on Instagram

Scan QR Code
To Download
KPSC Vaani App

# 01 Jan 2026

## ಜನವರಿ 1 : ಜಾಗತಿಕ ಕುಟುಂಬ ದಿನ




* ಪ್ರತಿ ವರ್ಷ ಜನವರಿ 01 ರಂದು ಶಾಂತಿ ಮತ್ತು ಹಂಚಿಕೆಯ ದಿನವಾಗಿ ಜಾಗತಿಕ ಕುಟುಂಬ ದಿನವನ್ನು ಆಚರಿಸಲಾಗುತ್ತದೆ.
* ಪ್ರತಿಯೊಬ್ಬರ ಜೀವನದ ಏಳು ಬೀಳಿನಲ್ಲಿ ಕುಟುಂಬ ಹಾಗೂ ಕುಟುಂಬದ ಸದಸ್ಯರು ಪ್ರಮುಖ ಪಾತ್ರವಹಿಸುತ್ತಾರೆ. ಕುಟುಂಬ ಎನ್ನುವ ಪರಿಕಲ್ಪನೆಗೆ ಒಂದು ವಿಶೇಷ ದಿನವನ್ನು ಮೀಸಲಿಡಲಾಗಿದ್ದು, ಅದುವೇ ಜನವರಿ 1. ಪ್ರತಿ ವರ್ಷ ಹೊಸ ವರ್ಷದ ಮೊದಲ ದಿನದಂದು ಆಚರಿಸಲಾಗುವ ಜಾಗತಿಕ ಕುಟುಂಬ ದಿನವು ಜಗತ್ತಿಗೆ ಏಕತೆಯ ಸಕಾರಾತ್ಮಕ ಸಂದೇಶವನ್ನು ಸಾರುತ್ತದೆ.
* **2026 ಜನವರಿ 1 ರಂದು ಆಚರಿಸಲಾಗುವ ಜಾಗತಿಕ ಕುಟುಂಬ ದಿನದ ಥೀಮ್ "ಭೂಮಿಯೆಲ್ಲಾ ಒಂದು ಕುಟುಂಬ – ನಾವು ಎಲ್ಲರೂ ಒಂದೇ" ಎಂಬುವುದಾಗಿದೆ.**
* ಜಾಗತಿಕ ಕುಟುಂಬ ದಿನ ಶಾಂತಿ ಮತ್ತು ಹಂಚಿಕೆಯ ಒಂದು ದಿನ, ಯುನೈಟೆಡ್ ಸ್ಟೇಟ್ಸ್‌ನಲ್ಲಿ ಪ್ರತಿ ಜನವರಿ 1 ರಂದು ಶಾಂತಿ ಮತ್ತು ಹಂಚಿಕೆಯ ಜಾಗತಿಕ ದಿನವಾಗಿ ಆಚರಿಸಲಾಗುತ್ತದೆ. ಜಾಗತಿಕ ಕುಟುಂಬ ದಿನವು ವಿಶ್ವಸಂಸ್ಥೆಯ ಮಿಲೇನಿಯಮ್ ಆಚರಣೆಯಿಂದ "ಒಂದು ದಿನ ಶಾಂತಿಯಲ್ಲಿ" ಬೆಳೆಯಿತು.
* ಪ್ರತಿಯೊಬ್ಬರಿಗೂ ಬದುಕಲು ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡಲು ಭೂಮಿಯು ಒಂದು ಜಾಗತಿಕ ಕುಟುಂಬ ಎಂಬ ಕಲ್ಪನೆಯನ್ನು ಪರಿಗಣಿಸಿ ಮತ್ತು ಪ್ರಚಾರ ಮಾಡುವ ಮೂಲಕ ಒಂದುಗೂಡಿಸುವುದು ಮತ್ತು ಶಾಂತಿಯ ಸಂದೇಶವನ್ನು ಹರಡುವುದು ಇದರ ಗುರಿಯಾಗಿದೆ.
* 1997 ರಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು ಪ್ರಪಂಚದ ಮಕ್ಕಳಿಗಾಗಿ ಶಾಂತಿ ಮತ್ತು ಅಹಿಂಸೆಯ ಸಂಸ್ಕೃತಿಗಾಗಿ ಅಂತರರಾಷ್ಟ್ರೀಯ ದಶಕವನ್ನು ಪ್ರಾರಂಭಿಸಿತು.
* 1999 ರಲ್ಲಿ ವಿಶ್ವಸಂಸ್ಥೆಯ ಸದಸ್ಯರು ವಿಶ್ವಕ್ಕೆ ಶಾಂತಿಯನ್ನು ತರಲು ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು ವರ್ಷದ ಮೊದಲ ದಿನವನ್ನು ಜಾಗತಿಕ ಕುಟುಂಬ ದಿನವನ್ನು ಆಚರಿಸಲಾಗುತ್ತದೆ.
* ಒನ್ ಡೇ ಇನ್ ಪೀಸ್ ಜನವರಿ 1, 2000 ಹೆಸರಿನ ಮೊದಲ ಮಕ್ಕಳ ಪುಸ್ತಕವು 1996ರಲ್ಲಿ ಪ್ರಕಟವಾಗಿತ್ತು. ಈ ಪುಸ್ತಕವನ್ನು ಅಮೆರಿಕದ ಲೇಖಕರಾದ ಸ್ಟೀವ್ ಡೈಮಾಂಡ್ ಮತ್ತು ರಾಬರ್ಟ್ ಅಲನ್ ಸಿಲ್ವರ್‌ಸ್ಟೈನ್ ಬರೆದಿದ್ದರು. 1998ರಲ್ಲಿ ಲಿಂಡಾ ಗ್ರೋವರ್ ಬರೆದ ಟ್ರೀ ಇಸ್ಲ್ಯಾಂಡ್: ಎ ನಾವೆಲ್ ಫಾರ್ ದಿ ನ್ಯೂ ಮಿಲೇನಿಯಂ ಹೆಸರಿನ ಪುಸ್ತಕವು ಬಿಡುಗಡೆಯಾಗಿತ್ತು.

*** ಜಾಗತಿಕ ಕುಟುಂಬ ದಿನದ ಉದ್ದೇಶ:**

- ಜಗತ್ತನ್ನು ಒಂದೇ ಕುಟುಂಬವಾಗಿ ಕಾಣುವ ಭಾವನೆ ಬೆಳೆಸುವುದು
- ಶಾಂತಿ, ಸಹಬಾಳ್ವೆ ಮತ್ತು ಪರಸ್ಪರ ಗೌರವವನ್ನು ಉತ್ತೇಜಿಸುವುದು
- ಹಿಂಸೆಯಿಂದ ದೂರವಾಗಿ, ಮಾನವೀಯ ಸಂಬಂಧಗಳನ್ನು ಬಲಪಡಿಸುವುದು.

## ಕಾರ್ಬನ್ ತೆರಿಗೆ ಹೊಡೆತ: CBAM ನೀತಿಯಿಂದ ಭಾರತೀಯ ರಫ್ತು ವಲಯ ಆತಂಕ




* ಭಾರತದ ರಫ್ತು ಮಾರುಕಟ್ಟೆಯಲ್ಲಿ ಉಕ್ಕು ಮತ್ತು ಅಲ್ಯೂಮಿನಿಯಂ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ, 2026ರ ಜನವರಿ 1ರಿಂದ ಯೂರೋಪಿಯನ್ ಒಕ್ಕೂಟವು (EU) ಜಾರಿಗೆ ತರುತ್ತಿರುವ ಕಾರ್ಬನ್ ಬಾರ್ಡರ್ ಅಡ್ಜಸ್ಟ್‌ಮೆಂಟ್ ಮೆಕಾನಿಸಂ (CBAM) ಎಂಬ ಹೊಸ ನಿಯಮವು ಭಾರತೀಯ ರಫ್ತುದಾರರಲ್ಲಿ ಆತಂಕ ಮೂಡಿಸಿದೆ. ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಶಿಯೇಟಿವ್ (GTRI) ವರದಿಯ ಪ್ರಕಾರ, ಈ ನೀತಿಯಿಂದಾಗಿ ಭಾರತೀಯ ಉತ್ಪನ್ನಗಳ ಬೆಲೆ ಹೆಚ್ಚಾಗಿ, ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆ ಕಡಿಮೆಯಾಗುವ ಭೀತಿ ಎದುರಾಗಿದೆ.
* CBAM ಎನ್ನುವುದು ಯೂರೋಪಿಯನ್ ಒಕ್ಕೂಟವು ತನ್ನೊಳಗಿನ ಉದ್ಯಮಗಳಿಗೆ ಸಮಾನವಾದ ಕಾರ್ಬನ್ ವೆಚ್ಚವನ್ನು ಹೊರಗಿನ ದೇಶಗಳಿಂದ ಆಮದು ಆಗುವ ಸರಕುಗಳ ಮೇಲೂ ವಿಧಿಸುವ ವ್ಯವಸ್ಥೆಯಾಗಿದೆ. ಉದ್ದೇಶ – ಕಾರ್ಬನ್ ಉತ್ಸರ್ಗವನ್ನು ಕಡಿಮೆ ಮಾಡುವುದು ಹಾಗೂ "ಕಾರ್ಬನ್ ಲೀಕೇಜ್" ಅನ್ನು ತಡೆಯುವುದು.
* ಉಕ್ಕು ಮತ್ತು ಅಲ್ಯೂಮಿನಿಯಂ ಮೇಲೆ ಪರಿಣಾಮ : ಕೆಳಗಿನ ಕಾರಣಗಳಿಂದ ಭಾರತೀಯ ಉಕ್ಕು ಮತ್ತು ಅಲ್ಯೂಮಿನಿಯಂ ಉತ್ಪನ್ನಗಳ ಮೇಲೆ CBAM ವೆಚ್ಚ ಹೆಚ್ಚಾಗುತ್ತದೆ.

**# ಉಕ್ಕು ಉತ್ಪಾದನೆ :**

=> Blast Furnace–Basic Oxygen Furnace (BF–BOF) ವಿಧಾನದಲ್ಲಿ ಕಾರ್ಬನ್ ಉತ್ಸರ್ಗ ಅತ್ಯಧಿಕ
=> ಗ್ಯಾಸ್ ಆಧಾರಿತ DRI ನಲ್ಲಿ ಮಧ್ಯಮ
=> ಸ್ಕ್ರ್ಯಾಪ್ ಆಧಾರಿತ Electric Arc Furnace (EAF) ನಲ್ಲಿ ಅತಿ ಕಡಿಮೆ

**# ಅಲ್ಯೂಮಿನಿಯಂ ಉತ್ಪಾದನೆ:**

=> ಬಳಸುವ ವಿದ್ಯುತ್ ಮೂಲ ಅತ್ಯಂತ ಮುಖ್ಯ
=> ಕಲ್ಲಿದ್ದಲು ಆಧಾರಿತ ವಿದ್ಯುತ್ ಬಳಕೆ ಕಾರ್ಬನ್ ಹೊರೆಯನ್ನು ಬಹಳಷ್ಟು ಹೆಚ್ಚಿಸುತ್ತದೆ

* **ರಫ್ತುದಾರರ ಮೇಲೆ ಹೊರೆ** : CBAM ತೆರಿಗೆಯನ್ನು ಯೂರೋಪಿಯನ್ ಆಮದುದಾರರು ನೇರವಾಗಿ ಪಾವತಿಸಬೇಕಾದರೂ, ಅದರ ವೆಚ್ಚವನ್ನು ಭಾರತೀಯ ರಫ್ತುದಾರರ ಮೇಲೆ ಒತ್ತಡವಾಗಿ ತಳ್ಳಲಾಗುತ್ತದೆ ಪರಿಣಾಮವಾಗಿ, ಭಾರತೀಯ ರಫ್ತುದಾರರು ತಮ್ಮ ಉತ್ಪನ್ನಗಳ ಬೆಲೆಯನ್ನು ಶೇ.15–22ರಷ್ಟು ಕಡಿತಗೊಳಿಸುವ ಅಗತ್ಯ ಎದುರಾಗಬಹುದು
* ಸಣ್ಣ ರಫ್ತುದಾರರಿಗೆ ಸಂಕಷ್ಟ : GTRI ಪ್ರಕಾರ, CBAM ನ ಸಂಕೀರ್ಣ ಡೇಟಾ ಸಂಗ್ರಹ ಮತ್ತು ಪರಿಶೀಲನಾ ನಿಯಮಗಳು ಸಣ್ಣ ಮತ್ತು ಮಧ್ಯಮ ಮಟ್ಟದ ರಫ್ತುದಾರರಿಗೆ ದೊಡ್ಡ ಸವಾಲಾಗಲಿವೆ. ಪ್ರತಿ ಕಾರ್ಖಾನೆ ಮಟ್ಟದಲ್ಲಿ ಕಾರ್ಬನ್ ಉತ್ಸರ್ಗ ಲೆಕ್ಕಾಚಾರ, ಇಂಧನ ಬಳಕೆ, ವಿದ್ಯುತ್ ಬಳಕೆ, ಉತ್ಪಾದನಾ ಪ್ರಮಾಣ, ಉತ್ಸರ್ಗ ಗುಣಾಂಕಗಳ ತ್ರೈಮಾಸಿಕ ದಾಖಲೆ, ಈ ಎಲ್ಲವು ಅನುಸರಣೆ ವೆಚ್ಚವನ್ನು ಹೆಚ್ಚಿಸಿ, ಹಲವಾರು ಸಣ್ಣ ರಫ್ತುದಾರರು ಇಯು ಮಾರುಕಟ್ಟೆಯಿಂದ ಹೊರಬರುವ ಪರಿಸ್ಥಿತಿ ಉಂಟಾಗಬಹುದು.
* CBAM ಒಂದು ಸಾಮಾನ್ಯ ಪರಿಸರ ನೀತಿ ಮಾತ್ರವಲ್ಲ; ಇದು ಉತ್ಪಾದನಾ ಘಟಕ ಮಟ್ಟದ ಕಾರ್ಬನ್ ಲೆಕ್ಕಪತ್ರ ವ್ಯವಸ್ಥೆ. ಭವಿಷ್ಯದಲ್ಲಿ ಇಯು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿರಲು, ಭಾರತೀಯ ಉಕ್ಕು ಮತ್ತು ಅಲ್ಯೂಮಿನಿಯಂ ಉದ್ಯಮಗಳು: ಕಡಿಮೆ ಕಾರ್ಬನ್ ತಂತ್ರಜ್ಞಾನಗಳತ್ತ ಸಾಗುವುದು, ಶುದ್ಧ ವಿದ್ಯುತ್ ಬಳಕೆ ಹೆಚ್ಚಿಸುವುದು ಮತ್ತು ನಿಖರ ಉತ್ಸರ್ಗ ಲೆಕ್ಕಾಚಾರ ವ್ಯವಸ್ಥೆ ಅಳವಡಿಸುವುದು ಅತ್ಯಾವಶ್ಯಕವಾಗಲಿದೆ.'

## ಗಣರಾಜ್ಯೋತ್ಸವ 2026: ಕರ್ತವ್ಯ ಪಥದಲ್ಲಿ ಲಡಾಖ್‌ನ 'ಬ್ಯಾಕ್ಟ್ರಿಯನ್' ಒಂಟೆಗಳು ಮತ್ತು 'ಝುನ್ಸ್ಕರಿ' ಕುದುರೆಗಳ ಪರಾಕ್ರಮ!



* ಭಾರತೀಯ ಸೇನೆಯು ಕೇವಲ ಟ್ಯಾಂಕ್‌ಗಳು ಮತ್ತು ಕ್ಷಿಪಣಿಗಳಿಂದ ಮಾತ್ರವಲ್ಲ, ಪ್ರಕೃತಿಯ ಅಪ್ರತಿಮ ಕೊಡುಗೆಗಳಾದ ಪ್ರಾಣಿ ಸೈನಿಕರ ಮೂಲಕವೂ ದೇಶದ ಗಡಿ ರಕ್ಷಣೆ ಮಾಡುತ್ತಿದೆ. ಮುಂಬರುವ 2026ರ ಜನವರಿ 26ರ ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ, ಮೊದಲ ಬಾರಿಗೆ ಎರಡು ಬೆನ್ನೇರಿ (Double Hump) ಹೊಂದಿರುವ ಬ್ಯಾಕ್ಟ್ರಿಯನ್ ಒಂಟೆಗಳು ಮತ್ತು ಅಪರೂಪದ ಝುನ್ಸ್ಕರಿ ಕುದುರೆಗಳು ಭಾಗವಹಿಸಿ ಇತಿಹಾಸ ನಿರ್ಮಿಸಲಿವೆ.

ಈ ಬಾರಿಯ ಮೆರವಣಿಗೆಯ ಮತ್ತೊಂದು ವಿಶೇಷವೆಂದರೆ, ಸೇನೆಯ ಪಶುವೈದ್ಯಕೀಯ ದಳದ (RVC) ತುಕಡಿಯನ್ನು ಮಹಿಳಾ ಅಧಿಕಾರಿಯೊಬ್ಬರು ಮುನ್ನಡೆಸುತ್ತಿರುವುದು 'ನಾರಿ ಶಕ್ತಿ'ಗೆ ಸಾಕ್ಷಿಯಾಗಲಿದೆ.

* ಮೆರವಣಿಗೆಯಲ್ಲಿ ಭಾಗವಹಿಸುವ ಒಂಟೆಗಳು ಪೂರ್ವ ಲಡಾಖ್‌ನ ಶೀತ ಮರುಭೂಮಿ ಪ್ರದೇಶಗಳಲ್ಲಿ, ವಾಸ್ತವಿಕ ನಿಯಂತ್ರಣ ರೇಖೆ (LAC) ಸಮೀಪ ಲಾಜಿಸ್ಟಿಕ್ಸ್ ವಿತರಣೆ ಹಾಗೂ ಗಸ್ತು ಕರ್ತವ್ಯಗಳಿಗೆ ನಿಯೋಜಿಸಲ್ಪಟ್ಟಿವೆ. ಕಳೆದ ಎರಡು ವರ್ಷಗಳಲ್ಲಿ ಇವು ಹಲವು ಕಠಿಣ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡಿದ್ದು, 15,000 ರಿಂದ 18,000 ಅಡಿ ಎತ್ತರದಲ್ಲಿಯೂ ಸುಲಭವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿವೆ. ಪ್ರತಿ ಒಂಟೆ 150 ರಿಂದ 200 ಕಿಲೋಗ್ರಾಂ ತೂಕವನ್ನು ಹೊತ್ತೊಯ್ಯಬಲ್ಲದು ಹಾಗೂ ತೀವ್ರ ಶೀತ ಮತ್ತು ಕಠಿಣ ಹವಾಮಾನದಲ್ಲಿಯೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ.

* ಅದೇ ರೀತಿ, ಝುನ್ಸ್ಕರಿ ಕುದುರೆಗಳು ಹಾಗೂ ಹೇಸರಗತ್ತೆಗಳನ್ನೂ ಸೇನೆಯ ಸೇವೆಗೆ ಬಳಸಲಾಗುತ್ತಿದೆ. ಇವು 70 ಕಿಲೋಗ್ರಾಂ ತೂಕವನ್ನು ಹೊರುವ ಸಾಮರ್ಥ್ಯ ಹೊಂದಿದ್ದು, 18,000 ಅಡಿ ಎತ್ತರದ ಪರ್ವತ ಪ್ರದೇಶಗಳಲ್ಲಿ ಸಹ ಸರಾಗವಾಗಿ ಸಂಚರಿಸಬಲ್ಲವು. ವಿಶೇಷವಾಗಿ ಮೈನಸ್ 40 ಡಿಗ್ರಿ ಸೆಲ್ಸಿಯಸ್ ತೀವ್ರ ತಾಪಮಾನದಲ್ಲಿಯೂ ಜೀವಿಸಿ ಕೆಲಸ ಮಾಡುವ ಶಕ್ತಿಯು ಇವುಗಳ ಪ್ರಮುಖ ವೈಶಿಷ್ಟ್ಯವಾಗಿದೆ.

* ಈ ಪ್ರಾಣಿ ಪಡೆಗಳ ಪ್ರದರ್ಶನವು ಭಾರತೀಯ ಸೇನೆಯ ಕಾರ್ಯಕ್ಷಮತೆ, ಹೊಂದಿಕೊಳ್ಳುವಿಕೆ ಮತ್ತು ಪ್ರಕೃತಿಯೊಂದಿಗೆ ಸಹಬಾಳ್ವೆಯನ್ನು ಪ್ರತಿನಿಧಿಸುವುದರ ಜೊತೆಗೆ, ದೇಶದ ಭದ್ರತೆಗೆ ಅವು ನೀಡುತ್ತಿರುವ ಮಹತ್ವದ ಕೊಡುಗೆಯನ್ನು ರಾಷ್ಟ್ರದ ಮುಂದೆ ಉಜ್ಜ್ವಲ ಮಹತ್ವದ ಅವಕಾಶವಾಗಿದೆ.

## ಇಸ್ರೋ ಸಾಧನೆ: ಎಸ್‌ಎಸ್‌ಎಲ್‌ವಿ (SSLV) ಸುಧಾರಿತ ಮೂರನೇ ಹಂತದ ಪರೀಕ್ಷೆ ಯಶಸ್ವಿ - ಹೆಚ್ಚಲಿದೆ 90 ಕೆ.ಜಿ. ಹೊರೆ ಸಾಮರ್ಥ್ಯ!




* ಭಾರತೀಯ ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪನೆಯಾಗಿದೆ. ಡಿಸೆಂಬರ್ 30, 2025ರಂದು ಇಸ್ರೋ ತನ್ನ ಸಣ್ಣ ಉಪಗ್ರಹ ಉಡ್ಡಯನ ವಾಹನ (Small Satellite Launch Vehicle - SSLV) ದ ಸುಧಾರಿತ ಮೂರನೇ ಹಂತದ (SS3) 'ಸ್ಥಿರ ದಹನ ಪರೀಕ್ಷೆ'ಯನ್ನು (Static Test) ಯಶಸ್ವಿಯಾಗಿ ನಡೆಸಿದೆ. ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಸಾಲಿಡ್ ಮೋಟರ್ ಸ್ಟ್ಯಾಟಿಕ್ ಟೆಸ್ಟ್ ಸೌಲಭ್ಯದಲ್ಲಿ 108 ಸೆಕೆಂಡುಗಳ ಕಾಲ ಈ ಪರೀಕ್ಷೆ ನಡೆದಿದೆ.

* ವಿನ್ಯಾಸ ಸುಧಾರಣೆಗಳು ಮತ್ತು ಹೊರೆ ಸಾಮರ್ಥ್ಯದ ಹೆಚ್ಚಳ : ಸುಧಾರಿತ SS3 ಹಂತದಲ್ಲಿ ಕಾರ್ಬನ್-ಎಪಾಕ್ಸಿ ಸಂಯುಕ್ತ ಮೋಟರ್ ಕೇಸ್ ಅನ್ನು ಅಳವಡಿಸಲಾಗಿದೆ. ಇದರಿಂದ ಹಂತದ ನಿರ್ಜೀವ ತೂಕ (inert mass) ಕಡಿಮೆಯಾಗಿದ್ದು, ಎಸ್‌ಎಸ್‌ಎಲ್‌ವಿಯ ಹೊರೆ ಸಾಮರ್ಥ್ಯದಲ್ಲಿ ಸುಮಾರು 90 ಕೆ.ಜಿ. ಹೆಚ್ಚಳವಾಗಿದೆ. ಮೂರನೇ ಹಂತವು ಒಬ್ಬಂಟಿಯಾಗಿ ಸೆಕೆಂಡಿಗೆ 4 ಕಿ.ಮೀ.ವರೆಗೆ ವೇಗ ಒದಗಿಸುವ ಸಾಮರ್ಥ್ಯ ಹೊಂದಿದೆ. ಜೊತೆಗೆ ಇಗ್ನೈಟರ್ ಹಾಗೂ ನೋಜಲ್ ವ್ಯವಸ್ಥೆಗಳಲ್ಲಿ ಸುಧಾರಣೆಗಳನ್ನು ಮಾಡಿ ದಕ್ಷತೆ, ಬಲಿಷ್ಠತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸಲಾಗಿದೆ.

* ಉನ್ನತ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆಗಳು : ಪರೀಕ್ಷೆ ಸಮಯದಲ್ಲಿ ಸುಮಾರು 233 ಸಂವೇದಕಗಳನ್ನು ಬಳಸಿ ಒತ್ತಡ, ತಳ್ಳುಶಕ್ತಿ, ತಾಪಮಾನ, ಕಂಪನ, ನಿಯಂತ್ರಣ ಎಲೆಕ್ಟ್ರಾನಿಕ್ಸ್ ಹಾಗೂ ಆ್ಯಕ್ಚುಯೇಟರ್‌ಗಳ ಕಾರ್ಯಕ್ಷಮತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಯಿತು. ನೋಜಲ್ ನಿಯಂತ್ರಣಕ್ಕೆ ದೋಷ ಸಹಿಷ್ಣು (fault-tolerant) ಎಲೆಕ್ಟ್ರೋ-ಮೆಕಾನಿಕಲ್ ಆ್ಯಕ್ಚುಯೇಷನ್ ವ್ಯವಸ್ಥೆಯನ್ನು ಬಳಸಲಾಗಿದ್ದು, ಕಡಿಮೆ ವಿದ್ಯುತ್ ಬಳಕೆಯ ನಿಯಂತ್ರಣ ಎಲೆಕ್ಟ್ರಾನಿಕ್ಸ್ ಇದಕ್ಕೆ ಬೆಂಬಲ ನೀಡುತ್ತದೆ. ಈ ಎಲ್ಲ ಸುಧಾರಣೆಗಳು ಮುಂದಿನ ಎಸ್‌ಎಸ್‌ಎಲ್‌ವಿ ಮಿಷನ್‌ಗಳ ಕಾರ್ಯಾಚರಣಾ ದಕ್ಷತೆ ಮತ್ತು ಮಿಷನ್ ಭದ್ರತೆಯನ್ನು ಮತ್ತಷ್ಟು ಬಲಪಡಿಸುತ್ತವೆ.

* ಸ್ವದೇಶಿ ಉತ್ಪಾದನಾ ಸಾಮರ್ಥ್ಯಕ್ಕೆ ಬಲ : ಕಾರ್ಬನ್ ಫಿಲಮೆಂಟ್-ವೌಂಡ್ ಮೋಟರ್ ಕೇಸ್ ಅನ್ನು ತಿರುವನಂತಪುರದಲ್ಲಿನ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ ಸಂಯುಕ್ತ ವಸ್ತು ಘಟಕದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಘನ ಮೋಟರ್ ಕಾಸ್ಟಿಂಗ್ ಕಾರ್ಯವನ್ನು ಶ್ರೀಹರಿಕೋಟದ ಸೌಲಭ್ಯಗಳಲ್ಲಿ ನಡೆಸಲಾಗಿದೆ. ಇತ್ತೀಚೆಗೆ ಇಸ್ರೋ ಘನ ಮೋಟರ್ ಉತ್ಪಾದನಾ ಮೂಲಸೌಕರ್ಯವನ್ನು ವಿಸ್ತರಿಸಿದ್ದು, ಶ್ರೀಹರಿಕೋಟದಲ್ಲಿ ಹೊಸ ಸೌಲಭ್ಯಗಳು, ಅಲುವೆಯಲ್ಲಿ ಎರಡನೇ ಅಮೋನಿಯಂ ಪರ್ಕ್ಲೋರೇಟ್ ಉತ್ಪಾದನಾ ಘಟಕ ಹಾಗೂ ಸ್ವದೇಶಿ 10 ಟನ್ ವರ್ಟಿಕಲ್ ಮಿಕ್ಸರ್ ಅನ್ನು ಕಾರ್ಯಾರಂಭ ಮಾಡಲಾಗಿದೆ. ಇವುಗಳು ರಾಷ್ಟ್ರದ ಬಾಹ್ಯಾಕಾಶ ಮಿಷನ್‌ಗಳ ಜೊತೆಗೆ ಖಾಸಗಿ ಬಾಹ್ಯಾಕಾಶ ಸ್ಟಾರ್ಟ್‌ಅಪ್‌ಗಳಿಗೆ ಸಹ ಬೆಂಬಲ ನೀಡುವಲ್ಲಿ ಮಹತ್ವದ ಪಾತ್ರ ವಹಿಸಲಿವೆ.

* ಈ ಯಶಸ್ವಿ ಪರೀಕ್ಷೆಯೊಂದಿಗೆ, 'ಲಾಂಚ್-ಆನ್-ಡಿಮಾಂಡ್' ಸಾಮರ್ಥ್ಯವನ್ನು ಬಲಪಡಿಸುವ ದಿಕ್ಕಿನಲ್ಲಿ ಭಾರತ ಮತ್ತೊಂದು ದೊಡ್ಡ ಹೆಜ್ಜೆಯನ್ನು ಮುಂದಿಟ್ಟಿದೆ.

## ಭಾರತದ ವಿಮಾ ಕ್ಷೇತ್ರದಲ್ಲಿ 100% ಎಫ್‌ಡಿಐ (FDI): ಗಸೆಟ್ ಅಧಿಸೂಚನೆ ಪ್ರಕಟ - ವಿಮಾ ಕ್ರಾಂತಿಗೆ ಮುನ್ನುಡಿ!




* ಭಾರತ ಸರ್ಕಾರವು ವಿಮಾ ಕ್ಷೇತ್ರದಲ್ಲಿ ಮಹತ್ವದ ಸುಧಾರಣೆಯಾಗಿ 100% ವಿದೇಶಿ ನೇರ ಹೂಡಿಕೆ (FDI)ಗೆ ಅವಕಾಶ ಕಲ್ಪಿಸುವ ಅಂತಿಮ ನಿಯಮಗಳನ್ನು ಅಧಿಸೂಚಿಸಿದೆ. ಈ ಕ್ರಮವು ಜಾಗತಿಕ ಬಂಡವಾಳ ಆಕರ್ಷಣೆ, ಸ್ಪರ್ಧಾತ್ಮಕತೆ ಹೆಚ್ಚಳ ಹಾಗೂ ವಿಮಾ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶ ಹೊಂದಿದೆ. ಹಣಕಾಸು ಸಚಿವಾಲಯವು ವಿಮಾ ಕಂಪನಿಗಳ ಮಂಡಳಿಯಲ್ಲಿ ಭಾರತೀಯ ನಿರ್ದೇಶಕರ ಬಹುಮತ ಕಡ್ಡಾಯವನ್ನು ರದ್ದುಪಡಿಸಿದೆ. ಆದರೆ CEO, MD ಅಥವಾ Chairperson ಹುದ್ದೆಗಳಲ್ಲೊಂದು ಭಾರತೀಯ ನಿವಾಸಿಯದ್ದಾಗಿರಬೇಕು ಎಂಬ

ಷರತ್ತು ವಿಧಿಸಲಾಗಿದೆ. ಈ ಮೂಲಕ ವಿದೇಶಿ ಬಂಡವಾಳ ಆಕರ್ಷಣೆ ಮತ್ತು ರಾಷ್ಟ್ರೀಯ ಹಿತಾಸಕ್ತಿ ನಡುವಿನ ಸಮತೋಲನವನ್ನು ಸರ್ಕಾರ ಸಾಧಿಸಿದೆ.

* ಹೊಸ ನಿಯಮಗಳ ಮುಖ್ಯ ಲಕ್ಷಣಗಳು :ಹೊಸ ನಿಯಮಗಳು ವಿಮಾ ಕ್ಷೇತ್ರದ ಆಡಳಿತಾತ್ಮಕ ನಿರ್ಬಂಧಗಳನ್ನು ಸಡಿಲಗೊಳಿಸುತ್ತವೆ:

=> ಭಾರತೀಯ ನಿರ್ದೇಶಕರ ಬಹುಮತ ಕಡ್ಡಾಯವಿಲ್ಲ

=> ಪ್ರಮುಖ ನಿರ್ವಹಣಾ ಸಿಬ್ಬಂದಿಯಲ್ಲಿ ಭಾರತೀಯರ ನಿರ್ದಿಷ್ಟ ಸಂಖ್ಯೆಯ ಅವಶ್ಯಕತೆ ಇಲ್ಲ

=> ಕನಿಷ್ಠ ಒಂದು ಉನ್ನತ ಹುದ್ದೆ ಭಾರತೀಯ ನಿವಾಸಿಗೆ ಕಡ್ಡಾಯ

=> ಮಂಡಳಿ ರಚನೆಯಲ್ಲಿ ಹೆಚ್ಚಿನ ಲವಚಿಕತೆ

=> ವಿಮಾ ಕ್ಷೇತ್ರದಲ್ಲಿ Ease of Doing Businessಗೆ ಉತ್ತೇಜನ

*** ನಿಯಂತ್ರಣಾತ್ಮಕ ಬದಲಾವಣೆಗಳು:** ಈ ಅಧಿಸೂಚನೆಯು ಹಲವು ಪ್ರಮುಖ ನಿಯಂತ್ರಣ ತಿದ್ದುಪಡಿಗಳನ್ನು ಒಳಗೊಂಡಿದೆ:

=> Rule 4A ಅನ್ನು ತೆಗೆದುಹಾಕಲಾಗಿದೆ. ಇದರಲ್ಲಿ:

- ಸಾಲ್ವೆನ್ಸಿ ಮಾರ್ಜಿನ್ 1.2 ಕ್ಕಿಂತ ಕಡಿಮೆಯಾದರೆ ಲಾಭ ವಿತರಣೆ ನಿರ್ಬಂಧ
- ಕನಿಷ್ಠ ಸ್ವತಂತ್ರ ನಿರ್ದೇಶಕರ ಕಡ್ಡಾಯ

=> FEMA Regulations, 2000 ಬದಲಾಗಿ FEMA (Non-Debt Instrument) Rules, 2019 ಗೆ ಉಲ್ಲೇಖ

=>74% FDI ಮಿತಿಗೆ ಸಂಬಂಧಿಸಿದ ಉಲ್ಲೇಖಗಳನ್ನು ತೆಗೆದುಹಾಕಲಾಗಿದೆ

=> "Insurance Act, 1938 ನಲ್ಲಿ ನಿರ್ಧರಿಸಲಾದ ಮಿತಿ" ಎಂದು ಬದಲಾವಣೆ

=> ನಿಯಮಗಳು ಡಿಸೆಂಬರ್ 30, 2025 ರಿಂದ ಜಾರಿಗೆ (ಗಜೆಟ್ ಪ್ರಕಟಣೆ ದಿನಾಂಕ)

* ತೆಗೆದುಹಾಕಲಾದ ನಿರ್ಬಂಧಗಳು: ವಿದೇಶಿ ಹೂಡಿಕೆ ಹೊಂದಿರುವ ವಿಮಾ ಕಂಪನಿಗಳ ಮೇಲಿನ ಕೆಳಗಿನ ನಿರ್ಬಂಧಗಳನ್ನು ರದ್ದುಪಡಿಸಲಾಗಿದೆ:

=> ಲಾಭಾಂಶ ವಾಪಸ್ಸು (Dividend Repatriation)ಗೆ IRDAI ಪೂರ್ವಾನುಮತಿ ಅಗತ್ಯವಿಲ್ಲ

=> ವಿದೇಶಿ ಪ್ರೋಮೋಟರ್ ಅಥವಾ ಗುಂಪು ಕಂಪನಿಗಳಿಗೆ ಪಾವತಿಗಳ ಮಿತಿ ಇಲ್ಲ

=> ಮಂಡಳಿ ಮತ್ತು ಪ್ರಮುಖ ನಿರ್ವಹಣಾ ರಚನೆ ಕುರಿತು ನಿಯಂತ್ರಕನ ಕಟ್ಟುನಿಟ್ಟಿನ ನಿಯಮಗಳು ಇಲ್ಲ

ಇವು ಕಂಪನಿಗಳಿಗೆ ಹೆಚ್ಚಿನ ಕಾರ್ಯಾಚರಣಾ ಸ್ವಾತಂತ್ರ್ಯ ಒದಗಿಸುತ್ತವೆ.

*** ವಿಮಾ ಕ್ಷೇತ್ರದಲ್ಲಿ 100% FDIಗೆ ಮಹತ್ವ :**

=> ದೀರ್ಘಕಾಲಿಕ ವಿದೇಶಿ ಬಂಡವಾಳ ಹರಿವು

=> ವಿಮಾ ಕಂಪನಿಗಳ ಹಣಕಾಸು ಸ್ಥಿರತೆ ಮತ್ತು ಅಪಾಯ ತಾಳುವ ಸಾಮರ್ಥ್ಯ ಹೆಚ್ಚಳ

=> ಜಾಗತಿಕ ಉತ್ತಮ ಪದ್ಧತಿ ಮತ್ತು ನವೀನತೆಗೆ ಉತ್ತೇಜನ

=> "ಸಬ್ಕಾ ಬೀಮಾ" ದೃಷ್ಟಿಕೋನಕ್ಕೆ ಬೆಂಬಲ

=> ಭಾರತೀಯ ನಾಯಕತ್ವ ಕಡ್ಡಾಯದ ಮೂಲಕ ರಾಷ್ಟ್ರೀಯ ಹಿತಾಸಕ್ತಿ ರಕ್ಷಣೆ

* ಭಾರತದಲ್ಲಿ ವಿಮಾ ಕ್ಷೇತ್ರವು IRDAI ನಿಯಂತ್ರಣದಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿದೇಶಿ ನೇರ ಹೂಡಿಕೆ (FDI) ಮಿತಿಯನ್ನು ಹಂತ ಹಂತವಾಗಿ 26%ರಿಂದ 49%, ನಂತರ 74%ಕ್ಕೆ ಹಾಗೂ ಈಗ 100%ಕ್ಕೆ ಹೆಚ್ಚಿಸಲಾಗಿದೆ. ಬಜೆಟ್ 2025ರಲ್ಲಿ ಈ 100% FDIಗೆ ಅಧಿಕೃತ ಘೋಷಣೆ ಮಾಡಲಾಗಿದ್ದು, ಇದರ ಉದ್ದೇಶ ವಿಮಾ ಕ್ಷೇತ್ರದಲ್ಲಿ ಬಂಡವಾಳ ಲಭ್ಯತೆ ಹೆಚ್ಚಿಸುವುದು, ವಿಮಾ ವ್ಯಾಪ್ತಿಯನ್ನು ವಿಸ್ತರಿಸುವುದು ಹಾಗೂ ಉತ್ಪನ್ನ ನವೀನತೆ ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸುವುದಾಗಿದೆ.

## ಬೆಂಗಳೂರಿನಲ್ಲಿ ಅಮಿಯೇರಾ ಖೋಸ್ಲಾ ಪರಾಕ್ರಮ: 29ನೇ ರಾಷ್ಟ್ರೀಯ ಸ್ಪೋರ್ಟ್ ಕ್ಲೈಂಬಿಂಗ್‌ನಲ್ಲಿ ಚಿನ್ನದ ಸಾಧನೆ!




* ಭಾರತದ ಉದಯೋನ್ಮುಖ ಕ್ಲೈಂಬಿಂಗ್ ತಾರೆ, 14 ವರ್ಷದ ಅಮಿಯೇರಾ ಖೋಸ್ಲಾ (Amieyra Khoslla) ಅವರು ಬೆಂಗಳೂರಿನಲ್ಲಿ ನಡೆದ 2025ರ 29ನೇ ರಾಷ್ಟ್ರೀಯ ಸ್ಪೋರ್ಟ್ ಕ್ಲೈಂಬಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದು ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಯೂತ್ ಗರ್ಲ್ಸ್ (ಅಂಡರ್–17) ವಿಭಾಗದ ಬೌಲ್ಡರಿಂಗ್ ಸ್ಪರ್ಧೆಯಲ್ಲಿ ಅವರು ಈ ಗಮನಾರ್ಹ ಸಾಧನೆ ಮಾಡಿದ್ದಾರೆ.

* ಯೂತ್ ಗರ್ಲ್ಸ್ ವಿಭಾಗದಲ್ಲಿ ಪ್ರಭುತ್ವದ ಪ್ರದರ್ಶನ : ಬೌಲ್ಡರಿಂಗ್ ವಿಭಾಗದಲ್ಲಿ ಸ್ಪರ್ಧಿಸಿದ ಅಮಿಯೇರಾ ಫೈನಲ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ 83.8 ಅಂಕಗಳೊಂದಿಗೆ ಪ್ರಥಮ ಸ್ಥಾನ ಗಳಿಸಿದರು. ನಾಲ್ಕು ವಿಭಿನ್ನ ಬೌಲ್ಡರಿಂಗ್ ಸಮಸ್ಯೆಗಳಲ್ಲಿ ಅವರು ತೋರಿದ ಶಕ್ತಿ, ಸಮತೋಲನ ಹಾಗೂ ಮಾರ್ಗವನ್ನು ಓದುವ ಕೌಶಲ್ಯ ಅತ್ಯಂತ ಶ್ಲಾಘನೀಯವಾಗಿತ್ತು. ಒತ್ತಡದ ಕ್ಷಣಗಳಲ್ಲೂ ತೋರಿದ ಶಾಂತತೆ ಅವರ ತಾಂತ್ರಿಕ ಪಾಕ್ವತೆಯನ್ನು ಪ್ರತಿಬಿಂಬಿಸಿತು.

* ಡಿಸೆಂಬರ್ 27ರಂದು ನಡೆದ ಅರ್ಹತಾ ಸುತ್ತಿನಲ್ಲಿ ಅಮಿಯೇರಾ ಎಲ್ಲಾ ನಾಲ್ಕು ಬೌಲ್ಡರಿಂಗ್ ಮಾರ್ಗಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ 100 ಅಂಕಗಳ ಪರಿಪೂರ್ಣ ಸಾಧನೆ ಮಾಡಿದರು. ಈ ಮೂಲಕ ಅವರು ಫೈನಲ್‌ಗೆ ಜಂಟಿ ಟಾಪ್ ಕ್ವಾಲಿಫೈಯರ್ ಆಗಿ ಪ್ರವೇಶಿಸಿ ಚಿನ್ನದ ಪದಕಕ್ಕೆ ಬಲವಾದ ಅಭ್ಯರ್ಥಿಯಾಗಿ ಹೊರಹೊಮ್ಮಿದರು.

* ಈ ಚಾಂಪಿಯನ್‌ಶಿಪ್ ಅನ್ನು ಭಾರತೀಯ ಪರ್ವತಾರೋಹಣ ಪ್ರತಿಷ್ಠಾನ (Indian Mountaineering Foundation) ಹಾಗೂ ಜನರಲ್ ತಿಮ್ಮಯ್ಯ ನ್ಯಾಷನಲ್ ಅಕಾಡೆಮಿ ಆಫ್ ಅಡ್ವೆಂಚರ್ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರಿನ ಯವನಿಕಾನಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಸ್ಪೀಡ್ ಕ್ಲೈಂಬಿಂಗ್ ಮತ್ತು ಬೌಲ್ಡರಿಂಗ್ ವಿಭಾಗಗಳು ವಿವಿಧ ವಯೋವರ್ಗಗಳಲ್ಲಿ ನಡೆದಿದ್ದು, ದೇಶದ ವಿವಿಧ ವಲಯಗಳಿಂದ ಕ್ರೀಡಾಪಟುಗಳು ಭಾಗವಹಿಸಿದ್ದರು.

* ಅರ್ಹತಾ ಹಾಗೂ ಫೈನಲ್ ಎರಡೂ ಸುತ್ತುಗಳಲ್ಲಿ ಅಮಿಯೇರಾ ತೋರಿದ ಸ್ಥಿರತೆ, ಅವರು ಭಾರತದ ಅತ್ಯಂತ ಭರವಸೆಯ ಯುವ ಕ್ಲೈಂಬರ್‌ಗಳಲ್ಲೊಬ್ಬರಾಗಿ ಹೊರಹೊಮ್ಮುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ. ಉನ್ನತ ಮಟ್ಟದ ಯುವ ಸ್ಪರ್ಧಿಗಳ ವಿರುದ್ಧ ಸಾಧಿಸಿದ ಈ ಗೆಲುವು, ಭಾರತದಲ್ಲಿ ಸ್ಪೋರ್ಟ್ ಕ್ಲೈಂಬಿಂಗ್‌ಗೆ ಬಲವಾದ ಪ್ರತಿಭಾ ನೆಲೆ ನಿರ್ಮಾಣವಾಗುತ್ತಿರುವುದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ.

## ಅಮಿಯೇರಾ ಖೋಸ್ಲಾ: ದೇಶದ ಕ್ಲೈಂಬಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕದಿಂದ ಪ್ರಭಾವಶಾಲಿ ಪ್ರದರ್ಶನ



* 14 ವರ್ಷದ ಯುವ ಕ್ಲೈಂಬಿಂಗ್ ಪ್ರತಿಭೆ ಅಮಿಯೇರಾ ಖೋಸ್ಲಾ ಅವರು 2025ರ 29ನೇ ರಾಷ್ಟ್ರೀಯ ಸ್ಪೋರ್ಟ್ ಕ್ಲೈಂಬಿಂಗ್ ಚಾಂಪಿಯನ್‌ಶಿಪ್ನಲ್ಲಿ ಯೂತ್ ಗರ್ಲ್ಸ್ (ಅಂಡರ್–17) ವಿಭಾಗದಲ್ಲಿ ಚಿನ್ನದ ಪದಕ ಗೆದ್ದು ಗಮನಾರ್ಹ ಸಾಧನೆ

ಮಾಡಿದ್ದಾರೆ. ಡಿಸೆಂಬರ್ 26ರಿಂದ 29ರವರೆಗೆ ಬೆಂಗಳೂರುನಲ್ಲಿ ನಡೆದ ಈ ಚಾಂಪಿಯನ್‌ಶಿಪ್ ದೇಶದ ವಿವಿಧ ವಯೋವರ್ಗಗಳ ಅತ್ಯುತ್ತಮ ಯುವ ಪ್ರತಿಭೆಗಳಿಗೆ ವೇದಿಕೆಯಾಗಿತ್ತು.

* ಯೂತ್ ಗರ್ಲ್ಸ್ ವಿಭಾಗದಲ್ಲಿ ಪ್ರಭುತ್ವದ ಪ್ರದರ್ಶನ : ಬೌಲ್ಡರಿಂಗ್ ವಿಭಾಗದಲ್ಲಿ ಸ್ಪರ್ಧಿಸಿದ ಅಮಿಯೇರಾ ಫೈನಲ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ 83.8 ಅಂಕಗಳೊಂದಿಗೆ ಪ್ರಥಮ ಸ್ಥಾನ ಗಳಿಸಿದರು. ನಾಲ್ಕು ವಿಭಿನ್ನ ಬೌಲ್ಡರಿಂಗ್ ಸಮಸ್ಯೆಗಳಲ್ಲಿ ಅವರು ತೋರಿದ ಶಕ್ತಿ, ಸಮತೋಲನ ಹಾಗೂ ಮಾರ್ಗವನ್ನು ಓದುವ ಕೌಶಲ್ಯ ಅತ್ಯಂತ ಶ್ಲಾಘನೀಯವಾಗಿತ್ತು. ಒತ್ತಡದ ಕ್ಷಣಗಳಲ್ಲೂ ತೋರಿದ ಶಾಂತತೆ ಅವರ ತಾಂತ್ರಿಕ ಪಾಕ್ವತೆಯನ್ನು ಪ್ರತಿಬಿಂಬಿಸಿತು.

* ಡಿಸೆಂಬರ್ 27ರಂದು ನಡೆದ ಅರ್ಹತಾ ಸುತ್ತಿನಲ್ಲಿ ಅಮಿಯೇರಾ ಎಲ್ಲಾ ನಾಲ್ಕು ಬೌಲ್ಡರಿಂಗ್ ಮಾರ್ಗಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ 100 ಅಂಕಗಳ ಪರಿಪೂರ್ಣ ಸಾಧನೆ ಮಾಡಿದರು. ಈ ಮೂಲಕ ಅವರು ಫೈನಲ್‌ಗೆ ಜಂಟಿ ಟಾಪ್ ಕ್ವಾಲಿಫೈಯರ್ ಆಗಿ ಪ್ರವೇಶಿಸಿ ಚಿನ್ನದ ಪದಕಕ್ಕೆ ಬಲವಾದ ಅಭ್ಯರ್ಥಿಯಾಗಿ ಹೊರಹೊಮ್ಮಿದರು.

* ಈ ಚಾಂಪಿಯನ್‌ಶಿಪ್ ಅನ್ನು ಭಾರತೀಯ ಪರ್ವತಾರೋಹಣ ಪ್ರತಿಷ್ಠಾನ (Indian Mountaineering Foundation) ಹಾಗೂ ಜನರಲ್ ತಿಮ್ಮಯ್ಯ ನ್ಯಾಷನಲ್ ಅಕಾಡೆಮಿ ಆಫ್ ಅಡ್ವೆಂಚರ್ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರಿನ ಯವನಿಕಾನಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಸ್ಪೀಡ್ ಕ್ಲೈಂಬಿಂಗ್ ಮತ್ತು ಬೌಲ್ಡರಿಂಗ್ ವಿಭಾಗಗಳು ವಿವಿಧ ವಯೋವರ್ಗಗಳಲ್ಲಿ ನಡೆದಿದ್ದು, ದೇಶದ ವಿವಿಧ ವಲಯಗಳಿಂದ ಕ್ರೀಡಾಪಟುಗಳು ಭಾಗವಹಿಸಿದ್ದರು.

* ಅರ್ಹತಾ ಹಾಗೂ ಫೈನಲ್ ಎರಡೂ ಸುತ್ತುಗಳಲ್ಲಿ ಅಮಿಯೇರಾ ತೋರಿದ ಸ್ಥಿರತೆ, ಅವರು ಭಾರತದ ಅತ್ಯಂತ ಭರವಸೆಯ ಯುವ ಕ್ಲೈಂಬರ್‌ಗಳಲ್ಲೊಬ್ಬರಾಗಿ ಹೊರಹೊಮ್ಮುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ. ಉನ್ನತ ಮಟ್ಟದ ಯುವ ಸ್ಪರ್ಧಿಗಳ ವಿರುದ್ಧ ಸಾಧಿಸಿದ ಈ ಗೆಲುವು, ಭಾರತದಲ್ಲಿ ಸ್ಪೋರ್ಟ್ ಕ್ಲೈಂಬಿಂಗ್‌ಗೆ ಬಲವಾದ ಪ್ರತಿಭಾ ನೆಲೆ ನಿರ್ಮಾಣವಾಗುತ್ತಿರುವುದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ.

## 'ಗೋವಾದಲ್ಲಿ ಆಡಳಿತಾತ್ಮಕ ಕ್ರಾಂತಿ: ಅಸ್ತಿತ್ವಕ್ಕೆ ಬರಲಿದೆ ರಾಜ್ಯದ 3ನೇ ಜಿಲ್ಲೆ 'ಕುಶಾವತಿ'!' ಘೋಷಣೆ




* ಸಣ್ಣ ರಾಜ್ಯವಾದರೂ ಪ್ರವಾಸೋದ್ಯಮದಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಗೋವಾ, ಈಗ ಆಡಳಿತಾತ್ಮಕ ಸುಧಾರಣೆಯ ಹಾದಿಯಲ್ಲಿದೆ. ದಕ್ಷಿಣ ಗೋವಾ ಜಿಲ್ಲೆಯನ್ನು ವಿಭಜಿಸಿ 'ಕುಶಾವತಿ' (Kushavati) ಹೆಸರಿನ ಹೊಸ ಜಿಲ್ಲೆಯನ್ನು ರಚಿಸುವುದಾಗಿ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಘೋಷಿಸಿದ್ದಾರೆ. ಇದರೊಂದಿಗೆ ಗೋವಾದ ಜಿಲ್ಲೆಗಳ ಸಂಖ್ಯೆ 3ಕ್ಕೆ ಏರಿಕೆಯಾಗಲಿದೆ.

* ಪ್ರಸ್ತಾವಿತ ಕುಶಾವತಿ ಜಿಲ್ಲೆಯನ್ನು ಸಂಪೂರ್ಣವಾಗಿ ದಕ್ಷಿಣ ಗೋವಾ ಜಿಲ್ಲೆಯಿಂದ ವಿಭಜಿಸಿ ರಚಿಸಲಾಗುತ್ತದೆ. ಈ ಹೊಸ ಜಿಲ್ಲೆಯಲ್ಲಿ ಧರ್ಬಂದೋರಾ, ಕ್ವೆಪೆಂ, ಸಂಗ್ವೆಂ ಮತ್ತು ಕನಾಕೋನಾ ಎಂಬ ನಾಲ್ಕು ತಾಲ್ಲೂಕುಗಳು ಸೇರಲಿವೆ. ಅಗತ್ಯವಿರುವ ಮೂಲಸೌಕರ್ಯಗಳು ನಿರ್ಮಾಣವಾಗುವವರೆಗೆ, ಹೊಸ ಜಿಲ್ಲೆಯ ಆಡಳಿತ ಕಾರ್ಯಗಳನ್ನು ತಾತ್ಕಾಲಿಕವಾಗಿ ದಕ್ಷಿಣ ಗೋವಾ ಜಿಲ್ಲಾ ಕೇಂದ್ರದಿಂದಲೇ ನಿರ್ವಹಿಸಲಾಗುತ್ತದೆ. ಈ ಅವಧಿಯಲ್ಲಿ ದಕ್ಷಿಣ ಗೋವಾ ಜಿಲ್ಲಾಧಿಕಾರಿಯೇ ಕುಶಾವತಿ ಜಿಲ್ಲೆಯ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ.

* ಕುಶಾವತಿ ಜಿಲ್ಲೆಯ ಜಿಲ್ಲಾ ಕೇಂದ್ರವಾಗಿ ಕ್ವೆಪೆಂ ಪಟ್ಟಣವನ್ನು ಘೋಷಿಸಲಾಗಿದೆ. ಕನಾಕೋನಾ ಮತ್ತು ಧರ್ಬಂದೋರಾ ಮುಂತಾದ ದೂರದ ತಾಲ್ಲೂಕುಗಳ ನಿವಾಸಿಗಳಿಗೆ ಜಿಲ್ಲಾ ಮಟ್ಟದ ಸೇವೆಗಳನ್ನು ಸುಲಭವಾಗಿ ಪಡೆಯಲು, ಕ್ವೆಪೆಂಗೆ ಉತ್ತಮ ಬಸ್ ಸಂಪರ್ಕ ವ್ಯವಸ್ಥೆ ಕಲ್ಪಿಸುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿದೆ.

* ಕುಶಾವತಿ ಜಿಲ್ಲೆಯನ್ನು 'ಆಕಾಂಕ್ಷಿತ ಜಿಲ್ಲೆ'ಯಾಗಿ ಅಭಿವೃದ್ಧಿಪಡಿಸುವ ಉದ್ದೇಶವನ್ನು ಮುಖ್ಯಮಂತ್ರಿ ವ್ಯಕ್ತಪಡಿಸಿದ್ದಾರೆ. ಈ ಸ್ಥಾನಮಾನ ಪಡೆದ ಜಿಲ್ಲೆಗಳಿಗೆ ಕೇಂದ್ರ ಸರ್ಕಾರದಿಂದ ₹15 ಕೋಟಿ ಹೆಚ್ಚುವರಿ ಅನುದಾನ ಲಭ್ಯವಾಗುತ್ತದೆ. ಜಿಲ್ಲೆಯ ಜನಸಂಖ್ಯೆಯ ಸುಮಾರು 27 ಶೇಕಡಾ ಜನರು ಜನಜಾತಿ ಸಮುದಾಯಕ್ಕೆ ಸೇರಿದವರಾಗಿರುವುದರಿಂದ, ಆಡಳಿತ ಕಟ್ಟಡಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಕೇಂದ್ರದಿಂದ ವಿಶೇಷ ನಿಧಿಗಳನ್ನು ಪಡೆಯಲು ರಾಜ್ಯ ಸರ್ಕಾರ ಮುಂದಾಗಿದೆ.

* ಕುಶಾವತಿ ಜಿಲ್ಲೆಯ ರಚನೆಗೆ ಸಂಬಂಧಿಸಿದ ಅಧಿಕೃತ ಅಧಿಸೂಚನೆಯನ್ನು ಶೀಘ್ರದಲ್ಲೇ ಹೊರಡಿಸಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ. ಅಗತ್ಯ ಮೂಲಸೌಕರ್ಯ, ಸಿಬ್ಬಂದಿ ನೇಮಕಾತಿ ಮತ್ತು ಆಡಳಿತಾತ್ಮಕ ಸಿದ್ಧತೆಗಳು ಪೂರ್ಣಗೊಂಡ ನಂತರ, ಕುಶಾವತಿ ಜಿಲ್ಲೆ ಸ್ವತಂತ್ರ ಜಿಲ್ಲೆಯಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿದೆ.

## ದೆಹಲಿ ಜನ ವಿಶ್ವಾಸ ಮಸೂದೆ 2026: ಸಣ್ಣ ತಪ್ಪುಗಳಿಗೆ ಇನ್ಮುಂದೆ ಜೈಲಲ್ಲ, ದಂಡ ಮಾತ್ರ! - ಆಡಳಿತದಲ್ಲಿ ಹೊಸ ಸುಧಾರಣೆ




* ದೆಹಲಿ ಸಚಿವ ಸಂಪುಟವು ದೆಹಲಿ ಜನ ವಿಶ್ವಾಸ (ನಿಬಂಧನೆಗಳ ತಿದ್ದುಪಡಿ) ಮಸೂದೆ–2026 ಅನ್ನು ಅನುಮೋದಿಸಿದ್ದು, ಇದು ಸಣ್ಣ ಅಪರಾಧಗಳನ್ನು ಅಪರಾಧೀಕರಣದಿಂದ ಮುಕ್ತಗೊಳಿಸಿ ನಿಯಮ ಪಾಲನೆಯನ್ನು ಸರಳಗೊಳಿಸುವ ಮೂಲಕ ವ್ಯಾಪಾರ ಮಾಡಲು ಸುಲಭತೆ (Ease of Doing Business) ಹಾಗೂ ಜೀವನ ಸುಲಭತೆ (Ease of Living) ಹೆಚ್ಚಿಸುವ ಉದ್ದೇಶ ಹೊಂದಿರುವ ಮಹತ್ವದ ಆಡಳಿತಾತ್ಮಕ ಸುಧಾರಣೆಯಾಗಿದೆ.

* ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು, ಈ ಮಸೂದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಡಳಿತ ತತ್ವಗಳಿಂದ ಪ್ರೇರಿತವಾಗಿದೆ ಎಂದು ಹೇಳಿದರು. ನ್ಯಾಯಾಲಯಗಳ ಮೇಲಿನ ಅನಗತ್ಯ ಭಾರ ಕಡಿಮೆ ಮಾಡುವುದು, ಸಣ್ಣ–ತಾಂತ್ರಿಕ ತಪ್ಪುಗಳಿಗೆ ಕ್ರಿಮಿನಲ್ ಪ್ರಕರಣಗಳನ್ನು ತಪ್ಪಿಸುವುದು ಹಾಗೂ ಆಡಳಿತದ ದಕ್ಷತೆಯನ್ನು ಹೆಚ್ಚಿಸುವುದು ಇದರ ಮುಖ್ಯ ಗುರಿಯಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜನ ವಿಶ್ವಾಸ (ನಿಬಂಧನೆಗಳ ತಿದ್ದುಪಡಿ) ಕಾಯ್ದೆಯೊಂದಿಗೆ ಇದು ಹೊಂದಾಣಿಕೆಯಲ್ಲಿದೆ.

* ಕ್ರಿಮಿನಲ್ ಶಿಕ್ಷೆಯಿಂದ ನಾಗರಿಕ ದಂಡಕ್ಕೆ ಬದಲಾವಣೆ: ಕೇಂದ್ರ ಸರ್ಕಾರದ ಸಲಹೆಯ ಮೇರೆಗೆ ದೆಹಲಿ ಸರ್ಕಾರ ತನ್ನ ಕಾನೂನುಗಳನ್ನು ಪರಿಶೀಲಿಸಿದ್ದು, ಅನೇಕ ಸಂದರ್ಭಗಳಲ್ಲಿ ಕ್ರಿಮಿನಲ್ ಕ್ರಮಗಳ ಬದಲು ನಾಗರಿಕ ದಂಡಗಳು ಸೂಕ್ತವೆಂದು ಕಂಡುಕೊಂಡಿದೆ. ಹೀಗಾಗಿ ಸಣ್ಣ, ತಾಂತ್ರಿಕ ಹಾಗೂ ಪ್ರಕ್ರಿಯಾತ್ಮಕ ಉಲ್ಲಂಘನೆಗಳಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣಗಳನ್ನು ರದ್ದು ಮಾಡಿ, ನಾಗರಿಕ ದಂಡ, ಆಡಳಿತಾತ್ಮಕ ದಂಡಗಳು ಮತ್ತು ಸ್ಪಷ್ಟ ಅಪೀಲಾತ್ಮಕ ವ್ಯವಸ್ಥೆ ಅನ್ನು ಜಾರಿಗೆ ತರಲಾಗುತ್ತದೆ. ಸಾರ್ವಜನಿಕ ಆರೋಗ್ಯ, ಸುರಕ್ಷತೆ ಮತ್ತು ಜೀವಕ್ಕೆ ಸಂಬಂಧಿಸಿದ ವಿಧಿಗಳು ಯಥಾಸ್ಥಿತಿಯಲ್ಲೇ ಮುಂದುವರೆಯುತ್ತವೆ.

*** ಮಸೂದೆಯ ವ್ಯಾಪ್ತಿಗೆ ಬರುವ ಕಾಯ್ದೆಗಳು: ಈ ಮಸೂದೆಗೆ ಒಳಪಡುವ ಪ್ರಮುಖ ದೆಹಲಿ ಕಾಯ್ದೆಗಳಲ್ಲಿ :--**

=> ದೆಹಲಿ ಕೈಗಾರಿಕಾ ಅಭಿವೃದ್ಧಿ, ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಯ್ದೆ–2010

=> ದೆಹಲಿ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ–1954

=> ದೆಹಲಿ ಜಲ ಮಂಡಳಿ ಕಾಯ್ದೆ–1998

=> ದೆಹಲಿ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಕಾಯ್ದೆ–1998

ಇವುಗಳ ಜೊತೆಗೆ ವೃತ್ತಿಪರ ಕಾಲೇಜುಗಳು, ಡಿಪ್ಲೊಮಾ ಮಟ್ಟದ ತಾಂತ್ರಿಕ ಸಂಸ್ಥೆಗಳು ಹಾಗೂ ಬೆಡ್-ಅಂಡ್-ಬ್ರೇಕ್‌ಫಾಸ್ಟ್ (B&B) ವ್ಯವಸ್ಥೆಗಳಿಗೆ ಸಂಬಂಧಿಸಿದ ಕಾನೂನುಗಳನ್ನೂ ಒಳಗೊಂಡಿವೆ. ಈ ಕಾಯ್ದೆಗಳ ಅಡಿಯಲ್ಲಿ ಇರುವ ಸಣ್ಣ ಅಪರಾಧಗಳನ್ನು ನಾಗರಿಕ ದಂಡಗಳಾಗಿ ಪರಿವರ್ತಿಸಿ ಶಿಕ್ಷೆಯ ಸಮಚಿತ್ತತೆಯನ್ನು ಖಚಿತಪಡಿಸಲಾಗುತ್ತದೆ.

* ದಂಡ ಮೊತ್ತಗಳು ದರ ಏರಿಕೆಯನ್ನು ಪರಿಗಣಿಸಿ ಪ್ರತಿ ಮೂರು ವರ್ಷಕ್ಕೊಮ್ಮೆ ಸ್ವಯಂಚಾಲಿತವಾಗಿ 10 ಶೇಕಡಾ ಹೆಚ್ಚಳಗೊಳ್ಳುವ ವ್ಯವಸ್ಥೆಯನ್ನು ಮಸೂದೆ ಒಳಗೊಂಡಿದೆ. ಈ ಸುಧಾರಣೆಯಿಂದ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ಆರ್ಥಿಕ ಭಾರವಾಗುವುದಿಲ್ಲ ಹಾಗೂ ಹೊಸ ಹುದ್ದೆಗಳ ಸೃಷ್ಟಿಯ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಹಣಕಾಸು ಇಲಾಖೆಯೂ ಮಸೂದೆಗೆ ಯಾವುದೇ ಆಕ್ಷೇಪ ವ್ಯಕ್ತಪಡಿಸಿಲ್ಲ. ದೆಹಲಿ ವಿಧಾನಸಭೆಯ ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಿ ಅಂಗೀಕರಿಸುವ ನಿರೀಕ್ಷೆಯಿದೆ.

## ಮಹಿಳಾ ಟಿ20ಯಲ್ಲಿ ವಿಶ್ವ ದಾಖಲೆ: ದೀಪ್ತಿ ಶರ್ಮಾ ಈಗ ವಿಶ್ವದ ನಂ.1 ವಿಕೆಟ್ ಟೇಕರ್!




* ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಪ್ರಮುಖ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತ್ಯಧಿಕ ವಿಕೆಟ್ ಪಡೆದ ಆಟಗಾರ್ತಿ ಎಂಬ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಡಿಸೆಂಬರ್ 30, 2025ರಂದು ನಡೆದ ಶ್ರೀಲಂಕಾ ವಿರುದ್ಧದ ಐದನೇ ಟಿ20 ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದರು.

* ಶ್ರೀಲಂಕಾ ವಿರುದ್ಧ ಐತಿಹಾಸಿಕ ವಿಕೆಟ್ : ಈ ಪಂದ್ಯದಲ್ಲಿ ದೀಪ್ತಿ ಶರ್ಮಾ ಅವರು ತಮ್ಮ 152ನೇ ಟಿ20ಐ ವಿಕೆಟ್‌ನ್ನು ಪಡೆದು ಆಸ್ಟ್ರೇಲಿಯಾದ ವೇಗಿ ಮೆಗನ್ ಶಟ್ (151 ವಿಕೆಟ್) ಅವರ ದಾಖಲೆಯನ್ನು ಮುರಿದರು. ಅಂತಿಮ ಪಂದ್ಯದಲ್ಲಿ ಅವರು ನಾಲ್ಕು ಓವರ್‌ಗಳಲ್ಲಿ 28 ರನ್ ನೀಡಿ 1 ವಿಕೆಟ್ ಪಡೆದು, ಭಾರತ ತಂಡವು 175 ರನ್‌ಗಳನ್ನು ರಕ್ಷಿಸಿ 15 ರನ್‌ಗಳ ಜಯ ಸಾಧಿಸಲು ನೆರವಾದರು.

* 5–0 ಸರಣಿ ಜಯದಲ್ಲಿ ಭಾರತದ ಪ್ರಾಬಲ್ಯ: ಈ ದಾಖಲೆ, ಭಾರತವು ಶ್ರೀಲಂಕಾ ವಿರುದ್ಧ 5–0 ಅಂತರದ ಸಂಪೂರ್ಣ ಸರಣಿ ಜಯ ಸಾಧಿಸಿದ ಸಂದರ್ಭದಲ್ಲಿ ಬಂದಿತು. ಸರಣಿ ಪೂರ್ತಿಯಲ್ಲೂ ದೀಪ್ತಿಯವರ ನಿರಂತರ ಮತ್ತು ನಿಯಂತ್ರಿತ ಬೌಲಿಂಗ್ ಭಾರತದ ಮೇಲುಗೈಗೆ ಪ್ರಮುಖ ಕಾರಣವಾಯಿತು. ಈ ಪ್ರದರ್ಶನ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಭಾರತದ ಪ್ರಬಲ ಸ್ಥಾನವನ್ನು ಮತ್ತಷ್ಟು ದೃಢಪಡಿಸಿದೆ.

* ಮಹಿಳಾ ಟಿ20ಐ ವಿಕೆಟ್‌ಗಳ ಪಟ್ಟಿಯಲ್ಲಿ ಪಾಕಿಸ್ತಾನದ ನಿದಾ ದಾರ್ (144 ವಿಕೆಟ್) ಮೂರನೇ ಸ್ಥಾನದಲ್ಲಿದ್ದು, ಇಂಗ್ಲೆಂಡ್‌ನ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಕೂಡ ಅಗ್ರ ಬೌಲರ್‌ಗಳಲ್ಲಿದ್ದಾರೆ. ಭಾರತ ಪರವಾಗಿ, ದೀಪ್ತಿ ಶರ್ಮಾ ಹೊರತುಪಡಿಸಿ ರಾಧಾ ಯಾದವ್ ಮಾತ್ರ 100ಕ್ಕೂ ಹೆಚ್ಚು ಟಿ20ಐ ವಿಕೆಟ್‌ಗಳನ್ನು ಪಡೆದಿರುವುದು ಈ ಸಾಧನೆಯ ವಿಶಿಷ್ಟತೆಯನ್ನು ತೋರಿಸುತ್ತದೆ.

* ದೀಪ್ತಿ ಶರ್ಮಾ ಅವರು ಟಿ20 ಅಂತರರಾಷ್ಟ್ರೀಯಗಳಲ್ಲಿ 1,000 ರನ್‌ಗಳು ಮತ್ತು 150 ವಿಕೆಟ್‌ಗಳು ಪಡೆದ ಪುರುಷ–ಮಹಿಳಾ ಎಲ್ಲ ಕ್ರಿಕೆಟರ್‌ಗಳಲ್ಲೂ ಮೊದಲ ಆಟಗಾರ್ತಿ ಎಂಬ ಅಪೂರ್ವ ದಾಖಲೆಯನ್ನು ನಿರ್ಮಿಸಿದ್ದಾರೆ. ಪ್ರಸ್ತುತ ಅವರು ಐಸಿಸಿ ಮಹಿಳಾ ಟಿ20ಐ ಆಲ್‌ರೌಂಡರ್ ಶ್ರೇಯಾಂಕ್ ವಿಶ್ವ ನಂ.1 ಸ್ಥಾನದಲ್ಲಿದ್ದಾರೆ. 133 ಟಿ20ಐ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ದೀಪ್ತಿ, 2025ರ ಐಸಿಸಿ ಮಹಿಳಾ ವಿಶ್ವಕಪ್‌ನಲ್ಲಿ ಪ್ಲೇಯರ್ ಆಫ್ ದಿ ಟೂರ್ನಮೆಂಟ್ ಪ್ರಶಸ್ತಿಯನ್ನು ಪಡೆದು, ಭಾರತ ತನ್ನ ಮೊದಲ ವಿಶ್ವಕಪ್ ಪ್ರಶಸ್ತಿಯನ್ನು ಸ್ವದೇಶದಲ್ಲಿ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಈ ಎಲ್ಲ ಸಾಧನೆಗಳು ದೀಪ್ತಿ ಶರ್ಮಾರನ್ನು ಭಾರತೀಯ ಮಹಿಳಾ ಕ್ರಿಕೆಟ್‌ನ ಅತ್ಯಂತ ಪ್ರಭಾವಶಾಲಿ ಮತ್ತು ಐತಿಹಾಸಿಕ ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿ ಸ್ಥಾಪಿಸಿವೆ.

# 02 Jan 2026

## ಜನವರಿ 2: ರಾಷ್ಟ್ರೀಯ ವೈಜ್ಞಾನಿಕ ಕಾದಂಬರಿ ದಿನ




* ಪ್ರತಿ ವರ್ಷ ಜನವರಿ 2ರಂದು ರಾಷ್ಟ್ರೀಯ ವೈಜ್ಞಾನಿಕ ಕಾದಂಬರಿ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಪ್ರಸಿದ್ಧ ವೈಜ್ಞಾನಿಕ ಕಾದಂಬರಿ ಬರಹಗಾರ ಐಸಾಕ್ ಅಸಿಮೊವ್ ಅವರ ಜನ್ಮದಿನದ ನೆನಪಿಗಾಗಿ ಆಚರಿಸಲ್ಪಡುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಕಲ್ಪನಾತ್ಮಕ ಕಥೆಗಳ ಮೂಲಕ ಮಾನವ ಭವಿಷ್ಯ, ಆವಿಷ್ಕಾರಗಳು ಮತ್ತು ಸಮಾಜದ ಮೇಲೆ ಅವು ಬೀರುವ ಪರಿಣಾಮಗಳನ್ನು ಅರಿಯುವುದೇ ಈ ದಿನದ ಮುಖ್ಯ ಉದ್ದೇಶವಾಗಿದೆ.

* ವೈಜ್ಞಾನಿಕ ಕಾದಂಬರಿ (Science Fiction) ಸಾಹಿತ್ಯವು ಸಾಮಾನ್ಯವಾಗಿ ಹತ್ತಿರದ ಅಥವಾ ದೂರದ ಭವಿಷ್ಯದಲ್ಲಿ ನಡೆಯುವ ಕಥೆಗಳನ್ನೊಳಗೊಂಡಿದ್ದು, ತಾಂತ್ರಿಕ ಪ್ರಗತಿ, ವೈಜ್ಞಾನಿಕ ಆವಿಷ್ಕಾರಗಳು, ವಿಕಾಸ, ನೈಸರ್ಗಿಕ ವಿಪತ್ತುಗಳು ಮತ್ತು ಮಾನವ ಸಂಬಂಧಗಳ ಮೇಲೆ ಅವುಗಳ ಪರಿಣಾಮವನ್ನು ಚಿತ್ರಿಸುತ್ತದೆ. ಫ್ಯಾಂಟಸಿಯಿಂದ ಭಿನ್ನವಾಗಿ, ವೈಜ್ಞಾನಿಕ ಕಾದಂಬರಿಗಳು ಅಲೌಕಿಕತೆ ಮತ್ತು ಮಾಂತ್ರಿಕತೆಯಿಂದ ದೂರವಿದ್ದು, ವಿಜ್ಞಾನಾಧಾರಿತ ಕಲ್ಪನೆಗಳಿಗೆ ಹೆಚ್ಚಿನ ಮಹತ್ವ ನೀಡುತ್ತವೆ.

* ಈ ದಿನವನ್ನು ಮೊದಲ ಬಾರಿಗೆ 2012ರಲ್ಲಿ ವ್ಯಾಪಕವಾಗಿ ಆಚರಿಸಲಾಯಿತು ಮತ್ತು ವಿಶೇಷವಾಗಿ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಇದನ್ನು National Science Fiction Day ಎಂದು ಕರೆಯಲಾಗುತ್ತದೆ. ಇಂದು ಜಗತ್ತಿನಾದ್ಯಂತ ವೈಜ್ಞಾನಿಕ ಕಾದಂಬರಿ ಅಭಿಮಾನಿಗಳು ಈ ದಿನವನ್ನು ವಿಜ್ಞಾನ ಸಾಹಿತ್ಯದ ಸಂಭ್ರಮವಾಗಿ ಆಚರಿಸುತ್ತಾರೆ.

* ಐಸಾಕ್ ಅಸಿಮೊವ್ ಅವರನ್ನು ಆಧುನಿಕ ವೈಜ್ಞಾನಿಕ ಕಾದಂಬರಿಯ ಪಿತಾಮಹರಲ್ಲಿ ಒಬ್ಬರು ಎಂದು ಪರಿಗಣಿಸಲಾಗುತ್ತದೆ. ಅವರು ಸುಮಾರು 500ಕ್ಕೂ ಹೆಚ್ಚು ಪುಸ್ತಕಗಳು ಮತ್ತು ನೂರಾರು ಸಣ್ಣ ಕಥೆಗಳನ್ನು ಬರೆದಿದ್ದಾರೆ. 'ರೊಬೊಟಿಕ್ಸ್' ಎಂಬ ಪದವನ್ನು ಪರಿಚಯಿಸಿದವರು ಹಾಗೂ ರೊಬೊಟಿಕ್ಸ್‌ನ ಮೂರು ನಿಯಮಗಳನ್ನು ರೂಪಿಸಿದವರು ಅಸಿಮೊವ್. ರಷ್ಯಾದಲ್ಲಿ ಜನಿಸಿದ ಅವರು, ಜನವರಿ 2 ಅನ್ನು ತಮ್ಮ ಅಧಿಕೃತ ಜನ್ಮದಿನವಾಗಿ ಆಚರಿಸುತ್ತಿದ್ದರು.

* ಈ ದಿನವನ್ನು ಆಚರಿಸುವ ಸಂದರ್ಭದಲ್ಲಿ ಜನರು ವೈಜ್ಞಾನಿಕ ಕಾದಂಬರಿ ಪುಸ್ತಕಗಳನ್ನು ಓದುತ್ತಾರೆ, ಚಲನಚಿತ್ರಗಳು ಮತ್ತು ಟಿವಿ ಸರಣಿಗಳನ್ನು ವೀಕ್ಷಿಸುತ್ತಾರೆ ಹಾಗೂ ವಿಜ್ಞಾನಾಧಾರಿತ ಚರ್ಚೆಗಳಲ್ಲಿ ಭಾಗವಹಿಸುತ್ತಾರೆ. ಯುವ ಓದುಗರನ್ನು ವೈಜ್ಞಾನಿಕ ಕಾದಂಬರಿ ಓದುವತ್ತ ಪ್ರೋತ್ಸಾಹಿಸುವುದು ಈ ದಿನದ ಮತ್ತೊಂದು ಪ್ರಮುಖ ಅಂಶವಾಗಿದೆ.

* ಭಾರತದಲ್ಲಿ ಆಚರಿಸಲಾಗುವ ರಾಷ್ಟ್ರೀಯ ವಿಜ್ಞಾನ ದಿನ ಫೆಬ್ರವರಿ 28ರಂದು ಸರ್ ಸಿ.ವಿ. ರಾಮನ್ ಅವರ 'ರಾಮನ್ ಪರಿಣಾಮ' ಆವಿಷ್ಕಾರದ ನೆನಪಿಗಾಗಿ ಆಚರಿಸಲಾಗುತ್ತದೆ. ಇದು ರಾಷ್ಟ್ರೀಯ ವೈಜ್ಞಾನಿಕ ಕಾದಂಬರಿ ದಿನಕ್ಕಿಂತ ಭಿನ್ನವಾಗಿದೆ.

## ವಿಶ್ವಸಂಸ್ಥೆ ಘೋಷಣೆ: 2026 'ಅಂತಾರಾಷ್ಟ್ರೀಯ ಮಹಿಳಾ ರೈತ ವರ್ಷ' - ಕೃಷಿ ಕ್ಷೇತ್ರದಲ್ಲಿ ನಾರಿ ಶಕ್ತಿಗೆ ಜಾಗತಿಕ ಮನ್ನಣೆ!





* ಜಾಗತಿಕ ಆಹಾರ ಭದ್ರತೆಯಲ್ಲಿ ಮಹಿಳೆಯರು ವಹಿಸುತ್ತಿರುವ ಅಪ್ರತಿಮ ಕೊಡುಗೆಯನ್ನು ಸ್ಮರಿಸಲು ಮತ್ತು ಗೌರವಿಸಲು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAO) 2026ನೇ ವರ್ಷವನ್ನು 'ಅಂತಾರಾಷ್ಟ್ರೀಯ ಮಹಿಳಾ ರೈತ ವರ್ಷ' (International Year of the Woman Farmer) ಎಂದು ಅಧಿಕೃತವಾಗಿ ಘೋಷಿಸಿದೆ. ಕೃಷಿ ವಲಯದಲ್ಲಿ ಮಹಿಳೆಯರು ಎದುರಿಸುತ್ತಿರುವ ಲಿಂಗ ತಾರತಮ್ಯವನ್ನು ತೊಡೆದುಹಾಕುವುದು ಮತ್ತು ಅವರಿಗೆ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಒದಗಿಸುವುದು ಈ ಉಪಕ್ರಮದ ಮೂಲ ಉದ್ದೇಶವಾಗಿದೆ.
* ಕೃಷಿ ಆಹಾರ ಉತ್ಪಾದನೆ, ಸಂಸ್ಕರಣೆ ಮತ್ತು ವಿತರಣೆ ಸೇರಿದಂತೆ ಎಲ್ಲ ಹಂತಗಳಲ್ಲೂ ಮಹಿಳೆಯರ ಕೊಡುಗೆ ಅಪಾರವಾಗಿದೆ. 2021ರಲ್ಲಿ ಜಗತ್ತಿನ ಕೃಷಿ ಆಹಾರ ವ್ಯವಸ್ಥೆಯಲ್ಲಿ ಶೇ.40ರಷ್ಟು ಮಹಿಳೆಯರು ಕೆಲಸ ಮಾಡುತ್ತಿದ್ದರು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರು ಶೇ.60ರಿಂದ 80ರಷ್ಟು ಆಹಾರ ಉತ್ಪಾದನೆಗೆ ಕಾರಣರಾಗಿದ್ದರೂ, ಭೂಮಿ, ಸಂಪನ್ಮೂಲಗಳು, ವೇತನ ಮತ್ತು ನಿರ್ಧಾರಾತ್ಮಕ ಹಕ್ಕುಗಳಲ್ಲಿ ಅವರು ಇನ್ನೂ ಹಿಂದುಳಿದ ಸ್ಥಿತಿಯಲ್ಲಿದ್ದಾರೆ.
* ಈ ಹಿನ್ನಲೆಯಲ್ಲಿ ಲಿಂಗ ಸಮಾನತೆ ಸಾಧನೆ, ಮಹಿಳಾ ರೈತರ ಸಬಲೀಕರಣ ಹಾಗೂ ಕೃಷಿ ಕ್ಷೇತ್ರದಲ್ಲಿ ನ್ಯಾಯಯುತ ನೀತಿಗಳ ರೂಪಣೆಗಾಗಿ 2026ನೇ ವರ್ಷವನ್ನು ಮೀಸಲಿಡಲಾಗಿದೆ. FAO ತನ್ನ ಕೇಂದ್ರ ಕಚೇರಿಯಿರುವ ರೋಮ್‌ನಿಂದಾಗಿ, ಅಂತಾರಾಷ್ಟ್ರೀಯ ಕೃಷಿ ಅಭಿವೃದ್ಧಿ ನಿಧಿ (IFAD) ಮತ್ತು ವಿಶ್ವ ಆಹಾರ ಕಾರ್ಯಕ್ರಮ (WFP)ಗಳ ಸಹಯೋಗದಲ್ಲಿ ವರ್ಷಪೂರ್ತಿ ಜಾಗೃತಿ ಕಾರ್ಯಕ್ರಮಗಳು, ಸಂಶೋಧನೆ ಮತ್ತು ನೀತಿ ಚರ್ಚೆಗಳನ್ನು ಆಯೋಜಿಸಲಿದೆ.
* ವಿಶ್ವಸಂಸ್ಥೆಯ ಅಂದಾಜು ಪ್ರಕಾರ, ಕೃಷಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಸಂಪನ್ಮೂಲಗಳಿಗೆ ಸಮಾನ ಪ್ರವೇಶ ಒದಗಿಸಿದರೆ ಜಾಗತಿಕ ಜಿಡಿಪಿ ಒಂದು ಟ್ರಿಲಿಯನ್ ಡಾಲರ್‌ಗಳಷ್ಟು ಹೆಚ್ಚುವ ಸಾಧ್ಯತೆ ಇದೆ. ಜೊತೆಗೆ ಕೋಟ್ಯಂತರ ಜನರಿಗೆ ಆಹಾರ ಭದ್ರತೆಯನ್ನೂ ಖಚಿತಪಡಿಸಬಹುದು.
* ವಿಶ್ವಸಂಸ್ಥೆಯ ವ್ಯಾಖ್ಯಾನ ಪ್ರಕಾರ, ಸಣ್ಣ ಹಿಡುವಳಿದಾರ ರೈತರು, ಮೀನುಗಾರಿಕೆ, ಪಶುಪಾಲನೆ, ಜೇನುಸಾಕಣೆ, ಸಂಸ್ಕರಣಾ ಘಟಕಗಳಲ್ಲಿ ಕೆಲಸ ಮಾಡುವವರು, ವ್ಯಾಪಾರ, ಕೃಷಿ ವಿಜ್ಞಾನ, ಗ್ರಾಮೀಣ ಉದ್ಯಮ ಹಾಗೂ ಸಾಂಪ್ರದಾಯಿಕ ಕೃಷಿ ಜ್ಞಾನ ಹೊಂದಿರುವ ಮಹಿಳೆಯರೆಲ್ಲರೂ ಮಹಿಳಾ ರೈತರು ಆಗಿದ್ದಾರೆ.
* ಅಂತಾರಾಷ್ಟ್ರೀಯ ಮಹಿಳಾ ರೈತ ವರ್ಷವು ಮಹಿಳೆಯರ ಶ್ರಮಕ್ಕೆ ಗೌರವ ನೀಡುವುದರ ಜೊತೆಗೆ, ವಿಶ್ವದ ಆಹಾರ ಭದ್ರತೆ ಮತ್ತು ಸ್ಥಿರ ಕೃಷಿ ಅಭಿವೃದ್ಧಿಗೆ ಅವರ ಪಾತ್ರ ಅನಿವಾರ್ಯ ಎಂಬ ಸತ್ಯವನ್ನು ಜಾಗತಿಕ ಮಟ್ಟದಲ್ಲಿ ಮರುಸ್ಥಾಪಿಸುವ ಮಹತ್ವದ ಹೆಜ್ಜೆಯಾಗಿದೆ.

## ನ್ಯೂಯಾರ್ಕ್‌ನಲ್ಲಿ ಭಾರತೀಯ ಮೂಲದ ಝೋಹ್ರಾನ್ ಮಮ್ದಾನಿ ಪರ್ವ: ಇತಿಹಾಸ ನಿರ್ಮಿಸಿದ ಮೊದಲ ಮುಸ್ಲಿಂ ಮೇಯರ್!



* ಅಮೆರಿಕದ ಅತಿದೊಡ್ಡ ಮತ್ತು ಅತ್ಯಂತ ಪ್ರಭಾವಶಾಲಿ ನಗರವಾದ ನ್ಯೂಯಾರ್ಕ್‌ನ ಮೇಯರ್ ಆಗಿ ಭಾರತೀಯ ಮೂಲದ ಝೋಹ್ರಾನ್ ಮಮ್ದಾನಿ (34) ಅವರು ಜನವರಿ 1, 2026ರಂದು ಅಧಿಕೃತವಾಗಿ ಪ್ರಮಾಣವಚನ ಸ್ವೀಕರಿಸಿದರು. ಇದರೊಂದಿಗೆ ಅವರು ನ್ಯೂಯಾರ್ಕ್ ನಗರದ ಆಡಳಿತ ಚುಕ್ಕಾಣಿ ಹಿಡಿದ ಮೊದಲ ಮುಸ್ಲಿಂ ಮತ್ತು ಅತಿ ಕಿರಿಯ ಮೇಯರ್ ಎಂಬ ಐತಿಹಾಸಿಕ ದಾಖಲೆಗೆ ಪಾತ್ರರಾಗಿದ್ದಾರೆ.
ಮ್ಯಾನ್‌ಹ್ಯಾಟನ್‌ನ ಐತಿಹಾಸಿಕ ಸಿಟಿ ಹಾಲ್‌ನ ಕೆಳಗಿರುವ ಹಳೆಯ ಸಬ್‌ವೇ ನಿಲ್ದಾಣದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಅವರು ಕುರಾನ್ ಮೇಲೆ ಕೈ ಇಟ್ಟು ಪ್ರಮಾಣವಚನ ಸ್ವೀಕರಿಸಿದರು. ಈ ಆಯ್ಕೆಯು ನಗರದ ದುಡಿಯುವ ವರ್ಗದ ಸಾರಿಗೆ ವ್ಯವಸ್ಥೆಗೆ ಅವರು ನೀಡುವ ಗೌರವದ ಸಂಕೇತವಾಗಿತ್ತು.
* ಸಾರ್ವಜನಿಕ ಉದ್ಘಾಟನಾ ಸಮಾರಂಭದಲ್ಲಿ ಪ್ರಗತಿಪರ ನಾಯಕರಾದ ಬರ್ನಿ ಸ್ಯಾಂಡರ್ಸ್ ಮತ್ತು ಅಲೆಕ್ಸಾಂಡ್ರಿಯಾ ಒಕಾಸಿಯೋ-ಕೋರ್ಟೆಜ್ ಭಾಗವಹಿಸಿ, ದುಡಿವ ವರ್ಗದ ಪರವಾಗಿ ಧೈರ್ಯಶಾಲಿ ಹಾಗೂ ವಿಸ್ತೃತ ಆಡಳಿತ ನೀಡುವ ಮಮ್ದಾನಿ ಅವರ ನಿಲುವನ್ನು ಶ್ಲಾಘಿಸಿದರು. ತಮ್ಮ ಭಾಷಣದಲ್ಲಿ ಅವರು ಸರ್ಕಾರದ ಶಕ್ತಿಯನ್ನು ಜನರ ಜೀವನ ಸುಧಾರಣೆಗೆ ಬಳಸುವುದಾಗಿ ಭರವಸೆ ನೀಡಿದರು.
* ಉಚಿತ ಬಾಲಸಂಗೋಪನೆ, ಉಚಿತ ಬಸ್ ಸೇವೆ, ಬಾಡಿಗೆ ಸ್ಥಗಿತ ಮತ್ತು ನಗರ ನಿರ್ವಹಿತ ಕಿರಾಣಿ ಅಂಗಡಿಗಳಂತಹ ಯೋಜನೆಗಳ ಮೂಲಕ ಜೀವನ ವೆಚ್ಚ ಕಡಿಮೆ ಮಾಡುವುದೇ ಅವರ ಆಡಳಿತದ ಪ್ರಮುಖ ಗುರಿಯಾಗಿದೆ. ಕೋವಿಡ್ ನಂತರ ಪುನಶ್ಚೇತನಗೊಂಡ ನ್ಯೂಯಾರ್ಕ್ ನಗರವನ್ನು ಮುನ್ನಡೆಸುವ ಜವಾಬ್ದಾರಿಯ ಜೊತೆಗೆ, ಹೆಚ್ಚುತ್ತಿರುವ ಜೀವನ ವೆಚ್ಚ, ವಲಸೆ ನೀತಿ ಮತ್ತು ಫೆಡರಲ್ ಸರ್ಕಾರದೊಂದಿಗೆ ಸಂಬಂಧಗಳಂತಹ ಸವಾಲುಗಳನ್ನು ಮಮ್ದಾನಿ ಎದುರಿಸಬೇಕಿದೆ.

## ಇತಿಹಾಸ ನಿರ್ಮಿಸಿದ ಅಸ್ಸಾಂ ಸರ್ಕಾರ: ದೇಶದಲ್ಲೇ ಮೊದಲ '8ನೇ ರಾಜ್ಯ ವೇತನ ಆಯೋಗ' ಘೋಷಣೆ




* ಭಾರತದ ಆಡಳಿತಾತ್ಮಕ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ, ಕೇಂದ್ರ ಸರ್ಕಾರಕ್ಕಿಂತ ಮುನ್ನವೇ ಅಸ್ಸಾಂ ರಾಜ್ಯವು ತನ್ನ ಸರ್ಕಾರಿ ನೌಕರರಿಗಾಗಿ 8ನೇ ರಾಜ್ಯ ವೇತನ ಆಯೋಗವನ್ನು (8th State Pay Commission) ರಚಿಸಿ ಆದೇಶ ಹೊರಡಿಸಿದೆ. 7ನೇ ವೇತನ ಆಯೋಗದ ಅವಧಿಯು 2026ರ ಜನವರಿ 1ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನಲೆಯಲ್ಲಿ, ನೌಕರರ ಹಿತದೃಷ್ಟಿಯಿಂದ ಅಸ್ಸಾಂ ಈ ಮಹತ್ವದ ನಿರ್ಧಾರ ಕೈಗೊಂಡಿದೆ.
* ಈ ನಿರ್ಧಾರವನ್ನು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಅಧಿಕೃತವಾಗಿ ಪ್ರಕಟಿಸಿದ್ದು, ರಾಜ್ಯದ ಮಾಜಿ ಮುಖ್ಯ ಕಾರ್ಯದರ್ಶಿ ಸುಭಾಷ್ ದಾಸ್ ಅವರನ್ನು 8ನೇ ರಾಜ್ಯ ವೇತನ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಕೇಂದ್ರ ಸರ್ಕಾರದ 8ನೇ ವೇತನ ಆಯೋಗ ಇನ್ನೂ ಕಾರ್ಯಾರಂಭಿಸದಿರುವ ಸಂದರ್ಭದಲ್ಲೇ ಅಸ್ಸಾಂ ಈ ಕ್ರಮ ಕೈಗೊಂಡಿರುವುದು ಗಮನಾರ್ಹವಾಗಿದೆ.

* 8ನೇ ವೇತನ ಆಯೋಗವು ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆ ಹಾಗೂ ಪಿಂಚಣಿ ವ್ಯವಸ್ಥೆಯನ್ನು ಪರಿಷ್ಕರಿಸುವ ಜವಾಬ್ದಾರಿಯನ್ನು ಹೊಂದಿರಲಿದೆ. 7ನೇ ವೇತನ ಆಯೋಗದ ಚೌಕಟ್ಟು 2026ರ ಜನವರಿ 1ರಂದು ಅಂತ್ಯಗೊಳ್ಳಲಿದ್ದರೂ, ಸಾಮಾನ್ಯವಾಗಿ ಹೊಸ ವೇತನ ಶಿಫಾರಸುಗಳ ಜಾರಿಗೆ ಸಮಯ ತೆಗೆದುಕೊಳ್ಳುತ್ತದೆ. ಕಾರಣ, ವ್ಯಾಪಕ ಚರ್ಚೆಗಳು, ಹಣಕಾಸು ಮೌಲ್ಯಮಾಪನ ಹಾಗೂ ಆಡಳಿತಾತ್ಮಕ ಅನುಮೋದನೆಗಳು ಅಗತ್ಯವಿರುತ್ತವೆ.

* ಅಸ್ಸಾಂ ಸರ್ಕಾರದ ಈ ಮುಂಚಿತ ಕ್ರಮವು ವೇತನ ಪರಿಷ್ಕರಣೆ ಪ್ರಕ್ರಿಯೆಯನ್ನು ವೇಗವಾಗಿ ಮುನ್ನಡೆಸುವ ಉದ್ದೇಶವನ್ನು ಸೂಚಿಸುತ್ತದೆ. ಆಯೋಗವು ಶೀಘ್ರವಾಗಿ ಶಿಫಾರಸುಗಳನ್ನು ಸಲ್ಲಿಸಿ, ಸರ್ಕಾರವು ಅವನ್ನು ತ್ವರಿತವಾಗಿ ಅಂಗೀಕರಿಸಿದರೆ, ರಾಜ್ಯ ನೌಕರರು ಮತ್ತು ಪಿಂಚಣಿದಾರರಿಗೆ ಬೇಗನೇ ಸ್ಪಷ್ಟತೆ ಮತ್ತು ಲಾಭ ದೊರಕುವ ಸಾಧ್ಯತೆ ಇದೆ. ಅರ್ಥಶಾಸ್ತ್ರಜ್ಞರ ಅಭಿಪ್ರಾಯದಂತೆ, ಸಾಮಾನ್ಯವಾಗಿ ವೇತನ ಆಯೋಗಗಳು ತಮ್ಮ ವರದಿ ಪೂರ್ಣಗೊಳಿಸಲು ಸುಮಾರು 18 ತಿಂಗಳು ಸಮಯ ತೆಗೆದುಕೊಳ್ಳುತ್ತವೆ.

* ಮುನ್ನಡೆದ ರಾಜ್ಯವಾಗಿ ಅಸ್ಸಾಂ : ಸಾಮಾನ್ಯ ಪ್ರಕ್ರಿಯೆಯಂತೆ, 8ನೇ ರಾಜ್ಯ ವೇತನ ಆಯೋಗದ ಶಿಫಾರಸುಗಳು ಸುಮಾರು 18 ತಿಂಗಳಲ್ಲಿ ಸಿದ್ಧವಾಗುವ ನಿರೀಕ್ಷೆ ಇದೆ. 2026ರ ಜನವರಿ 1 ಅನ್ನು ಆಧಾರ ದಿನಾಂಕವಾಗಿ ಪರಿಗಣಿಸಿದರೂ, ಹೊಸ ವೇತನ ಮತ್ತು ಪಿಂಚಣಿ ವ್ಯವಸ್ಥೆಯ ಜಾರಿಗೆ 2026ರ ಅಂತ್ಯ ಅಥವಾ 2027ರ ಆರಂಭದಲ್ಲಿ ಅಧಿಸೂಚನೆ ಹೊರಬರುವ ಸಾಧ್ಯತೆ ಇದೆ. ಇಂತಹ ಮುಂಚಿತ ಕ್ರಮದ ಮೂಲಕ ಅಸ್ಸಾಂ ರಾಜ್ಯವು ಇತರ ರಾಜ್ಯಗಳು ಮತ್ತು ಕೇಂದ್ರ ಸರ್ಕಾರಕ್ಕಿಂತ ಮುನ್ನಡೆ ಸಾಧಿಸಿ, ತನ್ನ ನೌಕರರಿಗೆ ಮುಂದಿನ ವೇತನ ಪರಿಷ್ಕರಣೆಯಲ್ಲಿ ಮೊದಲಿಗತ್ವ ನೀಡುವ ಸಾಧ್ಯತೆಯನ್ನು ಸೃಷ್ಟಿಸಿದೆ.

## ದಕ್ಷಿಣ ಧ್ರುವದಲ್ಲಿ ಭಾರತದ ತ್ರಿವರ್ಣ ಧ್ವಜ: 18ರ ಕಾಮ್ಯಾ ಕಾರ್ತಿಕೇಯನ್ ಸಾಹಸಗಾಥೆ



* ಭಾರತೀಯ ನೌಕಾಪಡೆಯ ಹೆಮ್ಮೆಯ ಪುತ್ರಿ, 18 ವರ್ಷದ ಕಾಮ್ಯಾ ಕಾರ್ತಿಕೇಯನ್ (Kaamya Karthikeyan) ಅವರು ದಕ್ಷಿಣ ಧ್ರುವದವರೆಗೆ (South Pole) ಸ್ಕೀ ಮಾಡಿ ತಲುಪಿದ ಅತ್ಯಂತ ಕಿರಿಯ ಭಾರತೀಯಳು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಡಿಸೆಂಬರ್ 27, 2025 ರಂದು ಈ ಸಾಧನೆ ಮಾಡುವ ಮೂಲಕ ಅವರು ವಿಶ್ವದ ಎರಡನೇ ಅತಿ ಕಿರಿಯ ಮಹಿಳಾ ಪರ್ವತಾರೋಹಿ ಹಾಗೂ ಧ್ರುವೀಯ ಅನ್ವೇಷಕಿ ಎಂಬ ಹೆಗ್ಗಳಿಕೆಯನ್ನು ಮುಡಿಗೇರಿಸಿಕೊಂಡಿದ್ದಾರೆ.

* 2025ರ ಡಿಸೆಂಬರ್ 27ರಂದು ಕಾಮ್ಯಾ ದಕ್ಷಿಣ ಧ್ರುವವನ್ನು ತಲುಪಿದರು. ಅಂಟಾರ್ಟಿಕಾ ಖಂಡದಲ್ಲಿ ಸುಮಾರು 115 ಕಿಲೋಮೀಟರ್ ದೂರವನ್ನು ಸ್ಕೀ ಮತ್ತು ನಡೆದು ಅವರು ಈ ಯಾತ್ರೆಯನ್ನು ಪೂರ್ಣಗೊಳಿಸಿದರು. ಮೈನಸ್ 30 ಡಿಗ್ರಿ ಸೆಲ್ಸಿಯಸ್‌ವರೆಗೆ ಕುಸಿದ ತಾಪಮಾನ, ಭಾರೀ ಗಾಳಿಗಳು ಹಾಗೂ 'ವೈಟ್‌ಔಟ್' ಪರಿಸ್ಥಿತಿಗಳ ನಡುವೆಯೇ, ತಮ್ಮ ಸಂಪೂರ್ಣ ಯಾತ್ರಾ ಸಾಮಗ್ರಿಗಳನ್ನು ಹೊತ್ತ ಸ್ಲೆಡ್ ಅನ್ನು ಎಳೆಯುತ್ತಾ, ಪೂರ್ತಿಯಾಗಿ ಕಾಲ್ನಡಿಗೆಯಲ್ಲೇ ಈ ಸಾಹಸವನ್ನು ಸಾಧಿಸಿದರು. ಇದು ಅವರ ಅಪಾರ ಶಾರೀರಿಕ ಸಾಮರ್ಥ್ಯ ಮತ್ತು ಮಾನಸಿಕ ಧೈರ್ಯವನ್ನು ಸ್ಪಷ್ಟಪಡಿಸುತ್ತದೆ

* ಕಾಮ್ಯಾ ಭಾರತೀಯ ನೌಕಾಪಡೆಯ ಅಧಿಕಾರಿ ಕಮಾಂಡರ್ ಎಸ್. ಕಾರ್ತಿಕೇಯನ್ ಹಾಗೂ ಬಾಲ್ಯಶಿಕ್ಷಕಿ ಲಾವಣ್ಯ ಕಾರ್ತಿಕೇಯನ್ ಅವರ ಪುತ್ರಿ. ನೇವಿ ಚಿಲ್ಡ್ರನ್ ಸ್ಕೂಲ್‌ನ ಹಳೆಯ ವಿದ್ಯಾರ್ಥಿನಿಯಾಗಿರುವ ಅವರು, ಬಾಲ್ಯದಿಂದಲೇ ಶಿಸ್ತು ಮತ್ತು ಸಾಹಸ ಚಟುವಟಿಕೆಗಳೊಂದಿಗೆ ಬೆಳೆದವರು. ದಕ್ಷಿಣ ಧ್ರುವ ಸಾಧನೆಯ ಬಳಿಕ ಭಾರತೀಯ ನೌಕಾಪಡೆಯೂ ಸಾರ್ವಜನಿಕವಾಗಿ ಅಭಿನಂದನೆ ಸಲ್ಲಿಸಿ, ಈ ಸಾಹಸದ ಕಠಿಣತೆಯನ್ನು ಶ್ಲಾಘಿಸಿದೆ.

* 18ರೊಳಗೆ ಕಾಮ್ಯಾ ಸಾಧಿಸಿರುವ ಪರ್ವತಾರೋಹಣ ಸಾಧನೆಗಳು ಅಪರೂಪದವು. 2024ರಲ್ಲಿ, 17ನೇ ವಯಸ್ಸಿನಲ್ಲಿ ಅವರು ಸೆವೆನ್ ಸಮಿಟ್ಸ್ ಚಾಲೆಂಜ್ ಅನ್ನು ಪೂರ್ಣಗೊಳಿಸಿದರು. ಇದರಲ್ಲಿ ಏಷ್ಯಾದ ಎವರೆಸ್ಟ್, ದಕ್ಷಿಣ ಅಮೆರಿಕದ ಅಕಾಂಕ್ವಾಗುವಾ, ಉತ್ತರ ಅಮೆರಿಕದ ಡೆನಾಲಿ, ಆಫ್ರಿಕಾದ ಕಿಲಿಮಂಜಾರೋ, ಯುರೋಪಿನ ಎಲ್‌ಬ್ರುಸ್, ಅಂಟಾರ್ಟಿಕಾದ ವಿನ್ಸನ್ ಮತ್ತು ಆಸ್ಟ್ರೇಲಿಯಾದ ಕೊಸಿಯುಸ್ಕೊ ಪರ್ವತಗಳು ಸೇರಿವೆ. ನೇಪಾಳ ಮಾರ್ಗವಾಗಿ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಅತ್ಯಂತ ಕಿರಿಯ ಭಾರತೀಯ ಹಾಗೂ ವಿಶ್ವದ ಎರಡನೇ ಅತಿ ಕಿರಿಯ ಮಹಿಳೆ ಎಂಬ ಹೆಗ್ಗಳಿಕೆಯೂ ಅವರದ್ದೇ.

* ಇದಕ್ಕೂ ಮೊದಲು, 2020ರಲ್ಲಿ ಮೌಂಟ್ ಅಕಾಂಕ್ವಾಗುವಾವನ್ನು ಅತಿ ಕಿರಿಯ ವಯಸ್ಸಿನಲ್ಲಿ ಏರಿದ ಬಾಲಕಿ ಎಂಬ ದಾಖಲೆ ನಿರ್ಮಿಸಿದ್ದು, 2018ರಲ್ಲಿ ಮೌಂಟ್ ಎಲ್‌ಬ್ರುಸ್ ಶಿಖರದಿಂದ ಸ್ಕೀ ಮೂಲಕ ಇಳಿದ ಅಪರೂಪದ ಸಾಧನೆಯನ್ನು ಅವರು ಮಾಡಿದ್ದಾರೆ.

* ಎಕ್ಸ್‌ಪ್ಲೋರರ್ಸ್ ಗ್ರ್ಯಾಂಡ್ ಸ್ಲ್ಯಾಮ್ ಗುರಿಯತ್ತ: ಪ್ರಸ್ತುತ ಕಾಮ್ಯಾ ಎಕ್ಸ್‌ಪ್ಲೋರರ್ಸ್ ಗ್ರ್ಯಾಂಡ್ ಸ್ಲ್ಯಾಮ್ ಎಂಬ ಅತ್ಯಂತ ಗೌರವಾನ್ವಿತ ಸಾಹಸ ಗುರಿಯ ಅಂತಿಮ ಹಂತದಲ್ಲಿದ್ದಾರೆ. ಇದರಲ್ಲಿ ಸೆವೆನ್ ಸಮಿಟ್ಸ್ ಸಾಧನೆಯ ಜೊತೆಗೆ ದಕ್ಷಿಣ ಧ್ರುವ ಮತ್ತು ಉತ್ತರ ಧ್ರುವಕ್ಕೆ ಸ್ಕೀ ಯಾತ್ರೆಗಳು ಸೇರಿವೆ. ದಕ್ಷಿಣ ಧ್ರುವವನ್ನು ಈಗಾಗಲೇ ಜಯಿಸಿರುವ ಅವರು, ಉತ್ತರ ಧ್ರುವ ಮಾತ್ರ ಉಳಿದಿರುವ ಸ್ಥಿತಿಯಲ್ಲಿ, ಜಾಗತಿಕ ಸಾಹಸ ಲೋಕದಲ್ಲಿ ಮತ್ತೊಂದು ಅಪೂರ್ವ ದಾಖಲೆ ನಿರ್ಮಿಸುವ ಅಂಚಿನಲ್ಲಿ ನಿಂತಿದ್ದಾರೆ.

## ಭಾರತ-ಪಾಕಿಸ್ತಾನ ಕೈದಿಗಳ ಪಟ್ಟಿ ವಿನಿಮಯ: 2008ರ ಕಾನ್ಸುಲರ್ ಒಪ್ಪಂದದಡಿ ಮಾನವೀಯ ಸಹಕಾರ!



* ದ್ವಿಪಕ್ಷೀಯ ಸಂಬಂಧಗಳಲ್ಲಿ ಎಷ್ಟೇ ಏರಿಳಿತಗಳಿದ್ದರೂ, ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು 2008ರ ಕಾನ್ಸುಲರ್ ಪ್ರವೇಶ ಒಪ್ಪಂದದ (Consular Access Agreement) ಅನ್ವಯ ಪರಸ್ಪರರ ವಶದಲ್ಲಿರುವ ಕೈದಿಗಳ ಮತ್ತು ಮೀನುಗಾರರ ಪಟ್ಟಿಯನ್ನು ಜನವರಿ 1, 2026ರಂದು ವಿನಿಮಯ ಮಾಡಿಕೊಂಡಿವೆ. ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ಏಕಕಾಲದಲ್ಲಿ ರಾಜತಾಂತ್ರಿಕ ಮಾರ್ಗಗಳ ಮೂಲಕ ಈ ಪಟ್ಟಿಗಳನ್ನು ಹಂಚಿಕೊಳ್ಳಲಾಗಿದ್ದು, ಇದು ದಶಕಗಳ ಕಾಲದ ಸಂಪ್ರದಾಯವನ್ನು ಮುಂದುವರಿಸಿದೆ.

**ಪಟ್ಟಿ ವಿನಿಮಯದ ವಿವರಗಳು:**

- ಭಾರತದ ವಶದಲ್ಲಿರುವವರು: ಭಾರತವು ತನ್ನ ಜೈಲುಗಳಲ್ಲಿರುವ ಪಾಕಿಸ್ತಾನದ 391 ನಾಗರಿಕ ಕೈದಿಗಳು ಮತ್ತು 33 ಮೀನುಗಾರರ ವಿವರಗಳನ್ನು ನೀಡಿದೆ.
- ಪಾಕಿಸ್ತಾನದ ವಶದಲ್ಲಿರುವವರು: ಪಾಕಿಸ್ತಾನವು ತನ್ನ ವಶದಲ್ಲಿರುವ 58 ಭಾರತೀಯ ನಾಗರಿಕ ಕೈದಿಗಳು ಮತ್ತು 199 ಮೀನುಗಾರರ ಪಟ್ಟಿಯನ್ನು ಭಾರತಕ್ಕೆ ಹಸ್ತಾಂತರಿಸಿದೆ.

* ಭಾರತ ಸರ್ಕಾರವು ಪಾಕಿಸ್ತಾನದ ಮುಂದೆ ಕೆಲವು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದೆ. ಅವುಗಳಲ್ಲಿ ಮುಖ್ಯವಾಗಿ, ಶಿಕ್ಷಾವಧಿ ಪೂರ್ಣಗೊಳಿಸಿರುವ 167 ಭಾರತೀಯ ಕೈದಿಗಳನ್ನು (ಮೀನುಗಾರರನ್ನು ಒಳಗೊಂಡಂತೆ) ತಕ್ಷಣವೇ ಬಿಡುಗಡೆ ಮಾಡಿ ಸ್ವದೇಶಕ್ಕೆ ಕಳುಹಿಸಬೇಕು, ಇನ್ನೂ ಗುರುತಿಸಲಾಗದ ಅಥವಾ ಕಾನ್ಸುಲರ್ ಸಂಪರ್ಕ ಸಿಗದ 35 ಭಾರತೀಯರಿಗೆ ತಕ್ಷಣ ಕಾನ್ಸುಲರ್ ಪ್ರವೇಶ ನೀಡಬೇಕು, ಹಾಗೂ ಅನಾಹುತವಾಗಿ ಸಮುದ್ರ ಗಡಿ ದಾಟುವ ಮೀನುಗಾರರನ್ನು ಅಪರಾಧಿಗಳಂತೆ

ಕಾಣದೇ ಮಾನವೀಯ ದೃಷ್ಟಿಕೋನದಿಂದ ರಕ್ಷಿಸಿ ಬಿಡುಗಡೆ ಮಾಡಬೇಕು ಎಂಬುದು ಒಳಗೊಂಡಿದೆ.

* 2014 ರಿಂದ ಭಾರತ ಸರ್ಕಾರದ ನಿರಂತರ ರಾಜತಾಂತ್ರಿಕ ಒತ್ತಡದ ಫಲವಾಗಿ, ಕಳೆದ ಒಂದು ದಶಕದಲ್ಲಿ ಪಾಕಿಸ್ತಾನದಿಂದ ಒಟ್ಟು 2,661 ಮೀನುಗಾರರು ಮತ್ತು 71 ನಾಗರಿಕ ಕೈದಿಗಳನ್ನು ಸುರಕ್ಷಿತವಾಗಿ ಭಾರತಕ್ಕೆ ಮರಳಿ ತರಲಾಗಿದೆ. ವಿಶೇಷವಾಗಿ, 2023ರಿಂದ ಇಲ್ಲಿಯವರೆಗೆ ಮಾತ್ರವೇ 500 ಮೀನುಗಾರರು ಮತ್ತು 13 ನಾಗರಿಕ ಕೈದಿಗಳು ಬಿಡುಗಡೆ ಹೊಂದಿರುವುದು ಈ ಪ್ರಕ್ರಿಯೆಯಲ್ಲಿ ಕಂಡುಬರುವ ಆಶಾದಾಯಕ ಹಾಗೂ ಮಹತ್ವದ ಪ್ರಗತಿಯಾಗಿದ್ದು, ಮಾನವೀಯ ಪ್ರಯತ್ನಗಳಿಗೆ ಬಲ ನೀಡಿದೆ.

## ಭಾರತೀಯ ವಾಯುಪಡೆಯ ನೂತನ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ನಾಗೇಶ್ ಕಪೂರ್ ಅಧಿಕಾರ ಸ್ವೀಕಾರ!



* ಭಾರತೀಯ ವಾಯುಪಡೆಯ (IAF) ಮಹತ್ವದ ಹುದ್ದೆಯಾದ ಉಪ ವಾಯು ಸೇನಾ ಮುಖ್ಯಸ್ಥರಾಗಿ (Vice Chief of the Air Staff - VCAS) ಏರ್ ಮಾರ್ಷಲ್ ನಾಗೇಶ್ ಕಪೂರ್ ಅವರು ಜನವರಿ 1, 2026ರಂದು ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು. ನಾಲ್ಕು ದಶಕಗಳ ಸುದೀರ್ಘ ಸೇವೆಯ ನಂತರ ನಿವೃತ್ತರಾದ ಏರ್ ಮಾರ್ಷಲ್ ನರ್ಮದೇಶ್ವರ್ ತಿವಾರಿ ಅವರ ಸ್ಥಾನವನ್ನು ಇವರು ಅಲಂಕರಿಸಿದ್ದಾರೆ.

* ದೆಹಲಿಯ ವಾಯು ಭವನದಲ್ಲಿ ಅವರು ಉಪ ವಾಯು ಸೇನಾ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಅವರಿಗೆ ಗೌರವ ವಂದನೆ (Guard of Honour) ಸಲ್ಲಿಸಲಾಯಿತು. ಬಳಿಕ ಅವರು ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ತೆರಳಿ ವೀರ ಸೈನಿಕರಿಗೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.

* ಎಯರ್ ಮಾರ್ಷಲ್ ನಾಗೇಶ್ ಕಪೂರ್ ಅವರು ರಾಷ್ಟ್ರೀಯ ರಕ್ಷಣಾ ಅಕಾಡೆಮಿ (NDA) ಯ ಪದವೀಧರರಾಗಿದ್ದು, ಡಿಸೆಂಬರ್ 1985ರಲ್ಲಿ ಪದವಿ ಪಡೆದು, ಡಿಸೆಂಬರ್ 6, 1986ರಂದು ವಾಯುಪಡೆಯ ಫೈಟರ್ ಸ್ಟ್ರೀಮ್ ನಲ್ಲಿ ಆಯೋಗಿತರಾದರು. ಅವರು ಒಬ್ಬ ನಿಪುಣ ಫೈಟರ್ ಪೈಲಟ್, ಅರ್ಹ ಫ್ಲೈಯಿಂಗ್ ಇನ್ಸ್ಟ್ರಕ್ಟರ್ ಹಾಗೂ ಫೈಟರ್ ಕಂಬಾಟ್ ಲೀಡರ್ ಆಗಿದ್ದಾರೆ. ಮಿಗ್-21 ಮತ್ತು ಮಿಗ್-29 ವಿಮಾನಗಳ ಎಲ್ಲಾ ರೂಪಾಂತರಗಳನ್ನು ಹಾರಿಸಿದ ಅನುಭವ ಅವರಿಗೆ ಇದೆ. ತಮ್ಮ ವಿಶಿಷ್ಟ ವಾಯುಯಾನ ವೃತ್ತಿಜೀವನದಲ್ಲಿ ಅವರು 3,400 ಗಂಟೆಗೂ ಹೆಚ್ಚು ಕಾರ್ಯಾಚರಣಾ ಮತ್ತು ತರಬೇತಿ ಹಾರಾಟ ನಡೆಸಿದ್ದಾರೆ.

* ಅವರ ಕಾರ್ಯಾಚರಣಾ ಹುದ್ದೆಗಳಲ್ಲಿ ಕೇಂದ್ರ ವಲಯದ ಫೈಟರ್ ಸ್ಕ್ವಾಡ್ರನ್‌ನ ಕಮಾಂಡಿಂಗ್ ಅಧಿಕಾರಿ, ಪಶ್ಚಿಮ ವಲಯದ ಮುಂಚೂಣಿ ವಿಮಾನ ನೆಲೆಯ ಸ್ಟೇಷನ್ ಕಮಾಂಡರ್ ಹಾಗೂ ಪ್ರಮುಖ ವಾಯು ನೆಲೆಯ ಏರ್ ಆಫೀಸರ್ ಕಮಾಂಡಿಂಗ್ ಹುದ್ದೆಗಳು ಸೇರಿವೆ. ತರಬೇತಿ ಕ್ಷೇತ್ರದಲ್ಲಿ ಅವರು ವಾಯುಪಡೆ ಅಕಾಡೆಮಿಯ ಚೀಫ್ ಇನ್‌ಸ್ಟ್ರಕ್ಟರ್ (ಫ್ಲೈಯಿಂಗ್) ಹಾಗೂ ವೆಲ್ಲಿಂಗ್ಟನ್‌ನ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜಿನಲ್ಲಿ ಡೈರೆಕ್ಟಿಂಗ್ ಸ್ಟಾಫ್ ಆಗಿ ಸೇವೆ ಸಲ್ಲಿಸಿದ್ದಾರೆ. ವಾಯುಪಡೆ ಅಕಾಡೆಮಿಯಲ್ಲಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ, PC-7 Mk II ತರಬೇತಿ ವಿಮಾನಗಳ ಸೇರ್ಪಡೆಅವರು ಪಾಕಿಸ್ತಾನದಲ್ಲಿ ರಕ್ಷಣಾ ಅಟ್ಯಾಶೆ (Defence Attaché) ಆಗಿಯೂ ರಾಜತಾಂತ್ರಿಕ ಸೇವೆ ಸಲ್ಲಿಸಿದ್ದಾರೆ. ಅವರ ಪ್ರಮುಖ ಸಿಬ್ಬಂದಿ ಹುದ್ದೆಗಳಲ್ಲಿ ಏರ್ ಹೆಡ್‌ಕ್ವಾರ್ಟರ್ಸ್‌ನ ಸಹಾಯಕ ವಾಯು ಸೇನಾ ಮುಖ್ಯಸ್ಥ (ಆಪರೇಷನ್ಸ್-ಸ್ಟ್ರಾಟಜಿ), ದಕ್ಷಿಣ ಪಶ್ಚಿಮ ವಾಯು ಕಮಾಂಡ್‌ನ ಏರ್ ಡಿಫೆನ್ಸ್ ಕಮಾಂಡರ್, ಕೇಂದ್ರ ವಾಯು ಕಮಾಂಡ್‌ನ ಹಿರಿಯ ಏರ್ ಸ್ಟಾಫ್ ಅಧಿಕಾರಿ ಹಾಗೂ ಏರ್ ಹೆಡ್‌ಕ್ವಾರ್ಟರ್ಸ್‌ನ ಪರ್ಸನಲ್ ವಿಭಾಗದ ಮುಖ್ಯಾಧಿಕಾರಿ ಹುದ್ದೆಗಳು ಸೇರಿವೆ.

* ಉಪ ವಾಯು ಸೇನಾ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸುವ ಮೊದಲು, ಅವರು ಟ್ರೈನಿಂಗ್ ಕಮಾಂಡ್‌ನ ಏರ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಹಾಗೂ ನಂತರ ದಕ್ಷಿಣ ಪಶ್ಚಿಮ ವಾಯು ಕಮಾಂಡ್‌ನ ಏರ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿ ಸೇವೆ ಸಲ್ಲಿಸಿದ್ದರು.

*** ಎಯರ್ ಮಾರ್ಷಲ್ ನಾಗೇಶ್ ಕಪೂರ್ ಅವರ ಮಹತ್ತರ ಸೇವೆಗೆ ರಾಷ್ಟ್ರಪತಿಗಳ ಗೌರವಗಳು :**

=> ವಾಯು ಸೇನಾ ಪದಕ (Vayu Sena Medal) – 2008
=> ಅತಿ ವಿಶಿಷ್ಟ ಸೇವಾ ಪದಕ (Ati Vishisht Seva Medal) – 2022
=> ಪರಮ ವಿಶಿಷ್ಟ ಸೇವಾ ಪದಕ (Param Vishisht Seva Medal) ಮತ್ತು ಸರ್ವೋತ್ತಮ ಯುದ್ಧ ಸೇವಾ ಪದಕ (Sarvottam Yudh Seva Medal) – ೨೦೨೫

## ಭಾರತದ ಮೊದಲ ಬುಲೆಟ್ ರೈಲು: 2027ರ ಆಗಸ್ಟ್ 15ರಂದು ಚಾಲನೆ! - ಸಚಿವ ಅಶ್ವಿನಿ ವೈಷ್ಣವ್ ಘೋಷಣೆ



* ದೇಶದ ಬಹುನಿರೀಕ್ಷಿತ ಮುಂಬೈ-ಅಹಮದಾಬಾದ್ ಹೈ-ಸ್ಪೀಡ್ ರೈಲ್ (MAHSR) ಅಥವಾ ಬುಲೆಟ್ ರೈಲು ಯೋಜನೆಯು ಆಗಸ್ಟ್ 15, 2027 ರೊಳಗೆ ಕಾರ್ಯಾರಂಭ ಮಾಡಲಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಜನವರಿ 2, 2026ರಂದು ಅಧಿಕೃತವಾಗಿ ತಿಳಿಸಿದ್ದಾರೆ. ಈ ಮೂಲಕ ಭಾರತವು ವಿಶ್ವದ ಅತಿ ವೇಗದ ರೈಲು ಸಂಚಾರ ವ್ಯವಸ್ಥೆ ಹೊಂದಿರುವ ದೇಶಗಳ ಸಾಲಿಗೆ ಸೇರಲಿದೆ.

ಜನವರಿ 2026ರಲ್ಲಿ ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ 1.5 ಕಿ.ಮೀ ಉದ್ದದ ಪರ್ವತ ಸುರಂಗ ಮಾರ್ಗವನ್ನು (Mountain Tunnel MT-5) ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಯೋಜನೆಯು ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ.

* ಯೋಜನೆಯನ್ನು ಸುಗಮವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ರೈಲು ಸಂಚಾರವನ್ನು ಹಂತ ಹಂತವಾಗಿ ಆರಂಭಿಸಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ ಗುಜರಾತ್ ನ ಸುರತ್-ಬಿಲಿಮೋರಾ ನಡುವಿನ 50 ಕಿ.ಮೀ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗಲಿದೆ; ಎರಡನೇ ಹಂತದಲ್ಲಿ ವಾಪಿ ರಿಂದ ಸುರತ್ ವರೆಗೆ ಸೇವೆ ವಿಸ್ತರಿಸಲಾಗುತ್ತದೆ; ಮತ್ತು ಅಂತಿಮವಾಗಿ ಮುಂಬೈ (BKC) ರಿಂದ ಅಹಮದಾಬಾದ್ ವರೆಗೆ 508 ಕಿ.ಮೀ ಉದ್ದದ ಸಂಪೂರ್ಣ ಮಾರ್ಗವು ಡಿಸೆಂಬರ್ 2029ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ, ಇದು ಯೋಜನೆಯ ಪ್ರಮುಖ ಮೈಲಿಗಲ್ಲಾಗಿದೆ.

* ಈ ಯೋಜನೆಯ ಮುಖ್ಯಾಂಶಗಳಲ್ಲಿ, ರೈಲುಗಳು ಗಂಟೆಗೆ ಗರಿಷ್ಠ 320 ಕಿ.ಮೀ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿದ್ದು, ಇದರಿಂದ ಮುಂಬೈ-ಅಹಮದಾಬಾದ್ ನಡುವಿನ ಪ್ರಯಾಣ ಸಮಯವು ಈಗಿನ 7–8 ಗಂಟೆಗಳಿಂದ ಕೇವಲ 2 ಗಂಟೆ 7 ನಿಮಿಷಗಳಿಗೆ (127 ನಿಮಿಷ) ಇಳಿಕೆಯಾಗಲಿದೆ. ತಂತ್ರಜ್ಞಾನಾತ್ಮಕವಾಗಿ, ಈ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಜಪಾನ್‌ನ ವಿಶ್ವಪ್ರಸಿದ್ಧ 'ಶಿಂಕನ್ಸೆನ್' (Shinkansen) ತಂತ್ರಜ್ಞಾನ ಬಳಸಲಾಗುತ್ತಿದ್ದು, ವಿಶೇಷವಾಗಿ ಥಾಣೆ ಕ್ರೀಕ್ ಬಳಿ 7 ಕಿ.ಮೀ ಉದ್ದದ ಸಮುದ್ರಾಂತರ ಸುರಂಗ (Undersea Tunnel) ಈ ಮಾರ್ಗದ ಅತ್ಯಂತ ವಿಶಿಷ್ಟ ವೈಶಿಷ್ಟ್ಯವಾಗಿದೆ.

* ಯೋಜನೆಯ ವೆಚ್ಚ: ಈ ಮಹತ್ವಾಕಾಂಕ್ಷಿ ಬುಲೆಟ್ ರೈಲ್ ಯೋಜನೆಯ ಒಟ್ಟು ಅಂದಾಜು ವೆಚ್ಚವು ಸುಮಾರು ₹1,08,000 ಕೋಟಿ ಆಗಿದ್ದು, ಇದರಲ್ಲಿ ಜಪಾನ್ ಇಂಟರ್ನೇಶನಲ್ ಕೊಆಪರೇಷನ್ ಏಜೆನ್ಸಿ (JICA) ಸುಮಾರು 81 ಶೇಕಡಾ (₹88,000 ಕೋಟಿ) ಹಣಕಾಸು ನೆರವನ್ನು ಒದಗಿಸಿದೆ.




## ಓಲಾ-ಉಬರ್‌ಗೆ ಸೆಡ್ಡು ಹೊಡೆಯಲು ಬಂತು 'ಭಾರತ್ ಟ್ಯಾಕ್ಸಿ' : ಚಾಲಕರೇ ಇಲ್ಲಿ ಮಾಲೀಕರು!




*ಭಾರತದ ಸಾರಿಗೆ ಕ್ಷೇತ್ರದಲ್ಲಿ ಐತಿಹಾಸಿಕ ಬದಲಾವಣೆಯೊಂದು ಸಂಭವಿಸುತ್ತಿದೆ. ಕೇಂದ್ರ ಸಹಕಾರ ಸಚಿವಾಲಯದ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ 'ಭಾರತ್ ಟ್ಯಾಕ್ಸಿ' ಆ್ಯಪ್ ಜನವರಿ 1, 2026ರಂದು ಅಧಿಕೃತವಾಗಿ ಲೋಕಾರ್ಪಣೆಗೊಂಡಿದ್ದು, ಜನವರಿ ಅಂತ್ಯದ ವೇಳೆಗೆ ದೆಹಲಿ ಸೇರಿದಂತೆ ಪ್ರಮುಖ ನಗರಗಳಲ್ಲಿ ಪೂರ್ಣ ಪ್ರಮಾಣದ ಸೇವೆಗೆ ಸಿದ್ಧವಾಗಿದೆ.
ಖಾಸಗಿ ಕ್ಯಾಬ್ ಕಂಪನಿಗಳ ಏಕಸ್ವಾಮ್ಯವನ್ನು ಕೊನೆಗಾಣಿಸಿ, ಚಾಲಕರಿಗೆ ನ್ಯಾಯಯುತ ಆದಾಯ ಮತ್ತು ಪ್ರಯಾಣಿಕರಿಗೆ ಸುರಕ್ಷಿತ ಪ್ರಯಾಣ ಒದಗಿಸುವುದು ಈ ಯೋಜನೆಯ ಮೂಲ ಮಂತ್ರವಾಗಿದೆ.
* ಭಾರತ್ ಟ್ಯಾಕ್ಸಿ ಆಪ್ ಅನ್ನು 2025ರ ಡಿಸೆಂಬರ್ 2ರಂದು ದೆಹಲಿಯಲ್ಲಿ ಪೈಲಟ್ ಆಧಾರದ ಮೇಲೆ ಪ್ರಾರಂಭಿಸಲಾಗಿತ್ತು. ಅದಾದ ಬಳಿಕ ಪ್ರತಿದಿನ ಸರಾಸರಿ 5,500 ಪ್ರಯಾಣಗಳು ನಡೆದಿದ್ದು, ಇದರಲ್ಲಿ ಸುಮಾರು 4,000 ಏರ್‌ಪೋರ್ಟ್ ಪ್ರಯಾಣಗಳು ಮತ್ತು 1,500 ಇತರೆ ಸ್ಥಳಗಳ ಪ್ರಯಾಣಗಳು ಸೇರಿವೆ. ಕ್ಯಾಬ್, ಆಟೋ ಮತ್ತು ಬೈಕ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸೇವೆ ನೀಡಲಾಗುತ್ತಿದೆ. ಈಗಾಗಲೇ 1.4 ಲಕ್ಷಕ್ಕೂ ಹೆಚ್ಚು ಚಾಲಕರು ಆಪ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ.
* ಈ ಆ್ಯಪ್ ಅನ್ನು ಸಹಕಾರ ಟ್ಯಾಕ್ಸಿ ಕೋಆಪರೇಟಿವ್ ಲಿಮಿಟೆಡ್ (ಸಹಕಾರ್ ಟ್ಯಾಕ್ಸಿ) ನಿರ್ವಹಿಸುತ್ತಿದ್ದು, ಇದಕ್ಕೆ ಭಾರತದ ಎಂಟು ಬಲಿಷ್ಠ ಸಹಕಾರಿ ಮತ್ತು ಹಣಕಾಸು ಸಂಸ್ಥೆಗಳ ಬೆಂಬಲ ಇದೆ. ಪ್ರಮುಖವಾಗಿ IFFCO ಮತ್ತು KRIBHCO, Amul (GCMMF), ಹಾಗೆಯೇ NABARD ಮತ್ತು NCDC, ಜೊತೆಗೆ NDDB, NAFED ಮತ್ತು NCEL ಸಂಸ್ಥೆಗಳು ಈ ಯೋಜನೆಗೆ ಬಲವಾದ ಬೆನ್ನೆಲುಬಾಗಿ ನಿಂತಿದ್ದು, ಸಹಕಾರಿ ಚಳವಳಿಗೆ ಹೊಸ ಆಯಾಮ ನೀಡುತ್ತಿವೆ.
* ಭಾರತ್ ಟ್ಯಾಕ್ಸಿ ಯೋಜನೆಯನ್ನು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಮಾರ್ಚ್ 2024ರಲ್ಲಿ ಘೋಷಿಸಿದ್ದು, ಚಾಲಕರನ್ನು ಕೇಂದ್ರಬಿಂದುಗೊಳಿಸಿ ಖಾಸಗಿ ಕ್ಯಾಬ್ ಕಂಪನಿಗಳ ಅವಲಂಬನೆಯನ್ನು ಕಡಿಮೆ ಮಾಡುವುದು ಇದರ ಉದ್ದೇಶ. ಓಲಾ, ಊಬರ್, ರಾಪಿಡೋಗಳಿಗೆ ಸ್ಪರ್ಧಿಯಾಗಿರುವ ಈ ಆಪ್‌ನಲ್ಲಿ ಚಾಲಕರಿಂದ ಯಾವುದೇ ಕಮಿಷನ್ ವಸೂಲಿ ಇಲ್ಲ; ವಾರ್ಷಿಕ ಡಿವಿಡೆಂಡ್, ಲಾಭದಲ್ಲಿ ಪಾಲು ಹಾಗೂ ವಿಮಾ ಸೌಲಭ್ಯಗಳಿವೆ.
* ಮೆಟ್ರೋ ಸೇರಿದಂತೆ ಇತರ ಸಾರಿಗೆ ವ್ಯವಸ್ಥೆಗಳೊಂದಿಗೆ ಈ ಆಪ್ ಏಕೀಕೃತವಾಗಿದ್ದು, ಬಹುಮಾಧ್ಯಮ ಪ್ರಯಾಣಕ್ಕೆ ಅವಕಾಶ ನೀಡುತ್ತದೆ. ಚಾಲಕರು ಮತ್ತು ಪ್ರಯಾಣಿಕರ ಸುರಕ್ಷತೆಗಾಗಿ ದೆಹಲಿ ಪೊಲೀಸ್ ಇಲಾಖೆಯೊಂದಿಗೆ ಸಹಭಾಗಿತ್ವವೂ ಮಾಡಲಾಗಿದೆ.

## ಜಾಗತಿಕ ದಾಖಲೆ: ಕಾನೂನು ಹಕ್ಕು ಪಡೆದ ವಿಶ್ವದ ಮೊದಲ ಕೀಟ 'ಸ್ಟಿಂಗ್‌ಲೆಸ್' ಜೇನುನೊಣ!



* ಪ್ರಕೃತಿಯನ್ನು ಕೇವಲ ಸಂಪನ್ಮೂಲವಾಗಿ ನೋಡುವ ಬದಲು, ಅದನ್ನು ಹಕ್ಕುಗಳನ್ನು ಹೊಂದಿರುವ ಜೀವಿಗಳಾಗಿ ಪರಿಗಣಿಸುವ ನಿಟ್ಟಿನಲ್ಲಿ ಪೆರು ದೇಶವು ಇಡೀ ಜಗತ್ತಿಗೆ ಮಾದರಿಯಾಗಿದೆ. ಪೆರುನ ಸಾಟಿಪೊ (Satipo) ಮತ್ತು ನೌಟಾ (Nauta) ಮಹಾನಗರ ಪಾಲಿಕೆಗಳು ಅಮೆಜಾನ್‌ನ ಸ್ಟಿಂಗ್‌ಲೆಸ್ ಜೇನುನೊಣಗಳಿಗೆ "ಕಾನೂನು ಹಕ್ಕುಗಳನ್ನು" ನೀಡುವ ಐತಿಹಾಸಿಕ ಆದೇಶಗಳನ್ನು ಹೊರಡಿಸಿವೆ.
*ಇವು ಮೆಲಿಪೊನಿನಿ ಗುಂಪಿಗೆ ಸೇರಿದ, ಕಚ್ಚುವ ಶಕ್ತಿ ಇಲ್ಲದ ಅಥವಾ ದುರ್ಬಲವಾದ ಜೇನುನೊಣಗಳು. ಉಷ್ಣವಲಯ ಪ್ರದೇಶಗಳಲ್ಲಿ ಕಂಡುಬರುವ ಸುಮಾರು 500 ಜಾತಿಗಳಲ್ಲಿ ಅರ್ಧದಷ್ಟು ಅಮೆಜಾನ್‌ನಲ್ಲಿ ಇದ್ದು, ಪೆರುದಲ್ಲಿ ಮಾತ್ರವೇ 170ಕ್ಕೂ ಹೆಚ್ಚು ಜಾತಿಗಳಿವೆ.
* ಸುಮಾರು 80 ಮಿಲಿಯನ್ ವರ್ಷಗಳಿಂದ ಸ್ಟಿಂಗ್‌ಲೆಸ್ ಜೇನುನೊಣಗಳು ಪರಿಸರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಅಮೆಜಾನ್‌ನ 80%ಕ್ಕೂ ಹೆಚ್ಚು ಸಸ್ಯಗಳಿಗೆ ಪರಾಗಸ್ಪರ್ಶ ಮಾಡುತ್ತವೆ. ಕಾಕಾವೋ, ಕಾಫಿ, ಅವಕಾಡೋ ಬೆಳೆಗಳಿಗೆ ಅವು ಅಗತ್ಯವಾಗಿದ್ದು, ಇವುಗಳ ಸಂಖ್ಯೆ ಕುಸಿತವಾದರೆ ಅರಣ್ಯ ಪುನರುತ್ಪಾದನೆ, ಆಹಾರ ಭದ್ರತೆ ಮತ್ತು ಜೀವವೈವಿಧ್ಯಕ್ಕೆ ಗಂಭೀರ ಅಪಾಯ ಉಂಟಾಗುತ್ತದೆ.
* ಕಾನೂನು ಹಕ್ಕುಗಳು ಮತ್ತು ಸಂರಕ್ಷಣಾ ಪರಿಣಾಮ : 2024ರಲ್ಲಿ ಪೆರು ದೇಶವು ಸ್ಟಿಂಗ್‌ಲೆಸ್ ಜೇನುನೊಣಗಳನ್ನು ಸ್ಥಳೀಯ ಪ್ರಜಾತಿಗಳೆಂದು ಗುರುತಿಸುವ ರಾಷ್ಟ್ರೀಯ ಕಾನೂನು ಜಾರಿಗೆ ತಂದಿತ್ತು. ಇದರ ಮುಂದುವರಿದ ಭಾಗವಾಗಿ, ಸಾಟಿಪೊ ಮತ್ತು ನೌಟಾ ಮಹಾನಗರಗಳ ಆದೇಶಗಳು ಜೇನುನೊಣಗಳಿಗೆ ಅಸ್ತಿತ್ವದಲ್ಲಿರುವ ಹಕ್ಕು, ಜನಸಂಖ್ಯೆ ಪುನರುತ್ಪಾದನೆ, ವಾಸಸ್ಥಾನ ಪುನಃಸ್ಥಾಪನೆ ಮತ್ತು ಮಾಲಿನ್ಯರಹಿತ ಪರಿಸರದಲ್ಲಿ ಬದುಕುವ ಹಕ್ಕುಗಳನ್ನು ಒಪ್ಪಿಕೊಂಡಿವೆ. ಈ ಕಾನೂನು ಚೌಕಟ್ಟು ಮೂಲನಿವಾಸಿ ನಾಯಕರ ಸಹಭಾಗಿತ್ವದಲ್ಲಿ ರೂಪುಗೊಂಡಿದ್ದು, ಜೇನುನೊಣಗಳ ರಕ್ಷಣೆ ಮತ್ತು ಮೂಲನಿವಾಸಿಗಳ ಸಾಂಸ್ಕೃತಿಕ-ಪರಿಸರ ಹಕ್ಕುಗಳನ್ನು ಪರಸ್ಪರ ಜೋಡಿಸುತ್ತದೆ.
* ಈ ಹಕ್ಕುಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸುವ ಪ್ರಯತ್ನಗಳು ನಡೆಯುತ್ತಿದ್ದು, ಇದು ಭವಿಷ್ಯದಲ್ಲಿ ಜಗತ್ತಿನಾದ್ಯಂತ ಕೀಟ ಸಂರಕ್ಷಣೆಗೆ ಮಾದರಿಯಾಗುವ ಸಾಧ್ಯತೆ ಹೊಂದಿದೆ.

## ಭಾರತದಲ್ಲಿ BSNL Wi-Fi ಕಾಲಿಂಗ್ ಸೇವೆ ಲಾಂಚ್




* ಭಾರತದ ಸರ್ಕಾರಿ ಸ್ವಾಮ್ಯದ ದೂರಸಂಪರ್ಕ ಸಂಸ್ಥೆಯಾದ ಭಾರತ್ ಸಂಚಾರ ನಿಗಮ ಲಿಮಿಟೆಡ್ (BSNL) ಹೊಸ ವರ್ಷದಿಂದ ದೇಶದ ಎಲ್ಲಾ ಟೆಲಿಕಾಂ ವಲಯಗಳಲ್ಲಿ ವಾಯ್ಸ್ ಓವರ್ ವೈ-ಫೈ (VoWiFi) ಅಥವಾ Wi-Fi Calling ಸೇವೆಯನ್ನು ರಾಷ್ಟ್ರವ್ಯಾಪಿಯಾಗಿ ಆರಂಭಿಸಿದೆ. ಇದು ದೇಶಾದ್ಯಂತ ಧ್ವನಿ ಸಂಪರ್ಕವನ್ನು ಇನ್ನಷ್ಟು ಸುಧಾರಿಸುವ ಮಹತ್ವದ ಹೆಜ್ಜೆಯಾಗಿದೆ.

* VoWiFi ಸೇವೆಯ ಮೂಲಕ ಗ್ರಾಹಕರು ಮೊಬೈಲ್ ಸಿಗ್ನಲ್ ಅವಲಂಬನೆ ಇಲ್ಲದೆ Wi-Fi ನೆಟ್ವರ್ಕ್ ಮೂಲಕ ಕರೆ ಮಾಡಬಹುದು ಮತ್ತು ಕರೆ ಸ್ವೀಕರಿಸಬಹುದು. ಇದರಲ್ಲಿ ಅದೇ ಮೊಬೈಲ್ ಸಂಖ್ಯೆಯನ್ನು ಬಳಸಲಾಗುತ್ತಿದ್ದು, ಯಾವುದೇ ತೃತೀಯ ಪಕ್ಷದ ಆಪ್ ಅಗತ್ಯವಿಲ್ಲದೆ ಸಾಮಾನ್ಯ ಫೋನ್ ಡೈಲರ್ ನಲ್ಲೇ ಕರೆ ಸಾಧ್ಯವಾಗುತ್ತದೆ. ಈ ಸೇವೆ IMS (IP Multimedia Subsystem) ತಂತ್ರಜ್ಞಾನ ಆಧಾರಿತವಾಗಿದ್ದು, Wi-Fi ಮತ್ತು ಮೊಬೈಲ್ ನೆಟ್ವರ್ಕ್ ನಡುವೆ ಕರೆ ಕಡಿತವಾಗದೆ ಸರಾಗವಾಗಿ ಬದಲಾವಣೆಯನ್ನು ಸಾಧ್ಯವಾಗಿಸುತ್ತದೆ.

* ಗ್ರಾಮೀಣ ಹಾಗೂ ಒಳಾಂಗಣ ಸಂಪರ್ಕಕ್ಕೆ ಲಾಭ : ಮೊಬೈಲ್ ಸಿಗ್ನಲ್ ದುರ್ಬಲವಾಗಿರುವ ಗ್ರಾಮೀಣ ಪ್ರದೇಶಗಳು, ಮನೆಗಳು, ಕಚೇರಿಗಳು, ಬೇಸ್‌ಮೆಂಟ್‌ಗಳು ಮುಂತಾದ ಸ್ಥಳಗಳಲ್ಲಿ VoWiFi ಅತ್ಯಂತ ಉಪಯುಕ್ತವಾಗಿದೆ. ಸ್ಥಿರವಾದ Wi-Fi ಸಂಪರ್ಕ (BSNL ಭಾರತ್ ಫೈಬರ್ ಅಥವಾ ಇತರ ಬ್ರಾಡ್‌ಬ್ಯಾಂಡ್) ಇದ್ದರೆ, ಸ್ಪಷ್ಟ ಮತ್ತು ನಂಬಿಗಸ್ತ ಧ್ವನಿ ಕರೆ ಸೇವೆ ಪಡೆಯಬಹುದು. ಇದರಿಂದ ಮೊಬೈಲ್ ನೆಟ್ವರ್ಕ್ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ.

* VoWiFi ಸೇವೆ ಪೂರ್ಣ ಉಚಿತವಾಗಿದ್ದು, ಹೆಚ್ಚಿನ ಆಧುನಿಕ ಸ್ಮಾರ್ಟ್‌ಫೋನ್‌ಗಳಲ್ಲಿ ಲಭ್ಯ, Wi-Fi Calling ಆಯ್ಕೆಯನ್ನು ಆನ್ ಮಾಡುವ ಮೂಲಕ ಬಳಸಬಹುದಾದ ಈ ಸೇವೆಗಾಗಿ ತಾಂತ್ರಿಕ ಸಹಾಯವನ್ನು BSNL ಸೇವಾ ಕೇಂದ್ರ ಅಥವಾ 1800-1503 ಮೂಲಕ ಪಡೆಯಬಹುದು.

* ರಾಷ್ಟ್ರವ್ಯಾಪಿ VoWiFi ಸೇವೆ BSNLನ ನೆಟ್ವರ್ಕ್ ಆಧುನೀಕರಣ ಯೋಜನೆಯ ಪ್ರಮುಖ ಭಾಗವಾಗಿದೆ. ಇದರಿಂದ ಸೇವಾ ಗುಣಮಟ್ಟ ಸುಧಾರಿಸಿ, ವಿಶೇಷವಾಗಿ ಗ್ರಾಮೀಣ ಮತ್ತು ಸೇವೆ ಕಡಿಮೆ ಇರುವ ಪ್ರದೇಶಗಳಲ್ಲಿ ವಿಶ್ವಾಸಾರ್ಹ ಸಂಪರ್ಕ ಒದಗಿಸುವ ಮೂಲಕ ಡಿಜಿಟಲ್ ಅಂತರವನ್ನು ಕಡಿಮೆ ಮಾಡುವಲ್ಲಿ BSNL ಮಹತ್ವದ ಪಾತ್ರ ವಹಿಸುತ್ತಿದೆ.

# 03 Jan 2026

## ಭಾರತ-ಪಾಕಿಸ್ತಾನ ಪರಮಾಣು ಸ್ಥಾವರಗಳ ಪಟ್ಟಿ ವಿನಿಮಯ 2026: ಇತಿಹಾಸ ಮತ್ತು ಮಹತ್ವ



* ಜನವರಿ 1, 2026ರಂದು, ಭಾರತ ಮತ್ತು ಪಾಕಿಸ್ತಾನವು ತಮ್ಮ ಪರಮಾಣು ಸ್ಥಾಪನೆಗಳ ಪಟ್ಟಿಯನ್ನು ಪರಸ್ಪರ ವಿನಿಮಯ ಮಾಡಿಕೊಂಡಿವೆ. ಇದು ಹಳೆಯ ಕಾಲದಿಂದಲೂ ನಂಬಿಕೆಯನ್ನು ಬಲಪಡಿಸುವ ಕ್ರಮಗಳ ಭಾಗವಾಗಿದೆ ಮತ್ತು ಪರಸ್ಪರ ಪರಮಾಣು ಸಂಸ್ಥೆಗಳಿಗೆ ಮೇಲೆ ದಾಳಿ ಮಾಡದಿರುವುದಾಗಿ ಒಪ್ಪಂದ ಹೊಂದಿರುವ ಪಾಕಿಸ್ತಾನ-ಭಾರತದ ದ್ವಿಪಕ್ಷೀಯ ಒಪ್ಪಂದದಡಿ ನಡೆಯಿತು. ಈ ವಿನಿಮಯವು 31 ಡಿಸೆಂಬರ್ 1988ರಂದು ಸಹಿ ಮಾಡಲಾದ ಪರಮಾಣು ಸ್ಥಾಪನೆಗಳ ಮೇಲೆ ದಾಳಿ ನಿಷೇಧ ಒಪ್ಪಂದದ ಅಡಿಯಲ್ಲಿ ನಡೆಯಿತು. 27 ಜನವರಿ 1991ರಂದು ಈ ಒಪ್ಪಂದ ಜಾರಿ ಮಾಡಲಾಯಿತು. ಒಪ್ಪಂದದ ಪ್ರಕಾರ, ಪ್ರತಿ ವರ್ಷದ ಮೊದಲ ದಿನಕ್ಕೆ ಇಬ್ಬರೂ ದೇಶಗಳು ತಮ್ಮ ಪರಮಾಣು ಸ್ಥಾಪನೆಗಳ ಪಟ್ಟಿಯನ್ನು ಪರಸ್ಪರ ತಿಳಿಸಬೇಕು.

* ವಾರ್ಷಿಕ ವಿನಿಮಯದ ವಿವರಗಳು: ಪಾಕಿಸ್ತಾನದ ಪರರಾಷ್ಟ್ರ ಕಾರ್ಯಾಲಯದ ಪ್ರಕಾರ, ಈ ಪಟ್ಟಿಯನ್ನು ಇಸ್ಲಾಮಾಬಾದ್ನಲ್ಲಿರುವ ಭಾರತದ ಹೈ ಕಮಿಷನ್ ಪ್ರತಿನಿಧಿಗೆ ಡಿಪ್ಲೊಮೆಟಿಕ್ ಚಾನಲ್ಗಳ ಮೂಲಕ ಒಪ್ಪಿಸಿದರು. ಇದೇ ಸಮಯದಲ್ಲಿ, ಭಾರತವು ತನ್ನ ಪಟ್ಟಿಯನ್ನು ನವದೆಹಲಿನಲ್ಲಿ ಪಾಕಿಸ್ತಾನಿ ಅಧಿಕಾರಿಗಳಿಗೆ ಹಂಚಿಕೊಂಡಿತು. ಈ ಪ್ರಕ್ರಿಯೆಯನ್ನು 30 ವರ್ಷಕ್ಕೂ ಹೆಚ್ಚು ಕಾಲ ಯಾವುದೇ ವ್ಯತ್ಯಯವಿಲ್ಲದೆ ನಡೆಸಲಾಗುತ್ತಿದೆ.

* ಇಂತಹ ವಿನಿಮಯಗಳು ಬಿಗಿಯಾಗಿದ್ದ ಸಂಬಂಧಗಳ ಮಧ್ಯೆಯೂ ನಡೆಯುತ್ತಿರುವುದರಿಂದ ಅವು ಹೆಚ್ಚು ಮಹತ್ವ ಪಡೆದಿವೆ. ಈ ಒಪ್ಪಂದಗಳ ಅನುಷ್ಠಾನವು ಅಪಾಯಗಳನ್ನು ಕಡಿಮೆ ಮಾಡುತ್ತದೆ ಮತ್ತು ಪರಸ್ಪರ ಕನಿಷ್ಠ ಮಟ್ಟದ ಪಾರದರ್ಶಕತೆಯನ್ನು ಕಾಪಾಡುವಲ್ಲಿ ಸಹಾಯ ಮಾಡುತ್ತದೆ, ಈ ಮೂಲಕ ಪರಮಾಣು ಶಕ್ತಿವಂತರಾದ ಇಬ್ಬರೂ ಹತ್ತಿರದ ರಾಷ್ಟ್ರಗಳ ನಡುವೆ ನಂಬಿಕೆ ಬೆಳೆಸಲು ನೆರವಾಗುತ್ತದೆ.

## ಇಲೆಕ್ಟ್ರಾನಿಕ್ಸ್ ಹಬ್ ಆಗಲಿರುವ ಭಾರತ: ₹41,863 ಕೋಟಿಯ ECMS ಯೋಜನೆಯ 3ನೇ ಹಂತಕ್ಕೆ ಚಾಲನೆ



* ಭಾರತವನ್ನು ಜಾಗತಿಕ ಇಲೆಕ್ಟ್ರಾನಿಕ್ಸ್ ಉತ್ಪಾದನಾ ಕೇಂದ್ರವನ್ನಾಗಿ (Global Electronics Hub) ರೂಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಬೃಹತ್ ಹೆಜ್ಜೆ ಇಟ್ಟಿದೆ. ಕೇಂದ್ರ ಇಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರು 2026ರ ಜನವರಿಯಲ್ಲಿ ಇಲೆಕ್ಟ್ರಾನಿಕ್ಸ್ ಘಟಕಗಳ ತಯಾರಿಕಾ ಯೋಜನೆ (ECMS) ಅಡಿಯಲ್ಲಿ ₹41,863 ಕೋಟಿ ಮೊತ್ತದ ಮೂರನೇ ಹಂತದ ಯೋಜನೆಗಳಿಗೆ ಅನುಮೋದನೆ ನೀಡಿದ್ದಾರೆ.

* ಮೂರನೇ ಹಂತದಲ್ಲಿ ಬಿಪಿಎಲ್, ವಿಪ್ರೋ ಹೈಡ್ರಾಲಿಕ್ಸ್, ಮದರ್ ಸನ್ ಇಲೆಕ್ಟ್ರಾನಿಕ್ಸ್, ಟಾಟಾ ಇಲೆಕ್ಟ್ರಾನಿಕ್ಸ್, ಸ್ಯಾಮ್ಸಂಗ್ ಡಿಸ್ಪ್ಲೇ, ಡಿಕ್ಸನ್ ಇಲೆಕ್ಟ್ರಾನಿಕ್ಸ್ ಹಾಗೂ ಎಟಿಎಲ್ ಬ್ಯಾಟರಿ ಟೆಕ್ನಾಲಜಿ ಸೇರಿದಂತೆ ಪ್ರಮುಖ ಕಂಪನಿಗಳ ಪ್ರಸ್ತಾವನೆಗಳಿಗೆ ಅನುಮೋದನೆ ದೊರೆತಿದೆ. ಕೇಂದ್ರ ಇಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರ ಪ್ರಕಾರ, ಈವರೆಗೆ ಯೋಜನೆಯ ವಿವಿಧ ಹಂತಗಳಲ್ಲಿ ಒಟ್ಟು 46 ಅನುಮೋದನೆಗಳು ಲಭಿಸಿದ್ದು, ಕೈಗಾರಿಕೆಯಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

* ಈ ಯೋಜನೆಯಡಿ ಒಟ್ಟು ಹೂಡಿಕೆ ₹54,567 ಕೋಟಿ ತಲುಪಿದ್ದು, ಸುಮಾರು 51,000 ನೇರ ಉದ್ಯೋಗಗಳು ಸೃಷ್ಟಿಯಾಗಿವೆ. ಪಾಲ್ಗೊಳ್ಳುವ ಕಂಪನಿಗಳಿಗೆ ತಮ್ಮ ಉತ್ಪಾದನಾ ಸಾಮರ್ಥ್ಯ, ತಯಾರಿಸುವ ಘಟಕಗಳ ವಿವರ ಮತ್ತು ಅಗತ್ಯ ಬೆಂಬಲವನ್ನು ಒಳಗೊಂಡ ಸಮಗ್ರ ಯೋಜನೆಯನ್ನು ಆರು ವಾರಗಳೊಳಗೆ ಸಲ್ಲಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದೆ. ಈ ಯೋಜನೆಗಳ ಆಧಾರದಲ್ಲಿ ಹಣಕಾಸು ಮತ್ತು ನೀತಿ ಬೆಂಬಲವನ್ನು ಸರ್ಕಾರ ಒದಗಿಸಲಿದೆ.

* ದೇಶೀಯ ಸಾಮರ್ಥ್ಯ ವೃದ್ಧಿ ಮತ್ತು ಆಮದು ಬದಲಾವಣೆ : ಯೋಜನೆ ಆರಂಭವಾದ ಬಳಿಕ ಭಾರತದಲ್ಲಿ ಪಿಸಿಬಿ, ಲಿಥಿಯಂ-ಐಯಾನ್ ಸೆಲ್‌ಗಳು, ಕನೆಕ್ಟರ್‌ಗಳು, ಕ್ಯಾಮೆರಾ ಮಾಡ್ಯೂಲ್‌ಗಳು ಮತ್ತು ಡಿಸ್ಪ್ಲೇ ಮಾಡ್ಯೂಲ್‌ಗಳು ಸೇರಿದಂತೆ ಪ್ರಮುಖ ಘಟಕಗಳ ಆಮದು ಗಣನೀಯವಾಗಿ ಕಡಿಮೆಯಾಗಿದೆ. ಜೊತೆಗೆ, ಉನ್ನತ ನಿಖರತೆಯ ಮೊಬೈಲ್ ಫೋನ್ ಎನ್‌ಕ್ಲೋಜರ್‌ಗಳ ರಫ್ತು

ಹೆಚ್ಚಾಗಿದ್ದು, ಜಾಗತಿಕ ಇಲೆಕ್ಟ್ರಾನಿಕ್ಸ್ ಸರಬರಾಜು ಸರಣಿಯಲ್ಲಿ ಭಾರತದ ಸ್ಥಾನವನ್ನು ಬಲಪಡಿಸಿದೆ.

* ಜಾಗತಿಕವಾಗಿ ವಿಭಿನ್ನ ಸರಬರಾಜು ಸರಣಿಗಳ ಬೇಡಿಕೆ ಹೆಚ್ಚುತ್ತಿರುವ ಸಂದರ್ಭದಲ್ಲಿ ECMS ಯೋಜನೆಯ ಮೂರನೇ ಹಂತದ ಅನುಮೋದನೆ ಬಂದಿದೆ. ಪೂರ್ಣ ಉತ್ಪನ್ನಗಳ ಜೊತೆಗೆ ಘಟಕಗಳ ಉತ್ಪಾದನೆಗೆ ವಿಶೇಷ ಒತ್ತು ನೀಡುವ ಮೂಲಕ ಈ ಯೋಜನೆ ಇತರ ಪ್ರೋತ್ಸಾಹ ಯೋಜನೆಗಳಿಗೆ ಪೂರಕವಾಗಿದ್ದು, ತಂತ್ರಜ್ಞಾನ ಸ್ವೀಕಾರ, ದೀರ್ಘಕಾಲಿಕ ಹೂಡಿಕೆ ಮತ್ತು ಭಾರತವನ್ನು ಸ್ಪರ್ಧಾತ್ಮಕ ಇಲೆಕ್ಟ್ರಾನಿಕ್ಸ್ ಘಟಕಗಳ ತಯಾರಿಕಾ ಕೇಂದ್ರವನ್ನಾಗಿ ರೂಪಿಸುವ ಗುರಿಯನ್ನು ಹೊಂದಿದೆ.

## ದೇಶಕ್ಕೆ ಮಾದರಿಯಾದ ಸೂರತ್: ಸ್ಲಂ ಮುಕ್ತ ನಗರವಾಗುವತ್ತ ದಿಟ್ಟ ಹೆಜ್ಜೆ




* ಭಾರತದ 'ವಜ್ರನಗರಿ' ಎಂದೇ ಪ್ರಸಿದ್ಧಿಯಾದ ಗುಜರಾತ್‌ನ ಸೂರತ್ ನಗರವು ದೇಶದ ಮೊದಲ ಕೊಳೆಗೇರಿ ಮುಕ್ತ ನಗರ (ಸ್ಲಂ ಮುಕ್ತ ನಗರ)ವಾಗುವತ್ತ ವೇಗವಾಗಿ ಮುನ್ನಡೆಯುತ್ತಿದೆ. ಸ್ವಚ್ಛತೆ, ವೇಗದ ಆರ್ಥಿಕ ಬೆಳವಣಿಗೆ ಮತ್ತು ಪರಿಣಾಮಕಾರಿ ನಗರ ಆಡಳಿತಕ್ಕಾಗಿ ಹೆಸರಾಗಿರುವ ಸೂರತ್‌ನಲ್ಲಿ, ಸೂರತ್ ಮಹಾನಗರ ಪಾಲಿಕೆ (SMC) ಪ್ರಧಾನಮಂತ್ರಿ ಆವಾಸ್ ಯೋಜನೆ (PMAY) ಹಾಗೂ ರಾಜ್ಯ ಸರ್ಕಾರದ ಗೃಹ ನೀತಿಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದೆ.

* ನಗರದಲ್ಲಿದ್ದ ಅನೌಪಚಾರಿಕ ವಸತಿಗಳ ಬಹುಪಾಲನ್ನು ಶಾಶ್ವತ ವಸತಿ ಸಮುಚ್ಚಯಗಳಾಗಿ ಪರಿವರ್ತಿಸಲಾಗಿದ್ದು, ಸ್ಲಂ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಸಾವಿರಾರು ಕುಟುಂಬಗಳಿಗೆ ಭದ್ರ ಹಾಗೂ ಪಕ್ಕಾ ಮನೆಗಳು ಲಭಿಸಿವೆ. ಇನ್-ಸಿಟು ಪುನರ್ ಅಭಿವೃದ್ಧಿ ಯೋಜನೆಯಡಿ, ಹಳೆಯ ಸ್ಲಂ ಕಾಲನಿಗಳ ಜಾಗದಲ್ಲೇ ಬಹುಮಹಡಿ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲಾಗಿದೆ.

* ಈ ಹೊಸ ವಸತಿ ಪ್ರದೇಶಗಳಲ್ಲಿ ಸೂಕ್ತ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಪೈಪ್ ಸಂಪರ್ಕ, ಬೀದಿ ದೀಪಗಳು ಹಾಗೂ ಪಕ್ಕಾ ಒಳರಸ್ತೆಗಳು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಕೈಗಾರಿಕಾ ನಗರವಾಗಿರುವ ಸೂರತ್‌ಗೆ ವಲಸೆ ಕಾರ್ಮಿಕರ ನಿರಂತರ ಪ್ರವಾಹ ಇದ್ದರೂ, ವಸತಿ ನಿರ್ವಹಣೆಯಲ್ಲಿ ನಗರವು ಗಮನಾರ್ಹ ಯಶಸ್ಸು ಸಾಧಿಸಿದೆ.

* ವರದಿಗಳ ಪ್ರಕಾರ, ಈಗಾಗಲೇ ಲಕ್ಷಾಂತರ ಜನರನ್ನು ಶಾಶ್ವತ ಮನೆಗಳಿಗೆ ಸ್ಥಳಾಂತರಿಸಲಾಗಿದೆ. ಸೂರತ್‌ನ ಈ ಸಾಧನೆ ಗುಜರಾತ್ ಮಾತ್ರವಲ್ಲದೆ, ದೇಶದ ಇತರೆ ಮಹಾನಗರಗಳಿಗೆ ಸಹ ಆದರ್ಶ ಮಾದರಿಯಾಗಿ ಪರಿಗಣಿಸಲಾಗುತ್ತಿದೆ. ಗುರಿ ಸಾಧನೆಯಾದರೆ, ಭಾರತವು ಜಾಗತಿಕ ಮಟ್ಟದಲ್ಲಿ ನಗರಾಭಿವೃದ್ಧಿ ಕ್ಷೇತ್ರದಲ್ಲಿ ತನ್ನ ಪ್ರತಿಷ್ಠೆಯನ್ನು ಇನ್ನಷ್ಟು ಬಲಪಡಿಸಲಿದೆ.

## 2026 ಜನವರಿ 3 ರಂದು ಸೂಪರ್‌ಮೂನ್ ಗೋಚರ



* ಹೊಸ ವರ್ಷದ ಆರಂಭದಲ್ಲೇ ಆಕಾಶ ಪ್ರೇಮಿಗಳಿಗೆ ಅದ್ಭುತ ದೃಶ್ಯ ಕಾದಿದೆ. ಜನವರಿ 3, ಶನಿವಾರ ಸೂಪರ್‌ಮೂನ್ ಸಂಭವಿಸಲಿದ್ದು, ಭಾರತ ಸೇರಿದಂತೆ ಜಗತ್ತಿನ ಅನೇಕ ದೇಶಗಳಲ್ಲಿ ಇದನ್ನು ಕಾಣಬಹುದು. ಈ ದಿನ ಚಂದ್ರನು ಭೂಮಿಗೆ ಅತ್ಯಂತ ಸಮೀಪದ ಸ್ಥಾನವಾದ ಪೆರಿಜಿಯಲ್ಲಿ ಇರುವ ಕಾರಣ, ಸಾಮಾನ್ಯ ಪೂರ್ಣಚಂದ್ರನಿಗಿಂತ ಹೆಚ್ಚು ದೊಡ್ಡದಾಗಿ ಹಾಗೂ ಹೆಚ್ಚು ಪ್ರಕಾಶಮಾನವಾಗಿ ಗೋಚರಿಸಲಿದೆ.

* ವಿಜ್ಞಾನಿಗಳ ಪ್ರಕಾರ, ಈ ಸೂಪರ್‌ಮೂನ್ ಭೂಮಿಯಿಂದ ಸುಮಾರು 3.56 ಲಕ್ಷ ಕಿಲೋಮೀಟರ್ ದೂರದಲ್ಲಿದ್ದು, ಸಾಮಾನ್ಯ ಪೂರ್ಣಚಂದ್ರನಿಗಿಂತ ಸುಮಾರು 14 ಶೇಕಡಾ ದೊಡ್ಡದು ಮತ್ತು 30 ಶೇಕಡಾ ಹೆಚ್ಚು ಪ್ರಕಾಶಮಾನವಾಗಿ ಕಾಣಲಿದೆ. ಸೂರ್ಯಾಸ್ತದ ಬಳಿಕ ಚಂದ್ರನು ದಿಗಂತದ ಸಮೀಪದಲ್ಲಿರುವಾಗ ಕಿತ್ತಳೆ-ಹಳದಿ ಬಣ್ಣದ ಛಾಯೆ ಪಡೆದು ಇನ್ನಷ್ಟು ಆಕರ್ಷಕವಾಗಿ ಕಾಣಿಸಿಕೊಳ್ಳಲಿದೆ.

* ಚಂದ್ರನು ಭೂಮಿಯ ಸುತ್ತಲೂ ಪರಿಕ್ರಮೆ ಮಾಡುವಾಗ, ಸೂರ್ಯನಿಗೆ ವಿರುದ್ಧದ ದಿಕ್ಕಿನಲ್ಲಿ ಬಂದು, ಭೂಮಿಗೆ ಅತೀ ಸಮೀಪದ ಸ್ಥಾನದಲ್ಲಿರುವಾಗ ಪೂರ್ಣಚಂದ್ರನಾಗಿದರೆ ಅದನ್ನು ಸೂಪರ್‌ಮೂನ್ ಎಂದು ಕರೆಯಲಾಗುತ್ತದೆ. ಈ ಸಮಯದಲ್ಲಿ ಚಂದ್ರನ ಸಮೀಪದ ಭಾಗ ಸಂಪೂರ್ಣವಾಗಿ ಬೆಳಗಿರುವುದರಿಂದ ಅದು ದೊಡ್ಡದಾಗಿ ಮತ್ತು ಪ್ರಕಾಶಮಾನವಾಗಿ ಕಾಣಿಸುತ್ತದೆ.

* ಸ್ಪೇಸ್ ಡಾಟ್ ಕಾಮ್ ವರದಿಯಂತೆ, ಸೂಪರ್‌ಮೂನ್ ತನ್ನ ಗರಿಷ್ಠ ಹಂತವನ್ನು ಜನವರಿ 3ರಂದು ಸಂಜೆ ಸುಮಾರು 5.30–5.45ರ ವೇಳೆಗೆ (ಭಾರತೀಯ ಸಮಯ) ತಲುಪಲಿದೆ. ಇದು ಬರಿಗಣ್ಣಿನಿಂದಲೇ ಸ್ಪಷ್ಟವಾಗಿ ಕಾಣಿಸಿಕೊಳ್ಳಲಿದೆ.ತಜ್ಞರ ಮಾತಿನಂತೆ, ಚಂದ್ರನ ಈ ಸಮೀಪ ಸಂಚಾರದಿಂದ ಸಮುದ್ರಗಳಲ್ಲಿ ಉಬ್ಬರ-ಇಳಿತದ ತೀವ್ರತೆ ಸ್ವಲ್ಪ ಹೆಚ್ಚಾಗುವ ಸಾಧ್ಯತೆ ಇದೆ.

## ಕರ್ನಾಟಕದಲ್ಲಿ ಮೊದಲ ಬಾರಿ ಗೋಚರಿಸಿದ ಅಪರೂಪದ 'ಚಂದನ ಚಿರತೆ'



* ರಾಜ್ಯದ ವಿಜಯನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಅತಿವಿರಳವಾದ ಚಿರತೆಯೊಂದು ಪತ್ತೆಯಾಗಿದ್ದು, ಇದಕ್ಕೆ 'ಚಂದನ ಚಿರತೆ' ಎಂದು ಹೆಸರಿಡಲಾಗಿದೆ. ಸಾಮಾನ್ಯವಾಗಿ ಹಳದಿ-ಕಂದು ಬಣ್ಣದ ಚರ್ಮ ಮತ್ತು ಗಾಢ ಕಪ್ಪು ಚುಕ್ಕೆಗಳನ್ನು ಹೊಂದಿರುವ ಚಿರತೆಗಳಿಗಿಂತ ವಿಭಿನ್ನವಾಗಿ, ಈ ಚಿರತೆಯು ಗಂಧದ ಬಣ್ಣವನ್ನು ಹೋಲುವ ಕೆಂಪು-ಗುಲಾಬಿ ಮಿಶ್ರಿತ ತುಪ್ಪಳ ಹಾಗೂ ಮಂಕಾದ ಕಂದು ಬಣ್ಣದ ಚುಕ್ಕೆಗಳನ್ನು ಹೊಂದಿದೆ.

*ಜಾಗತಿಕವಾಗಿ ಈ ಸ್ವರೂಪದ ಚಿರತೆಯನ್ನು 'ಸ್ಟ್ರಾಬೆರಿ ಚಿರತೆ' (Strawberry Leopard) ಎಂದು ಕರೆಯಲಾಗುತ್ತದೆ. ಆದರೆ, ಸ್ಥಳೀಯ ಸಾಂಸ್ಕೃತಿಕ ಗುರುತನ್ನು ನೀಡುವ ಉದ್ದೇಶದಿಂದ ಹಾಗೂ ಕರ್ನಾಟಕದ ಪರಂಪರೆಯನ್ನು ಪ್ರತಿಬಿಂಬಿಸಲು ಇದಕ್ಕೆ 'ಚಂದನ ಚಿರತೆ' ಎಂದು ನಾಮಕರಣ ಮಾಡಲಾಗಿದೆ ಎಂದು ಎಚ್‌ಎನ್‌ಎಫ್ ತಿಳಿಸಿದೆ.

* ಕಲ್ಯಾಣ ಕರ್ನಾಟಕ ಭಾಗದಲ್ಲಿ ವನ್ಯಜೀವಿ ಅಧ್ಯಯನ ನಡೆಸುತ್ತಿರುವ ಹೊಳೆಮತ್ತಿ ನೇಚರ್ ಫೌಂಡೇಶನ್ (HNF) ತಂಡವು ವಿಜಯನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಅಳವಡಿಸಿದ್ದ ಕ್ಯಾಮೆರಾ ಟ್ರ್ಯಾಪ್‌ಗಳಲ್ಲಿ ಈ ಅಪರೂಪದ ಚಿರತೆ ಹಲವು ಬಾರಿ ಸೆರೆಯಾಗಿದೆ. ವನ್ಯಜೀವಿ ತಜ್ಞರ ಪ್ರಕಾರ, ಜಗತ್ತಿನಾದ್ಯಂತ ಈ ರೀತಿಯ ಬಣ್ಣದ ಚಿರತೆಗಳು ಅತಿ ವಿರಳವಾಗಿ ಮಾತ್ರ ಕಾಣಿಸಿಕೊಂಡಿವೆ.

* ಈ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ಕೆಲ ಬಾರಿ, ತಾಂಜೇನಿಯಾದಲ್ಲಿ ಒಮ್ಮೆ ಹಾಗೂ 2021ರಲ್ಲಿ ರಾಜಸ್ಥಾನದ ರಣಕಪುರದಲ್ಲಿ ಇಂತಹ ಚಿರತೆ ಪತ್ತೆಯಾಗಿತ್ತು. ಭಾರತದಲ್ಲಿ ಇದು ಎರಡನೇ ಬಾರಿ, ಮತ್ತು ಕರ್ನಾಟಕದಲ್ಲಿ ಇದೇ ಮೊದಲ ಬಾರಿ ಈ ಬಣ್ಣದ ಚಿರತೆ ಕಾಣಿಸಿಕೊಂಡಿದೆ.

* ವನ್ಯಜೀವಿ ತಜ್ಞರ ಅಂದಾಜಿನ ಪ್ರಕಾರ, ಇದು 6–7 ವರ್ಷ ವಯಸ್ಸಿನ ಹೆಣ್ಣು ಚಿರತೆ ಆಗಿದ್ದು, ಸಾಮಾನ್ಯ ಬಣ್ಣದ ಮರಿಚಿರತೆಯೊಂದಿಗೆಯೇ ಅರಣ್ಯದಲ್ಲಿ ಕಾಣಿಸಿಕೊಂಡಿರುವುದು

ವಿಶೇಷವಾಗಿದೆ. ಈ ಅಪರೂಪದ ಪತ್ತೆ ಕರ್ನಾಟಕದ ವನ್ಯಜೀವಿ ವೈವಿಧ್ಯತೆಗೆ ಮತ್ತೊಂದು ಮಹತ್ವದ ಸಾಕ್ಷಿಯಾಗಿದೆ.

## ಗಿಗ್ ಕಾರ್ಮಿಕರಿಗೆ ಹೊಸ ಸಾಮಾಜಿಕ ಭದ್ರತಾ ನಿಯಮ 2026: ಸ್ವಿಗ್ಗಿ, ಝೊಮ್ಯಾಟೋ ಡೆಲಿವರಿ ಬಾಯ್ಸ್‌ಗೆ ಸಿಗಲಿದೆ ಸರ್ಕಾರಿ ಸೌಲಭ್ಯ!




ಭಾರತದ ವೇಗವಾಗಿ ಬೆಳೆಯುತ್ತಿರುವ 'ಗಿಗ್ ಎಕಾನಮಿ' (Gig Economy) ಅಥವಾ ಅಸಂಘಟಿತ ವಲಯದ ಕಾರ್ಮಿಕರಿಗೆ ಸಿಹಿ ಸುದ್ದಿ ಸಿಕ್ಕಿದೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು 'ಸಾಮಾಜಿಕ ಭದ್ರತಾ ಸಂಹಿತೆ 2020' (Code on Social Security 2020) ಅಡಿಯಲ್ಲಿ ಹೊಸ ಕರಡು ನಿಯಮಗಳನ್ನು ಬಿಡುಗಡೆ ಮಾಡಿದೆ. ಇದು ಝೊಮ್ಯಾಟೋ, ಸ್ವಿಗ್ಗಿ, ಓಲಾ, ಉಬರ್‌ನಂತಹ ಕಂಪನಿಗಳಲ್ಲಿ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರ ಜೀವನದ ಮೇಲೆ ನೇರ ಪರಿಣಾಮ ಬೀರಲಿದೆ.

* ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹೊಸ ಸಾಮಾಜಿಕ ಭದ್ರತಾ ಸಂಹಿತೆ (Social Security Code) ಕರಡು ನಿಯಮಗಳು ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರ ಕಲ್ಯಾಣದಲ್ಲಿ ಮಹತ್ವದ ಬದಲಾವಣೆ ತರಲಿವೆ. ಆಹಾರ ವಿತರಣಾ, ಕ್ವಿಕ್ ಕಾಮರ್ಸ್ ಮತ್ತು ರೈಡ್‌ಹೇಲಿಂಗ್ ಕಂಪನಿಗಳೊಂದಿಗೆ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರಿಗೆ ಇದು ನೇರ ಪರಿಣಾಮ ಬೀರುತ್ತದೆ.

* ಕರಡು ನಿಯಮಗಳ ಪ್ರಕಾರ, ಒಬ್ಬ ಗಿಗ್ ಅಥವಾ ಪ್ಲಾಟ್‌ಫಾರ್ಮ್ ಕಾರ್ಮಿಕರು ಒಂದು ಹಣಕಾಸು ವರ್ಷದಲ್ಲಿ ಕನಿಷ್ಠ 90 ದಿನಗಳು ಒಂದೇ ಅಗ್ರಿಗೇಟರ್ (ಕಂಪನಿ) ಜೊತೆ ಕೆಲಸ ಮಾಡಿದರೆ ಸಾಮಾಜಿಕ ಭದ್ರತಾ ಸೌಲಭ್ಯಗಳಿಗೆ ಅರ್ಹರಾಗುತ್ತಾರೆ. ಒಂದಕ್ಕಿಂತ ಹೆಚ್ಚು ಪ್ಲಾಟ್‌ಫಾರ್ಮ್‌ಗಳಲ್ಲಿ ಕೆಲಸ ಮಾಡುವವರಲ್ಲಿ ಈ ಮಿತಿ 120 ದಿನಗಳಿಗೆ ಏರಲಿದೆ. ಕೆಲಸ ಆರಂಭಿಸಿದ ದಿನದಿಂದಲೇ–ಆದಾಯದ ಮೊತ್ತ ಎಷ್ಟೇ ಆಗಿದ್ದರೂ–ಅವಧಿ ಲೆಕ್ಕಕ್ಕೆ ಸೇರುತ್ತದೆ ಎಂದು ನಿಯಮಗಳು ಸ್ಪಷ್ಟಪಡಿಸುತ್ತವೆ.


* ಒಂದೇ ದಿನ Zomato, Swiggy, Blinkit, Zepto ಮುಂತಾದ ಹಲವು ಪ್ಲಾಟ್‌ಫಾರ್ಮ್‌ಗಳಿಗೆ ಕೆಲಸ ಮಾಡಿದರೆ, ಪ್ರತಿಯೊಂದು ಕೆಲಸವೂ ಪ್ರತ್ಯೇಕ ದಿನವೆಂದು ಲೆಕ್ಕಿಸಲಾಗುತ್ತದೆ. ಇದರಿಂದ ಅನೇಕ ಪ್ಲಾಟ್‌ಫಾರ್ಮ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಅಗತ್ಯ ದಿನಗಳ ಮಿತಿಯನ್ನು ಬೇಗ ತಲುಪಲು ನೆರವಾಗುತ್ತದೆ.

* ನೋಂದಣಿ, ಆಧಾರ್ ಸಂಪರ್ಕ ಮತ್ತು ಗುರುತಿನ ಚೀಟಿ: 16 ವರ್ಷ ಮೇಲ್ಪಟ್ಟ ಎಲ್ಲಾ ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರು ಆಧಾರ್ ಆಧಾರಿತ ಸ್ವಯಂ ಘೋಷಣೆ ಮೂಲಕ ಕೇಂದ್ರ ಸರ್ಕಾರದ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಅಗ್ರಿಗೇಟರ್‌ಗಳು ಕಾರ್ಮಿಕರ ವಿವರಗಳನ್ನು ಅಪ್‌ಲೋಡ್ ಮಾಡಿ ಯುನಿವರ್ಸಲ್ ಅಕೌಂಟ್ ನಂಬರ್ (UAN) ಸೃಷ್ಟಿಸುವ ಜವಾಬ್ದಾರಿಯನ್ನು ಹೊಂದಿರುತ್ತವೆ. ನೋಂದಾಯಿತ ಕಾರ್ಮಿಕರಿಗೆ ಡಿಜಿಟಲ್ ಅಥವಾ ಭೌತಿಕ ಗುರುತಿನ ಚೀಟಿ ದೊರೆಯಲಿದ್ದು, ಅದನ್ನು ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದರ ಮೂಲಕ ಸರ್ಕಾರ ಘೋಷಿಸುವ ಸಾಮಾಜಿಕ ಭದ್ರತಾ ಯೋಜನೆಗಳನ್ನು ಪಡೆಯಲು ಸಾಧ್ಯವಾಗುತ್ತದೆ.

* ಕಾರ್ಮಿಕರು 60 ವರ್ಷ ವಯಸ್ಸು ತಲುಪಿದ ಬಳಿಕ, ಅಥವಾ ಹಿಂದಿನ ಹಣಕಾಸು ವರ್ಷದಲ್ಲಿ ಕ್ರಮವಾಗಿ 90 ದಿನಗಳು (ಒಂದೇ ಪ್ಲಾಟ್‌ಫಾರ್ಮ್) ಅಥವಾ 120 ದಿನಗಳು (ಬಹು ಪ್ಲಾಟ್‌ಫಾರ್ಮ್) ಕೆಲಸ ಮಾಡದೇ ಇದ್ದರೆ, ಸಾಮಾಜಿಕ ಭದ್ರತಾ ಲಾಭಗಳಿಗೆ ಅನರ್ಹರಾಗುತ್ತಾರೆ.

* ಈ ನಿಯಮಗಳು ಜಾರಿಯಾದರೆ, ಗಿಗ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಕಂಪನಿಗಳಿಗೆ ಅನುಸರಣೆ ವೆಚ್ಚ ಹೆಚ್ಚಾಗುವ ಸಾಧ್ಯತೆ ಇದೆ. ಆದರೆ ಅದೇ ಸಮಯದಲ್ಲಿ, ವೇಗವಾಗಿ ವಿಸ್ತರಿಸುತ್ತಿರುವ ಗಿಗ್ ಉದ್ಯೋಗ ಕ್ಷೇತ್ರದ ಕಾರ್ಮಿಕರಿಗೆ ಮೊದಲ ಬಾರಿಗೆ ಸಂಸ್ಥಾತ್ಮಕ ಸಾಮಾಜಿಕ ಭದ್ರತೆ ದೊರಕುವ ಮಹತ್ವದ ಹೆಜ್ಜೆಯಾಗಿ ಇದು ಪರಿಗಣಿಸಲಾಗುತ್ತಿದೆ.

## ಅಂತರಾಷ್ಟ್ರೀಯ ಮನಸ್ಸು-ದೇಹ ಕ್ಷೇಮ ದಿನ: ಆರೋಗ್ಯಕರ ಬದುಕಿನ ಸಮಗ್ರ ಸಂದೇಶ




* ಪ್ರತಿ ವರ್ಷ ಜನವರಿ 3 ರಂದು ಅಂತರಾಷ್ಟ್ರೀಯ ಮನಸ್ಸು-ದೇಹದ ಕ್ಷೇಮ ದಿನವನ್ನು (International Mind-Body Wellness Day) ಆಚರಿಸಲಾಗುತ್ತದೆ. ಆಧುನಿಕ ಜೀವನದ ಒತ್ತಡಗಳ ನಡುವೆ, ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ ಎಂಬುದನ್ನು ಈ ದಿನವು ನೆನಪಿಸುತ್ತದೆ. 2026ರ ಆರಂಭದಲ್ಲಿ ಈ ದಿನವನ್ನು ಆಚರಿಸುವ ಮೂಲಕ, ಹೊಸ ವರ್ಷದ ಸಕಾರಾತ್ಮಕ ನಿರ್ಧಾರಗಳಿಗೆ (New Year Resolutions) ಶಕ್ತಿ ತುಂಬುವುದು ಇದರ ಉದ್ದೇಶವಾಗಿದೆ.

* ಮನಸ್ಸು ಮತ್ತು ದೇಹದ ಅವಿನಾಭಾವ ಸಂಬಂಧ: ನಮ್ಮ ಆಲೋಚನೆಗಳು, ಭಾವನೆಗಳು ಮತ್ತು ಮಾನಸಿಕ ಸ್ಥಿತಿಯು ನೇರವಾಗಿ ನಮ್ಮ ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಈ ಎರಡರ ನಡುವೆ ಸಾಮರಸ್ಯವಿದ್ದಾಗ ಮಾತ್ರ ಒಬ್ಬ ವ್ಯಕ್ತಿ 'ಸಮಗ್ರ ಆರೋಗ್ಯ' (Holistic Health) ಹೊಂದಲು ಸಾಧ್ಯ.

* ಸಮಗ್ರ ಆರೋಗ್ಯಕ್ಕಾಗಿ ಪ್ರಮುಖ ಸೂತ್ರಗಳು: --

=> ಮೈಂಡ್‌ಫುಲ್‌ನೆಸ್ ಮತ್ತು ಧ್ಯಾನ (Mindfulness and Meditation): ದಿನಕ್ಕೆ ಕನಿಷ್ಠ 10-15 ನಿಮಿಷಗಳ ಧ್ಯಾನವು ಮೆದುಳಿನ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ ಮತ್ತು ಒತ್ತಡವನ್ನು ಕಡಿಮೆ ಮಾಡುತ್ತದೆ. ಪ್ರಸ್ತುತ ಕ್ಷಣದ ಮೇಲೆ ಗಮನ ಕೇಂದ್ರೀಕರಿಸುವುದು ಮಾನಸಿಕ ಸ್ಥಿರತೆಗೆ ಸಹಕಾರಿ.

=> ನಿಯಮಿತ ದೈಹಿಕ ಚಟುವಟಿಕೆ: ಯೋಗ, ನಡಿಗೆ ಅಥವಾ ಜಿಮ್‌ನಂತಹ ಚಟುವಟಿಕೆಗಳು ದೇಹದಲ್ಲಿ 'ಎಂಡಾರ್ಫಿನ್' (ಸಂತೋಷದ ಹಾರ್ಮೋನುಗಳು) ಬಿಡುಗಡೆ ಮಾಡಲು ಸಹಾಯ ಮಾಡುತ್ತವೆ. ಇದು ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ.

=> ಪೌಷ್ಟಿಕ ಆಹಾರ ಮತ್ತು ನಿದ್ರೆ: ಸಮತೋಲಿತ ಆಹಾರವು ಮೆದುಳಿಗೆ ಶಕ್ತಿ ನೀಡಿದರೆ, 7-9 ಗಂಟೆಗಳ ಗುಣಮಟ್ಟದ ನಿದ್ರೆಯು ದೇಹ ಮತ್ತು ಮನಸ್ಸನ್ನು ಪುನಶ್ಚೇತನಗೊಳಿಸುತ್ತದೆ (Rejuvenation).

=> ಕೃತಜ್ಞತೆ ಮತ್ತು ಸಾಮಾಜಿಕ ಸಂಪರ್ಕ: ಜೀವನದಲ್ಲಿರುವ ಒಳ್ಳೆಯ ಅಂಶಗಳ ಬಗ್ಗೆ ಕೃತಜ್ಞತೆ ಹೊಂದುವುದು ಮತ್ತು ಪ್ರೀತಿಪಾತ್ರರೊಂದಿಗೆ ಸಮಯ ಕಳೆಯುವುದು ಭಾವನಾತ್ಮಕ ಸದೃಢತೆಯನ್ನು ನೀಡುತ್ತದೆ.

=> ಉದ್ದೇಶಪೂರ್ವಕ ಜೀವನ (Purposeful Living): ಸ್ಪಷ್ಟವಾದ ಗುರಿಗಳನ್ನು ಹೊಂದುವುದು ಮತ್ತು ಅವುಗಳನ್ನು ಬರೆದಿಡುವುದು ಜೀವನದಲ್ಲಿ ಶಿಸ್ತು ಮತ್ತು ಉತ್ಸಾಹವನ್ನು ತುಂಬುತ್ತದೆ.

* ಆರೋಗ್ಯವೇ ಭಾಗ್ಯ ಎಂಬ ನಾಣ್ಣುಡಿಯಂತೆ, ನಮ್ಮ ಮನಸ್ಸು ಮತ್ತು ದೇಹವನ್ನು ಸಮತೋಲನದಲ್ಲಿಟ್ಟುಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ.

## ಆಸ್ಟ್ರೇಲಿಯನ್ ಓಪನ್ 2026: 45ರ ಹರೆಯದಲ್ಲಿ ಐತಿಹಾಸಿಕ ದಾಖಲೆ ಬರೆಯಲಿರುವ ವೀನಸ್ ವಿಲಿಯಮ್ಸ್!



* ಟೆನಿಸ್ ಲೋಕದ ದಂತಕಥೆ, ಅಮೆರಿಕದ ವೀನಸ್ ವಿಲಿಯಮ್ಸ್ (Venus Williams) ಅವರು 2026ರ ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾಗವಹಿಸುವ ಮೂಲಕ ಹೊಸ ಮೈಲಿಗಲ್ಲು ಸ್ಥಾಪಿಸಲು ಸಜ್ಜಾಗಿದ್ದಾರೆ. 45 ವರ್ಷದ ವೀನಸ್ ಅವರು ಈ ಪ್ರತಿಷ್ಠಿತ ಗ್ರ್ಯಾಂಡ್ ಸ್ಲ್ಯಾಮ್ ಟೂರ್ನಿಯ ಇತಿಹಾಸದಲ್ಲೇ 'ಅತ್ಯಂತ ಹಿರಿಯ ಮಹಿಳಾ ಆಟಗಾರ್ತಿ' ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

* ಇದು ಹೊಸ ವಯಸ್ಸಿನ ದಾಖಲೆ: ಆಸ್ಟ್ರೇಲಿಯನ್ ಓಪನ್ 2026ಕ್ಕೆ ಆಯೋಜಕರು ಜನವರಿ 1, 2026ರಂದು ಪ್ರಕಟಿಸಿದಂತೆ, ವೀನಸ್ ವಿಲಿಯಮ್ಸ್ ಅವರಿಗೆ ವೈಲ್ಡ್ ಕಾರ್ಡ್ ಪ್ರವೇಶ ನೀಡಲಾಗಿದೆ. ಟೂರ್ನಿ ಜನವರಿ 18, 2026ರಂದು ಆರಂಭವಾಗುವಾಗ, ವೀನಸ್ ಅವರ ವಯಸ್ಸು 45 ವರ್ಷ, 7 ತಿಂಗಳು ಮತ್ತು 1 ದಿನ ಆಗಿದ್ದು, ಇದರಿಂದ ಅವರು ಆಸ್ಟ್ರೇಲಿಯನ್ ಓಪನ್‌ನಲ್ಲಿ ಆಡಿದ ಅತಿಹೆಚ್ಚು ವಯಸ್ಸಿನ ಮಹಿಳಾ ಆಟಗಾರ್ತಿ ಎಂಬ ಹೊಸ ದಾಖಲೆ ಸ್ಥಾಪಿಸಲಿದ್ದಾರೆ. ಇದಕ್ಕೂ ಮೊದಲು ಈ ದಾಖಲೆ ಜಪಾನ್‌ನ ಕಿಮಿಕೊ ಡೇಟ್-ಕ್ರುಮ್ ಅವರದ್ದಾಗಿದ್ದು, ಅವರು 2015ರಲ್ಲಿ 44ನೇ ವಯಸ್ಸಿನಲ್ಲಿ ಪಂದ್ಯಗಳಲ್ಲಿ ಭಾಗವಹಿಸಿದ್ದರು–ಈಗ ಆ ದಾಖಲೆಯನ್ನು ವೀನಸ್ ವಿಲಿಯಮ್ಸ್ ಹಿಂದಿಕ್ಕುತ್ತಿದ್ದಾರೆ.

* ವೀನಸ್ ವಿಲಿಯಮ್ಸ್ ಅವರ ಸುದೀರ್ಘ ಪಯಣ ನಿಜಕ್ಕೂ ಪ್ರೇರಣಾದಾಯಕವಾಗಿದೆ: 2021ರ ನಂತರ ಸುಮಾರು 5 ವರ್ಷಗಳ ವಿರಾಮದ ಬಳಿಕ ಅವರು ಮತ್ತೆ ಮೆಲ್ಬರ್ನ್ ಪಾರ್ಕ್‌ಗೆ ಪುನರಾಗಮನ ಮಾಡುತ್ತಿದ್ದಾರೆ; 1998ರಲ್ಲಿ ಕೇವಲ 17 ವರ್ಷದ ವಯಸ್ಸಿನಲ್ಲಿ ಆಸ್ಟ್ರೇಲಿಯನ್ ಓಪನ್‌ನಲ್ಲಿ ಪದಾರ್ಪಣೆ ಮಾಡಿದ ವೀನಸ್, 28 ವರ್ಷಗಳ ಸುದೀರ್ಘ ಅವಧಿಯ ನಂತರವೂ ಟೆನಿಸ್ ಅಂಗಳದಲ್ಲಿ ಸಕ್ರಿಯರಾಗಿರುವುದು ಅವರ ಅಪಾರ ಸ್ಥೈರ್ಯಕ್ಕೆ ಸಾಕ್ಷಿ. ಇದಕ್ಕೂ ಮುನ್ನ ಸಿದ್ಧತೆಯ ಭಾಗವಾಗಿ ಅವರು ಆಸ್ಟ್ರೇಲಿಯನ್ ಓಪನ್‌ಗೆ ಮುನ್ನ 'ಆಕ್ಲೆಂಡ್' (ASB Classic) ಮತ್ತು 'ಹೋಬರ್ಟ್ ಇಂಟರ್ನ್ಯಾಷನಲ್' ಟೂರ್ನಿಗಳಲ್ಲಿ ಕಣಕ್ಕಿಳಿಯಲಿದ್ದಾರೆ–ಇದು ಅವರ ಕಂಬ್ಯಾಕ್‌ಗೆ ಮತ್ತಷ್ಟು ತೂಕ ನೀಡುತ್ತದೆ.

* ವೀನಸ್ ವಿಲಿಯಮ್ಸ್ ಅವರ ಸಾಧನೆಗಳ ಒಂದು ನೋಟ ಅಸಾಧಾರಣವಾಗಿದೆ: ಅವರು ಸಿಂಗಲ್ಸ್ ಗ್ರ್ಯಾಂಡ್ ಸ್ಲ್ಯಾಮ್‌ನಲ್ಲಿ ಒಟ್ಟು 7 ಪ್ರಶಸ್ತಿಗಳನ್ನು ಗೆದ್ದಿದ್ದು–ಅದರಲ್ಲೂ 5 ವಿಂಬಲ್ಡನ್ ಮತ್ತು 2 ಯುಎಸ್ ಓಪನ್ ಕಿರೀಟಗಳು ಸೇರಿವೆ. ಆಸ್ಟ್ರೇಲಿಯನ್ ಓಪನ್‌ನಲ್ಲಿ ಸಿಂಗಲ್ಸ್ ವಿಭಾಗದಲ್ಲಿ 2003 ಮತ್ತು 2017ರಲ್ಲಿ ಫೈನಲ್ ತಲುಪಿದರೂ, ಎರಡೂ ಬಾರಿ ಅವರು ತಮ್ಮ ಸಹೋದರಿ ಸೆರೆನಾ ವಿಲಿಯಮ್ಸ್ ವಿರುದ್ಧ ಸೋಲು ಕಂಡರು. ಇದಲ್ಲದೆ, ವೀನಸ್ ಅವರು ಡಬಲ್ಸ್‌ನಲ್ಲಿ ಕೂಡ ಮಿಂಚಿದ್ದು, ಆಸ್ಟ್ರೇಲಿಯನ್ ಓಪನ್‌ನಲ್ಲಿ 4 ಬಾರಿ ಮಹಿಳಾ ಡಬಲ್ಸ್ ಮತ್ತು 1 ಬಾರಿ ಮಿಕ್ಸ್ಡ್ ಡಬಲ್ಸ್ ಪ್ರಶಸ್ತಿಗಳನ್ನು ಗೆದ್ದು ತಮ್ಮ ಬಹುಮುಖತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

## 127 ವರ್ಷಗಳ ಬಳಿಕ ಭಾರತಕ್ಕೆ ಮರಳಿದ ಬುದ್ಧನ ಪವಿತ್ರ ಅವಶೇಷಗಳು! ಪ್ರಧಾನಿ ಮೋದಿಯಿಂದ 'ಪಿಪ್ರಾಹ್ವಾ ಎಕ್ಸ್‌ಪೋ' ಉದ್ಘಾಟನೆ



* ಭಾರತದ ಪ್ರಾಚೀನ ಆಧ್ಯಾತ್ಮಿಕ ಪರಂಪರೆಯನ್ನು ಜಗತ್ತಿಗೆ ಪರಿಚಯಿಸುವ ಉದ್ದೇಶದಿಂದ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜನವರಿ 3 ರಂದು ನವದೆಹಲಿಯಲ್ಲಿ "ಪಿಪ್ರಾಹ್ವಾ ಪವಿತ್ರ ಅವಶೇಷಗಳ ಮಹಾ ಅಂತರರಾಷ್ಟ್ರೀಯ ಪ್ರದರ್ಶನ" ವನ್ನು ಉದ್ಘಾಟಿಸಿದರು. ಈ ಗ್ರ್ಯಾಂಡ್ ಇಂಟರ್‌ನ್ಯಾಷನಲ್ ಎಕ್ಸ್‌ಪೋಸಿಷನ್ನಲ್ಲಿ ಇತ್ತೀಚೆಗೆ ಭಾರತಕ್ಕೆ ಮರುಪಡೆಯಲಾದ (Repatriated) ಹಾಗೂ ಭಗವಾನ್ ಬುದ್ಧರಿಗೆ ನೇರವಾಗಿ ಸಂಬಂಧಿಸಿದ ಅಪರೂಪದ ಬೌದ್ಧ ಅವಶೇಷಗಳು ಪ್ರದರ್ಶನಕ್ಕೆ ಇರಿಸಲ್ಪಟ್ಟಿದ್ದು, ಇದು ಭಾರತದ ನಾಗರಿಕತೆ, ಪ್ರಾರಂಭಿಕ ಬೌದ್ಧ ಧರ್ಮ ಮತ್ತು ಸಾಂಸ್ಕೃತಿಕ ರಾಜತಾಂತ್ರಿಕತೆಯ ಮಹತ್ವವನ್ನು ಒತ್ತಿ ಹೇಳುತ್ತದೆ.

* ಪಿಪ್ರಾಹ್ವಾ ಅವಶೇಷಗಳು 1898ರಲ್ಲಿ ಪತ್ತೆಯಾಗಿದ್ದು, ಅವು ಭಗವಾನ್ ಬುದ್ಧರೊಂದಿಗೆ ನೇರವಾಗಿ ಸಂಬಂಧ ಹೊಂದಿರುವ ಅತ್ಯಂತ ಪ್ರಾಚೀನ ಪುರಾತತ್ವ ಸಾಕ್ಷ್ಯಗಳು ಎಂದು ಪರಿಗಣಿಸಲಾಗುತ್ತದೆ. ಪಿಪ್ರಾಹ್ವಾವನ್ನು ಪ್ರಾಚೀನ ಕಪಿಲವಸ್ತು ಎಂದು ಗುರುತಿಸಲಾಗಿದ್ದು, ಬುದ್ಧರು ತ್ಯಾಗ ಸ್ವೀಕರಿಸುವ ಮೊದಲು ತಮ್ಮ ಬಾಲ್ಯವನ್ನು ಕಳೆಯಿದ ಸ್ಥಳವೆಂದು ನಂಬಲಾಗುತ್ತದೆ. ಈ ಹಿನ್ನೆಲೆಗಳಿಂದಾಗಿ, ಪಿಪ್ರಾಹ್ವಾ ಅವಶೇಷಗಳು ಬುದ್ಧರ ಜೀವನ, ಪ್ರಾರಂಭಿಕ ಬೌದ್ಧ ಧರ್ಮದ ವಿಕಾಸ ಮತ್ತು ಇತಿಹಾಸದ ಅಧ್ಯಯನಕ್ಕೆ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿವೆ.

* ಮಹಾ ಪ್ರದರ್ಶನದ ಪ್ರಮುಖ ವೈಶಿಷ್ಟ್ಯಗಳು:"The Light and the Lotus: Relics of the Awakened One" ಎಂಬ ಶೀರ್ಷಿಕೆಯ ಈ ಪ್ರದರ್ಶನವುರೈ ಪಿಥೋರಾ ಸಾಂಸ್ಕೃತಿಕ ಸಂಕೀರ್ಣ, ನವದೆಹಲಿಯಲ್ಲಿ ಆಯೋಜಿಸಲಾಗಿದ್ದು, ಇದೇ ಮೊದಲ ಬಾರಿಗೆ ರಾಷ್ಟ್ರೀಯ ಸಂಗ್ರಹಾಲಯ ಮತ್ತು ಭಾರತೀಯ ಸಂಗ್ರಹಾಲಯಗಳಲ್ಲಿ ಸಂರಕ್ಷಿತವಾಗಿರುವ ಪಿಪ್ರಾಹ್ವಾ ಅವಶೇಷಗಳನ್ನು ಒಂದೇ ವೇದಿಕೆಯಲ್ಲಿ ಪ್ರದರ್ಶಿಸಿ, ಭಗವಾನ್ ಬುದ್ಧರ ಜೀವನ, ಉಪದೇಶಗಳು ಮತ್ತು ಪರಂಪರೆಯನ್ನು ವಿವರಿಸುತ್ತದೆ.

*** ಸಾಂಸ್ಕೃತಿಕ ಮತ್ತು ನಾಗರಿಕತೆಯ ಮಹತ್ವ:**

=> ಈ ಪ್ರದರ್ಶನವು ಬೌದ್ಧ ಧರ್ಮವು ಭಾರತದಲ್ಲಿ ಹುಟ್ಟಿ ಏಷ್ಯಾದಾದ್ಯಂತ ಹರಡಿದುದನ್ನು ತೋರಿಸುತ್ತದೆ.

=> ಭಾರತವು ಬೌದ್ಧ ಧರ್ಮದ ಆಧ್ಯಾತ್ಮಿಕ ತವರುನಾಡು ಎಂಬುದನ್ನು ಮತ್ತೊಮ್ಮೆ ಒತ್ತಿ ಹೇಳುತ್ತದೆ.

=> ಇದು ಭಾರತದ ಸಾಂಸ್ಕೃತಿಕ ರಾಜತಾಂತ್ರಿಕತೆ (Cultural Diplomacy)ಯನ್ನು ಬಲಪಡಿಸುತ್ತದೆ.

=> ಪರಂಪರೆ, ಆಧ್ಯಾತ್ಮ ಮತ್ತು ಏಷ್ಯಾದ ಸಾಮೂಹಿಕ ಸಂಸ್ಕೃತಿಯ ಮೂಲಕ ಭಾರತದ ಸಾಫ್ಟ್ ಪವರ್ ವೃದ್ಧಿಸುವ ಪ್ರಧಾನಮಂತ್ರಿಯ ದೃಷ್ಟಿಕೋನಕ್ಕೆ ಇದು ಅನುಗುಣವಾಗಿದೆ.

*** ಮರುಪಡೆಯುವಿಕೆ ಮತ್ತು ಸಂರಕ್ಷಣಾ ಪ್ರಯತ್ನಗಳು:**

=> ಶತಮಾನಕ್ಕಿಂತ ಹೆಚ್ಚು ಕಾಲದ ನಂತರ ಪಿಪ್ರಾಹ್ವಾ ಅವಶೇಷಗಳನ್ನು ಭಾರತಕ್ಕೆ ಮರಳಿ ತರುವುದು ಸರ್ಕಾರದ ನಿರಂತರ ಪ್ರಯತ್ನಗಳ ಫಲಿತಾಂಶವಾಗಿದೆ.

=> ಇದರಲ್ಲಿ ಸರ್ಕಾರಿ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಮತ್ತು ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಪ್ರಮುಖ ಪಾತ್ರವಹಿಸಿದೆ.

=> ಸಾಂಸ್ಕೃತಿಕ ಮರುಪಡೆಯುವಿಕೆ ಭಾರತ ಸರ್ಕಾರದ ಪರಂಪರೆ ನೀತಿಯ ಪ್ರಮುಖ ಅಂಶವಾಗಿದೆ.

=> ಇಂತಹ ಪ್ರಯತ್ನಗಳು ರಾಷ್ಟ್ರೀಯ ಪರಂಪರೆಯನ್ನು ಸಂರಕ್ಷಿಸುವುದರ ಜೊತೆಗೆ, ಅಧ್ಯಯನಾರ್ಥಿಗಳು, ಭಕ್ತರು ಮತ್ತು ಸಾಮಾನ್ಯ ಜನರಿಗೆ ಅವುಗಳನ್ನು ಲಭ್ಯವಾಗುವಂತೆ ಮಾಡುತ್ತವೆ.

## ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆ 2026: ಕ್ರೀಡಾ ಲೋಕದಲ್ಲಿ 'ಚಾಂಪಿಯನ್ನರ' ಆಡಳಿತಕ್ಕೆ ಮುನ್ನುಡಿ!



* ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆ 2026 ಭಾಗಶಃ ಜಾರಿಗೆ ಬಂದಿರುವ ಹಿನ್ನಲೆಯಲ್ಲಿ, ಕ್ರೀಡಾಪಟುಗಳಿಗೆ ಕ್ರೀಡಾ ಆಡಳಿತದಲ್ಲಿ ನೇರ ಪಾತ್ರ ನೀಡುವ ಉದ್ದೇಶದಿಂದ Sportspersons of Merit (SOM) ಎಂಬ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ಈ ವ್ಯವಸ್ಥೆಯ ಅಡಿಯಲ್ಲಿ ಕ್ರೀಡಾಪಟುಗಳ ಸಾಧನೆ ಆಧಾರವಾಗಿ 10 ಹಂತಗಳ (Tier) ಮಾನದಂಡ ರೂಪಿಸಲಾಗಿದೆ.
* SOM ಆಯ್ಕೆಗಾಗಿ ಸಾಮಾನ್ಯ ಅರ್ಹತೆಗಳು :
=> ಕ್ರೀಡಾಪಟು ಕನಿಷ್ಠ ಒಂದು ವರ್ಷ ಹಿಂದೆ ನಿವೃತ್ತರಾಗಿರಬೇಕು
=> ಆಡಳಿತಾತ್ಮಕ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹತೆ ಇರಬೇಕು
=> ಸಾಧನೆ ಆಧಾರಿತ ಹಂತಗಳಲ್ಲಿ ಸ್ಥಾನ ಪಡೆದಿರಬೇಕು* Sportspersons of Merit 10 ಹಂತಗಳ ಸಾಧನಾ ಮಾನದಂಡ:-
# Tier–1 ಒಲಿಂಪಿಕ್ಸ್ ಅಥವಾ ವಿಂಟರ್ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ ಕ್ರೀಡಾಪಟುಗಳು# Tier–2 ಕನಿಷ್ಠ ಎರಡು ಬಾರಿ ಒಲಿಂಪಿಕ್ಸ್ / ವಿಂಟರ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದವರು# Tier–3 ಕನಿಷ್ಠ ಒಂದು ಒಲಿಂಪಿಕ್ಸ್ / ವಿಂಟರ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ಕ್ರೀಡಾಪಟುಗಳು# Tier–4 ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪದಕ ಗೆದ್ದವರು# Tier–5 ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪ್ರತಿನಿಧಿಸಿದ ಕ್ರೀಡಾಪಟುಗಳು# Tier–6 ಏಷ್ಯನ್ ಗೇಮ್ಸ್ / ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕ ವಿಜೇತರು# Tier–7 ಏಷ್ಯನ್ ಗೇಮ್ಸ್ / ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾಗವಹಿಸಿದವರು# Tier–8 ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ (ಅರ್ಜುನ, ಖೇಲ್ ರತ್ನ ಇತ್ಯಾದಿ) ಪಡೆದ ಕ್ರೀಡಾಪಟುಗಳು# Tier–9 ಅಂತರರಾಷ್ಟ್ರೀಯ ಮಟ್ಟದ ಅಧಿಕೃತ ಟೂರ್ನಿಗಳಲ್ಲಿ ಭಾರತವನ್ನು ಪ್ರತಿನಿಧಿಸಿದವರು# Tier–10 ರಾಷ್ಟ್ರೀಯ ಮಟ್ಟದ ಉನ್ನತ ಸಾಧನೆ ಹೊಂದಿರುವ ಕ್ರೀಡಾಪಟುಗಳು
* SOM ವ್ಯವಸ್ಥೆಯ ಮೂಲಕ ಕ್ರೀಡಾಪಟುಗಳಿಗೆ ಮೊದಲ ಬಾರಿಗೆ ಕ್ರೀಡಾ ಆಡಳಿತ ಮತ್ತು ನೀತಿ ನಿರ್ಧಾರ ಪ್ರಕ್ರಿಯೆಗಳಲ್ಲಿ ನೇರವಾಗಿ ಭಾಗವಹಿಸುವ ಅವಕಾಶ ಒದಗಿಸಲಾಗಿದೆ. ಇದರಿಂದ ಕ್ರೀಡಾ ಫೆಡರೇಷನ್‌ಗಳಲ್ಲಿ ಅನುಭವಾಧಾರಿತ, ವಾಸ್ತವಿಕ ಸಮಸ್ಯೆಗಳನ್ನು ಅರಿತ ಆಡಳಿತ ರೂಪುಗೊಳ್ಳಲಿದೆ. ಕ್ರೀಡಾಪಟುಗಳ ಅನುಭವ ಮತ್ತು ಪರಿಣತಿ ನಿರ್ಣಯಗಳಲ್ಲಿ ಪ್ರತಿಬಿಂಬಿಸುವುದರಿಂದ ಪಾರದರ್ಶಕತೆ, ಜವಾಬ್ದಾರಿ ಮತ್ತು ವೃತ್ತಿಪರತೆ ಹೆಚ್ಚುವ ಸಾಧ್ಯತೆ ಇದೆ.
* ಈ ವ್ಯವಸ್ಥೆಯ ಉದ್ದೇಶ ಭಾರತದಲ್ಲಿ ಕ್ರೀಡಾ ಆಡಳಿತವನ್ನು ಹೆಚ್ಚು ಕ್ರೀಡಾಪಟು ಕೇಂದ್ರಿತ, ಪರಿಣಾಮಕಾರಿ ಮತ್ತು ವಿಶ್ವಾಸಾರ್ಹವಾಗಿಸುವುದಾಗಿದೆ.

# 05 Jan 2026

## ಜನವರಿ-4 ವಿಶ್ವ ಬ್ರೈಲ್ ದಿನ: ದೃಷ್ಟಿಹೀನರ ಅಕ್ಷರಜ್ಞಾನಕ್ಕೆ ಗೌರವ



* ವಿಶ್ವ ಬ್ರೈಲ್ ದಿನವನ್ನು ಪ್ರತಿವರ್ಷ ಜನವರಿ 4ರಂದು ಆಚರಿಸಲಾಗುತ್ತದೆ. ಈ ದಿನವನ್ನು ಬ್ರೈಲ್ ಲಿಪಿಯ ಆವಿಷ್ಕಾರಕ ಲೂಯಿ ಬ್ರೈಲ್ ಅವರ ಜನ್ಮದಿನದ ಗೌರವ ಸೂಚಕವಾಗಿ ಆಚರಿಸಲಾಗುತ್ತದೆ. ದೃಷ್ಟಿಹೀನರು ಹಾಗೂ ಭಾಗಶಃ ದೃಷ್ಟಿಹೀನರು ಓದಲು ಮತ್ತು ಬರೆಯಲು ಸಹಾಯ ಮಾಡುವ ಸ್ಪರ್ಶ ಆಧಾರಿತ ಲಿಪಿಯಾದ ಬ್ರೈಲ್‌ನ ಮಹತ್ವವನ್ನು ಜಗತ್ತಿಗೆ ಪರಿಚಯಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.
* ಸಂಯುಕ್ತ ರಾಷ್ಟ್ರ ಸಾಮಾನ್ಯ ಸಭೆ (UN General Assembly) 2018ರಲ್ಲಿ ವಿಶ್ವ ಬ್ರೈಲ್ ದಿನವನ್ನು ಅಧಿಕೃತವಾಗಿ ಘೋಷಿಸಿದೆ. ಬ್ರೈಲ್ ಲಿಪಿ ಮಾನವ ಹಕ್ಕುಗಳು, ಅಕ್ಷರಜ್ಞಾನ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯಲ್ಲಿ ವಹಿಸುವ ಪ್ರಮುಖ ಪಾತ್ರದ ಬಗ್ಗೆ ಜಾಗೃತಿ ಮೂಡಿಸುವುದೇ ಈ ದಿನದ ಆಶಯವಾಗಿದೆ.
* ಭಾರತದಲ್ಲಿ ದೃಷ್ಟಿಹೀನರ ಸ್ಥಿತಿ : ಭಾರತದಲ್ಲಿ ಲಕ್ಷಾಂತರ ದೃಷ್ಟಿಹೀನರು ಇದ್ದರೂ, ಬ್ರೈಲ್ ಶಿಕ್ಷಣ ಮತ್ತು ಪಠ್ಯಸಾಮಗ್ರಿಗಳ ಲಭ್ಯತೆ ಸಮಾನವಾಗಿಲ್ಲ. ನಗರ ಪ್ರದೇಶಗಳಲ್ಲಿ ಸೌಲಭ್ಯಗಳು ಹೆಚ್ಚಾಗಿದ್ದರೂ, ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳಲ್ಲಿ ತರಬೇತಿ ಪಡೆದ ಶಿಕ್ಷಕರು, ಬ್ರೈಲ್ ಪುಸ್ತಕಗಳು ಮತ್ತು ಸಾಧನಗಳ ಕೊರತೆ ಇದೆ. ಈ ಹಿನ್ನಲೆಯಲ್ಲಿ ವಿಶ್ವ ಬ್ರೈಲ್ ದಿನವು ಸಂಭ್ರಮದ ಜೊತೆಗೆ ಆತ್ಮಪರಿಶೀಲನೆಯ ದಿನವೂ ಆಗಿದೆ.
- ಬ್ರೈಲ್ ಪಠ್ಯಪುಸ್ತಕಗಳು ಸಮಯಕ್ಕೆ ಸಿಗುತ್ತಿವೆಯೇ?
- ಸಾರ್ವಜನಿಕ ಪರೀಕ್ಷೆಗಳು ಮತ್ತು ಸರ್ಕಾರಿ ಕಚೇರಿಗಳು ಎಲ್ಲರಿಗೂ ಪ್ರವೇಶಯೋಗ್ಯವಾಗಿವೆಯೇ?
ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ.
* ಡಿಜಿಟಲ್ ಯುಗದಲ್ಲೂ ಬ್ರೈಲ್ ಮಹತ್ವ: ಸ್ಮಾರ್ಟ್‌ಫೋನ್ ಮತ್ತು ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಬ್ರೈಲ್ ಅಪ್ರಸ್ತುತ ಎಂಬ ತಪ್ಪು ಕಲ್ಪನೆ ಇದೆ. ವಾಸ್ತವದಲ್ಲಿ ತಂತ್ರಜ್ಞಾನವು ಬ್ರೈಲ್ ಅನ್ನು ಇನ್ನಷ್ಟು ಶಕ್ತಿಮಾಡಿದೆ. ರಿಫ್ರೆಶೆಬಲ್ ಬ್ರೈಲ್ ಡಿಸ್ಪ್ಲೇ, ಬ್ರೈಲ್ ಎಂಬಾಸರ್‌ಗಳು ಮತ್ತು ಸಹಾಯಕ ಸಾಫ್ಟ್‌ವೇರ್‌ಗಳು ಡಿಜಿಟಲ್ ವಿಷಯವನ್ನು ಸ್ಪರ್ಶದ ಮೂಲಕ ಓದಲು ನೆರವಾಗುತ್ತವೆ. ಆದರೆ ಇವುಗಳ ಬೆಲೆ ಹೆಚ್ಚಿರುವುದರಿಂದ ಎಲ್ಲರಿಗೂ ಲಭ್ಯವಾಗುವುದು ಇನ್ನೂ ಸವಾಲು.
* ಭಾಷೆ, ಸಂಸ್ಕೃತಿ ಮತ್ತು ಗುರುತು : ಭಾರತದಲ್ಲಿ ಬ್ರೈಲ್ ಹಲವಾರು ಭಾಷೆಗಳಲ್ಲಿ ಲಭ್ಯವಿರುವುದು ಮಹತ್ವದ ವಿಷಯ. ತಾಯ್ನುಡಿಯಲ್ಲೇ ಓದುವ ಅವಕಾಶ ದೊರಕಿದಾಗ ಶಿಕ್ಷಣ ದಾನವಲ್ಲ, ಹಕ್ಕು ಎಂಬ ಭಾವನೆ ಮೂಡುತ್ತದೆ. ಇದು ಸಂಸ್ಕೃತಿಯ ಸಂರಕ್ಷಣೆಯ ಭಾಗವೂ ಹೌದು.
*** ಸಮಾಜದ ಪಾತ್ರ : ಒಳಗೊಳ್ಳುವಿಕೆ ದೃಷ್ಟಿಹೀನರ ಜವಾಬ್ದಾರಿಯಲ್ಲ; ಅದು ಸಮಾಜದ ಸಮೂಹ ಹೊಣೆ.**
- ಸಾರ್ವಜನಿಕ ಸ್ಥಳಗಳಲ್ಲಿ ಬ್ರೈಲ್ ಸೂಚನಾ ಫಲಕಗಳು
- ಲಿಫ್ಟ್‌ಗಳಲ್ಲಿ ಬ್ರೈಲ್ ಬಟನ್‌ಗಳು
- ಔಷಧಿ ಲೇಬಲ್‌ಗಳು ಮತ್ತು ಮೆನುಗಳು
ಇವೆಲ್ಲವೂ ಗೌರವ ಮತ್ತು ಸಮಾನತೆಯ ಸಂಕೇತಗಳಾಗಿವೆ.
* ಜಾಗೃತಿಯಿಂದ ಕಾರ್ಯದತ್ತ: ವಿಶ್ವ ಬ್ರೈಲ್ ದಿನ ಕೇವಲ ಜಾಗೃತಿಗೆ ಸೀಮಿತವಾಗಬಾರದು. ಶಿಕ್ಷಕರ ತರಬೇತಿ, ಸಹಾಯಕ ಸಾಧನಗಳಿಗೆ ಸಹಾಯಧನ, ಪಠ್ಯಕ್ರಮಗಳ ನವೀಕರಣ ಮತ್ತು ಪ್ರವೇಶಯೋಗ್ಯತೆ ನಿಯಮಗಳ ಅನುಷ್ಠಾನ ಅಗತ್ಯ. ದೃಷ್ಟಿಹೀನರನ್ನು ನಿರ್ಧಾರ ಪ್ರಕ್ರಿಯೆಯಲ್ಲೇ ಸೇರಿಸಿಕೊಳ್ಳುವುದು ಅತ್ಯಂತ ಮುಖ್ಯ.

## ದೇಶದಲ್ಲಿ ಹುಲಿಗಳ ಸಾವಿನ ಸಂಖ್ಯೆ ಏರಿಕೆ: 2025ರಲ್ಲಿ 166 ಹುಲಿಗಳು ಬಲಿ




* ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (NTCA) ಬಿಡುಗಡೆ ಮಾಡಿದ ಇತ್ತೀಚಿನ ಅಂಕಿಅಂಶಗಳು ದೇಶದ ಹುಲಿ ಸಂರಕ್ಷಣೆಯ ಸ್ಥಿತಿಗೆ ಸಂಬಂಧಿಸಿದಂತೆ ಗಂಭೀರ ಆತಂಕವನ್ನು ಹುಟ್ಟಿಸಿವೆ.

ವಿಶ್ವದ ಒಟ್ಟು ಹುಲಿ ಜನಸಂಖ್ಯೆಯ ಸುಮಾರು ಮೂರು-ನಾಲ್ಕು ಭಾಗಕ್ಕೆ ಭಾರತವೇ ಆಶ್ರಯವಾಗಿದ್ದರೂ, 2025ರಲ್ಲಿ ದೇಶಾದ್ಯಂತ 166 ಹುಲಿಗಳು ಸಾವಿಗೀಡಾಗಿರುವುದು ದಾಖಲಾಗಿದೆ.

* ಈ ಸಂಖ್ಯೆ 2024ರಿಗಿಂತ 40ರಷ್ಟು ಹೆಚ್ಚಾಗಿದ್ದು, ಆ ವರ್ಷ 126 ಹುಲಿಗಳ ಸಾವು ವರದಿಯಾಗಿತ್ತು. ಹುಲಿಗಳ ಒಟ್ಟು ಸಂಖ್ಯೆಯಲ್ಲಿ ಏರಿಕೆ ಕಂಡುಬರುತ್ತಿದ್ದರೂ, ಸಾವಿನ ಪ್ರಮಾಣದಲ್ಲೂ ಹೆಚ್ಚಳವಾಗುತ್ತಿರುವುದು ಸಂರಕ್ಷಣಾ ಕ್ರಮಗಳ ಪರಿಣಾಮಕಾರಿತ್ವದ ಬಗ್ಗೆ ಪ್ರಶ್ನೆಗಳನ್ನು ಎಬ್ಬಿಸಿದೆ. ಇದರಲ್ಲಿ 31 ಹುಲಿ ಮರಿಗಳ ಸಾವು ದಾಖಲಾಗಿರುವುದು ಅತ್ಯಂತ ಕಳವಳಕಾರಿ ಅಂಶವಾಗಿದೆ.

* ರಾಜ್ಯವಾರು ಅಂಕಿಅಂಶಗಳನ್ನು ಗಮನಿಸಿದರೆ, ಮಧ್ಯಪ್ರದೇಶದಲ್ಲಿ ಅತಿಹೆಚ್ಚು 55 ಹುಲಿಗಳು ಸಾವಿಗೀಡಾಗಿದ್ದು, ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಮಹಾರಾಷ್ಟ್ರ (38), ಕೇರಳ (13) ಮತ್ತು ಅಸ್ಸಾಂ (12) ರಾಜ್ಯಗಳು ಸೇರಿವೆ. ಕರ್ನಾಟಕದಲ್ಲಿಯೂ ಕಳೆದ ವರ್ಷ ಅಪಘಾತಗಳು ಸೇರಿದಂತೆ ವಿವಿಧ ಕಾರಣಗಳಿಂದ 22 ಹುಲಿಗಳು ಸಾವಿಗೀಡಾಗಿರುವುದು ಪರಿಸರ ತಜ್ಞರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಲ್ಲಿ ಗಂಭೀರ ಚಿಂತೆ ಮೂಡಿಸಿದೆ.

* ತಜ್ಞರ ಅಭಿಪ್ರಾಯದಂತೆ, ಅರಣ್ಯ ವಾಸಸ್ಥಾನಗಳ ಮೇಲಿನ ಹೆಚ್ಚುತ್ತಿರುವ ಒತ್ತಡ, ಪ್ರದೇಶಾಧಿಪತ್ಯಕ್ಕಾಗಿ ಹುಲಿಗಳ ನಡುವಿನ ಸಂಘರ್ಷ, ಮಾನವ-ವನ್ಯಜೀವಿ ಮುಖಾಮುಖಿ, ರಸ್ತೆ ಮತ್ತು ರೈಲು ಅಪಘಾತಗಳು ಹಾಗೂ ಕೆಲವೊಮ್ಮೆ ಅಕ್ರಮ ಚಟುವಟಿಕೆಗಳು ಹುಲಿಗಳ ಸಾವಿಗೆ ಪ್ರಮುಖ ಕಾರಣಗಳಾಗಿವೆ. ಈ ಸಮಸ್ಯೆಗಳು ನಿರೀಕ್ಷಿತ ಮಟ್ಟದಲ್ಲಿ ನಿಯಂತ್ರಣಕ್ಕೆ ಬರದೇ ಇರುವುದೇ ಆತಂಕಕ್ಕೆ ಕಾರಣವಾಗಿದೆ.

* ಈ ಹಿನ್ನೆಲೆದಲ್ಲಿ, ಹುಲಿಗಳ ಸಂಖ್ಯೆಯ ಹೆಚ್ಚಳ ಮಾತ್ರವಲ್ಲದೆ, ಅವುಗಳಿಗೆ ಸುರಕ್ಷಿತ ವಾಸಸ್ಥಾನ, ಕಾಡು ಸಂಪರ್ಕ ಮಾರ್ಗಗಳ ರಕ್ಷಣೆ ಮತ್ತು ಮಾನವ-ಹುಲಿ ಸಂಘರ್ಷ ತಡೆಗೆ ಪರಿಣಾಮಕಾರಿ ಹಾಗೂ ದೀರ್ಘಕಾಲಿಕ ಸಂರಕ್ಷಣಾ ತಂತ್ರಗಳನ್ನು ಜಾರಿಗೆ ತರುವುದು ಅತ್ಯಾವಶ್ಯಕ ಎಂಬ ಸಂದೇಶವನ್ನು NTCA ವರದಿ ಸ್ಪಷ್ಟವಾಗಿ ನೀಡುತ್ತದೆ.

## ಜನವರಿ 05 ರಾಷ್ಟ್ರೀಯ ಪಕ್ಷಿ ದಿನ




* ಪ್ರತಿ ವರ್ಷ ಜನವರಿ 5 ರಂದು ರಾಷ್ಟ್ರೀಯ ಪಕ್ಷಿ ದಿನವನ್ನು ಆಚರಣೆ ಮಾಡಲಾಗುತ್ತದೆ. ಅಳಿವಿನಂಚಿನಲ್ಲಿರುವ ಪಕ್ಷಿಗಳನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಜನರಲ್ಲಿ ಅರಿವು ಮೂಡಿಸಲು ಪ್ರತಿ ವರ್ಷ ಈ ದಿನವನ್ನು ಆಚರಣೆ ಮಾಡಲಾಗುತ್ತದೆ.

**ಸ* 2026 ರ ಜನವರಿ 5 ರ ರಾಷ್ಟ್ರೀಯ ಪಕ್ಷಿ ದಿನದ ಥೀಮ್: "A bird in flight is poetry in motion" (ಹಾರುತ್ತಿರುವ ಪಕ್ಷಿಯು ಚಲನೆಯಲ್ಲಿರುವ ಕವಿತೆ) ಎಂಬುದು ಥೀಮ್‌ಆಗಿದೆ.**

* ಪಕ್ಷಿಗಳು ಯಾವಾಗಲೂ ನಮ್ಮ ಹೃದಯದಲ್ಲಿ ವಿಶೇಷ ಸ್ಥಾನವನ್ನು ಹೊಂದಿರುವ ಜೀವಿಗಳಾಗಿವೆ ಮತ್ತು ಈ ಸುಂದರ ಸೃಷ್ಟಿಗಳನ್ನು ಗೌರವಿಸಲು ಪ್ರತಿ ಜನವರಿ 5 ರಂದು ರಾಷ್ಟ್ರೀಯ ಪಕ್ಷಿ ದಿನವನ್ನು ಆಚರಿಸಲಾಗುತ್ತದೆ.

* ರಾಷ್ಟ್ರೀಯ ಪಕ್ಷಿ ದಿನದಂದು ದೇಶದ ಪರಮೋಚ್ಚ ಪಕ್ಷಿ ತಜ್ಞರಾದ ಡಾ. ಸಲೀಂ ಅಲಿ ಅವರನ್ನು ದೇಶದಾದ್ಯಂತ ಸ್ಮರಿಸಲಾಗುತ್ತಿದೆ. ಅವರ ಜನ್ಮ ದಿನವನ್ನು ಪಕ್ಷಿ ದಿನವನ್ನಾಗಿ ಆಚರಿಸಲಾಗುತ್ತದೆ.

* ಈ ಕಾರ್ಯಕ್ರಮವು ಕೆನಡಾ, ಯುನೈಟೆಡ್ ಸ್ಟೇಟ್ಸ್, ಮೆಕ್ಸಿಕೋ, ಮಧ್ಯ ಮತ್ತು ದಕ್ಷಿಣ ಅಮೇರಿಕಾ ಮತ್ತು ಕೆರಿಬಿಯನ್‌ನಲ್ಲಿ ಅಂತರಾಷ್ಟ್ರೀಯ ಸಂರಕ್ಷಣಾ ಪ್ರಯತ್ನಗಳು ಮತ್ತು ಪರಿಸರ ಶಿಕ್ಷಣಕ್ಕೆ ಸಮರ್ಪಿಸಲಾಗಿದೆ. ಸ್ಮಿತ್ಸೋನಿಯನ್ ವಲಸೆ ಹಕ್ಕಿ ಕೇಂದ್ರದಿಂದ ಹುಟ್ಟಿಕೊಂಡಿದೆ ಇದು ಅಮೆರಿಕದ ಪರಿಸರದಿಂದ ಸಂಯೋಜಿಸಲ್ಪಟ್ಟಿದೆ.

* ಏವಿಯನ್ ವೆಲ್ಫೇರ್ ಒಕ್ಕೂಟದ ರಾಷ್ಟ್ರೀಯ ಪಕ್ಷಿ ದಿನದ ಅಭಿಯಾನವು ಗಿಳಿಗಳು ಮತ್ತು ಇತರ ಪಕ್ಷಿಗಳ ಯೋಗಕ್ಷೇಮವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ, ಅವುಗಳನ್ನು ಸಾಕುಪ್ರಾಣಿಗಳಾಗಿ ಖರೀದಿಸುವುದನ್ನು ತಡೆಯುತ್ತದೆ ಮತ್ತು ಕಾಡು ಪಕ್ಷಿಗಳ ಆವಾಸಸ್ಥಾನ ಸಂರಕ್ಷಣಾ ಕಾರ್ಯಕ್ರಮಗಳು ಮತ್ತು ಸೆರೆಯಲ್ಲಿರುವ ಪಕ್ಷಿ ರಕ್ಷಣಾ ಸಂಸ್ಥೆಗಳು ಮತ್ತು ಅಭಯಾರಣ್ಯಗಳ ಬೆಂಬಲವನ್ನು ಪ್ರೋತ್ಸಾಹಿಸುತ್ತದೆ.

* 2002 ರಿಂದ ಅಮೆರಿಕದಲ್ಲಿ ರಾಷ್ಟ್ರೀಯ ಪಕ್ಷಿಗಳ ದಿನವನ್ನು ಆಚರಿಸಲಾಗುತ್ತದೆ. ಇದು ವಾರ್ಷಿಕ ಕ್ರಿಸ್ಮಸ್ ಬರ್ಡ್ ಕೌಂಟ್‌ನ ದಿನವಾಗಿದೆ. ರಾಷ್ಟ್ರೀಯ ರಜಾದಿನವನ್ನು ಅಮೇರಿಕಾದಲ್ಲಿ ಆಚರಿಸಲಾಗುತ್ತದೆ.

* ರಾಷ್ಟ್ರೀಯ ಪಕ್ಷಿ ದಿನವನ್ನು ಮೊದಲ ಬಾರಿಗೆ 1894 ರಲ್ಲಿ ಅಮೇರಿಕನ್ ಬರ್ಡಿಂಗ್ ಅಸೋಸಿಯೇಷನ್ ಪಕ್ಷಿಗಳು ಮತ್ತು ಅವುಗಳ ಆವಾಸಸ್ಥಾನಗಳ ಸಂರಕ್ಷಣೆಗೆ ಗಮನ ಸೆಳೆಯುವ ಸಾಧನವಾಗಿ ಸ್ಥಾಪಿಸಲಾಯಿತು.

* ರಾಷ್ಟ್ರೀಯ ಪಕ್ಷಿ ದಿನವನ್ನು ಏವಿಯನ್ ವೆಲ್ಫೇರ್ ಒಕ್ಕೂಟ (AWC) 2002 ರಲ್ಲಿ ಕ್ರೌರ್ಯ ಮತ್ತು ನಿಂದನೆಯಿಂದ ಪಕ್ಷಿಗಳನ್ನು ರಕ್ಷಿಸಲು ಮೀಸಲಾಗಿರುವ ಲಾಭೋದ್ದೇಶವಿಲ್ಲದ ಸಂಸ್ಥೆಯಿಂದ ಸ್ಥಾಪಿಸಲಾಯಿತು.

## ಪಾರ್ವತಿ-ಅರ್ಗಾ ಪಕ್ಷಿಧಾಮ: ಪರಿಸರ ಸೂಕ್ಷ್ಮ ವಲಯ (ESZ) ಘೋಷಣೆ




* ಉತ್ತರ ಭಾರತದ ಚೌಗು (Wetland) ಪರಿಸರ ವ್ಯವಸ್ಥೆಗಳ ಸಂರಕ್ಷಣೆಗೆ ಮಹತ್ವದ ಉತ್ತೇಜನವಾಗಿ, ಉತ್ತರ ಪ್ರದೇಶದ ಪಾರ್ವತಿ-ಅರ್ಗಾ ಪಕ್ಷಿಧಾಮವನ್ನು ಪರಿಸರ ಸೂಕ್ಷ್ಮ ವಲಯ (Eco-Sensitive Zone – ESZ) ಎಂದು ಭಾರತ ಸರ್ಕಾರ ಅಧಿಕೃತವಾಗಿ ಘೋಷಿಸಿದೆ. ಈ ಘೋಷಣೆಯ ಅಧಿಸೂಚನೆಯನ್ನು 2025ರ ಡಿಸೆಂಬರ್ 28ರಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಪ್ರಕಟಿಸಿದೆ.

* ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು ಸಾಮಾಜಿಕ ಮಾಧ್ಯಮದ ಮೂಲಕ ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಪರಿಸರ ಸೂಕ್ಷ್ಮ ವಲಯ ಘೋಷಣೆಯ ಮುಖ್ಯ ಉದ್ದೇಶವೆಂದರೆ ಪಕ್ಷಿಧಾಮದ ಸುತ್ತಮುತ್ತ ನಡೆಯುವ ಮಾನವ ಚಟುವಟಿಕೆಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ನಿಯಂತ್ರಿಸುವುದು. ಇದರಿಂದ ಪರಿಸರ ಹಾನಿಯನ್ನು ತಡೆದು, ಜವಾಬ್ದಾರಿಯುತ ಪರಿಸರ ಪ್ರವಾಸೋದ್ಯಮ (eco-tourism) ಹಾಗೂ ಸ್ಥಳೀಯ ಜನರ ಸುಸ್ಥಿರ ಜೀವನೋಪಾಯಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

* ಉತ್ತರ ಪ್ರದೇಶದ ಗೋಂಡಾ ಜಿಲ್ಲೆಯಲ್ಲಿ 1,084 ಹೆಕ್ಟೇರ್ ವ್ಯಾಪ್ತಿಯಲ್ಲಿ ವಿಸ್ತರಿಸಿರುವ ಪಾರ್ವತಿ-ಅರ್ಗಾ ಪಕ್ಷಿಧಾಮವು ಇಂಡೋ-ಗಂಗಾ ಪ್ರವಾಹ ಸಮತಟದ ವಿಶಿಷ್ಟ ಚೌಗು ಪರಿಸರ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ.ಈ ಪ್ರದೇಶದಲ್ಲಿ ಪಾರ್ವತಿ ಸರೋವರ ಮತ್ತು ಅರ್ಗಾ ಸರೋವರ ಎಂಬ ಎರಡು ಶಾಶ್ವತ ತಾಜಾ ನೀರಿನ ಸರೋವರಗಳಿದ್ದು, ಅವು ಹಳೆಯ ನದಿ ಹರಿವಿನಿಂದ ರೂಪುಗೊಂಡ ಆಕ್ಸ್‌ಬೋ (oxbow) **ಸರೋವರಗಳಾಗಿವೆ. ಈ ಚೌಗುಗಳು:**

=> ಭೂಗರ್ಭ ಜಲಮಟ್ಟ ಹೆಚ್ಚಿಸಲು

=> ಪ್ರವಾಹ ನಿಯಂತ್ರಣಕ್ಕೆ

=> ಹವಾಮಾನ ಸ್ಥೈರ್ಯ (climate resilience) ಹೆಚ್ಚಿಸಲು ಮುಖ್ಯ ಪಾತ್ರ ವಹಿಸುತ್ತವೆ.

* ವಲಸೆ ಪಕ್ಷಿಗಳು ಮತ್ತು ಅಪಾಯದಲ್ಲಿರುವ ಜಾತಿಗಳಿಗೆ ಆಶ್ರಯ : ಪಾರ್ವತಿ-ಅರ್ಗಾ ಪಕ್ಷಿಧಾಮವು ಮಧ್ಯ ಏಷ್ಯಾ ಮತ್ತು ಟಿಬೆಟ್ ಪ್ರದೇಶಗಳಿಂದ ಬರುವ ವಲಸೆ ಪಕ್ಷಿಗಳಿಗೆ ಪ್ರಮುಖ ಚಳಿಗಾಲದ

ತಂಗುದಾಣವಾಗಿದೆ. ಇದರ ಅಂತರರಾಷ್ಟ್ರೀಯ ಮಹತ್ವವನ್ನು ಗುರುತಿಸಿ, ಇದನ್ನು ರಾಮ್ಸಾರ್ ಜೌಗು ಪ್ರದೇಶ (Ramsar Site) **ಆಗಿಯೂ ಘೋಷಿಸಲಾಗಿದೆ. ಇಲ್ಲಿನ ಪ್ರಮುಖ ವೈಶಿಷ್ಟ್ಯವೆಂದರೆ:**

=> ಬಿಳಿ ಬೆನ್ನಿನ ಗಿಡುಗ

=> ಭಾರತೀಯ ಗಿಡುಗ

=> ಅಪಾಯದಲ್ಲಿರುವ ಈಜಿಪ್ಷಿಯನ್ ಗಿಡುಗ

ಹಾಗೂ ಇತರ ಅಪರೂಪದ ಪಕ್ಷಿಗಳಿಗೆ ಗೂಡು ಕಟ್ಟಲು ಮತ್ತು ಆಹಾರ ಹುಡುಕಲು ಸೂಕ್ತ ವಾಸಸ್ಥಾನ ಒದಗಿಸುವುದು. ಆದರೆ ನೀರಿನ ಹೈಸಿಂತ್ (water hyacinth) ಎಂಬ ಆಕ್ರಮಣಕಾರಿ ಸಸ್ಯಗಳು ಈ ಪರಿಸರ ಸಮತೋಲನಕ್ಕೆ ಸವಾಲಾಗಿವೆ.

* ಪರಿಸರ ಸೂಕ್ಷ್ಮ ವಲಯಗಳ ಪಾತ್ರ: ಪರಿಸರ ಸೂಕ್ಷ್ಮ ವಲಯಗಳು ರಕ್ಷಿತ ಅರಣ್ಯ ಅಥವಾ ಪಕ್ಷಿಧಾಮ ಮತ್ತು ಮಾನವ ವಾಸಸ್ಥಳಗಳ **ಮಧ್ಯೆ ರಕ್ಷಾ ಬಫರ್ ಪ್ರದೇಶಗಳಾಗಿ ಕಾರ್ಯನಿರ್ವಹಿಸುತ್ತವೆ. ಪಾರ್ವತಿ-ಅರ್ಗಾ ಪ್ರಕರಣದಲ್ಲಿ:**

=> ಅತಿರೇಕ ಕಟ್ಟಡ ನಿರ್ಮಾಣಕ್ಕೆ ನಿಯಂತ್ರಣ

=> ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳಿಗೆ ನಿರ್ಬಂಧ

=> ಭೂಬಳಕೆ ಬದಲಾವಣೆಗಳ ಮೇಲಿನ ನಿಗಾವಹಣೆ

ಇಂತಹ ಕ್ರಮಗಳ ಮೂಲಕ ಜೌಗುಗಳ ಜಲವ್ಯವಸ್ಥೆ ಮತ್ತು ಪಕ್ಷಿ ವಾಸಸ್ಥಾನಗಳನ್ನು ಸಂರಕ್ಷಿಸುವ ಗುರಿಯಿದೆ.

* ಪಾರ್ವತಿ-ಅರ್ಗಾ ಪಕ್ಷಿಧಾಮವನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಿರುವುದು, ಜೌಗು ಸಂರಕ್ಷಣೆಯಲ್ಲಿನ ಒಂದು ಮಹತ್ವದ ಮೈಲಿಗಲ್ಲು ಆಗಿದೆ. ಇದು ಜೈವವೈವಿಧ್ಯ ರಕ್ಷಣೆ, ಹವಾಮಾನ ಬದಲಾವಣೆ ಎದುರಿಸುವ ಸಾಮರ್ಥ್ಯ ಮತ್ತು ಸುಸ್ಥಿರ ಅಭಿವೃದ್ಧಿಗೆ ದಾರಿತೋರಿಸುವ ಮಾದರಿಯಾಗಲಿದೆ.

## ಸಮುದ್ರ ಪ್ರತಾಪ್: ಭಾರತದ ಮೊದಲ ಸ್ವದೇಶಿ ಮಾಲಿನ್ಯ ನಿಯಂತ್ರಣ ಹಡಗು ಕರಾವಳಿ ರಕ್ಷಣಾ ಪಡೆಗೆ ಸೇರ್ಪಡೆ



* ಭಾರತದ ಸಾಗರ ಸುರಕ್ಷತೆ ಮತ್ತು ಪರಿಸರ ಸಂರಕ್ಷಣೆಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಗೋವಾದ ವಾಸ್ಕೋದಲ್ಲಿರುವ ಗೋವಾ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ (GSL), ಭಾರತೀಯ ಕರಾವಳಿ ರಕ್ಷಣಾ ಪಡೆಯ (ICG) ಚೊಚ್ಚಲ ಸ್ವದೇಶಿ ನಿರ್ಮಿತ ಮಾಲಿನ್ಯ ನಿಯಂತ್ರಣ ಹಡಗು 'ಸಮುದ್ರ ಪ್ರತಾಪ್' (Samudra Pratap) ಅನ್ನು ಅಧಿಕೃತವಾಗಿ ದೇಶದ ಸೇವೆಗೆ ಸಮರ್ಪಿಸಿದ್ದಾರೆ.

* 114.5 ಮೀಟರ್ ಉದ್ದ ಮತ್ತು 4,200 ಟನ್ ತೂಕ ಹೊಂದಿರುವ ಈ ಹಡಗನ್ನು ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ ನಿರ್ಮಿಸಿದ್ದು, ಇದರಲ್ಲಿ 60 ಶೇಕಡಕ್ಕಿಂತ ಹೆಚ್ಚು ಸ್ವದೇಶಿ ಅಂಶಗಳು ಬಳಕೆಯಲ್ಲಿವೆ. ಗಂಟೆಗೆ 22 ನಾಟ್‌ಗಿಂತ ಹೆಚ್ಚಿನ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹಾಗೂ 6,000 ನಾಟಿಕಲ್ ಮೈಲ್‌ಗಳ ದೀರ್ಘ ಸಂಚಲನ ಶಕ್ತಿ ಈ ಹಡಗಿಗೆ ಇದೆ.

* 'ಸಮುದ್ರ ಪ್ರತಾಪ್' ಹಡಗು ಸಮುದ್ರ ಮಾಲಿನ್ಯ ನಿಯಂತ್ರಣ ನಿಯಮಗಳ ಜಾರಿ, ಸಾಗರ ಕಾನೂನು ಅನುಷ್ಠಾನ, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು ಹಾಗೂ ಭಾರತದ ವಿಶೇಷ ಆರ್ಥಿಕ ವಲಯ (EEZ) ರಕ್ಷಣೆಗೆ ಅತ್ಯಂತ ಪ್ರಮುಖ ವೇದಿಕೆಯಾಗಲಿದೆ. ಈ ಹಡಗನ್ನು ಡಿಸೆಂಬರ್ ತಿಂಗಳಲ್ಲಿ ಭಾರತೀಯ ಕರಾವಳಿ ರಕ್ಷಣಾ ಪಡೆಯಿಗೆ ಅಧಿಕೃತವಾಗಿ ಹಸ್ತಾಂತರಿಸಲಾಗಿತ್ತು.

* ಈ ಉದ್ಘಾಟನಾ ಸಮಾರಂಭದಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಕೇಂದ್ರ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹಾಗೂ ಭಾರತೀಯ ಕರಾವಳಿ ರಕ್ಷಣಾ ಪಡೆಯ ಮಹಾನಿರ್ದೇಶಕ ಪರಮೇಶ್ ಶಿವಮಣಿ ಅವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ರಾಜನಾಥ್ ಸಿಂಗ್,ಭಾರತದ ಮಹಾನ್ ಸಾಗರ ದೃಷ್ಟಿಕೋನದೊಂದಿಗೆ ಈ ಕ್ಷಣ ಸಂಬಂಧಿಸಿದೆ ಎಂದು ಹೇಳಿದರು.

"ಸಮುದ್ರ ಸಂಪನ್ಮೂಲಗಳು ಯಾವುದಾದರೂ ಒಂದು ದೇಶದ ಆಸ್ತಿ ಅಲ್ಲ, ಅವು ಮಾನವಕುಲದ ಸಂಯುಕ್ತ ಪರಂಪರೆ. ಪರಂಪರೆ ಹಂಚಿಕೊಂಡಾಗ, ಅದರ ಹೊಣೆಗಾರಿಕೆಯೂ ಹಂಚಿಕೊಳ್ಳಬೇಕು. ಈ ಕಾರಣದಿಂದಲೇ ಭಾರತ ಇಂದು ಜವಾಬ್ದಾರಿಯುತ ಸಾಗರ ಶಕ್ತಿಯಾಗಿ ಹೊರಹೊಮ್ಮಿದೆ" ಎಂದು ಅವರು ಹೇಳಿದರು.

* ಮಹಿಳಾ ಸಬಲೀಕರಣಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಹೇಳಿದ ಅವರು, ಕರಾವಳಿ ರಕ್ಷಣಾ ಪಡೆ ಮಹಿಳೆಯರಿಗೆ ಸಮರ್ಪಕ ಅವಕಾಶ ನೀಡುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಪೈಲಟ್, ವೀಕ್ಷಕ, ಏರ್ ಟ್ರಾಫಿಕ್ ಕಂಟ್ರೋಲರ್, ಲಾಜಿಸ್ಟಿಕ್ಸ್ ಅಧಿಕಾರಿ ಸೇರಿದಂತೆ ಪ್ರಮುಖ ಹುದ್ದೆಗಳಲ್ಲಿ ಮಹಿಳಾ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದರು. ಹೋವರ್ ಕ್ರಾಫ್ಟ್ ಕಾರ್ಯಾಚರಣೆಗಳಿಗೂ ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿದ್ದು, ಮುಂಚೂಣಿ ಕಾರ್ಯಾಚರಣೆಗಳಲ್ಲಿಯೂ ಅವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. "ಇಂದು ಮಹಿಳೆಯರು ಸಹಾಯಕ ಪಾತ್ರದಲ್ಲಷ್ಟೇ ಅಲ್ಲ, ಮುಂಚೂಣಿ ಯೋಧರಾಗಿ ಸೇವೆ ಸಲ್ಲಿಸುತ್ತಿದ್ದಾರೆ" ಎಂದು ರಾಜನಾಥ್ ಸಿಂಗ್ ಹೇಳಿದರು.

* ಸಮುದ್ರ ಪ್ರತಾಪ್' ಹಡಗಿನ ಸೇವೆಗೆ ಸೇರ್ಪಡೆ, ಹಡಗು ನಿರ್ಮಾಣ ಮತ್ತು ಸಾಗರ ಸಾಮರ್ಥ್ಯ ಅಭಿವೃದ್ಧಿಯಲ್ಲಿ ಭಾರತದ 'ಆತ್ಮನಿರ್ಭರತೆ' (Atmanirbharta) ಗುರಿಯತ್ತ ಮಹತ್ವದ ಹೆಜ್ಜೆಯಾಗಿದೆ ಎಂದು ಭಾರತೀಯ ಕರಾವಳಿ ರಕ್ಷಣಾ ಪಡೆ ತಿಳಿಸಿದೆ. ಸಮುದ್ರ ಪ್ರತಾಪ್' ಎಂದರೆ 'ಸಮುದ್ರದ ಮಹಿಮೆ' ಎಂಬ ಅರ್ಥ ಹೊಂದಿದ್ದು, ಸುರಕ್ಷಿತ, ಸ್ವಚ್ಛ ಮತ್ತು ಭದ್ರ ಸಾಗರಗಳನ್ನು ಕಾಯ್ದುಕೊಳ್ಳುವ ಜೊತೆಗೆ ರಾಷ್ಟ್ರದ ಸಾಗರ ಹಿತಾಸಕ್ತಿಗಳನ್ನು ರಕ್ಷಿಸುವ ಭಾರತೀಯ ಕರಾವಳಿ ರಕ್ಷಣಾ ಪಡೆಯ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ. ಇದು ಸ್ವದೇಶಿ ಹಡಗು ವಿನ್ಯಾಸ ಮತ್ತು ನಿರ್ಮಾಣದಲ್ಲಿ ದೊಡ್ಡ ಸಾಧನೆಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.




## ಜಾಗತಿಕ ಅಕ್ಕಿ ಉತ್ಪಾದನೆಯಲ್ಲಿ ಭಾರತಕ್ಕೆ ಅಗ್ರಸ್ಥಾನ: ಚೀನಾವನ್ನು ಹಿಂದಿಕ್ಕಿ ಇತಿಹಾಸ ಬರೆದ ಭಾರತ!




* ಭಾರತದ ಕೃಷಿ ವಲಯವು 2026ರ ಆರಂಭದಲ್ಲೇ ಒಂದು ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. 2024-25ರ ಬೆಳೆ ವರ್ಷದಲ್ಲಿ ಅಕ್ಕಿ ಉತ್ಪಾದನೆಯಲ್ಲಿ ಭಾರತವು ಚೀನಾವನ್ನು ಮೀರಿಸಿ ಜಗತ್ತಿನ ನಂಬರ್ 1 ಅಕ್ಕಿ ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಘೋಷಿಸಿದ್ದಾರೆ.

* ಉತ್ಪಾದನೆಯ ಅಂಕಿ-ಅಂಶಗಳು (2024–25) ಗಮನಾರ್ಹವಾಗಿವೆ: ಕೇಂದ್ರ ಕೃಷಿ ಸಚಿವಾಲಯದ ಅಂಕಿ-ಅಂಶಗಳ ಪ್ರಕಾರ, ಭಾರತವು 15.01 ಕೋಟಿ ಟನ್ ಉತ್ಪಾದನೆಯೊಂದಿಗೆ ಮುಂಚೂಣಿಯಲ್ಲಿದ್ದು, ಚೀನಾ 14.52 ಕೋಟಿ ಟನ್ ಉತ್ಪಾದನೆ ದಾಖಲಿಸಿದೆ. ಈ ಮಹತ್ವದ ಸಾಧನೆಯು ಭಾರತದ ಆಹಾರ ಭದ್ರತೆಯನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ, ಜಾಗತಿಕ ರಫ್ತು ಮಾರುಕಟ್ಟೆಯಲ್ಲಿ ಭಾರತದ ಪ್ರಾಬಲ್ಯವನ್ನು ಇನ್ನಷ್ಟು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

* ಕೃಷಿ ಕ್ರಾಂತಿಗೆ ಹೊಸ ವೇಗ ನೀಡುವಂತೆ, ಈ ಐತಿಹಾಸಿಕ ಸಂದರ್ಭದಲ್ಲಿ ಕೇಂದ್ರ ಸರ್ಕಾರವು 25 ವಿವಿಧ ಬೆಳೆಗಳಿಗೆ ಸೇರಿದ 184 ಹೊಸ ಸುಧಾರಿತ ತಳಿಗಳನ್ನು ರೈತರಿಗಾಗಿ ಬಿಡುಗಡೆ ಮಾಡಿದೆ. ಈ ತಳಿಗಳನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿ (ICAR), ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಖಾಸಗಿ ಬೀಜ ಕಂಪನಿಗಳು ಅಭಿವೃದ್ಧಿಪಡಿಸಿದ್ದು, ಅವುಗಳಲ್ಲಿ ಹೆಚ್ಚಿನ ಇಳುವರಿ ಸಾಮರ್ಥ್ಯ, ರೋಗ ಮತ್ತು ಕೀಟಗಳ ವಿರುದ್ಧ ಬಲವಾದ ನಿರೋಧಕ ಶಕ್ತಿ, ಹಾಗೂ ಹವಾಮಾನ ಬದಲಾವಣೆಯನ್ನು ತಡೆದುಕೊಳ್ಳುವ (Climate Resilience) ವಿಶೇಷ ಸಾಮರ್ಥ್ಯ ಇರುವುದೇ ಈ ಬಿಡುಗಡೆಗಳ ಪ್ರಮುಖ ಹೈಲೈಟ್ ಆಗಿದೆ.

* ತಳಿಗಳ ಅನುಮೋದನೆಯಲ್ಲಿ ಅಭೂತಪೂರ್ವ ಪ್ರಗತಿ ಕಂಡುಬಂದಿದ್ದು, ಕಳೆದ ಕೆಲವು ದಶಕಗಳಿಗೆ ಹೋಲಿಸಿದರೆ ಇತ್ತೀಚಿನ ವರ್ಷಗಳಲ್ಲಿ ಕೃಷಿ ಸಂಶೋಧನೆ ಮತ್ತು ತಳಿಗಳ ಅಭಿವೃದ್ಧಿಗೆ ಸ್ಪಷ್ಟ ಆದ್ಯತೆ ನೀಡಲಾಗಿದೆ. 1969ರಿಂದ 1985ರ ತನಕದ 16 ವರ್ಷಗಳ ಅವಧಿಯಲ್ಲಿ ಒಟ್ಟು 3,969 ಸುಧಾರಿತ ಅಕ್ಕಿ ತಳಿಗಳಿಗೆ ಅನುಮೋದನೆ ನೀಡಲಾಗಿದ್ದರೆ, ಪ್ರಸಕ್ತ ಸರ್ಕಾರದ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇವಲ ಕಳೆದ ಕೆಲವು ವರ್ಷಗಳಲ್ಲಿ 3,236 ಹೊಸ ತಳಿಗಳಿಗೆ ಅನುಮೋದನೆ ನೀಡಲಾಗಿದೆ–ಇದರಿಂದ ರೈತರಿಗೆ ಅತ್ಯಾಧುನಿಕ, ಉತ್ಪಾದಕ ಹಾಗೂ ಸ್ಥಿರ ಬೀಜಗಳು ವೇಗವಾಗಿ ಲಭ್ಯವಾಗುವಂತೆ ಮಾಡಲಾಗಿದೆ.

* ರೈತರಿಗೆ ಮತ್ತು ದೇಶಕ್ಕೆ ಆಗುವ ಪ್ರಯೋಜನಗಳು ಬಹುಮುಖವಾಗಿವೆ: ಸುಧಾರಿತ ತಳಿಗಳ ಬಳಕೆಯಿಂದ ಉತ್ಪಾದನಾ ವೆಚ್ಚ ಕಡಿಮೆಯಾಗಿ ಇಳುವರಿ ಹೆಚ್ಚುವ ಮೂಲಕ ರೈತರ ನಿವ್ವಳ ಆದಾಯದಲ್ಲಿ ಸ್ಪಷ್ಟ ವೃದ್ಧಿ ಸಂಭವಿಸಲಿದೆ. ಜೊತೆಗೆ, ಸತು (Zinc) ಮತ್ತು ಕಬ್ಬಿಣ (Iron) ಸೇರಿದಂತೆ ಅಗತ್ಯ ಪೌಷ್ಟಿಕಾಂಶಗಳನ್ನು ಹೆಚ್ಚಿಸುವ Bio-fortificationಗೆ ಒತ್ತು ನೀಡಿರುವುದರಿಂದ ಪೌಷ್ಟಿಕಾಂಶದ ಭದ್ರತೆ ಮತ್ತಷ್ಟು ಬಲಗೊಳ್ಳಲಿದೆ. ಇದಲ್ಲದೆ, ಕಡಿಮೆ ನೀರಿನಲ್ಲಿ ಬೆಳೆಯುವ ಅಕ್ಕಿ ತಳಿಗಳು ನೀರಾವರಿ ಉಳಿತಾಯಕ್ಕೆ ಸಹಕಾರಿಯಾಗಿ ಅಂತರ್ಜಲ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಲಿವೆ. ಸುಧಾರಿತ ತಳಿಗಳ ಅಭಿವೃದ್ಧಿ ಮತ್ತು ಉತ್ಪಾದನೆಯಲ್ಲಿನ ಈ ಏರಿಕೆ ಭಾರತವನ್ನು "ವಿಶ್ವದ ಅನ್ನದ ಬಟ್ಟಲು" (Rice Bowl of the World) ಎಂಬ ಖ್ಯಾತಿಗೆ ನಿಜವಾದ ಅರ್ಥದಲ್ಲಿ ಅನ್ವರ್ಥವಾಗಿಸಿದೆ. ಕೆಪಿಎಸ್‌ಸಿ ಪರೀಕ್ಷೆಯ 'ಭಾರತದ ಆರ್ಥಿಕತೆ' ಮತ್ತು 'ಕೃಷಿ' ವಿಭಾಗದಲ್ಲಿ ಇದು ಅತ್ಯಂತ ಸಂಭವನೀಯ ಪ್ರಶ್ನೆಯಾಗಿದೆ.

## ಎಕ್ಸ್ (X) ನಿಂದ ಕಟ್ಟುನಿಟ್ಟಿನ ನಿಯಮ: ಆಕ್ಷೇಪಾರ್ಹ ಕಂಟೆಂಟ್ ಪೋಸ್ಟ್ ಮಾಡಿದರೆ ಖಾತೆ ಶಾಶ್ವತ ಬ್ಯಾನ್!




* ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳು ಮತ್ತು ಮಹಿಳೆಯರ ವಿರುದ್ಧದ ಆಕ್ಷೇಪಾರ್ಹ ವಿಷಯಗಳನ್ನು ತಡೆಗಟ್ಟಲು ಮೈಕ್ರೋಬ್ಲಾಗಿಂಗ್ ತಾಣ 'ಎಕ್ಸ್' (X - ಹಿಂದಿನ ಟ್ವಿಟ್ಟರ್) ಈಗ ಯುದ್ಧ ಘೋಷಿಸಿದೆ. ಎಲಾನ್ ಮಸ್ಕ್ ನೇತೃತ್ವದ ಈ ಸಂಸ್ಥೆಯು ಕಾನೂನು ಬಾಹಿರ ಚಟುವಟಿಕೆಗಳ ವಿರುದ್ಧ ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಳ್ಳುವುದಾಗಿ ಅಧಿಕೃತವಾಗಿ ಘೋಷಿಸಿದೆ.

* ಎಕ್ಸ್‌ನ ಹೊಸ ಮಾರ್ಗಸೂಚಿಗಳು ಕಾನೂನು ಉಲ್ಲಂಘನೆ ಮತ್ತು ಅಶ್ಲೀಲ ವಿಷಯಗಳ ಹರಡುವಿಕೆಯನ್ನು ತಡೆಯುವತ್ತ ಕಠಿಣ ನಿಲುವು ತಾಳಿವೆ: ಆಕ್ಷೇಪಾರ್ಹ ಅಥವಾ ಕಾನೂನುಬಾಹಿರ ವಿಷಯಗಳನ್ನು ಅಪ್‌ಲೋಡ್ ಮಾಡುವ ಖಾತೆಗಳನ್ನು ಯಾವುದೇ ಮುನ್ಸೂಚನೆ ಇಲ್ಲದೆ ಶಾಶ್ವತವಾಗಿ ಅಮಾನತು (Permanent Ban) ಮಾಡಲಾಗುತ್ತದೆ. ಜೊತೆಗೆ, ಎಕ್ಸ್‌ನ ಎಐ ಸೇವೆ "ಗ್ರೋಕ್" (Grok) ಅನ್ನು ದುರ್ಬಳಕೆ ಮಾಡಿ ಅಕ್ರಮ ಚಿತ್ರಗಳನ್ನು ಸೃಷ್ಟಿಸುವವರ ಮೇಲೂ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಇದಲ್ಲದೆ, ಅಂತರರಾಷ್ಟ್ರೀಯ ಮತ್ತು ಸ್ಥಳೀಯ ಕಾನೂನುಗಳನ್ನು ಪಾಲಿಸುವ ಉದ್ದೇಶದಿಂದ ಆಯಾ ದೇಶಗಳ ಸರ್ಕಾರಗಳೊಂದಿಗೆ ಮಾಹಿತಿ ಹಂಚಿಕೊಳ್ಳಲು ಎಕ್ಸ್ ಸಂಪೂರ್ಣ ಸಹಕಾರ ನೀಡಲಿದೆ.

* ಭಾರತದ ಪ್ರಭಾವ ಮತ್ತು MeitY ಆದೇಶ ಈ ಬದಲಾವಣೆಯ ಹಿಂದೆ ನಿರ್ಣಾಯಕ ಪಾತ್ರ ವಹಿಸಿದೆ: ಭಾರತದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (MeitY), ಎಕ್ಸ್ ವೇದಿಕೆಯಲ್ಲಿ ಇರುವ ಅಶ್ಲೀಲ ವಿಷಯಗಳು ಮತ್ತು ಅಂತಹ ಖಾತೆಗಳನ್ನು 72 ಗಂಟೆಗಳೊಳಗೆ ತೆಗೆದುಹಾಕುವಂತೆ ಅಂತಿಮ ನೋಟಿಸ್ ನೀಡಿದ್ದು, ಇದರಿಂದ ಕಂಪನಿಯ ಮೇಲೆ ಸ್ಪಷ್ಟ ಒತ್ತಡ ಉಂಟಾಯಿತು. ಜೊತೆಗೆ, ಮಹಿಳಾ ಸುರಕ್ಷತೆಯ ವಿಚಾರವನ್ನು ಗಂಭೀರವಾಗಿ ಎತ್ತಿ ಹಿಡಿದ ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿ, ಮಹಿಳೆಯರ ಫೋಟೋಗಳನ್ನು ಡೀಪ್‌ಫೇಕ್‌ಗಳ ಮೂಲಕ ಆಕ್ಷೇಪಾರ್ಹವಾಗಿ ಎಡಿಟ್ ಮಾಡಿ ಪೋಸ್ಟ್ ಮಾಡುವುದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಪತ್ರ ಬರೆದಿದ್ದು, ಈ ವಿಷಯಕ್ಕೆ ಸರ್ಕಾರದ ಕಟ್ಟುನಿಟ್ಟಿನ ನಿಲುವನ್ನು ಇನ್ನಷ್ಟು ಬಲಪಡಿಸಿದೆ.

* ಸೈಬರ್ ಸುರಕ್ಷತೆ ಮತ್ತು ಕಾನೂನು ಅಂಶಗಳು (Exam Point of View) ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿವೆ: ಮಾಹಿತಿ ತಂತ್ರಜ್ಞಾನ ಕಾಯ್ದೆ 2000 (IT Act 2000) ಭಾರತದಲ್ಲಿ ಸೈಬರ್ ಅಪರಾಧಗಳನ್ನು ನಿಯಂತ್ರಿಸುವ ಮೂಲ ಕಾನೂನಾಗಿದ್ದು, ಅದರ ಸೆಕ್ಷನ್ 67 ಅಡಿಯಲ್ಲಿ ಅಶ್ಲೀಲ ವಿಷಯಗಳ ಪ್ರಸಾರವನ್ನು ಅಪರಾಧವಾಗಿ ಪರಿಗಣಿಸಲಾಗಿದೆ. ಇದಕ್ಕೆ ಪೂರಕವಾಗಿ, ಐಟಿ ನಿಯಮಗಳು 2021 (IT Rules 2021) ಸಾಮಾಜಿಕ ಜಾಲತಾಣಗಳು ದೂರು ಸ್ವೀಕರಿಸಿದ 24 ರಿಂದ 36 ಗಂಟೆಗಳೊಳಗೆ ಆಕ್ಷೇಪಾರ್ಹ ವಿಷಯಗಳನ್ನು ಕಡ್ಡಾಯವಾಗಿ ತೆಗೆದುಹಾಕಬೇಕು ಎಂದು ಹೇಳುತ್ತವೆ. ಜೊತೆಗೆ, ಕೃತಕ ಬುದ್ಧಿಮತ್ತೆ ಬಳಸಿ ಮುಖ ಅಥವಾ ಧ್ವನಿಯನ್ನು ಬದಲಾಯಿಸಿ ಸೃಷ್ಟಿಸುವ ದೀಪ್‌ಫೇಕ್ (Deepfake)

ತಂತ್ರಜ್ಞಾನದ ದುರ್ಬಳಕೆಯನ್ನು ತಡೆಯಲು ಭಾರತ ಸರ್ಕಾರ ಹೊಸ ನಿಯಮಗಳನ್ನು ರೂಪಿಸುತ್ತಿರುವುದು.

## ಮಿಷನ್ 2036 ಒಲಿಂಪಿಕ್ಸ್: ಕ್ರೀಡಾ ಮಹಾಕುಂಭದ ಆತಿಥ್ಯಕ್ಕೆ ಭಾರತ ಸಜ್ಜು! ಪ್ರಧಾನಿ ಮೋದಿಯಿಂದ ಭರ್ಜರಿ ಸಿದ್ಧತೆಯ ಘೋಷಣೆ.




* ಭಾರತವು ಜಾಗತಿಕ ಕ್ರೀಡಾ ಭೂಪಟದಲ್ಲಿ ಹೊಸ ಇತಿಹಾಸ ಬರೆಯಲು ಸಜ್ಜಾಗಿದೆ. 2036ರ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಕ್ರೀಡಾಕೂಟಗಳನ್ನು ಆಯೋಜಿಸುವ ಭಾರತದ ಮಹತ್ವಾಕಾಂಕ್ಷೆಯ ಕನಸಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಡೆದ ಸಭೆಯಲ್ಲಿ ಹೊಸ ವೇಗ ನೀಡಿದ್ದಾರೆ. ಇದು ಕೇವಲ ಕ್ರೀಡಾಕೂಟವಲ್ಲ, ಬದಲಿಗೆ ಭಾರತದ ಬೆಳೆಯುತ್ತಿರುವ ಜಾಗತಿಕ ಸಾಮರ್ಥ್ಯದ ಪ್ರದರ್ಶನವಾಗಿದೆ ಎಂದು ಅವರು ತಿಳಿಸಿದ್ದಾರೆ.

* ಸಿದ್ಧತೆಯ ಮುಖ್ಯಾಂಶಗಳು ಕುರಿತು ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರದ ಕ್ರೀಡಾ ಕ್ಷೇತ್ರದ ಪ್ರಗತಿಯನ್ನು ಶ್ಲಾಘಿಸುತ್ತಾ ಕೆಲವು ಪ್ರಮುಖ ಹೈಲೈಟ್‌ಗಳನ್ನು ಹಂಚಿಕೊಂಡಿದ್ದಾರೆ: ಕಳೆದ ಒಂದು ದಶಕದಲ್ಲಿ ಭಾರತವು 20ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಕ್ರೀಡಾಕೂಟಗಳನ್ನು ಯಶಸ್ವಿಯಾಗಿ ಆಯೋಜಿಸಿರುವುದು, ದೇಶದ ಸಂಘಟನೆ ಮತ್ತು ನಿರ್ವಹಣಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ವಿಶೇಷವಾಗಿ ಫಿಫಾ ಯು-17 ವಿಶ್ವಕಪ್, ಹಾಕಿ ವಿಶ್ವಕಪ್ ಮತ್ತು ಪ್ರತಿಷ್ಠಿತ ಚೆಸ್ ಪಂದ್ಯಾವಳಿಗಳ ಯಶಸ್ವಿ ಆಯೋಜನೆ ಮೂಲಕ ಭಾರತ ತನ್ನ ನಿರ್ವಹಣಾ ಶಕ್ತಿಯನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಿದೆ. ಈ ಎಲ್ಲ ಸಾಧನೆಗಳ ಹಿನ್ನಲೆಯಲ್ಲಿ, 2036ರಲ್ಲಿ ಒಲಿಂಪಿಕ್ಸ್ ಆತಿಥ್ಯ ವಹಿಸಿ ಭಾರತವನ್ನು ಜಾಗತಿಕ ಕ್ರೀಡಾ ಹಬ್ (Sports Hub) ಆಗಿ ರೂಪಿಸುವುದು ಸರ್ಕಾರದ ಸ್ಪಷ್ಟ ಗುರಿಯಾಗಿದೆ.

* ಈ ಆಟಮೇಳದಲ್ಲಿ 58 ತಂಡಗಳು ಪಾಲ್ಗೊಳ್ಳಲಿದ್ದು, ಭಾರತ ತನ್ನ ಸಂಪೂರ್ಣ ಸಾಮರ್ಥ್ಯವನ್ನು ಬಳಸಿ ಉತ್ತಮ ಆಯೋಜನೆ ಮತ್ತು ಪ್ರವಾಸಿ ಅನುಭವವನ್ನು ಒದಗಿಸಲು ಸಿದ್ಧವಾಗುತ್ತಿದೆ. ಇದು ದೇಶದ ಕ್ರೀಡಾ ಚಟುವಟಿಕೆಗಳಲ್ಲಿ ಹೊಸ ಪ್ರಗತಿಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸ್ಥಾನವನ್ನು ಮತ್ತಷ್ಟು ಬಲಪಡಿಸುವ ಮಹತ್ವಪೂರ್ಣ ಪ್ರಯತ್ನವಾಗಿದೆ.

* ಒಲಿಂಪಿಕ್ಸ್ ಆತಿಥ್ಯದ ಪ್ರಕ್ರಿಯೆ (Exam Point of View) ತಿಳಿದುಕೊಳ್ಳುವುದು ಅತ್ಯಂತ ಮಹತ್ವದ್ದು: ಒಲಿಂಪಿಕ್ ಆಟಗಳ ಆತಿಥೇಯ ರಾಷ್ಟ್ರವನ್ನು ಆಯ್ಕೆ ಮಾಡುವ ಅಂತಿಮ ಅಧಿಕಾರ ಸ್ವಿಟ್ಜರ್ಲೆಂಡ್‌ನ ಲೌಸನ್ನೆ ಮೂಲದ IOC (ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ)ಗಿದೆ. ಭಾರತದ ಪರವಾಗಿ ಈ ಪ್ರಕ್ರಿಯೆಯನ್ನು ಅಧಿಕೃತವಾಗಿ ಆರಂಭಿಸಲು ಭಾರತೀಯ ಒಲಿಂಪಿಕ್ ಸಂಸ್ಥೆ (IOA), IOCಗೆ ಆಸಕ್ತಿಯ ಪತ್ರ (Letter of Intent) ಸಲ್ಲಿಸಬೇಕಾಗುತ್ತದೆ. ಪ್ರಸ್ತುತ ಹಂತದಲ್ಲಿ, ಗುಜರಾತ್‌ನ ಅಹಮದಾಬಾದ್ ನಗರವನ್ನು ಒಲಿಂಪಿಕ್ಸ್‌ನ ಪ್ರಮುಖ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಸಾಧ್ಯತೆಗಳಿವೆ.

## ಸೂರ್ಯಾಸ್ತ್ರ ರಾಕೆಟ್ ಲಾಂಚರ್: ಭಾರತೀಯ ಸೇನೆಯ ಬತ್ತಳಿಕೆಗೆ ಹೊಸ 'ಸ್ವದೇಶಿ' ಶಕ್ತಿ!



* ಭಾರತೀಯ ಸೇನೆಯು ತನ್ನ ಫಿರಂಗಿ ದಳವನ್ನು (Artillery) ಮತ್ತಷ್ಟು ಬಲಪಡಿಸಲು ಮತ್ತು ಶತ್ರುಗಳ ಪಾಳಯದ ಮೇಲೆ ನಿಖರ ದಾಳಿ ನಡೆಸಲು 'ಸೂರ್ಯಾಸ್ತ್ರ' (Suryastra) ಎಂಬ ಅತ್ಯಾಧುನಿಕ ರಾಕೆಟ್ ಲಾಂಚರ್ ವ್ಯವಸ್ಥೆಯನ್ನು ಖರೀದಿಸಲು ಸಜ್ಜಾಗಿದೆ. ಈ ಸಂಬಂಧ ಪುಣೆ ಮೂಲದ ಖಾಸಗಿ ರಕ್ಷಣಾ ತಯಾರಿಕಾ ಸಂಸ್ಥೆಯಾದ NIBE ಲಿಮಿಟೆಡ್ ಜೊತೆ ಸೇನೆಯು ₹293 ಕೋಟಿ ಮೊತ್ತದ ಬೃಹತ್ ಒಪ್ಪಂದಕ್ಕೆ ಸಹಿ ಹಾಕಿದೆ.

* 'ಸೂರ್ಯಾಸ್ತ್ರ' - ವಿಶೇಷತೆಗಳೇನು?

ಈ ರಾಕೆಟ್ ಲಾಂಚರ್ ವ್ಯವಸ್ಥೆ ಭಾರತದ ರಕ್ಷಣಾ ಕ್ಷೇತ್ರದಲ್ಲಿ 'ಆತ್ಮನಿರ್ಭರತೆ' ಯ ಶಕ್ತಿಶಾಲಿ ಸಂಕೇತವಾಗಿದ್ದು, ಅದರ ಪ್ರಮುಖ ತಾಂತ್ರಿಕ ಹೈಲೈಟ್‌ಗಳು ಗಮನಾರ್ಹವಾಗಿವೆ: ಇದು 150 ಕಿಲೋಮೀಟರ್ ಮತ್ತು 300 ಕಿಲೋಮೀಟರ್ ವ್ಯಾಪ್ತಿಯೊಳಗಿನ ಗುರಿಗಳನ್ನು ಧ್ವಂಸ ಮಾಡುವ ಸಾಮರ್ಥ್ಯ ಹೊಂದಿದೆ. ಬಹು-ಕ್ಯಾಲಿಬರ್ 'ಯುನಿವರ್ಸಲ್ ಲಾಂಚರ್' ಆಗಿರುವುದರಿಂದ, ಒಂದೇ ಪ್ಲಾಟ್‌ಫಾರ್ಮ್‌ನಿಂದ 122mm, 160mm ಮತ್ತು 306mm ರಾಕೆಟ್‌ಗಳನ್ನು ಉಡಾಯಿಸಬಹುದು. ಇದರ ಅತ್ಯುನ್ನತ ನಿಖರತೆಯನ್ನು ಸೂಚಿಸುವಂತೆ ಸರ್ಕ್ಯುಲರ್ ಎರರ್ ಪ್ರಾಬಬಲ್ (CEP) 5 ಮೀಟರ್‌ಗಿಂತ ಕಡಿಮೆ ಇದ್ದು, ಗುರಿಗೆ ಅತ್ಯಂತ ಸಮೀಪದಲ್ಲಿ ದಾಳಿ ಸಾಧ್ಯವಾಗುತ್ತದೆ. ಇದಲ್ಲದೆ, ಕೇವಲ ರಾಕೆಟ್‌ಗಳಿಗೆ ಸೀಮಿತವಾಗದೆ, 100 ಕಿಮೀ ವ್ಯಾಪ್ತಿಯ 'ಲೋಯಿಟರಿಂಗ್ ಮ್ಯೂನಿಷನ್' ಗಳು (ಕಾದು ಕುಳಿತು ದಾಳಿ ಮಾಡುವ ಡ್ರೋನ್‌ಗಳು)ನ್ನೂ ಉಡಾಯಿಸುವ ಸಾಮರ್ಥ್ಯ ಈ ವ್ಯವಸ್ಥೆಗೆ ಇದೆ.

* ತಂತ್ರಜ್ಞಾನದ ಹಿನ್ನಲೆ ಮತ್ತು ಒಪ್ಪಂದ ದೃಷ್ಟಿಯಿಂದ, ಈ ಯೋಜನೆ ಭಾರತ ಮತ್ತು ಇಸ್ರೇಲ್ ರಕ್ಷಣಾ ಸಹಯೋಗದ ಅತ್ಯುತ್ತಮ ಉದಾಹರಣೆ. NIBE ಲಿಮಿಟೆಡ್ ಸಂಸ್ಥೆ ಇಸ್ರೇಲ್‌ನ 'ಎಲ್ಬಿಟ್ ಸಿಸ್ಟಮ್ಸ್' (Elbit Systems) ಜೊತೆಗೆ ತಾಂತ್ರಿಕ ಒಪ್ಪಂದ ಮಾಡಿಕೊಂಡಿದ್ದು, ಇಸ್ರೇಲ್‌ನ ಪ್ರಸಿದ್ಧ 'PULS' (Precise & Universal Launching System) ತಂತ್ರಜ್ಞಾನವನ್ನು ಆಧರಿಸಿ ಸೂರ್ಯಾಸ್ತ್ರವನ್ನು ಭಾರತದಲ್ಲೇ ನಿರ್ಮಿಸುತ್ತಿದೆ. ಈ ಒಪ್ಪಂದವು ಸೇನೆಯ 'ತುರ್ತು ಖರೀದಿ ಅಧಿಕಾರ' ದ ಅಡಿಯಲ್ಲಿ ಕೈಗೊಳ್ಳಲ್ಪಟ್ಟಿದ್ದು, ಈ ಅಧಿಕಾರದಡಿ ₹300 ಕೋಟಿವರೆಗಿನ ಶಸ್ತ್ರಾಸ್ತ್ರಗಳನ್ನು ಯಾವುದೇ ಹೆಚ್ಚಿನ ಅನುಮತಿ ಇಲ್ಲದೆ ತ್ವರಿತವಾಗಿ ಖರೀದಿಸಬಹುದಾಗಿದೆ, ಇದರಿಂದ ರಕ್ಷಣಾ ಸಾಮರ್ಥ್ಯವನ್ನು ವೇಗವಾಗಿ ಉನ್ನತಿಗೊಳಿಸಲು ಸಾಧ್ಯವಾಗಿದೆ.

* ಪಿನಾಕ (Pinaka) ರಾಕೆಟ್ ವ್ಯವಸ್ಥೆಯ ನಂತರ, 'ಸೂರ್ಯಾಸ್ತ್ರ' ಸೇರ್ಪಡೆಯು ಭಾರತೀಯ ಸೇನೆಯ 'ಡೀಪ್-ಸ್ಟ್ರೈಕ್' (ದೂರದ ಗುರಿಗಳನ್ನು ಹೊಡೆಯುವ) ಸಾಮರ್ಥ್ಯವನ್ನು ಐತಿಹಾಸಿಕವಾಗಿ ಹೆಚ್ಚಿಸಲಿದೆ. ಇದು ಚೀನಾ ಮತ್ತು ಪಾಕಿಸ್ತಾನದ ಗಡಿಗಳಲ್ಲಿ ಭಾರತದ ರಕ್ಷಣಾ ಗೋಡೆಯನ್ನು ಇನ್ನಷ್ಟು ಭದ್ರಪಡಿಸಲಿದೆ.

## ಥಲಾಸೆಮಿಯಾ ಚಿಕಿತ್ಸೆಯಲ್ಲಿ ಕ್ರಾಂತಿ: ರಕ್ತಹೀನತೆ ತಡೆಗೆ ವಿಶ್ವದ ಮೊದಲ ಮೌಖಿಕ ಮಾತ್ರೆಗೆ FDA ಅನುಮೋದನೆ!



* ಥಲಾಸೆಮಿಯಾ ಎಂಬ ಜನ್ಮಜಾತ ರಕ್ತದ ಕಾಯಿಲೆಯಿಂದ ಬಳಲುತ್ತಿರುವ ಲಕ್ಷಾಂತರ ರೋಗಿಗಳಿಗೆ ವೈದ್ಯಕೀಯ ಲೋಕದಿಂದ ಸಿಹಿ ಸುದ್ದಿಯೊಂದು ಸಿಕ್ಕಿದೆ. ಅಮೆರಿಕದ ಪ್ರತಿಷ್ಠಿತ ಆಹಾರ ಮತ್ತು ಔಷಧ ಆಡಳಿತ ಸಂಸ್ಥೆ (US FDA) ಮೊದಲ ಬಾರಿಗೆ ಈ ಕಾಯಿಲೆಯ ಚಿಕಿತ್ಸೆಗಾಗಿ ಮೌಖಿಕವಾಗಿ ತೆಗೆದುಕೊಳ್ಳಬಹುದಾದ (Oral Pill) ಮಾತ್ರೆಯೊಂದಕ್ಕೆ ಅನುಮೋದನೆ ನೀಡಿದೆ. ಇದು ರೋಗಿಗಳು ಪದೇ ಪದೇ ರಕ್ತ ವರ್ಗಾವಣೆ (Blood Transfusion) ಮಾಡಿಸಿಕೊಳ್ಳುವ ಅನಿವಾರ್ಯತೆಯನ್ನು ತಪ್ಪಿಸುವ ನಿರೀಕ್ಷೆಯಿದೆ.

ಥಲಾಸೆಮಿಯಾ ಎಂದರೇನು?

ಥಲಾಸೆಮಿಯಾ ಎನ್ನುವುದು ಒಂದು ಆನುವಂಶಿಕ ರಕ್ತದ ಕಾಯಿಲೆಯಾಗಿದ್ದು, ಇದರಲ್ಲಿ ದೇಹವು ಸಾಕಷ್ಟು ಪ್ರಮಾಣದ ಹಿಮೋಗ್ಲೋಬಿನ್ ಅನ್ನು ಉತ್ಪಾದಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಕೆಂಪು ರಕ್ತಕಣಗಳು ಬೇಗನೆ ನಾಶವಾಗಿ ತೀವ್ರ ರಕ್ತಹೀನತೆ ಉಂಟಾಗುತ್ತದೆ.

* FDA ಅನುಮೋದನೆಯ ಮಹತ್ವ: US FDA, ಮಿಟಾಪಿವಾಟ್ (Mitapivat) ಎಂಬ ಔಷಧಿಯನ್ನು 'Aqvesme' ಎಂಬ ವ್ಯಾಪಾರ ಹೆಸರಿನಲ್ಲಿ ಅನುಮೋದಿಸಿದೆ. ಈ ಔಷಧಿ ವಯಸ್ಕರಲ್ಲಿನ ಆಲ್ಫಾ ಹಾಗೂ ಬೀಟಾ ಥಲಾಸೆಮಿಯಾ ಎರಡಕ್ಕೂ ಬಳಕೆಗೆ ಅನುಮೋದನೆಯಾಗಿದೆ. ರಕ್ತ ವರ್ಗಾವಣೆ ಅವಲಂಬಿತ ಹಾಗೂ ಅವಲಂಬಿತವಲ್ಲದ ಥಲಾಸೆಮಿಯಾ ರೂಪಗಳೆರಡಕ್ಕೂ ಅನುಮೋದನೆ ಪಡೆದ ಮೊದಲ ಔಷಧಿಯಿದು. ಇದುವರೆಗೆ ಥಲಾಸೆಮಿಯಾ ಚಿಕಿತ್ಸೆಯಲ್ಲಿ ನಿಯಮಿತ ರಕ್ತ ವರ್ಗಾವಣೆ ಮತ್ತು ಐರನ್ ಚೆಲೇಷನ್ ಚಿಕಿತ್ಸೆಯೇ ಪ್ರಮುಖವಾಗಿತ್ತು.

* ಮಿಟಾಪಿವಾಟ್ ಒಂದು ಪೈರುವೇಟ್ ಕೈನೇಸ್ ಆಕ್ಟಿವೇಟರ್ ಆಗಿದ್ದು, ರಕ್ತಕಣಗಳ ಒಳಗಿನ ಶಕ್ತಿಯ ಉತ್ಪಾದನಾ ವ್ಯವಸ್ಥೆಯನ್ನು ಸುಧಾರಿಸುತ್ತದೆ. ಥಲಾಸೆಮಿಯಾ ರೋಗಿಗಳಲ್ಲಿ ಕೆಂಪು ರಕ್ತಕಣಗಳು ಬೇಗನೆ ನಾಶವಾಗುವುದರಿಂದ ದೀರ್ಘಕಾಲೀನ ರಕ್ತಹೀನತೆ ಉಂಟಾಗುತ್ತದೆ. ಮಿಟಾಪಿವಾಟ್ ರಕ್ತಕಣಗಳ ಜೀವಿತಾವಧಿಯನ್ನು ಹೆಚ್ಚಿಸಿ, ಹಿಮೋಗ್ಲೋಬಿನ್ ಮಟ್ಟವನ್ನು ಸುಧಾರಿಸುವುದರೊಂದಿಗೆ ರಕ್ತ ವರ್ಗಾವಣೆಯ ಅಗತ್ಯವನ್ನು ಕಡಿಮೆ ಮಾಡುತ್ತದೆ.

* ವೈದ್ಯಕೀಯ ತಜ್ಞರ ಅಭಿಪ್ರಾಯ :

# ಪೋಸ್ಟ್‌ಗ್ರಾಜುಯೇಟ್ ಇನ್‌ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್, ನೋಯ್ಡಾದ ಡಾ. ಸತ್ಯಂ ಅರೋರಾ ಅವರು ಇದನ್ನು "ಥಲಾಸೆಮಿಯಾ ಚಿಕಿತ್ಸೆಯಲ್ಲಿ ಕ್ರಾಂತಿಕಾರಿ ಬದಲಾವಣೆ" ಎಂದು ವರ್ಣಿಸಿದ್ದಾರೆ. ಒಂದೇ ಮೌಖಿಕ ಮಾತ್ರೆಯ ಮೂಲಕ ರೋಗ ನಿರ್ವಹಣೆಯ ಸಾಧ್ಯತೆ ಈ ಔಷಧಿ ನೀಡುತ್ತದೆ ಎಂದು ಅವರು ತಿಳಿಸಿದ್ದಾರೆ.

# ಹೆಮಟಾಲಜಿಸ್ಟ್ ಡಾ. ರಾಹುಲ್ ಭಾರ್ಗವ ಅವರ ಪ್ರಕಾರ, ಇದು ಕೇವಲ ಲಕ್ಷಣಗಳನ್ನು ನಿಯಂತ್ರಿಸುವುದಕ್ಕಿಂತ ಮುಂದೆ ಹೋಗಿ, ರೋಗದ ಮೂಲ ಕೋಶಮಟ್ಟದ ಸಮಸ್ಯೆಯನ್ನು ಪರಿಹರಿಸುವ ಮೊದಲ ಔಷಧಿಯಾಗಿದ್ದು, ರೋಗಿಗಳ ಜೀವನಮಟ್ಟದಲ್ಲಿ ಮಹತ್ತರ ಬದಲಾವಣೆ ತರಬಹುದು.

* ಭಾರತಕ್ಕೆ ವಿಶೇಷ ಮಹತ್ವ: ಭಾರತದಲ್ಲಿ ಜಗತ್ತಿನ ಒಟ್ಟು ಥಲಾಸೆಮಿಯಾ ರೋಗಿಗಳಲ್ಲಿ ಸುಮಾರು ಒಂದು-ಎಂಟು ಭಾಗ ರೋಗಿಗಳು ಇದ್ದಾರೆ. ಈ ಹೊಸ ಮೌಖಿಕ ಚಿಕಿತ್ಸೆ ರಕ್ತದ ಬೇಡಿಕೆಯನ್ನು ಕಡಿಮೆ ಮಾಡುವುದರೊಂದಿಗೆ, ರಕ್ತ ವರ್ಗಾವಣೆಯಿಂದ ಉಂಟಾಗುವ ಸಮಸ್ಯೆಗಳನ್ನು ತಗ್ಗಿಸಿ, ದೀರ್ಘಕಾಲೀನ ಆರೋಗ್ಯ ಫಲಿತಾಂಶಗಳನ್ನು ಉತ್ತಮಗೊಳಿಸುವ ನಿರೀಕ್ಷೆ ಇದೆ. ರೋಗಿಗಳ ಹಕ್ಕುಗಳಿಗಾಗಿ ಹೋರಾಡುವ ಸಂಘಟನೆಗಳು ಭಾರತದಲ್ಲಿಯೂ ಶೀಘ್ರ ಲಭ್ಯತೆ ದೊರಕಲಿ ಎಂದು ಆಶಿಸುತ್ತಿದ್ದು, ಇದನ್ನು ರೋಗಿ ಕೇಂದ್ರಿತ ಮತ್ತು ದೀರ್ಘಕಾಲಿಕ ಚಿಕಿತ್ಸೆಯತ್ತ ದೊಡ್ಡ ಹೆಜ್ಜೆಯೆಂದು ಪರಿಗಣಿಸುತ್ತಿವೆ.

## ಅಂಗಾಂಗ ದಾನದಲ್ಲಿ ಕರ್ನಾಟಕ ಇತಿಹಾಸ ನಿರ್ಮಾಣ – 2025ರಲ್ಲಿ ದಾಖಲೆ ಸಾಧನೆ



* 2025ರಲ್ಲಿ ಕರ್ನಾಟಕ ರಾಜ್ಯವು ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಮೈಲುಗಲ್ಲನ್ನು ಸಾಧಿಸಿದೆ. ಈ ವರ್ಷ ರಾಜ್ಯದಲ್ಲಿ 198 ಅಂಗಾಂಗ ದಾನಿಗಳು ನೋಂದಾಯಿತರಾಗಿ, ಇದುವರೆಗೆ ಕಂಡ ಅತ್ಯಧಿಕ ವಾರ್ಷಿಕ ದಾನದ ದಾಖಲೆಯನ್ನು ನಿರ್ಮಿಸಿದೆ. ಸಾರ್ವಜನಿಕ ಜಾಗೃತಿ ಹೆಚ್ಚಳ, ಆಸ್ಪತ್ರೆಗಳ ನಡುವಿನ ಉತ್ತಮ ಸಮನ್ವಯ ಮತ್ತು ಸಂಸ್ಥಾತ್ಮಕ ಬೆಂಬಲ ವ್ಯವಸ್ಥೆಗಳ ಬಲವರ್ಧನೆಯೇ ಈ ಸಾಧನೆಗೆ ಪ್ರಮುಖ ಕಾರಣಗಳಾಗಿವೆ.

* ಈ ಮಹತ್ವದ ಸಾಧನೆ ಕರ್ನಾಟಕದ ರಾಜ್ಯ ಅಂಗಾಂಗ ಮತ್ತು ಉತ್ಕೃಷ್ಟ ದಾನ ಸಂಸ್ಥೆಯಾದ 'ಜೀವಸಾರ್ಥಕತೆ' (SOTTO)ಯ ಮೂಲಕ ಸಾಧ್ಯವಾಯಿತು. 198 ದಾನಿಗಳೊಂದಿಗೆ ಕರ್ನಾಟಕವು ರಾಜ್ಯವಾರು ಅಂಗಾಂಗ ದಾನದಲ್ಲಿ ತಮಿಳುನಾಡು ಮತ್ತು ತೆಲಂಗಾಣದ ನಂತರ ದೇಶದಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ. ಇದು 2023ರ 178 ದಾನಿಗಳ ದಾಖಲೆಯನ್ನು ಮೀರಿಸಿದ್ದು, 2024ರಲ್ಲಿ ದಾಖಲಾಗಿದ್ದ 162 ದಾನಿಗಳಿಂದ ನಿರಂತರ ಪ್ರಗತಿಯನ್ನು ತೋರಿಸುತ್ತದೆ.

* ಒಟ್ಟು 198 ದಾನಿಗಳಲ್ಲಿ 150 ಪುರುಷರು ಮತ್ತು 48 ಮಹಿಳೆಯರು ಸೇರಿದ್ದಾರೆ. ದಾನಗೊಂಡ ಅಂಗಾಂಗಗಳಲ್ಲಿ ಕಿಡ್ನಿಗಳು ಪ್ರಮುಖವಾಗಿದ್ದು, 306 ಕಿಡ್ನಿ ಪ್ರತಿರೋಪಣೆಗಳು ನಡೆಯಿವೆ. ಇದರೊಂದಿಗೆ 288 ಕೋರ್ನಿಯಾ, 167 ಲಿವರ್, 76 ಹೃದಯ ಕವಾಟಗಳು, 50 ಹೃದಯಗಳು, 29 ಶ್ವಾಸಕೋಶಗಳು, 33 ಚರ್ಮದ ಗ್ರಾಫ್ಟ್‌ಗಳು, ಎರಡು ಎಲುಬು ದಾನಗಳು ಹಾಗೂ ಒಂದು ಸಣ್ಣ ಅಂತ್ರ ದಾನವೂ ನಡೆದಿದೆ. ಇದು ದಾನಿ ಆಸ್ಪತ್ರೆಗಳು, ಪ್ರತಿರೋಪಣಾ ಕೇಂದ್ರಗಳು ಮತ್ತು ಶಸ್ತ್ರಚಿಕಿತ್ಸಾ ತಂಡಗಳ ನಡುವಿನ ಉತ್ತಮ ಸಮನ್ವಯವನ್ನು ಪ್ರತಿಬಿಂಬಿಸುತ್ತದೆ.

* ನಗರ ಕೇಂದ್ರೀಕರಣ ಮತ್ತು ವಿಸ್ತರಣಾ ಯೋಜನೆ : ಅಂಗಾಂಗ ದಾನದ 80–85 ಶೇಕಡಾ ಪ್ರಕರಣಗಳು ಬೆಂಗಳೂರು ನಗರದಿಂದಲೇ ಸಂಭವಿಸುತ್ತಿದ್ದು, ಮೈಸೂರು ಸೇರಿದಂತೆ ಇತರ ನಗರಗಳ ಪಾಲು ಕಡಿಮೆ ಇದೆ. ಈ ಹಿನ್ನೆಲೆಯಲ್ಲಿ 2026ರಲ್ಲಿ ಪ್ರಮುಖ ನಗರಗಳ ಹೊರತಾಗಿ ದಾನದ ವ್ಯಾಪ್ತಿಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಜಿಲ್ಲಾಮಟ್ಟದ ಜಾಗೃತಿ ಅಭಿಯಾನಗಳು, ವೈದ್ಯಕೀಯ ಕಾಲೇಜು ಆಸ್ಪತ್ರೆಗಳ ಹೆಚ್ಚಿನ ಪಾಲ್ಗೊಳ್ಳುವಿಕೆ ಮತ್ತು ನಾನ್-ಟ್ರಾನ್ಸ್‌ಪ್ಲಾಂಟ್ ಹ್ಯೂಮನ್ ಆರ್ಗನ್ ರಿಟ್ರೀವಲ್ ಸೆಂಟರ್‌ಗಳು (NTHORCs) ಬಲಪಡಿಸುವುದು ಪ್ರಮುಖ ಯೋಜನೆಗಳಾಗಿವೆ.

* ಬೇಡಿಕೆ-ಪೂರೈಕೆ ಅಂತರ ಕಡಿಮೆ ಮಾಡುವ ಪ್ರಯತ್ನ : ದಾಖಲೆ ಸಾಧನೆಯ ಹೊರತಾಗಿಯೂ, ಕರ್ನಾಟಕದಲ್ಲಿ ಇನ್ನೂ ಸುಮಾರು 5,500 ರೋಗಿಗಳು ಅಂಗಾಂಗ ಪ್ರತಿರೋಪಣೆಗೆ ಕಾಯುತ್ತಿದ್ದಾರೆ. ಇದರಲ್ಲಿ ಸುಮಾರು 4,700 ಕಿಡ್ನಿ ಮತ್ತು 650 ಲಿವರ್ ರೋಗಿಗಳು ಸೇರಿದ್ದಾರೆ. ಈ ಅಂತರವನ್ನು ಕಡಿಮೆ ಮಾಡಲು SOTTO ಪೊಲೀಸರು ಇಲಾಖೆಯೊಂದಿಗೆ ಕೈಜೋಡಿಸಿ ಅಪಘಾತ ಸಂಭವಿಸುವ ಪ್ರದೇಶಗಳನ್ನು ಗುರುತಿಸುವ ಕಾರ್ಯ ನಡೆಸುತ್ತಿದೆ. ಜೊತೆಗೆ, ವಿದ್ಯಾರ್ಥಿಗಳಲ್ಲಿ ಅಂಗಾಂಗ ದಾನ ಸಂಕಲ್ಪವನ್ನು ಉತ್ತೇಜಿಸಲು ಉನ್ನತ ಶಿಕ್ಷಣ ಇಲಾಖೆಯೊಂದಿಗೆ ಸಹಕಾರದ ಯೋಜನೆಗಳನ್ನೂ ಪರಿಶೀಲಿಸಲಾಗುತ್ತಿದೆ.

* ಈ ಸಾಧನೆಯು ಕರ್ನಾಟಕವನ್ನು ಅಂಗಾಂಗ ದಾನದ ಕ್ಷೇತ್ರದಲ್ಲಿ ದೇಶದ ಪ್ರಮುಖ ರಾಜ್ಯಗಳ ಪೈಕಿ ಒಂದಾಗಿ ಸ್ಥಾಪಿಸಿದ್ದು, ಭವಿಷ್ಯದಲ್ಲಿ ಇನ್ನಷ್ಟು ಜೀವಗಳನ್ನು ಉಳಿಸುವ ನಂಬಿಕೆಯನ್ನು ಮೂಡಿಸಿದೆ.

## 06 Jan 2026

### ಹೂಡಿಕೆ ತಾಣವಾಗಿ ಆಂಧ್ರಪ್ರದೇಶ ನಂ.1: ಮಹಾರಾಷ್ಟ್ರ, ಗುಜರಾತ್ ಹಿಂದಿಕ್ಕಿ ಇತಿಹಾಸ ಬರೆದ ಚಂದ್ರಬಾಬು ನಾಯ್ಡು ಸರ್ಕಾರ!




* ಭಾರತದ ಕೈಗಾರಿಕಾ ಭೂಪಟದಲ್ಲಿ ದಕ್ಷಿಣದ ರಾಜ್ಯವೊಂದು ದೈತ್ಯ ಹೆಜ್ಜೆ ಇಟ್ಟಿದೆ. 2025-26ನೇ ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳುಗಳಲ್ಲಿ ಆಂಧ್ರಪ್ರದೇಶವು ದೇಶದ ಅತ್ಯಂತ ಆಕರ್ಷಕ ಹೂಡಿಕೆ ತಾಣವಾಗಿ ಹೊರಹೊಮ್ಮಿದೆ. ಬ್ಯಾಂಕ್ ಆಫ್ ಬರೋಡಾ (BoB) ಬಿಡುಗಡೆ ಮಾಡಿದ ಇತ್ತೀಚಿನ ವರದಿಯ ಪ್ರಕಾರ, ಗುಜರಾತ್ ಮತ್ತು ಮಹಾರಾಷ್ಟ್ರದಂತಹ ಸಾಂಪ್ರದಾಯಿಕ ಕೈಗಾರಿಕಾ ದೈತ್ಯರನ್ನು ಹಿಂದಿಕ್ಕಿ ಆಂಧ್ರಪ್ರದೇಶವು ಪ್ರಥಮ ಸ್ಥಾನ ಅಲಂಕರಿಸಿದೆ.

* ಹೂಡಿಕೆ ಹಂಚಿಕೆ: ರಾಜ್ಯವಾರು ಅಂಕಿ-ಅಂಶಗಳು ದೇಶದಾದ್ಯಂತ ಒಟ್ಟು ₹26.6 ಲಕ್ಷ ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು, ಅವುಗಳಲ್ಲಿ ಆಂಧ್ರಪ್ರದೇಶವು 25.3% ಹೂಡಿಕೆ ಪಾಲಿನೊಂದಿಗೆ ಮೊದಲ ಸ್ಥಾನದಲ್ಲಿದೆ. ಅದರ ಬಳಿಕ ಒಡಿಶಾ 13.1% ಪಾಲು ಪಡೆದು ಎರಡನೇ ಸ್ಥಾನದಲ್ಲಿದ್ದು, ಮಹಾರಾಷ್ಟ್ರ 12.8% ಹೂಡಿಕೆ ಪಾಲಿನೊಂದಿಗೆ ಮೂರನೇ ಸ್ಥಾನದಲ್ಲಿದೆ.

ಗಮನಾರ್ಹವೆಂದರೆ, ಈ ಮೂರು ರಾಜ್ಯಗಳೇ ದೇಶದ ಅರ್ಧದಷ್ಟು (51.2%) ಹೂಡಿಕೆಯನ್ನು ಸೆಳೆದಿವೆ. ಇತ್ತ ಕರ್ನಾಟಕ (2.1%) ಮತ್ತು ಉತ್ತರ ಪ್ರದೇಶ (2.7%) ಹೂಡಿಕೆ ಆಕರ್ಷಿಸುವಲ್ಲಿ ಈ ಬಾರಿ ಹಿಂದೆ ಬಿದ್ದಿರುವುದು ಗೋಚರಿಸುತ್ತದೆ.

* ಆಂಧ್ರಪ್ರದೇಶದ ಯಶಸ್ಸಿನ ಗುಟ್ಟು — 'ಸ್ಪೀಡ್ ಆಫ್ ಡೂಯಿಂಗ್ ಬಿಸಿನೆಸ್' ಆಗಿದ್ದು, ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಆಡಳಿತ ಕೇವಲ Ease of Doing Businessಗೆ ಸೀಮಿತವಾಗದೆ, ವೇಗವಾಗಿ ನಿರ್ಧಾರಗಳು ಮತ್ತು ಅನುಷ್ಠಾನ ಎಂಬ ತತ್ವವನ್ನು ಅಳವಡಿಸಿಕೊಂಡಿದೆ. ಹೂಡಿಕೆದಾರರಿಗೆ ನೀಡುವ ಸಬ್ಸಿಡಿ ಹಾಗೂ ಪ್ರೋತ್ಸಾಹಧನದಲ್ಲಿ ವಿಳಂಬ ತಪ್ಪಿಸಲು 'ಎಸ್ಕ್ರೋ' (Escrow) ಆಧಾರಿತ ಡಿಜಿಟಲ್ ಪಾವತಿ ವ್ಯವಸ್ಥೆ' ಜಾರಿಗೆ ತರಲಾಗಿದೆ. ಜೊತೆಗೆ, 'ಸಿಂಗಲ್ ವಿಂಡೋ 2.0' ವ್ಯವಸ್ಥೆಯ ಮೂಲಕ ಅಗತ್ಯ ಪರವಾನಗಿಗಳನ್ನು ಅತಿ ಕಡಿಮೆ ಸಮಯದಲ್ಲಿ ನೀಡಲಾಗುತ್ತಿದ್ದು, ಆಡಳಿತಾತ್ಮಕ ವಿಳಂಬ (Red Tapism)ವನ್ನು ಬಹುತೇಕ ನಿವಾರಿಸಲಾಗಿದೆ. ಇದಕ್ಕು ಸೇರಿ, ವಿಶಾಖಪಟ್ಟಣಂ-ಚೆನ್ನೈ ಕೈಗಾರಿಕಾ ಕಾರಿಡಾರ್ (VCIC) ಹಾಗೂ ಸುದೀರ್ಘ ಸಮುದ್ರ ತೀರವು ಹಸಿರು ಇಂಧನ ಮತ್ತು ಡೇಟಾ ಸೆಂಟರ್ ಹೂಡಿಕೆದಾರರಿಗೆ ದೊಡ್ಡ ಆಕರ್ಷಣೆಯಾಗಿ ಪರಿಣಮಿಸಿದೆ.

* ಬದಲಾಗುತ್ತಿರುವ ಕೈಗಾರಿಕಾ ಭೌಗೋಳಿಕತೆ: ಈ ವರದಿಯು ಭಾರತದ ಕೈಗಾರಿಕಾ ಕೇಂದ್ರವು ಪಶ್ಚಿಮದಿಂದ ಈಗ ದಕ್ಷಿಣ ಮತ್ತು ಪೂರ್ವ ಭಾರತದ ಕಡೆಗೆ ಸರಿಯುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ. ಆಂಧ್ರದ ಬಂದರು ಆಧಾರಿತ ಅಭಿವೃದ್ಧಿ ಮಾದರಿಯು ಜಾಗತಿಕ ಕಂಪನಿಗಳನ್ನು ಆಕರ್ಷಿಸುತ್ತಿದೆ.

* ಆಂಧ್ರಪ್ರದೇಶವು ಕೈಗಾರಿಕಾ ಸ್ನೇಹಿ ನೀತಿಗಳ ಮೂಲಕ ಹೂಡಿಕೆದಾರರ ನೆಚ್ಚಿನ ತಾಣವಾಗಿ ಮಾರ್ಪಟ್ಟಿದೆ. ಇದು ನೆರೆಯ ರಾಜ್ಯಗಳಿಗೂ ಸ್ಪರ್ಧಾತ್ಮಕ ವಾತಾವರಣವನ್ನು ನಿರ್ಮಿಸಿದ್ದು, ಒಟ್ಟಾರೆಯಾಗಿ ಭಾರತದ ಜಿಡಿಪಿ (GDP) ಬೆಳವಣಿಗೆಗೆ ಪೂರಕವಾಗಿದೆ.

### GIMS ಗ್ರೇಟರ್ ನೋಯ್ಡಾದಲ್ಲಿ ಭಾರತದ ಮೊದಲ AI ಕ್ಲಿನಿಕ್ ಉದ್ಘಾಟನೆ: ಆರೋಗ್ಯ ಕ್ಷೇತ್ರದಲ್ಲಿ ಹೊಸ ಕ್ರಾಂತಿ!




* ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದಲ್ಲಿರುವ ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆ (GIMS) ದೇಶದ ಮೊದಲ ಕೃತಕ ಬುದ್ಧಿಮತ್ತೆ ಚಿಕಿತ್ಸಾಲಯವನ್ನು ಉದ್ಘಾಟಿಸಲಾಗಿದೆ. ಇದು ದೇಶದ ಮೊದಲ ಸರ್ಕಾರಿ ಆಧಾರಿತ AI ಚಿಕಿತ್ಸಾಲಯವಾಗಿದ್ದು, ಆರೋಗ್ಯ ಕ್ಷೇತ್ರದಲ್ಲಿ AI ಅನ್ನು ಸಂಯೋಜಿಸುವಲ್ಲಿ ಇದು ಒಂದು ಪ್ರಮುಖ ಮತ್ತು ಮಹತ್ವದ ಹೆಜ್ಜೆ ಎಂದು ತಜ್ಞರು ಪರಿಗಣಿಸಿದ್ದಾರೆ.

* ವರದಿಯ ಪ್ರಕಾರ, ಕ್ಯಾನ್ಸರ್ ಮತ್ತು ಹೃದಯ, ಮೂತ್ರಪಿಂಡ ಮತ್ತು ಯಕೃತ್ತಿನ ಕಾಯಿಲೆಗಳಂತಹ ಗಂಭೀರ ಕಾಯಿಲೆಗಳನ್ನು ಆರಂಭಿಕ ಹಂತದಲ್ಲಿ ಪತ್ತೆಹಚ್ಚಲು ಮತ್ತು ಚಿಕಿತ್ಸೆ ನೀಡಲು ಈ ಚಿಕಿತ್ಸಾಲಯವು ಕೃತಕ ಬುದ್ಧಿಮತ್ತೆ ಮತ್ತು ಜೆನೆಟಿಕ್ ಸ್ಕ್ರೀನಿಂಗ್ ಅನ್ನು ಬಳಸುತ್ತದೆ. ಇದು ರಕ್ತ ಪರೀಕ್ಷೆಗಳನ್ನು ವಿಶ್ಲೇಷಿಸುತ್ತದೆ, ಸ್ಕ್ಯಾನ್‌ಗಳನ್ನು ನಡೆಸುತ್ತದೆ ಮತ್ತು ರೋಗಗಳನ್ನು ಊಹಿಸಲು ಮತ್ತು ಚೇತರಿಕೆಯನ್ನು ನಿರ್ಣಯಿಸಲು ಜೆನೆಟಿಕ್ ಡೇಟಾವನ್ನು ಬಳಸುತ್ತದೆ.

* AI ಕ್ಲಿನಿಕ್ ಎಂದರೇನು?

AI ಕ್ಲಿನಿಕ್ ಎಂದರೆ ಕಂಪ್ಯೂಟರೀಕೃತ ಮತ್ತು ಆಟೊಮೇಷನ್ ಮೂಲಕ ರೋಗನಿರ್ಣಯ, ಚಿಕಿತ್ಸೆ ಮತ್ತು ರೋಗಿಗಳ ನಿರ್ವಹಣೆಯನ್ನು ಸುಧಾರಿಸುವ ಒಂದು ವ್ಯವಸ್ಥೆ. ಈ ಕ್ಲಿನಿಕ್‌ಗಳು ಸಾಮಾನ್ಯವಾಗಿ ಸ್ವತಂತ್ರ ಘಟಕಗಳಾಗಿರುತ್ತವೆ ಅಥವಾ ಆಸ್ಪತ್ರೆಗಳೊಂದಿಗೆ ಸಂಯೋಜನೆಗೊಂಡಿರುತ್ತವೆ. ಇಲ್ಲಿ AI ವ್ಯವಸ್ಥೆಗಳು ರೋಗಿಗಳ ಲಕ್ಷಣಗಳನ್ನು ಪರೀಕ್ಷಿಸಿ ಸೂಕ್ತ ಔಷಧಿಗಳನ್ನು ಅಥವಾ ಉನ್ನತ ಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳುವಂತೆ ಸೂಚಿಸುತ್ತದೆ. ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಕಡಿಮೆ ಸೇವೆ ವೈದ್ಯರು ಇರುವ ಪ್ರದೇಶಗಳಲ್ಲಿ. ಇಲ್ಲಿ ಈ ಕ್ಲಿನಿಕ್‌ಗಳು ಹೆಚ್ಚು ಉಪಯುಕ್ತ ಎನ್ನಬಹುದು.

* AI ಕ್ಲಿನಿಕ್‌ನ ಪ್ರಯೋಜನಗಳು :

=> ವೈದ್ಯಕೀಯ ನಾವೀನ್ಯತೆ: ಲ್ಯಾಬೊರೇಟರಿಗಳಲ್ಲಿ ನಡೆಯುವ ಸಂಶೋಧನೆಗಳನ್ನು ನೇರವಾಗಿ ರೋಗಿಗಳ ಚಿಕಿತ್ಸೆಗೆ (Bedside Application) ಬಳಸುವಂತೆ ಮಾಡುವುದು ಈ ಕ್ಲಿನಿಕ್‌ನ ಮುಖ್ಯ ಉದ್ದೇಶ.

=> ಸ್ಟಾರ್ಟ್‌ಅಪ್‌ಗಳಿಗೆ ವೇದಿಕೆ: ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವ ನವೋದ್ಯಮಗಳಿಗೆ (Startups) ತಮ್ಮ AI ತಂತ್ರಜ್ಞಾನಗಳನ್ನು ನೈಜ ಆಸ್ಪತ್ರೆ ಪರಿಸರದಲ್ಲಿ ಪರೀಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಇದು ಅವಕಾಶ ನೀಡುತ್ತದೆ.

=> ನಿಖರವಾದ ರೋಗನಿರ್ಣಯ: ಮೆಡಿಕಲ್ ಇಮೇಜಿಂಗ್ (Medical Imaging) ಮತ್ತು ಡೇಟಾ ಆಧಾರಿತ ವಿಶ್ಲೇಷಣೆಯ ಮೂಲಕ ರೋಗಗಳನ್ನು ಮೊದಲೇ ಪತ್ತೆಹಚ್ಚಲು ಮತ್ತು ನಿಖರ ಚಿಕಿತ್ಸೆ ನೀಡಲು ಇದು ಸಹಕಾರಿ.

=> ದಕ್ಷತೆ ಹೆಚ್ಚಳ: ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಿರುತ್ತದೆ. AI ಬಳಕೆಯಿಂದ ವೈದ್ಯರ ಕೆಲಸದ ಹೊರೆ ಕಡಿಮೆಯಾಗಿ, ಆಸ್ಪತ್ರೆಯ ಕಾರ್ಯದಕ್ಷತೆ ಹೆಚ್ಚಾಗುತ್ತದೆ.

* ಜನವರಿ 6 ರಂದು ಈ ಕ್ಲಿನಿಕ್ ಭೌತಿಕವಾಗಿ (Physical Launch) ಕಾರ್ಯಾರಂಭ ಮಾಡಲಿದ್ದು, ವೈದ್ಯಕೀಯ ಲೋಕದಲ್ಲಿ ತಂತ್ರಜ್ಞಾನದ ಹೊಸ ಅಧ್ಯಾಯಕ್ಕೆ ನಾಂದಿ ಹಾಡಲಿದೆ.

## ಜನವರಿ 6: ವಿಶ್ವ ಯುದ್ಧ ಅನಾಥರ ದಿನ




* ಯುದ್ಧ ಮತ್ತು ಸಶಸ್ತ್ರ ಸಂಘರ್ಷಗಳಿಂದಾಗಿ ಪೋಷಕರನ್ನು ಕಳೆದುಕೊಂಡ ಮಕ್ಕಳ ಕಷ್ಟಗಳು ಹಾಗೂ ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿವರ್ಷ ಜನವರಿ 6 ರಂದು 'ವಿಶ್ವ ಯುದ್ಧ ಅನಾಥರ ದಿನ' ವನ್ನು ಆಚರಿಸಲಾಗುತ್ತದೆ. ಈ ದಿನವನ್ನು ಫ್ರಾನ್ಸ್‌ನ 'SOS Enfants en Détresses' ಎಂಬ ಸಂಸ್ಥೆ ಮೊದಲಿಗೆ ಆರಂಭಿಸಿತು. ಯುದ್ಧ ಪೀಡಿತ ಪ್ರದೇಶಗಳಲ್ಲಿ ಬದುಕುತ್ತಿರುವ ಮಕ್ಕಳ ದುಸ್ಥಿತಿಯನ್ನು ಜಗತ್ತಿಗೆ ತಿಳಿಸುವುದೇ ಇದರ ಪ್ರಮುಖ ಉದ್ದೇಶವಾಗಿತ್ತು.ಯುದ್ಧದಿಂದ ಅನಾಥರಾದ ಮಕ್ಕಳಿಗೆ ಮಾನಸಿಕ ಬೆಂಬಲ, ಶಿಕ್ಷಣ, ಆರೋಗ್ಯ ಸೇವೆಗಳು ಮತ್ತು ಪುನರ್ವಸತಿ ಒದಗಿಸಲು ಜಾಗತಿಕ ಸಮುದಾಯವನ್ನು ಪ್ರೇರೇಪಿಸುವುದೇ ಈ ದಿನದ ಮುಖ್ಯ ಉದ್ದೇಶವಾಗಿದೆ.
* ಜಾಗತಿಕ ಅಂಕಿಅಂಶಗಳು (Global Statistics): ಯುನಿಸೆಫ್ (UNICEF) ವರದಿಯ ಪ್ರಕಾರ, ವಿಶ್ವದಾದ್ಯಂತ ಸುಮಾರು 140 **ಮಿಲಿಯನ್ ಮಕ್ಕಳು ಅನಾಥರಾಗಿದ್ದಾರೆ.**
# ಏಷ್ಯಾ: 61 ಮಿಲಿಯನ್
# ಆಫ್ರಿಕಾ: 52 ಮಿಲಿಯನ್
# ಲ್ಯಾಟಿನ್ ಅಮೇರಿಕಾ ಮತ್ತು ಕೆರಿಬಿಯನ್: 10 ಮಿಲಿಯನ್
* ಇಂದಿನ ಪ್ರಸ್ತುತತೆ : ಇತ್ತೀಚಿನ ವರ್ಷಗಳಲ್ಲಿ ಮಧ್ಯಪ್ರಾಚ್ಯದ ಸಂಘರ್ಷಗಳು (ಉದಾಹರಣೆಗೆ ಗಾಜಾ, ಯೆಮೆನ್) ಮತ್ತು ರಷ್ಯಾ-ಉಕ್ರೇನ್ ಯುದ್ಧದಿಂದಾಗಿ ಅನಾಥರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. 2026ರ ಈ ದಿನಾಚರಣೆಯು ಕೇವಲ ಜಾಗೃತಿಗಷ್ಟೇ ಸೀಮಿತವಾಗದೆ, ಅಂತರಾಷ್ಟ್ರೀಯ ಸಮುದಾಯವು ಈ ಮಕ್ಕಳಿಗೆ ಕಾನೂನು ರಕ್ಷಣೆ ಮತ್ತು ಆರ್ಥಿಕ ಸಹಾಯ ನೀಡಲು ಒತ್ತು ನೀಡುತ್ತಿದೆ.
*** ಸರ್ಕಾರ ಮತ್ತು ನಾಗರಿಕರ ಜವಾಬ್ದಾರಿ :**
=> ದತ್ತು ಪ್ರಕ್ರಿಯೆ: ಅನಾಥ ಮಕ್ಕಳನ್ನು ಕಾನೂನುಬದ್ಧವಾಗಿ ದತ್ತು ತೆಗೆದುಕೊಳ್ಳಲು ಪ್ರೋತ್ಸಾಹಿಸುವುದು.
=> ಪುನರ್ವಸತಿ ಕೇಂದ್ರಗಳು: ಯುದ್ಧ ಪೀಡಿತ ಪ್ರದೇಶಗಳಿಂದ ಬಂದ ಮಕ್ಕಳಿಗೆ ಸುರಕ್ಷಿತ ಆಶ್ರಯ ನೀಡಲು ಅಂತರಾಷ್ಟ್ರೀಯ ಮಟ್ಟದ ಪುನರ್ವಸತಿ ಕೇಂದ್ರಗಳ ಸ್ಥಾಪನೆ.
=> ಸಾರ್ವಜನಿಕ ಜಾಗೃತಿ: ಯುದ್ಧದ ದುಷ್ಪರಿಣಾಮಗಳ ಬಗ್ಗೆ ಸಮಾಜದಲ್ಲಿ ಸಂವೇದನೆ ಮೂಡಿಸುವುದು.
* ವಿಶ್ವ ಯುದ್ಧ ಅನಾಥರ ದಿನವು ಪೋಷಕರನ್ನು ಕಳೆದುಕೊಂಡ ಮಕ್ಕಳು ಅನುಭವಿಸುವ ಮಾನಸಿಕ ಆಘಾತ (Trauma) ಮತ್ತು ಖಿನ್ನತೆಗಳ ಕುರಿತು ಸಮಾಜದ ಗಮನ ಸೆಳೆದು, ಅವರ ಮಾನಸಿಕ ಆರೋಗ್ಯದ ಆರೈಕೆ ಅತ್ಯಾವಶ್ಯಕವೆಂಬುದನ್ನು ಒತ್ತಿಹೇಳುತ್ತದೆ. ಜೊತೆಗೆ, ಈ ಮಕ್ಕಳು ಮಾನವ ಸಾಗಾಣಿಕೆ, ಬಾಲಕಾರ್ಮಿಕ ಪದ್ಧತಿ, ಹಾಗೂ ಲೈಂಗಿಕ ಶೋಷಣೆಗಳಂತಹ ಗಂಭೀರ ಅಪಾಯಗಳಿಗೆ ಒಳಗಾಗದಂತೆ ಮಾನವ ಹಕ್ಕುಗಳ ರಕ್ಷಣೆ ಖಚಿತಪಡಿಸಬೇಕೆಂಬ ಅಗತ್ಯವನ್ನು ನೆನಪಿಸುತ್ತದೆ. ಇದರೊಂದಿಗೆ, ಯುದ್ಧ ಪೀಡಿತ ಪ್ರದೇಶಗಳಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳು ಹೆಚ್ಚುತ್ತಿರುವುದರಿಂದ, ಆಹಾರ ಮತ್ತು ಕುಡಿಯುವ ನೀರಿನ ಕೊರತೆಯಂತಹ ದ್ವಿಗುಣ ಸವಾಲುಗಳು ಈ ಮಕ್ಕಳ ಬದುಕನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತಿವೆ ಎಂಬ ಸತ್ಯವನ್ನು ಜಾಗತಿಕ ಸಮುದಾಯದ ಮುಂದೆ ತರುತ್ತದೆ.

## ಬಿಸಿಸಿಐ ನಿರ್ಧಾರಕ್ಕೆ ಪ್ರತಿಕ್ರಿಯೆ: ಐಪಿಎಲ್ ಪ್ರಸಾರ ನಿಷೇಧಿಸಿದ ಬಾಂಗ್ಲಾದೇಶ




ಕ್ರಿಕೆಟ್ ಜಗತ್ತಿನಲ್ಲಿ ಈಗ ಭಾರೀ ಚರ್ಚೆಯಾಗುತ್ತಿರುವ ವಿಷಯವೆಂದರೆ ಬಾಂಗ್ಲಾದೇಶ ಮತ್ತು ಐಪಿಎಲ್ (IPL) ನಡುವಿನ ಸಂಘರ್ಷ. ಸ್ಟಾರ್ ಸ್ಪಿನ್ ಬೌಲರ್ ಮುಸ್ತಾಫಿಜುರ್ ರಹಮಾನ್ ಅವರನ್ನು ಕೋಲ್ಕತಾ ನೈಟ್ ರೈಡರ್ಸ್ (KKR) ತಂಡದಿಂದ ಹೊರಗಿಟ್ಟ ಹಿನ್ನೆಲೆಯಲ್ಲಿ, ಬಾಂಗ್ಲಾದೇಶ ಸರ್ಕಾರವು ತನ್ನ ದೇಶದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ 2026ರ ಪ್ರಸಾರವನ್ನು ಸಂಪೂರ್ಣವಾಗಿ ನಿಷೇಧಿಸಿದೆ.
* ಬಾಂಗ್ಲಾದೇಶದ ಸ್ಪಿನ್ ಬೌಲರ್ ಮುಸ್ತಾಫಿಜುರ್ ರಹಮಾನ್ ಅವರನ್ನು ಕೋಲ್ಕತಾ ನೈಟ್ ರೈಡರ್ಸ್ (KKR) ತಂಡದಿಂದ ಕೈಬಿಟ್ಟ ಹಿನ್ನೆಲೆಯಲ್ಲಿ, ಬಾಂಗ್ಲಾ ಸರ್ಕಾರವು ತನ್ನ ದೇಶದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪ್ರಸಾರಕ್ಕೆ ನಿರ್ಬಂಧ ವಿಧಿಸಿದೆ. ಈ ಕುರಿತು ಸೋಮವಾರ (January-5) ಅಧಿಕೃತ ಆದೇಶ ಹೊರಡಿಸಲಾಗಿದ್ದು, ಬಾಂಗ್ಲಾದೇಶದ ಯಾವುದೇ ಟಿವಿ ಚಾನೆಲ್‌ಗಳು ಅಥವಾ ಡಿಜಿಟಲ್ ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳಲ್ಲಿ ಐಪಿಎಲ್ ಪಂದ್ಯಗಳ ಪ್ರಸಾರ ನಡೆಸದಂತೆ ಸೂಚಿಸಲಾಗಿದೆ.
* 2026ರ ಮಾರ್ಚ್ 26ರಿಂದ ಐಪಿಎಲ್ ಟೂರ್ನಿ ಆರಂಭವಾಗಲಿದೆ ಎಂಬ ಹಿನ್ನೆಲೆಯಲ್ಲಿ ಈ ನಿರ್ಧಾರ ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಈ ನಡುವೆ, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯು KKR ತಂಡಕ್ಕೆ ಆಯ್ಕೆಯಾಗಿದ್ದ ಬಾಂಗ್ಲಾದ ಆಟಗಾರ ಮುಸ್ತಾಫಿಜುರ್ ರಹಮಾನ್ ಅವರನ್ನು ತಂಡದಿಂದ ಹೊರಗಿಡಲು ಆದೇಶಿಸಿದೆ ಎಂಬ ವರದಿಗಳಿವೆ. ಈ ಕ್ರಮಕ್ಕೆ ಸ್ಪಷ್ಟ ಕಾರಣಗಳನ್ನು ಬಿಸಿಸಿಐ ಇನ್ನೂ ಬಹಿರಂಗಪಡಿಸಿಲ್ಲ.
* ಈ ಬೆಳವಣಿಗೆಯಿಂದ ಬಾಂಗ್ಲಾದೇಶದಲ್ಲಿ ಕ್ರಿಕೆಟ್ ಅಭಿಮಾನಿಗಳಲ್ಲಿ ಅಸಮಾಧಾನ ವ್ಯಕ್ತವಾಗಿದ್ದು, ಬಿಸಿಸಿಐನ ನಿರ್ಧಾರವು ಬಾಂಗ್ಲಾದ ಜನರ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ಬಾಂಗ್ಲಾ ಸರ್ಕಾರ ಹೇಳಿದೆ. ಈ ಹಿನ್ನೆಲೆಯಲ್ಲಿ, ಮುಂದಿನ ಸೂಚನೆ ನೀಡುವವರೆಗೆ ಐಪಿಎಲ್‌ನ ಎಲ್ಲ ಪಂದ್ಯಗಳ ಪ್ರಸಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗುತ್ತದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

## ಪ್ಯಾರಿಸ್‌ನಲ್ಲಿ ಭಾರತೀಯ ಜವಳಿ ವೈಭವ: 'Ce qui se trame' ಪ್ರದರ್ಶನಕ್ಕೆ ಜೈಶಂಕರ್ ಭೇಟಿ



* ಫ್ರಾನ್ಸ್‌ನ ಪ್ಯಾರಿಸ್ ನಗರದಲ್ಲಿ ಆಯೋಜಿಸಲಾದ 'Ce qui se trame: ಭಾರತ ಮತ್ತು ಫ್ರಾನ್ಸ್ ನಡುವಿನ ನೇಯ್ದ ಕಥೆಗಳು' ಎಂಬ ವಿಶಿಷ್ಟ ಜವಳಿ ಪ್ರದರ್ಶನಕ್ಕೆ ಭಾರತದ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ಭೇಟಿ ನೀಡಿದರು. ಈ ಪ್ರದರ್ಶನವು ಭಾರತದ ಶ್ರೀಮಂತ ಜವಳಿ ಪರಂಪರೆ ಹಾಗೂ ಫ್ರಾನ್ಸ್‌ನ ವಿನ್ಯಾಸ ಸಂಸ್ಕೃತಿಯ ನಡುವಿನ ಶತಮಾನಗಳ ಸಂಬಂಧವನ್ನು ಅನಾವರಣಗೊಳಿಸುವ ಮಹತ್ವದ ವೇದಿಕೆಯಾಗಿತ್ತು.
* ಈ ಪ್ರದರ್ಶನವು ಕೇವಲ ಬಟ್ಟೆಗಳ ಪ್ರದರ್ಶನವಲ್ಲದೆ, ಭಾರತ ಮತ್ತು ಫ್ರಾನ್ಸ್ ನಡುವಿನ ಐತಿಹಾಸಿಕ ಜವಳಿ ವ್ಯಾಪಾರ, ವಿನ್ಯಾಸ

ವಿನಿಮಯ ಮತ್ತು ಸಾಂಸ್ಕೃತಿಕ ಸಂವಾದವನ್ನು ಪ್ರತಿಬಿಂಬಿಸಿತು. ಭಾರತದ ಕೈಮಗ್ಗ, ನೇಯ್ಗೆ ತಂತ್ರಗಳು, ಬಣ್ಣಗಳ ಬಳಕೆ ಮತ್ತು ಕರಕುಶಲಕರ್ಮಿಗಳ ಅಪಾರ ಶ್ರಮವನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸುವುದು ಇದರ ಪ್ರಮುಖ ಉದ್ದೇಶವಾಗಿತ್ತು.

* ಪ್ರದರ್ಶನಕ್ಕೆ ಭೇಟಿ ನೀಡಿದ ನಂತರ ಸಚಿವ ಜೈಶಂಕರ್ ಅವರು ಸಾಮಾಜಿಕ ಜಾಲತಾಣ 'ಎಕ್ಸ್' ನಲ್ಲಿ ಪ್ರತಿಕ್ರಿಯೆ ನೀಡುತ್ತಾ, ಭಾರತದ ಜವಳಿ ಪರಂಪರೆಯ ಶ್ರೀಮಂತಿಕೆ ಎರಡು ರಾಷ್ಟ್ರಗಳ ನಡುವಿನ ಸಾಂಸ್ಕೃತಿಕ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಿದೆ ಎಂದು ಶ್ಲಾಘಿಸಿದರು. ಈ ಪ್ರದರ್ಶನವು ಸಾಂಸ್ಕೃತಿಕ ರಾಜತಾಂತ್ರಿಕತೆಯ ಜೀವಂತ ಉದಾಹರಣೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

* ಕಾರ್ಯತಂತ್ರ ಮತ್ತು ರಾಜತಾಂತ್ರಿಕ ಮಹತ್ವ: ಈ ಭೇಟಿ ಸಾಂಸ್ಕೃತಿಕ ಅಂಶಗಳೊಂದಿಗೆ ಕಾರ್ಯತಂತ್ರದ ಮಹತ್ವವನ್ನೂ ಹೊಂದಿದೆ. ಭಾರತ ಮತ್ತು ಫ್ರಾನ್ಸ್ ತಮ್ಮ ದ್ವಿಪಕ್ಷೀಯ ಸಂಬಂಧಗಳ 25ನೇ ವರ್ಷದ ಸಂಭ್ರಮವನ್ನು ಆಚರಿಸುತ್ತಿದ್ದು, 'ಹರೈಜನ್ 2047' ಮಾರ್ಗಸೂಚಿಯಡಿ ಸಾಂಸ್ಕೃತಿಕ, ಆರ್ಥಿಕ ಮತ್ತು ಜನಸಂಪರ್ಕ ವಿನಿಮಯಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಫ್ಯಾಶನ್ ರಾಜಧಾನಿಯಾಗಿರುವ ಪ್ಯಾರಿಸ್‌ನಲ್ಲಿ ಭಾರತೀಯ ಜವಳಿ ಪ್ರದರ್ಶನವು 'ಮೇಕ್ ಇನ್ ಇಂಡಿಯಾ' ಅಭಿಯಾನಕ್ಕೆ ಜಾಗತಿಕ ಮನ್ನಣೆ ತರುವುದರ ಜೊತೆಗೆ, ಭಾರತೀಯ ಕೈಮಗ್ಗ ಮತ್ತು ಜವಳಿ ಉತ್ಪನ್ನಗಳಿಗೆ ಹೊಸ ಮಾರುಕಟ್ಟೆ ಅವಕಾಶಗಳನ್ನು ತೆರೆದಿದೆ. ಜೊತೆಗೆ, ಯೋಗ ಮತ್ತು ಆಯುರ್ವೇದದಂತೆ, ಭಾರತದ ಜವಳಿ ಕಲೆ ಕೂಡ ದೇಶದ ಮೃದು ಶಕ್ತಿಯ (Soft Power) ಪ್ರಮುಖ ಅಂಗವಾಗಿ ಹೊರಹೊಮ್ಮುತ್ತಿದೆ.

* ಭಾರತ-ಫ್ರಾನ್ಸ್ ಸಂಬಂಧ: ಇತ್ತೀಚಿನ ಬೆಳವಣಿಗೆಗಳು: ಜವಳಿ ಪ್ರದರ್ಶನದ ಹೊರತಾಗಿ, ಜೈಶಂಕರ್ ಅವರ ಫ್ರಾನ್ಸ್ ಪ್ರವಾಸದಲ್ಲಿ ಉಭಯ ದೇಶಗಳ ನಡುವಿನ ರಕ್ಷಣಾ ಸಹಕಾರ, ಇಂಡೋ-ಪೆಸಿಫಿಕ್ ಪ್ರದೇಶದ ಭದ್ರತೆ ಮತ್ತು ಜಾಗತಿಕ ಸವಾಲುಗಳ ಕುರಿತು ಉನ್ನತ ಮಟ್ಟದ ಚರ್ಚೆಗಳು ನಡೆದಿವೆ. ಅಲ್ಲದೆ, ಭಾರತೀಯ ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಫ್ರಾನ್ಸ್‌ನಲ್ಲಿ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವ ವಲಸೆ ಮತ್ತು ಚಲನಶೀಲತೆ (Mobility) ಕುರಿತ ಮಾತುಕತೆಗಳೂ ಮುಂದುವರಿದಿವೆ.

* ಈ ಜವಳಿ ಪ್ರದರ್ಶನವು ಸಾಂಸ್ಕೃತಿಕ ಗೌರವದ ಜೊತೆಗೆ ರಾಜತಾಂತ್ರಿಕ ಮತ್ತು ಆರ್ಥಿಕ ಸಹಕಾರವನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ ಕಾಣಿಸಿಕೊಂಡಿದೆ.

## ಸಮಗ್ರ ಅರಣ್ಯ ಸಮೀಕ್ಷೆಯೊಂದಿಗೆ ರಾಜ್ಯದಲ್ಲಿ ಹುಲಿ ಗಣತಿ ಪ್ರಕ್ರಿಯೆ ಆರಂಭ



* ರಾಜ್ಯದ ಎಲ್ಲಾ ಅರಣ್ಯ ಪ್ರದೇಶಗಳಲ್ಲಿ ಹುಲಿ ಸೇರಿದಂತೆ ಮಾಂಸಾಹಾರಿ ಮತ್ತು ಸಸ್ಯಾಹಾರಿ ಪ್ರಾಣಿಗಳ ಗಣತಿ ಪ್ರಕ್ರಿಯೆ ಅಧಿಕೃತವಾಗಿ ಆರಂಭಗೊಂಡಿದೆ. ಈ ಬಗ್ಗೆ ಬೀದರ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು, ರಾಜ್ಯದ 38 ಅರಣ್ಯ ವಿಭಾಗಗಳಲ್ಲಿ ಗಣತಿಗಾಗಿ ಅಗತ್ಯ ತರಬೇತಿ ಪೂರ್ಣಗೊಂಡಿದ್ದು, ಕಾಳಿ, ಭದ್ರಾ, ನಾಗರಹೊಳೆ, ಬಂಡೀಪುರ ಹಾಗೂ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶಗಳನ್ನು ಒಳಗೊಂಡಂತೆ ಎಲ್ಲ ಅರಣ್ಯ ವಲಯಗಳಲ್ಲಿ ಸಮೀಕ್ಷೆ ನಡೆಯುತ್ತಿದೆ ಎಂದು ತಿಳಿಸಿದರು.

* ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ದೇಶದಾದ್ಯಂತ ನಡೆಯುವ ಹುಲಿ ಅಂದಾಜು ಗಣತಿಯ ಭಾಗವಾಗಿ ಈ ಬಾರಿ ಆರನೇ ಗಣತಿ ಕೈಗೊಳ್ಳಲಾಗಿದ್ದು, ಹಿಂದಿನ ಬಾರಿ 2006, 2010, 2014, 2018 ಹಾಗೂ 2022ರಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಕಳೆದ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಸುಮಾರು 563 ಹುಲಿಗಳಿರುವ ಅಂದಾಜು ಇದ್ದು, ದೇಶದಲ್ಲೇ ಕರ್ನಾಟಕ ಎರಡನೇ ಸ್ಥಾನದಲ್ಲಿತ್ತು ಎಂದು ಸಚಿವರು ಹೇಳಿದರು.

* ತಾಂತ್ರಿಕ ಮತ್ತು ವೈಜ್ಞಾನಿಕ ವಿಧಾನ :ಗಣತಿಯನ್ನು ಕೇವಲ ಪ್ರಾಣಿಗಳನ್ನು ಎಣಿಸುವುದಕ್ಕೆ ಸೀಮಿತಗೊಳಿಸದೆ, ವೈಜ್ಞಾನಿಕ ಹಂತಗಳಲ್ಲಿ ವಿಂಗಡಿಸಲಾಗಿದೆ:

=> ಹೆಜ್ಜೆಗುರುತು ಮತ್ತು ಸಾಕ್ಷ್ಯಧಾರಿತ ಸಮೀಕ್ಷೆ: ಅರಣ್ಯ ಸಿಬ್ಬಂದಿ ಕಾಡಿನ ಆಳಕ್ಕೆ ತೆರಳಿ ಹುಲಿಗಳ ಮಲ (Scat), ಹೆಜ್ಜೆಗುರುತು (Pugmarks) ಮತ್ತು ಮರಗಳ ಮೇಲೆ ಅವು ಮಾಡುವ ಉಗುರಿನ ಗುರುತುಗಳನ್ನು ದಾಖಲಿಸುತ್ತಾರೆ.

=> ಕ್ಯಾಮೆರಾ ಟ್ರ್ಯಾಪಿಂಗ್ (Camera Traps): ರಾಜ್ಯದ 5 ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಒಟ್ಟು 2,300ಕ್ಕೂ ಹೆಚ್ಚು ಅತ್ಯಾಧುನಿಕ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಹುಲಿಗಳ ಮೈಮೇಲಿನ ಪಟ್ಟೆಗಳು (Stripes) ಮನುಷ್ಯನ ಬೆರಳಚ್ಚಿನಂತೆ ಭಿನ್ನವಾಗಿರುತ್ತವೆ. ಕ್ಯಾಮೆರಾ ಚಿತ್ರಗಳ ಮೂಲಕ ಈ ಪಟ್ಟೆಗಳನ್ನು ವಿಶ್ಲೇಷಿಸಿ, ಒಂದೇ ಹುಲಿಯನ್ನು ಎರಡು ಬಾರಿ ಎಣಿಸದಂತೆ ಎಚ್ಚರಿಕೆ ವಹಿಸಲಾಗುತ್ತದೆ.

=> **ಸಸ್ಯಾಹಾರಿ ಪ್ರಾಣಿಗಳ ಗಣತಿ:** ಹುಲಿಗಳ ಅಸ್ತಿತ್ವವು ಅವುಗಳ ಆಹಾರವಾದ ಜಿಂಕೆ, ಕಾಡೆಮ್ಮೆಗಳ ಮೇಲೆ ಅವಲಂಬಿತವಾಗಿದೆ. ಆದ್ದರಿಂದ, ಆಹಾರ ಸರಪಳಿಯನ್ನು ಅರ್ಥಮಾಡಿಕೊಳ್ಳಲು ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆಯನ್ನು ಸಮೀಕ್ಷೆ ಮಾಡಲಾಗುತ್ತದೆ.

* ಈ ಗಣತಿ ಪ್ರಕ್ರಿಯೆ ಮೂರು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ಮೂರು ದಿನಗಳ ಕಾಲ ಪ್ರತಿ ಅರಣ್ಯ ವಿಭಾಗದಲ್ಲಿ ಮೂರು ಸದಸ್ಯರ ತಂಡಗಳು ದಿನಕ್ಕೆ ಸುಮಾರು 5 ಕಿಲೋಮೀಟರ್ ಕಾಡಿನಲ್ಲಿ ಸಂಚರಿಸಿ ಹುಲಿ, ಚಿರತೆ ಸೇರಿದಂತೆ ಮಾಂಸಾಹಾರಿ ಪ್ರಾಣಿಗಳ ಕಾಲು ಗುರುತು, ಲದ್ದಿ, ನೇರ ದರ್ಶನದ ಮಾಹಿತಿಯನ್ನು ಸಂಗ್ರಹಿಸಲಿವೆ. ಜನವರಿ 15ರಿಂದ 17ರವರೆಗೆ ನಡೆಯುವ ಎರಡನೇ ಹಂತದಲ್ಲಿ ಜಿಂಕೆ, ಕಡವೆ, ಕಾಡೆಮ್ಮೆ, ಕಾಡುಕೋಣ ಸೇರಿದಂತೆ ಸಸ್ಯಾಹಾರಿ ಪ್ರಾಣಿಗಳ ದರ್ಶನದ ಮಾಹಿತಿಯನ್ನು ಕಲೆಹಾಕಲಾಗುತ್ತದೆ. ಈ ದತ್ತಾಂಶದ ಆಧಾರದಲ್ಲಿ ಮೂರನೇ ಹಂತದಲ್ಲಿ ಸೂಕ್ತ ಸ್ಥಳಗಳಲ್ಲಿ ಕ್ಯಾಮೆರಾ ಟ್ರ್ಯಾಪ್‌ಗಳನ್ನು ಅಳವಡಿಸಲಾಗುತ್ತದೆ.

* ಹುಲಿ ಯೋಜನೆಯ ನಿರ್ದೇಶಕ ರಮೇಶ್ ಕುಮಾರ್ ಅವರನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (NTCA) ಗೆ ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿದ್ದು, ಇಡೀ ಗಣತಿ ಪ್ರಕ್ರಿಯೆಯ ಉಸ್ತುವಾರಿ ಅವರದ್ದಾಗಿರುತ್ತದೆ. ಅರಣ್ಯವಾರು ಹುಲಿ ಸಂಖ್ಯೆ, ಆಹಾರವಾಗಿರುವ ಸಸ್ಯಾಹಾರಿ ಪ್ರಾಣಿಗಳ ಲಭ್ಯತೆ ಹಾಗೂ ಕಾಡಿನ ಧಾರಣಾ ಸಾಮರ್ಥ್ಯವನ್ನು ಗುರುತಿಸುವ ಉದ್ದೇಶದಿಂದ ಈ ಸಮೀಕ್ಷೆ ನಡೆಸಲಾಗುತ್ತಿದೆ.

* ಕ್ಯಾಮೆರಾ ಟ್ರ್ಯಾಪ್‌ಗಳ ನಿಯೋಜನೆ : ಒಟ್ಟು 2,300ಕ್ಕೂ ಹೆಚ್ಚು ಕ್ಯಾಮೆರಾ ಟ್ರ್ಯಾಪ್‌ಗಳನ್ನು ವಿವಿಧ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಅಳವಡಿಸಲಾಗಿದೆ:ನಾಗರಹೊಳೆ (600), ಬಂಡೀಪುರ (550), ಬಿಆರ್ ಟಿ (300), ಭದ್ರಾ (330) ಹಾಗೂ ಕಾಳಿ (450) ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಕ್ಯಾಮೆರಾ ಟ್ರ್ಯಾಪ್ ಸಮೀಕ್ಷೆ ಆರಂಭವಾಗಿದೆ. ಜೊತೆಗೆ, ಹುಲಿ ಸಂರಕ್ಷಿತ ಪ್ರದೇಶಗಳ ಹೊರಗೂ ಕ್ಯಾಮೆರಾ ಟ್ರ್ಯಾಪ್ ಅಳವಡಿಸಲು ಕ್ರಮ ವಹಿಸಲಾಗಿದೆ.

* ಇತ್ತೀಚೆಗೆ ಹುಲಿಗಳು ಕಾಡಿನಿಂದ ನಾಡಿನ ಕಡೆಗೆ ಕಾಣಿಸಿಕೊಳ್ಳುತ್ತಿರುವುದು ರಾಜ್ಯದಲ್ಲಿ ಹುಲಿ ಸಂಖ್ಯೆಯಲ್ಲಿ ಹೆಚ್ಚಳವಾಗಿರುವ ಸೂಚನೆಯಾಗಿದ್ದು, ಈ ಬಾರಿ ನಡೆಯುತ್ತಿರುವ ಗಣತಿಯಿಂದ ನಿಖರ ಚಿತ್ರಣ ಲಭ್ಯವಾಗಲಿದೆ ಎಂದು ಸಚಿವ ಈಶ್ವರ ಖಂಡ್ರೆ ಅವರು ವಿಶ್ವಾಸ ವ್ಯಕ್ತಪಡಿಸಿದರು.

## ಗೋವಾ ಮುಂಡ್ಕರ್ ಕಾಯ್ದೆ 2026: ಭೂ ರಹಿತ ನಿವಾಸಿಗಳ ಹಿತರಕ್ಷಣೆಗೆ ಮುಂದಾದ ಸರ್ಕಾರ!




* ಗೋವಾ ಸರ್ಕಾರವು ಮುಂಡ್ಕರ್‌ಗಳ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಒಂದು ಹೊಸ ಶಾಸನವನ್ನು ಜಾರಿಗೆ ತರಲು ಮುಂದಾಗಿದೆ. ಮುಂಡ್ಕರ್ ಹಕ್ಕುಗಳು ಕಾನೂನುಬದ್ಧವಾಗಿ ಇತ್ಯರ್ಥವಾಗುವವರೆಗೆ ಆ ಭೂಮಿಯ ಮಾರಾಟ ಅಥವಾ ವರ್ಗಾವಣೆಯನ್ನು ಈ ಕಾಯ್ದೆಯು ತಡೆಯಲಿದೆ.

ಮುಂಡ್ಕರ್ ಎಂದರೆ ಗೋವಾದಲ್ಲಿ ಸಾಂಪ್ರದಾಯಿಕವಾಗಿ ಭೂಮಾಲೀಕರ (Bhatkars) ಜಾಗದಲ್ಲಿ ವಾಸವಿದ್ದು, ಆ ಭೂಮಿಯನ್ನು ಕಾಯುವ ಅಥವಾ ಅಲ್ಲಿ ಕೆಲಸ ಮಾಡುವ ಜನರನ್ನು 'ಮುಂಡ್ಕರ್‌ಗಳು' ಎಂದು ಕರೆಯಲಾಗುತ್ತದೆ. ಇವರಿಗೆ ಆ ಜಾಗದ ಮೇಲೆ ವಾಸದ ಹಕ್ಕಿರುತ್ತದೆ.

* ಈ ಕಾಯ್ದೆಯು :

=> ಭೂಮಿ ಮಾರಾಟಕ್ಕೆ ತಡೆ: ಮುಂಡ್ಕರ್‌ಗಳು ವಾಸಿಸುತ್ತಿರುವ ಭೂಮಿಯನ್ನು, ಅವರ ಹಕ್ಕುಗಳನ್ನು ಇತ್ಯರ್ಥಪಡಿಸದೆ ಮಾಲೀಕರು ಮಾರಾಟ ಮಾಡುವುದನ್ನು ತಡೆಯಲು ಮುಖ್ಯಮಂತ್ರಿ ಪ್ರಮೋದ ಸಾವಂತ್ ಅವರು ಈ ಮಸೂದೆಯನ್ನು ಜನವರಿ 12 ರಿಂದ ಆರಂಭವಾಗುವ ವಿಧಾನಸಭಾ ಅಧಿವೇಶನದಲ್ಲಿ ಮಂಡಿಸಲಿದ್ದಾರೆ.

=> ಅಘೋಷಿತ ಮುಂಡ್ಕರ್‌ಗಳಿಗೆ ನೆರವು: ಈವರೆಗೆ ಅಧಿಕೃತವಾಗಿ 'ಮುಂಡ್ಕರ್' ಎಂದು ಘೋಷಿಸಿಕೊಳ್ಳದ ಅಥವಾ ಕೇಸ್ ದಾಖಲಿಸದ ನಿವಾಸಿಗಳಿಗೂ ಇದು ರಕ್ಷಣೆ ನೀಡಲಿದೆ. ಮಾಲೀಕರು ಭೂಮಿಯನ್ನು ಹೊಸಬರಿಗೆ ಮಾರಾಟ ಮಾಡಿದಾಗ, ಅಲ್ಲಿ ವಾಸವಿರುವ ಮುಂಡ್ಕರ್‌ಗಳು ಎದುರಿಸುವ ಕಿರುಕುಳ ಮತ್ತು ಕಾನೂನು ಸಂಘರ್ಷಗಳನ್ನು ತಪ್ಪಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

=> ಪ್ರಕರಣಗಳ ವಿಳಂಬ: ಪ್ರಸ್ತುತ ಗೋವಾದ ವಿವಿಧ ನ್ಯಾಯಾಲಯಗಳಲ್ಲಿ ಸುಮಾರು 2,000ಕ್ಕೂ ಹೆಚ್ಚು ಮುಂಡ್ಕರ್ ಪ್ರಕರಣಗಳು ಬಾಕಿ ಇವೆ. ಈ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಬಾಂಬೆ ಹೈಕೋರ್ಟ್ ಈಗಾಗಲೇ ಮಾಮ್ಲತದಾರರಿಗೆ ಸೂಚನೆ ನೀಡಿದೆ.

=> ಸುಗ್ರೀವಾಜ್ಞೆಯ ಬದಲು ವಿಧೇಯಕ: ಮೊದಲು ಈ ಬಗ್ಗೆ ಸುಗ್ರೀವಾಜ್ಞೆ (Ordinance) ಹೊರಡಿಸಲು ಸರ್ಕಾರ ಯೋಚಿಸಿತ್ತು. ಆದರೆ ಅಧಿವೇಶನ ಹತ್ತಿರವಿರುವುದರಿಂದ ನೇರವಾಗಿ ವಿಧೇಯಕವನ್ನೇ ಮಂಡಿಸಲು ನಿರ್ಧರಿಸಲಾಗಿದೆ.

* "ಮಾಲೀಕರು ಮುಂಡ್ಕರ್‌ಗಳಿರುವ ಮನೆಯ ಸಮೇತ ಜಾಗವನ್ನು ಮಾರಾಟ ಮಾಡುವುದರಿಂದ ಹೊಸ ಮಾಲೀಕರು ಮತ್ತು ಹಳೆಯ ನಿವಾಸಿಗಳ ನಡುವೆ ಸಂಘರ್ಷ ಉಂಟಾಗುತ್ತಿತ್ತು. ಈ ಹೊಸ ಕಾನೂನು ಅಂತಹ ವಿವಾದಗಳಿಗೆ ತಾತ್ಕಾಲಿಕ ತಡೆ ನೀಡಲಿದೆ ಮತ್ತು ಬಡ ನಿವಾಸಿಗಳಿಗೆ ಭದ್ರತೆ ಒದಗಿಸಲಿದೆ."

## ಭಾರತದ ಹೊಸ 'eB-4' ವೀಸಾ ನೀತಿ: ಚೀನಾ ಉದ್ಯಮಿಗಳಿಗಾಗಿ 'ಇ-ಪ್ರೊಡಕ್ಷನ್ ಹೂಡಿಕೆ' ವೀಸಾ ಆರಂಭ




* ಭಾರತವು ಚೀನೀ ಪ್ರಜೆಗಳಿಗೆ ವ್ಯಾಪಾರ ಸಂಬಂಧಿತ ಪ್ರಯಾಣವನ್ನು ಸರಳಗೊಳಿಸಲು ಮತ್ತು ನಿಯಂತ್ರಿಸಲು ಹೊಸ ಎಲೆಕ್ಟ್ರಾನಿಕ್ ವ್ಯಾಪಾರ ವೀಸಾ ವರ್ಗವನ್ನು ಪ್ರಾರಂಭಿಸಿದೆ. ಇದನ್ನು eB-4 ವೀಸಾ ಅಥವಾ ಇ-ಪ್ರೊಡಕ್ಷನ್ ಹೂಡಿಕೆ ವ್ಯಾಪಾರ ವೀಸಾ ಎಂದು ಕರೆಯಲಾಗುತ್ತದೆ. ಈ ವೀಸಾ ಕಾನೂನುಬದ್ಧ ವ್ಯಾಪಾರ ಚಟುವಟಿಕೆಗಳನ್ನು ಬೆಂಬಲಿಸುವುದು ಮತ್ತು ಭಾರತ-ಚೀನಾ ನಡುವಿನ ರಚನಾತ್ಮಕ ವ್ಯಾಪಾರ ಸಂಬಂಧಗಳನ್ನು ಸುಧಾರಿಸಲು ಬೆಳೆಯುತ್ತಿರುವ ಬೇಡಿಕೆಗೆ ತಕ್ಕ ಉತ್ತರ ನೀಡುವುದು ಎಂಬ ಗುರಿಯನ್ನು ಹೊಂದಿದೆ.

* eB-4 ವೀಸಾ ಎಂದರೆ ಚೀನೀ ಪ್ರಜೆಗಳಿಗಾಗಿ ಭಾರತದಲ್ಲಿ ಪರಿಚಯಿಸಲಾದ ಹೊಸ ಎಲೆಕ್ಟ್ರಾನಿಕ್ ವ್ಯಾಪಾರ ವೀಸಾ ಆಗಿದ್ದು, ರಾಯಭಾರ ಕಚೇರಿಗೆ ಭೇಟಿ ನೀಡದೆ ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಾಧ್ಯ. ಸಾಮಾನ್ಯ ವ್ಯಾಪಾರ ಭೇಟಿ ವೀಸಾಗಳಿಗಿಂತ ವಿಭಿನ್ನವಾಗಿ, ಈ ವೀಸಾವನ್ನು ಉತ್ಪಾದನೆ, ಹೂಡಿಕೆ, ತಾಂತ್ರಿಕ ವ್ಯವಹಾರ ಚಟುವಟಿಕೆಗಳು ಸೇರಿದಂತೆ ನಿಶ್ಚಿತ ಉದ್ದೇಶಗಳಿಗಾಗಿ ವಿನ್ಯಾಸಗೊಳಿಸಲಾಗಿದೆ.

*** e-B-4 ವೀಸಾ ವಿಶೇಷತೆಗಳು :**

=> ವೀಸಾ ಅನ್ವಯಿಕೆ ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಸಲ್ಲಿಸಬಹುದು.

=> ವೀಸಾ ಪ್ರಕ್ರಿಯೆ ಸುಮಾರು 45–50 ದಿನಗಳಲ್ಲಿ ಪೂರ್ಣಗೊಳ್ಳುತ್ತದೆ.

=> ವೀಸಾ ಪಡೆದವರು ಭಾರತದಲ್ಲಿಯು ಅಧಿಕತಮ 6 ತಿಂಗಳು ವಾಸಿಸಬಹುದು.

=> ಪ್ರವೇಶವು ನಿರ್ದಿಷ್ಟ ಉದ್ದೇಶಗಳಿಗೆ ಮಾತ್ರ :ಯಂತ್ರೋಪಕರಣಗಳ ಇನ್‌ಸ್ಟಾಲೇಶನ್ ಮತ್ತು ಕಮಿಷನಿಂಗ್,ಉದ್ಯಮ/ಕಾರ್ಖಾನೆ ಸ್ಥಾಪನೆ, ಸಿಬ್ಬಂದಿ ತರಬೇತಿ, ಗುಣಮಟ್ಟ ಪರಿಶೀಲನೆ, ಐಟಿ ಮತ್ತು ಇಆರ್‌ಪಿ ವ್ಯವಸ್ಥೆಗಳ ಸ್ಥಾಪನೆ, ಹಿರಿಯ ನಿರ್ವಹಣಾ ಸಿಬ್ಬಂದಿಯ ಭೇಟಿ

* ಅನುಮತಿಸಲಾದ ವ್ಯಾಪಾರ ಚಟುವಟಿಕೆಗಳು :

=> ಯಂತ್ರೋಪಕರಣಗಳು ಮತ್ತು ಉತ್ಪಾದನಾ ಘಟಕಗಳ ಸ್ಥಾಪನೆ

=> ಐಟಿ ಮತ್ತು ಇಆರ್‌ಪಿ ಸಿಸ್ಟಮ್ ಗುರಿ ಪೂರ್ಣಗೊಳಿಸುವಿಕೆ

=> ಸಿಬ್ಬಂದಿ ತರಬೇತಿ ಮತ್ತು ಪೂರೈಕೆ ಸರಪಳಿ ಅಭಿವೃದ್ಧಿ


=> ವೆಂಡರ್ ಎಂಪ್ಯಾನೆಲ್‌ಮೆಂಟ್

=> ಅಗತ್ಯ ನಿರ್ವಹಣೆ

=> ಹಿರಿಯ ನಿರ್ವಾಹಕರ ಭೇಟಿ

ಈ ರಚನೆ ಉದ್ಯಮ ಸಹಕಾರವನ್ನು ಉತ್ತೇಜಿಸುವ ಮೂಲಕ ನಿಯಂತ್ರಣ ಮತ್ತು ಕಾನೂನು ಪಾಲನೆ ಖಚಿತಪಡಿಸುತ್ತದೆ.

* ಅರ್ಜಿಗಳನ್ನು ಭಾರತೀಯ ಇ-ವೀಸಾ ಪೋರ್ಟಲ್ ಮೂಲಕ ಸಲ್ಲಿಸಲು ಸಾಧ್ಯವಾಗಿದ್ದು, ಈ ಪೋರ್ಟಲ್ ಅನ್ನು ಬ್ಯೂರೋ ಆಫ್ ಇಮಿಗ್ರೇಶನ್ ನಿರ್ವಹಿಸುತ್ತದೆ. ಹಾಗೆಯೇ, ಭಾರತೀಯ ಕಂಪನಿಗಳು ಚೈನಾದ ವ್ಯಾಪಾರಿಗಳಿಗೆ ಆಹ್ವಾನ ನೀಡಲು DPIIT ನ National Single Window System (NSWS) ಮೂಲಕ ನೋಂದಣಿ ಮಾಡಿಕೊಳ್ಳಬಹುದು, ಇದರಿಂದ ಸರ್ಕಾರದ ಅಧಿಕಾರಿಗಳೊಂದಿಗೆ ಪಾರದರ್ಶಕತೆ ಮತ್ತು ಸಮನ್ವಯ ಕಾಪಾಡಲಾಗುತ್ತದೆ. ಈ ವೀಸಾ ವ್ಯವಸ್ಥೆಯು ಭಾರತ-ಚೀನಾ ನಡುವಿನ ಉದ್ಯಮಿಕ ಸಹಕಾರವನ್ನು ಸುಗಮಗೊಳಿಸುವುದು, ನಿಯಂತ್ರಿತ ಪ್ರವೇಶ ನೀಡುವುದು ಮತ್ತು ಸ್ಪಷ್ಟ ಉದ್ದೇಶಾಧಾರಿತ ವ್ಯವಹಾರ ಚಟುವಟಿಕೆಗಳಿಗೆ ಅವಕಾಶ ಒದಗಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.




## ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಹೊಸ ದಾಖಲೆ: ಅತಿ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಸಾರಥ್ಯ!



* ಕರ್ನಾಟಕದ ರಾಜಕೀಯ ಭೂಪಟದಲ್ಲಿ ಜನವರಿ 6, 2026 ಒಂದು ಐತಿಹಾಸಿಕ ದಿನವಾಗಿ ದಾಖಲಾಗಿದೆ. ರಾಜ್ಯದ ಪ್ರಸಕ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕದ ಅತಿ ದೀರ್ಘಕಾಲ ಸೇವೆ ಸಲ್ಲಿಸಿದ ಮುಖ್ಯಮಂತ್ರಿಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಮೂಲಕ ಹೊಸ ದಾಖಲೆ ನಿರ್ಮಿಸಿದ್ದಾರೆ. ಇದುವರೆಗೆ ಈ ದಾಖಲೆಯು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಹೆಸರಿನಲ್ಲಿತ್ತು.

* ಸಿದ್ದರಾಮಯ್ಯ ಅವರು ತಮ್ಮ ಎರಡು ಅವಧಿಗಳ (2013-2018 ಮತ್ತು 2023-ಪ್ರಸ್ತುತ) ಒಟ್ಟು ಸೇವಾವಧಿಯನ್ನು ಸೇರಿಸಿ, ದೇವರಾಜ ಅರಸು ಅವರ 7 ವರ್ಷ 239 ದಿನಗಳ ಸುದೀರ್ಘ ಆಡಳಿತದ ದಾಖಲೆಯನ್ನು ಅಳಿಸಿ ಹಾಕಿದ್ದಾರೆ.

* ಸಿದ್ದರಾಮಯ್ಯ ಅವರ ರಾಜಕೀಯ ಮೈಲಿಗಲ್ಲುಗಳು ಅತ್ಯಂತ ಗಮನಾರ್ಹವಾಗಿವೆ: ಅವರು 2013ರಿಂದ 2018ರವರೆಗೆ 5 ವರ್ಷಗಳ ಪೂರ್ಣಾವಧಿ ಆಡಳಿತವನ್ನು ಪೂರೈಸಿದ ಕರ್ನಾಟಕದ ಎರಡನೇ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು (ಮೊದಲನೆಯವರು ಎಸ್. ನಿಜಲಿಂಗಪ್ಪ). ಇದರ ಜೊತೆಗೆ, ಕರ್ನಾಟಕದ ಇತಿಹಾಸದಲ್ಲೇ ಅತಿ ಹೆಚ್ಚು ಬಾರಿ–15ಕ್ಕೂ ಹೆಚ್ಚು ಬಾರಿ–ರಾಜ್ಯ ಬಜೆಟ್ ಮಂಡಿಸಿದ ಹಣಕಾಸು ಸಚಿವ ಎಂಬ ಅದ್ವಿತೀಯ ದಾಖಲೆವೂ ಅವರ ಹೆಸರಿನಲ್ಲಿದೆ. ರಾಜಕೀಯವಾಗಿ, ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರನ್ನು ಒಳಗೊಂಡ AHINDA ನಾಯಕತ್ವದ ಪ್ರತಿನಿಧಿಯಾಗಿ, ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಅನೇಕ ಜನಕಲ್ಯಾಣ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ.

**ಕರ್ನಾಟಕದ ಅತಿ ದೀರ್ಘಾವಧಿ ಮುಖ್ಯಮಂತ್ರಿಗಳು:**

1. ಸಿದ್ದರಾಮಯ್ಯ (2026 ರಂತೆ) – 7+ ವರ್ಷಗಳು (2013–2018 ಮತ್ತು 2023–ಪ್ರಸ್ತುತ)
2. ಡಿ. ದೇವರಾಜ ಅರಸು – 7 ವರ್ಷಗಳು 239 ದಿನಗಳು
3. ಎಸ್. ನಿಜಲಿಂಗಪ್ಪ – ಸುಮಾರು 7 ವರ್ಷಗಳು 175 ದಿನಗಳು
4. ರಾಮಕೃಷ್ಣ ಹೆಗಡೆ – ಸುಮಾರು 5 ವರ್ಷಗಳು+
5. ಬಿ.ಎಸ್. ಯಡಿಯೂರಪ್ಪ – ಸುಮಾರು 5 ವರ್ಷಗಳು+

## ಗ್ರಾಮ ಆಡಳಿತದಲ್ಲಿ 'ಸಭಾಸಾರ್' (SabhaSar): ಎಐ ಆಧಾರಿತ ಸಭಾ ಸಾರಾಂಶ ಸಾಧನ




* ಭಾರತದ ಗ್ರಾಮೀಣ ಆಡಳಿತ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು 'ಸಭಾಸಾರ್' (SabhaSar) ಎಂಬ ಎಐ (AI) ಆಧಾರಿತ ಡಿಜಿಟಲ್ ವೇದಿಕೆಯನ್ನು ಪರಿಚಯಿಸಿದೆ. ಇದು ಕೇವಲ ಒಂದು ಆ್ಯಪ್ ಅಲ್ಲ; ಧ್ವನಿಯಿಂದ ಪಠ್ಯಕ್ಕೆ (Voice-to-Text) ಮತ್ತು ನೈಸರ್ಗಿಕ ಭಾಷಾ ಸಂಸ್ಕರಣೆ (Natural Language Processing – NLP) ತಂತ್ರಜ್ಞಾನವನ್ನು ಬಳಸುವ ಸುಧಾರಿತ ಎಐ ಸಾಧನವಾಗಿದೆ. ಗ್ರಾಮ ಸಭೆಗಳಲ್ಲಿ ನಡೆಯುವ ಸುದೀರ್ಘ ಚರ್ಚೆಗಳನ್ನು ಆಲಿಸಿ, ಅವುಗಳ ಪ್ರಮುಖ ಅಂಶಗಳನ್ನು ಗುರುತಿಸಿ, ಸ್ವಯಂಚಾಲಿತವಾಗಿ ಸಂಕ್ಷಿಪ್ತ 'ಸಭಾ ಸಾರಾಂಶ' ವನ್ನು ಸಿದ್ಧಪಡಿಸುವ ಸಾಮರ್ಥ್ಯ ಇದಕ್ಕಿದೆ. ಇದರ ಮೂಲಕ ಪಾರದರ್ಶಕತೆ, ಕಾರ್ಯಕ್ಷಮತೆ ಮತ್ತು ಜವಾಬ್ದಾರಿತನವನ್ನು ಗ್ರಾಮ ಮಟ್ಟದ ಆಡಳಿತದಲ್ಲಿ ಹೆಚ್ಚಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ.

*** ಪ್ರಮುಖ ಕಾರ್ಯಚಟುವಟಿಕೆಗಳು:**

=> ನೈಜ ಸಮಯದ ದಾಖಲೀಕರಣ: ಸಭೆ ನಡೆಯುತ್ತಿರುವಾಗಲೇ ಧ್ವನಿಯನ್ನು ಗ್ರಹಿಸಿ ದಾಖಲಿಸುತ್ತದೆ.

=> ಬಹುಭಾಷಾ ಬೆಂಬಲ: ಭಾರತದ ವೈವಿಧ್ಯಮಯ ಭಾಷೆಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಇದು ಹೊಂದಿದ್ದು, ಪ್ರಾದೇಶಿಕ ಭಾಷೆಗಳಲ್ಲಿಯೂ ಸಾರಾಂಶ ನೀಡಬಲ್ಲದು.

=> ಸ್ವಯಂಚಾಲಿತ ವರದಿ: ಸಭೆಯ ನಂತರ 'ಮಿನಿಟ್ಸ್ ಆಫ್ ಮೀಟಿಂಗ್' (Minutes of Meeting) ತಯಾರಿಸುವ ಕೆಲಸವನ್ನು ಇದು ಸರಳಗೊಳಿಸುತ್ತದೆ.

* ಅಂಕಿ-ಅಂಶಗಳು : ಸಭಾಸಾರ್ ಸಾಧನದ ವೇಗವಾದ ಅಳವಡಿಕೆ ಭಾರತದಗ್ರಾಮೀಣ ಡಿಜಿಟಲ್ ಸಿದ್ಧತೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಆಗಸ್ಟ್14, 2024ರಂದು ಯೋಜನೆಯ ಅಧಿಕೃತ ಚಾಲನೆ ನೀಡಲಾಗಿದ್ದು, ಅದರ ಮುಂದಿನ ದಿನವೇ ನಡೆದ ಸ್ವಾತಂತ್ರ್ಯ ದಿನದ ವಿಶೇಷ ಗ್ರಾಮ ಸಭೆಗಳಲ್ಲಿ 12,667ಪಂಚಾಯತ್ ಗಳು ಈ ಸಾಧನವನ್ನು ಬಳಸಿವೆ. ನಂತರ ಅಕ್ಟೋಬರ್ 2, 2024ರಂದು ನಡೆದ ಗಾಂಧಿ ಜಯಂತಿ ಗ್ರಾಮ ಸಭೆಗಳಲ್ಲಿ 77,198ಪಂಚಾಯತ್‌ಗಳು ಭಾಗವಹಿಸುವ ಮೂಲಕ ಇದರ ವ್ಯಾಪಕ ಸ್ವೀಕಾರವನ್ನು ತೋರಿಸಿವೆ. ಡಿಸೆಂಬರ್ 3, 2024ರ ಪ್ರಸ್ತುತ ವರದಿ ಪ್ರಕಾರ, 92,376ಪಂಚಾಯತ್‌ಗಳು ಸಭಾಸಾರ್ ಬಳಕೆ ಮಾಡುತ್ತಿದ್ದು, ಇದು ಗ್ರಾಮೀಣ ಆಡಳಿತದಲ್ಲಿ ಡಿಜಿಟಲ್ ಪರಿವರ್ತನೆ ವೇಗವಾಗಿ ಸಾಗುತ್ತಿದೆ ಎಂಬುದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ.

*** ಆಡಳಿತದ ಮೇಲೆ ಇದರ ಪ್ರಭಾವ :**

=> ಪಾರದರ್ಶಕತೆ (Transparency): ಸಭೆಯಲ್ಲಿ ಯಾರು ಏನು ಹೇಳಿದರು ಮತ್ತು ಯಾವ ತೀರ್ಮಾನ ತೆಗೆದುಕೊಳ್ಳಲಾಯಿತು

ಎಂಬುದು ನಿಖರವಾಗಿ ದಾಖಲಾಗುವುದರಿಂದ ಭ್ರಷ್ಟಾಚಾರ ಅಥವಾ ಮಾಹಿತಿ ತಿರುಚುವಿಕೆಗೆ ಅವಕಾಶ ಇರುವುದಿಲ್ಲ.

=> ಉತ್ತರ ಹೊಣೆಗಾರಿಕೆ (Accountability): ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ನೀಡಿದ ಭರವಸೆಗಳು ಡಿಜಿಟಲ್ ರೂಪದಲ್ಲಿ ದಾಖಲಾಗಿರುತ್ತವೆ.

=> ಸಮರ್ಪಕ ಅನುಷ್ಠಾನ: ಯೋಜನೆಗಳ ಆಯ್ಕೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸುವಾಗ ಉಂಟಾಗುವ ಗೊಂದಲಗಳನ್ನು ಇದು ನಿವಾರಿಸುತ್ತದೆ.

* ತ್ರಿಪುರಾ ರಾಜ್ಯದ ಯಶಸ್ವಿ ಮಾದರಿ : ಈ ಯೋಜನೆಯ ಯಶಸ್ಸಿನಲ್ಲಿ ತ್ರಿಪುರಾ ರಾಜ್ಯವು ಮಾದರಿಯಾಗಿ ನಿಂತಿದೆ. ಅಲ್ಲಿನ 1,194 ಗ್ರಾಮ ಪಂಚಾಯತ್‌ಗಳಲ್ಲಿ 1,047 (ಶೇ. 87) ಪಂಚಾಯತ್‌ಗಳು ಒಂದೇ ದಿನ ಈ ತಂತ್ರಜ್ಞಾನವನ್ನು ಬಳಸುವ ಮೂಲಕ ರಾಷ್ಟ್ರೀಯ ಗಮನ ಸೆಳೆದಿವೆ.

* 'ಸಭಾಸಾರ್' ಅಳವಡಿಕೆಯು ಗ್ರಾಮ ಪಂಚಾಯತ್‌ಗಳನ್ನು ಕೇವಲ ಕಚೇರಿಗಳನ್ನಾಗಿ ಉಳಿಸದೆ, ಅವುಗಳನ್ನು ಆಧುನಿಕ ಮತ್ತು ತಂತ್ರಜ್ಞಾನ ಆಧಾರಿತ ಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸುತ್ತಿದೆ. ಇದು "ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ" (Minimum Government, Maximum Governance) ತತ್ವಕ್ಕೆ ಪೂರಕವಾಗಿದೆ.

## 07 Jan 2026

### ಉತ್ತರ ಪ್ರದೇಶವು ಲಕ್ನೋದಲ್ಲಿ ರಾಜ್ಯದ ಮೊದಲ ಬ್ರೈಲ್ ಗ್ರಂಥಾಲಯವನ್ನು ಪ್ರಾರಂಭಿಸಿದೆ



* ಉತ್ತರ ಪ್ರದೇಶವು ಸಮಾವೇಶಕಾರಿ ಶಿಕ್ಷಣ (Inclusive Education) ದಿಕ್ಕಿನಲ್ಲಿ ಮಹತ್ವದ ಹೆಜ್ಜೆ ಇಟ್ಟು, ದೃಷ್ಟಿಹೀನರಿಗೆ ಮೀಸಲಾದ ರಾಜ್ಯದ ಮೊದಲ ಬ್ರೈಲ್ ಗ್ರಂಥಾಲಯವನ್ನು ಆರಂಭಿಸಿದೆ. ಈ ಗ್ರಂಥಾಲಯವನ್ನು ಲಕ್ನೋದಲ್ಲಿನ ಡಾ. ಶಕುಂತಲಾ ಮಿಶ್ರ ರಾಷ್ಟ್ರೀಯ ಪುನರ್ವಸತಿ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗಿದೆ. ಇದರ ಉದ್ದೇಶವು ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳಿಗೆ ಪ್ರವೇಶ, ಜೊತೆಗೆ ದೃಷ್ಟಿಹೀನ ವಿದ್ಯಾರ್ಥಿಗಳಲ್ಲಿ ಸ್ವಾವಲಂಬನೆ, ಆತ್ಮಗೌರವ ಮತ್ತು ಸ್ವತಂತ್ರತೆ ಹೆಚ್ಚಿಸುವುದಾಗಿದೆ.

* ಈ ಬ್ರೈಲ್ ಗ್ರಂಥಾಲಯವು ವಿಶ್ವವಿದ್ಯಾಲಯದ ಸ್ವಾಮಿ ವಿವೇಕಾನಂದ ಕೇಂದ್ರ ಗ್ರಂಥಾಲಯದ ಮೊದಲ ಮಹಡಿಯಲ್ಲಿ ಇದೆ. ಇದನ್ನು ಉಪಕುಲಪತಿ ಆಚಾರ್ಯ ಸಂಜಯ್ ಸಿಂಗ್ ಅವರು ಉದ್ಘಾಟಿಸಿದ್ದು, ಇದು ಸಮಾನ ಶೈಕ್ಷಣಿಕ ಅವಕಾಶಗಳತ್ತದ ಮೈಲಿಗಲ್ಲು ಎಂದು ವರ್ಣಿಸಿದರು. ಈ ಯೋಜನೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ "ಎಲ್ಲರಿಗೂ ಶಿಕ್ಷಣ" ದೃಷ್ಟಿಕೋನಕ್ಕೆ ಹೊಂದಿಕೊಂಡಿದೆ.

* ಈ ಗ್ರಂಥಾಲಯದಲ್ಲಿ ಈಗಾಗಲೇ 4,000ಕ್ಕಿಂತ ಹೆಚ್ಚು ಬ್ರೈಲ್ ಪುಸ್ತಕಗಳು ಲಭ್ಯವಿವೆ. ಈ ಪುಸ್ತಕಗಳು ರಾಷ್ಟ್ರೀಯ ಶಿಕ್ಷಣ ನೀತಿ (NEP) ಅನುಸಾರವಾಗಿ ಸಿದ್ಧಗೊಂಡಿದ್ದು, ವಿಶ್ವವಿದ್ಯಾಲಯದ 54 ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದೆ. ಎಲ್ಲಾ ಪಠ್ಯಪುಸ್ತಕಗಳನ್ನು ವಿಶ್ವವಿದ್ಯಾಲಯದ ಸ್ವಂತ ಬ್ರೈಲ್ ಮುದ್ರಣಾಲಯದಲ್ಲಿ ಮುದ್ರಿಸಲಾಗಿದ್ದು, ಇದರಿಂದ ಗುಣಮಟ್ಟ, ಸಮಯಪಾಲನೆ ಮತ್ತು ಪಠ್ಯಕ್ರಮದ ಹೊಂದಾಣಿಕೆ ಖಚಿತವಾಗಿದೆ.

* ಉದ್ಘಾಟನಾ ಸಮಾರಂಭದಲ್ಲಿ ಉಪಕುಲಪತಿ ಅವರು ಲೂಯಿ ಬ್ರೈಲ್ ಅವರ ಜನ್ಮದಿನದ ಪ್ರಯುಕ್ತ ಪುಷ್ಪಾರ್ಪಣೆ ಸಲ್ಲಿಸಿದರು. ಅವರು ದೃಷ್ಟಿಹೀನ ವಿದ್ಯಾರ್ಥಿಗಳು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಸ್ವಾವಲಂಬಿಗಳಾಗಿ, ಧೈರ್ಯಶಾಲಿಗಳಾಗಿ ಬೆಳೆಯಬೇಕು ಎಂದು ಕರೆ ನೀಡಿದರು. ಜೊತೆಗೆ ಆಧುನಿಕ ಕಂಪ್ಯೂಟರ್ ತರಬೇತಿ ಸೌಲಭ್ಯಗಳನ್ನು ವಿಸ್ತರಿಸಲು ಆಡಳಿತಕ್ಕೆ ಸೂಚಿಸಿದರು.

* ಈ ಗ್ರಂಥಾಲಯವು ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ವಿಶ್ವವಿದ್ಯಾಲಯದ ಹೊರಗಿನ ದೃಷ್ಟಿಹೀನರಿಗೂ ಸಾಮಾನ್ಯ ಮತ್ತು ಕಾರ್ಪೊರೇಟ್ ಸದಸ್ಯತ್ವದ ಮೂಲಕ ಪ್ರವೇಶವನ್ನು ನೀಡುತ್ತದೆ. ಇದರಲ್ಲಿ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕುಳಿತು ಓದಬಹುದಾದ ವಿಶಾಲ ಓದುಗಾಲಯವೂ ಇದೆ. ಈ ಮೂಲಕ ಇದು ರಾಜ್ಯಮಟ್ಟದ ಸಮಾವೇಶಕಾರಿ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರವಾಗಿ ರೂಪುಗೊಳ್ಳಲಿದೆ.

*** ಭಾರತದ ಪ್ರಮುಖ ಬ್ರೈಲ್ ಗ್ರಂಥಾಲಯಗಳು:**

# ರಾಷ್ಟ್ರೀಯ ಪ್ರವೇಶಯೋಗ್ಯ ಗ್ರಂಥಾಲಯ (NIEPVD), ಡೆಹ್ರಾಡೂನ್: ಇದು ದೇಶದ ಪ್ರಮುಖ ಕೇಂದ್ರವಾಗಿದ್ದು, ವಿಸ್ತೃತ ಬ್ರೈಲ್ ಪುಸ್ತಕ ಸಂಗ್ರಹ ಮತ್ತು ಉಚಿತ ಮನೆಮಟ್ಟದ ಪುಸ್ತಕ ವಿತರಣಾ ಸೇವೆ ಒದಗಿಸುತ್ತದೆ.

# ದೆಹಲಿ ಸಾರ್ವಜನಿಕ ಗ್ರಂಥಾಲಯ (DPL) – ಬ್ರೈಲ್ ಸೇವೆ: ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ರಾಷ್ಟ್ರಮಟ್ಟದ ಸೇವೆ, ಇಲ್ಲಿ ಬ್ರೈಲ್ ಪುಸ್ತಕಗಳು ಮತ್ತು ಮಾಗಜೀನುಗಳು ಲಭ್ಯವಿವೆ.

# ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ (NAB): ಗೋವಾ, ದೆಹಲಿ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ಶಾಖೆಗಳು ಇದ್ದು, ಬ್ರೈಲ್ ಮತ್ತು ಆಡಿಯೋ ಸಂಪನ್ಮೂಲಗಳನ್ನು ಒದಗಿಸುತ್ತವೆ.

# ಸುಗ್ಗಮ್ಯ ಪುಸ್ತಕಾಲಯ (Sugamya Pustakalaya): ಇದು ಒಂದು ಆನ್‌ಲೈನ್ ವೇದಿಕೆ ಆಗಿದ್ದು, ಕರ್ನಾಟಕ, ಗುಜರಾತ್, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಗ್ರಂಥಾಲಯಗಳು ಮತ್ತು ಪ್ರವೇಶಯೋಗ್ಯ ವಿಷಯ ಪೂರೈಕೆದಾರರ ಮಾಹಿತಿಯನ್ನು ನೀಡುತ್ತದೆ.

# ಮಿತ್ರಜ್ಯೋತಿ, ಬೆಂಗಳೂರು (ಕರ್ನಾಟಕ): ಕರ್ನಾಟಕದ ಪ್ರಮುಖ ಸಂಸ್ಥೆಯಾಗಿದ್ದು, ಬ್ರೈಲ್ ಪುಸ್ತಕಗಳು, ಶಿಕ್ಷಣ ಸಹಾಯ ಮತ್ತು ಪುನರ್ವಸತಿ ಸೇವೆಗಳನ್ನು ಒದಗಿಸುತ್ತದೆ.

* ಬ್ರೈಲ್ ಗ್ರಂಥಾಲಯಗಳನ್ನು ಹುಡುಕಲು, ಸುಗ್ಗಮ್ಯ ಪುಸ್ತಕಾಲಯ ವೆಬ್‌ಸೈಟ್ ಮೂಲಕ ದೇಶದಾದ್ಯಂತ ಇರುವ ಬ್ರೈಲ್ ಗ್ರಂಥಾಲಯಗಳು ಹಾಗೂ ಸಂಪನ್ಮೂಲಗಳ ಮಾಹಿತಿ ಪಡೆಯಬಹುದು. ಜೊತೆಗೆ, ನಿಮ್ಮ ರಾಜ್ಯದ NAB ಶಾಖೆಗಳನ್ನು ಸಂಪರ್ಕಿಸುವ ಮೂಲಕ ಸ್ಥಳೀಯ ಸೇವೆಗಳ ವಿವರಗಳು ಲಭ್ಯವಾಗುತ್ತವೆ. NIEPVD ವೆಬ್‌ಸೈಟ್‌ನಲ್ಲಿ ರಾಷ್ಟ್ರೀಯ ಪ್ರವೇಶಯೋಗ್ಯ ಗ್ರಂಥಾಲಯ ಮತ್ತು ಪ್ರಕಟಣೆಗಳ ಮಾಹಿತಿ ಸಿಗುತ್ತದೆ. ಅಲ್ಲದೆ, AICB ಮುಂತಾದ ಸಂಸ್ಥೆಗಳ ಮೂಲಕವೂ ದೇಶದ ವಿವಿಧ ಬ್ರೈಲ್ ಗ್ರಂಥಾಲಯಗಳ ಜಾಲತಾಣದ ವಿವರಗಳನ್ನು ತಿಳಿದುಕೊಳ್ಳಬಹುದು.

### ಮಣಿಪುರದಲ್ಲಿ ಶಾಂತಿ ಸ್ಥಾಪನೆಯತ್ತ ಪ್ರಸಾರ್ ಭಾರತಿ ಹೆಜ್ಜೆ: ಆಕಾಶವಾಣಿಯಲ್ಲಿ 'ತಾಡೌ' ಭಾಷಾ ಕಾರ್ಯಕ್ರಮ ಪುನರಾರಂಭ




* ಮಣಿಪುರದಲ್ಲಿ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ಜನಾಂಗೀಯ ಸಂಘರ್ಷಗಳ ನಡುವೆ ಸಾಂಸ್ಕೃತಿಕ ಬಾಂಧವ್ಯವನ್ನು ಬೆಸೆಯಲು ಕೇಂದ್ರ ಸರ್ಕಾರದ ಸಾರ್ವಜನಿಕ ಪ್ರಸಾರ ಸಂಸ್ಥೆಯಾದ ಪ್ರಸಾರ್ ಭಾರತಿ (Prasar Bharati) ಮಹತ್ವದ ನಿರ್ಧಾರ ಕೈಗೊಂಡಿದೆ. ಇಂಫಾಲ್ ಆಕಾಶವಾಣಿ ಕೇಂದ್ರದಿಂದ ತಾಡೌ (Thadou) ಭಾಷೆಯ ನೇರ (Live) ರೇಡಿಯೋ ಕಾರ್ಯಕ್ರಮಗಳನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

* ತಾಡೌ ಸೇರಿದಂತೆ ಮಣಿಪುರದ ಪ್ರಮುಖ ಉಪಭಾಷೆಗಳಲ್ಲಿ ನೇರ ಪ್ರಸಾರ ಆರಂಭಿಸಲು ಅಗತ್ಯವಿರುವ ಸಿಬ್ಬಂದಿ ನೇಮಕಾತಿ ಕುರಿತು

ಇಂಫಾಲ್ ಆಕಾಶವಾಣಿಯ ಕಾರ್ಯಕ್ರಮ ಮುಖ್ಯಸ್ಥರಿಂದ ಸಲಹೆಗಳನ್ನು ಪ್ರಸಾರ್ ಭಾರತಿ ಕೇಳಿಕೊಂಡಿದೆ. ಡಿಸೆಂಬರ್ 12ರಂದು ಕಳುಹಿಸಿದ ಪತ್ರವು ತಾಡೌ ಇಂಪಿ ಮಣಿಪುರ ಸಂಘಟನೆಯ ಅಧಿಕೃತ ಮನವಿಗೆ ಪ್ರತಿಕ್ರಿಯೆಯಾಗಿದ್ದು, ಹಿಂದಿನ ತಾಡೌ ಭಾಷಾ ಸಿಬ್ಬಂದಿಯನ್ನು ಮರಳಿ ಕರೆತರುವುದು ಅಥವಾ ಎಲ್ಲಾ ಸಂಬಂಧಿತ ಸಮುದಾಯಗಳಿಂದ ಹೊಸ ಸಿಬ್ಬಂದಿಯನ್ನು ನೇಮಕ ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿತ್ತು.

* 2023ರ ಮೇ ತಿಂಗಳಲ್ಲಿ ಆರಂಭವಾದ ಸಂಘರ್ಷಗಳ ಸಮಯದಲ್ಲಿ ತಾಡೌ ಸಿಬ್ಬಂದಿ ಇಂಫಾಲ್ ಕಣಿವೆಯಿಂದ ಹೊರ ಹೋಗಿದ್ದರಿಂದ ನೇರ ತಾಡೌ ಭಾಷಾ ಕಾರ್ಯಕ್ರಮಗಳು ಸ್ಥಗಿತಗೊಂಡವು. ಇದಾದ ಬಳಿಕ ತಾಡೌ ಭಾಷೆಯ ದಾಖಲಿತ ಹಾಡುಗಳಷ್ಟೇ ಪ್ರಸಾರವಾಗುತ್ತಿದ್ದವು. ಪ್ರಸ್ತುತ, ತಾಡೌ ಸೇರಿ ಪ್ರಮುಖ ಉಪಭಾಷೆಗಳಲ್ಲಿ ದಿನನಿತ್ಯ ದಾಖಲಿತ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದು, ತಾಡೌ ವಿಷಯವು ಸಂಜೆ 5ರಿಂದ 5.30ರವರೆಗೆ ಪ್ರಸಾರವಾಗುತ್ತಿದೆ ಎಂದು ಪ್ರಸಾರ್ ಭಾರತಿ ಸ್ಪಷ್ಟಪಡಿಸಿದೆ.

* ತಾಡೌ ಇಂಪಿ ಮಣಿಪುರ ಸಂಸ್ಥೆಯು ತಾಡೌ ಭಾಷೆ, ಸಂಸ್ಕೃತಿ ಮತ್ತು ಸಾಮಾಜಿಕ-ಸಾಂಸ್ಕೃತಿಕ ಗುರುತನ್ನು ಉಳಿಸಿಕೊಳ್ಳಲು ನೇರ ಪ್ರಸಾರ ಅತ್ಯಂತ ಅಗತ್ಯ ಎಂದು ತಿಳಿಸಿದೆ. ಜೊತೆಗೆ, ತಾಡೌ ಜನಾಂಗವನ್ನು ಕುಕಿಯಾಗಿ ತಪ್ಪಾಗಿ ಗುರುತಿಸುವ ಕುರಿತ ಆತಂಕಗಳು ಇತ್ತೀಚಿನ ಅಂತರಸಮುದಾಯ ಶಾಂತಿ ಸಭೆಗಳ ಮೂಲಕ ಪರಿಹಾರಗೊಂಡಿವೆ ಎಂದು ಹೇಳಿದೆ. ಪರಸ್ಪರ ಗೌರವ ಮತ್ತು ಶಾಂತಿಯುತ ಸಹವಾಸದ ಭರವಸೆಗಳು ಸಿಬ್ಬಂದಿ ಭಯವಿಲ್ಲದೆ ಮರಳಿ ಬರುವಂತೆ ಪ್ರೇರೇಪಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

* ಈ ಮುಂದಾಳತ್ವವು 2024ರ ಆಗಸ್ಟ್‌ನಲ್ಲಿ ಅಸ್ಸಾಂನ ಕಾರ್ಬಿ ಆಂಗ್ಲಾಂಗ್‌ನಲ್ಲಿ ಶಾಂತಿ ಸಭೆಗಳಲ್ಲಿ ಪಾಲ್ಗೊಂಡ ಬಳಿಕ ತಾಡೌ ಸಮುದಾಯದ ನಾಯಕ ನೇಹ್ಮಮ್ ಜೋಂಹಾವೋ ಅವರ ಹತ್ಯೆಯ ಹಿನ್ನೆಲೆಯಲ್ಲಿ ಇನ್ನಷ್ಟು ಮಹತ್ವ ಪಡೆದಿದೆ. ನಂತರ, 2024ರ ನವೆಂಬರ್‌ನಲ್ಲಿ ಗುಹಾವಾಟಿಯಲ್ಲಿ ನಡೆದ ತಾಡೌ ಕನ್ವೆನ್ಶನ್‌ನಲ್ಲಿ ಅಂಗೀಕರಿಸಲಾದ ಘೋಷಣೆಯ ಮೂಲಕ, ತಾಡೌ ಮಣಿಪುರದ ಸ್ವತಂತ್ರ ಮೂಲನಿವಾಸಿ ಜನಾಂಗವಾಗಿದ್ದು, ತನ್ನದೇ ಆದ ಭಾಷೆ, ಸಂಸ್ಕೃತಿ ಮತ್ತು ಇತಿಹಾಸ ಹೊಂದಿದೆ ಎಂದು ಪುನರ್ ಘೋಷಣೆ ಮಾಡಲಾಗಿದೆ. ಈ ಗುರುತು 1956ರ ರಾಷ್ಟ್ರಪತಿ ಆದೇಶದಡಿ ಅಧಿಕೃತವಾಗಿ ಮಾನ್ಯತೆ ಪಡೆದಿದೆ.

## ಬ್ರಹ್ಮಪುತ್ರ ನದಿಯಡಿ ಭಾರತದ ಮೊದಲ ರೈಲು-ರಸ್ತೆ ಸುರಂಗ: ಅಸ್ಸಾಂನಲ್ಲಿ ₹18,600 ಕೋಟಿಯ ಮಹತ್ವಾಕಾಂಕ್ಷಿ ಯೋಜನೆ!




* ಭಾರತದ ಮೂಲಸೌಕರ್ಯ ಕ್ಷೇತ್ರದಲ್ಲಿ ಹೊಸ ಇತಿಹಾಸ ಬರೆಯಲು ಕೇಂದ್ರ ಸರ್ಕಾರ ಸಜ್ಜಾಗಿದೆ. ಈಶಾನ್ಯ ಭಾರತದ ಜೀವನಾಡಿ ಎನಿಸಿಕೊಂಡಿರುವ ಬ್ರಹ್ಮಪುತ್ರ ನದಿಯ ಅಡಿಯಲ್ಲಿ ದೇಶದ ಮೊದಲ ನೀರೊಳಗಿನ ರೈಲು ಮತ್ತು ರಸ್ತೆ ಸುರಂಗ (Underwater Twin-Tube Tunnel) ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಈ ಯೋಜನೆಯು ಅಸ್ಸಾಂನ ಗೋಪ್ಪುರ ಮತ್ತು ನುಮಾಲಿಗರ್ ನಡುವಿನ ಕೊಂಡಿಯಾಗಲಿದೆ.

* ಯೋಜನೆಯ ತಾಂತ್ರಿಕ ವಿಶೇಷತೆಗಳು ಈ ಸುರಂಗವನ್ನು ಅತ್ಯಾಧುನಿಕ ತಂತ್ರಜ್ಞಾನದ ಮಾದರಿಯನ್ನಾಗಿ ರೂಪಿಸುತ್ತಿವೆ: ಇದು ನದಿಯ ತಳಭಾಗದಿಂದ ಸುಮಾರು 32 ಮೀಟರ್ ಆಳದಲ್ಲಿ ಹಾದುಹೋಗಲಿದ್ದು, ಒಟ್ಟು 15.8 ಕಿಲೋಮೀಟರ್ ಉದ್ದದೊಂದಿಗೆ ದೇಶದ ಅತಿ ಉದ್ದದ ನೀರೊಳಗಿನ ಸುರಂಗಗಳಲ್ಲಿ ಒಂದಾಗಲಿದೆ. ವಿಶೇಷವಾಗಿ, ಇಲ್ಲಿ ಟ್ವಿನ್ ಟ್ಯೂಬ್ ವ್ಯವಸ್ಥೆ ಅಳವಡಿಸಲಾಗುತ್ತಿದ್ದು, ಒಂದು ಟ್ಯೂಬ್‌ನಲ್ಲಿ ವಿದ್ಯುತ್ ಚಾಲಿತ ರೈಲು ಮಾರ್ಗವಿದ್ದು, ಎರಡನೇ ಟ್ಯೂಬ್‌ನಲ್ಲಿ ರಸ್ತೆ ಮಾರ್ಗದ ಮೂಲಕ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗುತ್ತದೆ.

* ಪ್ರಯಾಣದ ಅವಧಿಯಲ್ಲಿ ಭಾರಿ ಇಳಿತ ಈ ಯೋಜನೆಯ ಅತ್ಯಂತ ಮಹತ್ವದ ಲಾಭವಾಗಿದೆ: ಪ್ರಸ್ತುತ ಗೋಪ್ಪುರದಿಂದ ನುಮಾಲಿಗರ್‌ಗೆ ನದಿಯನ್ನು ದಾಟಿ ಹೋಗಲು ಹಲವು ಗಂಟೆಗಳ ಕಾಲ ಬೇಕಾಗುತ್ತಿದ್ದು, ಸುರಂಗ ಮಾರ್ಗ ಪೂರ್ಣಗೊಂಡ ನಂತರ ಪ್ರಯಾಣದ ಸಮಯವು ಕೇವಲ 30 ನಿಮಿಷಗಳಿಗೆ ಇಳಿಕೆಯಾಗಲಿದೆ. ಇದರಿಂದ ಜನಸಾಮಾನ್ಯರಿಗೆ ವೇಗವಾದ ಸಂಚಾರ ಸೌಲಭ್ಯ ದೊರೆಯುವ ಜೊತೆಗೆ, ಸರಕು ಸಾಗಣೆಗೆ ಅಪೂರ್ವ ವೇಗ ಮತ್ತು ದಕ್ಷತೆ ಲಭಿಸಿ ಆರ್ಥಿಕ ಚಟುವಟಿಕೆಗಳಿಗೆ ಹೊಸ ಚೈತನ್ಯ ಒದಗಲಿದೆ.

* ಕಾರ್ಯತಂತ್ರದ ಮಹತ್ವ (Strategic Importance) ದೃಷ್ಟಿಯಿಂದ ಈ ಯೋಜನೆ ಅತ್ಯಂತ ಪ್ರಮುಖವಾಗಿದೆ: ಚೀನಾ ಗಡಿಯ ಸಮೀಪವಿರುವ ಪ್ರದೇಶದಲ್ಲಿ ಸೈನ್ಯ ಮತ್ತು ಭಾರೀ ಯುದ್ಧ ಸಾಮಗ್ರಿಗಳನ್ನು ತ್ವರಿತವಾಗಿ ಸಾಗಿಸಲು ಈ ಸುರಂಗ ಮಹತ್ವದ ಭದ್ರತಾ ನೆರವು ಒದಗಿಸಲಿದೆ. ಜೊತೆಗೆ, ಇದು ಉತ್ತರಪೂರ್ವ ಭಾರತದ ವ್ಯಾಪಾರ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ಚೈತನ್ಯ ನೀಡುವ ಮೂಲಕ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲಿದೆ. ಮತ್ತೊಂದು ಪ್ರಮುಖ ಹೈಲೈಟ್ ಎಂದರೆ, ಮಳೆಗಾಲದಲ್ಲಿ ಪ್ರವಾಹದ ಭೀತಿ ಎದುರಿಸುವ ಸೇತುವೆಗಳಿಗಿಂತ ಭಿನ್ನವಾಗಿ, ನೀರೊಳಗಿನ ಸುರಂಗವು ಎಲ್ಲಾ ಹವಾಮಾನಗಳಲ್ಲೂ ಸುಗಮ ಮತ್ತು ಸುರಕ್ಷಿತ ಸಂಚಾರಕ್ಕೆ ಅವಕಾಶ ಕಲ್ಪಿಸುತ್ತದೆ, ಇದರಿಂದ ದೀರ್ಘಕಾಲಿಕ ವಿಶ್ವಾಸಾರ್ಹ ಸಂಪರ್ಕ ಸಾಧ್ಯವಾಗುತ್ತದೆ.

ಈ ಯೋಜನೆಯ ಅಂದಾಜು ವೆಚ್ಚ ಸುಮಾರು 18,600 ಕೋಟಿ ರೂ. ಆಗಿದ್ದು, ಶೀಘ್ರದಲ್ಲೇ ಕೇಂದ್ರ ಸಚಿವ ಸಂಪುಟದ ಅಂತಿಮ ಅನುಮೋದನೆ ದೊರೆತ ನಂತರ ಕಾಮಗಾರಿ ಆರಂಭವಾಗಲಿದೆ.

## ಆಯುಷ್‌ಗೆ ಜಾಗತಿಕ ಮನ್ನಣೆ: ಒಮಾನ್ ಮತ್ತು ನ್ಯೂಜಿಲೆಂಡ್ ವ್ಯಾಪಾರ ಒಪ್ಪಂದದಲ್ಲಿ ಭಾರತೀಯ ವೈದ್ಯ ಪದ್ಧತಿಗೆ ಸ್ಥಾನ!




* ಭಾರತದ ಸಾಂಪ್ರದಾಯಿಕ ಆರೋಗ್ಯ ವ್ಯವಸ್ಥೆಯಾದ ಆಯುಷ್ (AYUSH) ಜಾಗತಿಕ ಮಟ್ಟದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ಡಿಸೆಂಬರ್ 2025ರಲ್ಲಿ ಅಂತಿಮಗೊಂಡ ಒಮಾನ್ ಮತ್ತು ನ್ಯೂಜಿಲೆಂಡ್ ದೇಶಗಳೊಂದಿಗಿನ ದ್ವಿಪಕ್ಷೀಯ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ (FTA) ಭಾರತೀಯ ಆಯುಷ್ ಪದ್ಧತಿಯನ್ನು ಅಧಿಕೃತವಾಗಿ ಸೇರಿಸಲಾಗಿದೆ. ಇದು ಅಂತರಾಷ್ಟ್ರೀಯ ವಾಣಿಜ್ಯ ವೇದಿಕೆಯಲ್ಲಿ ಭಾರತದ 'ಮೃದು ಶಕ್ತಿ'ಯನ್ನು (Soft Power) ಸಾಬೀತುಪಡಿಸಿದೆ.

* ಭಾರತ-ಒಮಾನ್ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (CEPA) ಮತ್ತು ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ಆರೋಗ್ಯ ಅನುಬಂಧಗಳು (Health Annexures) ಸೇರಿಸಲ್ಪಟ್ಟಿದ್ದು, ಇದರ ಮೂಲಕ ಆಯುಷ್ ಉತ್ಪನ್ನಗಳಿಗೆ ಕಾನೂನುಬದ್ಧ ಮಾನ್ಯತೆ ದೊರಕಿದೆ. ಇದರಿಂದ ಆಯುಷ್ ವೈದ್ಯರು, ಯೋಗ ಶಿಕ್ಷಕರು ಹಾಗೂ ಹರ್ಬಲ್ ಉತ್ಪನ್ನಗಳ ರಫ್ತುದಾರರಿಗೆ ವಿದೇಶಿ ಮಾರುಕಟ್ಟೆಗಳಲ್ಲಿ ಎದುರಾಗುತ್ತಿದ್ದ ನಿಯಂತ್ರಣ ಅಡೆತಡೆಗಳು (Regulatory Barriers) ನಿವಾರಣೆಯಾಗಲಿವೆ. ಜೊತೆಗೆ, ನ್ಯೂಜಿಲೆಂಡ್ ಒಪ್ಪಂದದ ಅಡಿಯಲ್ಲಿ ಭಾರತೀಯ ಆಯುಷ್ ವೈದ್ಯರು, ಯೋಗ ಶಿಕ್ಷಕರು ಮತ್ತು ಅಡುಗೆಯವರಿಗೆ ಅಲ್ಲಿ ನೆಲೆಸಲು ಹಾಗೂ ಸೇವೆ ಸಲ್ಲಿಸಲು ವಿಶೇಷ ವೀಸಾ ಸೌಲಭ್ಯಗಳನ್ನು ಒದಗಿಸಲಾಗಿದೆ, ಇದು

ಉದ್ಯೋಗಾವಕಾಶಗಳ ದೃಷ್ಟಿಯಿಂದ ಮಹತ್ವದ ಮುನ್ನಡೆ ಆಗಿದೆ.

* ಆಯುಷ್ (AYUSH) ಎಂದರೇನು? ಆಯುಷ್ ಎಂಬುದು ಭಾರತದ ಆರು ಪ್ರಮುಖ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗಳ ಸಂಕ್ಷಿಪ್ತ ರೂಪವಾಗಿದ್ದು, ಇದರಲ್ಲಿ Ayurveda (ಆಯುರ್ವೇದ) – ಗಿಡಮೂಲಿಕೆ ಆಧಾರಿತ ಸಮಗ್ರ ಚಿಕಿತ್ಸೆ, Yoga & Naturopathy (ಯೋಗ ಮತ್ತು ನಿಸರ್ಗ ಚಿಕಿತ್ಸೆ) – ದೈಹಿಕ-ಮಾನಸಿಕ ಆರೋಗ್ಯದ ಸಮತೋಲನ, Unani (ಯುನಾನಿ) – ನೈಸರ್ಗಿಕ ಮೂಲದ ಔಷಧೀಯ ಪದ್ಧತಿ, Siddha (ಸಿದ್ಧ) – ತಮಿಳುನಾಡಿನ ಪ್ರಾಚೀನ ವೈದ್ಯಕೀಯ ಕಲೆ, ಹಾಗೂ Homeopathy (ಹೋಮಿಯೋಪತಿ) – ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಸಾಂಪ್ರದಾಯಿಕ ಚಿಕಿತ್ಸೆ ಪದ್ಧತಿ ಸೇರಿವೆ.

* ಆಯುಷ್ ಕ್ಷೇತ್ರದ ಮಹತ್ವವನ್ನು ಇತ್ತೀಚಿನ ರಫ್ತು ಅಂಕಿ-ಅಂಶಗಳು ಸ್ಪಷ್ಟಪಡಿಸುತ್ತವೆ. 2024–25ರಲ್ಲಿ ಆಯುಷ್ ಮತ್ತು ಹರ್ಬಲ್ ಉತ್ಪನ್ನಗಳ ರಫ್ತು 6.11 ಶೇಕಡಾ ಏರಿಕೆ ಕಂಡಿದ್ದು, 2023–24ರಲ್ಲಿ USD 649.2 ಮಿಲಿಯನ್ ಇದ್ದ ರಫ್ತು ಮೌಲ್ಯವು 2024–25ರಲ್ಲಿ USD 688.89 ಮಿಲಿಯನ್‌ಗೆ ಏರಿಕೆಯಾಗಿದೆ. ಇದು ನೈಸರ್ಗಿಕ ಮತ್ತು ಸಮಗ್ರ ಚಿಕಿತ್ಸೆಗಳ ಬಗ್ಗೆ ಜಾಗತಿಕ ಆಸಕ್ತಿ ಹೆಚ್ಚುತ್ತಿರುವುದನ್ನು ತೋರಿಸುತ್ತದೆ.

* ಒಮಾನ್ ಮತ್ತು ನ್ಯೂಜಿಲೆಂಡ್ ಜೊತೆಗಿನ ಈ ಒಪ್ಪಂದಗಳು ಭಾರತದ ಸಾಫ್ಟ್ ಪವರ್ ಅನ್ನು ಬಲಪಡಿಸುವ ಜೊತೆಗೆ, ಆಯುಷ್ ಕ್ಷೇತ್ರದಲ್ಲಿ ಸಂಶೋಧನೆ, ಶಿಕ್ಷಣ ಮತ್ತು ವೆಲ್‌ನೆಸ್ ಸೇವೆಗಳ ಸಹಕಾರಕ್ಕೆ ಹೊಸ ದಾರಿಯನ್ನು ತೆರೆದಿವೆ. ಮುಂದಿನ ದಿನಗಳಲ್ಲಿ ಇಂತಹ ವ್ಯಾಪಾರ ಒಪ್ಪಂದಗಳು ಆಯುಷ್ ರಫ್ತು ಹಾಗೂ ಜಾಗತಿಕ ಸ್ವೀಕೃತಿಯನ್ನು ಇನ್ನಷ್ಟು ವೇಗಗೊಳಿಸುವ ನಿರೀಕ್ಷೆಯಿದೆ.

**ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಮುಖ್ಯಾಂಶಗಳು**

- ರಾಷ್ಟ್ರೀಯ ಆಯುಷ್ ಮಿಷನ್ (NAM): ಇದನ್ನು 2014ರಲ್ಲಿ ಭಾರತದಾದ್ಯಂತ ಆಯುಷ್ ಸೇವೆಗಳನ್ನು ವಿಸ್ತರಿಸಲು ಪ್ರಾರಂಭಿಸಲಾಯಿತು.
- ಆಯುಷ್ ಎಕ್ಸಿಲ್ (AYUSHEXCIL): ಇದು ಆಯುಷ್ ಉತ್ಪನ್ನಗಳ ರಫ್ತು ಉತ್ತೇಜಿಸಲು ಸ್ಥಾಪಿಸಲಾದ ಕೌನ್ಸಿಲ್ ಆಗಿದೆ.
- ಆಯುಷ್ ಕ್ವಾಲಿಟಿ ಮಾರ್ಕ್: ಪ್ರಧಾನಿ ಮೋದಿಯವರು 2025ರಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಆಯುಷ್ ಉತ್ಪನ್ನಗಳ ಗುಣಮಟ್ಟದ ಭರವಸೆಗಾಗಿ ಈ ಮಾರ್ಕ್ ಅನ್ನು ಬಿಡುಗಡೆ ಮಾಡಿದ್ದಾರೆ.

**ಮಹತ್ವ:** ಈ ಒಪ್ಪಂದಗಳು ಭಾರತವನ್ನು ಜಾಗತಿಕ 'ಕ್ಷೇಮ ಕೇಂದ್ರ' (Wellness Hub) ವನ್ನಾಗಿ ರೂಪಿಸಲು ಸಹಕಾರಿ.

## ರಬಿ 2025–26: ಪೋಷಕಾಂಶ ಆಧಾರಿತ ಸಬ್ಸಿಡಿ ದರಗಳಿಗೆ ಕೇಂದ್ರ ಸರ್ಕಾರದ ಅನುಮೋದನೆ




* ಜನವರಿ 2025ರಲ್ಲಿ, ಭಾರತ ಸರ್ಕಾರವು (GoI) ರಬಿ 2025–26 ಹಂಗಾಮಿಗೆ ಪೋಷಕಾಂಶ ಆಧಾರಿತ ಸಬ್ಸಿಡಿ (NBS) ದರಗಳಿಗೆ ಅನುಮೋದನೆ ನೀಡಿದೆ. ಈ ದರಗಳು ಅಕ್ಟೋಬರ್ 1, 2025 ರಿಂದ ಮಾರ್ಚ್ 31, 2026ರವರೆಗೆ ಜಾರಿಗೆ ಬರುವಂತಿದ್ದು, ಡಿ-ಅಮೋನಿಯಂ ಫಾಸ್ಫೇಟ್ (DAP) ಮತ್ತು ವಿವಿಧ NPKS (ನೈಟ್ರೋಜನ್, ಫಾಸ್ಫರಸ್, ಪೊಟಾಶಿಯಂ ಮತ್ತು ಗಂಧಕ) ಗೊಬ್ಬರಗಳನ್ನು ಒಳಗೊಂಡಂತೆ ಫಾಸ್ಫಾಟಿಕ್ ಹಾಗೂ ಪೊಟಾಸಿಕ್ (P&K) ಗೊಬ್ಬರಗಳಿಗೆ ಅನ್ವಯವಾಗುತ್ತವೆ.

* ಪೋಷಕಾಂಶ ಆಧಾರಿತ ಸಬ್ಸಿಡಿ (NBS) ಯೋಜನೆಯನ್ನು ಏಪ್ರಿಲ್ 1, 2010 ರಂದು ಪ್ರಾರಂಭಿಸಲಾಗಿದ್ದು, ಇದನ್ನು ರಸಾಯನಿಕಗಳು ಮತ್ತು ಗೊಬ್ಬರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಗೊಬ್ಬರಗಳ ಇಲಾಖೆ ಜಾರಿಗೊಳಿಸುತ್ತಿದೆ. ಈ ಯೋಜನೆಯ ಉದ್ದೇಶ ಸಮತೋಲಿತ ಗೊಬ್ಬರ ಬಳಕೆಯನ್ನು ಉತ್ತೇಜಿಸುವುದು ಹಾಗೂ ನೈಟ್ರೋಜನ್ ಆಧಾರಿತ ಗೊಬ್ಬರಗಳ ಅತಿಯಾದ ಬಳಕೆಯನ್ನು ತಡೆಯುವುದಾಗಿದೆ.

* ಈ ಯೋಜನೆಯಡಿ, P&K ಗೊಬ್ಬರಗಳಿಗೆ (DAP ಸೇರಿದಂತೆ) ಪೋಷಕಾಂಶಗಳ ಪ್ರಮಾಣದ ಆಧಾರದಲ್ಲಿ ನಿಶ್ಚಿತ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ. ಸಬ್ಸಿಡಿ ದರಗಳನ್ನು ವರ್ಷಕ್ಕೆ ಒಮ್ಮೆ ಅಥವಾ ಎರಡು ಬಾರಿ ಪರಿಷ್ಕರಿಸಲಾಗುತ್ತದೆ. ಆರಂಭದಲ್ಲಿ 25 ವಿಧದ ಗೊಬ್ಬರಗಳು ಯೋಜನೆಯಡಿ ಒಳಗೊಂಡಿದ್ದರೆ, ಈಗ ರೈತರಿಗೆ 28 ವಿಧದ P&K ಗೊಬ್ಬರಗಳನ್ನು ಸಬ್ಸಿಡಿ ದರದಲ್ಲಿ ಒದಗಿಸಲಾಗುತ್ತಿದೆ.

=> ಖರೀಫ್ 2024 ರಿಂದ ಸೇರಿಸಿದ ಹೊಸ ಗೊಬ್ಬರಗಳು: NPK (11:30:14) – ಮ್ಯಾಗ್ನೀಷಿಯಂ, ಜಿಂಕ್, ಬೋರಾನ್ ಮತ್ತು ಗಂಧಕದಿಂದ ಬಲಪಡಿಸಿದ ಗೊಬ್ಬರ, ಯೂರಿಯಾ-SSP (5:15:0:10) ಮತ್ತು SSP (0:16:0:11) – ಮ್ಯಾಗ್ನೀಷಿಯಂ, ಜಿಂಕ್ ಮತ್ತು ಬೋರಾನ್‌ನೊಂದಿಗೆ ಬಲಪಡಿಸಿದ ಗೊಬ್ಬರ

=> ರಬಿ 2025–26 ರಿಂದ: ಅಮೋನಿಯಂ ಸಲ್ಫೇಟ್ $((NH_4)_2SO_4)$ ಗೊಬ್ಬರವನ್ನು ಕೂಡ NBS ಯೋಜನೆಯಡಿಯಲ್ಲಿ ಸೇರಿಸಲಾಗಿದೆ.

* ರಬಿ 2025–26ರ NBS ಯೋಜನೆಯಡಿ ನಿಶ್ಚಿತ ಸಬ್ಸಿಡಿ ವ್ಯವಸ್ಥೆಯೊಂದಿಗೆ P&K ಗೊಬ್ಬರ ಕ್ಷೇತ್ರವನ್ನು ಸರ್ಕಾರದ ಮೇಲ್ವಿಚಾರಣೆಯಲ್ಲಿನ ಡಿಕಂಟ್ರೋಲ್‌ಗೆ ಒಳಪಡಿಸಿ, ಕಂಪನಿಗಳು MRP ನಿಗದಿ ಮಾಡುವ ಅವಕಾಶವಿದ್ದು, ಸಬ್ಸಿಡಿಯ ಲಾಭವನ್ನು ನೇರವಾಗಿ ರೈತರಿಗೆ ತಲುಪಿಸುವ ವ್ಯವಸ್ಥೆ ಜಾರಿಯಲ್ಲಿದೆ.

ನಿಯಮಾನುಸರಣಾ ಕ್ರಮಗಳು:

=> ಗೊಬ್ಬರ ಕಂಪನಿಗಳು ಲೆಕ್ಕಪರಿಶೋಧಿತ ವೆಚ್ಚ ವಿವರಗಳನ್ನು ಸಲ್ಲಿಸಬೇಕು

=> ಲಾಭ ಮಿತಿ: ಆಮದುದಾರರು – 8%, ತಯಾರಕರು – 10%, ಸಂಯೋಜಿತ ಸಂಸ್ಥೆಗಳು – 12%

=> ಗೊಬ್ಬರ ಚೀಲಗಳ ಮೇಲೆ MRP ಮತ್ತು ಸಬ್ಸಿಡಿ ವಿವರ ಪ್ರದರ್ಶನ ಕಡ್ಡಾಯ

=> ಹೆಚ್ಚುವರಿ ದರ ವಸೂಲಿಗೆ ಅಗತ್ಯ ವಸ್ತುಗಳ ಕಾಯ್ದೆ (ECA), 1955 ಅಡಿಯಲ್ಲಿ ದಂಡ ವಿಧಿಸಲಾಗುತ್ತದೆ

ಬಜೆಟ್: ರಬಿ 2025–26 ಹಂಗಾಮಿಗೆ ಸರ್ಕಾರವು ರೂ. 37,952.29 ಕೋಟಿ ಸಬ್ಸಿಡಿ ವೆಚ್ಚವನ್ನು ಅಂದಾಜಿಸಿದ್ದು, ಇದು ಖರೀಫ್ 2025 ಹಂಗಾಮಿಗಿಂತ ಸುಮಾರು ರೂ. 736 ಕೋಟಿ ಹೆಚ್ಚು.

*** ರಬಿ 2025–26ರ ಪೋಷಕಾಂಶ ಆಧಾರಿತ ಸಬ್ಸಿಡಿ ದರಗಳು:**

- ನೈಟ್ರೋಜನ್ (N): ರೂ. 43.02 ಪ್ರತಿ ಕಿಲೋಗ್ರಾಂ
- ಫಾಸ್ಫರಸ್ (P): ರೂ. 47.96 ಪ್ರತಿ ಕಿಲೋಗ್ರಾಂ
- ಪೊಟಾಶಿಯಂ (K): ರೂ. 2.38 ಪ್ರತಿ ಕಿಲೋಗ್ರಾಂ
- ಗಂಧಕ (S): ರೂ. 2.87 ಪ್ರತಿ ಕಿಲೋಗ್ರಾಂ

=> DAP ಸಬ್ಸಿಡಿ: ಅಂತರರಾಷ್ಟ್ರೀಯ ಬೆಲೆ ಏರಿಳಿತದಿಂದ ರೈತರನ್ನು ರಕ್ಷಿಸಲು, DAP ಸಬ್ಸಿಡಿಯನ್ನು ರೂ. 21,911/MT (ರಬಿ 2024–25) ರಿಂದ ರೂ. 29,805/MT ಗೆ ಹೆಚ್ಚಿಸಲಾಗಿದೆ.

=> ಸಬ್ಸಿಡಿ ಹೊಂದಿರುವ ಪ್ರಮುಖ ಗೊಬ್ಬರಗಳು: DAP (18-46-0-0): ರೂ. 29,805/MT, ಮ್ಯೂರಿಯೇಟ್ ಆಫ್ ಪೊಟಾಶ್ (MOP 0-0-60-0): ರೂ. 1,428/MT

ಮತ್ತು ಸಿಂಗಲ್ ಸೂಪರ್ ಫಾಸ್ಫೇಟ್ (SSP 0-16-0-11): ರೂ. 7,408/MT

*** ಉತ್ಪಾದನೆ ಮತ್ತು ಉತ್ಪಾದಕತೆ**

=> ಗೊಬ್ಬರ ಉತ್ಪಾದನೆ: 2014ರಲ್ಲಿ 112.19 ಲಕ್ಷ ಮೆಟ್ರಿಕ್ ಟನ್ (LMT) ಇದ್ದ P&K ಗೊಬ್ಬರ ಉತ್ಪಾದನೆ, ಡಿಸೆಂಬರ್ 30, 2025ರ ವೇಳೆಗೆ 168.55 LMTಗೆ ಏರಿಕೆಯಾಗಿದೆ – ಇದು 50%ಕ್ಕಿಂತ ಹೆಚ್ಚು ವೃದ್ಧಿಯಾಗಿದೆ.

=> ಆಹಾರ ಧಾನ್ಯ ಉತ್ಪಾದಕತೆ: 2010–11ರಲ್ಲಿ ಪ್ರತಿ ಹೆಕ್ಟೇರ್‌ಗೆ 1,930 ಕೆಜಿ ಇದ್ದ ಉತ್ಪಾದಕತೆ, 2024–25ರಲ್ಲಿ 2,578 ಕೆಜಿ/ಹೆಕ್ಟೇರ್‌ಗೆ ಹೆಚ್ಚಾಗಿದೆ.

=> ಪೋಷಕಾಂಶ ಬಲಪಡಿಸುವ ಪ್ರೋತ್ಸಾಹಧನ: ಬೋರಾನ್ ಅಥವಾ ಜಿಂಕ್‌ನೊಂದಿಗೆ ಬಲಪಡಿಸಿದ ಗೊಬ್ಬರಗಳಿಗೆ ಕ್ರಮವಾಗಿ

ರೂ. 300 ಮತ್ತು ರೂ. 500 ಪ್ರತಿ ಮೆಟ್ರಿಕ್ ಟನ್ ಹೆಚ್ಚುವರಿ ಪ್ರೋತ್ಸಾಹ ನೀಡಲಾಗುತ್ತದೆ.

* NBS ಯೋಜನೆಯ ಜಾರಿಗೆ ಪಾರದರ್ಶಕತೆ ಮತ್ತು ಸಮನ್ವಯವನ್ನು ಖಚಿತಪಡಿಸಲು ಗೊಬ್ಬರಗಳ ಉತ್ಪಾದನೆ, ಸಾಗಣೆ ಮತ್ತು ಲಭ್ಯತೆಯನ್ನು ಇಂಟಿಗ್ರೇಟೆಡ್ ಫರ್ಟಿಲೈಸರ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (iFMS) ಮೂಲಕ ಡಿಜಿಟಲ್ ರೀತಿಯಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಹಾಗೂ ರಾಜ್ಯಗಳೊಂದಿಗೆ ನಿಯಮಿತ ಸಮನ್ವಯ ಸಭೆಗಳ ಮೂಲಕ ರೈತರಿಗೆ ಸಮಯಕ್ಕೆ ಸರಿಯಾಗಿ ಗೊಬ್ಬರ ಪೂರೈಕೆ ಖಚಿತಪಡಿಸಲಾಗುತ್ತದೆ.

* ರಸಾಯನಿಕಗಳು ಮತ್ತು ಗೊಬ್ಬರಗಳ ಸಚಿವಾಲಯ (MoC&F):-

# ಕೇಂದ್ರ ಸಚಿವರು: ಜಗತ್ ಪ್ರಕಾಶ್ ನಡ್ಡಾ (ರಾಜ್ಯಸಭೆ – ಗುಜರಾತ್)

# ರಾಜ್ಯ ಸಚಿವರು: ಅನುಪ್ರಿಯಾ ಪಟೇಲ್ (ಮಿರ್ಜಾಪುರ, ಉತ್ತರ ಪ್ರದೇಶ)

## ಶಿಕ್ಷಣ ಮತ್ತು ಜಾಗೃತಿ ಚಟುವಟಿಕೆಗಳಿಗೆ 30 ದಿನಗಳ ಡೇಟಾ ವಿಳಂಬ – ಸೆಬಿ ಹೊಸ ಪ್ರಸ್ತಾವನೆ



* ಮಾರುಕಟ್ಟೆ ಮಾಹಿತಿಯ ದುರುಪಯೋಗವನ್ನು ತಡೆದು, ಹೂಡಿಕೆದಾರ ಶಿಕ್ಷಣ ವಿಷಯಗಳ ಪ್ರಸ್ತುತತೆಯನ್ನು ಕಾಪಾಡುವ ಉದ್ದೇಶದಿಂದ ಮಾರುಕಟ್ಟೆ ನಿಯಂತ್ರಕ ಸಂಸ್ಥೆಯಾದ ಸೆಬಿ (ಭಾರತೀಯ ಷೇರುಪೇಟೆ ಮತ್ತು ವಿನಿಮಯ ಮಂಡಳಿ) ಶಿಕ್ಷಣ ಹಾಗೂ ಹೂಡಿಕೆದಾರ ಜಾಗೃತಿ ಚಟುವಟಿಕೆಗಳಲ್ಲಿ ಬಳಸುವ ಷೇರು ಬೆಲೆ ಡೇಟಾಗೆ ಏಕರೂಪದ 30 ದಿನಗಳ ಕಾಲವಿಲಂಬ ವಿಧಿಸುವ ಪ್ರಸ್ತಾವನೆ ಮುಂದಿಟ್ಟಿದೆ. ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿದ್ದು, ಅವುಗಳನ್ನು ಜನವರಿ 27ರವರೆಗೆ ಸಲ್ಲಿಸಬಹುದು.

* ಈ ಕ್ರಮದ ಉದ್ದೇಶ, ಮಾರುಕಟ್ಟೆ ಮಾಹಿತಿಯ ದುರುಪಯೋಗವನ್ನು ತಡೆಯುವುದರ ಜೊತೆಗೆ ಶಿಕ್ಷಣಾತ್ಮಕ ವಿಷಯಗಳು ಪ್ರಸ್ತುತ ಮತ್ತು ಉಪಯುಕ್ತವಾಗಿರುವಂತೆ ಕಾಯ್ದುಕೊಳ್ಳುವುದು ಎಂದು ಸೆಬಿ ತಿಳಿಸಿದೆ. ಜೊತೆಗೆ, 2024ರ ಮೇ ಹಾಗೂ 2025ರ ಜನವರಿಯಲ್ಲಿ ಹೊರಡಿಸಲಾದ ಸೆಬಿಯ ಎರಡು ವೃತ್ತಪತ್ರಿಕೆಗಳಲ್ಲಿ ಉಂಟಾಗಿದ್ದ ಅಸಮಂಜಸತೆಯನ್ನು ಸರಿಪಡಿಸುವ ಉದ್ದೇಶವೂ ಇದಕ್ಕಿದೆ.

* 2024ರ ಮೇ ನಲ್ಲಿ, ಸೆಬಿ ಲೈವ್ ಮಾರುಕಟ್ಟೆ ಡೇಟಾ ಹಂಚಿಕೆಯನ್ನು ವ್ಯಾಪಾರ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸಿ, ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮಗಳಿಗೆ ಒಂದು ದಿನದ ವಿಳಂಬದೊಂದಿಗೆ ಡೇಟಾ ಬಳಸಲು ಅನುಮತಿ ನೀಡಿತ್ತು. ನಂತರ 2025ರ ಜನವರಿಯಲ್ಲಿ ನಿಯಮಗಳನ್ನು ಮತ್ತಷ್ಟು ಕಠಿಣಗೊಳಿಸಿ, ಶಿಕ್ಷಣ ಮಾತ್ರ ನಡೆಸುವ ಸಂಸ್ಥೆಗಳು ಮೂರು ತಿಂಗಳ ಹಳೆಯ ಡೇಟಾ ಬಳಸಬೇಕು ಎಂದು ಸೂಚಿಸಿತು.

* ಪ್ರಸ್ತುತ ವ್ಯವಸ್ಥೆಯಂತೆ, ಶಿಕ್ಷಣ ಸಂಸ್ಥೆಗಳು ವಿಷಯ ಸಿದ್ಧಪಡಿಸಲು ಒಂದು ದಿನದ ವಿಳಂಬದ ಡೇಟಾ ಬಳಸಬಹುದಾದರೂ, ತರಗತಿಗಳಲ್ಲಿ ಅಥವಾ ಯಾವುದೇ ಮಾಧ್ಯಮದ ಮೂಲಕ ವಿಷಯ ಹಂಚುವಾಗ ಮಾತ್ರ ಮೂರು ತಿಂಗಳ ಹಳೆಯ ಡೇಟಾ ಬಳಸಬೇಕಾಗಿತ್ತು. ಇದರಿಂದ ವಿಷಯದ ಪ್ರಸ್ತುತತೆ ಕಡಿಮೆಯಾಗುತ್ತಿದೆ ಎಂಬ ಅಭಿಪ್ರಾಯವನ್ನು ಹಲವಾರು ಹಿತಾಸಕ್ತಿಪಕ್ಷಗಳು ವ್ಯಕ್ತಪಡಿಸಿದ್ದವು.

* ಸೆಬಿಯ ಒಳಚರ್ಚೆಗಳ ಪ್ರಕಾರ, ಒಂದು ದಿನದ ವಿಳಂಬ ದುರುಪಯೋಗಕ್ಕೆ ಅವಕಾಶ ನೀಡುವಷ್ಟು ಕಡಿಮೆಯಾಗಿದೆ ಮತ್ತು ಮೂರು ತಿಂಗಳ ವಿಳಂಬ ಶಿಕ್ಷಣದ ಪರಿಣಾಮಕಾರಿತ್ವಕ್ಕೆ ಅತಿಯಾದದ್ದು ಎಂಬ ನಿರ್ಣಯಕ್ಕೆ ಬಂದಿತ್ತು. ಈ ಹಿನ್ನೆಲೆ, ಶಿಕ್ಷಣ ಮತ್ತು ಜಾಗೃತಿ ಚಟುವಟಿಕೆಗಳಿಗೆ ಡೇಟಾ ಹಂಚಿಕೆ ಮತ್ತು ಬಳಕೆ ಎರಡಕ್ಕೂ ಒಂದೇ ರೀತಿಯ 30 ದಿನಗಳ ವಿಳಂಬ ಜಾರಿಗೆ ತರುವಂತೆ ಸೆಬಿ ಪ್ರಸ್ತಾವಿಸಿದೆ. ಈ 30 ದಿನಗಳ ಏಕರೂಪದ ಕಾಲವಿಲಂಬವು, ಮಾರುಕಟ್ಟೆ ಡೇಟಾ ದುರುಪಯೋಗವನ್ನು ತಡೆಯಲು ಹಾಗೂ ಶಿಕ್ಷಣಾತ್ಮಕ ವಿಷಯಗಳನ್ನು ಹೆಚ್ಚು ಪ್ರಸ್ತುತವಾಗಿರಿಸಲು ಸಾಕ್ಷಮವಾಗಲಿದೆ ಎಂದು ಸೆಬಿ ಅಭಿಪ್ರಾಯಪಟ್ಟಿದೆ.

* ಈಗಾಗಲೇ ಡಿಸೆಂಬರ್‌ನಲ್ಲಿ ಸೆಬಿ ಅಧ್ಯಕ್ಷ ತುಹಿನ್ ಕಾಂತಾ ಪಾಂಡೆ, ಹೂಡಿಕೆದಾರ ಶಿಕ್ಷಣಕ್ಕಾಗಿ ಲೈವ್ ಮಾರುಕಟ್ಟೆ ಡೇಟಾ ಬಳಕೆಯನ್ನು ನಿಷೇಧಿಸುವ ನಿಯಮಗಳನ್ನು ಶೀಘ್ರದಲ್ಲೇ ಬದಲಿಸಲಾಗುವುದು ಎಂದು ಹೇಳಿದ್ದರು. ಅಲ್ಲದೆ, ಈ ಸಂಬಂಧ ಹೊರಡಿಸಲಾದ ಎರಡು ವೃತ್ತಪತ್ರಿಕೆಗಳಲ್ಲಿ ಅಸಮಂಜಸತೆ ಇದ್ದುದನ್ನು ಅವರು ಒಪ್ಪಿಕೊಂಡಿದ್ದರು."ಶಿಕ್ಷಣ ಉದ್ದೇಶಗಳಿಗೆ ಹಳೆಯ ಮಾರುಕಟ್ಟೆ ಡೇಟಾ ಮಾತ್ರ ಬಳಸಬೇಕು, ಪ್ರಸ್ತುತ ಲೈವ್ ಡೇಟಾ ಬಳಸಬಾರದು" ಎಂದು ಅವರು ಸ್ಪಷ್ಟಪಡಿಸಿದ್ದರು.

## ಭಾರತದ ಸುಪ್ರೀಂ ಕೋರ್ಟ್‌ನಲ್ಲಿ ಭೂತಾನ್ ಕಾನೂನು ಸಹಾಯಕರು: ದ್ವೈಪಕ್ಷಿಕ ಒಪ್ಪಂದ



* ಭಾರತದ ಸುಪ್ರೀಂ ಕೋರ್ಟ್ ಮತ್ತು ಭೂತಾನ್‌ನ ಉಚ್ಚ ನ್ಯಾಯಾಲಯದ ನಡುವೆ ಕಾನೂನು ಸಹಾಯಕರ (Law Clerks) ವಿನಿಮಯಕ್ಕಾಗಿ ಮಹತ್ವದ ಒಪ್ಪಂದ ಪತ್ರ (MoU) ಗೆ ಸಹಿ ಮಾಡಲಾಗಿದೆ. ಈ ಒಪ್ಪಂದವು ಎರಡೂ ದೇಶಗಳ ನ್ಯಾಯಾಂಗ ಸಹಕಾರ, ಸಾಮರ್ಥ್ಯ ವೃದ್ಧಿ ಮತ್ತು ಕಾನೂನು ಜ್ಞಾನ ಹಂಚಿಕೆಗೆ ಹೊಸ ಆಯಾಮ ನೀಡಿದೆ. ಈ ಬಗ್ಗೆ ಭಾರತದ ಮುಖ್ಯ ನ್ಯಾಯಮೂರ್ತಿ ನ್ಯಾಯಮೂರ್ತಿ ಸೂರ್ಯ ಕಾಂತ್ ಪ್ರಕಟಣೆ ನೀಡಿ, ಭೂತಾನ್‌ನ ಇಬ್ಬರು ಕಾನೂನು ಸಹಾಯಕರನ್ನು ಭಾರತದ ಸುಪ್ರೀಂ ಕೋರ್ಟ್‌ಗೆ ಸ್ವಾಗತಿಸಿದರು. ಇದು ಭಾರತ-ಭೂತಾನ್ ನಡುವಿನ ನ್ಯಾಯಾಂಗ ಸಂಬಂಧಗಳ ಬಲವರ್ಧನೆಯನ್ನು ಸೂಚಿಸುತ್ತದೆ.

* ಭಾರತ ಮತ್ತು ಭೂತಾನ್ ನಡುವಿನ ಈ MoU ಮೂಲಕ ಭೂತಾನ್‌ನ ಯುವ ಕಾನೂನು ವೃತ್ತಿಪರರಿಗೆ ಭಾರತದ ಸುಪ್ರೀಂ ಕೋರ್ಟ್‌ನಲ್ಲಿ ಕಾರ್ಯನಿರ್ವಹಿಸುವ ಅವಕಾಶ ಕಲ್ಪಿಸಲಾಗಿದೆ. ನ್ಯಾಯಾಂಗ ತರಬೇತಿ ಮತ್ತು ದೀರ್ಘಕಾಲೀನ ಸಂಸ್ಥಾತ್ಮಕ ಸಹಕಾರವೇ ಇದರ ಪ್ರಮುಖ ಉದ್ದೇಶವಾಗಿದೆ.

**MoUನ ಪ್ರಮುಖ ಅಂಶಗಳು:**

=> ಭೂತಾನ್‌ನ ಎರಡು ಕಾನೂನು ಸಹಾಯಕರು ಭಾರತದ ಸುಪ್ರೀಂ ಕೋರ್ಟ್‌ನಲ್ಲಿ ಕೆಲಸ ಮಾಡಲಿದ್ದಾರೆ

=> ಕಾರ್ಯಾವಧಿ: ಮೂರು ತಿಂಗಳು

=> ಭಾರತೀಯ ಕಾನೂನು ಸಹಾಯಕರಿಗೆ ನೀಡುವಂತೆಯೇ ಮಾನಧನ (Honorarium) ನೀಡಲಾಗುತ್ತದೆ

=> ಪ್ರಯಾಣ ವೆಚ್ಚವನ್ನು ಭಾರತದ ಸುಪ್ರೀಂ ಕೋರ್ಟ್ ಭರಿಸಲಿದೆ

* ಒಪ್ಪಂದದ ಹಿನ್ನೆಲೆ: 2025ರ ಅಕ್ಟೋಬರ್‌ನಲ್ಲಿ ಭಾರತದ ಆಗಿನ ಮುಖ್ಯ ನ್ಯಾಯಮೂರ್ತಿ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಭೂತಾನ್‌ಗೆ ಅಧಿಕೃತ ಭೇಟಿ ನೀಡಿದ್ದು, ಭಾರತ-ಭೂತಾನ್ ನ್ಯಾಯಾಂಗ ಸಹಕಾರವನ್ನು ಬಲಪಡಿಸುವಲ್ಲಿ ಪ್ರಮುಖವಾಗಿತ್ತು. ಈ ವೇಳೆ ಉಚ್ಚ ಮಟ್ಟದ ಚರ್ಚೆಗಳ ಮೂಲಕ ತಂತ್ರಜ್ಞಾನ ಆಧಾರಿತ ನ್ಯಾಯಾಲಯ ವ್ಯವಸ್ಥೆಗಳು, ಇ-ಕೋರ್ಟ್, ಡಿಜಿಟಲ್ ಸೇವೆಗಳ ಅನುಭವ ಹಂಚಿಕೆ ಹಾಗೂ ಯುವ ಕಾನೂನು ವೃತ್ತಿಪರರ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಗೆ ಒತ್ತು ನೀಡಲಾಯಿತು. ಇದರ ಫಲವಾಗಿ ಕಾನೂನು ಸಹಾಯಕರ

ವಿನಿಮಯಕ್ಕಾಗಿ MoU ರೂಪುಗೊಂಡು, ಇಂದಿನ ಒಪ್ಪಂದಕ್ಕೆ ದಾರಿ ಮಾಡಿಕೊಟ್ಟಿತು.

*** ಈ ಉಪಕ್ರಮದ ಮಹತ್ವ:**

=> ಭಾರತ-ಭೂತಾನ್ ನಡುವಿನ ನ್ಯಾಯಾಂಗ ರಾಜತಾಂತ್ರಿಕತೆ ಬಲವರ್ಧನೆ

=> ಭೂತಾನ್ ನ್ಯಾಯಾಂಗಕ್ಕೆ ಭಾರತದ ಕಾನೂನು ವ್ಯವಸ್ಥೆಯ ಅನುಭವ

=> ಭಾರತದ Neighbourhood First Policy ಅಡಿಯಲ್ಲಿ ಪ್ರಾದೇಶಿಕ ಸಹಕಾರಕ್ಕೆ ಉತ್ತೇಜನ

## ಭಾರತದ ರೈಲ್ವೆ ಇತಿಹಾಸದಲ್ಲಿ ಹೊಸ ಮೈಲಿಗಲ್ಲು: ಹರಿಯಾಣದಲ್ಲಿ ದೇಶದ ಮೊದಲ 'ಹೈಡ್ರೋಜನ್ ರೈಲು' ಆರಂಭ!



* ಭಾರತವು ಪರಿಸರ ಸ್ನೇಹಿ ಮತ್ತು ಹಸಿರು ಸಾರಿಗೆಯತ್ತ ಕ್ರಾಂತಿಕಾರಿ ಹೆಜ್ಜೆ ಇಟ್ಟಿದೆ. ದೇಶದ ಮೊದಲ ಹೈಡ್ರೋಜನ್ ಚಾಲಿತ ರೈಲು (Hydrogen Powered Train) ಹರಿಯಾಣದ ಜಿಂದ್ (Jind) – ಸೋನಿಪತ್ (Sonipat) ಮಾರ್ಗದಲ್ಲಿ ಶೀಘ್ರದಲ್ಲೇ ಸಂಚಾರ ಆರಂಭಿಸಲಿದೆ. ಇದು ಭಾರತೀಯ ರೈಲ್ವೆಯ 'ಹೈಡ್ರೋಜನ್ ಫಾರ್ ಹೆರಿಟೇಜ್' (Hydrogen for Heritage) ಉಪಕ್ರಮದ ಅಡಿಯಲ್ಲಿ ಕೈಗೊಳ್ಳಲಾದ ಮಹತ್ವಾಕಾಂಕ್ಷಿ ಪೈಲಟ್ ಯೋಜನೆಯಾಗಿದೆ.

* ಈ ಹೈಡ್ರೋಜನ್ ಚಾಲಿತ ರೈಲು ಉತ್ತರ ರೈಲ್ವೆಯ ಪೈಲಟ್ ಯೋಜನೆ ಆಗಿದ್ದು, ಹರಿಯಾಣದ ಜಿಂದ್-ಸೋನಿಪತ್ ಮಾರ್ಗದಲ್ಲಿ ಸಂಚರಿಸಲಿದೆ. ಹೈಡ್ರೋಜನ್ ರೈಲು ಸೆಟ್‌ಗಳ ತಯಾರಿಕೆ ಪೂರ್ಣಗೊಂಡಿದ್ದು, ಭಾರತದಲ್ಲಿ ರೈಲು ಸಾರಿಗೆಗೆ ಹೈಡ್ರೋಜನ್ ಅನ್ನು ಸ್ವಚ್ಛ ಇಂಧನವಾಗಿ ಬಳಸುವ ಸಾಧ್ಯತೆಯನ್ನು ಪ್ರದರ್ಶಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

* ಹೈಡ್ರೋಜನ್ ಘಟಕ ಮತ್ತು ವಿದ್ಯುತ್ ವ್ಯವಸ್ಥೆ: ಜಿಂದ್‌ನಲ್ಲಿ 3,000 ಕಿಲೋಗ್ರಾಂ ಸಂಗ್ರಹ ಸಾಮರ್ಥ್ಯವಿರುವ ಹೈಡ್ರೋಜನ್ ಉತ್ಪಾದನಾ ಘಟಕ ಸ್ಥಾಪಿಸಲಾಗಿದೆ. ಈ ಘಟಕಕ್ಕೆ 11 ಕಿಲೋವೋಲ್ಟ್ ಸ್ಥಿರ ವಿದ್ಯುತ್ ಪೂರೈಕೆ ಒದಗಿಸಲಾಗಿದ್ದು, ನಿರಂತರ ಹೈಡ್ರೋಜನ್ ಉತ್ಪಾದನೆಗೆ ಸಹಕಾರಿಯಾಗಿದೆ. ಹೈಡ್ರೋಜನ್ ಅನ್ನು ಇಲೆಕ್ಟ್ರೋಲಿಸಿಸ್ ಪ್ರಕ್ರಿಯೆ ಮೂಲಕ ಉತ್ಪಾದಿಸಲಾಗುತ್ತಿದ್ದು, ಇದು ಹಸಿರು ಹೈಡ್ರೋಜನ್ ಉತ್ಪಾದನೆಯ ಪ್ರಮುಖ ವಿಧಾನವಾಗಿದೆ.

* ಹರಿಯಾಣದ ಮುಖ್ಯ ಕಾರ್ಯದರ್ಶಿ ಅನುರಾಗ್ ರಾಸ್ತೋಗಿ ಅವರು ಯೋಜನೆಯ ಪ್ರಗತಿಯನ್ನು ಪರಿಶೀಲಿಸಿ, ದಕ್ಷಿಣ ಹರಿಯಾಣ ವಿದ್ಯುತ್ ವಿತರಣ ನಿಗಮ (DHBVN) ಅಧಿಕಾರಿಗಳಿಗೆ ವಿದ್ಯುತ್ ಪೂರೈಕೆಯ ನಿಯಮಿತ ಮೇಲ್ವಿಚಾರಣೆಗೆ ಸೂಚನೆ ನೀಡಿದ್ದಾರೆ. ರಾಷ್ಟ್ರಮಟ್ಟದಲ್ಲಿ, ಈ ಯೋಜನೆ ರಿಸರ್ಚ್ ಡಿಸೈನ್ ಅಂಡ್ ಸ್ಟ್ಯಾಂಡರ್ಡ್ಸ್ ಆರ್ಗನೈಸೇಶನ್ (RDSO) ಮಾರ್ಗಸೂಚಿಗಳ ಪ್ರಕಾರ ಸುರಕ್ಷತೆ ಹಾಗೂ ಕಾರ್ಯಕ್ಷಮತಾ ಮಾನದಂಡಗಳನ್ನು ಅನುಸರಿಸುತ್ತದೆ.

* ಹೈಡ್ರೋಜನ್ ರೈಲುಗಳು ಬಳಕೆಯ ಹಂತದಲ್ಲಿ ಶೂನ್ಯ ಕಾರ್ಬನ್ ಉತ್ಸರ್ಗ ಹೊಂದಿದ್ದು, ವಿದ್ಯುದೀಕರಣವಾಗದ ಮಾರ್ಗಗಳಲ್ಲಿ ಡೀಸೆಲ್ ರೈಲುಗಳಿಗೆ ಉತ್ತಮ ಪರ್ಯಾಯವಾಗಿವೆ. ಈ ಯೋಜನೆ ಫಾಸಿಲ್ ಇಂಧನ ಅವಲಂಬನೆ ಕಡಿಮೆ ಮಾಡುವುದು, ಹಸಿರು ಹೈಡ್ರೋಜನ್ ಪ್ರೋತ್ಸಾಹ ಹಾಗೂ ಭಾರತದ ದೀರ್ಘಾವಧಿಯ ಹವಾಮಾನ ಗುರಿಗಳನ್ನು ಸಾಧಿಸುವುದು ಎಂಬ ಉದ್ದೇಶಗಳಿಗೆ ಹೊಂದಿಕೆಯಾಗುತ್ತದೆ.

ಪರೀಕ್ಷಾ ದೃಷ್ಟಿಕೋನದಿಂದ ಮುಖ್ಯ ಮಾಹಿತಿ:

# ಜರ್ಮನಿ: ಹೈಡ್ರೋಜನ್ ಚಾಲಿತ ರೈಲನ್ನು ಜಾರಿಗೆ ತಂದ ವಿಶ್ವದ ಮೊದಲ ದೇಶ.

# ಆರ್‌ಡಿಎಸ್‌ಒ (RDSO): ಈ ಯೋಜನೆಯ ಸುರಕ್ಷತಾ ಮಾನದಂಡಗಳನ್ನು ಲಖನೌದ ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (Research Designs and Standards Organisation) ಸಿದ್ಧಪಡಿಸಿದೆ.

# ನೆಟ್ ಝೀರೋ ಗುರಿ: ಭಾರತೀಯ ರೈಲ್ವೆಯು 2030ರ ವೇಳೆಗೆ 'ನೆಟ್ ಝೀರೋ ಕಾರ್ಬನ್ ಎಮಿಟರ್' ಆಗುವ ಗುರಿ ಹೊಂದಿದೆ.

## ಭಾರತೀಯ ಸೇನೆಯಲ್ಲಿ 'ಡ್ರೋನ್ ಯುಗ' ಆರಂಭ: 'ಭೈರವ್' ಮತ್ತು 'ರುದ್ರ' ಪಡೆಗಳ ಮೂಲಕ ಆಧುನಿಕ ಯುದ್ಧತಂತ್ರಕ್ಕೆ ನಾಂದಿ!



ಆಧುನಿಕ ಯುದ್ಧತಂತ್ರದ ಸವಾಲುಗಳನ್ನು ಎದುರಿಸಲು ಭಾರತೀಯ ಸೇನೆಯು ತನ್ನ ಇತಿಹಾಸದಲ್ಲೇ ಅತಿದೊಡ್ಡ ರೂಪಾಂತರಕ್ಕೆ ಸಾಕ್ಷಿಯಾಗಿದೆ. ಜನವರಿ 2026ರಲ್ಲಿ ಸೇನೆಯು 'ಭೈರವ್' (Bhairav) ಎಂಬ ಅತ್ಯಾಧುನಿಕ ಡ್ರೋನ್ ಯುದ್ಧ ಪಡೆಯನ್ನು ಸ್ಥಾಪಿಸಿದೆ. ಇದು ಶತ್ರುಗಳ ನಿದ್ದೆಗೆಡಿಸುವ 'ಗೇಮ್ ಚೇಂಜರ್' ತಂತ್ರಜ್ಞಾನವಾಗಿ ಹೊರಹೊಮ್ಮಿದೆ.

* ಏನಿದು 'ಭೈರವ್' ಪಡೆ? (Bhairav Special Force)

ಭೈರವ್ ಪಡೆ ಎನ್ನುವುದು ತಂತ್ರಜ್ಞಾನ ಮತ್ತು ಶಕ್ತಿಯ ಅಪೂರ್ವ ಸಂಗಮ. ಇದು ಕೇವಲ ಒಂದು ಪಡೆಯಲ್ಲ, ಬದಲಾಗಿ 1 ಲಕ್ಷಕ್ಕೂ ಹೆಚ್ಚು ತರಬೇತಿ ಪಡೆದ ಡ್ರೋನ್ ಆಪರೇಟರ್‌ಗಳನ್ನು ಹೊಂದಿರುವ ವಿಶ್ವದ ಅತಿದೊಡ್ಡ ಡ್ರೋನ್ ಯುದ್ಧ ಘಟಕಗಳಲ್ಲಿ ಒಂದಾಗಿದೆ.

- ಕಾರ್ಯಚಟುವಟಿಕೆ ಮತ್ತು ಕಾರ್ಯತಂತ್ರದ ಪಾತ್ರ ಅತ್ಯಂತ ಮಹತ್ವದ್ದಾಗಿದೆ: ಈ ಪಡೆ ಶತ್ರು ಪ್ರದೇಶದ ಆಳಕ್ಕೆ ನುಗ್ಗಿ ಡ್ರೋನ್‌ಗಳ ಮೂಲಕ ನಿಖರ ದಾಳಿ ನಡೆಸುವುದು, ರಿಯಲ್-ಟೈಮ್ ನಿಗಾವಹಣೆ ಹಾಗೂ ಗುಪ್ತಚರ ಮಾಹಿತಿ ಸಂಗ್ರಹಿಸುವುದು ಎಂಬ ಪ್ರಮುಖ ಜವಾಬ್ದಾರಿಗಳನ್ನು ಹೊಂದಿದೆ. ಜೊತೆಗೆ, ಇದು ಸಾಮಾನ್ಯ ಕಾಲಾಳು ಪಡೆ (Infantry) ಮತ್ತು ಪ್ಯಾರಾ ಸ್ಪೆಷಲ್ ಫೋರ್ಸ್‌ಗಳು (Para SF) ನಡುವಿನ ಕಾರ್ಯಾಚರಣಾ ಅಂತರವನ್ನು ತುಂಬುವ 'ಲೈಟ್ ಕಮಾಂಡೋ' ಪಡೆಯಾಗಿ ಕಾರ್ಯನಿರ್ವಹಿಸಿ, ವೇಗ, ನಿಖರತೆ ಮತ್ತು ತಂತ್ರಜ್ಞಾನ ಆಧಾರಿತ ಯುದ್ಧ ಕಾರ್ಯಾಚರಣೆಗಳಿಗೆ ಹೊಸ ಬಲ ಒದಗಿಸುತ್ತದೆ.

* 'ರುದ್ರ ಬ್ರಿಗೇಡ್' ಗಳ ಬಲ (Rudra Brigades) ಸೇನೆಯ ಯುದ್ಧ ಸಾಮರ್ಥ್ಯಕ್ಕೆ ಹೊಸ ಆಯಾಮ ನೀಡುತ್ತಿದೆ: ಭೈರವ್ ಪಡೆಯೊಂದಿಗೆ ಭಾರತೀಯ ಸೇನೆಯು 'ರುದ್ರ ಬ್ರಿಗೇಡ್' ಗಳನ್ನು ರಚಿಸಿದ್ದು, ಇವು ಪದಾತಿ ದಳ, ಮೆಕ್ಯಾನೈಸ್ಡ್ ಯುನಿಟ್‌ಗಳು, ಟ್ಯಾಂಕ್‌ಗಳು, ಫಿರಂಗಿ ದಳ ಹಾಗೂ ಅನ್ಮ್ಯಾನ್ಡ್ ಏರಿಯಲ್ ಸಿಸ್ಟಮ್ಸ್ (UAS)ಗಳನ್ನು ಒಳಗೊಂಡಿರುವ ಸರ್ವಸನ್ನದ್ಧ ಸಂಯುಕ್ತ ತಂಡಗಳಾಗಿವೆ. ಶತ್ರುಗಳ ಮೇಲೆ ಅತ್ಯಂತ ವೇಗವಾಗಿ, ನಿಖರವಾಗಿ ಮತ್ತು ಮಾರಕವಾಗಿ ಪ್ರತಿಕ್ರಿಯಿಸಲು ಈ ಬ್ರಿಗೇಡ್‌ಗಳನ್ನು ಸಿದ್ಧಪಡಿಸಲಾಗಿದ್ದು, ಆಧುನಿಕ ಯುದ್ಧ ತಂತ್ರದಲ್ಲಿ ಭಾರತದ ಬಲವನ್ನು ಗಣನೀಯವಾಗಿ ಹೆಚ್ಚಿಸುತ್ತಿವೆ.

ಭೈರವ್ ಪಡೆಯ ಪ್ರಮುಖ ವಿಶೇಷತೆಗಳು:

- ಬ್ಯಾಟಾಲಿಯನ್‌ಗಳ ಸಂಖ್ಯೆ: ಈಗಾಗಲೇ 15 ಭೈರವ್ ಬ್ಯಾಟಾಲಿಯನ್‌ಗಳನ್ನು ಸ್ಥಾಪಿಸಲಾಗಿದ್ದು, ಇವುಗಳನ್ನು ಚೀನಾ ಮತ್ತು ಪಾಕಿಸ್ತಾನ ಗಡಿಗಳಲ್ಲಿ ನಿಯೋಜಿಸಲಾಗಿದೆ. ಶೀಘ್ರದಲ್ಲೇ ಈ ಸಂಖ್ಯೆಯನ್ನು 25ಕ್ಕೆ ಏರಿಸಲಾಗುವುದು.
- ಸನ್ಸ್ ಆಫ್ ದಿ ಸಾಯಿಲ್ (Sons of the Soil): ರಾಜಸ್ಥಾನದ ಮರುಭೂಮಿ ಪ್ರದೇಶದಲ್ಲಿ ನಿಯೋಜಿಸಲಾದ ಭೈರವ್ ಪಡೆಗಳಲ್ಲಿ ಸ್ಥಳೀಯ ಯೋಧರಿಗೇ ಆದ್ಯತೆ ನೀಡಲಾಗಿದೆ.

KPSCVaani

ಇದರಿಂದ ಸ್ಥಳೀಯ ಭೌಗೋಳಿಕತೆ ಮತ್ತು ಭಾಷೆಯ ಅರಿವು ಕಾರ್ಯಾಚರಣೆಗೆ ಅನುಕೂಲವಾಗುತ್ತದೆ.
- ಮೊದಲ ಪ್ರದರ್ಶನ: 2026ರ ಜನವರಿ 15ರಂದು ರಾಜಸ್ಥಾನದ ಜೈಪುರದಲ್ಲಿ ನಡೆಯುವ 78ನೇ ಸೇನಾ ದಿನಾಚರಣೆ (Army Day) ಪರೇಡ್‌ನಲ್ಲಿ ಈ ಪಡೆ ಮೊದಲ ಬಾರಿಗೆ ಸಾರ್ವಜನಿಕವಾಗಿ ಪ್ರದರ್ಶಿಸಲ್ಪಡಲಿದೆ.
* ಭಾರತೀಯ ಸೇನೆಯ ಬಗ್ಗೆ ಪ್ರಮುಖ ಅಂಶಗಳು:
=> ಪಾತ್ರ: ಭೂ ಆಧಾರಿತ ಸೇನಾ ಪಡೆ, ಭಾರತೀಯ ಸಶಸ್ತ್ರ ಪಡೆಗಳ ಅತಿದೊಡ್ಡ ಘಟಕ
=> ಸೇನಾ ಮುಖ್ಯಸ್ಥ (COAS): ಜನರಲ್ ಉಪೇಂದ್ರ ದ್ವಿವೇದಿ
=> ಮುಖ್ಯಾಲಯ: ನವದೆಹಲಿ
=> ಸ್ಥಾಪನೆ: 1895
=> ಧ್ಯೇಯವಾಕ್ಯ: ಸೇವಾ ಪರಮೋ ಧರ್ಮ

## ಭಾರತದ 'ಡೀಪ್-ಟೆಕ್' ಕ್ರಾಂತಿ: ಸ್ಟಾರ್ಟ್‌ಅಪ್‌ಗಳಿಗೆ 3 ವರ್ಷಗಳ ಕಡ್ಡಾಯ ನಿಯಮ ರದ್ದು!




* ಭಾರತವನ್ನು ಜಾಗತಿಕ ತಂತ್ರಜ್ಞಾನದ ಕೇಂದ್ರವನ್ನಾಗಿ (Global Tech Hub) ರೂಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಐತಿಹಾಸಿಕ ತೀರ್ಮಾನವೊಂದನ್ನು ಕೈಗೊಂಡಿದೆ. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಯು (DSIR) ತನ್ನ 42ನೇ ಸಂಸ್ಥಾಪನಾ ದಿನದಂದು ಡೀಪ್-ಟೆಕ್ ಸ್ಟಾರ್ಟ್‌ಅಪ್‌ಗಳಿಗೆ ನೀಡಲಾಗುತ್ತಿದ್ದ 'ಮೂರು ವರ್ಷಗಳ ಕಡ್ಡಾಯ ಅಸ್ತಿತ್ವ'ದ ನಿಯಮವನ್ನು ರದ್ದುಗೊಳಿಸಿದೆ.
* ಈ ನಿರ್ಧಾರವು ಆರಂಭಿಕ ಹಂತದ ಡೀಪ್-ಟೆಕ್ ಸ್ಟಾರ್ಟ್‌ಅಪ್‌ಗಳಿಗೆ ತಕ್ಷಣದ ಸಾಂಸ್ಥಿಕ ಬೆಂಬಲ ಒದಗಿಸಿ, ತಾಂತ್ರಿಕವಾಗಿ ಪ್ರೌಢಾವಸ್ಥೆ ಹೊಂದಿರುವ ಉದ್ಯಮಗಳು ಮೂರು ವರ್ಷ ಕಾಯದೇ ವೇಗವಾಗಿ ಬೆಳೆಯಲು ನೆರವಾಗುತ್ತದೆ ಹಾಗೂ ಭಾರತವನ್ನು ಜಾಗತಿಕ ತಂತ್ರಜ್ಞಾನ ಪೂರೈಕೆದಾರ ರಾಷ್ಟ್ರವನ್ನಾಗಿ ರೂಪಿಸುವ ಉದ್ದೇಶ ಹೊಂದಿದೆ.
ಡೀಪ್-ಟೆಕ್ (Deep-Tech) ಎಂದರೇನು?
ಡೀಪ್-ಟೆಕ್ ಎಂದರೆ ವೈಜ್ಞಾನಿಕ ಸಂಶೋಧನೆ ಅಥವಾ ಎಂಜಿನಿಯರಿಂಗ್ ಆವಿಷ್ಕಾರಗಳ ಮೇಲೆ ಆಧಾರಿತವಾದ ತಂತ್ರಜ್ಞಾನ. ಉದಾಹರಣೆಗೆ: ಕೃತಕ ಬುದ್ಧಿಮತ್ತೆ (AI), ಕ್ವಾಂಟಮ್ ಕಂಪ್ಯೂಟಿಂಗ್, ಬಯೋಟೆಕ್ನಾಲಜಿ ಮತ್ತು ಬಾಹ್ಯಾಕಾಶ ತಂತ್ರಜ್ಞಾನ. ಇವುಗಳಿಗೆ ದೀರ್ಘಕಾಲದ ಸಂಶೋಧನೆ ಮತ್ತು ಹೆಚ್ಚಿನ ಬಂಡವಾಳದ ಅಗತ್ಯವಿರುತ್ತದೆ.
* ಪ್ರಮುಖ ಸುಧಾರಣೆಗಳು ಮತ್ತು ಮುಖ್ಯಾಂಶಗಳು:
ಡೀಪ್-ಟೆಕ್ ಸ್ಟಾರ್ಟ್‌ಅಪ್‌ಗಳಿಗೆ ಸರ್ಕಾರದ ಬೆಂಬಲವನ್ನು ವೇಗಗೊಳಿಸುವ ಉದ್ದೇಶದಿಂದ ಮಹತ್ವದ ನೀತಿ ಸುಧಾರಣೆಗಳನ್ನು ಘೋಷಿಸಲಾಗಿದೆ. DSIR–IRDP ಮಾನ್ಯತೆಗೆ ಇದ್ದ 3 ವರ್ಷಗಳ ನಿಯಮವನ್ನು ರದ್ದುಪಡಿಸಲಾಗಿದ್ದು, ಇದರಿಂದ ಹೊಸದಾಗಿ ಆರಂಭವಾದ ಆದರೆ ತಾಂತ್ರಿಕವಾಗಿ ಪ್ರೌಢ (Deep-Tech) ಸ್ಟಾರ್ಟ್‌ಅಪ್‌ಗಳು ತಕ್ಷಣವೇ ಸರ್ಕಾರಿ ಸೌಲಭ್ಯಗಳು ಮತ್ತು ಪ್ರೋತ್ಸಾಹಧನಗಳನ್ನು ಪಡೆಯಲು ಅವಕಾಶ ದೊರಕಿದೆ. ಜೊತೆಗೆ, ₹1 ಲಕ್ಷ ಕೋಟಿ ಮೊತ್ತದ ಸಂಶೋಧನೆ ಮತ್ತು ಆವಿಷ್ಕಾರ ನಿಧಿ (RDI Fund) ಅನ್ನು ಸ್ಥಾಪಿಸಲಾಗಿದ್ದು, ಇದರ ಗುರಿ 'Lab to Market' ಪರಿಕಲ್ಪನೆಯಡಿ ಪ್ರಯೋಗಾಲಯದ ಸಂಶೋಧನೆಗಳನ್ನು ವಾಣಿಜ್ಯ ಉತ್ಪನ್ನಗಳಾಗಿ ರೂಪಿಸುವುದಾಗಿದೆ; ವಿಶೇಷವಾಗಿ Technology Readiness Level (TRL) ಹಂತದಲ್ಲಿರುವ ಉದ್ಯಮಗಳಿಗೆ ದೊಡ್ಡ ಪ್ರಮಾಣದ ಆರ್ಥಿಕ ನೆರವು ಒದಗಿಸಲಾಗುತ್ತದೆ. ಇದರ ಜೊತೆಗೆ, DSIR ಮತ್ತು CSIR ನಡುವಿನ ಸಹಯೋಗವನ್ನು (Symbiosis) ಬಲಪಡಿಸಲಾಗಿದ್ದು, CSIR ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ಕೈಗಾರಿಕೆಗಳಿಗೆ ತಲುಪಿಸಲು DSIR ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಘೋಷಿಸಿದ್ದಾರೆ–ಇದು ಭಾರತದಲ್ಲಿ ಆವಿಷ್ಕಾರ ಆಧಾರಿತ ಉದ್ಯಮಶೀಲತೆಗೆ ಹೊಸ ವೇಗ ನೀಡಲಿದೆ.
* DSIRನ 42ನೇ ಸಂಸ್ಥಾಪನಾ ದಿನಾಚರಣೆಯಂದು ನಾಲ್ಕು ಮಹತ್ವದ ಉಪಕ್ರಮಗಳನ್ನು ಬಿಡುಗಡೆ ಮಾಡಲಾಗಿದ್ದು, ಇವು ದೇಶದ ಆವಿಷ್ಕಾರ ಮತ್ತು ಸಂಶೋಧನಾ ಪರಿಸರಕ್ಕೆ ಹೊಸ ದಿಕ್ಕು ನೀಡಲಿವೆ.
- ಡೀಪ್-ಟೆಕ್ ಮಾರ್ಗಸೂಚಿಗಳು ಪ್ರಕಟಿಸಲ್ಪಟ್ಟಿದ್ದು, ಕಂಪನಿಗಳಿಗೆ ಲಭ್ಯವಾಗುವ ಹೊಸ ಸರ್ಕಾರಿ ಸೌಲಭ್ಯಗಳು ಮತ್ತು ಪ್ರೋತ್ಸಾಹಗಳ ಸ್ಪಷ್ಟ ರೂಪರೇಖೆ ಒದಗಿಸುತ್ತವೆ.
- PRISM ನೆಟ್‌ವರ್ಕ್ ಪ್ಲಾಟ್‌ಫಾರ್ಮ್ ಅನ್ನು ಆರಂಭಿಸಲಾಗಿದ್ದು, ಇದು ವೈಯಕ್ತಿಕ ಆವಿಷ್ಕಾರಕರಿಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಬೆಂಬಲ ನೀಡುವ ಡಿಜಿಟಲ್ ಜಾಲವಾಗಿ ಕಾರ್ಯನಿರ್ವಹಿಸುತ್ತದೆ. ಇನ್ನೊಂದೆಡೆ,
- 'Creative India 2025' ಎಂಬ ದೂರದೃಷ್ಟಿ ಯೋಜನೆ ದೇಶದಾದ್ಯಂತ ಹೊಸ ಆವಿಷ್ಕಾರಗಳು ಮತ್ತು ಸೃಜನಶೀಲತೆಯನ್ನು ಉತ್ತೇಜಿಸುವ ಗುರಿ ಹೊಂದಿದೆ. ಇದಕ್ಕೆ ಪೂರಕವಾಗಿ,
- DSIR ವಿಪತ್ತು ನಿರ್ವಹಣಾ ಯೋಜನೆ ಯನ್ನು ಪರಿಚಯಿಸಲಾಗಿದ್ದು, ವಿಪತ್ತುಗಳ ಸಮಯದಲ್ಲಿ ವೈಜ್ಞಾನಿಕ ಮತ್ತು ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ಪರಿಣಾಮಕಾರಿಯಾಗಿ ಬಳಸುವ ರೂಪುರೇಷೆಯನ್ನು ನಿರ್ಧರಿಸುತ್ತದೆ.
* ತಂತ್ರಜ್ಞಾನವು ಕೇವಲ ನಗರಗಳಿಗೆ ಸೀಮಿತವಾಗಬಾರದು ಎಂಬ ಉದ್ದೇಶದಿಂದ ಛತ್ತೀಸ್‌ಗಢದಲ್ಲಿ 'ಕೌಶಲ್ಯ ಉಪಗ್ರಹ ಕೇಂದ್ರ'ವನ್ನು (Skill Satellite Centre) ಸ್ಥಾಪಿಸಲಾಗುತ್ತಿದೆ. ಇದು ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ತಾಂತ್ರಿಕ ಕೌಶಲ್ಯ ನೀಡಿ ಅವರನ್ನು ಉದ್ದಿಮೆದಾರರನ್ನಾಗಿ (Entrepreneurs) ರೂಪಿಸುವ ಗುರಿ ಹೊಂದಿದೆ.

# 08 Jan 2026

## ಅಸ್ಸಾಂ ರಾಜ್ಯಪಾಲರು ಮೌಲ್ಯಾಧಾರಿತ ಶಿಕ್ಷಣಕ್ಕಾಗಿ 'ಸಂಸ್ಕಾರ್ ಶಾಲೆ' ಯನ್ನು ಉದ್ಘಾಟಿಸಿದರು



* ಅಸ್ಸಾಂ ರಾಜ್ಯಪಾಲರಾದ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರು ಗುವಾಹಟಿಯ ಲೋಹಿಯಾ ಲಯನ್ಸ್ ಆಡಿಯಿಟೋರಿಯಂನಲ್ಲಿ 4ರಿಂದ 14 ವರ್ಷ ವಯಸ್ಸಿನ ಮಕ್ಕಳಿಗಾಗಿ ರೂಪಿಸಲಾದ 'ಸಂಸ್ಕಾರ್ ಶಾಲಾ' ಎಂಬ ಮೌಲ್ಯಾಧಾರಿತ ಶಿಕ್ಷಣ ಕಾರ್ಯಕ್ರಮವನ್ನು ಭಾನುವಾರ (December-4) ಉದ್ಘಾಟಿಸಿದರು. ಈ ಉಪಕ್ರಮವು ಮಕ್ಕಳಲ್ಲಿ ನೈತಿಕ ಶಿಸ್ತು, ಭಾರತೀಯ ಸಾಂಸ್ಕೃತಿಕ ಮೌಲ್ಯಗಳು ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವ ಉದ್ದೇಶ ಹೊಂದಿದ್ದು, ಪ್ರಾಥಮಿಕ ಹಂತದಲ್ಲೇ ಔಪಚಾರಿಕ ಶಿಕ್ಷಣಕ್ಕೆ ಪೂರಕವಾಗಿ ವ್ಯಕ್ತಿತ್ವ ನಿರ್ಮಾಣಕ್ಕೆ ಒತ್ತು ನೀಡುತ್ತದೆ.
* ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯಪಾಲರು, "ಸಂಸ್ಕಾರಃ ಹಿ ಗುಣಾನಾಂ ಮೂಲಂ" (ಮೌಲ್ಯಗಳೇ ಗುಣಗಳ ಮೂಲ) ಎಂಬ ಸಂಸ್ಕೃತ ಸೂಕ್ತಿಯನ್ನು ಉಲ್ಲೇಖಿಸಿ, ಜ್ಞಾನ ಮತ್ತು ಕೌಶಲ್ಯ ನೀಡುವ ಶಿಕ್ಷಣಕ್ಕಿಂತಲೂ ಮೌಲ್ಯಗಳು ವ್ಯಕ್ತಿಯ ನಡೆ-ನುಡಿಗಳನ್ನು ರೂಪಿಸುತ್ತವೆ ಎಂದು ಹೇಳಿದರು. ಕುಟುಂಬ,

ಸಮಾಜ ಹಾಗೂ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಬಲವಾದ ನೈತಿಕ ನೆಲೆ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು.

* ಭಾರತದ ಪ್ರಾಚೀನ ಜ್ಞಾನ ಪರಂಪರೆಯ ಪ್ರಾಸಂಗಿಕತೆಯನ್ನು ವಿವರಿಸಿದ ಅವರು, ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ ಹಾಗೂ ಭಗವದ್ಗೀತೆಯಂತಹ ಗ್ರಂಥಗಳು ಸತ್ಯ, ಧರ್ಮ ಮತ್ತು ಕರ್ತವ್ಯಗಳ ಬಗ್ಗೆ ಶಾಶ್ವತ ಮಾರ್ಗದರ್ಶನ ನೀಡುತ್ತವೆ ಎಂದು ತಿಳಿಸಿದರು. ತಂತ್ರಜ್ಞಾನ ಮತ್ತು ಸ್ಪರ್ಧೆಯಿಂದ ಚಾಲಿತ ಯುಗದಲ್ಲಿಯೂ ಪ್ರಗತಿಯೊಂದಿಗೆ ಕರುಣೆ, ಶಿಸ್ತು ಮತ್ತು ನೈತಿಕ ಜವಾಬ್ದಾರಿಯ ಸಮತೋಲನ ಅಗತ್ಯವೆಂದರು.

* 'ಸಂಸ್ಕಾರ್ ಶಾಲಾ' ಉಪಕ್ರಮವು ಭಾರತದ ಸಾಂಸ್ಕೃತಿಕ ಮತ್ತು ನೈತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ಮಹತ್ವದ ಪ್ರಯತ್ನವಾಗಿದೆ ಎಂದು ಅವರು ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ವೇಗವಾಗಿ ಮುನ್ನಡೆಯುತ್ತಿದ್ದು, ತನ್ನ ನಾಗರಿಕತೆಯ ಮೌಲ್ಯಗಳನ್ನು ಸಹ ಪುನರುದ್ಧಾಟಿಸುತ್ತಿದೆ ಎಂದು ಅಭಿಪ್ರಾಯಪಟ್ಟರು. ಜೊತೆಗೆ ನೈತಿಕತೆ, ದಾನಶೀಲತೆ ಮತ್ತು ಸಮಾಜಸೇವೆಯ ಪರಂಪರೆಗೆ ಪ್ರಸಿದ್ಧಿಯಾದ ಮಾರ್ವಾಡಿ ಸಮುದಾಯದ ಪಾತ್ರವನ್ನು ಪ್ರಶಂಸಿಸಿ, ಇತರ ಸಂಸ್ಥೆಗಳಿಗೂ ಇಂತಹ ಉಪಕ್ರಮಗಳನ್ನು ಕೈಗೊಳ್ಳಲು ಕರೆ ನೀಡಿದರು.

* ಗುಹಾಟಿ ಬ್ಲೈಂಡ್ ಹೈ ಸ್ಕೂಲ್ ಸುವರ್ಣ ಮಹೋತ್ಸವ: ನಂತರ ಅವರು ಗುಹಾಟಿ ಬ್ಲೈಂಡ್ ಹೈ ಸ್ಕೂಲ್ (ಬಸಿಷ್ಠ)ನ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಮಾವೇಶಿತ ಶಿಕ್ಷಣದ ಮಹತ್ವವನ್ನು ಎತ್ತಿಹಿಡಿದರು. ಅಂಗವಿಕಲರಿಗೆ ನೀಡುವ ಗೌರವ ಮತ್ತು ಅವಕಾಶಗಳೇ ಸಮಾಜದ ನಿಜವಾದ ಪ್ರಗತಿಯ ಪ್ರತಿಬಿಂಬವೆಂದು ಹೇಳಿದ ಅವರು, ಆಧುನಿಕ ತಂತ್ರಜ್ಞಾನ ಬಳಕೆ ಮತ್ತು ಶಾಲೆಯ ಹಳೆಯ ವಿದ್ಯಾರ್ಥಿಗಳ ಸಾಧನೆಗಳನ್ನು ಶ್ಲಾಘಿಸಿದರು.

## HSBC ಪ್ರೈವೇಟ್ ಬ್ಯಾಂಕ್‌ನ ನೂತನ ಸಿಇಒ ಆಗಿ 'ಐಡಾ ಲಿಯು' ಅಧಿಕಾರ ಸ್ವೀಕಾರ!




*ವಿಶ್ವದ ಬೃಹತ್ ಬ್ಯಾಂಕಿಂಗ್ ಸಮೂಹಗಳಲ್ಲಿ ಒಂದಾದ HSBC Private Bank, ತನ್ನ ಜಾಗತಿಕ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಲು ಮತ್ತು ಬಲಪಡಿಸಲು ಪ್ರಮುಖ ನಾಯಕತ್ವ ಬದಲಾವಣೆಯನ್ನು ಘೋಷಿಸಿದೆ. ಜನವರಿ 05, 2026 ರಿಂದ ಜಾರಿಗೆ ಬರುವಂತೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಬ್ಯಾಂಕಿಂಗ್ ನಾಯಕಿ ಐಡಾ ಲಿಯು (Ida Liu) ಅವರನ್ನು ಬ್ಯಾಂಕ್‌ನ ಹೊಸ ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) ಆಗಿ ನೇಮಿಸಲಾಗಿದೆ.

ಇವರು ಡಿಸೆಂಬರ್ 2024 ರಿಂದ ಹಂಗಾಮಿ ಸಿಇಒ ಆಗಿ ಕಾರ್ಯನಿರ್ವಹಿಸುತ್ತಿದ್ದ ಗೇಬ್ರಿಯಲ್ ಕ್ಯಾಸ್ಟೆಲ್ಲೋ (Gabriel Castello) ಅವರ ಉತ್ತರಾಧಿಕಾರಿಯಾಗಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

* ಐಡಾ ಲಿಯು ಅವರು ಜಾಗತಿಕ ಬ್ಯಾಂಕಿಂಗ್ ಮತ್ತು ಸಂಪತ್ತು ನಿರ್ವಹಣಾ (Wealth Management) ಕ್ಷೇತ್ರದಲ್ಲಿ 25 ವರ್ಷಗಳಿಗಿಂತ ಹೆಚ್ಚು ಅನುಭವ ಹೊಂದಿರುವ ದಕ್ಷ ನಾಯಕಿ ಆಗಿದ್ದಾರೆ. ಇವರು ಈ ಹಿಂದೆ ಸಿಟಿ ಪ್ರೈವೇಟ್ ಬ್ಯಾಂಕ್ (Citi Private Bank) ನ ಜಾಗತಿಕ ಮುಖ್ಯಸ್ಥರಾಗಿ (Global Head) ಕಾರ್ಯನಿರ್ವಹಿಸಿದ್ದು, ಉತ್ತರ ಅಮೆರಿಕಾ ಮತ್ತು ನ್ಯೂಯಾರ್ಕ್ ಪ್ರದೇಶಗಳ ಮುಖ್ಯಸ್ಥೆ ಆಗಿಯೂ ಹಾಗೂ 'ಏಷ್ಯನ್ ಕ್ಲೈಂಟ್ಸ್ ಗ್ರೂಪ್' ನಾಯಕಿಯಾಗಿ ಅಂತಾರಾಷ್ಟ್ರೀಯ ಮಟ್ಟದ ವಿಶಾಲ ಗ್ರಾಹಕ ಪೋರ್ಟ್‌ಫೋಲಿಯೊಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ವಿಶೇಷವಾಗಿ, ಅಲ್ಟ್ರಾ-ಹೈ-ನೆಟ್-ವರ್ಥ್ (UHNW) ಗ್ರಾಹಕರಿಗೆ ಸಲಹಾ ಸೇವೆಗಳು, ಹೂಡಿಕೆ ಯೋಜನೆ ಮತ್ತು ಲಿಕ್ವಿಡಿಟಿ ನಿರ್ವಹಣೆ ಕ್ಷೇತ್ರದಲ್ಲಿ ಇವರು ಪಡೆದಿರುವ ಪರಿಣತಿ ಅವರಿಗೆ ಜಾಗತಿಕ ಹಣಕಾಸು ವಲಯದಲ್ಲಿ ವಿಶಿಷ್ಟ ಸ್ಥಾನವನ್ನು ತಂದಿದೆ.

* HSBC ಪ್ರೈವೇಟ್ ಬ್ಯಾಂಕ್ ಅನ್ನು 1999ರಲ್ಲಿ ರಿಪಬ್ಲಿಕ್ ನ್ಯೂಯಾರ್ಕ್ ಕಾರ್ಪೊರೇಷನ್ ಮತ್ತು ಸಫ್ರಾ ರಿಪಬ್ಲಿಕ್ ಹೋಲ್ಡಿಂಗ್ಸ್ ಸ್ವಾಧೀನಪಡಿಸಿ ಸ್ಥಾಪಿಸಲಾಯಿತು. ಇದರ ಪ್ರಧಾನ ಕಚೇರಿ ಜಿನೀವಾ, ಸ್ವಿಟ್ಜರ್‌ಲ್ಯಾಂಡ್ ನಲ್ಲಿ ಇದೆ. ಬ್ಯಾಂಕ್ ಮುಖ್ಯವಾಗಿ ಹೈ-ನೆಟ್-ವರ್ಥ್ (HNW) ಮತ್ತು ಅಲ್ಟ್ರಾ-ಹೈ-ನೆಟ್-ವರ್ಥ್ (UHNW) ಗ್ರಾಹಕರಿಗೆ ಹೂಡಿಕೆ ಸಲಹೆ, ಸಂಪತ್ತು ನಿರ್ವಹಣೆ ಮತ್ತು ಯೋಜನಾ ಸೇವೆಗಳನ್ನು ಒದಗಿಸುತ್ತದೆ. ಇದು HSBC Holdings plc ಸಂಸ್ಥೆಯ ಅಂಗವಾಗಿದ್ದು, ಇದರ ಪ್ರಧಾನ ಕಚೇರಿ ಲಂಡನ್ ನಲ್ಲಿ ಇದೆ ಮತ್ತು ಪ್ರಸ್ತುತ 57ಕ್ಕೂ ಹೆಚ್ಚು ದೇಶಗಳಲ್ಲಿ ಜಾಗತಿಕ ಕಾರ್ಯಾಚರಣೆ ನಡೆಸುತ್ತಿದೆ.

## ISO/IEC 42001 ಪ್ರಮಾಣೀಕರಣ ಪಡೆದ ಮೊದಲ ಪಾವತಿ ಕಂಪನಿಯಾಗಿ Financial Software and Systems(FSS)




* ಭಾರತದ ಪಾವತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವದ ಸಾಧನೆಯಾಗಿ, Financial Software and Systems (FSS) ಸಂಸ್ಥೆ ISO/IEC 42001 ಪ್ರಮಾಣೀಕರಣವನ್ನು ಪಡೆಯುವ ಭಾರತ, ಮಧ್ಯಪ್ರಾಚ್ಯ, ಏಷ್ಯಾ-ಪೆಸಿಫಿಕ್ (APAC) ಹಾಗೂ ದಕ್ಷಿಣ ಆಫ್ರಿಕಾ ಪ್ರದೇಶಗಳ ಮೊದಲ ಪಾವತಿ ಕಂಪನಿಯಾಗಿ ಹೊರಹೊಮ್ಮಿದೆ. ISO/IEC 42001 ಪ್ರಮಾಣೀಕರಣವು ಕೃತಕ ಬುದ್ಧಿಮತ್ತೆ (AI) ಯ ಜವಾಬ್ದಾರಿಯುತ, ನೈತಿಕ ಹಾಗೂ ನಿಯಂತ್ರಿತ ಬಳಕೆಗೆ ಸಂಬಂಧಿಸಿದ ಜಾಗತಿಕ ಮಾನದಂಡವಾಗಿದೆ. ಈ ಪ್ರಮಾಣೀಕರಣದ ಮೂಲಕ FSS ಸಂಸ್ಥೆ, ಅಸ್ತವ್ಯಸ್ತ (ad-hoc) AI ಬಳಕೆಯಿಂದ ದೂರ ಸರಿದು, ಸಂಸ್ಥಾಮಟ್ಟದ AI ಆಡಳಿತ (AI Governance) ಚೌಕಟ್ಟನ್ನು ಅಳವಡಿಸಿಕೊಂಡಿದೆ.

* ಈ ಸಾಧನೆಯ ಮಹತ್ವ:

=> AI ವ್ಯವಸ್ಥೆಗಳ ಸಂಪೂರ್ಣ ಜೀವನಚಕ್ರದಲ್ಲಿ ಮೇಲ್ವಿಚಾರಣೆ, ಅಪಾಯ ಮೌಲ್ಯಮಾಪನ, ಹೊಣೆಗಾರಿಕೆ, ಪಾರದರ್ಶಕತೆ ಹಾಗೂ ನಿಯಂತ್ರಣ ಪಾಲನೆಯನ್ನು ಖಚಿತಪಡಿಸುವ ವ್ಯವಸ್ಥೆಯನ್ನು ಇದು ಒದಗಿಸುತ್ತದೆ.

=> ವಂಚನೆ ಪತ್ತೆ, ವಹಿವಾಟು ಮೇಲ್ವಿಚಾರಣೆ, ಡಿಸ್ಪ್ಯೂಟ್ ಮ್ಯಾನೇಜ್‌ಮೆಂಟ್, ರಿಕನ್ಸಿಲಿಯೇಷನ್, ಆಪರೇಷನಲ್ ಆಟೋಮೇಷನ್ ಮುಂತಾದ ಪ್ರಮುಖ ಕ್ಷೇತ್ರಗಳಲ್ಲಿ AI ಬಳಕೆ

=> AI ಯಿಂದ ಉಂಟಾಗಬಹುದಾದ ಪಕ್ಷಪಾತ, ಅನಿರೀಕ್ಷಿತ ಫಲಿತಾಂಶಗಳು, ವಿವರಣಾತ್ಮಕತೆಯ ಕೊರತೆ ಹಾಗೂ ನಿಯಂತ್ರಣ ಉಲ್ಲಂಘನೆಗಳಂತಹ ಅಪಾಯಗಳನ್ನು ತಡೆಯಲು ಇದು ವ್ಯವಸ್ಥಿತ ಕ್ರಮಗಳನ್ನು ಒದಗಿಸುತ್ತದೆ.

* ಹಣಕಾಸು ಕ್ಷೇತ್ರಕ್ಕೆ ಪ್ರಾಮುಖ್ಯತೆ : ISO/IEC 42001 ಮಾನದಂಡವು, ಹಣಕಾಸು ಸೇವಾ ಕ್ಷೇತ್ರದಲ್ಲಿ AI ಬಳಕೆಯಿಂದ ಉಂಟಾಗುವ ನ್ಯಾಯತೆ, ವಿವರಣಾತ್ಮಕತೆ (Explainability), ಹೊಣೆಗಾರಿಕೆ ಸಂಬಂಧಿತ ಅಪಾಯಗಳನ್ನು ಸಮರ್ಥವಾಗಿ ನಿರ್ವಹಿಸಲು ಸಹಾಯಕವಾಗಿದೆ. ಇದು ಮುಂದಿನ ದಿನಗಳಲ್ಲಿ EU AI Act ಹಾಗೂ RBI ಯ ನೈತಿಕ AI ಒತ್ತಾಯಗಳಿಗೆ ಅನುಗುಣವಾಗಿ ಅತ್ಯಂತ ಪ್ರಸ್ತುತವಾಗಲಿದೆ.

* FSS ನ CEO ವಿ. ಬಾಲಸುಬ್ರಹ್ಮಣ್ಯನ್ ಅವರು "ಪಾವತಿ ವ್ಯವಸ್ಥೆಗಳಲ್ಲಿ AI ಪ್ರಮುಖ ಮೂಲಸೌಕರ್ಯವಾಗುತ್ತಿರುವ ಸಂದರ್ಭದಲ್ಲಿ, ಅದರ ಆಡಳಿತ (Governance) ಅತ್ಯಾವಶ್ಯಕ. ಶಕ್ತಿಶಾಲಿಯಷ್ಟೇ ಅಲ್ಲ, ನಂಬಿಕೆಯುಳ್ಳ ಹಾಗೂ ಹೊಣೆಗಾರ AI

ನಿರ್ಮಾಣಕ್ಕೆ ಈ ಪ್ರಮಾಣೀಕರಣ ನಮ್ಮ ಬದ್ಧತೆಯನ್ನು ತೋರಿಸುತ್ತದೆ” ಎಂದು ಹೇಳಿದ್ದಾರೆ.
* FSS ನ AI ಆಡಳಿತ ಚೌಕಟ್ಟನ್ನು TÜV SÜD (ಜಾಗತಿಕ ಪ್ರಮಾಣೀಕರಣ ಸಂಸ್ಥೆ) ಸ್ವತಂತ್ರವಾಗಿ ಮೌಲ್ಯಮಾಪನ ಮಾಡಿದೆ.

## ಪ್ರಧಾನಿ ಮೋದಿಯವರ ಕೆಂಪುಕೋಟೆ ಭಾಷಣಗಳ ಉರ್ದು ಸಂಕಲನ ‘ಖುತ್ಬಾತ್-ಎ-ಮೋದಿ’ ಬಿಡುಗಡೆ!



* ಭಾರತದ ಸಾಂಸ್ಕೃತಿಕ ಮತ್ತು ಭಾಷಾ ವೈವಿಧ್ಯತೆಯನ್ನು ಗೌರವಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮಹತ್ವದ ಹೆಜ್ಜೆಯನ್ನಿಟ್ಟಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಳೆದ ಒಂದು ದಶಕದಲ್ಲಿ (2014-2025) ಸ್ವಾತಂತ್ರ್ಯ ದಿನಾಚರಣೆಯಂದು ಕೆಂಪುಕೋಟೆಯ ಮೇಲೆ ನಿಂತು ನೀಡಿದ ಐತಿಹಾಸಿಕ ಭಾಷಣಗಳ ಉರ್ದು ಆವೃತ್ತಿ “ಖುತ್ಬಾತ್-ಎ-ಮೋದಿ: ಲಾಲ್ ಕಿಲಾ ಕಿ ಫಸೀಲ್ ಸೆ” (Khutbat-e-Modi: Laal Qila ki Faseel Se) ಅನ್ನು ಜನವರಿ 5, 2026 ರಂದು ಬಿಡುಗಡೆ ಮಾಡಲಾಗಿದೆ.
ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಅವರು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು.
* ಪುಸ್ತಕದ ಹಿನ್ನಲೆ ಮತ್ತು ಉದ್ದೇಶ: ಕೇಂದ್ರ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ಉರ್ದು ಭಾಷಾ ಪ್ರೋತ್ಸಾಹ ಪರಿಷತ್ (NCPUL) ಈ ಸಂಕಲನವನ್ನು ಪ್ರಕಟಿಸಿದ್ದು, ಉರ್ದು ಓದುಗರಿಗೆ ಪ್ರಧಾನಮಂತ್ರಿಯವರ ರಾಷ್ಟ್ರ ನಿರ್ಮಾಣದ ಕನಸುಗಳು ಮತ್ತು ಸರ್ಕಾರದ ನೀತಿಗಳನ್ನು ತಲುಪಿಸುವುದು ಮುಖ್ಯ ಉದ್ದೇಶವಾಗಿದೆ. ಈ ಪುಸ್ತಕದಲ್ಲಿ ಕಳೆದ 11 ವರ್ಷಗಳ ಕೆಂಪುಕೋಟೆ ಭಾಷಣಗಳಲ್ಲಿ ವ್ಯಕ್ತವಾದ ಅಂತ್ಯೋದಯ, ಬಡವರ ಕಲ್ಯಾಣ, ಸ್ವಚ್ಛ ಭಾರತ್ ಮತ್ತು ‘ವಿಕಸಿತ ಭಾರತ’ ದ ಸಂದೇಶಗಳು ದಾಖಲಾಗಿವೆ.
* ರಾಷ್ಟ್ರೀಯ ಉರ್ದು ಭಾಷಾ ಪ್ರೋತ್ಸಾಹ ಪರಿಷತ್ (NCPUL): ಉರ್ದು ಭಾಷೆಯ ಸಂರಕ್ಷಣೆ, ಪ್ರಚಾರ, ಕಂಪ್ಯೂಟರೀಕರಣ ಮತ್ತು ವೈಜ್ಞಾನಿಕ ಪ್ರಕಟಣೆಗಳನ್ನು ಉತ್ತೇಜಿಸುವುದು ಮುಖ್ಯ ಗುರಿ ಹೊಂದಿರುವ ಸ್ವಾಯತ್ತ ಸಂಸ್ಥೆ. ಇದು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಉರ್ದು ಭಾಷೆಯ ಪ್ರಚಾರಕ್ಕಾಗಿ ಸ್ಥಾಪಿಸಲ್ಪಟ್ಟಿದೆ.
* ಪುಸ್ತಕ ಬಿಡುಗಡೆ ಕಾರ್ಯಕ್ರಮದ ಪ್ರಮುಖ ಅಂಶಗಳು: ಧರ್ಮೇಂದ್ರ ಪ್ರಧಾನ ಅವರು ಹೇಳಿದ್ದಾರೆ, ಪ್ರಧಾನಿಯವರ ಭಾಷಣಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿರಿಸುವ ಮೂಲಕ ಸಂವಹನ ಸಮಾನತೆ ಸಾಧಿಸುವುದು ಸರ್ಕಾರದ ಗುರಿ. ಈ ಪುಸ್ತಕವು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಉರ್ದು ಸಾಹಿತ್ಯಾಸಕ್ತರಿಗೆ ಕಳೆದ ಒಂದು ದಶಕದ ಭಾರತದ ಆಡಳಿತಾತ್ಮಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಜೊತೆಗೆ, ಭವಿಷ್ಯದ ಗುರಿ ಎಂದರೆ ಭಾರತದ ಜ್ಞಾನ ಪರಂಪರೆ ಮತ್ತು ಜೀವನಶೈಲಿಯ ಕುರಿತು ಹೆಚ್ಚಿನ ವಿಷಯಗಳನ್ನು ಉರ್ದು ಭಾಷೆಯಲ್ಲಿ ಪ್ರಕಟಿಸಲು NCPUL ಗೆ ಸೂಚನೆ ನೀಡಲಾಗಿದೆ.




## ಸೂಪರ್‌ಕಂಪ್ಯೂಟರ್ ಸಿಮ್ಯುಲೇಶನ್‌ಗಳಿಂದ Mpemba ಪರಿಣಾಮಕ್ಕೆ ವಿಜ್ಞಾನಿ ಸ್ಪಷ್ಟನೆ




➤ ಜಲವು ತಂಪಾಗುವಾಗ ಕೆಲವೊಮ್ಮೆ ವಿಚಿತ್ರವಾಗಿ ನಡೆಯುವ Mpemba ಪರಿಣಾಮವು ವಿಜ್ಞಾನಿಗಳಿಗೆ ಹಲವು ದಶಕಗಳಿಂದ ಕೌತುಕವನ್ನು ಹುಟ್ಟಿಸುತ್ತಿದೆ. ಸಾಮಾನ್ಯ ನಿರೀಕ್ಷೆಗಿಂತ ವಿರುದ್ಧವಾಗಿ, ಹೆಚ್ಚು ತಾಪಮಾನದಲ್ಲಿ ಇರುವ ನೀರು ಕಡಿಮೆ ತಾಪಮಾನದಲ್ಲಿರುವ ನೀರಿಗಿಂತ ವೇಗವಾಗಿ ಹಿಮೀಕರಿಸುತ್ತದೆ. ಇಂತಹ ವಿಚಿತ್ರ ಪರಿಣಾಮವನ್ನು ಮೊದಲ ಬಾರಿಗೆ ಅಣುಮಟ್ಟದ ಮಟ್ಟದಲ್ಲಿ ವಿಶ್ಲೇಷಿಸಲು ವಿಜ್ಞಾನಿಗಳು ಅತಿ ಶಕ್ತಿಶಾಲಿ ಸೂಪರ್ ಕಂಪ್ಯೂಟರ್ ಸಿಮ್ಯುಲೇಶನ್‌ಗಳನ್ನು ಬಳಸಿಕೊಂಡಿದ್ದಾರೆ. ಈ ಸಂಶೋಧನೆ “Communications Physics” ಜರ್ನಲ್‌ನಲ್ಲಿ ಪ್ರಕಟವಾಗಿದೆ ಮತ್ತು ಇದು ತಾಪಮಾನದ ಸಮತೋಲನವಲ್ಲದ ಸ್ಥಿತಿಗಳ (nonequilibrium physics) ಬಗ್ಗೆ ಹೊಸ ತಿಳುವಳಿಕೆ ನೀಡುತ್ತದೆ.
➤ Mpemba ಪರಿಣಾಮವನ್ನು ಹಿರಿಯ ಪಾಂಡಿತ್ಯಗಳಿಂದಲೂ ಗಮನಿಸಲಾಗಿದೆ. ಅರಿಸ್ಟೋಟಲ್ “Meteorologica” ಪುಸ್ತಕದಲ್ಲಿ, ಮೊದಲಿಗೆ ಬಿಸಿಯಾದ ನೀರು ತಡವಾಗಿ ಶೀತಗೊಳ್ಳುವುದಿಲ್ಲ ಎಂದು ದಾಖಲಿಸಿದ್ದರು. ಈ ಘೆನೋಮೆನಾನ್ 20ನೇ ಶತಮಾನದಲ್ಲಿ ಎರಾಸ್ಟೋ Mpemba ಅವರ ಮೂಲಕ ಪುನಃ ಗಮನಸೆಳೆದಿತು. ಹಲವಾರು ಪ್ರಯೋಗಗಳು ಮತ್ತು ತತ್ವಚರ್ಚೆಗಳ ನಂತರವೂ, ಜಲಕ್ಕೆ ಸಂಬಂಧಿಸಿದ ಸ್ಪಷ್ಟ ವಿವರಣೆ ಸಿಗಲಿಲ್ಲ, ಏಕೆಂದರೆ ನೀರಿನ ಹಂತಾಂತರವನ್ನು ಗಣಕಯಂತ್ರದಲ್ಲಿ ನಿಖರವಾಗಿ ಮಾದರಿಮಾಡುವುದು ತುಂಬಾ ಸಂಕೀರ್ಣವಾಗಿದೆ.
➤ ಸೂಪರ್‌ಕಂಪ್ಯೂಟರ್‌ಗಳ ಪಾತ್ರ: ನೀರಿನ ಹೈಡ್ರೋಜನ್-ಬಂಧದ ಜಟಿಲ ನೆಟ್ವರ್ಕ್ ಇದನ್ನು ಮಾದರಿಮಾಡಲು ತುಂಬಾ ಕಷ್ಟ. ಕರ್ನಾಟಕದ ಜವಾಹರ್ಲಾಲ್ ನೆಹರು ಕೇಂದ್ರದ

ವಿಜ್ಞಾನಿಗಳು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಾಯದಿಂದ, ಈ ಸಮಸ್ಯೆಯನ್ನು ಸೂಪರ್‌ಕಂಪ್ಯೂಟರ್‌ಗಳ ಮೂಲಕ ಯಶಸ್ವಿಯಾಗಿ ದಾಟಿದರು. ಅವರು ನೈಜ ನೀರು ಮಾದರಿಗಳನ್ನು ಉಪಯೋಗಿಸಿ ಹಿಮ ನಿರ್ಮಾಣವನ್ನು ಸಿಮ್ಯುಲೇಟ್ ಮಾಡಿ, ಲೆನಾರ್ಡ್-ಜೋನ್ಸ್ ಫ್ಲುಯಿಡ್ ಮತ್ತು ಪೊಟ್ಸ್ ಮಾದರಿಗಳೊಂದಿಗೆ ಹೋಲಿಕೆ ಮಾಡಿದರು.

➤ ವೇಗವಾಗಿ ಹಿಮೀಕರಣದ ಅಣುಮಟ್ಟದ ಮಾರ್ಗಗಳು: ಸಿಮ್ಯುಲೇಶನ್‌ಗಳು ತೋರಿಸುತ್ತವೆ, ನೀರು ತಂಪಾಗುವಾಗ ನೇರವಾಗಿ ಹಿಮಕ್ಕೆ ಸಾಗುವುದಿಲ್ಲ. ಮಧ್ಯಂತರ, ಸ್ವಲ್ಪ ಸಮಯದ ಅಣುಮಟ್ಟದ ಸ್ಥಿತಿಗಳಲ್ಲಿ ತಡವಾಗಿ ತಲುಪಬಹುದು. ಬಿಸಿಯಾದ ನೀರು ಕೆಲವು ಸಂದರ್ಭಗಳಲ್ಲಿ ಈ ಮಧ್ಯಂತರ "ಕೈನಟಿಕ್ ಟ್ರಾಪ್" ಗಳನ್ನು ತಪ್ಪಿಸಿ ವೇಗವಾಗಿ ಹಿಮಕ್ಕೆ ತಲುಪುತ್ತದೆ. ಇದರಿಂದ, ಕಡಿಮೆ ತಾಪಮಾನದಲ್ಲಿ ಇದ್ದ ನೀರಿಗೆ ಹೋಲಿಸಿದಾಗ, ಬಿಸಿಯಾದ ನೀರು ಹೆಚ್ಚು ಶೀಘ್ರವಾಗಿ ಹಿಮೀಕರಿಸುತ್ತದೆ.

➤ ನೀರಿನ ಹೊರಗಿನ ಪ್ರಭಾವಗಳು: Mpemba ಪರಿಣಾಮವು ನೀರಿನಲ್ಲಿ ಮಾತ್ರ ಸೀಮಿತವಾಗಿಲ್ಲ, fluid-to-solid ಹಂತಾಂತರಗಳಲ್ಲಿ ಇತರ ವಸ್ತುಗಳಲ್ಲಿಯೂ ಕಾಣಬಹುದು. ಇದು ತಾಪಮಾನದಲ್ಲಿ ಅಚಾನಕ್ ಬದಲಾವಣೆ ನಂತರ ವಸ್ತುಗಳ ವಿಶ್ರಾಂತಿ (material relaxation) ಮತ್ತು other nonequilibrium phenomena ಅನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ತಿಳಿವಳಿಕೆ ನವೀಕೃತ ತಾಪ ನಿಯಂತ್ರಣ ತಂತ್ರಜ್ಞಾನಗಳು ಮತ್ತು ಇಲೆಕ್ಟ್ರಾನಿಕ್ ಸಾಧನಗಳಲ್ಲಿ ಸುಧಾರಿತ ಶೀತಗೊಳಿಸುವ ತಂತ್ರಗಳನ್ನು ರೂಪಿಸಲು ಸಹಾಯಕವಾಗಬಹುದು.

## ಮುರಿಗಂಗಾ ನದಿಗೆ ಭವ್ಯ ಗಂಗಾಸಾಗರ್ ಸೇತುವೆ: ಮಮತಾ ಬ್ಯಾನರ್ಜೀ ಶಂಕುಸ್ಥಾಪನೆ



➤ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾಂರ್ಜೀ ಜನವರಿ 2026 ರಲ್ಲಿ ಸಾಗರ್ ದ್ವೀಪವನ್ನು ಖಂಡದ Mainland ಗೆ ಸಂಪರ್ಕಿಸುವ ಗಂಗಾಸಾಗರ್ ಸೇತು (Gangasagar Setu) ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ್ದಾರೆ. ಈ ನಾಲ್ಕು-ಲೇನ್ ಸೇತುವೆ ಮುರಿಗಂಗಾ ನದಿಯನ್ನು ದಾಟುತ್ತದೆ ಮತ್ತು ಸುಮಾರು 4.757 ಕಿಲೋಮೀಟರ್ ಉದ್ದ ಹೊಂದಿದೆ. ಇದು ಕಾಕ್ದ್ವೀಪ್‌ನ Lot 8 ನಿಂದ ಸಾಗರ್ ದ್ವೀಪದ ಕಚುಬೆರಿಯಾ ಪ್ರದೇಶವನ್ನು ಸಂಪರ್ಕಿಸುತ್ತದೆ. ಪ್ರಸ್ತಾವಿತ ಯೋಜನೆಯ ವೆಚ್ಚ ಸುಮಾರು ₹1,670 ಕೋಟಿ ಆಗಿದೆ.

➤ 2028ರ ವೇಳೆಗೆ ಪೂರ್ಣಗೊಳ್ಳುವ ಗುರಿ ಹೊಂದಿರುವ ಈ ಯೋಜನೆಯು ಈ ಕೆಳಗಿನ ಪ್ರಮುಖ ಬದಲಾವಣೆಗಳನ್ನು ತರಲಿದೆ:

=> ನಿರಂತರ ಸಂಪರ್ಕ: ಈಗಲೂ ಸಾಗರ್ ದ್ವೀಪಕ್ಕೆ ಪ್ರಯಾಣಿಸಲು ಫೆರಿ ಸೇವೆ ಅವಲಂಬಿತವಾಗಿದೆ, ಆದರೆ ಹವಾಮಾನ ಅಥವಾ прип೦ಲೋಡ್ ಗಳಿಂದ ಪರಿಣಾಮಿತರಾಗುತ್ತಿತ್ತು. ಹೊಸ ಸೇತುವೆ ನಿರಂತರ ರಸ್ತೆ ಸಂಪರ್ಕ ಒದಗಿಸುತ್ತದೆ.

=> ಆರ್ಥಿಕ ಮತ್ತು ಪ್ರವಾಸೋದ್ಯಮ ಉಲ್ಲಾಸ: ಈ ಸೇತುವೆ ಸ್ಥಳೀಯ ವಾಣಿಜ್ಯ, ಪ್ರವಾಸೋದ್ಯಮ ಮತ್ತು ನಿವಾಸಿಗಳ ಸುಲಭ ಪ್ರಯಾಣಕ್ಕೆ ಸಹಾಯ ಮಾಡುತ್ತದೆ.

=> ವಿಕಸಿತ ಪ್ರದೇಶ: 2011 ರಿಂದ ದಕ್ಷಿಣ 24 ಪರಗಾಣಗಳಲ್ಲಿ 37 ಸೇತುವೆಗಳನ್ನು ನಿರ್ಮಿಸಲಾಗಿದ್ದು, ಸಾಗರ್ ದ್ವೀಪದ ವಿದ್ಯುತ್ ಪೂರೈಕೆ ಸುಧಾರಿತವಾಗಿದೆ ಮತ್ತು ಸೂಂದರ್ಬನ್ಸ್ ಪೊಲೀಸ್ ಜಿಲ್ಲೆ ಸ್ಥಾಪಿಸಲಾಗಿದೆ.

=> ನಿರ್ಮಾಣ ಸಾಮರ್ಥ್ಯ: ಲಾರ್ಸನ್ & ಟೂಬ್ರೋ (L&T) ಕಂಪನಿಯು ಈ ಸೇತುವೆ ನಿರ್ಮಾಣಕ್ಕೆ ಒಪ್ಪಂದ ಪಡೆದಿದ್ದು, 2–3 ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

➤ ಇತರೆ ಪ್ರಮುಖ ಸೇತುವೆ ಯೋಜನೆಗಳು:

=> ರಂಡನೇ ಇಶ್ವರ ಗುಪ್ತ ಸೇತು (Second Ishwar Gupta Setu): ಕಾಲ್ಯಾಣಿ-ಬಾನ್ಸ್ಬೇರಿಯ ಸಂಪರ್ಕ, ಡಿಸೆಂಬರ್ 2026 ರಲ್ಲಿ ಮುಕ್ತಾಯವಾಗುವ ನಿರೀಕ್ಷೆ.

=> ಹತಾನಿಯಾ-ಡೋನಿಯಾ ಸೇತು (Hatania-Doania Bridge): NH117 ಮೇಲೆ ಸಾಗುವ ಈ ಸೇತುವೆ ಸುಂದರ್ಬನ್ಸ್ ಪ್ರವಾಸಕ್ಕೆ ಪ್ರಯಾಣದ ಸಮಯವನ್ನು ಕಡಿಮೆ ಮಾಡಲಿದೆ.

=> ಟೀಸ್ತಾ ಸೇತು (Teesta Bridge, Near Sevoke): ಉತ್ತರ ಬಂಗಾಳದ ವ್ಯಾಪಾರ ಮತ್ತು ಟ್ರಾಫಿಕ್ ಸುಧಾರಣೆಗೆ ಸಹಾಯ ಮಾಡಲಿದೆ.

=> ಕೋಲ್ಕತಾ ಬೇಲಿ ಸೇತು (Kolkata Bailey Bridge): VIP ರೋಡ್ ಮತ್ತು ಸಾಲ್ಟ್ ಲೇಕ್ ನಡುವಿನ ಟ್ರಾಫಿಕ್ ಸುಗಮಗೊಳಿಸಲು ನಿರ್ಮಾಣವಾಗುತ್ತಿದೆ.

➤ ಪ್ರಮುಖ ಲಾಭಗಳು:

# ಸಂಪರ್ಕ ಸುಧಾರಣೆ: ಪವಾಡ ಸ್ಥಳಗಳು ಮತ್ತು ಪ್ರವಾಸಿ ತಾಣಗಳನ್ನು ಮುಖ್ಯಭೂಮಿಗೆ ಸಂಪರ್ಕಿಸುತ್ತದೆ.

# ಪ್ರಯಾಣ ಸಮಯ ಕಡಿಮೆ: ಸ್ಥಳೀಯರು ಮತ್ತು ಪ್ರವಾಸಿಗರಿಗೆ ಸುಲಭ ಪ್ರಯಾಣ.

# ಆರ್ಥಿಕ ಪ್ರಗತಿ: ವಾಣಿಜ್ಯ, ಪ್ರವಾಸೋದ್ಯಮ ಮತ್ತು ಸಮಗ್ರ ಅಭಿವೃದ್ಧಿಗೆ ಉತ್ತೇಜನ.

## ಜನವರಿ-8 : ಭೂಮಿಯ ತಿರುಗುವಿಕೆಯ ದಿನ – 175ನೇ ವಾರ್ಷಿಕೋತ್ಸವ




➤ ಪ್ರತಿ ವರ್ಷದ ಜನವರಿ 8ರಂದು ಭೂಮಿಯ ತಿರುಗುವಿಕೆಯ ದಿನ ಆಚರಿಸಲಾಗುತ್ತದೆ. 1851ರಲ್ಲಿ ಫ್ರೆಂಚ್ ಭೌತಶಾಸ್ತ್ರಜ್ಞಾನಿ ಲೇಆನ್ ಫೂಕೋ ತಮ್ಮ ಪ್ರಸಿದ್ಧ ಪೆಂಡುಲಂ ಪ್ರಯೋಗ ಮೂಲಕ ಭೂಮಿಯ ತಿರುಗುವಿಕೆಯನ್ನು ಪ್ರಥಮ ಬಾರಿ ದೃಶ್ಯಾತ್ಮಕವಾಗಿ ತೋರಿಸಿದರು. 2026ರಲ್ಲಿ ಇದಕ್ಕೆ 175ನೇ ವಾರ್ಷಿಕೋತ್ಸವ ಸಮಾರಂಭ.

➤ ಫೂಕೋ ಅವರ ಪ್ರಸಿದ್ಧ ಪೆಂಡುಲಂ ಪ್ರಯೋಗ ಮೂಲಕ ಭೂಮಿಯ ತಿರುಗುವಿಕೆ ಪ್ರಥಮವಾಗಿ ದೃಶ್ಯಾತ್ಮಕವಾಗಿ ಸಾಬೀತಾಯಿತು. ಭೂಮಿಯ ತಿರುಗುವಿಕೆ ನಮ್ಮ ದಿನ-ರಾತ್ರಿ ಚಕ್ರವನ್ನು ನಿರ್ಧರಿಸುತ್ತಿದ್ದು, ಭೂಮಿ 24 ಗಂಟೆಗಳಲ್ಲಿ ಒಂದು ಸುತ್ತು ತಿರುಗುತ್ತದೆ. ಇದಲ್ಲದೆ, Earth's rotation ಉಂಟುಮಾಡುವ ಕೊರಿಯೊಲಿಸ್ ಪರಿಣಾಮ (Coriolis Effect) ಹವಾಮಾನ, ಗಾಳಿಯ ಹರಿವು, ಸಮುದ್ರ ಪ್ರವಾಹಗಳು ಮತ್ತು ಜಾಗತಿಕ ಹವಾಮಾನ ವ್ಯವಸ್ಥೆಗಳಿಗೆ ಮಹತ್ವಪೂರ್ಣ ಪರಿಣಾಮ ಬೀರುತ್ತದೆ. ಈ ದಿನವನ್ನು ಆಚರಿಸುವುದರಿಂದ ಭೂಮಿಯ ಚಲನೆಯನ್ನು ಅರ್ಥಮಾಡಿಕೊಳ್ಳಲು ಮತ್ತು ವೈಜ್ಞಾನಿಕ ಜಾಗೃತಿಯನ್ನು ಉತ್ತೇಜಿಸಲು ಅವಕಾಶ ಸಿಗುತ್ತದೆ.

➤ ಫೂಕೋ ಪೆಂಡುಲಂ ಹೇಗೆ ಕೆಲಸ ಮಾಡಿತು:

=> 67 ಮೀಟರ್ ಉದ್ದದ ತಂತಿ, 28 ಕಿ.ಗ್ರಾಂ ತೂಕದ ತಾಮ್ರದ ಗುಂಡಿ (bob) ಹೊಂದಿತ್ತು.

=> ಪೆಂಡುಲಂ ಮುಕ್ತವಾಗಿ ದೋಲಿಸುತ್ತಿದ್ದಂತೆ, ಅದರ ಸ್ವಿಂಗ್ ಮೇಲ್ವಿಚಾರಣೆಯು ಧಾರ್ಮಿಕ ತಿರುವು ಕಾಣಿಸುತ್ತಿತ್ತು. ಇದರಿಂದ ಭೂಮಿ ತನ್ನ ಅಕ್ಷದ ಮೇಲೆ ತಿರುಗುತ್ತಿದೆ ಎಂಬುದು ದೃಶ್ಯವಾಗಿ ಸಾಬೀತಾಗಿತ್ತು.

➤ ಭೂಮಿಯ ತಿರುಗುವಿಕೆಯ ವೈಶಿಷ್ಟ್ಯಗಳು:


=> ಅಕ್ಷ ತಿರಸ್ಕರಣೆ: 23.5° – ಋತುವಿನ ಬದಲಾವಣೆಗಳಿಗೆ ಕಾರಣ.

=> ಗತಿಸುವ ವೇಗ: ಸಮುದ್ರ ಮಟ್ಟದಲ್ಲಿ ~1,670 ಕಿಮೀ/ಗಂ.

=> ದಿನ-ರಾತ್ರಿ ಚಕ್ರ, ಋತುಚಕ್ರ ಮತ್ತು ಹವಾಮಾನ ಪರಿಣಾಮಗಳಿಗೆ ಭೂಮಿಯ ತಿರುಗುವಿಕೆ ಪ್ರಮುಖವಾಗಿದೆ.

➤ ಜನವರಿ 8ರಂದು ಭೂಮಿಯ ತಿರುಗುವಿಕೆಯ ದಿನ ಆಚರಿಸುವುದು ವೈಜ್ಞಾನಿಕ ಸಂಶೋಧನೆಗೆ ಗೌರವ ಸಲ್ಲಿಸುವುದೂ, ಭೂಮಿಯ ಚಲನೆಯನ್ನು ಅರ್ಥಮಾಡಿಕೊಳ್ಳುವ ಮಹತ್ವವನ್ನು ಜಾಗೃತಿಪಡಿಸುವುದೂ ಆಗಿದೆ.

## "ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮರೆತುಹೋದ ಪುಟಗಳು: ಪ್ರೇಮ್ ಪ್ರಕಾಶ್ ಅವರ 'ಹಿಸ್ಟರಿ ದಟ್ ಇಂಡಿಯಾ ಇಗ್ನೋರ್ಡ್' ಪುಸ್ತಕ ಬಿಡುಗಡೆ ಮಾಡಿದ ಗೋವಾ ಸಿಎಂ"




* ಜನವರಿ 2026ರಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಪ್ಯಾನಜಿ, ಗೋವದಲ್ಲಿ ಪ್ರಸಿದ್ಧ ಪತ್ರಕರ್ತ ಹಾಗೂ ಏಷಿಯನ್ ನ್ಯೂಸ್ ಇಂಟರ್‌ನ್ಯಾಷನಲ್ (ANI) ಚೇರ್ಮನ್ ಪ್ರಮೋದ್ ಪ್ರಕಾಶ್ ರಚಿಸಿರುವ 'History That India Ignored' ಪುಸ್ತಕದ ಎರಡನೇ ಆವೃತ್ತಿಯನ್ನು ಬಿಡುಗಡೆ ಮಾಡಿದರು.ಈ ಪುಸ್ತಕವು ಭಾರತದ ಸ್ವಾತಂತ್ರ್ಯ ಹೋರಾಟದ ಕೆಲವು ಅಲಕ್ಷ್ಯಗೊಂಡ ಆಯಾಮಗಳನ್ನು ಒಳಗೊಂಡಿದೆ.

* ಮುಖ್ಯಾಂಶಗಳು:

=> ಅಸ್ಪಷ್ಟ ಹೀರೋಗಳು ಮತ್ತು ಕ್ರಾಂತಿಕಾರಿ ಚಳವಳಿಗಳು: ಸಾಮಾನ್ಯ ಇತಿಹಾಸದಲ್ಲಿ ಕಡಿಮೆ ಪ್ರತ್ಯೇಕವಾಗಿರುವ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕ್ರಾಂತಿಕಾರಿ ಚಳವಳಿಗಳನ್ನು ಉದ್ಘಾಟಿಸುತ್ತದೆ.

=> ಇಂಡಿಯನ್ ನ್ಯಾಷನಲ್ ಆರ್ಮಿ (INA): ಸುಭಾಷ್ ಚಂದ್ರ ಬೋಸೆಯ INA ಯ ಲೆಕ್ಕಾಚಾರ ಮತ್ತು ಸಶಸ್ತ್ರ ಹೋರಾಟದ ಪಾತ್ರವನ್ನು ವಿವರಿಸುತ್ತದೆ.

=> ಮಾರ್ಜಿನಲೈಸ್‌ಡ್ ಘಟನೆಗಳು: ವೆಲ್ಲೋರ್ ಗಡಿಯುದ್ಧ (1806), ಇಂಪ್ಯಾಲ್ ಯುದ್ಧ, ಸೇರಿದಂತೆ overlooked uprising ಗಳನ್ನು ಪರಿಚಯಿಸುತ್ತದೆ.

=> ಮಾರ್ಜಿನಲೈಸ್‌ಡ್ ಯೋಗದಾನಗಳು: ಕಡಿಮೆ ತಿಳಿದಿರುವ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಮುದಾಯಗಳ ಪಾತ್ರವನ್ನು ದಾಖಲಿಸುತ್ತದೆ.

* ಲೇಖಕರ ಪರಿಚಯ: ಪ್ರಮೋದ್ ಪ್ರಕಾಶ್ ಅನುಭವಜ್ಞಾನಿ ಪತ್ರಕರ್ತರು ಮತ್ತು ANI ಯ ಚೇರ್ಮನ್. ಇವರ ಲೇಖನ ಸಾಹಿತ್ಯವು ಅತಿಹಿತಿಹಾಸದ ಅಲಕ್ಷ್ಯಗೊಂಡ ಸತ್ಯಗಳನ್ನು ತರುವಲ್ಲಿ ಗಮನಾರ್ಹವಾಗಿದೆ.

# ಪ್ರಮೋದ್ ಪ್ರಕಾಶ್ ಅವರ ಸಾಹಿತ್ಯ ಮತ್ತು ಲೇಖನಗಳು: ಪ್ರಮೋದ್ ಪ್ರಕಾಶ್, ಪ್ರಸಿದ್ಧ ಪತ್ರಕರ್ತ ಹಾಗೂ ANI ಚೇರ್ಮನ್, ತಮ್ಮ ಅನುಭವಗಳ ಆಧಾರವಾಗಿ ಹಲವು ಪುಸ್ತಕಗಳನ್ನು ರಚಿಸಿದ್ದಾರೆ. ಅವರ ಪ್ರಮುಖ ಲೇಖನ ಮತ್ತು ಪುಸ್ತಕಗಳು:

=> Reporting India: My 70-Year Journey as a Journalist (2020) – ತಮ್ಮ ಆತ್ಮಕಥಾ ಪುಸ್ತಕ, 70 ವರ್ಷಗಳ ಪತ್ರಕರ್ತ ಜೀವನ, ಪ್ರಮುಖ ಐತಿಹಾಸಿಕ ಘಟನೆಗಳಲ್ಲಿ ಅನುಭವಗಳು, ಮತ್ತು ANI ಸಂಸ್ಥಾಪನೆಯ ಕುರಿತು ವಿವರಿಸುತ್ತದೆ.

=> History That India Ignored (2025, 2026 ಎರಡನೇ ಆವೃತ್ತಿ) – ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಲಕ್ಷ್ಯಗೊಂಡ ಸಾಹಸ, ಬಲಿದಾನ, ಕ್ರಾಂತಿಕಾರಿ ಚಳವಳಿಗಳು ಮತ್ತು INA ಯ ಪಾತ್ರವನ್ನು ವಿವರಿಸುವ ಪುಸ್ತಕ.

=> Afghanistan: The Quest for Peace, The Path of Wars – ಅಫ್ಘಾನಿಸ್ತಾನದಲ್ಲಿ ವಾಸ್ತವಿಕ ಸ್ಥಿತಿಗತಿಯ ಕುರಿತು ಅವರ ವರದಿಗಳ ಆಧಾರದ ಮೇಲೆ ಶಾಂತಿ ಮತ್ತು ಯುದ್ಧದ ಪಥವನ್ನು ವಿವರಿಸುವ ಪುಸ್ತಕ.

ಪ್ರಮೋದ್ ಪ್ರಕಾಶ್ ಅವರ ಬರಹಗಳು ಪ್ರಸ್ತುತ ರಾಜಕೀಯ, ಇತಿಹಾಸ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಪ್ರಮುಖ ಘಟನೆಗಳಲ್ಲಿ ವರದಿ ಅನುಭವಗಳನ್ನು ಆಧರಿಸುತ್ತವೆ.

## ವಿಶ್ವದ ಮೊದಲ ಸೇನೆ: ರಾಮ್‌ಜೆಟ್ ಚಾಲಿತ ಫಿರಂಗಿ ಶೆಲ್ ಬಳಸಲಿರುವ ಭಾರತೀಯ ಸೇನೆ




➤ ಭಾರತೀಯ ಸೇನೆ ತನ್ನ ಫಿರಂಗಿ ಸಾಮರ್ಥ್ಯವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಮಹತ್ವದ ಹೆಜ್ಜೆಯಾಗಿ, ರಾಮ್‌ಜೆಟ್ ಚಾಲಿತ 155 ಎಂಎಂ ಫಿರಂಗಿ ಶೆಲ್‌ಗಳನ್ನು ಕಾರ್ಯಾಚರಣೆಗೆ ನಿಯೋಜಿಸಲು ಸಿದ್ಧವಾಗಿದೆ. ಈ ತಂತ್ರಜ್ಞಾನವನ್ನು ಕಾರ್ಯಾಚರಣೆಯಲ್ಲಿ ಬಳಸುವ ವಿಶ್ವದ ಮೊದಲ ಸೇನೆಯಾಗುವ ಹೆಗ್ಗಳಿಕೆಗೆ ಭಾರತೀಯ ಸೇನೆ ಪಾತ್ರವಾಗಲಿದೆ.

➤ ಈ ಸುಧಾರಿತ ಫಿರಂಗಿ ಶೆಲ್‌ಗಳನ್ನು ರಾಜಸ್ಥಾನದ ಪೋಖ್ರಾನ್ (Pokhran) ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಶೆಲ್‌ಗಳ ಅಭಿವೃದ್ಧಿಯನ್ನು ಭಾರತೀಯ ತಂತ್ರಜ್ಞಾನ ಸಂಸ್ಥೆ (IIT) ಮದ್ರಾಸ್, ಸೇನಾ ತಂತ್ರಜ್ಞಾನ ಮಂಡಳಿ (Army Technology Board – ATB) ಸಹಯೋಗದೊಂದಿಗೆ ಕೈಗೊಳ್ಳಲಾಗಿದೆ.

➤ರಾಮ್‌ಜೆಟ್ ತಂತ್ರಜ್ಞಾನದ ವಿಶೇಷತೆ: ರಾಮ್‌ಜೆಟ್ ಪ್ರೊಪಲ್ಷನ್ ತಂತ್ರಜ್ಞಾನವು ಈಗಾಗಲೇ ಕ್ಷಿಪಣಿಗಳಲ್ಲಿ ಬಳಸಲಾಗುತ್ತಿತ್ತು. ಆದರೆ, ಇದೇ ತಂತ್ರಜ್ಞಾನವನ್ನು ಫಿರಂಗಿ ಶೆಲ್‌ಗಳಿಗೆ ಅನ್ವಯಿಸಿರುವುದು ಕ್ರಾಂತಿಕಾರಿ ಬೆಳವಣಿಗೆ ಎಂದು ಪರಿಗಣಿಸಲಾಗಿದೆ.ರಾಮ್‌ಜೆಟ್ ಎಂಜಿನ್‌ಗಳು:

- ಗಾಳಿಯನ್ನು ಆಮ್ಲಜನಕವಾಗಿ ಬಳಸುತ್ತವೆ
- ಯಾವುದೇ ಚಲಿಸುವ ಭಾಗಗಳನ್ನು ಹೊಂದಿರುವುದಿಲ್ಲ
- ಫಿರಂಗಿಯಿಂದ ಹೊರಟ ಬಳಿಕ ನಿರಂತರ thrust ಒದಗಿಸುತ್ತವೆ

➤ ಕಾರ್ಯಕ್ಷಮತೆ ಮತ್ತು ಲಾಭ:

=> 155 ಎಂಎಂ ಸಾಮಾನ್ಯ ಶೆಲ್‌ಗಳಿಗಿಂತ 30–50% ಹೆಚ್ಚುವರಿ ವ್ಯಾಪ್ತಿ

=> 80 ರಿಂದ 120 ಕಿಮೀ ವರೆಗೆ ಗುರಿ ತಲುಪುವ ಸಾಮರ್ಥ್ಯ

=> ಈಗಾಗಲೇ ಬಳಕೆಯಲ್ಲಿರುವ ಗನ್‌ಗಳಿಗೆ ಮರು ವಿನ್ಯಾಸ ಅಗತ್ಯವಿಲ್ಲ

=> M777 ಅಲ್ಟ್ರಾ ಲೈಟ್ ಹೌಟ್ಜರ್, ATAGS ಸೇರಿದಂತೆ ಎಲ್ಲಾ 155 ಎಂಎಂ ಗನ್‌ಗಳಿಗೆ ಹೊಂದಾಣಿಕೆ

=> ಕಡಿಮೆ ವೆಚ್ಚದಲ್ಲಿ ದೀರ್ಘವ್ಯಾಪ್ತಿಯ, ನಿಖರ ದಾಳಿ ಸಾಮರ್ಥ್ಯ

➤ ಈ ಯೋಜನೆ ಆತ್ಮನಿರ್ಭರ ಭಾರತ್ ಉಪಕ್ರಮದ ಅಡಿಯಲ್ಲಿ ಅಭಿವೃದ್ಧಿಗೊಂಡಿದ್ದು, ದೇಶೀಯ ತಂತ್ರಜ್ಞಾನ ಮತ್ತು ಸಂಶೋಧನೆಯ ಶಕ್ತಿಯನ್ನು ಪ್ರದರ್ಶಿಸುತ್ತದೆ. ಐಐಟಿ ಮದ್ರಾಸ್‌ನ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರು ಪಿ.ಎ. ರಾಮಕೃಷ್ಣ ಮತ್ತು ಎಸ್. ವರ್ಮಾ ಅವರು ಈ ರಾಮ್‌ಜೆಟ್ ಚಾಲಿತ ಫಿರಂಗಿ ಶೆಲ್ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

➤ ಅಮೆರಿಕದ Boeing, ನಾರ್ವೆಯ Nammo ಮುಂತಾದ ಸಂಸ್ಥೆಗಳು ಪರೀಕ್ಷಾ ಹಂತದಲ್ಲಿ ಇದ್ದರೂ, ಕಾರ್ಯಾಚರಣಾ ಹಂತದಲ್ಲಿ ಈ ತಂತ್ರಜ್ಞಾನ ಬಳಸದ ವಿಶ್ವದ ಮೊದಲ ದೇಶ ಭಾರತವಾಗಲಿದೆ. ಇದರಿಂದ ಭಾರತದ ಡೀಪ್-ಸ್ಟ್ರೈಕ್ ಮತ್ತು ಕೌಂಟರ್ ಬ್ಯಾಟರಿ ಸಾಮರ್ಥ್ಯಗಳು ಬಹಳ ಮಟ್ಟಿಗೆ ವೃದ್ಧಿಯಾಗಲಿವೆ.

## 09 Jan 2026

### ನೌಕಾಪಡೆಯ ಬಲವರ್ಧನೆ 2026: ಪ್ರತಿ 45 ದಿನಕ್ಕೊಮ್ಮೆ ಹೊಸ ಯುದ್ಧನೌಕೆ ಸೇರ್ಪಡೆ!



➤ ಹಿಂದೂ ಮಹಾಸಾಗರದಲ್ಲಿ ಭಾರತದ ಪ್ರಾಬಲ್ಯವನ್ನು ಹೆಚ್ಚಿಸಲು ಮತ್ತು ಕಡಲ ಭದ್ರತೆಯನ್ನು ಉತ್ತುಂಗಕ್ಕೆ ಕೊಂಡೊಯ್ಯಲು ಭಾರತೀಯ ನೌಕಾಪಡೆಯು 2026ರಲ್ಲಿ ಐತಿಹಾಸಿಕ ಗುರಿಯನ್ನು ಹಾಕಿಕೊಂಡಿದೆ. ಈ ಯೋಜನೆಯಂತೆ, ಪ್ರತಿ ಒಂದೂವರೆ ತಿಂಗಳಿಗೊಮ್ಮೆ (45 ದಿನಗಳು) ಒಂದು ಹೊಸ ಯುದ್ಧ ಹಡಗನ್ನು ನೌಕಾಪಡೆಗೆ ಸೇರ್ಪಡೆಗೊಳಿಸಲು ನಿರ್ಧರಿಸಲಾಗಿದೆ.
'ಆತ್ಮನಿರ್ಭರ ಭಾರತ' ಅಭಿಯಾನದ ಅಡಿಯಲ್ಲಿ ದೇಶೀಯವಾಗಿ ಹಡಗು ನಿರ್ಮಾಣ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯು ಈ ಬೃಹತ್ ಗುರಿಯನ್ನು ತಲುಪಲು ಪೂರಕವಾಗಿದೆ.
➤ ನೌಕಾಪಡೆಯ ಇತ್ತೀಚಿನ ಪ್ರಮುಖ ಕಾರ್ಯಾಚರಣೆಗಳು:-
=> ಆಪರೇಷನ್ ಸಿಂದೂರ್: ಪಶ್ಚಿಮ ಭಾರತೀಯ ಮಹಾಸಾಗರದಲ್ಲಿ ಐಎನ್‌ಎಸ್ ತರ್ಕಶ್ ಮತ್ತು ಪಿ-8ಐ ನೌಕೆಗಳು ಸುಮಾರು 2,500 ಕೆಜಿ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ (ಮಾರ್ಚ್ 2025).
=> ಆಪರೇಷನ್ ಸಂಕಲ್ಪ: ವ್ಯಾಪಾರ ಹಡಗುಗಳ ರಕ್ಷಣೆ ಮತ್ತು ಕಡಲ್ಗಳ್ಳತನ ವಿರೋಧಿ ಕಾರ್ಯಾಚರಣೆಗಳಿಗಾಗಿ ಈ ಉಪಕ್ರಮವನ್ನು ಕೈಗೊಳ್ಳಲಾಗಿದೆ.
=> ಆಪರೇಷನ್ ಬ್ರಹ್ಮ: ಮ್ಯಾನ್ಮಾರ್ ಭೂಕಂಪದ ಸಮಯದಲ್ಲಿ ಸಂತ್ರಸ್ತರಿಗೆ ಮಾನವೀಯ ನೆರವು ನೀಡಲು ಐಎನ್‌ಎಸ್ ಸಾತ್ಪುರ ಸೇರಿದಂತೆ ಹಲವು ಹಡಗುಗಳನ್ನು ಬಳಸಿಕೊಳ್ಳಲಾಗಿದೆ.
➤ ದೇಶೀಯ ನಿರ್ಮಿತ ಹಡಗುಗಳ ಸೇರ್ಪಡೆ (2025):ಕಳೆದ ವರ್ಷದಲ್ಲಿ ಭಾರತವು ತನ್ನ 'ಆತ್ಮನಿರ್ಭರ ಭಾರತ' ಅಭಿಯಾನದಡಿ ಹಲವು ಯುದ್ಧನೌಕೆಗಳನ್ನು ಸೇರ್ಪಡೆಗೊಳಿಸಿದೆ:
# ಐಎನ್‌ಎಸ್ ಸೂರತ್: ಇವು ಪ್ರಾಜೆಕ್ಟ್ 15B ಅಡಿಯಲ್ಲಿ ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದ ನಾಲ್ಕನೇ ಹಾಗೂ ಕೊನೆಯ ಸ್ಟೆಲ್ತ್ ಗೈಡೆಡ್ ಮಿಸೈಲ್ ಡಿಸ್ಟ್ರೋಯರ್ ಆಗಿದ್ದು, ಅತ್ಯಾಧುನಿಕ ರಾಡಾರ್ ಮತ್ತು ಕ್ಷಿಪಣಿ ವ್ಯವಸ್ಥೆಗಳೊಂದಿಗೆ ಶತ್ರುಗಳ ವಿಮಾನಗಳು ಹಾಗೂ ಹಡಗುಗಳನ್ನು ದೂರದಿಂದಲೇ ಪತ್ತೆಹಚ್ಚಿ ನಾಶಮಾಡುವ ಸಾಮರ್ಥ್ಯವನ್ನು ಹೊಂದಿದೆ.
# ನೀಲಗಿರಿ ವರ್ಗದ ಫ್ರಿಗೇಟ್‌ಗಳು: ನೀಲಗಿರಿ ವರ್ಗದ ಫ್ರಿಗೇಟ್‌ಗಳು ಪ್ರಾಜೆಕ್ಟ್ 17A ಅಡಿಯಲ್ಲಿ ನಿರ್ಮಿಸಲಾದ ಸುಧಾರಿತ ಸ್ಟೆಲ್ತ್ ಯುದ್ಧನೌಕೆಗಳಾಗಿದ್ದು, ಕಡಿಮೆ ರಾಡಾರ್ ಸಿಗ್ನೇಚರ್, ಆಧುನಿಕ ಶಸ್ತ್ರಾಸ್ತ್ರಗಳು ಮತ್ತು ರಕ್ಷಣೆ-ಆಕ್ರಮಣ ಎರಡರಲ್ಲೂ ಬಲವರ್ಧಿತ ಸಾಮರ್ಥ್ಯವನ್ನು ಹೊಂದಿ ಭಾರತೀಯ ನೌಕಾಪಡೆಯ ಸಮರ ಶಕ್ತಿಯನ್ನು ಹೆಚ್ಚಿಸುತ್ತವೆ.
# ಐಎನ್‌ಎಸ್ ವಾಗೀರ್ (ಜಲಾಂತರ್ಗಾಮಿ): ಐಎನ್‌ಎಸ್ ವಾಗೀರ್ (INS Vagir)ವು ಪ್ರಾಜೆಕ್ಟ್ 75 ಅಡಿಯಲ್ಲಿ ನಿರ್ಮಿಸಲಾದ ಆರನೇ ಹಾಗೂ ಕೊನೆಯ ಕಲ್ವರಿ ವರ್ಗದ ಡೀಸೆಲ್-ಎಲೆಕ್ಟ್ರಿಕ್ ಅಟ್ಯಾಕ್ ಜಲಾಂತರ್ಗಾಮಿಯಾಗಿದ್ದು, ಅತ್ಯಂತ ನಿಶ್ಯಬ್ದ ಕಾರ್ಯಾಚರಣೆ ಸಾಮರ್ಥ್ಯದೊಂದಿಗೆ ಕಣ್ಗಾವಲು, ಗುಪ್ತ ದಾಳಿ ಮತ್ತು ಮಾಹಿತಿ ಸಂಗ್ರಹಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿದೆ.
➤ ಸಾಗರ ಪ್ರದೇಶದಲ್ಲಿ ಹೆಚ್ಚುತ್ತಿರುವ ಸವಾಲುಗಳನ್ನು ಎದುರಿಸಲು ಮತ್ತು ನೆರೆಯ ರಾಷ್ಟ್ರಗಳಿಗೆ ಸಹಾಯ ಹಸ್ತ ಚಾಚಲು ಭಾರತೀಯ ನೌಕಾಪಡೆಯು ಆಧುನೀಕರಣದ ಹಾದಿಯಲ್ಲಿದೆ. ಇದು ಭಾರತವನ್ನು 'Net Security Provider' ಆಗಿ ರೂಪಿಸಲು ಸಹಕಾರಿಯಾಗಿದೆ.

### ಪದ್ಮಶ್ರೀ ಪುರಸ್ಕೃತ, ಖ್ಯಾತ ಪರಿಸರ ತಜ್ಞ ಮಾಧವ ಗಾಡ್ಗೀಳ್ ನಿಧನ



* ಪಶ್ಚಿಮ ಘಟ್ಟಗಳ ಸಂರಕ್ಷಣೆಗಾಗಿ ಅವಿರತವಾಗಿ ಶ್ರಮಿಸಿದ, ಪದ್ಮಶ್ರೀ ಪುರಸ್ಕೃತ, ಖ್ಯಾತ ಪರಿಸರ ತಜ್ಞ ಮಾಧವ ಗಾಡ್ಗಿಲ್ ಅವರು ನಿಧನರಾಗಿದ್ದಾರೆ. ಪ್ರಧಾನಿ ಮಂತ್ರಿಗಳಿಗೆ ಪರಿಸರ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದ ಮಾಧವ ಗಾಡ್ಗಿಲ್ ವಯೋಸಹಜ ಖಾಯಿಲೆಯಿಂದ ಪುಣೆಯ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ.
*ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಹವಾಮಾನ ವಿಜ್ಞಾನಿಯಾಗಿದ್ದ ಪತ್ನಿ ಸುಲೋಚನಾ ಗಾಡ್ಗೀಳ್ 2025ರ ಜುಲೈನಲ್ಲಿ ಮೃತಪಟ್ಟಿದ್ದರು.
* 'ಭಾರತದ ಪರಿಸರ ಸಂಶೋಧನೆ ಮತ್ತು ಸಂರಕ್ಷಣಾ ನೀತಿ' ರೂಪಿಸುವಲ್ಲಿ ಗಾಡ್ಗೀಳ್ ಮಹತ್ವದ ಪಾತ್ರ ವಹಿಸಿದ್ದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿರುವ (ಐಐಎಸ್ಸಿ) ಪರಿಸರ ವಿಜ್ಞಾನ ಕೇಂದ್ರದ ಸ್ಥಾಪಕರಾಗಿ, 'ಗಾಡ್ಗೀಳ್ ಆಯೋಗ' ಎಂದೇ ಹೆಸರಾಗಿದ್ದ 'ಪಶ್ಚಿಮ ಘಟ್ಟಗಳ ಪರಿಸರ ವಿಜ್ಞಾನ ತಜ್ಞರ ಸಮಿತಿಯ (ಡಬ್ಲ್ಯುಜಿಇಇಪಿ) ಅಧ್ಯಕ್ಷರಾಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ.

*** ಗಾಡ್ಗೀಳ್ ಬದುಕಿನ ಪ್ರಮುಖ ಘಟ್ಟಗಳು**

=> ಪುಣೆಯ ಪ್ರಸಿದ್ಧ ಕುಟುಂಬದಲ್ಲಿ ಗಾಡ್ಗೀಳ್ ಅವರು 1942ರ ಮೇ 24ರಂದು ಜನಿಸಿದರು. ಹೆಸರಾಂತ ಅರ್ಥಶಾಸ್ತ್ರಜ್ಞ, ಗೋಖಲೆ ಇನ್‌ಸ್ಟಿಟ್ಯೂಟ್‌ನ ಮಾಜಿ ನಿರ್ದೇಶಕ ಧನಂಜಯ ರಾಮಚಂದ್ರ ಗಾಡ್ಗೀಳ್ ಅವರ ತಂದೆ. ತಾಯಿ ಪ್ರಮೀಳಾ ಗಾಡ್ಗೀಳ್.
=> 1963ರಲ್ಲಿ ಫರ್ಗ್ಯೂಸನ್ ಕಾಲೇಜಿನಿಂದ ಜೀವಶಾಸ್ತ್ರದಲ್ಲಿ ಪದವಿ, 1965ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1969ರಲ್ಲಿ ಪಿಎಚ್.ಡಿ ಅಧ್ಯಯನಕ್ಕಾಗಿ ಹಾರ್ವರ್ಡ್ ವಿಶ್ವದ್ಯಾಲಯ ಸೇರಿದ ಅವರು, ಅಲ್ಲಿ ಗಣಿತ, ಪರಿಸರ ವಿಜ್ಞಾನ ಮತ್ತು ಪ್ರಾಣಿಗಳ ನಡವಳಿಕೆ ಕುರಿತು ಅಧ್ಯಯನ ನಡೆಸಿದರು.
=> ಹಾರ್ವರ್ಡ್ ವಿಶ್ವದ್ಯಾಲಯದಿಂದ ಪಿಎಚ್.ಡಿ ಪಡೆದು, 1971ರಲ್ಲಿ ಭಾರತಕ್ಕೆ ಮರಳಿದ ಗಾಡ್ಗೀಳ್, ಪುಣೆಯ ಅಗರ್ಕರ್ ಸಂಶೋಧನಾ ಸಂಸ್ಥೆಯಲ್ಲಿ ವಿಜ್ಞಾನ ಅಧಿಕಾರಿಯಾಗಿ ಸೇರಿದರು. ಅಲ್ಲಿ ಎರಡು ವರ್ಷ ಕಾರ್ಯನಿರ್ವಹಿಸಿದರು.
=> 1973ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯನ್ನುಸೇರಿದರು. ಬಳಿಕ ಪರಿಸರ ವಿಜ್ಞಾನಗಳ ಕೇಂದ್ರ, ಸೆಂಟರ್ ಫಾರ್ ಥಿಯರಿಟಿಕಲ್ ಸ್ಟಡೀಸ್ ಸ್ಥಾಪಿಸುವ ಮೂಲಕ ಭಾರತದಲ್ಲಿ ಆಧುನಿಕ ಪರಿಸರ ವಿಜ್ಞಾನ ಸಂಶೋಧನೆಗಳಿಗೆ ಅಡಿಗಲ್ಲು ಹಾಕಿದರು.
=> ಜೀವವೈವಿಧ್ಯದ ದೃಷ್ಟಿಯಿಂದ ದುರ್ಬಲವಾದ ಭಾರತದ ವಿವಿಧ ಪ್ರದೇಶಗಳ ಅಧ್ಯಯನಕ್ಕಾಗಿ ಸರ್ಕಾರ ರಚಿಸಿದ್ದ ತಜ್ಞರ ಸಮಿತಿಯ ಅಧ್ಯಕ್ಷರಾಗಿ ಗಾಡ್ಗೀಳ್ ಕಾರ್ಯನಿರ್ವಹಿಸಿದ್ದರು.
=> ಜನಸಂಖ್ಯೆ ಹೆಚ್ಚಳ, ಹವಾಮಾನ ವೈಪರೀತ್ಯ, ಮಾನವ ಹಸ್ತಕ್ಷೇಪ, ಅವೈಜ್ಞಾನಿಕ ಅಭಿವೃದ್ಧಿ ಚಟುವಟಿಕೆಗಳಿಂದ ಪಶ್ಚಿಮ ಘಟ್ಟಗಳ ಮೇಲಾಗುತ್ತಿರುವ ಪರಿಣಾಮ ಕುರಿತು ಅವರು ಅಧ್ಯಯನ ನಡೆಸಿದ್ದರು.
=> ಡಬ್ಲ್ಯುಜಿಇಇಪಿ ಅಧ್ಯಕ್ಷರಾಗಿದ್ದ ಗಾಡ್ಗೀಳ್, 2010ರಲ್ಲಿ ಪಶ್ಚಿಮಘಟ್ಟದ ಬಹು ದೊಡ್ಡ ಭಾಗವನ್ನು 'ಪರಿಸರ ಸೂಕ್ಷ್ಮ ಪ್ರದೇಶ' ಎಂದು ಘೋಷಿಸುವಂತೆ ಶಿಫಾರಸು ಮಾಡಿ ಮಹತ್ವದ ವರದಿ ಸಲ್ಲಿಸಿದ್ದರು.
=> ಗಾಡ್ಗೀಳ್ ವರದಿಯು ತೀವ್ರ ಚರ್ಚೆಗೆ ಕಾರಣವಾದರೂ ಇದನ್ನು ಭಾರತದ ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಮೈಲಿಗಲ್ಲು ಎಂದೇ ಗುರುತಿಸಲಾಗಿದೆ.
=> ಗಾಡ್ಗೀಳ್ ಅವರು ಪ್ರಧಾನಿಯವರ ವೈಜ್ಞಾನಿಕ ಸಲಹಾ ಮಂಡಳಿ, ರಾಷ್ಟ್ರೀಯ ಸಲಹಾ ಸಮಿತಿ, ರಾಷ್ಟ್ರೀಯ ಹುಲಿ

KPSCVaani

ಸಂರಕ್ಷಣಾ ಪ್ರಾಧಿಕಾರ ಸೇರಿದಂತೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಉನ್ನತ ಮಟ್ಟದ ಸಮಿತಿಗಳಲ್ಲೂ ಕಾರ್ಯನಿರ್ವಹಿಸಿದ್ದರು.

=> ಐಐಎಸ್‌ಸಿಯಿಂದ 2004ರಲ್ಲಿ ನಿವೃತ್ತರಾದ ಗಾಡ್ಗೀಳ್ ಅವರು ಬಳಿಕ ಪುಣೆಯ ಅಗರ್ಕರ್ ಸಂಶೋಧನಾ ಕೇಂದ್ರ ಮತ್ತು ಗೋವಾ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ, ಶೈಕ್ಷಣಿಕ ಕಾರ್ಯ ಮುಂದುವರಿಸಿದರು.

=> ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಗಾಡ್ಗೀಳ್ ಅವರು ನಡೆಸಿದ ಪ್ರಯತ್ನಗಳಿಗಾಗಿ 2024ರಲ್ಲಿ ವಿಶ್ವಸಂಸ್ಥೆಯು ಅವರಿಗೆ 'ಚಾಂಪಿಯನ್ ಆಫ್ ದ ಅರ್ಥ್' ಪುರಸ್ಕಾರ ನೀಡಿ ಗೌರವಿಸಿತ್ತು.

=> 1981ರಲ್ಲಿ ಪದ್ಮಶ್ರೀ, 2006ರಲ್ಲಿ ಪದ್ಮವಿಭೂಷಣ, ಶಾಂತಿ ಸ್ವರೂಪ ಭಟ್ನಾಗರ್ ಪುರಸ್ಕಾರ, ವೋಲ್ವೊ ಪರಿಸರ ಪ್ರಶಸ್ತಿ, ಟೇಲರ್ ಪರಿಸರ ಸಾಧಕ ಪ್ರಶಸ್ತಿ ಸೇರಿದಂತೆ ಗಾಡ್ಗೀಳ್ ಅವರಿಗೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಪುರಸ್ಕಾರಗಳು ಲಭಿಸಿವೆ.

=> ಸಂಶೋಧಕ ಹಾಗೂ ಬರಹಗಾರರೂ ಆಗಿದ್ದ ಗಾಡ್ಗೀಳ್ ಅವರು, 'ದಿಸ್ ಫಿಶರ್ಡ್ ಲ್ಯಾಂಡ್' ಮತ್ತು 'ಎಕಾಲಜಿ ಆ್ಯಂಡ್ ಈಕ್ವಿಟಿ' ಸೇರಿದಂತೆ ಹಲವು ಕೃತಿಗಳಿಗೆ ಸಹ ಲೇಖಕರಾಗಿದ್ದಾರೆ. 250ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಅವರು ಮಂಡಿಸಿದ್ದರು.

=> ಪರಿಸರ ಸಂರಕ್ಷಣೆ ಕುರಿತು ಇಂಗ್ಲಿಷ್ ಮತ್ತು ಮರಾಠಿ ಪತ್ರಿಕೆಗಳಲ್ಲಿ ಅವರು ನಿಯಮಿತವಾಗಿ ಅಂಕಣಗಳನ್ನು ಬರೆದಿದ್ದರು.

## ಅಮೆರಿಕದ 'ಸ್ಯಾಂಕ್ಷನಿಂಗ್ ರಷ್ಯಾ ಆಕ್ಟ್ 2025': ಭಾರತಕ್ಕೆ 500% ಸುಂಕದ ಭೀತಿ! ಜಾಗತಿಕ ತೈಲ ರಾಜಕಾರಣದಲ್ಲಿ ನಡುಕ




➤ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ಸ್ಯಾಂಕ್ಷನಿಂಗ್ ರಷ್ಯಾ ಆಕ್ಟ್ 2025' ಎಂಬ ಮಸೂದೆಗೆ ಹಸಿರು ನಿಶಾನೆ ತೋರಿಸಿದ್ದಾರೆ. ಈ ಕ್ರಾಂತಿಕಾರಿ ಮಸೂದೆಯು ರಷ್ಯಾದಿಂದ ಕಚ್ಚಾತೈಲ ಮತ್ತು ಯುರೇನಿಯಂ ಖರೀದಿಸುವ ದೇಶಗಳ ಮೇಲೆ ಶೇ. 500ರಷ್ಟು ಭಾರಿ ದಂಡಾತ್ಮಕ ಸುಂಕವನ್ನು (Tariff) ವಿಧಿಸಲು ಶ್ವೇತಭವನಕ್ಕೆ ಅಪಾರ ಅಧಿಕಾರ ನೀಡುತ್ತದೆ. ಇದು ರಷ್ಯಾದ ಅತಿ ದೊಡ್ಡ ತೈಲ ಗ್ರಾಹಕ ರಾಷ್ಟ್ರಗಳಾದ ಭಾರತ ಮತ್ತು ಚೀನಾದ ಮೇಲೆ ನೇರ ಪರಿಣಾಮ ಬೀರಲಿದೆ.

ಏನಿದು 'ಸ್ಯಾಂಕ್ಷನಿಂಗ್ ರಷ್ಯಾ ಆಕ್ಟ್ 2025'?

ಈ ಮಸೂದೆಯನ್ನು ಅಮೆರಿಕದ ಸೆನೆಟರ್‌ಗಳಾದ ಲಿಂಡ್ಸೆ ಗ್ರಹಾಂ ಮತ್ತು ರಿಚರ್ಡ್ ಬ್ಲೂಮೆಂತಾಲ್ ಮಂಡಿಸಿದ್ದು, ರಷ್ಯಾದ ಆರ್ಥಿಕ ಮೂಲಗಳನ್ನು ಕಡಿತಗೊಳಿಸಿ ಉಕ್ರೇನ್ ಯುದ್ಧವನ್ನು ಕೊನೆಗಾಣಿಸುವುದು ಇದರ ಪ್ರಮುಖ ಗುರಿಯಾಗಿದೆ. ಈ ಕಾಯ್ದೆಯಡಿ, ರಷ್ಯಾದಿಂದ ತೈಲ, ಅನಿಲ ಅಥವಾ ಯುರೇನಿಯಂ ಖರೀದಿಸುವ ದೇಶಗಳಿಂದ ಅಮೆರಿಕಕ್ಕೆ ಆಮದು ಆಗುವ ಸರಕುಗಳ ಮೇಲೆ 500% ಸುಂಕ ವಿಧಿಸುವ ಅಧಿಕಾರವಿದೆ. ಜೊತೆಗೆ, ರಷ್ಯಾದೊಂದಿಗೆ ವ್ಯಾಪಾರ ನಡೆಸುವ ಮೂರನೇ ದೇಶಗಳ ಮೇಲೂ ನಿರ್ಬಂಧ ಹೇರುವ 'ಸೆಕೆಂಡರಿ ಸ್ಯಾಂಕ್ಷನ್' ವ್ಯವಸ್ಥೆ ಇದರಲ್ಲಿ ಅಡಕವಾಗಿದೆ. ವಿಶೇಷವಾಗಿ, ರಷ್ಯಾ ಶಾಂತಿ ಮಾತುಕತೆಗೆ ನಿರಾಕರಿಸಿದರೆ ಅಥವಾ ಒಪ್ಪಂದ ಉಲ್ಲಂಘಿಸಿದರೆ ಈ ಸುಂಕಗಳು ಸ್ವಯಂಚಾಲಿತವಾಗಿ ಜಾರಿಗೆ ಬರುವ ವ್ಯವಸ್ಥೆ ಈ ಮಸೂದೆಯ ಪ್ರಮುಖ ಅಂಶವಾಗಿದೆ.

* ಭಾರತದ ಮೇಲೆ ಸಂಭವನೀಯ ಪರಿಣಾಮಗಳು: ಭಾರತವು ತನ್ನ ಕಚ್ಚಾತೈಲದ ಶೇ. 35–40 ರಷ್ಟು ರಷ್ಯಾದಿಂದ ರಿಯಾಯಿತಿ ದರದಲ್ಲಿ ಖರೀದಿಸುತ್ತಿರುವುದರಿಂದ, 'ಸ್ಯಾಂಕ್ಷನಿಂಗ್ ರಷ್ಯಾ ಆಕ್ಟ್ 2025' ಜಾರಿಯಾದರೆ ದೇಶದ ಮೇಲೆ ಬಹುಮುಖ ಸವಾಲುಗಳು ಎದುರಾಗಬಹುದು. ವಿಶೇಷವಾಗಿ, ಅಮೆರಿಕ ಭಾರತದ ಅತಿದೊಡ್ಡ ರಫ್ತು ಮಾರುಕಟ್ಟೆಯಾಗಿರುವುದರಿಂದ 500% ಸುಂಕ ವಿಧಿಸಿದರೆ ವಸ್ತ್ರ, ಔಷಧ, ಆಭರಣ ಮತ್ತು ಎಂಜಿನಿಯರಿಂಗ್ ಉತ್ಪನ್ನಗಳ ರಫ್ತು ತೀವ್ರವಾಗಿ ದುಬಾರಿಯಾಗಿದ್ದು, ರಫ್ತು ವಲಯಕ್ಕೆ ಭಾರಿ ಹೊಡೆತ ಬೀಳಲಿದೆ. ಜೊತೆಗೆ, ರಷ್ಯಾದ ಅಗ್ಗದ ತೈಲ ಲಭ್ಯವಿಲ್ಲದ ಪರಿಸ್ಥಿತಿಯಲ್ಲಿ ಪೆಟ್ರೋಲ್-ಡೀಸೆಲ್ ಬೆಲೆಗಳು ಏರಿಕೆಯಾಗುವ ಮೂಲಕ ಇಂಧನ ಭದ್ರತೆ ಮೇಲೆ ಒತ್ತಡ ಹೆಚ್ಚುವ ಸಾಧ್ಯತೆ ಇದೆ. ಇದರ ಜೊತೆಗೆ, 'ತಂತ್ರಾತ್ಮಕ ಸ್ವಾಯತ್ತತೆ' ನೀತಿಯ ಅಡಿಯಲ್ಲಿ ರಷ್ಯಾದೊಂದಿಗೆ ಸಂಬಂಧ ಉಳಿಸಿಕೊಂಡಿರುವ ಭಾರತ, ಅಮೆರಿಕದ ಈ ಕ್ರಮದಿಂದ ರಾಜತಾಂತ್ರಿಕ ಬಿಕ್ಕಟ್ಟಿನ ನಡುವೆ ಸಿಲುಕುವ ಅಪಾಯವೂ ಎದುರಾಗಬಹುದು.

* ಜಾಗತಿಕ ರಾಜಕೀಯದ ಆಯಾಮಗಳು: ಲಿಂಡ್ಸೆ ಗ್ರಹಾಂ ಅವರ ಪ್ರಕಾರ, ಈ ಮಸೂದೆಯು ಚೀನಾ, ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳ ಮೇಲೆ ಅಮೆರಿಕಕ್ಕೆ 'ಅದ್ಭುತ ಹತೋಟಿ' (Tremendous Leverage) ನೀಡುತ್ತದೆ. ಇದು ಈ ದೇಶಗಳು ರಷ್ಯಾದ ತೈಲ ಖರೀದಿಯನ್ನು ನಿಲ್ಲಿಸಲು ಒತ್ತಡ ಹೇರುವ ತಂತ್ರವಾಗಿದೆ.

* ಈ ಸವಾಲುಗಳನ್ನು ಎದುರಿಸಲು ಭಾರತವು ಅಮೆರಿಕದೊಂದಿಗೆ ರಾಜತಾಂತ್ರಿಕ ಮಟ್ಟದಲ್ಲಿ ವಿನಾಯಿತಿಗಾಗಿ ಮಾತುಕತೆ ನಡೆಸಿ, ಭಾರತೀಯ ಸರಕುಗಳ ಮೇಲೆ ಈಗಾಗಲೇ ಇರುವ ಶೇ. 25–50 ರಷ್ಟು ಹೆಚ್ಚುವರಿ ಸುಂಕವನ್ನು ಕಡಿತಗೊಳಿಸಲು ಒತ್ತಡ ಹೇರುವ ಸಾಧ್ಯತೆ ಇದೆ. ಜೊತೆಗೆ, ರಷ್ಯಾದ ಮೇಲಿನ ತೈಲ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಪಶ್ಚಿಮ ಏಷ್ಯಾದ ದೇಶಗಳು (ಸೌದಿ ಅರೇಬಿಯಾ, ಇರಾಕ್) ಹಾಗೂ ಅಮೆರಿಕದಿಂದ ಕಚ್ಚಾತೈಲ ಆಮದುಗಳನ್ನು ಹೆಚ್ಚಿಸುವ ಮೂಲಕ ತೈಲ ಮೂಲಗಳ ವೈವಿಧ್ಯೀಕರಣಕ್ಕೆ ಒತ್ತು ನೀಡಬಹುದು. ದೀರ್ಘಾವಧಿಯಲ್ಲಿ, ನವೀಕರಿಸಬಹುದಾದ ಇಂಧನ ಮತ್ತು ಹಸಿರು ಇಂಧನ ಕ್ಷೇತ್ರಗಳಿಗೆ ವೇಗ ನೀಡಿ ಇಂಧನ ಭದ್ರತೆ ಮತ್ತು ಹವಾಮಾನ ಗುರಿಗಳನ್ನು ಒಂದೇ ವೇಳೆ ಸಾಧಿಸುವುದು ಭಾರತದ ಪ್ರಮುಖ ತಂತ್ರವಾಗಲಿದೆ.

## ಅಟ್ಲಾಂಟಿಕ್ ಸಾಗರದಲ್ಲಿ ರಷ್ಯಾ ತೈಲ ನೌಕೆ 'ಮರಿನೇರಾ' ವಶ: ಅಮೆರಿಕದ ಕಠಿಣ ಕ್ರಮಕ್ಕೆ ರಷ್ಯಾ ಕಿಡಿ; ಹಡಗಿನಲ್ಲಿ ಮೂವರು ಭಾರತೀಯರು!



➤ ರಷ್ಯಾ ಧ್ವಜ ಹೊತ್ತ ತೈಲ ಟ್ಯಾಂಕರ್ 'ಮರಿನೇರಾ' (Marinera) (ಹಿಂದಿನ ಹೆಸರು 'ಬೆಲ್ಲಾ-1') ಅನ್ನು ಅಮೆರಿಕದ ನೌಕಾಪಡೆ ಮತ್ತು ಕೋಸ್ಟ್ ಗಾರ್ಡ್ ಜಂಟಿ ಕಾರ್ಯಾಚರಣೆಯ ಮೂಲಕ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಜನವರಿ 7, 2026ರಂದು ವಶಪಡಿಸಿಕೊಂಡಿವೆ. ವೆನೆಜುವೆಲಾದ ತೈಲ ವ್ಯಾಪಾರದ ಮೇಲಿನ ಅಮೆರಿಕದ ನಿರ್ಬಂಧಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಈ ಕ್ರಮ ಕೈಗೊಳ್ಳಲಾಗಿದ್ದು, ಇದು ಜಾಗತಿಕ ಮಟ್ಟದಲ್ಲಿ ದೊಡ್ಡ ರಾಜತಾಂತ್ರಿಕ ಸಂಘರ್ಷಕ್ಕೆ ನಾಂದಿ ಹಾಡಿದೆ.

➤ ಘಟನೆಯ ಹಿನ್ನೆಲೆ ಮತ್ತು ಅಮೆರಿಕದ ಕ್ರಮ: ಅಮೆರಿಕದ ಪ್ರಕಾರ, ಈ ಹಡಗು ವೆನೆಜುವೆಲಾದ ಮೇಲಿನ ತೈಲ ನಿರ್ಬಂಧಗಳನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದು, ಅಮೆರಿಕ ಹೇರಿರುವ 'ಸಾಗರ ತಡೆಗೋಡೆ' (Blockade) ಯನ್ನು ಮೀರಿ ಸಂಚರಿಸುತ್ತಿತ್ತು. ಅಮೆರಿಕದ ಬೆನ್ನಟ್ಟುವಿಕೆಯಿಂದ ತಪ್ಪಿಸಿಕೊಳ್ಳಲು ಹಡಗು ಗಯಾನಾ ಮತ್ತು ಪನಾಮ ಧ್ವಜಗಳಡಿ ಸಂಚರಿಸಿದ್ದ ನಂತರ, ಜನವರಿ ಆರಂಭದಲ್ಲಿ ತನ್ನ ಹೆಸರನ್ನು 'ಬೆಲ್ಲಾ-1' ರಿಂದ 'ಮರಿನೇರಾ' ಎಂದು ಬದಲಿಸಿ ರಷ್ಯಾ ಧ್ವಜವನ್ನು ಹಚ್ಚಿಕೊಂಡಿತು ಎಂಬ ಆರೋಪವೂ ಇದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ಕೋಸ್ಟ್ ಗಾರ್ಡ್ ಕಟರ್ 'ಯುಎಸ್ ಸಿಜಿಸಿ ಮುನ್ರೊ' (USCGC Munro) ಹಾಗೂ ಬ್ರಿಟನ್ ನೌಕಾಪಡೆ

ಸೇರಿ ಬೃಹತ್ ಜಂಟಿ ಕಾರ್ಯಾಚರಣೆ ನಡೆಸಿದ್ದು, ಇದು ಅಮೆರಿಕ-ಬ್ರಿಟನ್ ಭದ್ರತಾ ಸಹಕಾರದ ಮಹತ್ವವನ್ನು ತೋರಿಸುತ್ತದೆ.

➤ ಭಾರತೀಯ ಸಿಬ್ಬಂದಿಯ ಆತಂಕ: ರಷ್ಯಾದ ಸಾರಿಗೆ ಸಚಿವಾಲಯದ ಪ್ರಕಾರ, ಈ ಹಡಗಿನಲ್ಲಿ ಒಟ್ಟು 28 ಮಂದಿ ಸಿಬ್ಬಂದಿ ಇದ್ದು, ಅವರಲ್ಲಿ ಉಕ್ರೇನ್‌ನ 17, ಜಾರ್ಜಿಯಾದ 6, ಭಾರತದ 3 ಹಾಗೂ ರಷ್ಯಾದ 2 ನಾಗರಿಕರು ಸೇರಿದ್ದಾರೆ. ಹಡಗಿನಲ್ಲಿರುವ ಭಾರತೀಯ ಸಿಬ್ಬಂದಿಯ ಸುರಕ್ಷತೆ ಮತ್ತು ಮಾನವ ಹಕ್ಕುಗಳ ಬಗ್ಗೆ ಭಾರತ ಸರ್ಕಾರ ನಿಕಟವಾಗಿ ನಿಗಾವಹಿಸುವ ಸಾಧ್ಯತೆ ಇದೆ, ಈ ನಡುವೆ ರಷ್ಯಾ ಅಮೆರಿಕವನ್ನು ಸಂಪರ್ಕಿಸಿ ಸಿಬ್ಬಂದಿಯ ಮೇಲೆ ಯಾವುದೇ ದೌರ್ಜನ್ಯ ನಡೆಯದಂತೆ ಹಾಗೂ ಅವರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕಳುಹಿಸುವಂತೆ ಆಗ್ರಹಿಸಿರುವುದು ಈ ಪ್ರಕರಣದ ರಾಜತಾಂತ್ರಿಕ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ.

➤ ರಷ್ಯಾದ ತೀವ್ರ ಖಂಡನೆ – 'ಸಾಗರ ಕಡಲ್ಗಳ್ಳತನ' ಆರೋಪ: ಈ ಘಟನೆಯನ್ನು ರಷ್ಯಾ ತೀವ್ರವಾಗಿ ಖಂಡಿಸಿ, ಇದನ್ನು "ಜಾಗತಿಕ ಕಡಲ್ಗಳ್ಳತನ" (Blatant Piracy) ಎಂದು ಕರೆದಿದೆ. 1982ರ ವಿಶ್ವಸಂಸ್ಥೆಯ ಸಾಗರ ಕಾನೂನು ಸಮಾವೇಶ (UNCLOS) ಅನ್ನು ಉಲ್ಲೇಖಿಸಿದ ರಷ್ಯಾ, ಮುಕ್ತ ಸಮುದ್ರದಲ್ಲಿ ಸಂಚರಿಸುವ ಹಡಗುಗಳ ಮೇಲೆ ದಾಳಿ ಅಥವಾ ವಶಪಡಿಸಿಕೊಳ್ಳುವುದು ಅಂತರಾಷ್ಟ್ರೀಯ ಕಾನೂನುಬಾಹಿರ ಎಂದು ವಾದಿಸಿದೆ. ಜೊತೆಗೆ, ರಷ್ಯಾ ಧ್ವಜದ ಅಡಿಯಲ್ಲಿ ಸಂಚರಿಸುತ್ತಿದ್ದ ಹಡಗನ್ನು ವಶಪಡಿಸಿಕೊಂಡಿರುವುದು ರಷ್ಯಾದ ಸಾರ್ವಭೌಮತ್ವದ ಮೇಲೆ ನಡೆದ ನೇರ ದಾಳಿ ಎಂದು ಮಾಸ್ಕೋ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಈ ಘಟನೆ ಜಾಗತಿಕ ಸಾಗರ ಭದ್ರತೆ ಮತ್ತು ಕಾನೂನು ವ್ಯವಸ್ಥೆಯ ಮೇಲೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ.

➤ ಜಾಗತಿಕ ಮತ್ತು ರಾಜತಾಂತ್ರಿಕ ಪರಿಣಾಮಗಳು: ಈ ಘಟನೆ ಅಮೆರಿಕ-ರಷ್ಯಾ ನಡುವಿನ ಉದ್ವಿಗ್ನತೆಯನ್ನು ಇನ್ನಷ್ಟು ತೀವ್ರಗೊಳಿಸಿದ್ದು, ಈಗಾಗಲೇ ನಡೆಯುತ್ತಿರುವ ಉಕ್ರೇನ್ ಯುದ್ಧದ ನಡುವೆಯೇ ಸಾಗರದಲ್ಲೂ ಮಹಾಶಕ್ತಿಗಳ ನಡುವಿನ ಸಂಘರ್ಷ ಕಾಣಿಸಿಕೊಳ್ಳುವುದು ಜಾಗತಿಕ ಭದ್ರತೆಗಾಗಿ ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ಸಂದರ್ಭದಲ್ಲೇ, ಹಡಗಿನಲ್ಲಿ ಭಾರತೀಯ ನಾಗರಿಕರು ಇದ್ದ ಕಾರಣ ಭಾರತಕ್ಕೆ ಮಹತ್ವದ ರಾಜತಾಂತ್ರಿಕ ಸವಾಲು ಎದುರಾಗಿದ್ದು, ಅಮೆರಿಕ ಮತ್ತು ರಷ್ಯಾ ಎರಡೂ ದೇಶಗಳೊಂದಿಗೆ ಸಮತೋಲನದ ಮಾತುಕತೆ ನಡೆಸಿ ತನ್ನ ನಾಗರಿಕರ ಸುರಕ್ಷತೆ ಮತ್ತು ಬಿಡುಗಡೆಗೆ ಆದ್ಯತೆ ನೀಡುವುದು ಅನಿವಾರ್ಯವಾಗಿದೆ.

## ಕರ್ನಾಟಕ ಸರ್ಕಾರದಿಂದ 2020 ಮತ್ತು 2021ನೇ ಸಾಲಿನ ಚಲನಚಿತ್ರ ಜೀವಮಾನ ಸಾಧನೆ ಪ್ರಶಸ್ತಿಗಳ ಪ್ರಕಟಣೆ



➤ ಕರ್ನಾಟಕ ರಾಜ್ಯ ಸರ್ಕಾರವು ಚಲನಚಿತ್ರರಂಗದ ವಿವಿಧ ವಿಭಾಗಗಳಲ್ಲಿ ಗಣನೀಯ ಹಾಗೂ ಅಪಾರ ಸೇವೆ ಸಲ್ಲಿಸಿದ ಸಾಧಕರಿಗೆ ನೀಡಲಾಗುವ 2020 ಮತ್ತು 2021ನೇ ಸಾಲಿನ ವಾರ್ಷಿಕ ಚಲನಚಿತ್ರ (ಜೀವಮಾನ ಸಾಧನೆ) ಪ್ರಶಸ್ತಿಗಳನ್ನು ಅಧಿಕೃತವಾಗಿ ಪ್ರಕಟಿಸಿದೆ. ಕನ್ನಡ ಚಿತ್ರರಂಗದ ದಿಗ್ಗಜರಾದ ಡಾ. ರಾಜಕುಮಾರ್, ಪುಟ್ಟಣ್ಣ ಕಣಗಾಲ್ ಮತ್ತು ಡಾ. ವಿಷ್ಣುವರ್ಧನ್ ಅವರ ಹೆಸರಿನಲ್ಲಿ ನೀಡಲಾಗುವ ಈ ಪ್ರತಿಷ್ಠಿತ ಪ್ರಶಸ್ತಿಗಳು, ಚಿತ್ರರಂಗದಲ್ಲಿ ದೀರ್ಘಕಾಲದ ಕಲಾತ್ಮಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕೊಡುಗೆಯನ್ನು ಗುರುತಿಸಿ ಗೌರವಿಸುವ ಉದ್ದೇಶವನ್ನು ಹೊಂದಿದ್ದು, 2026ರ ಜನವರಿ 08ರಂದು ಈ ಘೋಷಣೆ ನಡೆಯುವ ಮೂಲಕ ಹಿರಿಯ ಕಲಾವಿದರಿಗೆ ಸರ್ಕಾರದ ಮಾನ್ಯತೆ ದೊರೆತಿದೆ.

**➤ 2020ನೇ ಸಾಲಿನ ಪ್ರಶಸ್ತಿಗಳು:-**

=> ಡಾ. ರಾಜಕುಮಾರ್ ಪ್ರಶಸ್ತಿ: ಹಿರಿಯ ನಟಿ ಹಾಗೂ ಮಾಜಿ ಸಚಿವೆ ಜಯಮಾಲಾ

=> ಪುಟ್ಟಣ್ಣ ಕಣಗಾಲ್ ಪ್ರಶಸ್ತಿ: ಖ್ಯಾತ ನಿರ್ದೇಶಕ ಎಂ.ಎಸ್. ಸತ್ಯು

=> ಡಾ. ವಿಷ್ಣುವರ್ಧನ್ ಪ್ರಶಸ್ತಿ:ಹಿರಿಯ ಸ್ಥಿರ ಛಾಯಾಗ್ರಾಹಕ 'ಪ್ರಗತಿ' ಅಶ್ವತ್ಥನಾರಾಯಣ

**➤ 2021ನೇ ಸಾಲಿನ ಪ್ರಶಸ್ತಿಗಳು:-**

=> ಡಾ. ರಾಜಕುಮಾರ್ ಪ್ರಶಸ್ತಿ: ಹಿರಿಯ ನಿರ್ಮಾಪಕ ಸಾ. ರಾ. ಗೋವಿಂದು

=> ಪುಟ್ಟಣ್ಣ ಕಣಗಾಲ್ ಪ್ರಶಸ್ತಿ: ನಿರ್ದೇಶಕ ಕೆ. ಶಿವರುದ್ರಯ್ಯ

=> ಡಾ. ವಿಷ್ಣುವರ್ಧನ್ ಪ್ರಶಸ್ತಿ: ನಟ-ನಿರ್ಮಾಪಕ ಎಂ.ಕೆ. ಸುಂದರ್ ರಾಜ್

➤ ಈ ಮೂರು ಪ್ರತಿಷ್ಠಿತ ಪ್ರಶಸ್ತಿಗಳು ಕನ್ನಡ ಚಿತ್ರರಂಗದ ದಿಗ್ಗಜರಾದ ಡಾ. ರಾಜಕುಮಾರ್, ಪುಟ್ಟಣ್ಣ ಕಣಗಾಲ್ ಮತ್ತು ಡಾ. ವಿಷ್ಣುವರ್ಧನ್ ಅವರ ಹೆಸರಿನಲ್ಲಿ ನೀಡಲಾಗುತ್ತಿದ್ದು, ಪ್ರತಿಯೊಂದು ಪ್ರಶಸ್ತಿಯು ₹5 ಲಕ್ಷ ನಗದು ಬಹುಮಾನ ಹಾಗೂ 50 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿರುತ್ತದೆ.

➤ ಚಲನಚಿತ್ರ ಕ್ಷೇತ್ರದಲ್ಲಿ ಕಲಾತ್ಮಕತೆ, ಸಾಮಾಜಿಕ ಬದ್ಧತೆ ಮತ್ತು ದೀರ್ಘಕಾಲದ ಸಾಧನೆಯನ್ನು ಗುರುತಿಸಿ ನೀಡಲಾಗುವ ಈ ಪ್ರಶಸ್ತಿಗಳು, ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆ.

## ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಉಸ್ಮಾನ್ ಖವಾಜಾ ವಿದಾಯ



➤ ಆಸ್ಟ್ರೇಲಿಯಾದ ಮೊದಲ ಮುಸ್ಲಿಂ ಟೆಸ್ಟ್ ಕ್ರಿಕೆಟಿಗನಾದ ಉಸ್ಮಾನ್ ಖವಾಜಾ ಅವರು ಜನವರಿ 2026ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಸಿಡ್ನಿಯ ಸಿಡ್ನಿ ಕ್ರಿಕೆಟ್ ಗ್ರೌಂಡ್ (SCG) ನಲ್ಲಿ ನಡೆದ ಅಂತಿಮ ಆ್ಯಷಸ್ ಟೆಸ್ಟ್ ಪಂದ್ಯವೇ ಅವರ 88ನೇ ಹಾಗೂ ಕೊನೆಯ ಟೆಸ್ಟ್ ಪಂದ್ಯವಾಗಿದ್ದು, 15 ವರ್ಷಗಳ ಮಹತ್ವದ ಕ್ರಿಕೆಟ್ ಬದುಕಿಗೆ ಭಾವನಾತ್ಮಕ ಅಂತ್ಯವಾಯಿತು.

➤ ಖವಾಜಾ ಅವರ ನಿವೃತ್ತಿ ಕೇವಲ ಕ್ರಿಕೆಟ್ ಅಂಕಿಅಂಶಗಳ ಅಂತ್ಯವಲ್ಲ; ಅದು ಆಸ್ಟ್ರೇಲಿಯಾ ಕ್ರೀಡಾ ಇತಿಹಾಸದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯ ಮಹತ್ವದ ಮೈಲಿಗಲ್ಲಾಗಿದೆ. ಮೊದಲ ಮುಸ್ಲಿಂ ಟೆಸ್ಟ್ ಆಟಗಾರನಾಗಿ ಅವರು ಆಯ್ಕೆ ಹಾಗೂ ಪ್ರದರ್ಶನದಲ್ಲಿ ಪ್ರತಿಭೆಯೇ ಮುಖ್ಯ ಎನ್ನುವುದನ್ನು ಸಾಬೀತುಪಡಿಸಿ, ಆಸ್ಟ್ರೇಲಿಯಾ ಕ್ರಿಕೆಟ್‌ನಲ್ಲಿ ವೈವಿಧ್ಯತೆಯನ್ನು ಸಹಜಗೊಳಿಸಿದರು.

➤ ಉಸ್ಮಾನ್ ಖವಾಜಾ ಅವರ ವಿದಾಯವು ಆಸ್ಟ್ರೇಲಿಯಾ ಕ್ರಿಕೆಟ್‌ನ ವೈವಿಧ್ಯತೆಯ ಬದ್ಧತೆಯ ಕುರಿತಂತೆ ಹೊಸ ಪ್ರಶ್ನೆಗಳನ್ನು ಎತ್ತಿದೆ. ಅವರ ನಂತರ ತಕ್ಷಣವೇ ಮತ್ತೊಬ್ಬ ಮುಸ್ಲಿಂ ಆಟಗಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾಣಿಸಿಕೊಳ್ಳದಿರುವುದು, ಅವರು ತೆರೆದ ದಾರಿಯು ಮುಂದುವರಿಯುತ್ತದೆಯೇ ಎಂಬ ಚರ್ಚೆಗೆ ಕಾರಣವಾಗಿದೆ. ಜೊತೆಗೆ, ಟೆಸ್ಟ್ ಕ್ರಿಕೆಟ್‌ನಲ್ಲಿ ಸರಾಸರಿ 43.39 ರನ್ ಗಳಿಸಿದ ಅನುಭವೀ ಬ್ಯಾಟ್ಸ್‌ಮನ್‌ನ್ನು ಕಳೆದುಕೊಳ್ಳುವುದು, ತಂಡ ಪುನರ್ ರಚನೆಯ ಹಂತದಲ್ಲಿರುವ ಆಸ್ಟ್ರೇಲಿಯಾಗೆ ದೊಡ್ಡ ಸವಾಲಾಗಿದೆ.

➤ ವೃತ್ತಿಜೀವನ ಸಾಧನೆಗಳು: ಉಸ್ಮಾನ್ ಖವಾಜಾ ಅವರು 87 ಟೆಸ್ಟ್ ಪಂದ್ಯಗಳಲ್ಲಿ 6,206 ರನ್‌ಗಳನ್ನು ಗಳಿಸಿದ್ದು, 16 ಶತಕ ಹಾಗೂ 28 ಅರ್ಧಶತಕಗಳನ್ನು ದಾಖಲಿಸಿದ್ದಾರೆ. 2018ರಲ್ಲಿ SCGನಲ್ಲಿ ಆ್ಯಷಸ್ ಸರಣಿಯಲ್ಲಿ ಗಳಿಸಿದ 171 ರನ್‌ಗಳ ಶತಕವು ಅವರ ವೃತ್ತಿಜೀವನದ ಸ್ಮರಣೀಯ ಕ್ಷಣಗಳಲ್ಲಿ ಒಂದಾಗಿದೆ. ಏಕದಿನ ಕ್ರಿಕೆಟ್‌ನಲ್ಲಿ ಅವರು

40 ODI ಪಂದ್ಯಗಳಲ್ಲಿ 1,554 ರನ್‌ಗಳೊಂದಿಗೆ 2 ಶತಕಗಳನ್ನು ಬಾರಿಸಿದ್ದಾರೆ. 2010–11ರಲ್ಲಿ ಇಂಗ್ಲೆಂಡ್ ವಿರುದ್ಧ ಟೆಸ್ಟ್‌ಗೆ ಪದಾರ್ಪಣೆ ಮಾಡಿದ ಖವಾಜಾ, ಅದೇ ತಂಡದ ವಿರುದ್ಧ, ಅದೇ ಮೈದಾನವಾದ SCGನಲ್ಲಿ ನಿವೃತ್ತಿಯಾಗಿರುವುದು ಅವರ ಕ್ರಿಕೆಟ್ ಜೀವನಕ್ಕೆ ಕಾವ್ಯಾತ್ಮಕ ಪೂರ್ಣತೆ ನೀಡಿದೆ.

➤ ಉಸ್ಮಾನ್ ಖವಾಜಾ ಅವರ ನಿವೃತ್ತಿ ಆಸ್ಟ್ರೇಲಿಯಾ ಕ್ರಿಕೆಟ್‌ಗೆ ಕೇವಲ ಒಬ್ಬ ಹಿರಿಯ ಆಟಗಾರನ ವಿದಾಯವಲ್ಲ, ಅದು ಸಮಾನತೆ, ಒಳಗೊಳ್ಳುವಿಕೆ ಹಾಗೂ ವೈವಿಧ್ಯತೆಯ ಪ್ರತೀಕವಾದ ಅಧ್ಯಾಯದ ಅಂತ್ಯ. ಅವರ ಪರಂಪರೆ ಮುಂದಿನ ತಲೆಮಾರಿನ ಕ್ರಿಕೆಟಿಗರಿಗೆ ಪ್ರೇರಣೆಯಾಗಿ ಉಳಿಯಲಿದೆ.

## ಭಾರತೀಯ ಅಥ್ಲೆಟಿಕ್ಸ್ ಜಿನ್ಸನ್ ಜಾನ್ಸನ್ ವೃತ್ತಿಪರ ಅಥ್ಲೆಟಿಕ್ಸ್‌ನಿಂದ ನಿವೃತ್ತಿ



➤ ಭಾರತದ ಪ್ರಸಿದ್ಧ ಮಧ್ಯದೂರ ಓಟಗಾರ ಹಾಗೂ ರಾಷ್ಟ್ರೀಯ ದಾಖಲೆದಾರ ಜಿನ್ಸನ್ ಜಾನ್ಸನ್ ಅವರು ವೃತ್ತಿಪರ ಅಥ್ಲೆಟಿಕ್ಸ್‌ಗೆ ನಿವೃತ್ತಿ ಘೋಷಿಸಿದ್ದಾರೆ. 34 ವರ್ಷದ ಕೇರಳದ ಈ ಅಥ್ಲೀಟ್ ಸುಮಾರು 15 ವರ್ಷಗಳ ಕಾಲ ದೇಶೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ ಗಮನಾರ್ಹ ಸಾಧನೆಗಳನ್ನು ಮಾಡಿದ್ದಾರೆ. ಅವರ ನಿವೃತ್ತಿ ಭಾರತೀಯ ಮಧ್ಯದೂರ ಓಟದ ಕ್ಷೇತ್ರದಲ್ಲಿ ಒಂದು ಯುಗದ ಅಂತ್ಯವೆಂದು ಪರಿಗಣಿಸಲಾಗಿದೆ.

➤ ಜಿನ್ಸನ್ ಜಾನ್ಸನ್ ಅವರ ನಿವೃತ್ತಿ ಭಾರತೀಯ ಅಥ್ಲೆಟಿಕ್ಸ್‌ಗೆ ಮಹತ್ವದ್ದಾಗಿದೆ. ಅವರ ಸಾಧನೆಗಳು ಭಾರತವನ್ನು ಏಷ್ಯಾ ಹಾಗೂ ಜಾಗತಿಕ ಅಥ್ಲೆಟಿಕ್ಸ್ ವೇದಿಕೆಯಲ್ಲಿ ಗುರುತಿಸಿಸಿವೆ.

=> ಏಷ್ಯನ್ ಗೇಮ್ಸ್ ಚಾಂಪಿಯನ್ – ಖಂಡ ಮಟ್ಟದ ಪ್ರತಿಷ್ಠಿತ ಸ್ಪರ್ಧೆಯಲ್ಲಿ ಚಿನ್ನದ ಪದಕ

=> ರಾಷ್ಟ್ರೀಯ ದಾಖಲೆ ಸ್ಥಾಪನೆ – 800 ಮೀ. ಮತ್ತು 1500 ಮೀ. ಎರಡೂ ವಿಭಾಗಗಳಲ್ಲಿ ದಾಖಲೆ

=> ಅಂತರರಾಷ್ಟ್ರೀಯ ಮಟ್ಟದ ಸಾಧನೆ – ಕಾಮನ್ವೆಲ್ತ್ ಗೇಮ್ಸ್ ನಲ್ಲಿ ಸ್ಪರ್ಧೆ

=> ಯುವಕರಿಗೆ ಪ್ರೇರಣೆ – ಉದಯೋನ್ಮುಖ ಅಥ್ಲೀಟ್‌ಗಳಿಗೆ ಮಾದರಿ

=> ದೀರ್ಘಕಾಲದ ಸಾಧನೆ – 15 ವರ್ಷಕ್ಕೂ ಹೆಚ್ಚು ಕಾಲ ಶ್ರೇಷ್ಠ ಪ್ರದರ್ಶನ

**➤ ವೃತ್ತಿಜೀವನದ ಪ್ರಮುಖ ಸಾಧನೆಗಳು:-**

* 2018 ಜಕಾರ್ತಾ ಏಷ್ಯನ್ ಗೇಮ್ಸ್ – ಶ್ರೇಷ್ಠ ಕ್ಷಣ

ಜಿನ್ಸನ್ ಜಾನ್ಸನ್ ಅವರ ವೃತ್ತಿಜೀವನದ ಶಿಖರ ಸಾಧನೆ 2018ರ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ ಕಂಡುಬಂದಿತು:

=> 1500 ಮೀಟರ್ ಚಿನ್ನದ ಪದಕ – 3:44.72 ಸೆಕೆಂಡು (ಆ ಸಮಯದ ಏಷ್ಯನ್ ಗೇಮ್ಸ್ ದಾಖಲೆ)

=> 800 ಮೀಟರ್ ಬೆಳ್ಳಿ ಪದಕ – ಒಂದೇ ಏಷ್ಯನ್ ಗೇಮ್ಸ್‌ನಲ್ಲಿ ಎರಡು ಪದಕ

=> ಏಷ್ಯಾದ ಶ್ರೇಷ್ಠ ಮಧ್ಯದೂರ ಓಟಗಾರರ ಪೈಕಿ ಒಬ್ಬರಾಗಿ ಗುರುತಿಸಲ್ಪಟ್ಟರು.

*** ರಾಷ್ಟ್ರೀಯ ದಾಖಲೆಗಳು:**

800 ಮೀಟರ್ ರಾಷ್ಟ್ರೀಯ ದಾಖಲೆ (2018):

- ಸಮಯ: 1:45.65 ಸೆಕೆಂಡು
- ಸ್ಥಳ: ಗುಹಾಟಿ ರಾಷ್ಟ್ರೀಯ ಅಂತರ್-ರಾಜ್ಯ ಚಾಂಪಿಯನ್‌ಶಿಪ್ಸ್
- ಹತ್ತು: ಶ್ರೀರಾಮ್ ಸಿಂಗ್ ಅವರ 42 ವರ್ಷ ಹಳೆಯ ದಾಖಲೆ ಮುರಿದರು

1500 ಮೀಟರ್ ರಾಷ್ಟ್ರೀಯ ದಾಖಲೆಗಳು:

# 2018 – ಗೋಲ್ಡ್ ಕೋಸ್ಟ್ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ 3:37.86 ಸೆಕೆಂಡು

- ಬಹಾದುರ್ ಪ್ರಸಾದ್ ಅವರ 23 ವರ್ಷ ಹಳೆಯ ದಾಖಲೆಗೆ ಅಂತ್ಯ
- ಅಂತಿಮ ಸ್ಪರ್ಧೆಯಲ್ಲಿ 5ನೇ ಸ್ಥಾನ

# 2019 – ಬರ್ಲಿನ್ ಮೀಟಿಂಗ್‌ನಲ್ಲಿ 3:35.24 ಸೆಕೆಂಡು

- ಸ್ವಂತ ದಾಖಲೆಯನ್ನು ಮತ್ತಷ್ಟು ಸುಧಾರಣೆ
- ಭಾರತೀಯ ಅಥ್ಲೆಟಿಕ್ಸ್ ಇತಿಹಾಸದ ಶ್ರೇಷ್ಠ 1500 ಮೀ. ಸಮಯ

➤ ವಿಶ್ವದ ಶ್ರೇಷ್ಠ ಮಧ್ಯದೂರ ಓಟಗಾರರೊಂದಿಗೆ ಸ್ಪರ್ಧಿಸಿ ಹಲವಾರು ವರ್ಷಗಳ ಕಾಲ ಸ್ಥಿರ ಪ್ರದರ್ಶನ ನೀಡಿದ ಜಿನ್ಸನ್ ಜಾನ್ಸನ್ ಭಾರತಕ್ಕೆ ಅನೇಕ ಗೌರವ ಮತ್ತು ಕೀರ್ತಿಯನ್ನು ತಂದಿದ್ದಾರೆ. ಅವರ ನಿವೃತ್ತಿ ಭಾರತೀಯ ಅಥ್ಲೆಟಿಕ್ಸ್‌ಗೆ ಮಹತ್ವದ ಘಟ್ಟವಾಗಿದ್ದು, ಅವರ ಸಾಧನೆಗಳು ಮುಂದಿನ ತಲೆಮಾರಿನ ಅಥ್ಲೀಟ್‌ಗಳಿಗೆ ಸದಾ ಪ್ರೇರಣೆಯಾಗಿ ಉಳಿಯಲಿವೆ.

## 70ನೇ ಅತಿ ವಿಶಿಷ್ಟ ರೈಲ್ ಸೇವಾ ಪುರಸ್ಕಾರ: 100 ರೈಲ್ವೆ ಸಾಧಕರಿಗೆ ಕೇಂದ್ರದಿಂದ ಮಹಾ ಗೌರವ!




* ಭಾರತೀಯ ರೈಲ್ವೆಯ ಇತಿಹಾಸದಲ್ಲಿ ಅಸಾಮಾನ್ಯ ಸೇವೆ ಸಲ್ಲಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಗುರುತಿಸುವ 70ನೇ ಅತಿ ವಿಶಿಷ್ಟ ರೈಲ್ ಸೇವಾ ಪುರಸ್ಕಾರ (Ati Vishisht Rail Seva Puraskar) ಪ್ರದಾನ ಸಮಾರಂಭವು ಜನವರಿ 9, 2026 ರಂದು ನವದೆಹಲಿಯ ಯಶೋಭೂಮಿ ಕನ್ವೆನ್ಷನ್ ಸೆಂಟರ್‌ನಲ್ಲಿ ಅದ್ದೂರಿಯಾಗಿ ನಡೆಯಿತು.ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಈ ಪ್ರಶಸ್ತಿಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ರೈಲ್ವೆ ರಾಜ್ಯ ಸಚಿವರಾದ ವಿ. ಸೋಮಣ್ಣ, ರವನೀತ್ ಸಿಂಗ್ ಮತ್ತು ರೈಲ್ವೆ ಮಂಡಳಿಯ ಅಧ್ಯಕ್ಷ ಸತೀಶ್ ಕುಮಾರ್ ಉಪಸ್ಥಿತರಿದ್ದರು.

* ಪುರಸ್ಕಾರದ ಹಂಚಿಕೆ ಮತ್ತು ವಿಭಾಗಗಳು: ಒಟ್ಟು 100 ಸಾಧಕರಿಗೆ ರೈಲ್ವೆಯ ಕಾರ್ಯಕ್ಷಮತೆಯನ್ನು ಉತ್ತೇಜಿಸಿದಕ್ಕಾಗಿ ಏಳು ಪ್ರಮುಖ ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗಿದೆ. ಇದರಲ್ಲಿ ನವೀನತೆ (17) ವಿಭಾಗದಲ್ಲಿ ಪ್ರಕ್ರಿಯೆ ಸುಧಾರಣೆ ಮತ್ತು ಉತ್ಪಾದಕತೆ ಹೆಚ್ಚಳಕ್ಕೆ ಗೌರವ ದೊರೆತಿದ್ದು, ಸಾಹಸ ಮತ್ತು ಸೇವೆ (22) ವಿಭಾಗವು ಪ್ರಯಾಣಿಕರ ಜೀವ ಮತ್ತು ರೈಲ್ವೆ ಆಸ್ತಿ ರಕ್ಷಣೆಗೆ ಸಲ್ಲಿಸಿದ ಅಪೂರ್ವ ಧೈರ್ಯವನ್ನು ಗುರುತಿಸಿದೆ. ಆದಾಯ ಮತ್ತು ಜಾಗೃತಿ (14) ವಿಭಾಗದಲ್ಲಿ ಟಿಕೆಟ್ ರಹಿತ ಪ್ರಯಾಣ ತಡೆದು ಆದಾಯ ವೃದ್ಧಿಗೆ ಕೊಡುಗೆ ನೀಡಿದವರನ್ನು ಪ್ರಶಂಸಿಸಲಾಗಿದೆ. ಕಾರ್ಯಾಚರಣೆ ಮತ್ತು ಸುರಕ್ಷತೆ (19) ವಿಭಾಗವು ಸುರಕ್ಷಿತ ರೈಲು ಸಂಚಾರ ಹಾಗೂ ಮೂಲಸೌಕರ್ಯ ನಿರ್ವಹಣೆಯಲ್ಲಿನ ಶ್ರೇಷ್ಠತೆಯನ್ನು ಹೈಲೈಟ್ ಮಾಡುತ್ತದೆ. ಯೋಜನೆಗಳ ಪೂರ್ಣಗೊಳಿಕೆ (16) ವಿಭಾಗದಲ್ಲಿ ನಿಗದಿತ ಅವಧಿಗಿಂತ ಮುಂಚಿತವಾಗಿ ಯೋಜನೆಗಳನ್ನು ಮುಕ್ತಾಯಗೊಳಿಸಿದ ಸಾಧನೆಯನ್ನು ಗೌರವಿಸಲಾಗಿದೆ. ಜೊತೆಗೆ ಕ್ರೀಡಾ ಸಾಧನೆ (2) ವಿಭಾಗದಲ್ಲಿ ರಾಷ್ಟ್ರೀಯ-ಅಂತರಾಷ್ಟ್ರೀಯ ಮಟ್ಟದ ಗೌರವ ಪಡೆದ ರೈಲ್ವೆ ಕ್ರೀಡಾಪಟುಗಳು ಹಾಗೂ ಇತರ ಸೇವೆಗಳು (10) ವಿಭಾಗದಲ್ಲಿ ವಿವಿಧ ಕಾರ್ಯಾಚರಣೆಗಳಲ್ಲಿ ತೋರಿದ ವಿಶೇಷ ದಕ್ಷತೆ ಪ್ರಶಸ್ತಿಗೆ ಪಾತ್ರವಾಗಿದೆ.

* ಈ ಬಾರಿಯ ಪ್ರಶಸ್ತಿ ಪ್ರದಾನದಲ್ಲಿ ಕೆಲವು ವಿಶೇಷ ಸಾಧನೆಗಳನ್ನು ಪ್ರಮುಖವಾಗಿ ಗುರುತಿಸಲಾಗಿದೆ:

- ಮಹಾಕುಂಭ ಮೇಳ 2025: ಕುಂಭಮೇಳದ ಸಮಯದಲ್ಲಿ ಕೋಟ್ಯಂತರ ಪ್ರಯಾಣಿಕರ ಸುರಕ್ಷಿತ ಸಂಚಾರ ನಿರ್ವಹಣೆ ಮಾಡಿದ ತಂಡಕ್ಕೆ ವಿಶೇಷ ಗೌರವ ನೀಡಲಾಗಿದೆ.
- ಆಪರೇಷನ್ ಸಿಂದೂರ್: ಗಡಿ ಭದ್ರತೆ ಮತ್ತು ತುರ್ತು ಪರಿಸ್ಥಿತಿಯಲ್ಲಿ ರೈಲ್ವೆ ನೀಡಿದ ಅಸಾಧಾರಣ ಸೇವೆಯನ್ನು ಪುರಸ್ಕರಿಸಲಾಗಿದೆ.

- ತಾಂತ್ರಿಕ ಕ್ರಾಂತಿ: ರೈಲ್ವೆ ಹಳಿಗಳ ಸುರಕ್ಷತೆಗಾಗಿ 'ಬ್ಯಾಲೆಸ್ಟ್ ಕ್ಲೀನಿಂಗ್ ಮೆಷಿನ್' ಅಳವಡಿಕೆಯಲ್ಲಿ ಶ್ರಮಿಸಿದ ತಾಂತ್ರಿಕ ಸಿಬ್ಬಂದಿಗೆ ಮನ್ನಣೆ ಸಿಕ್ಕಿದೆ.
- ಸಾಂಸ್ಥಿಕ ಶ್ರೇಷ್ಠತೆ: ವೈಯಕ್ತಿಕ ಪ್ರಶಸ್ತಿಗಳ ಜೊತೆಗೆ, ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ರೈಲ್ವೆ ವಲಯಗಳಿಗೆ (Zones) 26 ಶೀಲ್ಡ್‌ಗಳನ್ನು ನೀಡಿ ಗೌರವಿಸಲಾಯಿತು.

## ಮಹಿಳೆಯರಿಗೆ ಭಾರತದಲ್ಲಿನ ಅತ್ಯುತ್ತಮ ನಗರ: 2025 ರ್‍ಯಾಂಕಿಂಗ್ ನಲ್ಲಿ ಬೆಂಗಳೂರು ಪ್ರಥಮ




➤ ಬೆಂಗಳೂರು 2025 ರಲ್ಲಿ ಮಹಿಳೆಯರಿಗೆ ಉತ್ತಮ ನಗರ ಎಂಬ ಹುದ್ದೆಯನ್ನು ಪಡೆದುಕೊಂಡಿದ್ದು, ದೇಶದ 125 ನಗರಗಳ ಒಳಗೊಂಡ ಅಧ್ಯಯನದಲ್ಲಿ ಮೊದಲ ಸ್ಥಾನವನ್ನು ಕಾಯ್ದುಕೊಂಡಿದೆ. ಈ ಶ್ರೇಯಾಂಕನದಲ್ಲಿ ಮಹಿಳೆಯರ ಸುರಕ್ಷತೆ, ಉದ್ಯೋಗ, ಹಾಗೂ ವೃತ್ತಿ ಅಭಿವೃದ್ಧಿಗೆ ಬೆಂಬಲ ನೀಡುವ ಸಾಮಾಜಿಕ ಮತ್ತು ಕೈಗಾರಿಕಾ ಮೂಲಸೌಕರ್ಯಗಳ ಸಮನ್ವಯ Bengaluruನಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂದು ತೋರಿಸಲಾಗಿದೆ.

➤ ಚೆನ್ನೈ ಮೂಲದ Avtar ಸಂಸ್ಥೆ ನಡೆಸಿದ ಅಧ್ಯಯನದಲ್ಲಿ Bengaluruಗೆ 53.29 ಅಂಕಗಳೊಂದಿಗೆ ಉನ್ನತ City Inclusion Score ಲಭಿಸಿತು. ನಂತರ Chennai (49.86), Pune (46.27), Hyderabad ಮತ್ತು Mumbai ಆದಿಗಳು ಬಂದವು. ಇದು ದಕ್ಷಿಣ ಮತ್ತು ಪಶ್ಚಿಮ ಭಾರತದ ಮಹಾನಗರಗಳಲ್ಲಿ ಮಹಿಳೆಯರ ಸಮರ್ಥನೀಯ ಪರಿಸರಗಳ ಪ್ರಬಲತೆ ತೋರಿಸುತ್ತದೆ.

➤ ಅಂತರರಾಷ್ಟ್ರೀಯ ಸಮಾವೇಶದ ಎರಡು ಅಂಶಗಳು:

=> ಸಾಮಾಜಿಕ ಸಮಾವೇಶ ಅಂಕ:ಸುರಕ್ಷತೆ, ಆರೋಗ್ಯ, ಶಿಕ್ಷಣ, ಸಾರಿಗೆ, ಜೀವನೋಪಾಯ ಇತ್ಯಾದಿ ಅಂಶಗಳನ್ನು ಅಳೆಯುತ್ತದೆ.

=> ಕೈಗಾರಿಕಾ ಸಮಾವೇಶ ಅಂಕ :ನೌಕರಿ ಅವಕಾಶಗಳು, ತರಬೇತಿ, ಕಾರ್ಪೊರೇಟ್ ಡೈವರ್ಸಿಟಿ, ಮಹಿಳೆಯರ ಉದ್ಯೋಗ ಪಾಲ್ಗೊಳ್ಳುವಿಕೆ ಇತ್ಯಾದಿ ಅಂಶಗಳನ್ನು ಅಳೆಯುತ್ತದೆ.

➤ ಬೆಂಗಳೂರುಗೆ ಕೈಗಾರಿಕಾ ಅಂಕದಲ್ಲಿ ಮುಂಚೂಣಿಯಲ್ಲಿ: Chennai ಸಾಮಾಜಿಕ ಅಂಕದಲ್ಲಿ ಶ್ರೇಷ್ಟವಾಗಿ ಉಳಿದರೂ, Bengaluru ಕೈಗಾರಿಕಾ ಅಂಶಗಳಲ್ಲಿ ಪ್ರಮುಖ ಮುನ್ನಡೆ ತೋರಿಸಿದೆ. ಕಾರ್ಪೊರೇಟ್ ವ್ಯವಸ್ಥೆ, ನೌಕರಿ ಅವಕಾಶಗಳು, ಡೈವರ್ಸಿಟಿ ನೀತಿಗಳ ವ್ಯಾಪಕ ಅನುಷ್ಠಾನವು ನಗರಕ್ಕೆ ಸ್ಪರ್ಧಾತ್ಮಕ ಶಕ್ತಿ ನೀಡಿದೆ. Pune, Hyderabad ಸಮತೋಲನ ಸಾಧಿಸಿದ್ದು, ಮಹಿಳಾ ಉದ್ಯೋಗ ಪಾಲ್ಗೊಳ್ಳುವಿಕೆಗೆ ಉತ್ತಮ ಭವಿಷ್ಯವನ್ನು ಸೂಚಿಸುತ್ತದೆ.

**➤ ಟಾಪ್ 10 ನಗರಗಳ ಪಟ್ಟಿ:**

1. ಬೆಂಗಳೂರು (Bengaluru): ತಂತ್ರಜ್ಞಾನದ ಹಬ್ ಆಗಿರುವ ಇಲ್ಲಿ ಅತಿ ಹೆಚ್ಚು ಮಹಿಳಾ ಉದ್ಯೋಗಿಗಳಿದ್ದಾರೆ.
2. ಚೆನ್ನೈ (Chennai): ಸುರಕ್ಷತೆ ಮತ್ತು ಶೈಕ್ಷಣಿಕ ಅವಕಾಶಗಳಲ್ಲಿ ಅಗ್ರಸ್ಥಾನದಲ್ಲಿದೆ.
3. ಪುಣೆ (Pune): ಕೈಗಾರಿಕೆ ಮತ್ತು ಶಿಕ್ಷಣ ಕ್ಷೇತ್ರಗಳ ಸಮತೋಲಿತ ನಗರ.
4. ಹೈದರಾಬಾದ್ (Hyderabad): ಐಟಿ ಮತ್ತು ಔಷಧೀಯ (Pharma) ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳು.
5. ಮುಂಬೈ (Mumbai): ಹಣಕಾಸು ಮತ್ತು ವಾಣಿಜ್ಯ ಕ್ಷೇತ್ರದ ಕೇಂದ್ರಬಿಂದು.
6. ಗುರುಗ್ರಾಮ್ (Gurugram): ಕಾರ್ಪೊರೇಟ್ ವಲಯದಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾಶಸ್ತ್ಯ.
7. ಕೋಲ್ಕತ್ತಾ (Kolkata): ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಉದ್ಯೋಗಗಳಿಗೆ ಹೆಸರುವಾಸಿ.
8. ಅಹಮದಾಬಾದ್ (Ahmedabad): ವೇಗವಾಗಿ ಬೆಳೆಯುತ್ತಿರುವ ಕೈಗಾರಿಕಾ ನಗರ.
9. ತಿರುವನಂತಪುರಂ (Thiruvananthapuram): ಸಾಕ್ಷರತೆ ಮತ್ತು ಸಮಾನತೆಯಲ್ಲಿ ಮುಂಚೂಣಿ.
10. ಕೊಯಮತ್ತೂರು (Coimbatore): ಜವಳಿ ಮತ್ತು ಉತ್ಪಾದನಾ ವಲಯದಲ್ಲಿ ಮಹಿಳೆಯರ ಪಾಲುದಾರಿಕೆ ಹೆಚ್ಚು.

➤ ಸಮಾಜ ಮತ್ತು ಕೈಗಾರಿಕೆಗಳ ಸಮನ್ವಯದ ಮಹತ್ವ: ಈ ಅಧ್ಯಯನವು ಮಹಿಳೆಯರ ವೃತ್ತಿಜೀವನದ ಏಳಿಗೆಗೆ ಕೇವಲ ಉದ್ಯೋಗಾವಕಾಶಗಳಿದ್ದರೆ ಸಾಲದು, ಬದಲಿಗೆ ಸಮಾಜ ಮತ್ತು ಕೈಗಾರಿಕೆಗಳ ನಡುವೆ ಸಮನ್ವಯತೆ ಇರಬೇಕು ಎಂಬುದನ್ನು ಒತ್ತಿಹೇಳುತ್ತದೆ.

=> ಸುರಕ್ಷಿತ ವಾತಾವರಣ: ನಗರದ ಸಮಾಜವು ಮಹಿಳೆಯರಿಗೆ ಸುರಕ್ಷಿತ ಸಾರಿಗೆ ಮತ್ತು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಡುವುದು ಅತ್ಯಗತ್ಯ

=> ಪೂರಕ ನೀತಿಗಳು (Inclusive Policies): ಕೈಗಾರಿಕೆಗಳು ಕೇವಲ ನೇಮಕಾತಿ ಮಾಡುವುದಷ್ಟೇ ಅಲ್ಲದೆ, ಹೆರಿಗೆ ರಜೆ, ಮಕ್ಕಳ ಆರೈಕೆ ಕೇಂದ್ರಗಳು (Creche) ಮತ್ತು ಸಮಾನ ವೇತನದಂತಹ ನೀತಿಗಳನ್ನು ಜಾರಿಗೆ ತರಬೇಕು.

=> ಕೌಶಲ್ಯ ಅಭಿವೃದ್ಧಿ: ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಮಹಿಳೆಯರಿಗೆ ವಿಶೇಷ ತರಬೇತಿ ನೀಡಲು ಕೈಗಾರಿಕೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಕೈಜೋಡಿಸಬೇಕು.

=> ಸಾಮಾಜಿಕ ದೃಷ್ಟಿಕೋನ ಬದಲಾವಣೆ: ಮನೆಯ ಜವಾಬ್ದಾರಿಗಳ ಜೊತೆಗೆ ವೃತ್ತಿಜೀವನವನ್ನೂ ಸಮತೋಲನ ಮಾಡಲು ಕುಟುಂಬ ಮತ್ತು ಸಮಾಜದ ಬೆಂಬಲ ಅತೀ ಮುಖ್ಯ.

➤ ಈ ಟಾಪ್ 10 ನಗರಗಳ ಯಶಸ್ಸು ನಮಗೆ ತಿಳಿಸುವುದೇನೆಂದರೆ, ಎಲ್ಲಿ ಮೂಲಸೌಕರ್ಯಗಳು ಉತ್ತಮವಾಗಿದೆಯೋ ಮತ್ತು ಎಲ್ಲಿ ಮಹಿಳೆಯರ ಶ್ರಮಕ್ಕೆ ಗೌರವ ಸಿಗುತ್ತದೆಯೋ ಆ ನಗರಗಳು ಆರ್ಥಿಕವಾಗಿ ಹೆಚ್ಚು ಸದೃಢವಾಗುತ್ತವೆ. ಮಹಿಳೆಯರ ವೃತ್ತಿ ಸುಧಾರಣೆಯು ಕೇವಲ ಅವರ ವೈಯಕ್ತಿಕ ಬೆಳವಣಿಗೆಯಲ್ಲ, ಬದಲಿಗೆ ದೇಶದ ಒಟ್ಟು ಜಿಡಿಪಿ (GDP) ಹೆಚ್ಚಳಕ್ಕೂ ಕಾರಣವಾಗುತ್ತದೆ.

## ಅರುಣಾಚಲ ಪ್ರದೇಶದ ಕೀ ಪಾನ್ಯೋರ್: ಭಾರತದ ಮೊದಲ ಬಯೋ-ಹ್ಯಾಪಿ ಜಿಲ್ಲೆ




➤ ಅರುಣಾಚಲ ಪ್ರದೇಶದ ಕೀ ಪಾನ್ಯೋರ್ ಜಿಲ್ಲೆಯನ್ನು ಭಾರತದ ಮೊದಲ ಬಯೋ-ಹ್ಯಾಪಿ ಜಿಲ್ಲೆಯಾಗಿ ಘೋಷಿಸಲಾಗಿದ್ದು, ಇದು ಜೀವವೈವಿಧ್ಯಾಧಾರಿತ ಸುಸ್ಥಿರ ಅಭಿವೃದ್ಧಿಗೆ ಮಾದರಿಯಾಗಿದೆ. ಬಯೋ-ಹ್ಯಾಪಿನೆಸ್ ಎಂಬುದು ಮಾನವರು ಮತ್ತು ಪ್ರಕೃತಿ ನಡುವಿನ ಸಮನ್ವಯ ಸಹಬಾಳ್ವೆಯಿಂದ ಉದ್ಭವಿಸುವ ಸಮಗ್ರ ಸುಖಸ್ಥಿತಿಯನ್ನು ಸೂಚಿಸುವ ಕಲ್ಪನೆ. ಇದು ಕೇವಲ ಆದಾಯ ಅಥವಾ GDP ಆಧಾರಿತ ಅಭಿವೃದ್ಧಿಗಿಂತಲೂ, ಮಾನವ ಕಲ್ಯಾಣ, ಪರಿಸರ ಸಮತೋಲನ ಮತ್ತು ಜೀವವೈವಿಧ್ಯ ಸಂರಕ್ಷಣೆಯನ್ನು ಕೇಂದ್ರವಾಗಿಟ್ಟುಕೊಂಡ ಅಭಿವೃದ್ಧಿ ಮಾದರಿಯಾಗಿದೆ.

**➤ ಈ ಉಪಕ್ರಮದ ಪ್ರಮುಖ ಸ್ತಂಭಗಳು (Key Pillars):**

1. ಕೃಷಿ-ಜೀವವೈವಿಧ್ಯದ ಸಂರಕ್ಷಣೆ: ಕೃಷಿ ವೈವಿಧ್ಯತೆಯನ್ನು ಕಾಪಾಡುವುದು ಮತ್ತು ಅದರ ಸುಸ್ಥಿರ ಬಳಕೆ.
2. ಜೀವನೋಪಾಯದ ವೈವಿಧ್ಯೀಕರಣ: ಬುಡಕಟ್ಟು ಮತ್ತು ಸ್ಥಳೀಯ ಸಮುದಾಯಗಳಿಗೆ ಕೇವಲ ಕೃಷಿಯಲ್ಲದೆ ಇತರೆ ಆದಾಯದ ಮೂಲಗಳನ್ನು ಒದಗಿಸುವುದು.

3. ಸಮಗ್ರ ವಿಧಾನ: ಕೃಷಿ, ಪೋಷಣೆ, ಆರೋಗ್ಯ ಮತ್ತು ಪರಿಸರ ಫಲಿತಾಂಶಗಳನ್ನು ಒಟ್ಟುಗೂಡಿಸುವುದು.
4. ಹವಾಮಾನ ಬದಲಾವಣೆ ನಿಯಂತ್ರಣ: ಮೀಥೇನ್‌ನಂತಹ ಅಲ್ಪಾವಧಿಯ ಹವಾಮಾನ ಮಾಲಿನ್ಯಕಾರಕಗಳನ್ನು ಕಡಿಮೆ ಮಾಡುವುದು.
5. ಜ್ಞಾನದ ಸಮ್ಮಿಲನ: ಸಾಂಪ್ರದಾಯಿಕ ಪರಿಸರ ಜ್ಞಾನದೊಂದಿಗೆ ಆಧುನಿಕ ವಿಜ್ಞಾನವನ್ನು ಸಂಯೋಜಿಸುವುದು.

➤ ಸಾಂಸ್ಥಿಕ ಬೆಂಬಲ:
=> M.S. ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನ (MSSRF): ಇದು ಈ ಯೋಜನೆಯ ನೋಡಲ್ ಸಂಶೋಧನಾ ಸಂಸ್ಥೆಯಾಗಿದೆ.
=> ಸಹಯೋಗ: ಆರೋಗ್ಯ, ಪೋಷಣೆ ಮತ್ತು ಪರಿಸರ ಮಾಲಿನ್ಯದ ಅಧ್ಯಯನಕ್ಕಾಗಿ IIT ಮದ್ರಾಸ್ ಮತ್ತು ಶ್ರೀ ರಾಮಚಂದ್ರ ಸಂಸ್ಥೆಯೊಂದಿಗೆ ಸಹಭಾಗಿತ್ವ ಹೊಂದಲಾಗಿದೆ.

➤ ಕೃಷಿ-ಜೀವವೈವಿಧ್ಯ (Agro-biodiversity) :ವಿವಿಧ ಬೆಳೆಗಳು, ಪಶುಸಂಪತ್ತು ಹಾಗೂ ವೈವಿಧ್ಯಮಯ ಕೃಷಿ ವ್ಯವಸ್ಥೆಗಳ ಸಂಯೋಜನೆಯಾಗಿದ್ದು, ಇದು ಆಹಾರ ಭದ್ರತೆ, ಪೌಷ್ಟಿಕತೆ ಮತ್ತು ಹವಾಮಾನ ಬದಲಾವಣೆಗೆ ಎದುರಿಸುವ ಪ್ರತಿರೋಧ ಶಕ್ತಿಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರಲು ಎಂ.ಎಸ್. ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನ ಪ್ರಮುಖ ಸಂಸ್ಥಾತ್ಮಕ ಬೆಂಬಲವನ್ನು ನೀಡುತ್ತಿದ್ದು, ಈ ಉಪಕ್ರಮವು ಸ್ಥಿರ ಅಭಿವೃದ್ಧಿ ಗುರಿಗಳಾದ SDG–2 (ಶೂನ್ಯ ಹಸಿವು), SDG–3 (ಉತ್ತಮ ಆರೋಗ್ಯ), SDG–13 (ಹವಾಮಾನ ಕ್ರಮ) ಹಾಗೂ SDG–15 (ಭೂಮಿಯ ಮೇಲಿನ ಜೀವ ಸಂರಕ್ಷಣೆ)ಗಳೊಂದಿಗೆ ನೇರ ಹೊಂದಾಣಿಕೆಯನ್ನು ಹೊಂದಿದೆ.

➤ ಬಯೋ-ಹ್ಯಾಪಿ ಜಿಲ್ಲಾ ಮಾದರಿಯು ಭಾರತಕ್ಕೆ ವಿಶೇಷವಾದ, ಪರಿಸರ ಕೇಂದ್ರಿತ ಮತ್ತು ಜೀವವೈವಿಧ್ಯ ಸಮೃದ್ಧ ಬುಡಕಟ್ಟು ಪ್ರದೇಶಗಳಿಗೆ ಅತ್ಯಂತ ಸೂಕ್ತವಾದ, ಸಮಗ್ರ ಹಾಗೂ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ.

## ಆಧಾರ್ ಸೇವೆಗಳ ಸರಳೀಕರಣಕ್ಕೆ ‘ಉದಯ್ ’ ಮ್ಯಾಸ್ಕಾಟ್ ಬಿಡುಗಡೆ




* ಭಾರತದ ವಿಶಿಷ್ಟ ಗುರುತು ಪ್ರಾಧಿಕಾರ (UIDAI) ನಾಗರಿಕರಿಗೆ ಆಧಾರ್ ಸೇವೆಗಳ ಕುರಿತು ಮಾಹಿತಿ ನೀಡುವ ಉದ್ದೇಶದಿಂದ ‘ಉದೈ’ (Udai) ಎಂಬ ಆಧಾರ್ ಮಾಸ್ಕಾಟ್ ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ. ಈ ಉಪಕ್ರಮವು ದೇಶದ ಒಂದು ಬಿಲಿಯನ್ ಗೂ ಹೆಚ್ಚು ಆಧಾರ್ ಬಳಕೆದಾರರಿಗೆ ಸೇವೆಗಳ ಬಗ್ಗೆ ಸುಲಭವಾಗಿ, ಸರಳವಾಗಿ ಹಾಗೂ ಸ್ನೇಹಪರವಾಗಿ ಮಾಹಿತಿ ತಲುಪಿಸುವ ಗುರಿಯನ್ನು ಹೊಂದಿದೆ.

* ಉದೈ’ ಮಾಸ್ಕಾಟ್‌ನ ಉದ್ದೇಶ ಮತ್ತು ಪಾತ್ರ: UIDAI ಪ್ರಕಾರ, ‘ಉದೈ’ ನಾಗರಿಕರಿಗೆ ಆಧಾರ್ ಸಂಬಂಧಿತ ವಿವಿಧ ಸೇವೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಸ್ನೇಹಪರ ಸಂವಹನ ಸಹಚರನಾಗಿ ಕಾರ್ಯನಿರ್ವಹಿಸುತ್ತದೆ. ಇದರಲ್ಲಿ:
=> ಆಧಾರ್ ವಿವರಗಳ ನವೀಕರಣ
=> ಆಧಾರ್ ದೃಢೀಕರಣ (Authentication)
=> ಆಫ್‌ಲೈನ್ ಪರಿಶೀಲನೆ
=> ಆಯ್ಕೆಮಾಡಿದ ಮಾಹಿತಿಯ ಹಂಚಿಕೆ
=> ತಾಂತ್ರಿಕ ನವೀಕರಣಗಳು
=> ಜವಾಬ್ದಾರಿಯುತ ಆಧಾರ್ ಬಳಕೆಇತ್ಯಾದಿಗಳ ಕುರಿತು ಸರಳ ಭಾಷೆಯಲ್ಲಿ ಅರಿವು ಮೂಡಿಸುವುದು ಇದರ ಪ್ರಮುಖ ಗುರಿಯಾಗಿದೆ.* ರಾಷ್ಟ್ರಮಟ್ಟದ ಸ್ಪರ್ಧೆ ಮತ್ತು ಆಯ್ಕೆ ಪ್ರಕ್ರಿಯೆ: ‘ಉದೈ’ ಮಾಸ್ಕಾಟ್ ಹಾಗೂ ಅದರ ಹೆಸರನ್ನು MyGov ವೇದಿಕೆಯ ಮೂಲಕ ಆಯೋಜಿಸಲಾದ ರಾಷ್ಟ್ರಮಟ್ಟದ ಮುಕ್ತ ಸ್ಪರ್ಧೆಗಳ ಮೂಲಕ ಆಯ್ಕೆ ಮಾಡಲಾಗಿದೆ. ದೇಶದಾದ್ಯಂತ ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ವಿನ್ಯಾಸಕರಿಂದ ಒಟ್ಟು 875 ಪ್ರವೇಶಗಳು ಬಂದಿದ್ದವು. ಪಾರದರ್ಶಕತೆ ಮತ್ತು ಅರ್ಹತೆಯ ಆಧಾರದ ಮೇಲೆ ಬಹು ಹಂತದ ಮೌಲ್ಯಮಾಪನ ಪ್ರಕ್ರಿಯೆ ಅನುಸರಿಸಲಾಯಿತು.

**# ಮಾಸ್ಕಾಟ್ ವಿನ್ಯಾಸ ವಿಭಾಗದಲ್ಲಿ:**
1. ಪ್ರಥಮ ಬಹುಮಾನ: ಅರುಣ್ ಗೋಕುಲ್ (ತ್ರಿಶೂರ್, ಕೇರಳ)
2. ದ್ವಿತೀಯ ಬಹುಮಾನ: ಇದ್ರಿಸ್ ದವೈವಾಲಾ (ಪುಣೆ)
3. ತೃತೀಯ ಬಹುಮಾನ: ಕೃಷ್ಣ ಶರ್ಮಾ (ಘಾಜಿಪುರ್)

**# ‘ಉದೈ’ ಎಂಬ ಹೆಸರಿನ ಆಯ್ಕೆ ಮತ್ತು ನಾಗರಿಕ ಭಾಗವಹಣೆ:**

**ಮಾಸ್ಕಾಟ್ ಹೆಸರಿನ ವಿಭಾಗದಲ್ಲಿ:**
1. ಪ್ರಥಮ ಬಹುಮಾನ: ರಿಯಾ ಜೈನ್ (ಭೋಪಾಲ್)
2. ದ್ವಿತೀಯ ಬಹುಮಾನ: ಇದ್ರಿಸ್ ದವೈವಾಲಾ (ಪುಣೆ)
3.ತೃತೀಯ ಬಹುಮಾನ: ಮಹಾರಾಜ್ ಸರಣ್ ಚೆಲ್ಲಪಿಲ್ಲಾ (ಹೈದರಾಬಾದ್)

ಈ ವ್ಯಾಪಕ ಸಾರ್ವಜನಿಕ ಭಾಗವಹಣೆ, ಆಧಾರ್ ಅನ್ನು ಸಾರ್ವಜನಿಕ ಡಿಜಿಟಲ್ ಸಂಪತ್ತಾಗಿ (Public Digital Good) ರೂಪಿಸುವಲ್ಲಿ ನಾಗರಿಕರ ಪಾತ್ರದ ಮಹತ್ವವನ್ನು ತೋರಿಸಿದೆ.

* ‘ಉದೈ’ ಮಾಸ್ಕಾಟ್ ಅನ್ನು UIDAI ಅಧ್ಯಕ್ಷ ನೀಲಕಂಠ ಮಿಶ್ರಾ ಅವರು ತಿರುವನಂತಪುರದಲ್ಲಿ ನಡೆದ ಸಮಾರಂಭದಲ್ಲಿ ಅನಾವರಣಗೊಳಿಸಿದರು. ಈ ವೇಳೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಗೌರವಿಸಲಾಯಿತು. UIDAI ಸಿಇಒ ಭುವನೇಶ್ ಕುಮಾರ್ ಅವರು, ಇಂತಹ ಭಾಗವಹಿಸುವಿಕೆ ಆಧಾರಿತ ಉಪಕ್ರಮಗಳು ನಾಗರಿಕರಲ್ಲಿ ವಿಶ್ವಾಸ ಮತ್ತು ಸ್ವೀಕಾರ್ಯತೆಯನ್ನು ಹೆಚ್ಚಿಸುತ್ತವೆ ಎಂದು ಹೇಳಿದರು. ಉಪ ಮಹಾನಿರ್ದೇಶಕ ವಿವೇಕ್ ಸಿ. ವರ್ಮಾ ಅವರು, ‘ಉದೈ’ UIDAIಯ ನಾಗರಿಕ ಕೇಂದ್ರೀಕೃತ ಸಂವಹನ ಮತ್ತು ಜವಾಬ್ದಾರಿಯುತ ಆಧಾರ್ ಬಳಕೆಯ ಪ್ರಯತ್ನಗಳಿಗೆ ಮಾರ್ಗದರ್ಶಕನಾಗಲಿದೆ ಎಂದು ತಿಳಿಸಿದರು.



## 10 Jan 2026

### ಭಾರತದ ಆಗಸಕ್ಕೆ 'ಸುದರ್ಶನ ಚಕ್ರ' ದ ಕವಚ: ಶತ್ರು ಡ್ರೋನ್‌ಗಳನ್ನು ಹೊಡೆದುರುಳಿಸಲು ಸನ್ನದ್ಧವಾಯಿತು 'ಜಂಟಿ ಕೌಂಟರ್-ಡ್ರೋನ್ ಗ್ರಿಡ್'




* ಇತ್ತೀಚಿನ ವರ್ಷಗಳಲ್ಲಿ ಯುದ್ಧದ ಸ್ವರೂಪವೇ ಬದಲಾಗಿದೆ. ಉಕ್ರೇನ್-ರಷ್ಯಾ ಯುದ್ಧದಲ್ಲಿ ನಾವು ಕಂಡಂತೆ, ಸಣ್ಣ ಮತ್ತು ಅಗ್ಗದ ಡ್ರೋನ್‌ಗಳು ದೊಡ್ಡ ಯುದ್ಧನೌಕೆ ಮತ್ತು ಟ್ಯಾಂಕ್‌ಗಳನ್ನೇ ಧ್ವಂಸ ಮಾಡುತ್ತಿವೆ. ಈ ಬದಲಾಗುತ್ತಿರುವ ಬೆದರಿಕೆಗಳನ್ನು ಮನಗಂಡ ಭಾರತ ಸರ್ಕಾರವು, ದೇಶದ ವಾಯು ಗಡಿಯನ್ನು ರಕ್ಷಿಸಲು 'ಮಿಷನ್ ಸುದರ್ಶನ ಚಕ್ರ' (Mission Sudarshan Chakra) ಎಂಬ ಬೃಹತ್ ರಕ್ಷಣಾ ಯೋಜನೆಯನ್ನು ಘೋಷಿಸಿದೆ.

ಈ ಮಿಷನ್ ಅಡಿಯಲ್ಲಿ ಭಾರತೀಯ ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಗಳು ಜಂಟಿಯಾಗಿ ಕಾರ್ಯನಿರ್ವಹಿಸಲು 'ಜಂಟಿ ಕೌಂಟರ್-ಯುಎಎಸ್ (CUAS) ಗ್ರಿಡ್' ಅನ್ನು ಸ್ಥಾಪಿಸುತ್ತಿವೆ.

* ಮಿಷನ್ ಸುದರ್ಶನ ಚಕ್ರ ಎನ್ನುವುದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಘೋಷಿಸಿದ ಮಹತ್ವಾಕಾಂಕ್ಷಿ ರಕ್ಷಣಾ ಯೋಜನೆಯಾಗಿದ್ದು, 2035ರೊಳಗೆ ಭಾರತವನ್ನು ಸಂಪೂರ್ಣ "ವಾಯು ರಕ್ಷಣಾ ಕವಚ" ದೊಳಗೆ ತರುವುದೇ ಇದರ ಗುರಿ. ಈ ಯೋಜನೆಯು ಭಾರತವನ್ನು ಒಂದು ಅಭೇದ್ಯ ಕೋಟೆಯಂತೆ ರೂಪಿಸುವ ಉದ್ದೇಶ ಹೊಂದಿದ್ದು, ಸುಮಾರು 6,000–7,000 ಅತ್ಯಾಧುನಿಕ ರಾಡಾರ್‌ಗಳು, ಉಪಗ್ರಹಗಳು ಹಾಗೂ ಲೇಸರ್ ಆಯುಧಗಳನ್ನು ಒಳಗೊಂಡ ಬೃಹತ್ ಜಾಲವನ್ನು ನಿರ್ಮಿಸಲಾಗುತ್ತದೆ. ಇದು ಬಹುಪದರ (Multi-layered) ವಾಯು ರಕ್ಷಣಾ ವ್ಯವಸ್ಥೆಯಾಗಿದ್ದು, ಶತ್ರು ದೇಶಗಳಿಂದ ಬರುವ ಕ್ಷಿಪಣಿಗಳು, ಯುದ್ಧ ವಿಮಾನಗಳು ಹಾಗೂ ಸಣ್ಣ ಡ್ರೋನ್‌ಗಳನ್ನು ದೂರದ ವ್ಯಾಪ್ತಿಯಿಂದ ಹತ್ತಿರದ ವ್ಯಾಪ್ತಿವರೆಗೆ ವಿವಿಧ ಹಂತಗಳಲ್ಲಿ ಪತ್ತೆಹಚ್ಚಿ ನಾಶಪಡಿಸುವ ಸಾಮರ್ಥ್ಯ ಹೊಂದಿದೆ. ಈ ಮೂಲಕ ಭಾರತದ ವಾಯುಭದ್ರತೆ, ತಂತ್ರಜ್ಞಾನ ಸ್ವಾವಲಂಬನೆ ಮತ್ತು ರಾಷ್ಟ್ರೀಯ ರಕ್ಷಣಾ ಶಕ್ತಿ ಬಹುಪಟ್ಟು ಹೆಚ್ಚಲಿದೆ.

* ಜಂಟಿ ಕೌಂಟರ್-ಡ್ರೋನ್ ಗ್ರಿಡ್ (Joint CUAS Grid) ಎಂಬುದು ನೈಜ ಸಮಯದಲ್ಲಿ ಶತ್ರು ಡ್ರೋನ್ ಬೆದರಿಕೆಯನ್ನು ಎದುರಿಸಲು ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆ ಒಂದೇ ಜಾಲದಡಿ ಕಾರ್ಯನಿರ್ವಹಿಸುವ ವ್ಯವಸ್ಥೆಯಾಗಿದೆ. ಇದು ಈಗಿರುವ ವಾಯು ರಕ್ಷಣಾ ನಿಯಂತ್ರಣ ವ್ಯವಸ್ಥೆ (IACCS) ಗಿಂತ ಭಿನ್ನವಾಗಿದ್ದು, ಕೇವಲ ಸಣ್ಣ, ಕಡಿಮೆ ಎತ್ತರದಲ್ಲಿ ಹಾರುವ ಹಾಗೂ ಅಪಾಯಕಾರಿ ಡ್ರೋನ್‌ಗಳನ್ನು ಪತ್ತೆಹಚ್ಚಿ ನಾಶಪಡಿಸುವುದಕ್ಕೆ ವಿಶೇಷವಾಗಿ ಮೀಸಲಾಗಿರುತ್ತದೆ. ಈ ಗ್ರಿಡ್‌ನ ಹೃದಯವಾಗಿ ಕಾರ್ಯನಿರ್ವಹಿಸುವ ಜಂಟಿ ವಾಯು ರಕ್ಷಣಾ ಕೇಂದ್ರಗಳು (JADC) ಮೂಲಕ ಮೂರೂ ಸೇನಾ ಪಡೆಗಳು ಮಾಹಿತಿಯನ್ನು ತಕ್ಷಣ ಹಂಚಿಕೊಂಡು ಸಂಯೋಜಿತ ಹಾಗೂ ಕ್ಷಿಪ್ರ ಪ್ರತಿಕ್ರಿಯೆ ನೀಡುವ ಸಾಮರ್ಥ್ಯ ಹೊಂದಲಿವೆ, ಇದರಿಂದ ಭಾರತದ ಡ್ರೋನ್ ವಿರೋಧಿ ರಕ್ಷಣಾ ಶಕ್ತಿ ಗಣನೀಯವಾಗಿ ಬಲಪಡಲಿದೆ.

* ಶತ್ರು ಡ್ರೋನ್ ಬೆದರಿಕೆಯನ್ನು ಎದುರಿಸಲು ಭಾರತವು 'ಸಾಫ್ಟ್-ಕಿಲ್' ಮತ್ತು 'ಹಾರ್ಡ್-ಕಿಲ್' ಎಂಬ ಎರಡು ಪ್ರಮುಖ ತಂತ್ರಗಳನ್ನು ಅಳವಡಿಸಿಕೊಂಡಿದೆ. ಸಾಫ್ಟ್-ಕಿಲ್ (Soft-Kill) ತಂತ್ರದಲ್ಲಿ ಡ್ರೋನ್ ಅನ್ನು ದೈಹಿಕವಾಗಿ ನಾಶಪಡಿಸದೆ, ಅದರ ಸಂವಹನ ಮತ್ತು ನ್ಯಾವಿಗೇಶನ್ ವ್ಯವಸ್ಥೆಯನ್ನು ಜ್ಯಾಮ್ (Jamming) ಮಾಡುವುದು ಅಥವಾ ಹೈಜಾಕ್ ಮಾಡುವುದು ಮೂಲಕ ಅದನ್ನು ನಿಯಂತ್ರಣರಹಿತಗೊಳಿಸಲಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಹಾರ್ಡ್-ಕಿಲ್ (Hard-Kill) ತಂತ್ರದಲ್ಲಿ ಲೇಸರ್ ಕಿರಣಗಳು, ನಿರ್ದೇಶಿತ ಶಕ್ತಿ ಆಯುಧಗಳು (DEW) ಅಥವಾ ಕ್ಷಿಪಣಿಗಳ ಬಳಕೆಯಿಂದ ಡ್ರೋನ್ ಅನ್ನು ಹಾರಾಟದಲ್ಲೇ ಪತ್ತೆಹಚ್ಚಿ ನೇರವಾಗಿ ಸ್ಫೋಟಿಸಿ ನಾಶಪಡಿಸಲಾಗುತ್ತದೆ. ಈ ಎರಡೂ ತಂತ್ರಗಳ ಸಂಯೋಜನೆಯಿಂದ ಭಾರತದ ಡ್ರೋನ್ ವಿರೋಧಿ ರಕ್ಷಣಾ ವ್ಯವಸ್ಥೆ ಹೆಚ್ಚು ಪರಿಣಾಮಕಾರಿ ಮತ್ತು ಸಮಗ್ರವಾಗುತ್ತದೆ.

* ಈ ಯೋಜನೆಯು ಸಂಪೂರ್ಣವಾಗಿ 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ಅಭಿವೃದ್ಧಿಗೊಳ್ಳುತ್ತಿದೆ. ಡಿಆರ್‌ಡಿಒ (DRDO) ಅಭಿವೃದ್ಧಿಪಡಿಸಿರುವ 'ಅಂತರಿಕ್ಷ್' ಮತ್ತು 'ಭಾರ್ಗವಾಸ್ತ್ರ' ದಂತಹ ಆಯುಧಗಳು ಇದರ ಭಾಗವಾಗಲಿವೆ. ಇದು ಭಾರತವನ್ನು ಕೇವಲ ತನ್ನನ್ನು ರಕ್ಷಿಸಿಕೊಳ್ಳುವ ದೇಶವಲ್ಲದೆ, ಶತ್ರುವಿನ ನೆಲೆಗೇ ಹೋಗಿ ಹೊಡೆಯುವ ಸಮರ್ಥ ರಾಷ್ಟ್ರವನ್ನಾಗಿ ಮಾಡಲಿದೆ.

### ಜನವರಿ 10: ಜಾಗತಿಕ ಮಟ್ಟದಲ್ಲಿ ಹಿಂದಿಯ ಮಹತ್ವವನ್ನು ಸಾರುವ ವಿಶ್ವ ಹಿಂದಿ ದಿನ




➤ ವಿಶ್ವ ಹಿಂದಿ ದಿನವನ್ನು ಜನವರಿ 10ರಂದು ಆಚರಿಸಲಾಗುತ್ತದೆ. 1975 ರಲ್ಲಿ ನಾಗ್ಪುರದಲ್ಲಿ ನಡೆದ ಮೊದಲ ವಿಶ್ವ ಹಿಂದಿ ಸಮ್ಮೇಳನದ ವಾರ್ಷಿಕೋತ್ಸವವನ್ನು ನೆನಪಿಸಲು ಈ ದಿನವನ್ನು ಆರಿಸಲಾಗಿದೆ ಮತ್ತು 2006 ರಿಂದ ಇದನ್ನು ಆಚರಿಸಲಾಗುತ್ತಿದೆ. ಇದು ಭಾರತದಲ್ಲಿ ಸೆಪ್ಟೆಂಬರ್ 14 ರಂದು ಆಚರಿಸಲಾಗುವ ರಾಷ್ಟ್ರೀಯ ಹಿಂದಿ ದಿನಕ್ಕಿಂತ ಭಿನ್ನವಾಗಿದೆ. ವಿಶೇಷವಾಗಿ ವಿದೇಶಗಳಲ್ಲಿರುವ ಭಾರತೀಯ ದೌತ್ಯಾಲಯಗಳು ಹಾಗೂ ರಾಯಭಾರ ಕಚೇರಿಗಳ ಮೂಲಕ ಈ ದಿನವನ್ನು ಆಚರಿಸಲಾಗುತ್ತದೆ. ಉಪನ್ಯಾಸಗಳು, ಸಾಹಿತ್ಯ ವಾಚನ, ಚರ್ಚೆಗಳು ಹಾಗೂ ಸಣ್ಣ ಪ್ರಮಾಣದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಕಾರ್ಯಕ್ರಮಗಳ ಗಾತ್ರಕ್ಕಿಂತ ಭಾಷಾ ಜಾಗೃತಿಯೇ ಮುಖ್ಯವಾಗಿರುತ್ತದೆ.

➤ ವಿಶ್ವ ಹಿಂದಿ ದಿನವನ್ನು ಹಲವರು ಹಿಂದಿ ದಿವಸ ಜೊತೆಗೆ ಗೊಂದಲಪಡುತ್ತಾರೆ. ಆದರೆ ಇವೆರಡರ ಉದ್ದೇಶ ವಿಭಿನ್ನವಾಗಿದೆ. ಹಿಂದಿ ದಿವಸ್ ಅನ್ನು ಸೆಪ್ಟೆಂಬರ್ 14ರಂದು ಆಚರಿಸಲಾಗುತ್ತದೆ. 1949ರಲ್ಲಿ ದೇವನಾಗರಿ ಲಿಪಿಯಲ್ಲಿ ಹಿಂದಿಯನ್ನು ಭಾರತದ ಅಧಿಕೃತ ಭಾಷೆಯಾಗಿ ಅಂಗೀಕರಿಸಿದ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುತ್ತದೆ. ಇದು ಮುಖ್ಯವಾಗಿ ದೇಶೀಯ ಮಟ್ಟದ ಆಚರಣೆಯಾಗಿದ್ದು ಶಾಲೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಕಚೇರಿಗಳಲ್ಲಿ ನಡೆಯುತ್ತದೆ.

ಅದರ ವಿರುದ್ಧವಾಗಿ, ವಿಶ್ವ ಹಿಂದಿ ದಿನ ಅಂತರರಾಷ್ಟ್ರೀಯ ದೃಷ್ಟಿಕೋನವನ್ನು ಹೊಂದಿದ್ದು, ಭಾರತದ ಹೊರಗಿರುವ ಹಿಂದಿಯ ಅಸ್ತಿತ್ವ ಮತ್ತು ಮಹತ್ವದ ಮೇಲೆ ಗಮನ ಕೇಂದ್ರೀಕರಿಸುತ್ತದೆ.

➤ ವಿಶ್ವ ಹಿಂದಿ ದಿನವು ಭಾರತದ ಹೊರಗಿನ ಹಿಂದಿಯ ಪಾತ್ರವನ್ನು ಒತ್ತಿ ಹೇಳುತ್ತದೆ. ವಲಸೆ ಭಾರತೀಯರು, ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಕುಟುಂಬಗಳ ಮೂಲಕ ಹಿಂದಿ ಅನೇಕ ದಶಕಗಳಿಂದ ಶಾಂತವಾಗಿ ವಿಶ್ವದ ವಿವಿಧ ದೇಶಗಳಿಗೆ ತಲುಪಿದೆ. ಅನೇಕ ರಾಷ್ಟ್ರಗಳಲ್ಲಿ ಹಿಂದಿ ದಿನನಿತ್ಯದ ಸಂವಹನದ ಭಾಗವಾಗಿದ್ದು, ಸ್ಥಳೀಯ ಭಾಷೆಗಳು ಮತ್ತು ಸಂಸ್ಕೃತಿಗಳೊಂದಿಗೆ ಬೆರೆತು ಹೊಸ ರೂಪಗಳನ್ನು ಪಡೆಯುತ್ತಿದೆ. ಈ ಸಹಜ ವಿಸ್ತರಣೆಯನ್ನು ಈ ದಿನ ಗೌರವಿಸುತ್ತದೆ.

➤ ವಿಶ್ವ ಹಿಂದಿ ದಿನದ ಉದ್ದೇಶ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ: ರಾಜತಾಂತ್ರಿಕ ಸಂಪರ್ಕ, ಶಿಕ್ಷಣ ಮತ್ತು ಸಾಂಸ್ಕೃತಿಕ ವಿನಿಮಯಗಳಲ್ಲಿ–ಹಿಂದಿಯ ಬಳಕೆಯನ್ನು ಉತ್ತೇಜಿಸುವುದು. ವಿದೇಶಿ ವಿಶ್ವವಿದ್ಯಾಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿ ಭಾಷಾ ಅಧ್ಯಯನಕ್ಕೆ ಪ್ರೋತ್ಸಾಹ

ನೀಡುವುದೂ ಇದರ ಭಾಗವಾಗಿದೆ. ಸಾಹಿತ್ಯ, ಸಿನಿಮಾ, ಸಂಗೀತ ಮತ್ತು ದಿನನಿತ್ಯದ ಮಾತುಕತೆಯಲ್ಲಿ ವಿಶ್ವದಾದ್ಯಂತ ಹಿಂದಿ ಸಹಜವಾಗಿ ವಿಕಸನಗೊಳ್ಳುತ್ತಿರುವುದನ್ನು ಈ ದಿನ ಪ್ರತಿಬಿಂಬಿಸುತ್ತದೆ. ಜನರು ತಮ್ಮ ಭಾಷೆಯನ್ನು ಬಳಸಿ ಮುಂದಿನ ತಲೆಮಾರಿಗೆ ಸಾಗಿಸಿದಾಗ ಮಾತ್ರ ಭಾಷೆಗಳು ಜೀವಂತವಾಗಿರುತ್ತವೆ ಎಂಬ ಸಂದೇಶವನ್ನು ವಿಶ್ವ ಹಿಂದಿ ದಿನ ಸಾರುತ್ತದೆ.

## ಭಾರತೀಯ ಭಾಷೆಗಳ ಶಕ್ತಿ ಪ್ರದರ್ಶನ: ತೃತೀಯ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟನೆ




➤ ಭಾರತೀಯ ಭಾಷೆಗಳ ಜಾಗತಿಕ ಮಹತ್ವ, ಸಂರಕ್ಷಣೆ ಮತ್ತು ಭವಿಷ್ಯದ ಸಾಧ್ಯತೆಗಳ ಕುರಿತು ಚರ್ಚಿಸುವ ಉದ್ದೇಶದಿಂದ ತೃತೀಯ ಅಂತರರಾಷ್ಟ್ರೀಯ ಭಾರತೀಯ ಭಾಷೆಗಳ ಸಮ್ಮೇಳನ – 2026 ಅನ್ನು ಜನವರಿ 9ರಿಂದ 11ರವರೆಗೆ ನವದೆಹಲಿಯಲ್ಲಿ ಆಯೋಜಿಸಲಾಗಿದ್ದು , ಈ ಮೂರು ದಿನಗಳ ಸಮ್ಮೇಳನವು ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರ (IGNCA)ಯಲ್ಲಿ ನಡೆಯುತ್ತಿದೆ. ಈ ಬೃಹತ್ ಕಾರ್ಯಕ್ರಮವನ್ನು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ IGNCA, ಅಂತರರಾಷ್ಟ್ರೀಯ ಸಹಯೋಗ ಪರಿಷತ್, ವೈಶ್ವಿಕ ಹಿಂದಿ ಪರಿವಾರ, ಹಾಗೂ ದೆಹಲಿ ವಿಶ್ವವಿದ್ಯಾಲಯದ ಭಾರತೀಯ ಭಾಷೆಗಳು ಮತ್ತು ಸಾಹಿತ್ಯ ಅಧ್ಯಯನ ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದು ಈ ಸಮ್ಮೇಳನವನ್ನು ಭಾರತದ ಉಪರಾಷ್ಟ್ರಪತಿ ಶ್ರೀ ಸಿ.ಪಿ. ರಾಧಾಕೃಷ್ಣನ್ ಅವರು ಉದ್ಘಾಟಿಸಿದರು.

➤ ಅವರು ಭಾಷೆಗಳು ಕೇವಲ ಸಂವಹನದ ಸಾಧನಗಳಲ್ಲ; ಅವು ಒಂದು ನಾಗರಿಕತೆಯ ಜೀವಂತ ಅಂತರಾತ್ಮ, ಸ್ಮೃತಿ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸುವ ಶಕ್ತಿಶಾಲಿ ವಾಹಕಗಳಾಗಿವೆ ಎಂದು ಹೇಳಿದರು. ಭಾರತದ ಏಕತೆ ಭಾಷಾ ಏಕರೂಪತೆಯ ಮೇಲೆ ಅಲ್ಲ, ಬದಲಾಗಿ ಭಾಷೆಗಳ ನಡುವಿನ ಪರಸ್ಪರ ಗೌರವ ಮತ್ತು ಸಹಅಸ್ತಿತ್ವದ ಮೇಲೆ ನಿಂತಿದೆ ಎಂದು ಅವರು ಅಭಿಪ್ರಾಯಪಟ್ಟರು.

➤ ಕಾರ್ಯಕ್ರಮದಲ್ಲಿ ಕೇಂದ್ರ ಶಿಕ್ಷಣ ಸಚಿವ ಡಾ. ರಮೇಶ್ ಪೋಖ್ರಿಯಾಲ್ 'ನಿಶಾಂಕ್' , IGNCA ಅಧ್ಯಕ್ಷ ಹಾಗೂ ಪದ್ಮಭೂಷಣ ಪುರಸ್ಕೃತ ವಿದ್ವಾಂಸ ಶ್ರೀ ರಾಮ ಬಹಾದೂರ್ ರೈ, ಮತ್ತು ಜಪಾನ್‌ನ ಖ್ಯಾತ ಭಾಷಾವಿದ ಪದ್ಮಶ್ರೀ ಟೋಮಿಯೋ ಮಿಸೋಕಾಮಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಭಾರತೀಯ ಭಾಷೆಗಳು ಜ್ಞಾನ, ಸಂಸ್ಕೃತಿ ಮತ್ತು ಸೌಹಾರ್ದತೆಯ ಸಂದೇಶವನ್ನು ಜಗತ್ತಿಗೆ ತಲುಪಿಸುವಲ್ಲಿ ವಹಿಸಿರುವ ಪಾತ್ರದ ಕುರಿತು ಅವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

➤ ಪ್ರಮುಖ ಅಂಶಗಳು:

=> ಭಾಷಾ ವೈವಿಧ್ಯತೆ ಮತ್ತು ಸಂವಿಧಾನ: ಭಾರತದ ಏಕತೆಯು ಭಾಷಾ ವೈವಿಧ್ಯತೆಯ ಗೌರವದ ಮೇಲೆ ನಿಂತಿದೆ. ಸಂವಿಧಾನದ 8ನೇ ಅನುಸೂಚಿಯು ಈ ವೈವಿಧ್ಯತೆಯನ್ನು ಎತ್ತಿ ಹಿಡಿಯುತ್ತದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂವಿಧಾನವನ್ನು ಸಂತಾಳಿ ಭಾಷೆಯಲ್ಲಿ ಬಿಡುಗಡೆ ಮಾಡಿದ್ದನ್ನು ಇಲ್ಲಿ ಸ್ಮರಿಸಲಾಯಿತು.

=> ಜಾಗತಿಕ ಸಹಭಾಗಿತ್ವ: ಈ ಸಮ್ಮೇಳನದಲ್ಲಿ 70ಕ್ಕೂ ಹೆಚ್ಚು ದೇಶಗಳಿಂದ 100ಕ್ಕೂ ಅಧಿಕ ಅಂತರರಾಷ್ಟ್ರೀಯ ಪ್ರತಿನಿಧಿಗಳು ಮತ್ತು ಭಾರತದ ನೂರಾರು ವಿದ್ವಾಂಸರು ಭಾಗವಹಿಸಿದ್ದರು.

=> ಸಂರಕ್ಷಣೆ ಮತ್ತು ತಂತ್ರಜ್ಞಾನ: ಅಳಿವಿನಂಚಿನಲ್ಲಿರುವ ಭಾಷೆಗಳ ರಕ್ಷಣೆ ಹಾಗೂ ಆಧುನಿಕ ತಂತ್ರಜ್ಞಾನದ ಮೂಲಕ ಭಾರತೀಯ ಭಾಷೆಗಳನ್ನು ಜಾಗತಿಕವಾಗಿ ಪಸರಿಸುವ ಕುರಿತು ಗಂಭೀರ ಚರ್ಚೆಗಳು ನಡೆದವು.

➤ ಈ ಸಮ್ಮೇಳನವು ಭಾರತೀಯ ಭಾಷೆಗಳ ಸಂರಕ್ಷಣೆ, ಜಾಗತಿಕ ಪ್ರಸಾರ ಮತ್ತು ಭವಿಷ್ಯದ ತಂತ್ರಜ್ಞಾನಾಧಾರಿತ ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗಳಿಗೆ ಮಹತ್ವದ ವೇದಿಕೆಯಾಗಿ ಪರಿಣಮಿಸಿದೆ.

## ಗುಜರಾತ್‌ನಲ್ಲಿ 'ಆಶಾ ವ್ಯಾನ್' ಲೋಕಾರ್ಪಣೆ: ಮನೆಬಾಗಿಲಿಗೆ ಬರಲಿದೆ ಕ್ಯಾನ್ಸರ್ ತಪಾಸಣಾ ಸೇವೆ.



➤ ಗುಜರಾತ್ ಮುಖ್ಯಮಂತ್ರಿ ಶ್ರೀ ಭೂಪೇಂದ್ರ ಪಟೇಲ್ ಅವರು 'ಆಶಾ ವ್ಯಾನ್ ' ಎಂಬ ಮೊಬೈಲ್ ಕ್ಯಾನ್ಸರ್ ತಪಾಸಣಾ ವಾಹನವನ್ನು ಅಧಿಕೃತವಾಗಿ ಉದ್ಘಾಟಿಸಿದರು. ಈ ವಾಹನವನ್ನು ಜೆನ್‌ಬರ್ಕ್ಸ್ ಫಾರ್ಮಾಸ್ಯೂಟಿಕಲ್ ಸಂಸ್ಥೆಯು ಭಾವನಗರದ ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಶಾಖೆಗೆ ದಾನವಾಗಿ ನೀಡಿದೆ. ಆಶಾ ವ್ಯಾನ್ ' ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಕ್ಯಾನ್ಸರ್ ರೋಗಗಳ ಮುಂಚಿತ ಪತ್ತೆ (Early Detection) ಮಾಡಲು ಸಹಕಾರಿಯಾಗಲಿದೆ.

➤ 'ಆಶಾ ವ್ಯಾನ್ ' ವಾಹನದ ಪ್ರಮುಖ ತಾಂತ್ರಿಕ ಸೌಲಭ್ಯಗಳು:ಕ್ಯಾನ್ಸರ್ ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವುದು ಚಿಕಿತ್ಸೆಯ ಯಶಸ್ಸಿಗೆ ಅತಿ ಮುಖ್ಯ. ಈ **ವಾಹನದಲ್ಲಿ ಈ ಕೆಳಗಿನ ಸೌಲಭ್ಯಗಳಿವೆ:**

1. EVA-Pro ಡಯಾಗ್ನೋಸ್ಟಿಕ್ಸ್: ಗರ್ಭಕಂಠದ ಕ್ಯಾನ್ಸರ್ ಪತ್ತೆಗೆ ಸಹಕಾರಿ.
2. ಮ್ಯಾಮೋಗ್ರಫಿ ಯಂತ್ರ: ಸ್ತನ ಕ್ಯಾನ್ಸರ್ ಪತ್ತೆಹಚ್ಚಲು ಅತ್ಯಗತ್ಯವಾದ ತಂತ್ರಜ್ಞಾನ.
3. ಟೆಲಿ-ಸಲಹೆ (Tele-Consultation): ದೂರದ ಗ್ರಾಮದಲ್ಲಿದ್ದರೂ ಸಹ ನಗರದ ತಜ್ಞ ವೈದ್ಯರೊಂದಿಗೆ ವಿಡಿಯೋ ಸಂವಾದದ ಮೂಲಕ ಸಲಹೆ ಪಡೆಯುವ ವ್ಯವಸ್ಥೆ.

➤ ಈ ಸಂಚಾರಿ ಕ್ಲಿನಿಕ್ ಮೂಲಕ ಹಲವಾರು ಪ್ರಮುಖ ಕ್ಯಾನ್ಸರ್ ರೋಗಗಳನ್ನು ಸ್ಥಳದಲ್ಲೇ ಪತ್ತೆಹಚ್ಚಬಹುದು:

=> ಶ್ವಾಸಕೋಶ ಮತ್ತು ಬಾಯಿ ಕ್ಯಾನ್ಸರ್: ಧೂಮಪಾನ ಮತ್ತು ತಂಬಾಕು ಸೇವನೆಯಿಂದ ಉಂಟಾಗುವ ರೋಗಗಳ ಪತ್ತೆ.

=> ಮಹಿಳೆಯರ ಆರೋಗ್ಯ: ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್ ತಪಾಸಣೆ.

=> ಅಂಗಾಂಗಗಳ ತಪಾಸಣೆ: ಯಕೃತ್ (ಲಿವರ್), ಮೇದೋಜ್ಜೀರಕ ಗ್ರಂಥಿ (ಪ್ಯಾಂಕ್ರಿಯಾಸ್) ಮತ್ತು ಪ್ರೋಸ್ಟೇಟ್ ಕ್ಯಾನ್ಸರ್.

=> ರಕ್ತ ಕ್ಯಾನ್ಸರ್: ಅಗತ್ಯ ರಕ್ತ ಪರೀಕ್ಷೆಗಳ ಮೂಲಕ ಆರಂಭಿಕ ಲಕ್ಷಣಗಳ ಗುರುತಿಸುವಿಕೆ.

➤ ಈ ಯೋಜನೆಯು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಎಲ್ಲರಿಗೂ ಆರೋಗ್ಯ ಮತ್ತು ಕ್ಷೇಮ' (Health and Wellness for All) ಎಂಬ ಆಶಯಕ್ಕೆ ಪೂರಕವಾಗಿದೆ. ಇದರ ಮುಖ್ಯ ಉದ್ದೇಶ: ಗ್ರಾಮೀಣ ಜನರಿಗೆ ಆಸ್ಪತ್ರೆಗಳಿಗೆ ಅಲೆಯುವ ಅಗತ್ಯವಿಲ್ಲದೇ, ಅವರ ಮನೆ ಬಾಗಿಲಿಗೇ ಸುಧಾರಿತ ವೈದ್ಯಕೀಯ ತಂತ್ರಜ್ಞಾನವನ್ನು ತಲುಪಿಸುವುದು. ಇದರಿಂದ ಕ್ಯಾನ್ಸರ್‌ನಿಂದ ಉಂಟಾಗುವ ಮರಣ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಬಹುದು.

➤ ಈ 'ಆಶಾ ವ್ಯಾನ್' ವಾಹನವು ಮುಂದಿನ ದಿನಗಳಲ್ಲಿ ಭಾವನಗರ ಜಿಲ್ಲೆ ಸೇರಿದಂತೆ ಗುಜರಾತ್‌ನಾದ್ಯಂತ ಸಂಚರಿಸಿ, ಸಾವಿರಾರು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಉಚಿತ ಅಥವಾ ರಿಯಾಯಿತಿ ದರದಲ್ಲಿ ಗುಣಮಟ್ಟದ ತಪಾಸಣೆಯನ್ನು ಒದಗಿಸಲಿದೆ.

## ಶಾಕ್ಸ್‌ಗ್ಯಾಮ್ ಕಣಿವೆಯಲ್ಲಿ ಗಡಿ ವಿವಾದ ತೀವ್ರ: ಚೀನಾಕ್ಕೆ ಭಾರತದ ಸ್ಪಷ್ಟ ಎಚ್ಚರಿಕೆ




➤ ಪಾಕಿಸ್ತಾನ್ ಆಕ್ರಮಿತ ಕಾಶ್ಮೀರದ ಶಾಕ್ಸ್‌ಗ್ಯಾಮ್ ಕಣಿವೆಯಲ್ಲಿ ಚೀನಾ ಕೈಗೊಂಡಿರುವ ಮೂಲಸೌಕರ್ಯ ನಿರ್ಮಾಣ ಚಟುವಟಿಕೆಗಳನ್ನು ಭಾರತ ತೀವ್ರವಾಗಿ ಖಂಡಿಸಿದೆ. ಈ ಪ್ರದೇಶವು ಭಾರತದ ಅವಿಭಾಜ್ಯ ಭಾಗವಾಗಿದ್ದು, ಚೀನಾ-ಪಾಕಿಸ್ತಾನ್ ನಡುವೆ 1963ರಲ್ಲಿ ಸಹಿ ಮಾಡಲಾದ ಗಡಿ ಒಪ್ಪಂದವನ್ನು ಭಾರತ ಎಂದಿಗೂ ಮಾನ್ಯತೆ ನೀಡಿಲ್ಲ ಎಂದು ಭಾರತ ಪುನರುಚ್ಚರಿಸಿದೆ. ವಿದೇಶಾಂಗ ಸಚಿವಾಲಯದ ವಕ್ತಾರ ರಂಧೀರ್ ಜೈಸ್ವಾಲ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುತ್ತಾ,"ಶಾಕ್ಸ್‌ಗ್ಯಾಮ್ ಕಣಿವೆ ಭಾರತೀಯ ಭೂಭಾಗ. 1963ರ ಚೀನಾ-ಪಾಕಿಸ್ತಾನ್ ಗಡಿ ಒಪ್ಪಂದವು ಕಾನೂನುಬಾಹಿರ ಹಾಗೂ ಅಮಾನ್ಯ" ಎಂದು ಸ್ಪಷ್ಟಪಡಿಸಿದರು.

**➤ ಐತಿಹಾಸಿಕ ಹಿನ್ನೆಲೆ ಮತ್ತು ವಿವಾದದ ಮೂಲ:-**

# 1963ರ ಅಕ್ರಮ ಒಪ್ಪಂದ: ಪಾಕಿಸ್ತಾನವು ತನ್ನ ಅಕ್ರಮ ಆಕ್ರಮಿತ ಕಾಶ್ಮೀರದ (PoK) ಭಾಗವಾಗಿದ್ದ ಸುಮಾರು 5,180 ಚದರ ಕಿಲೋಮೀಟರ್ ವಿಸ್ತೀರ್ಣದ ಶಾಕ್ಸ್‌ಗ್ಯಾಮ್ ಕಣಿವೆಯನ್ನು 1963ರಲ್ಲಿ ಚೀನಾಕ್ಕೆ ಹಸ್ತಾಂತರಿಸಿತು.

# ಭಾರತದ ನಿಲುವು: ಜಮ್ಮು-ಕಾಶ್ಮೀರದ ಸಂಪೂರ್ಣ ಭಾಗ ಭಾರತಕ್ಕೆ ಸೇರಿದ್ದರಿಂದ, ಪಾಕಿಸ್ತಾನಕ್ಕೆ ಈ ಭೂಮಿಯನ್ನು ಬೇರೊಂದು ದೇಶಕ್ಕೆ ನೀಡುವ ಯಾವುದೇ ಕಾನೂನುಬದ್ಧ ಹಕ್ಕಿಲ್ಲ. ಆದ್ದರಿಂದ ಈ ಒಪ್ಪಂದವನ್ನು ಭಾರತ ಮೊದಲಿನಿಂದಲೂ 'ಅಮಾನ್ಯ' ಎಂದು ಪರಿಗಣಿಸಿದೆ.

➤ ಪ್ರಸ್ತುತ ಮೂಲಸೌಕರ್ಯ ನಿರ್ಮಾಣದ ಗಂಭೀರತೆ: ಉಪಗ್ರಹ ಚಿತ್ರಗಳ ಪ್ರಕಾರ, ಚೀನಾ ಈ ಪ್ರದೇಶದಲ್ಲಿ 'ಆಲ್-ವೆದರ್' (ಎಲ್ಲಾ ಹವಾಮಾನಕ್ಕೂ ಸೂಕ್ತವಾದ) ರಸ್ತೆಗಳನ್ನು ನಿರ್ಮಿಸುತ್ತಿದೆ. ಇದರ ಪ್ರಮುಖ ಅಂಶಗಳು ಇಲ್ಲಿವೆ:

# ಸಿಯಾಚಿನ್‌ಗೆ ಬೆದರಿಕೆ: ಈ ರಸ್ತೆ ನಿರ್ಮಾಣವು ವಿಶ್ವದ ಅತ್ಯಂತ ಎತ್ತರದ ಯುದ್ಧಭೂಮಿ ಎನಿಸಿಕೊಂಡಿರುವ ಸಿಯಾಚಿನ್ ಹಿಮನದಿಗೆ ತೀರಾ ಹತ್ತಿರದಲ್ಲಿದೆ. ಇದು ಭಾರತೀಯ ಸೇನೆಯ ಚಟುವಟಿಕೆಗಳ ಮೇಲೆ ನಿಗಾ ಇಡಲು ಚೀನಾಕ್ಕೆ ಅನುವು ಮಾಡಿಕೊಡುತ್ತದೆ.

**# ಸೇನಾ ಬಲವರ್ಧನೆ:** ಈ ರಸ್ತೆಗಳು ಚೀನಾದ ಮಿಲಿಟರಿ ಶಿಬಿರಗಳನ್ನು ನೇರವಾಗಿ ಸಂಪರ್ಕಿಸುತ್ತವೆ, ಇದರಿಂದ ಯುದ್ಧದಂತಹ ಪರಿಸ್ಥಿತಿಯಲ್ಲಿ ಚೀನಾ ಅತಿ ವೇಗವಾಗಿ ತನ್ನ ಸೇನೆಯನ್ನು ಜಮಾಯಿಸಲು ಸಾಧ್ಯವಾಗುತ್ತದೆ.

➤ CPEC ಮತ್ತು ಭಾರತದ ಸಾರ್ವಭೌಮತ್ವ: ಚೀನಾ-ಪಾಕಿಸ್ತಾನ್ ಆರ್ಥಿಕ ಕಾರಿಡಾರ್ (CPEC) ಯೋಜನೆಯು ಭಾರತದ ಆಕ್ಷೇಪಣೆಗೆ ಮುಖ್ಯ ಕಾರಣವೆಂದರೆ ಅದು ಭಾರತದ ಭೂಭಾಗದ ಮೂಲಕ ಹಾದುಹೋಗುವುದು.

# ಪ್ರಾದೇಶಿಕ ಅಖಂಡತೆ: ಯಾವುದೇ ದೇಶದ ಸಾರ್ವಭೌಮತ್ವವನ್ನು ಗೌರವಿಸದೆ ಇಂತಹ ಯೋಜನೆಗಳನ್ನು ಹಮ್ಮಿಕೊಳ್ಳುವುದು ಅಂತರರಾಷ್ಟ್ರೀಯ ನಿಯಮಗಳ ಉಲ್ಲಂಘನೆ ಎಂದು ಭಾರತ ಪ್ರತಿಪಾದಿಸಿದೆ.

**➤ ರಾಜತಾಂತ್ರಿಕ ಮತ್ತು ಕಾರ್ಯತಂತ್ರದ ಪರಿಣಾಮಗಳು:-**

# ದ್ವಿಮುಖ ಸವಾಲು: ಚೀನಾ ಮತ್ತು ಪಾಕಿಸ್ತಾನ ಒಟ್ಟಾಗಿ ಭಾರತದ ಉತ್ತರ ಗಡಿಯಲ್ಲಿ ಒತ್ತಡ ಹೇರುತ್ತಿವೆ. ಶಾಕ್ಸ್‌ಗ್ಯಾಮ್‌ನಲ್ಲಿ ಚೀನಾದ ಉಪಸ್ಥಿತಿಯು ಪಾಕಿಸ್ತಾನ ಮತ್ತು ಚೀನಾ ಸೇನೆಗಳ ನಡುವೆ ನೇರ ಸಂಪರ್ಕವನ್ನು ಸುಲಭಗೊಳಿಸುತ್ತದೆ.

# ಭಾರತದ ಪ್ರತಿತಂತ್ರ: ಭಾರತವು ಗಡಿ ಭಾಗಗಳಲ್ಲಿ ತನ್ನದೇ ಆದ ಮೂಲಸೌಕರ್ಯಗಳನ್ನು (ರಸ್ತೆಗಳು, ಸುರಂಗಗಳು ಮತ್ತು ವಿಮಾನ ನಿಲ್ದಾಣಗಳು) ವೇಗವಾಗಿ ಅಭಿವೃದ್ಧಿಪಡಿಸುತ್ತಿದೆ. ಲಡಾಖ್ ಪ್ರಾಂತ್ಯದಲ್ಲಿ ಭಾರತೀಯ ಸೇನೆಯ ಜಾಗರೂಕತೆ ಮತ್ತು ಗಡಿ ರಸ್ತೆಗಳ ಸಂಸ್ಥೆಯ (BRO) ಕಾರ್ಯಕ್ಷಮತೆ ಇದಕ್ಕೆ ಪೂರಕವಾಗಿದೆ.

➤ ಶಾಕ್ಸ್‌ಗ್ಯಾಮ್ ಕಣಿವೆಯು ಕೇವಲ ಭೂಭಾಗವಲ್ಲ, ಅದು ಭಾರತದ ರಾಷ್ಟ್ರೀಯ ಹೆಮ್ಮೆಯ ಸಂಕೇತ. ಚೀನಾದ ಇಂತಹ ಏಕಪಕ್ಷೀಯ ನಿರ್ಧಾರಗಳು ಏಷ್ಯಾ ಪೆಸಿಫಿಕ್ ಪ್ರದೇಶದ ಶಾಂತಿಗೆ ಧಕ್ಕೆ ತರುವ ಸಾಧ್ಯತೆ ಇದೆ ಎಂದು ಭಾರತ ವಿಶ್ವಸಂಸ್ಥೆ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಧ್ವನಿ ಎತ್ತುತ್ತಿದೆ.

## ನ್ಯಾಯಮೂರ್ತಿ ಮನೋಜ್ ಕುಮಾರ್ ಗುಪ್ತಾ ಉತ್ತರಾಖಂಡ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ




➤ ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹತ್ವದ ಬೆಳವಣಿಗೆಯೊಂದಾಗಿ, ನ್ಯಾಯಮೂರ್ತಿ ಮನೋಜ್ ಕುಮಾರ್ ಗುಪ್ತಾ ಅವರನ್ನು ಉತ್ತರಾಖಂಡ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ. ಪ್ರಸ್ತುತ ಅವರು ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.ಈ ನೇಮಕಾತಿ ಸುಪ್ರೀಂ ಕೋರ್ಟ್ ಕೊಲೇಜಿಯಂ ಶಿಫಾರಸಿನ ಮೇರೆಗೆ ನಡೆಯಿದ್ದು, ಕೇಂದ್ರ ಸರ್ಕಾರವು ಅಧಿಕೃತ ಅಧಿಸೂಚನೆಯನ್ನು ಹೊರಡಿಸಿದೆ.

➤ ಪ್ರಸ್ತುತ ಉತ್ತರಾಖಂಡ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿರುವ ನ್ಯಾಯಮೂರ್ತಿ ಗುಹನಾಥನ್ ನರೇಂದರ್ ಅವರು ಜನವರಿ 9, 2026ರಂದು (62 ವರ್ಷ ವಯಸ್ಸು ಪೂರ್ಣಗೊಳಿಸಿ) ನಿವೃತ್ತರಾಗಲಿದ್ದಾರೆ. ಅವರ ನಿವೃತ್ತಿಯ ನಂತರ, ನ್ಯಾಯಮೂರ್ತಿ ಮನೋಜ್ ಕುಮಾರ್ ಗುಪ್ತಾ ಅವರು ಅಧಿಕೃತವಾಗಿ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

**➤ ನ್ಯಾಯಮೂರ್ತಿ ಮನೋಜ್ ಕುಮಾರ್ ಗುಪ್ತಾ- ವೃತ್ತಿ ಪಯಣ (Career Timeline):**

- ಪ್ರಸ್ತುತ ಹುದ್ದೆ: ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ
- ನ್ಯಾಯಮೂರ್ತಿಯಾಗಿ ನೇಮಕ: ಏಪ್ರಿಲ್ 12, 2013
- ನಿವೃತ್ತಿ ದಿನಾಂಕ: ಅಕ್ಟೋಬರ್ 8, 2026
- ಶಿಫಾರಸು ಮಾಡಿದವರು: ಸುಪ್ರೀಂ ಕೋರ್ಟ್ ಕೊಲೇಜಿಯಂ (ಡಿಸೆಂಬರ್ 2025)

ಈ ನೇಮಕಾತಿ ಅವರು ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸುವ ದಿನಾಂಕದಿಂದ ಜಾರಿಗೆ ಬರುತ್ತದೆ.

**➤ ಈ ನೇಮಕಾತಿ ಹಲವು ಕಾರಣಗಳಿಂದ ಮಹತ್ವದ್ದಾಗಿದೆ:**

=> ಉತ್ತರಾಖಂಡ ಹೈಕೋರ್ಟ್‌ನಲ್ಲಿ ಸತತ ಹಾಗೂ ಸುಗಮ ನಾಯಕತ್ವ ಬದಲಾವಣೆ ಸಾಧ್ಯವಾಗುತ್ತದೆ.

=> ಭಾರತದ ನ್ಯಾಯಾಂಗದಲ್ಲಿ ನಡೆಯುವ ಕೊಲೇಜಿಯಂ ವ್ಯವಸ್ಥೆಯ ಕಾರ್ಯವಿಧಾನಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

=> ಮುಖ್ಯ ನ್ಯಾಯಮೂರ್ತಿಗಳು ನ್ಯಾಯಾಲಯದ ಆಡಳಿತ, ಪ್ರಕರಣಗಳ ನಿರ್ವಹಣೆ ಹಾಗೂ ಪ್ರಮುಖ ಸಂವಿಧಾನಾತ್ಮಕ ವಿಷಯಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ.

## ಪರೀಕ್ಷಾ ಪೇ ಚರ್ಚಾ 2026: ದಾಖಲೆ ಬರೆದ ನೋಂದಣಿ! 4.20 ಕೋಟಿಗೂ ಅಧಿಕ ಮಂದಿ ಭಾಗಿ




➤ ವಿದ್ಯಾರ್ಥಿಗಳ ಪರೀಕ್ಷಾ ಭಯವನ್ನು ಹೋಗಲಾಡಿಸಿ, ಅವರಲ್ಲಿ ಆತ್ಮವಿಶ್ವಾಸ ತುಂಬುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಕಾರ್ಯಕ್ರಮ 'ಪರೀಕ್ಷಾ ಪೇ ಚರ್ಚಾ' (Pariksha Pe Charcha - PPC) ಈಗ ಜಾಗತಿಕ ಮಟ್ಟದ ಜನಾಂದೋಲನವಾಗಿ ಮಾರ್ಪಟ್ಟಿದೆ. 2026ರಲ್ಲಿ ನಡೆಯಲಿರುವ ಇದರ 9ನೇ ಆವೃತ್ತಿಯು ಭಾಗವಹಿಸುವಿಕೆಯ ಪ್ರಮಾಣದಲ್ಲಿ ಹೊಸ ಇತಿಹಾಸ ಸೃಷ್ಟಿಸಲು ಸಜ್ಜಾಗಿದೆ.

➤ ಈ ಬಾರಿಯ ಆವೃತ್ತಿಗೆ ದಾಖಲೆ ಪ್ರಮಾಣದಲ್ಲಿ ಜನರು ಆಸಕ್ತಿ ತೋರಿಸಿದ್ದು, ಇದುವರೆಗೆ ಒಟ್ಟು 4,20,69,002 (4.20 ಕೋಟಿಗೂ ಹೆಚ್ಚು) ಮಂದಿ ನೋಂದಾಯಿಸಿಕೊಂಡಿದ್ದಾರೆ. ವರ್ಗವಾರು ವಿವರಗಳನ್ನು ಗಮನಿಸಿದರೆ, ವಿದ್ಯಾರ್ಥಿಗಳು ಅತಿ ಹೆಚ್ಚಿನ ಸಂಖ್ಯೆಯಾದ 3,91,50,348 ಮಂದಿ ನೋಂದಾಯಿಸಿಕೊಂಡಿದ್ದು, ಅವರ ಬಳಿಕ 23,62,202 ಶಿಕ್ಷಕರು ಮತ್ತು 5,56,452 ಪಾಲಕರು ಭಾಗವಹಿಸಿದ್ದಾರೆ. ಈ ಅಂಕಿಅಂಶಗಳು ಕಾರ್ಯಕ್ರಮದ ವ್ಯಾಪ್ತಿ, ಜನಪ್ರಿಯತೆ ಮತ್ತು ದೇಶವ್ಯಾಪಿ ಸ್ಪಂದನೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ.

➤ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮದ ಉದ್ದೇಶ ಮತ್ತು ಮಹತ್ವ ಕೇವಲ ಪರೀಕ್ಷಾ ತಯಾರಿಕೆ ಸಲಹೆಗಳಿಗೆ ಸೀಮಿತವಾಗದೆ, ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡುವುದು ಆಗಿದೆ. ಈ ಕಾರ್ಯಕ್ರಮದ ಪ್ರಮುಖ ಆಶಯವೆಂದರೆ ಪರೀಕ್ಷೆಯನ್ನು ಭಯದ ವಿಷಯವಾಗಿಸದೆ 'ಒಂದು ಹಬ್ಬದಂತೆ' (Exam as a Festival) ಆಚರಿಸುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು, ಇದರಿಂದ ಒತ್ತಡಮುಕ್ತ ಪರೀಕ್ಷಾ ವಾತಾವರಣ ನಿರ್ಮಾಣವಾಗುತ್ತದೆ. ಜೊತೆಗೆ, ಆಯ್ದ ವಿದ್ಯಾರ್ಥಿಗಳಿಗೆ ಪ್ರಧಾನಮಂತ್ರಿಯವರನ್ನು ನೇರವಾಗಿ ಭೇಟಿಯಾಗಿ ಪ್ರಶ್ನೆ ಕೇಳುವ ಅಪರೂಪದ ಅವಕಾಶ ದೊರಕುವುದು ಈ ಕಾರ್ಯಕ್ರಮದ ವಿಶೇಷತೆಯಾಗಿದೆ. ಅಲ್ಲದೆ, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳು ಹಾಗೂ ಪಾಲಕರು ಎದುರಿಸುವ ಮಾನಸಿಕ ಒತ್ತಡವನ್ನು ಸಮರ್ಥವಾಗಿ ನಿರ್ವಹಿಸುವ ತಂತ್ರಗಳನ್ನೂ ಹಂಚಿಕೊಳ್ಳಲಾಗುತ್ತದೆ, ಇದು ಅವರ ಮಾನಸಿಕ ಆರೋಗ್ಯ ಮತ್ತು ಆತ್ಮವಿಶ್ವಾಸವನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

➤ ಭಾಗವಹಿಸುವ ವಿಧಾನ ಸ್ಪಷ್ಟ ಮತ್ತು ಸುಲಭವಾಗಿದ್ದು, 6ರಿಂದ 12ನೇ ತರಗತಿಯ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪಾಲಕರು ಈ ಅಭಿಯಾನದಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ಈ ಬೃಹತ್ ಜನಾಂದೋಲನದಲ್ಲಿ ಸೇರಲು ಜನವರಿ 11, 2026ರವರೆಗೆ ನೋಂದಣಿ ಅವಧಿ ನೀಡಲಾಗಿದೆ. ಆಸಕ್ತರು ಸರ್ಕಾರದ ಅಧಿಕೃತ ಪೋರ್ಟಲ್ MyGov.in ಮೂಲಕ ಲಾಗಿನ್ ಆಗಿ, ತಮ್ಮ ಪರೀಕ್ಷಾ ತಂತ್ರಗಳು, ಅನುಭವಗಳು ಅಥವಾ ಪ್ರಶ್ನೆಗಳನ್ನು ಹಂಚಿಕೊಳ್ಳುವ ಮೂಲಕ ಸಕ್ರಿಯವಾಗಿ ಪಾಲ್ಗೊಳ್ಳಬಹುದು, ಇದರಿಂದ ಈ ಕಾರ್ಯಕ್ರಮವು ಇನ್ನಷ್ಟು ಸಮೃದ್ಧವಾಗುತ್ತದೆ.

**ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ 'ಕ್ವಿಕ್ ಫ್ಯಾಕ್ಟ್ಸ್'**

- ಪ್ರಾರಂಭ: 'ಪರೀಕ್ಷಾ ಪೇ ಚರ್ಚಾ' ಮೊದಲ ಆವೃತ್ತಿಯು 2018 ರಲ್ಲಿ ಪ್ರಾರಂಭವಾಯಿತು.
- ಪುಸ್ತಕ: ಈ ಕಾರ್ಯಕ್ರಮಕ್ಕೆ ಪ್ರೇರಣೆಯಾದ ಪ್ರಧಾನಿ ಮೋದಿಯವರು ಬರೆದ ಪುಸ್ತಕದ ಹೆಸರು 'ಎಕ್ಸಾಮ್ ವಾರಿಯರ್ಸ್' (Exam Warriors).
- ಸಚಿವಾಲಯ: ಇದನ್ನು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಆಯೋಜಿಸುತ್ತದೆ.
- ನವೀನತೆ: 9ನೇ ಆವೃತ್ತಿಯಲ್ಲಿ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಬಳಕೆ ಮತ್ತು ಪ್ರಾದೇಶಿಕ ಭಾಷೆಗಳ ಒಳಗೊಳ್ಳುವಿಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ.

## ವಿಶ್ವಸಂಸ್ಥೆಯ ವರದಿ 2026: ವಿಶ್ವದ ವೇಗವಾಗಿ ಬೆಳೆಯುವ ಆರ್ಥಿಕತೆಯಾಗಿ ಭಾರತ ಮುಂದುವರಿಕೆ! 6.6% ಜಿಡಿಪಿ ಬೆಳವಣಿಗೆಯ ಮುನ್ಸೂಚನೆ.




➤ ಜಾಗತಿಕ ಆರ್ಥಿಕ ಅಸ್ಥಿರತೆ ಮತ್ತು ವ್ಯಾಪಾರ ಸಂಘರ್ಷಗಳ ನಡುವೆಯೂ ಭಾರತವು 'ವಿಶ್ವದ ಆರ್ಥಿಕತೆಯ ಆಶಾಕಿರಣ'ವಾಗಿ ಹೊರಹೊಮ್ಮಿದೆ. ಯುನೈಟೆಡ್ ನೇಶನ್ಸ್ ಎಕನಾಮಿಕ್ ಅಂಡ್ ಸೋಶಿಯಲ್ ಅಫೈರ್ಸ್ ವಿಭಾಗ (UN-DESA) ಬಿಡುಗಡೆ ಮಾಡಿರುವ ತನ್ನ ಪ್ರಮುಖ ವರದಿ "World Economic Situation and Prospects (WESP) 2026" ನಲ್ಲಿ ಈ ಅಂಶವನ್ನು ದೃಢಪಡಿಸಿದೆ.

➤ ಭಾರತದ ಜಿಡಿಪಿ ಬೆಳವಣಿಗೆಯ ಅಂದಾಜು ಪ್ರಸ್ತುತ ವರ್ಷಗಳಲ್ಲಿ ಸ್ಥಿರವಾಗಿದ್ದು, ವಿಶ್ವಸಂಸ್ಥೆಯ ವರದಿಯ ಪ್ರಕಾರ, 2025ರಲ್ಲಿ 7.4% ಬೆಳವಣಿಗೆಯ ಅಂದಾಜು ಇದೆ, ಇದು ಇತ್ತೀಚಿನ ಸರ್ಕಾರಿ ಅಂಕಿಅಂಶಗಳಿಗೂ ಹತ್ತಿರವಾಗಿದೆ. ಮುಂದಿನ ವರ್ಷ 2026ರ ಮುನ್ಸೂಚನೆ 6.6%, ಜಾಗತಿಕ ಆರ್ಥಿಕ ಸವಾಲುಗಳ ನಡುವೆಯೂ ಭಾರತವನ್ನು ಪ್ರಮುಖ ಆರ್ಥಿಕತೆಗಳಲ್ಲಿ ಅತ್ಯಧಿಕ ವೇಗದ ಬೆಳವಣಿಗೆಯಾಗಿ ತೋರಿಸುತ್ತದೆ. 2027ರಲ್ಲಿ ಭಾರತವು 6.7% ಬೆಳವಣಿಗೆಯನ್ನು ನಿರೀಕ್ಷಿಸುತ್ತದೆ, ಇದರಿಂದ ಭಾರತದ ಆರ್ಥಿಕ ಸ್ಥಿತಿಯ ಸ್ಥಿರತೆ ಮತ್ತು ಜಾಗತಿಕ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ.

➤ ಭಾರತದ ಆರ್ಥಿಕತೆಯನ್ನು ರಕ್ಷಿಸುವ ಮೂರು ಸ್ತಂಭಗಳು ಜಾಗತಿಕ ಆರ್ಥಿಕ ಹಿಂಜರಿತದ ಭೀತಿಯ ನಡುವೆಯೂ ದೇಶದ ವೇಗವಾದ ಬೆಳವಣಿಗೆಯನ್ನು ಸ್ಪಷ್ಟವಾಗಿ ವಿವರಿಸುತ್ತವೆ. ಮೊದಲನೆಯದಾಗಿ, ಸ್ಥಿರವಾದ ಖಾಸಗಿ ಬಳಕೆ (Resilient Private Consumption): ಭಾರತೀಯ ಕುಟುಂಬಗಳ ಖರೀದಿ ಶಕ್ತಿ ಮತ್ತು ಬೇಡಿಕೆ ಸ್ಥಿರವಾಗಿರುವುದು ಆರ್ಥಿಕತೆಗೆ ಬಲ ನೀಡಿದೆ. ಎರಡನೆಯದಾಗಿ, ಬಲಿಷ್ಠ ಸಾರ್ವಜನಿಕ ಹೂಡಿಕೆ (Strong Public Investment): ಸರ್ಕಾರವು ರಸ್ತೆ, ರೈಲ್ವೆ, ಬಂದರುಗಳು ಹಾಗೂ ಡಿಜಿಟಲ್ ಮೂಲಸೌಕರ್ಯಗಳಲ್ಲಿ ಭಾರಿ ಬಂಡವಾಳ ಹೂಡಿಕೆ ಮೂಲಕ ಅಭಿವೃದ್ಧಿಯನ್ನು ಉತ್ತೇಜಿಸಿದೆ. ಮೂರನೆಯದು, ತೆರಿಗೆ ಸುಧಾರಣೆ ಮತ್ತು ವಿತ್ತೀಯ ನೀತಿ: ಜಿಎಸ್‌ಟಿ (GST) ಸುಧಾರಣೆಗಳು ಮತ್ತು RBI ಕೈಗೊಳ್ಳುತ್ತಿರುವ ಹಣಕಾಸು ನಿಯಂತ್ರಣ ಕ್ರಮಗಳು ಆರ್ಥಿಕತೆಗೆ ಸ್ಥಿರತೆ ಮತ್ತು ವಿಶ್ವಾಸಾರ್ಹತೆ ತಂದಿವೆ, ಇದರಿಂದ ಭಾರತವು ಸವಾಲುಗಳಿಗೆ ನಡುವೆಯೂ ವೇಗವಾಗಿ ಬೆಳೆಯುವ ಪ್ರಮುಖ ಆರ್ಥಿಕತೆಯಾಗುತ್ತಿದೆ.

➤ ಜಾಗತಿಕ ಆರ್ಥಿಕ ಚಿತ್ರಣ 2026 ಪ್ರಕಾರ, ವಿಶ್ವಸಂಸ್ಥೆ ಜಾಗತಿಕ ಆರ್ಥಿಕತೆಗೆ ಎಚ್ಚರಿಕೆ ನೀಡಿದೆ. 2026ರಲ್ಲಿ ಜಾಗತಿಕ ಬೆಳವಣಿಗೆ 2.7% ಕ್ಕೆ ಇಳಿಯುವ ಸಾಧ್ಯತೆ ಇದೆ, ಇದು 2025ರ 2.8% ಬೆಳವಣಿಗೆಯ ಹೋಲಿಕೆಗೆ ಸ್ವಲ್ಪ ಕಡಿಮೆ. ಜೊತೆಗೆ, ಅಮೆರಿಕದ ಸುಂಕ ನೀತಿಗಳು (Tariffs) ಮತ್ತು ರಾಜತಾಂತ್ರಿಕ ಸಂಘರ್ಷಗಳ ಪರಿಣಾಮದಿಂದ ಜಾಗತಿಕ ವ್ಯಾಪಾರ ಬೆಳವಣಿಗೆ 2.2% ಕ್ಕೆ ಕುಸಿಯುವ ಭೀತಿ ಇದೆ, ಇದು ವಿಶ್ವ ಆರ್ಥಿಕತೆಯ ಸ್ಥಿರತೆಗಾಗಿ ಪ್ರಮುಖ ಸವಾಲು ಆಗಿದೆ.

➤ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆ (UN-DESA) ಬಿಡುಗಡೆ ಮಾಡಿರುವ World Economic Situation and Prospects (WESP) 2026 ವರದಿಯ ಪ್ರಕಾರ, ಜಾಗತಿಕ ಅನಿಶ್ಚಿತತೆಗಳ ನಡುವೆಯೂ ಭಾರತವು ವಿಶ್ವದ

ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮಿದೆ. ವರದಿಯ ಮುಖ್ಯಾಂಶಗಳೆಂದರೆ, 2026ರಲ್ಲಿ ಭಾರತದ ಜಿಡಿಪಿ (GDP) ಬೆಳವಣಿಗೆಯು 6.6% ಆಗುವ ನಿರೀಕ್ಷೆಯಿದ್ದು, ದೇಶದ ಮೌಲ್ಯಸ್ಫೀತಿಯು (Inflation) 4.1% ಕ್ಕೆ ಇಳಿಕೆಯಾಗುವ ಮೂಲಕ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲಿದೆ. ನ್ಯೂಯಾರ್ಕ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಈ ಸಂಸ್ಥೆಯ ಪ್ರಸ್ತುತ ಮುಖ್ಯಸ್ಥರಾದ ಲಿ ಜುನ್ಹುವಾ ಅವರು ಈ ವರದಿಯನ್ನು ಮಂಡಿಸಿದ್ದು, ಸ್ಥಿರವಾದ ದೇಶೀಯ ಬಳಕೆ ಮತ್ತು ಬಲವಾದ ಸಾರ್ವಜನಿಕ ಹೂಡಿಕೆಗಳು ಭಾರತದ ಈ ಸಾಧನೆಗೆ ಪ್ರಮುಖ ಕಾರಣಗಳೆಂದು ಗುರುತಿಸಿದ್ದಾರೆ.

## ಆಂಧ್ರ ವಿಶ್ವವಿದ್ಯಾಲಯದಲ್ಲಿ ದ್ರೌಪದಿ ಮುರ್ಮು ಅವರ ಜೀವನಕಥೆಯ ವಿಶಿಷ್ಟ ಪುಸ್ತಕ ಬಿಡುಗಡೆ



➤ ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿರುವ ಆಂಧ್ರ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಜೀವನಾಧಾರಿತ ಪುಸ್ತಕವೊಂದು ವಿಶಿಷ್ಟ ಹಾಗೂ ಮನಕಲಕುವ ರೀತಿಯಲ್ಲಿ ಬಿಡುಗಡೆಯಾಯಿತು. ಈ ಪುಸ್ತಕವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ರಸ್ತೆ ಸ್ವಚ್ಛತೆ ಕಾರ್ಯ ನಿರ್ವಹಿಸುವ ಲಕ್ಷ್ಮಮ್ಮ ಎಂಬ ಮಹಿಳಾ ಸ್ವಚ್ಛತಾ ಕಾರ್ಮಿಕರು ಬಿಡುಗಡೆ ಮಾಡಿದ್ದು, ಈ ಘಟನೆ ದೇಶಾದ್ಯಂತ ಗಮನ ಸೆಳೆದಿದೆ. ಈ ಕಾರ್ಯಕ್ರಮವು ಕೇವಲ ಪುಸ್ತಕ ಬಿಡುಗಡೆ ಮಾತ್ರವಲ್ಲದೆ, ಕಾರ್ಮಿಕ ಗೌರವ, ಸಾಮಾಜಿಕ ಸಮಾನತೆ ಮತ್ತು ಮಾನವೀಯ ಮೌಲ್ಯಗಳ ಮಹತ್ವವನ್ನು ಬಿಂಬಿಸುವ ಶಕ್ತಿಶಾಲಿ ಸಂದೇಶವನ್ನೂ ನೀಡಿದೆ.

**➤ ಪುಸ್ತಕದ ಶೀರ್ಷಿಕೆ ಮತ್ತು ಲೇಖಕರು**

# ಪುಸ್ತಕದ ಹೆಸರು: "ಅಗ್ನಿ ಸರಸ್ಸುಲು ವಿಕಸಿಂಚಿನ ಕಮಲಂ – ದ್ರೌಪದಿ ಮುರ್ಮು"

- ಅರ್ಥ: 'ಅಗ್ನಿ ಕುಂಡದಂತಹ ಸಂಕಷ್ಟಗಳ ನಡುವೆ ಅರಳಿದ ಕಮಲ'.
- ಹಿನ್ನೆಲೆ: ದ್ರೌಪದಿ ಮುರ್ಮು ಅವರ ಜೀವನವು ವೈಯಕ್ತಿಕ ದುರಂತಗಳು, ಬಡತನ ಮತ್ತು ಸಾಮಾಜಿಕ ಸವಾಲುಗಳಿಂದ ಕೂಡಿದ್ದರೂ, ಅವರು ಅಚಲವಾಗಿ ನಿಂತು ದೇಶದ ಅತ್ಯುನ್ನತ 'ರಾಷ್ಟ್ರಪತಿ' ಸ್ಥಾನಕ್ಕೇರಿದರು. ಇದನ್ನು ಲೇಖಕರು ಬೆಂಕಿಯಲ್ಲಿ ಅರಳಿದ ಕಮಲಕ್ಕೆ ಹೋಲಿಸಿದ್ದಾರೆ.

# ಲೇಖಕರು : ಡಾ. ಯಾರ್ಲಗಡ್ಡ ಲಕ್ಷ್ಮೀ ಪ್ರಸಾದ್ ಅವರು ತೆಲುಗು ಮತ್ತು ಹಿಂದಿ ಸಾಹಿತ್ಯ ಲೋಕದ ನಡುವೆ ಸಮನ್ವಯಕಾರರಾಗಿ ಕೆಲಸ ಮಾಡುತ್ತಿರುವ ಬಹುಮುಖ ಪ್ರತಿಭೆಯ ಸಾಹಿತಿಯಾಗಿದ್ದು, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಭಾರತ ಸರ್ಕಾರದ ಪ್ರತಿಷ್ಠಿತ ಪದ್ಮಶ್ರೀ (2003) ಮತ್ತು ಪದ್ಮಭೂಷಣ (2016) ಗೌರವಗಳಿಗೆ ಪಾತ್ರರಾಗಿದ್ದಾರೆ. ಮಾಜಿ ರಾಜ್ಯಸಭಾ ಸದಸ್ಯರಾಗಿ ರಾಜಕೀಯದಲ್ಲಿ ಸಕ್ರಿಯರಾಗಿದ್ದರೂ ತಮ್ಮ ಅಧಿಕಾರವನ್ನು ಭಾಷೆ ಮತ್ತು ಶಿಕ್ಷಣದ ಉನ್ನತಿಗಾಗಿ ಬಳಸಿದ ಅವರು, ಪ್ರಸ್ತುತ ವಿಶ್ವ ಹಿಂದಿ ಪರಿಷತ್‌ನ ಅಧ್ಯಕ್ಷರಾಗಿ ದಕ್ಷಿಣ ಭಾರತದಲ್ಲಿ ಹಿಂದಿ ಭಾಷೆಯ ಪ್ರಚಾರ ಹಾಗೂ ಸಾಹಿತ್ಯಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆಂಧ್ರಪ್ರದೇಶ ಹಿಂದಿ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಇವರು, ಇದೀಗ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಜೀವನಚರಿತ್ರೆಯನ್ನು ರಚಿಸುವ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ಸ್ಫೂರ್ತಿ ನೀಡುವ ಮತ್ತು ಭಾರತೀಯ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

➤ ವಿಶಿಷ್ಟ ಪುಸ್ತಕ ಬಿಡುಗಡೆ ಸ್ಥಳ : ಆಂಧ್ರ ವಿಶ್ವವಿದ್ಯಾಲಯದ ಆವರಣದಲ್ಲಿನ ಒಂದು ಮರದ ಕೆಳಗೆ ಬಿಡುಗಡೆ ಮಾಡಲಾಯಿತು.ಈ ಸರಳ ಹಾಗೂ ಅರ್ಥಪೂರ್ಣ ಸ್ಥಳ ಆಯ್ಕೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಜೀವನದ ಸರಳತೆ ಮತ್ತು ಭೂಮಿಕೆಗೆ ಹತ್ತಿರದ ವ್ಯಕ್ತಿತ್ವವನ್ನು ಪ್ರತಿಬಿಂಬಿಸಿದೆ.

ಪುಸ್ತಕ ಬಿಡುಗಡೆಗೆ ಲಕ್ಷ್ಮಮ್ಮ ಅವರನ್ನು ಆಯ್ಕೆ ಮಾಡಿರುವುದು ಉದ್ದೇಶಪೂರ್ವಕ ನಿರ್ಧಾರ ಎಂದು ಲೇಖಕರು ತಿಳಿಸಿದ್ದಾರೆ. ಇದರ ಮೂಲಕ:ಪ್ರತಿಯೊಂದು ಕೆಲಸಕ್ಕೂ ಗೌರವ, ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಮಾನ, ಸಮಾಜದಲ್ಲಿ ಸಮಾನತೆ ಮತ್ತು ಒಳಗೊಂಡಿಕೆ ಎಂಬ ಮೌಲ್ಯಗಳನ್ನು ಸಾರಲಾಗಿದೆ.

➤ ಲೇಖಕರ ಪ್ರಕಾರ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಜೀವನಯಾನವು ಮಹಿಳೆಯರು, ಆದಿವಾಸಿ ಸಮುದಾಯಗಳು, ಅಂಚಿನಲ್ಲಿರುವ ಹಾಗೂ ಹಿಂದುಳಿದ ವರ್ಗಗಳು ಮತ್ತು ಬಡತನ-ಸಂಕಷ್ಟಗಳನ್ನು ಎದುರಿಸುತ್ತಿರುವ ಜನರಿಗೆ ಮಹತ್ತರ ಪ್ರೇರಣೆಯಾಗಿದೆ. ಈ ವಿಶಿಷ್ಟ ಪುಸ್ತಕ ಬಿಡುಗಡೆ ಕಾರ್ಯಕ್ರಮವು ಅವರ ಸರಳ ಹಿನ್ನೆಲೆ, ವಿನಯ, ನಿರಂತರ ಹೋರಾಟ ಮತ್ತು ಆತ್ಮಬಲವನ್ನು ಪ್ರತಿಬಿಂಬಿಸುವುದರ ಜೊತೆಗೆ, ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಕೆಲಸಕ್ಕೂ ಗೌರವ ಸಲ್ಲಿಸಬೇಕೆಂಬ ಹಾಗೂ ಕಾರ್ಮಿಕ ಗೌರವದ ಮಹತ್ವವನ್ನು ಮತ್ತೊಮ್ಮೆ ದೃಢವಾಗಿ ಒತ್ತಿ ಹೇಳುವ ಸಾಮಾಜಿಕ ಸಂದೇಶವನ್ನು ಸಾರುತ್ತದೆ.

## 12 Jan 2026

## ಬಾಹ್ಯಾಕಾಶದಲ್ಲಿ ವೈದ್ಯಕೀಯ ತುರ್ತು ಪರಿಸ್ಥಿತಿ: 25 ವರ್ಷಗಳಲ್ಲೇ ಮೊದಲ ಬಾರಿಗೆ ನಾಸಾದಿಂದ 'ಕ್ರೂ-11' ಕಾರ್ಯಾಚರಣೆ ಅವಧಿಗೆ ಮುನ್ನವೇ ಅಂತ್ಯ!



➤ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ (ISS) ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಗಗನಯಾತ್ರಿಯೊಬ್ಬರ ವೈದ್ಯಕೀಯ ಸಮಸ್ಯೆಯ ಕಾರಣದಿಂದ ಇಡೀ ಮಿಷನ್ ಅನ್ನು ನಿಗದಿತ ಅವಧಿಗಿಂತ ಒಂದು ತಿಂಗಳು ಮುಂಚಿತವಾಗಿ ಕೊನೆಗೊಳಿಸಲು ನಾಸಾ (NASA) ನಿರ್ಧರಿಸಿದೆ. ಕ್ರೂ-11 (Crew-11) ತಂಡದ ನಾಲ್ವರು ಸದಸ್ಯರು ಜನವರಿ 14, 2026ರಂದು ಭೂಮಿಗೆ ಮರಳಲಿದ್ದಾರೆ.

ಜೂನ್ 2025ರಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದ ಕ್ರೂ-11 ತಂಡವು ಫೆಬ್ರವರಿ ಅಂತ್ಯದವರೆಗೆ ISS ನಲ್ಲಿ ಉಳಿಯಬೇಕಿತ್ತು. ಆದರೆ, ಕಳೆದ ವಾರ ತಂಡದ ಒಬ್ಬ ಅಂತರಿಕ್ಷಯಾತ್ರಿಯಲ್ಲಿ ಕಾಣಿಸಿಕೊಂಡ ವೈದ್ಯಕೀಯ ಸಮಸ್ಯೆಯಿಂದಾಗಿ ಜನವರಿ 8ರಂದು ನಡೆಯಬೇಕಿದ್ದ ಬಾಹ್ಯಾಕಾಶ ನಡಿಗೆಯನ್ನು (Spacewalk) ರದ್ದುಗೊಳಿಸಲಾಗಿತ್ತು. ಈಗ ಮುನ್ನೆಚ್ಚರಿಕಾ ಕ್ರಮವಾಗಿ ಇಡೀ ತಂಡವನ್ನು ವಾಪಸ್ ಕರೆಸಿಕೊಳ್ಳಲಾಗುತ್ತಿದೆ.

➤ ನಾಸಾ ನೀಡಿರುವ ಮಾಹಿತಿ ಪ್ರಕಾರ, ಬುಧವಾರ (January-14)ಸಂಜೆ 5 ಗಂಟೆ (ಅಮೆರಿಕದ ಪೂರ್ವ ಕಾಲಮಾನ – ET) ನಂತರ ಕ್ರೂ-11 ಯಾನವು ISS ನಿಂದ ಬೇರ್ಪಡುವ ಸಾಧ್ಯತೆ ಇದೆ. ಕ್ಯಾಲಿಫೋರ್ನಿಯಾ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಇಳಿಯುವ ಸ್ಥಳದ ಹವಾಮಾನ ಅನುಕೂಲಕರವಾಗಿದ್ದರೆ ಈ ಕಾರ್ಯಾಚರಣೆ ನಡೆಯಲಿದೆ.

➤ ಈ ವಾರ ಆರಂಭದಲ್ಲಿ ಕ್ರೂ-11 ತಂಡದ ಒಬ್ಬ ಅಂತರಿಕ್ಷಯಾತ್ರಿ ವೈದ್ಯಕೀಯ ಸಮಸ್ಯೆ ಅನುಭವಿಸಿದ್ದಾರೆ. ಆದರೆ ವೈದ್ಯಕೀಯ ಗೌಪ್ಯತೆಯ ಕಾರಣದಿಂದ ಸಮಸ್ಯೆಯ ವಿವರಗಳು ಹಾಗೂ ಅಂತರಿಕ್ಷಯಾತ್ರಿಯ ಗುರುತು ಪ್ರಕಟಿಸಲಾಗಿಲ್ಲ. ನಾಸಾ ಅಧಿಕಾರಿಗಳ ಪ್ರಕಾರ, ಪರಿಸ್ಥಿತಿ ಸ್ಥಿರವಾಗಿದ್ದು ಇದು ತುರ್ತು ಸ್ಥಳಾಂತರವಲ್ಲ; ಮುನ್ನೆಚ್ಚರಿಕಾ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ

➤ ನಾಸಾ ಆಡಳಿತಾಧಿಕಾರಿ ಜಾರೆಡ್ ಐಸಾಕ್‌ಮ್ಯಾನ್ ಅವರು ಮಾತನಾಡಿ, ಅಂತರಿಕ್ಷಯಾತ್ರಿಗಳ ಸುರಕ್ಷತೆ ದೃಷ್ಟಿಯಿಂದ ಕ್ರೂ-11 ತಂಡವನ್ನು ಯೋಜಿತ ಅವಧಿಗೆ ಮುನ್ನವೇ ಭೂಮಿಗೆ ಕರೆತರುವುದೇ ಒಳಿತೆಂದು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ.

**➤ ಭೂಮಿಗೆ ಮರಳಲಿರುವ ಕ್ರೂ-11 ಸದಸ್ಯರು:**

=> ನಾಸಾ ಅಂತರಿಕ್ಷಯಾತ್ರಿಗಳು: ಝೀನಾ ಕಾರ್ಡ್‌ಮನ್, ಮೈಕ್ ಫಿಂಕೆ

=> ಜಪಾನ್ ಅಂತರಿಕ್ಷಯಾತ್ರಿ: ಕಿಮಿಯಾ ಯುಯಿ

=> ರಷ್ಯಾ ಕೋಸ್ಮೋನಾಟ್: ಒಲೆಗ್ ಪ್ಲಾಟೋನೋವ್

ಈ ತಂಡವು 2025ರ ಆಗಸ್ಟ ಆರಂಭದಲ್ಲಿ ISS ಗೆ ಆಗಮಿಸಿದ್ದು, ಮೂಲತಃ ಫೆಬ್ರುವರಿ ಅಂತ್ಯದವರೆಗೆ ಬಾಹ್ಯಾಕಾಶ ನಿಲ್ದಾಣದಲ್ಲಿ ಉಳಿಯಬೇಕಾಗಿತ್ತು.

## RBI ವರದಿ: ಭಾರತದ ವಿದೇಶಿ ವಿನಿಮಯ ಭಂಡಾರ 686.8 ಬಿಲಿಯನ್ ಡಾಲರ್‌ಗೆ ಕುಸಿತ.



➤ ಭಾರತೀಯ ರಿಸರ್ವ್ ಬ್ಯಾಂಕ್ (RBI) ಬಿಡುಗಡೆ ಮಾಡಿರುವ ಇತ್ತೀಚಿನ ಅಂಕಿಅಂಶಗಳ ಪ್ರಕಾರ, ದೇಶದ ವಿದೇಶಿ ವಿನಿಮಯ ಭಂಡಾರವು ಗಮನಾರ್ಹ ಕುಸಿತವನ್ನು ಕಂಡಿದೆ. ಜನವರಿ 2, 2026ಕ್ಕೆ ಅಂತ್ಯಗೊಂಡ ವಾರದಲ್ಲಿ ಭಂಡಾರವು 9.809 ಬಿಲಿಯನ್ ಡಾಲರ್ ಇಳಿಕೆಯಾಗಿದ್ದು, ಒಟ್ಟು ಮೊತ್ತ 686.801 ಬಿಲಿಯನ್ ಡಾಲರ್‌ಗೆ ತಲುಪಿದೆ.

➤ ವಿದೇಶಿ ಕರೆನ್ಸಿ ಆಸ್ತಿಗಳಲ್ಲಿ (FCA) ಇಳಿಕೆ: ವಿದೇಶಿ ವಿನಿಮಯ ಭಂಡಾರದ ಅತಿದೊಡ್ಡ ಭಾಗವಾಗಿರುವ ವಿದೇಶಿ ಕರೆನ್ಸಿ ಆಸ್ತಿಗಳು ಈ ವಾರದಲ್ಲಿ 7.622 ಬಿಲಿಯನ್ ಡಾಲರ್ ಇಳಿಕೆಯಾಗಿ, 551.99 ಬಿಲಿಯನ್ ಡಾಲರ್‌ಗೆ ತಲುಪಿವೆ. ಈ ಕುಸಿತಕ್ಕೆ ಪ್ರಮುಖ **ಕಾರಣಗಳು:**

=> ಜಾಗತಿಕ ಕರೆನ್ಸಿ ಏರಿಳಿತ: ಅಮೆರಿಕದ ಡಾಲರ್ ಎದುರು ಯುರೋ, ಪೌಂಡ್ ಮತ್ತು ಯೆನ್‌ನಂತಹ ಇತರ ಪ್ರಮುಖ ಕರೆನ್ಸಿಗಳ ಮೌಲ್ಯದಲ್ಲಿನ ವ್ಯತ್ಯಾಸವು FCA ಮೇಲೆ ನೇರ ಪರಿಣಾಮ ಬೀರಿದೆ.

=> ಆರ್‌ಬಿಐ ಹಸ್ತಕ್ಷೇಪ: ರೂಪಾಯಿ ಮೌಲ್ಯದ ತೀವ್ರ ಕುಸಿತವನ್ನು ತಡೆಯಲು ಆರ್‌ಬಿಐ ಮಾರುಕಟ್ಟೆಯಲ್ಲಿ ಡಾಲರ್ ಮಾರಾಟ ಮಾಡಿರಬಹುದು ಎಂಬ ಸಾಧ್ಯತೆಯನ್ನು ತಜ್ಞರು ಅಂದಾಜಿಸುತ್ತಾರೆ.

➤ ಚಿನ್ನದ ಭಂಡಾರ ಮತ್ತು ಇತರ ಅಂಶಗಳು:

=> ಚಿನ್ನದ ಭಂಡಾರ: ಹೂಡಿಕೆದಾರರ ನೆಚ್ಚಿನ ಆಸ್ತಿಯಾಗಿರುವ ಚಿನ್ನದ ಭಂಡಾರದ ಮೌಲ್ಯವು 2.058 ಬಿಲಿಯನ್ ಡಾಲರ್ ಕಡಿಮೆಯಾಗಿದ್ದು, 111.262 ಬಿಲಿಯನ್ ಡಾಲರ್‌ಗೆ ಕುಸಿದಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಇಳಿಕೆಯಾದಾಗ ಈ ಮೌಲ್ಯವೂ ಕಡಿಮೆಯಾಗುತ್ತದೆ.

=> SDR ಮತ್ತು IMF ರಿಸರ್ವ್: ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (IMF) ವಿಶೇಷ ಡ್ರಾಯಿಂಗ್ ಹಕ್ಕುಗಳು (SDRs) 25 ಮಿಲಿಯನ್ ಡಾಲರ್ ಇಳಿಕೆಯಾಗಿ 18.778 ಬಿಲಿಯನ್ ಡಾಲರ್ ಆಗಿದೆ. ಹಾಗೆಯೇ, IMFನಲ್ಲಿನ ಭಾರತದ ರಿಸರ್ವ್ ಸ್ಥಾನವೂ 105 ಮಿಲಿಯನ್ ಡಾಲರ್ ಇಳಿಕೆಯಾಗಿ 4.771 ಬಿಲಿಯನ್ ಡಾಲರ್‌ಗೆ ತಲುಪಿದೆ.

➤ ಹಿಂದಿನ ವಾರದ ತುಲನೆ: ಕಳೆದ ಡಿಸೆಂಬರ್ ಕೊನೆಯ ವಾರದಲ್ಲಿ ಭಂಡಾರವು 3.293 ಬಿಲಿಯನ್ ಡಾಲರ್ ಏರಿಕೆ ಕಂಡು 696.61 ಬಿಲಿಯನ್ ಡಾಲರ್‌ಗೆ ತಲುಪುವ ಮೂಲಕ ಸಕಾರಾತ್ಮಕ ಹಾದಿಯಲ್ಲಿತ್ತು. ಆದರೆ, ಹೊಸ ವರ್ಷದ ಆರಂಭದ ವಾರದಲ್ಲೇ ಭಾರಿ ಕುಸಿತ ಕಂಡಿರುವುದು ಆರ್ಥಿಕ ವಲಯದಲ್ಲಿ ಕುತೂಹಲ ಮೂಡಿಸಿದೆ.

➤ ವಿದೇಶಿ ವಿನಿಮಯ ಭಂಡಾರವು ಒಂದು ದೇಶದ ಆರ್ಥಿಕ ಭದ್ರತೆಯ ಸಂಕೇತವಾಗಿದೆ. ಆಮದು ವೆಚ್ಚವನ್ನು ಭರಿಸಲು ಮತ್ತು ಆರ್ಥಿಕ ಸಂಕಷ್ಟದ ಸಮಯದಲ್ಲಿ ದೇಶವನ್ನು ರಕ್ಷಿಸಲು ಇದು ಸಹಕಾರಿ. ಇತ್ತೀಚಿನ ಕುಸಿತದ ಹೊರತಾಗಿಯೂ, ಭಾರತವು ವಿಶ್ವದ ಪ್ರಬಲ ವಿದೇಶಿ ವಿನಿಮಯ ಭಂಡಾರ ಹೊಂದಿರುವ ದೇಶಗಳಲ್ಲಿ ಒಂದಾಗಿ ಮುಂದುವರಿದಿದೆ. ಜಾಗತಿಕ ಮಾರುಕಟ್ಟೆಯ ಅಸ್ಥಿರತೆ ಮತ್ತು ತೈಲ ಬೆಲೆಗಳಲ್ಲಿನ ಏರಿಳಿತಗಳು ಮುಂದಿನ ದಿನಗಳಲ್ಲಿ ಈ ಭಂಡಾರದ ಮೇಲೆ ಮತ್ತಷ್ಟು ಪರಿಣಾಮ ಬೀರುವ ಸಾಧ್ಯತೆ ಇದೆ.

## ಜಾಗತಿಕ ವೇದಿಕೆಯಲ್ಲಿ ಆಕಾಶ ಏರ್: IATA ಸದಸ್ಯತ್ವ ಪಡೆದ ಭಾರತದ ಐದನೇ ವಿಮಾನಯಾನ




➤ ಭಾರತದ ಅತ್ಯಂತ ಯುವ ವಿಮಾನಯಾನ ಸಂಸ್ಥೆಯಾದ ಆಕಾಶ ಏರ್ (Akasa Air) ಅಂತರರಾಷ್ಟ್ರೀಯ ವಿಮಾನ ಸಾರಿಗೆ ಸಂಸ್ಥೆ (International Air Transport Association – IATA) ಯ ಅಧಿಕೃತ ಸದಸ್ಯತ್ವವನ್ನು ಪಡೆದಿದೆ. ಇದರಿಂದ ಆಕಾಶ ಏರ್, IATAಗೆ ಸೇರ್ಪಡೆಗೊಂಡ ಭಾರತದ ಐದನೇ ವಿಮಾನಯಾನ ಸಂಸ್ಥೆ ಎಂಬ ಗೌರವಕ್ಕೆ ಪಾತ್ರವಾಗಿದೆ.

➤ IATA (IATA Operational Safety Audit) ಜಾಗತಿಕ ಮಟ್ಟದಲ್ಲಿ 360ಕ್ಕೂ ಹೆಚ್ಚು ವಿಮಾನಯಾನ ಸಂಸ್ಥೆಗಳನ್ನು ಪ್ರತಿನಿಧಿಸುವ ಪ್ರಮುಖ ಸಂಸ್ಥೆಯಾಗಿದ್ದು, ಜಗತ್ತಿನ 80% ಕ್ಕೂ ಹೆಚ್ಚು ವಿಮಾನ ಸಂಚಾರವನ್ನು ನಿರ್ವಹಿಸುತ್ತದೆ. ಆಕಾಶ ಏರ್ ಈ ಸದಸ್ಯತ್ವ ಪಡೆಯಲು ಅಗತ್ಯವಿರುವ IOSA (IATA Operational Safety Audit) ಸುರಕ್ಷತಾ ಪರಿಶೀಲನೆಯನ್ನು 2025ರ ಡಿಸೆಂಬರ್‌ನಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇದು ವಿಮಾನಯಾನದ ಜಾಗತಿಕ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿದೆ ಎಂಬುದನ್ನು ಸೂಚಿಸುತ್ತದೆ.

➤ ಆಕಾಶ ಏರ್ ಅನ್ನು ವಿನಯ್ ದುಬೆ ಸ್ಥಾಪಿಸಿದ್ದು, ಖ್ಯಾತ ಹೂಡಿಕೆದಾರ ದಿವಂಗತ ರಾಕೇಶ್ ಝುಂಜುನ್ವಾಲಾ ಅವರು ಸುಮಾರು 40% ಹೂಡಿಕೆಗೆ 35 ಮಿಲಿಯನ್ ಡಾಲರ್ ಹೂಡಿಕೆ ಮಾಡಿದ್ದರು. ಸಂಸ್ಥೆಯ ಮೊದಲ ವಾಣಿಜ್ಯ ವಿಮಾನಯಾನ ಸೇವೆ ಆಗಸ್ಟ 7, 2022 ರಂದು ಆರಂಭವಾಯಿತು.ಇಂದಿನವರೆಗೆ ಆಕಾಶ ಏರ್ 23 ಮಿಲಿಯನ್‌ಕ್ಕೂ ಹೆಚ್ಚು ಪ್ರಯಾಣಿಕರಿಗೆ ಸೇವೆ ಒದಗಿಸಿದ್ದು, ಭಾರತದಲ್ಲಿನ 26 ದೇಶೀಯ ಮತ್ತು 6 ಅಂತರರಾಷ್ಟ್ರೀಯ ನಗರಗಳಿಗೆ ಸಂಪರ್ಕ ಕಲ್ಪಿಸಿದೆ.

**➤ IATA ಸದಸ್ಯತ್ವದಿಂದ ಆಕಾಶ ಏರ್‌ಗೆ:**

=> ಜಾಗತಿಕ ವಿಮಾನಯಾನ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶ

=> ವಿಮಾನಯಾನ ಕ್ಷೇತ್ರದ ಉತ್ತಮ ಕಾರ್ಯಪದ್ಧತಿಗಳ ರೂಪುಗೊಳಿಸುವಿಕೆಯಲ್ಲಿ ಪಾಲ್ಗೊಳ್ಳುವಿಕೆ

=> ಸುರಕ್ಷತೆ, ಡಿಜಿಟಲ್ ಬೆಳವಣಿಗೆ ಮತ್ತು ಸಸ್ಥಿರ ವಿಮಾನಯಾನದ ಅಭಿವೃದ್ಧಿ

=> ಜಾಗತಿಕ ಮಟ್ಟದಲ್ಲಿ ಸಂಸ್ಥೆಯ ನಂಬಿಕೆ ಮತ್ತು ಗೌರವ ಹೆಚ್ಚಳ

IATA ಏಷ್ಯಾ-ಪೆಸಿಫಿಕ್ ಉಪಾಧ್ಯಕ್ಷ ಶೆಲ್ಡನ್ ಹೀ ಅವರು, ಭಾರತದ ವಿಮಾನಯಾನ ಕ್ಷೇತ್ರವು 77 ಲಕ್ಷ ಉದ್ಯೋಗಗಳನ್ನು ಬೆಂಬಲಿಸುತ್ತಿದ್ದು, 53.6 ಬಿಲಿಯನ್ ಡಾಲರ್ ಆರ್ಥಿಕ ಕೊಡುಗೆ ನೀಡುತ್ತಿದೆ ಎಂದು ಹೇಳಿದ್ದಾರೆ.

➤ ಭಾರತೀಯ ವಿಮಾನಯಾನ ಸಂಸ್ಥೆಗಳು: ಆಕಾಶ ಏರ್ ಸೇರ್ಪಡೆಯೊಂದಿಗೆ, IATA ಸದಸ್ಯತ್ವ ಹೊಂದಿರುವ ಭಾರತೀಯ **ವಿಮಾನಯಾನ ಸಂಸ್ಥೆಗಳು:**

1. ಏರ್ ಇಂಡಿಯಾ
2. ಏರ್ ಇಂಡಿಯಾ ಎಕ್ಸ್‌ಪ್ರೆಸ್

3. ಇಂಡಿಗೋ
4. ಆಕಾಶ ಏರ್
5. ಸ್ಪೈಸ್‌ಜೆಟ್

➤ ಭವಿಷ್ಯದ ಯೋಜನೆಗಳು: ಆಕಾಶ ಏರ್ 2030ರೊಳಗೆ ಜಗತ್ತಿನ ಟಾಪ್ 30 ವಿಮಾನಯಾನ ಸಂಸ್ಥೆಗಳಲ್ಲಿ ಒಂದಾಗುವ ಗುರಿ ಹೊಂದಿದೆ. ಮುಂದಿನ 10 ವರ್ಷಗಳಲ್ಲಿ 226 ಬೋಯಿಂಗ್ 737 MAX ವಿಮಾನಗಳನ್ನು ಕಾರ್ಯಾಚರಣೆಗೆ ತರಲು ಯೋಜಿಸಿದೆ. ಪ್ರಸ್ತುತ ಸಂಸ್ಥೆಯ ಬಳಿ 31 ವಿಮಾನಗಳಿದ್ದು, ಈ ವರ್ಷ ಅಂತ್ಯದೊಳಗೆ 35ಕ್ಕೆ ಏರಿಸಲು ಉದ್ದೇಶಿಸಿದೆ. FY26ರಲ್ಲಿ ಸಂಸ್ಥೆಯ ಸಾಮರ್ಥ್ಯವು 30% ಕ್ಕಿಂತ ಹೆಚ್ಚು ವೃದ್ಧಿಯಾಗುವ ನಿರೀಕ್ಷೆಯಿದೆ. ಅಲ್ಲದೇ, ಪೈಲಟ್‌ಗಳ ಸಂಖ್ಯೆ 770–775ಕ್ಕೆ ಏರಲಿದೆ.

➤ FY25ರಲ್ಲಿ ಆಕಾಶ ಏರ್ ಆರ್ಥಿಕ ಸಾಧನೆ:
- ಆದಾಯದಲ್ಲಿ 49% ಬೆಳವಣಿಗೆ
- EBITDA ಮಾರುಜಿನ್‌ನಲ್ಲಿ 50% ಸುಧಾರಣೆ
- ಲೋಡ್ ಫ್ಯಾಕ್ಟರ್ 87% ಮೀರಿದೆ
- ಸಾಮರ್ಥ್ಯದಲ್ಲಿ 48% ಏರಿಕೆ
- ಇಂಧನವಲ್ಲದ ಆಸನ ವೆಚ್ಚದಲ್ಲಿ 7% ಇಳಿಕೆ

ಇವು ಸಂಸ್ಥೆಯ ಪರಿಣಾಮಕಾರಿ ವೆಚ್ಚ ನಿರ್ವಹಣೆ ಮತ್ತು ವೇಗದ ಬೆಳವಣಿಗೆಯನ್ನು ತೋರಿಸುತ್ತವೆ.

➤ ಕಾರ್ಗೋ ಮತ್ತು ಹೆಚ್ಚುವರಿ ಸೇವೆಗಳು: ಆಕಾಶ ಏರ್ ಪ್ರಯಾಣಿಕ ಸೇವೆಗಳ ಹೊರತಾಗಿ 25ಕ್ಕೂ ಹೆಚ್ಚು ಹೆಚ್ಚುವರಿ ಸೇವೆಗಳನ್ನು ಒದಗಿಸುತ್ತಿದೆ. 2025ರ ಮಾರ್ಚ್ ವೇಳೆಗೆ ಸಂಸ್ಥೆ ಸುಮಾರು 1 ಲಕ್ಷ ಟನ್ ಕಾರ್ಗೋ ಸಾಗಣೆ ಮಾಡಿದ್ದು, ಭಾರತದ ವಿಮಾನ ಕಾರ್ಗೋ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಪಡೆದಿದೆ. 1,150ಕ್ಕೂ ಹೆಚ್ಚು ಕಾರ್ಪೊರೇಟ್ ಪಾಲುದಾರರೊಂದಿಗೆ ಸಹಕಾರ ಹೊಂದಿದ್ದು, ದೀರ್ಘಕಾಲಿಕ ಸ್ಥಿರತೆಗೆ ಹೊಸ ಹೂಡಿಕೆಗಳನ್ನು ಸಹ ಪಡೆದಿದೆ.

## ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ಡಿಜಿಟಲ್ ವೇಗ: 'ಪಂಖುಡಿ' ಪೋರ್ಟಲ್‌ಗೆ ಚಾಲನೆ.




➤ ಜನವರಿ 10, 2026 ರಂದು ಕೇಂದ್ರ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಮಹಿಳೆಯರು ಮತ್ತು ಮಕ್ಕಳ ಸಬಲೀಕರಣಕ್ಕಾಗಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (CSR) ಮತ್ತು ಸಾರ್ವಜನಿಕ-ಖಾಸಗಿ ಸಹಭಾಗಿತ್ವವನ್ನು ಉತ್ತೇಜಿಸಲು 'ಪಂಖುಡಿ' (PANKHUDI) ಎಂಬ ನವೀನ ಡಿಜಿಟಲ್ ಪೋರ್ಟಲ್ ಅನ್ನು ಲೋಕಾರ್ಪಣೆ ಮಾಡಿದೆ. ಕೇಂದ್ರ ಸಚಿವೆ ಶ್ರೀಮತಿ ಅನ್ನಪೂರ್ಣಾ ದೇವಿ ಅವರು ಈ ಪೋರ್ಟಲ್‌ಗೆ ಚಾಲನೆ ನೀಡಿದರು.

➤ 'ಪಂಖುಡಿ' ಪೋರ್ಟಲ್ ಒಂದು ಏಕಗವಾಕ್ಷಿ (Single Window) ಡಿಜಿಟಲ್ ವೇದಿಕೆಯಾಗಿದ್ದು, ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಕೆಲಸ ಮಾಡಲು ಇಚ್ಛಿಸುವ ವೈಯಕ್ತಿಕ ದಾನಿಗಳು, ಅನಿವಾಸಿ ಭಾರತೀಯರು (NRIs), ಸ್ವಯಂಸೇವಾ ಸಂಸ್ಥೆಗಳು (NGOs) ಮತ್ತು ಕಾರ್ಪೊರೇಟ್ ಸಂಸ್ಥೆಗಳನ್ನು ಸರ್ಕಾರದೊಂದಿಗೆ ಜೋಡಿಸುತ್ತದೆ.

**➤ ಪೋರ್ಟಲ್‌ನ ಪ್ರಮುಖ ಉದ್ದೇಶಗಳು:**

=> ಪಾರದರ್ಶಕತೆ: CSR ಅನುದಾನ ಮತ್ತು ದಾನಿಗಳ ಕೊಡುಗೆಗಳನ್ನು ನೇರವಾಗಿ ಯೋಜನೆಗಳಿಗೆ ತಲುಪಿಸುವುದು ಮತ್ತು ಅದರ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು.

=> ಸಂಯೋಜಿತ ವೇದಿಕೆ: ದಾನಿಗಳು, ಎನ್‌ಜಿಒಗಳು ಮತ್ತು ಸರ್ಕಾರಿ ಸಂಸ್ಥೆಗಳನ್ನು ಒಂದೇ ಸೂರಿನಡಿ ತರುವುದು.

=> ನೇರ ಸಹಭಾಗಿತ್ವ: ಸರ್ಕಾರದ ಪ್ರಮುಖ ಯೋಜನೆಗಳೊಂದಿಗೆ ಖಾಸಗಿ ಸಹಭಾಗಿತ್ವವನ್ನು (PPP) ಬಲಪಡಿಸುವುದು.

=> ನಗದು ರಹಿತ ವ್ಯವಹಾರ: ಹಣಕಾಸಿನ ಪಾರದರ್ಶಕತೆಗಾಗಿ ಎಲ್ಲಾ ಕೊಡುಗೆಗಳನ್ನು ಕೇವಲ ಡಿಜಿಟಲ್ ಅಥವಾ ನಗದು ರಹಿತ ವಿಧಾನದ ಮೂಲಕವೇ ಸ್ವೀಕರಿಸುವುದು.

**➤ ಈ ಪೋರ್ಟಲ್ ಮೂಲಕ ಸಚಿವಾಲಯದ ಮೂರು ಪ್ರಮುಖ 'ಮಿಷನ್' ಗಳ ಅನುಷ್ಠಾನಕ್ಕೆ ವೇಗ ಸಿಗಲಿದೆ:**

1. ಮಿಷನ್ ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0: ಪೌಷ್ಟಿಕಾಂಶದ ಅಭಿವೃದ್ಧಿ.
2. ಮಿಷನ್ ವಾತ್ಸಲ್ಯ: ಮಕ್ಕಳ ರಕ್ಷಣೆ ಮತ್ತು ಕಲ್ಯಾಣ.
3. ಮಿಷನ್ ಶಕ್ತಿ: ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣ.

**➤ ಪ್ರಮುಖ ಪ್ರಯೋಜನಗಳು:**


=> ಮೂಲಸೌಕರ್ಯ ಸುಧಾರಣೆ: ದೇಶದ 14 ಲಕ್ಷ ಅಂಗನವಾಡಿಗಳು, 5000 ಮಕ್ಕಳ ಆರೈಕೆ ಕೇಂದ್ರಗಳು ಮತ್ತು 800 ಒನ್ ಸ್ಟಾಪ್ ಸೆಂಟರ್‌ಗಳ (OSCs) ಗುಣಮಟ್ಟ ಸುಧಾರಿಸಲು ಇದು ನೆರವಾಗಲಿದೆ.

=> ವಿಷಯಾಧಾರಿತ ಕ್ಷೇತ್ರಗಳು: ಆರೋಗ್ಯ, ಶಿಕ್ಷಣ (ECCE), ಮಕ್ಕಳ ಪುನರ್ವಸತಿ ಮತ್ತು ಮಹಿಳೆಯರ ಸುರಕ್ಷತೆಯ ಮೇಲೆ ವಿಶೇಷ ಗಮನ ಹರಿಸಲಾಗುತ್ತದೆ.

=> ರಿಯಲ್-ಟೈಮ್ ಟ್ರ್ಯಾಕಿಂಗ್: ಯೋಜನೆಗಳ ಪ್ರಗತಿ ಮತ್ತು ಹೂಡಿಕೆಗಳ ಮೇಲೆ ನಿರಂತರ ನಿಗಾ ಇಡಲು ಇದು ಅನುಕೂಲಕರವಾಗಿದೆ.

➤ ಈ ತಂತ್ರಜ್ಞಾನ ಆಧಾರಿತ ಉಪಕ್ರಮವು ಮಹಿಳಾ ಸಬಲೀಕರಣ ಮತ್ತು ಮಕ್ಕಳ ಪೋಷಣೆಯ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆಯನ್ನು ಆಕರ್ಷಿಸುವ ಮೂಲಕ ಸಾಮಾಜಿಕ ಬದಲಾವಣೆಗೆ ವೇಗ ನೀಡಲಿದೆ.

## ಜನವರಿ 12 : ರಾಷ್ಟ್ರೀಯ ಯುವ ದಿನ




* ದೇಶದ ಅತ್ಯಂತ ಪ್ರಭಾವಶಾಲಿ ತತ್ವಜ್ಞಾನಿ, ಆಧ್ಯಾತ್ಮಿಕ ನಾಯಕ ಮತ್ತು ಸಾಮಾಜಿಕ ಸುಧಾರಕರಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಜನವರಿ 12ನ್ನು ಭಾರತದಲ್ಲಿ ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುತ್ತದೆ.

* **ರಾಷ್ಟ್ರೀಯ ಯುವ ದಿನ 2026ರ ಥೀಮ್ : "ನಿಮ್ಮನ್ನು ನೀವು ಜಾಗೃತಗೊಳಿಸಿ, ಜಗತ್ತಿನ ಮೇಲೆ ಪ್ರಭಾವ ಬೀರಿ(Ignite the Self, Impact the World)" ಎಂಬುದು ಥೀಮ್ ಆಗಿದೆ.**

* ಭಾರತದ ಸರ್ವಕಾಲಿಕ ಶ್ರೇಷ್ಠ ಚಿಂತಕ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ಗೌರವಿಸುವ ಸಲುವಾಗಿ ಭಾರತ ಸರ್ಕಾರವು 1984ರಲ್ಲಿ ಜನವರಿ 12ನ್ನು 'ರಾಷ್ಟ್ರೀಯ ಯುವ ದಿನ' ಎಂದು ಅಧಿಕೃತವಾಗಿ ಘೋಷಿಸಿತು. ಅದರಂತೆ, 1985ರಿಂದ ಪ್ರತಿ ವರ್ಷ ಈ ದಿನವನ್ನು ದೇಶಾದ್ಯಂತ ಆಚರಿಸಿಕೊಂಡು ಬರಲಾಗುತ್ತಿದೆ. ವಿವೇಕಾನಂದರ ಜೀವನಶೈಲಿ, ಅವರ ಪ್ರಖರ ವಿಚಾರಧಾರೆಗಳು ಹಾಗೂ ಅದ್ಭುತ ತತ್ವಗಳು ಇಂದಿನ ಯುವಪೀಳಿಗೆಗೆ ದಾರಿದೀಪವಾಗಲಿ ಎಂಬುದು ಈ ಆಚರಣೆಯ ಹಿಂದಿನ ಪ್ರಮುಖ ಉದ್ದೇಶವಾಗಿದೆ. ಯುವಜನತೆಯಲ್ಲಿ ಆತ್ಮವಿಶ್ವಾಸ, ದೇಶಪ್ರೇಮ ಮತ್ತು ಸೇವಾ ಮನೋಭಾವವನ್ನು ಬೆಳೆಸುವ ಮೂಲಕ, ರಾಷ್ಟ್ರದ ಪ್ರಗತಿಯಲ್ಲಿ ಅವರ ಅಪ್ರತಿಮ ಶಕ್ತಿಯನ್ನು ಸಕ್ರಿಯವಾಗಿ ಬಳಸಿಕೊಳ್ಳುವ ಗುರಿಯನ್ನು ಈ ದಿನವು ಹೊಂದಿದೆ.

* ಸ್ವಾಮಿ ವಿವೇಕಾನಂದರ ಕಿರು ಪರಿಚಯ ಮತ್ತು ಕೊಡುಗೆಗಳು:-

# ಜನನ: 1863 ಜನವರಿ 12, ಕೋಲ್ಕತ್ತಾ (ತಂದೆ ವಿಶ್ವನಾಥ ದತ್ತ, ತಾಯಿ ಭುವನೇಶ್ವರಿ ದೇವಿ).

# ಪೂರ್ವಾಶ್ರಮದ ಹೆಸರು: ನರೇಂದ್ರನಾಥ ದತ್ತ.

# ಗುರುಗಳು: ಶ್ರೀ ರಾಮಕೃಷ್ಣ ಪರಮಹಂಸರು.

# ಚಿಕಾಗೋ ಭಾಷಣ (1893): ಅಮೆರಿಕದ ಚಿಕಾಗೋದಲ್ಲಿ ನಡೆದ ವಿಶ್ವ ಧರ್ಮ ಸಮ್ಮೇಳನದಲ್ಲಿ "ಅಮೆರಿಕದ ನನ್ನ ಸಹೋದರ ಸಹೋದರಿಯರೇ" ಎಂದು ಸಂಬೋಧಿಸುವ ಮೂಲಕ ಭಾರತದ

ಸನಾತನ ಧರ್ಮ ಮತ್ತು ವೇದಾಂತದ ಹಿರಿಮೆಯನ್ನು ಜಗತ್ತಿಗೆ ಸಾರಿದರು.

# ಸಂಸ್ಥೆಗಳ ಸ್ಥಾಪನೆ: 1897ರಲ್ಲಿ ರಾಮಕೃಷ್ಣ ಮಿಷನ್ ಸ್ಥಾಪಿಸಿದರು. ಇದು ಇಂದಿಗೂ ಶಿಕ್ಷಣ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದೆ.

* ಅವರ ಶಾಶ್ವತ ಉಪದೇಶಗಳ ಮಹತ್ವ: ವಿವೇಕಾನಂದರ ವಿಚಾರಗಳು ಇಂದಿನ ಸ್ಪರ್ಧಾತ್ಮಕ ಯುಗಕ್ಕೂ ಅತ್ಯಂತ ಪ್ರಸ್ತುತವಾಗಿವೆ:


=> ಆತ್ಮವಿಶ್ವಾಸ: "ನೂರು ಜನ ನಾಯಕರಿಗಿಂತ, ನೂರು ಜನ ಸಂಘಟಿತ ಯುವಕರು ದೇಶದ ಭವಿಷ್ಯವನ್ನು ಬದಲಿಸಬಲ್ಲರು."

=> ಧ್ಯೇಯನಿಷ್ಠೆ: "ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" - ಇದು ಇಂದಿಗೂ ಪ್ರತಿ ವಿದ್ಯಾರ್ಥಿಯ ಮಂತ್ರವಾಗಿದೆ.

=> ಶಿಕ್ಷಣ: ಚಾರಿತ್ರ್ಯ ನಿರ್ಮಾಣ ಮಾಡುವ ಶಿಕ್ಷಣಕ್ಕೆ ಅವರು ಒತ್ತು ನೀಡಿದ್ದರು.

=> ಮಾನವ ಸೇವೆ: "ಜನಸೇವೆಯೇ ಜನಾರ್ದನ ಸೇವೆ" ಎಂದು ನಂಬಿದ್ದ ಅವರು, ದೀನದಲಿತರ ಸೇವೆಯೇ ನಿಜವಾದ ಧರ್ಮ ಎಂದಿದ್ದರು.

* 2026ರ ರಾಷ್ಟ್ರೀಯ ಯುವ ದಿನದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ದೆಹಲಿಯ ಭಾರತ್ ಮಂಟಪದಲ್ಲಿ 'ವಿಕಸಿತ ಭಾರತ ಯುವ ನಾಯಕರ ಸಂವಾದ-2026' (VBYLD) ಎಂಬ ಬೃಹತ್ ಸಮಾವೇಶವನ್ನು ಹಮ್ಮಿಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಸುಮಾರು 3,000 ಯುವ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸುತ್ತಿದ್ದಾರೆ. ದೇಶಾದ್ಯಂತ ಶಾಲೆ-ಕಾಲೇಜುಗಳಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳು ನಡೆಯುತ್ತಿದ್ದು, ಡಿಜಿಟಲ್ ವೇದಿಕೆಗಳಲ್ಲಿ #NationalYouthDay2026 ಮತ್ತು #SwamiVivekanandaJayanti ಹ್ಯಾಷ್‌ಟ್ಯಾಗ್‌ಗಳ ಮೂಲಕ ಯುವಜನರು ವಿವೇಕಾನಂದರ ಸಂದೇಶಗಳನ್ನು ಹಂಚಿಕೊಳ್ಳುತ್ತಿದ್ದಾರೆ. ವಿಶೇಷವಾಗಿ ಈ ವರ್ಷ 'ರಾಷ್ಟ್ರೀಯ ಎಐ ಸಾಕ್ಷರತಾ ಅಭಿಯಾನ' (National AI Literacy Campaign) ಚಾಲನೆ ಪಡೆಯುತ್ತಿರುವುದು ತಂತ್ರಜ್ಞಾನ ಯುಗದ ಯುವಜನತೆಗೆ ಹೊಸ ಆಯಾಮ ನೀಡಿದೆ.




## 2026ರ ಮೊದಲ ಮಿಷನ್: ಇಸ್ರೋ ಭೂ ವೀಕ್ಷಣಾ ಉಪಗ್ರಹ EOS-N1 ಯಶಸ್ವಿಯಾಗಿ ಉಡಾವಣೆ



➤ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ತನ್ನ ಪೋಲಾರ್ ಸ್ಯಾಟಲೈಟ್ ಲಾಂಚ್ ವೀಹಿಕಲ್ – PSLV-C62 ರಾಕೆಟ್ ಮೂಲಕ ಭೂ ವೀಕ್ಷಣಾ ಉಪಗ್ರಹ EOS-N1 (ಅನ್ವೇಷಾ) ಸೇರಿದಂತೆ ಒಟ್ಟು 15 ಪೇಲೋಡ್‌ಗಳನ್ನು ಜನವರಿ 12, 2026ರಂದು ಬೆಳಿಗ್ಗೆ 10:17 ಗಂಟೆಗೆ (IST) ಯಶಸ್ವಿಯಾಗಿ ಉಡಾವಣೆ ಮಾಡಿದೆ. ಈ ಉಡಾವಣೆ ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ (SDSC–SHAR)ದ ಫಸ್ಟ್ ಲಾಂಚ್ ಪ್ಯಾಡ್ನಿಂದ ನಡೆಯಿತು. ಈ ಮಿಷನ್ 2026ನೇ ಸಾಲಿನ ಇಸ್ರೋದ ಮೊದಲ ಉಪಗ್ರಹ ಉಡಾವಣೆ ಆಗಿದ್ದು, ವಾಣಿಜ್ಯ ಹಾಗೂ ತಂತ್ರಜ್ಞಾನ ಪ್ರದರ್ಶನದ ದೃಷ್ಟಿಯಿಂದ ಮಹತ್ವದ ಹೆಜ್ಜೆಯಾಗಿದೆ.

➤ ತಿರುಪತಿಯಲ್ಲಿ ವಿಶೇಷ ಪೂಜೆ: ಉಡಾವಣೆಗೆ ಮುನ್ನ ಇಸ್ರೋ ವಿಜ್ಞಾನಿಗಳ ತಂಡವು ತಿರುಪತಿಯ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿತು. ಪಿಎಸ್‌ಎಲ್‌ವಿ ಉಡಾವಣಾ ನೌಕೆಯ ಸಣ್ಣ ಪ್ರತಿಕೃತಿಯನ್ನು ದೇವರ ಸನ್ನಿಧಿಯಲ್ಲಿ ಇಟ್ಟು ಪ್ರಾರ್ಥನೆ ಮಾಡಲಾಯಿತು. ಇಸ್ರೋ ತನ್ನ ಪ್ರಮುಖ ಉಡಾವಣೆಗಳ ಮೊದಲು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದೆ.

➤ PSLV-C62 ಮಿಷನ್ : ಇದು ಪಿಎಸ್‌ಎಲ್‌ವಿಯ 64ನೇ ಹಾರಾಟ (Flight) ಆಗಿದ್ದು, PSLV-DL ವ್ಯಾರಿಯಂಟ್ ಬಳಸಲಾಗಿದೆ. ಉಡಾವಣೆಯಾದ ಸುಮಾರು 17 ನಿಮಿಷಗಳೊಳಗೆ EOS-N1 ಮತ್ತು ಇತರ ಉಪಗ್ರಹಗಳನ್ನು 505 ಕಿಮೀ ಎತ್ತರದ ಸನ್-ಸಿಂಕ್ರೋನಸ್ ಕಕ್ಷೆ (SSO)ಯಲ್ಲಿ ಯಶಸ್ವಿಯಾಗಿ ನಿಯೋಜಿಸಲಾಯಿತು. ಈ ಮಿಷನ್, 2025ರಲ್ಲಿ PSLV-C61 ನಲ್ಲಿ ಕಂಡುಬಂದ ತಾಂತ್ರಿಕ ಸಮಸ್ಯೆಯ ನಂತರ, ಪಿಎಸ್‌ಎಲ್‌ವಿ ಮೇಲಿನ ವಿಶ್ವಾಸವನ್ನು ಮರುಸ್ಥಾಪಿಸಿದೆ.

➤ EOS-N1 (ಅನ್ವೇಷಾ) ಉಪಗ್ರಹದ ಮಹತ್ವ: EOS-N1 (Anvesha) ಒಂದು ಅತ್ಯಾಧುನಿಕ ಹೈಪರ್‌ಸ್ಪೆಕ್ಟ್ರಲ್ ಭೂ ವೀಕ್ಷಣಾ ಉಪಗ್ರಹವಾಗಿದ್ದು, ಇದನ್ನು ಡಿಆರ್‌ಡಿಓ (DRDO) ತಂತ್ರಜ್ಞಾನ ಸಹಕಾರದೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಈ ಉಪಗ್ರಹವು ತಂತ್ರಾತ್ಮಕ ಹಾಗೂ ನಾಗರಿಕ ಉದ್ದೇಶಗಳಿಗೆ ಬಹುಮುಖ್ಯವಾಗಿದೆ.

**ಇದರ ಬಳಕೆ ಕ್ಷೇತ್ರಗಳು:**

=> ಕೃಷಿ ಮತ್ತು ಬೆಳೆ ಮೇಲ್ವಿಚಾರಣೆ

=> ಅರಣ್ಯ ಮತ್ತು ಪರಿಸರ ಅಧ್ಯಯನ

=> ವಿಪತ್ತು ನಿರ್ವಹಣೆ (ನೆರೆ, ಬರ, ಚಂಡಮಾರುತ)

=> ಗಡಿ ಮತ್ತು ಭದ್ರತಾ ಮೇಲ್ವಿಚಾರಣೆ

=> ಭೂ ಉಪಯೋಗ ಮತ್ತು ನಗರ ಯೋಜನೆ

**➤ ಈ ಮಿಷನ್‌ನಲ್ಲಿ EOS-N1 ಜೊತೆಗೆ 14 ಸಹಯಾತ್ರಿಕ ಉಪಗ್ರಹಗಳು (Co-passengers) ಉಡಾವಣೆಗೊಂಡಿವೆ. ಅವುಗಳಲ್ಲಿ:**

=> ಭಾರತದ ಶೈಕ್ಷಣಿಕ ಸಂಸ್ಥೆಗಳ ಉಪಗ್ರಹಗಳು (ಉದಾ: ಈಶಾನ್ಯ ಭಾರತದ LACHIT-1)

=> ವಿದೇಶಿ ಗ್ರಾಹಕರ ಉಪಗ್ರಹಗಳು

=> ಸ್ಪೇನ್‌ನ ಖಾಸಗಿ ಸಂಸ್ಥೆಯ KID (Kestrel Initial Technology Demonstrator) ರೀ-ಎಂಟ್ರಿ ಕ್ಯಾಪ್ಸ್ಯೂಲ್

➤ KID ಕ್ಯಾಪ್ಸ್ಯೂಲ್: KID ರೀ-ಎಂಟ್ರಿ ಕ್ಯಾಪ್ಸ್ಯೂಲ್ ಮೂಲಕ ವಾತಾವರಣ ಪ್ರವೇಶ (Atmospheric Re-entry) ತಂತ್ರಜ್ಞಾನವನ್ನು ಪರೀಕ್ಷಿಸಲಾಗಿದೆ. ಇದು ಭವಿಷ್ಯದ ಮರುಬಳಕೆ

ಮಾಡಬಹುದಾದ ಉಡಾವಣಾ ವಾಹನಗಳು (Reusable Launch Vehicles – RLV) ಮತ್ತು ಮಾನವ ಬಾಹ್ಯಾಕಾಶ ಮಿಷನ್‌ಗಳಿಗೆ ಅತ್ಯಂತ ಉಪಯುಕ್ತವಾಗಿದೆ.

➤ ಈ ಮಿಷನ್ ಮೂಲಕ NewSpace India Limited (NSIL) ನ ವಾಣಿಜ್ಯ ಉಡಾವಣೆ ಸಾಮರ್ಥ್ಯ ಮತ್ತಷ್ಟು ಬಲಗೊಂಡಿದೆ. ಭಾರತವು ಜಾಗತಿಕ ಮಟ್ಟದಲ್ಲಿ ರೈಡ್‌ಶೇರ್ ಮತ್ತು ವಾಣಿಜ್ಯ ಉಪಗ್ರಹ ಉಡಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ಇದು ತೋರಿಸುತ್ತದೆ. EOS-N1 (ಅನ್ವೇಷಾ) ಉಪಗ್ರಹದ ಯಶಸ್ವಿ ಉಡಾವಣೆ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮದ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದ್ದು, ತಂತ್ರಜ್ಞಾನ, ರಾಷ್ಟ್ರೀಯ ಭದ್ರತೆ, ವಾಣಿಜ್ಯ ಬಾಹ್ಯಾಕಾಶ ಹಾಗೂ ಅಂತರರಾಷ್ಟ್ರೀಯ ಸಹಕಾರದ ಕ್ಷೇತ್ರಗಳಲ್ಲಿ ಇಸ್ರೋದ ಸ್ಥಾನವನ್ನು ಮತ್ತಷ್ಟು ಬಲಪಡಿಸಿದೆ.

## ದೆಹಲಿಯ ಅಫ್ಘಾನ್ ರಾಯಭಾರ ಕಚೇರಿಗೆ ತಾಲಿಬಾನ್ ಆಡಳಿತದ ನೂರ್ ಅಹ್ಮದ್ ನೂರ್ ನೇಮಕ




➤ ನವದೆಹಲಿಯಲ್ಲಿರುವ ಅಫ್ಘಾನಿಸ್ತಾನದ ರಾಯಭಾರ ಕಚೇರಿಯ ಆಡಳಿತದಲ್ಲಿ ಮಹತ್ವದ ಬದಲಾವಣೆಯಾಗಿದೆ. ತಾಲಿಬಾನ್ ಆಡಳಿತದ ಹಿರಿಯ ರಾಜತಾಂತ್ರಿಕ ಅಧಿಕಾರಿ ನೂರ್ ಅಹ್ಮದ್ ನೂರ್ ಅವರು ಭಾರತದಲ್ಲಿ ಅಫ್ಘಾನ್ ರಾಯಭಾರ ಕಚೇರಿಯ ಕಾರ್ಯಭಾರವನ್ನು (Chargé d'Affaires) ವಹಿಸಿಕೊಳ್ಳಲು ಆಗಮಿಸಿರುವುದು ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಹೊಸ ತಿರುವನ್ನು ನೀಡಿದೆ.

➤ 2021ರಲ್ಲಿ ತಾಲಿಬಾನ್ ಅಫ್ಘಾನಿಸ್ತಾನವನ್ನು ವಶಪಡಿಸಿಕೊಂಡ ನಂತರ, ದಿಲ್ಲಿಯಲ್ಲಿದ್ದ ಅಫ್ಘಾನ್ ರಾಯಭಾರ ಕಚೇರಿಯು ಅಂದಿನ ಅಶ್ರಫ್ ಘನಿ ಸರ್ಕಾರದಿಂದ ನೇಮಕಗೊಂಡಿದ್ದ ರಾಜತಾಂತ್ರಿಕರಿಂದಲೇ ನಡೆಯುತ್ತಿತ್ತು. ಆದರೆ, ಇತ್ತೀಚಿನ ತಿಂಗಳುಗಳಲ್ಲಿ ಭಾರತ ಮತ್ತು ತಾಲಿಬಾನ್ ಆಡಳಿತದ ನಡುವೆ ನಡೆದ ಸರಣಿ ಮಾತುಕತೆಗಳ ಫಲವಾಗಿ, ಈಗ ತಾಲಿಬಾನ್ ತನ್ನ ಅಧಿಕೃತ ಪ್ರತಿನಿಧಿಯನ್ನು ನೇಮಿಸಿದೆ. ಕಳೆದ ವರ್ಷ ಅಕ್ಟೋಬರ್ ನಲ್ಲಿ ಅಫ್ಘಾನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ಭಾರತಕ್ಕೆ ಭೇಟಿ ನೀಡಿದ್ದಾಗ ಈ ಕುರಿತು ಅಡಿಪಾಯ ಹಾಕಲಾಗಿತ್ತು.

➤ ನೂರ್ ಅಹ್ಮದ್ ಅವರು ಈ ಹಿಂದೆ ಅಫ್ಘಾನ್ ವಿದೇಶಾಂಗ ಸಚಿವಾಲಯದಲ್ಲಿ ರಾಜಕೀಯ ವಿಭಾಗದ ಮಹಾನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಇವರು ನವದೆಹಲಿಯಲ್ಲಿ ರಾಯಭಾರ ಕಚೇರಿಯ ದೈನಂದಿನ ಚಟುವಟಿಕೆಗಳು, ವೀಸಾ ಪ್ರಕ್ರಿಯೆ ಮತ್ತು ದ್ವಿಪಕ್ಷೀಯ ಮಾತುಕತೆಗಳ ನೇತೃತ್ವ ವಹಿಸಲಿದ್ದಾರೆ.

**➤ ಭಾರತವು ತಾಲಿಬಾನ್ ಸರ್ಕಾರವನ್ನು ಅಧಿಕೃತವಾಗಿ ಸರ್ಕಾರ ಎಂದು ಮಾನ್ಯತೆ ನೀಡಿಲ್ಲ. ಆದರೂ ಈ ಕೆಳಗಿನ ಕಾರಣಗಳಿಗಾಗಿ ಸಂಬಂಧವನ್ನು ಮುಂದುವರಿಸುತ್ತಿದೆ:**

=> ಮಾನವೀಯ ನೆರವು: ಅಫ್ಘಾನಿಸ್ತಾನದ ಸಾಮಾನ್ಯ ಜನರಿಗೆ ಔಷಧಿ, ಗೋಧಿ ಮತ್ತು ವೈದ್ಯಕೀಯ ಉಪಕರಣಗಳನ್ನು ತಲುಪಿಸುವುದು.

=> ಪ್ರಾದೇಶಿಕ ಭದ್ರತೆ: ಅಫ್ಘಾನ್ ನೆಲವು ಭಾರತ ವಿರೋಧಿ ಭಯೋತ್ಪಾದಕ ಚಟುವಟಿಕೆಗಳಿಗೆ ಬಳಕೆಯಾಗದಂತೆ ನೋಡಿಕೊಳ್ಳುವುದು.

=> ಹೂಡಿಕೆಗಳ ರಕ್ಷಣೆ: ಅಫ್ಘಾನಿಸ್ತಾನದಲ್ಲಿ ಭಾರತವು ಈವರೆಗೆ ನಿರ್ಮಿಸಿರುವ ಅಣೆಕಟ್ಟು, ಸಂಸತ್ ಭವನ ಮತ್ತು ರಸ್ತೆಗಳಂತಹ ಆಸ್ತಿಗಳನ್ನು ರಕ್ಷಿಸುವುದು.

➤ ಕೌಂಟಿಲ್ಯನ 'ಮಂಡಲ ಸಿದ್ಧಾಂತ' ಮತ್ತು ಅಫ್ಘಾನಿಸ್ತಾನ: ಭಾರತದ ವಿದೇಶಾಂಗ ನೀತಿಯಲ್ಲಿ ಅಫ್ಘಾನಿಸ್ತಾನವು ಆಯಕಟ್ಟಿನ ಸ್ಥಾನದಲ್ಲಿದೆ. ಪಾಕಿಸ್ತಾನದ ಪ್ರಭಾವವನ್ನು ಸಮತೋಲನಗೊಳಿಸಲು ಮತ್ತು ಮಧ್ಯ ಏಷ್ಯಾದ ರಾಷ್ಟ್ರಗಳೊಂದಿಗೆ ಸಂಪರ್ಕ ಸಾಧಿಸಲು (International North-South Transport Corridor - INSTC) ಅಫ್ಘಾನಿಸ್ತಾನದ ಸಹಕಾರ ಭಾರತಕ್ಕೆ ಅನಿವಾರ್ಯವಾಗಿದೆ.

## ಗಣರಾಜ್ಯೋತ್ಸವ ಕರ್ತವ್ಯ ಪಥದಲ್ಲಿ 'ಆಪರೇಷನ್ ಸಿಂದೂರ್' ವಿಮಾನಗಳ ಹಾರಾಟ; ಭೈರವ ಕಮಾಂಡೋಗಳ ಪದಾರ್ಪಣೆ




➤ ಗಣರಾಜ್ಯೋತ್ಸವ 2026ರ ಸಂದರ್ಭದಲ್ಲಿ ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆಯುವ ಪರೇಡ್, ಭಾರತದ ಸೈನಿಕ ಶಕ್ತಿ ಮತ್ತು ತಂತ್ರಜ್ಞಾನ ಸಾಮರ್ಥ್ಯದ ಭವ್ಯ ಪ್ರದರ್ಶನಕ್ಕೆ ವೇದಿಕೆಯಾಗಲಿದೆ. ಈ ಬಾರಿ ಪರೇಡ್‌ನ ಪ್ರಮುಖ ಆಕರ್ಷಣೆಯಾಗಿ 'ಆಪರೇಷನ್ ಸಿಂದೂರ್' ನಲ್ಲಿ ಶತ್ರು ಪಡೆಗಳ ಮೇಲೆ ಪ್ರಭಾವಶಾಲಿ ಪ್ರಾಬಲ್ಯ ತೋರಿದ ಯುದ್ಧ ವಿಮಾನಗಳ ಶಕ್ತಿ ಪ್ರದರ್ಶನ ಹಾಗೂ ದೇಶದ ರಕ್ಷಣಾ ವ್ಯವಸ್ಥೆಗೆ ಹೊಸ ಬಲ ನೀಡುವಂತ ರಚನೆಯಾದ ಗಣ್ಯ 'ಭೈರವ ಬೆಟಾಲಿಯನ್' ನ ಅಧಿಕೃತ ಪದಾರ್ಪಣೆ ನಡೆಯಲಿದೆ. ಈ ಪ್ರದರ್ಶನಗಳು ಭಾರತದ ರಕ್ಷಣಾತ್ಮಕ ಸಿದ್ಧತೆ, ಧೈರ್ಯ ಮತ್ತು ತಂತ್ರಾತ್ಮಕ ಮೇಲುಗೈಯನ್ನು ಜಾಗತಿಕ ವೇದಿಕೆಯಲ್ಲಿ ಮತ್ತೊಮ್ಮೆ ಸ್ಪಷ್ಟಪಡಿಸಲಿವೆ.

➤ ಆಪರೇಷನ್ ಸಿಂದೂರ್ (Operation Sindoor) ಮತ್ತು ವೈಮಾನಿಕ ಪ್ರದರ್ಶನ: ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ (PoK) ಭಯೋತ್ಪಾದಕ ಅಡಗುತಾಣಗಳ ಮೇಲೆ ನಡೆಸಿದ ನಿರ್ಣಾಯಕ ಕಾರ್ಯಾಚರಣೆಯೇ 'ಆಪರೇಷನ್ ಸಿಂದೂರ್'. ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ರಾಫೆಲ್ (Rafale), ಸುಖೋಯ್ (Sukhoi), ಜಾಗ್ವಾರ್ (Jaguar) ಮತ್ತು ಮಿಗ್-29 (MiG-29) ಯುದ್ಧ ವಿಮಾನಗಳು ಕರ್ತವ್ಯ ಪಥದಲ್ಲಿ 'ಸಿಂದೂರ್ ಫಾರ್ಮೇಶನ್' ಮೂಲಕ ಹಾರಾಟ ನಡೆಸಿ ಭಾರತದ ವೈಮಾನಿಕ ಪ್ರಾಬಲ್ಯವನ್ನು ಪ್ರದರ್ಶಿಸಲಿವೆ.

➤ ಭೈರವ ಬೆಟಾಲಿಯನ್‌ನ ಐತಿಹಾಸಿಕ ಪದಾರ್ಪಣೆ: ಆಪರೇಷನ್ ಸಿಂದೂರ್ ಯಶಸ್ಸಿನ ನಂತರ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಕಾರ್ಗಿಲ್‌ನಿಂದ ಈ ಹೊಸ ಲೈಟ್ ಕಮಾಂಡೋ ಬೆಟಾಲಿಯನ್‌ಗಳನ್ನು ರಚಿಸುವುದಾಗಿ ಘೋಷಿಸಿದ್ದರು. ಪ್ರಸ್ತುತ 5 ಭೈರವ ಬೆಟಾಲಿಯನ್‌ಗಳನ್ನು ಸ್ಥಾಪಿಸಲಾಗಿದೆ. ಮುಂದಿನ ಆರು ತಿಂಗಳಲ್ಲಿ ಒಟ್ಟು 25 ಬೆಟಾಲಿಯನ್‌ಗಳನ್ನು ರಚಿಸುವ ಗುರಿ ಹೊಂದಲಾಗಿದೆ. ಪ್ರತಿಯೊಂದು ಬೆಟಾಲಿಯನ್ ಸುಮಾರು 250 ಗಣ್ಯ ಸೈನಿಕರನ್ನು ಒಳಗೊಂಡಿರುತ್ತದೆ. ಇವರು ಅತ್ಯಂತ ವೇಗದ, ಅನಿರೀಕ್ಷಿತ ಮತ್ತು ಹೆಚ್ಚಿನ ಪ್ರಭಾವ ಬೀರುವ ಕಾರ್ಯಾಚರಣೆಗಳಿಗೆ (Swift and Surprise Operations) ತರಬೇತಿ ಪಡೆದಿದ್ದಾರೆ. ಇವರು ಗಣರಾಜ್ಯೋತ್ಸವಕ್ಕೂ ಮುನ್ನ ಜೈಪುರದಲ್ಲಿ ನಡೆಯಲಿರುವ ಸೇನಾ ದಿನಾಚರಣೆ (Army Day) ಪರೇಡ್‌ನಲ್ಲಿ ಭಾಗವಹಿಸಲಿದ್ದಾರೆ.

➤ ಈ ಬಾರಿಯ ಗಣರಾಜ್ಯೋತ್ಸವವು ಕೇವಲ ಸಾಂಪ್ರದಾಯಿಕ ಆಚರಣೆಯಾಗಿ ಉಳಿಯದೆ, ಭಯೋತ್ಪಾದನೆಯ ವಿರುದ್ಧ ಭಾರತದ ಕಠಿಣ ನಿಲುವು ಮತ್ತು ಮಿಲಿಟರಿ ಸನ್ನದ್ಧತೆಯನ್ನು ಜಾಗತಿಕ ಮಟ್ಟದಲ್ಲಿ ಸಾರಲಿದೆ. ರಕ್ಷಣಾ ಕ್ಷೇತ್ರದಲ್ಲಿ ಭಾರತದ ನಾವೀನ್ಯತೆ ಮತ್ತು ಶಕ್ತಿಯನ್ನು ಇದು ಪ್ರತಿಬಿಂಬಿಸಲಿದೆ.

## ನವದೆಹಲಿ ವಿಶ್ವ ಪುಸ್ತಕ ಮೇಳ 2026: ಈ ಬಾರಿ ಪುಸ್ತಕ ಪ್ರೇಮಿಗಳಿಗೆ ಉಚಿತ ಪ್ರವೇಶ!



➤ ವಿಶ್ವದ ಅತಿದೊಡ್ಡ ಪುಸ್ತಕ ಮೇಳಗಳಲ್ಲಿ ಒಂದೆಂದು ಖ್ಯಾತಿ ಪಡೆದಿರುವ 'ಹೊಸದಿಲ್ಲಿ ವಿಶ್ವ ಪುಸ್ತಕ ಮೇಳ (NDWBF) 2026' ಜನವರಿ 10ರಿಂದ ದೇಶದ ರಾಜಧಾನಿಯ ಐತಿಹಾಸಿಕ ಭಾರತ್ ಮಂಟಪದಲ್ಲಿ ಅದ್ದೂರಿಯಾಗಿ ಆರಂಭಗೊಂಡಿದೆ. ಜನವರಿ 18ರವರೆಗೆ ಒಟ್ಟು ಒಂಬತ್ತು ದಿನಗಳ ಕಾಲ ಈ ಸಾಹಿತ್ಯೋತ್ಸವ ನಡೆಯಲಿದ್ದು, ಪುಸ್ತಕ ಪ್ರೇಮಿಗಳಿಗೆ ಜ್ಞಾನದ ಹಬ್ಬವನ್ನು ಉಣಬಡಿಸಲಿದೆ. ಈ ವರ್ಷದ ಮೇಳದ ಕೇಂದ್ರ ವಿಷಯ (Theme) 'ಭಾರತೀಯ ಮಿಲಿಟರಿ ಇತಿಹಾಸ: ಶೌರ್ಯ ಮತ್ತು ಬುದ್ಧಿವಂತಿಕೆ.

➤ಈ ಬಾರಿಯ 53ನೇ ಆವೃತ್ತಿಯ ಮೇಳವು ಹಲವು ಮೈಲಿಗಲ್ಲುಗಳಿಗೆ ಸಾಕ್ಷಿಯಾಗುತ್ತಿದೆ:

=> ಉಚಿತ ಪ್ರವೇಶ: ಮೇಳದ ಇತಿಹಾಸದಲ್ಲೇ ಮೊದಲ ಬಾರಿಗೆ ಸಾರ್ವಜನಿಕರಿಗೆ ಸಂಪೂರ್ಣ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಡಿಜಿಟಲ್ ಯುಗದಲ್ಲಿ ಓದುವ ಹವ್ಯಾಸವನ್ನು ಉತ್ತೇಜಿಸಲು ಕೇಂದ್ರ ಶಿಕ್ಷಣ ಸಚಿವಾಲಯ ಈ ಮಹತ್ವದ ನಿರ್ಧಾರ ಕೈಗೊಂಡಿದೆ.

=> ಜಾಗತಿಕ ಭಾಗಿತ್ವ: 35ಕ್ಕೂ ಹೆಚ್ಚು ದೇಶಗಳು ಭಾಗವಹಿಸುತ್ತಿದ್ದು, 1,000ಕ್ಕೂ ಹೆಚ್ಚು ಪ್ರಕಾಶಕರು ತಮ್ಮ ಮಳಿಗೆಗಳನ್ನು ತೆರೆದಿದ್ದಾರೆ.

=> ವೈವಿಧ್ಯಮಯ ಮಳಿಗೆಗಳು: ಮೇಳದಲ್ಲಿ ಸುಮಾರು 3,000ಕ್ಕೂ ಅಧಿಕ ಮಳಿಗೆಗಳಿದ್ದು, ವಿವಿಧ ಭಾಷೆಗಳ ಕೋಟ್ಯಂತರ ಪುಸ್ತಕಗಳು ಲಭ್ಯವಿವೆ.

➤ ಪ್ರಮುಖ ಆಕರ್ಷಣೆ: ಭಾರತೀಯ ಮಿಲಿಟರಿ ಇತಿಹಾಸ: ಈ ವರ್ಷದ ಮೇಳದ ಕೇಂದ್ರ ವಿಷಯ (Theme) 'ಭಾರತೀಯ ಮಿಲಿಟರಿ ಇತಿಹಾಸ: ಶೌರ್ಯ ಮತ್ತು ಬುದ್ಧಿವಂತಿಕೆ @ 75' (Indian Military History: Valour & Wisdom @ 75).

=> ಸುಮಾರು 1,000 ಚದರ ಮೀಟರ್ ವ್ಯಾಪ್ತಿಯಲ್ಲಿ ನಿರ್ಮಿಸಲಾದ ವಿಶೇಷ ಪೆವಿಲಿಯನ್‌ನಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಸಾಧನೆಗಳನ್ನು ಪ್ರದರ್ಶಿಸಲಾಗುತ್ತಿದೆ.

=> ಅರ್ಜುನ್ ಟ್ಯಾಂಕ್, ಐಎನ್ಎಸ್ ವಿಕ್ರಾಂತ್ ಮತ್ತು ತೇಜಸ್ ಯುದ್ಧ ವಿಮಾನಗಳ ಪ್ರತಿಕೃತಿಗಳು ಪ್ರಮುಖ ಆಕರ್ಷಣೆಯಾಗಿವೆ.

=> ಮಿಲಿಟರಿ ತಂತ್ರಜ್ಞಾನ ಮತ್ತು ಶೌರ್ಯ ಗಾಥೆಗಳ ಕುರಿತ 500ಕ್ಕೂ ಅಧಿಕ ಪುಸ್ತಕಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ.

➤ ಅಂತಾರಾಷ್ಟ್ರೀಯ ಗೌರವ: ಈ ಬಾರಿಯ ಮೇಳದಲ್ಲಿ ಕತಾರ್ (Qatar) ದೇಶವು 'ಅತಿಥಿ ರಾಷ್ಟ್ರ' (Guest of Honour) ಆಗಿ ಭಾಗವಹಿಸುತ್ತಿದ್ದರೆ, ಸ್ಪೇನ್ (Spain) 'ಫೋಕಸ್ ಕಂಟ್ರಿ' ಆಗಿ ಗಮನ ಸೆಳೆಯುತ್ತಿದೆ. ಇದು ಭಾರತ ಮತ್ತು ಈ ದೇಶಗಳ ನಡುವಿನ ಸಾಂಸ್ಕೃತಿಕ ವಿನಿಮಯಕ್ಕೆ ಹೊಸ ವೇದಿಕೆ ಕಲ್ಪಿಸಿದೆ.

➤ ಡಿಜಿಟಲ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು:-

=> ರಾಷ್ಟ್ರೀಯ ಇ-ಪುಸ್ತಕಾಲಯ: ಓದುಗರಿಗೆ 6,000ಕ್ಕೂ ಹೆಚ್ಚು ಉಚಿತ ಇ-ಪುಸ್ತಕಗಳನ್ನು ಕ್ಯೂಆರ್ ಕೋಡ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ.

=> ಮಕ್ಕಳ ಪೆವಿಲಿಯನ್ (Kidz Express): ಮಕ್ಕಳಿಗಾಗಿ ಕಥೆ ಹೇಳುವ ಕಾರ್ಯಕ್ರಮಗಳು, ಚಿತ್ರಕಲೆ ಮತ್ತು ಸೃಜನಾತ್ಮಕ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.

=> ಸಾಂಸ್ಕೃತಿಕ ಸಂಜೆ: ಪ್ರತಿದಿನ ಸಂಜೆ ಖ್ಯಾತ ಕಲಾವಿದರಿಂದ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು ನಡೆಯಲಿವೆ. ವಿಶೇಷವಾಗಿ ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಯ ಬ್ಯಾಂಡ್ ತಂಡಗಳು ಪ್ರದರ್ಶನ ನೀಡಲಿವೆ.

➤ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ಮೇಳವನ್ನು ಉದ್ಘಾಟಿಸಿದ್ದು, ದೇಶದ ಯುವಜನತೆಯನ್ನು ಪುಸ್ತಕಗಳ ಪ್ರಪಂಚಕ್ಕೆ ಸೆಳೆಯುವಲ್ಲಿ ಈ ಮೇಳವು ಮೈಲಿಗಲ್ಲಾಗಲಿದೆ ಎಂದು ಆಶಿಸಿದ್ದಾರೆ.

## ಹಿಂದೂ ಕುಶ್-ಹಿಮಾಲಯದಲ್ಲಿ ಹವಾಮಾನ ಬದಲಾವಣೆ: ಭಾರತಕ್ಕೆ ವಾರ್ಷಿಕ 102 ಶತಕೋಟಿ ಡಾಲರ್ ಅಗತ್ಯ – ICIMOD ವರದಿ



➤ ಜಾಗತಿಕ ತಾಪಮಾನ ಏರಿಕೆಯ ಪರಿಣಾಮವಾಗಿ 'ವಿಶ್ವದ ಮೂರನೇ ಧ್ರುವ' ಎಂದೇ ಕರೆಯಲ್ಪಡುವ ಹಿಂದೂ ಕುಶ್-ಹಿಮಾಲಯ (HKH) ಪ್ರದೇಶವು ಇಂದು ಅಳಿವಿನ ಅಂಚಿನಲ್ಲಿದೆ. ಇತ್ತೀಚೆಗೆ ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ಮೌಂಟೇನ್ ಡೆವಲಪ್‌ಮೆಂಟ್ (ICIMOD) ಬಿಡುಗಡೆ ಮಾಡಿದ ಸಂಶೋಧನಾ ವರದಿಯ ಪ್ರಕಾರ, ಈ ಪ್ರದೇಶದಲ್ಲಿ ಹವಾಮಾನ ಬದಲಾವಣೆಯ ಹಾನಿಯನ್ನು ತಗ್ಗಿಸಲು ಭಾರತಕ್ಕೆ ಪ್ರತಿ ವರ್ಷ ಅಂದಾಜು 102 ಶತಕೋಟಿ ಅಮೆರಿಕನ್ ಡಾಲರ್ ಹಣಕಾಸಿನ ನೆರವು ಅಗತ್ಯವಿದೆ.

➤ ಹಿಂದೂ ಕುಶ್-ಹಿಮಾಲಯ ಪ್ರದೇಶವು ಭಾರತ, ಚೀನಾ, ಅಫ್ಘಾನಿಸ್ತಾನ, ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಭೂತಾನ್ ಮತ್ತು ಮ್ಯಾನ್ಮಾರ್ ಸೇರಿ ಒಟ್ಟು 8 ದೇಶಗಳನ್ನು ವ್ಯಾಪಿಸಿದೆ. ಇದನ್ನು "ವಿಶ್ವದ ಮೂರನೇ ಧ್ರುವ" (Third Pole) ಎಂದು ಕರೆಯಲಾಗುತ್ತದೆ. ಈ ಪ್ರದೇಶವು ಜಗತ್ತಿನ ಸುಮಾರು ಶೇ.50ರಷ್ಟು ಜನಸಂಖ್ಯೆಗೆ ಕುಡಿಯುವ ನೀರು, ಆಹಾರ ಭದ್ರತೆ, ಜೀವವೈವಿಧ್ಯ ಮತ್ತು ಪರಿಸರ ಸೇವೆಗಳನ್ನು ಒದಗಿಸುವ ಅತ್ಯಂತ ಪ್ರಮುಖ ಪರಿಸರ ವಲಯವಾಗಿದೆ.


➤ ICIMOD ವರದಿಯ ಪ್ರಮುಖ ಅಂಶಗಳು: UNFCCCಗೆ ಸಲ್ಲಿಸಲಾದ 'First Determination Report' ಆಧಾರದ ಮೇಲೆ ಸಿದ್ಧವಾದ ಈ ವರದಿ, ಹಿಂದೂ ಕುಶ್-ಹಿಮಾಲಯ ಪ್ರದೇಶ ಎದುರಿಸುತ್ತಿರುವ ತೀವ್ರ ಹವಾಮಾನ ಸಂಕಷ್ಟವನ್ನು ಬಹಿರಂಗಪಡಿಸುತ್ತದೆ. ಈ ಪ್ರದೇಶವನ್ನು ರಕ್ಷಿಸಲು ವರ್ಷಕ್ಕೆ ಒಟ್ಟು 768.7 ಶತಕೋಟಿ ಡಾಲರ್ ಹೂಡಿಕೆ ಅಗತ್ಯವಿದ್ದು, ಅದರಲ್ಲಿ ಚೀನಾ ($605 ಶತಕೋಟಿ/ವರ್ಷ) ಮತ್ತು ಭಾರತ ($102 ಶತಕೋಟಿ/ವರ್ಷ) ಸೇರಿ ಒಟ್ಟು ಅಗತ್ಯ ನಿಧಿಯ ಶೇ.92ರಷ್ಟು ಹೊರೆ ಹೊರುತ್ತವೆ. ವರದಿ ಪ್ರಕಾರ, ಹಿಮನದಿಗಳ ವೇಗದ ಕರಗುವಿಕೆ ಸಮುದ್ರ ಮಟ್ಟ ಏರಿಕೆಗೆ ಕಾರಣವಾಗುತ್ತಿದ್ದು, ಅತಿವೃಷ್ಟಿ, ಹಠಾತ್ ಪ್ರವಾಹಗಳು ಮತ್ತು ಭೂಕುಸಿತಗಳು ಹೆಚ್ಚಾಗಿವೆ; ಇದರಿಂದ ಜಲ ಭದ್ರತೆಗೆ ಗಂಭೀರ ಭೀತಿ ಉಂಟಾಗಿ ಕೋಟ್ಯಂತರ ಜನರ ಕುಡಿಯುವ ನೀರಿಗೆ ಅಪಾಯ ಎದುರಾಗಿದೆ. ಇನ್ನೊಂದೆಡೆ, ನೇಪಾಳ, ಭೂತಾನ್ ಮತ್ತು ಅಫ್ಘಾನಿಸ್ತಾನದಂತಹ ಸಣ್ಣ ಆರ್ಥಿಕತೆಗಳು ತಮ್ಮ ಜಿಡಿಪಿಗೆ ಹೋಲಿಸಿದರೆ ಹವಾಮಾನ ಬದಲಾವಣೆಯ ಹೊರೆ ನಿಭಾಯಿಸಲು ಅಸಮರ್ಥವಾಗಿದ್ದು, ಇದು ಪ್ರಾದೇಶಿಕ ಅಸ್ಥಿರತೆಯ ಭೀತಿಯನ್ನು ಹೆಚ್ಚಿಸುತ್ತದೆ.

➤ ಪರಿಹಾರ ಮಾರ್ಗಗಳು ಮತ್ತು ಆದ್ಯತಾ ಕ್ಷೇತ್ರಗಳು: ಹವಾಮಾನ ಸಹಿಷ್ಣುತೆಯನ್ನು (Climate Resilience) ಬಲಪಡಿಸಲು ವರದಿಯು ತುರ್ತು ಹೂಡಿಕೆ ಅಗತ್ಯವಿರುವ ಪ್ರಮುಖ ಕ್ಷೇತ್ರಗಳನ್ನು ಗುರುತಿಸಿದೆ. ಇದರಲ್ಲಿ ಸುಸ್ಥಿರ ಕೃಷಿ-ಬದಲಾಗುತ್ತಿರುವ ಹವಾಮಾನಕ್ಕೆ ಹೊಂದಿಕೊಳ್ಳುವಂತೆ ಬೆಳೆ ಪದ್ಧತಿಗಳ ಪರಿವರ್ತನೆ, ಜಲ ನಿರ್ವಹಣೆ-ನದಿ ಮೂಲಗಳ ಸಂರಕ್ಷಣೆ ಮತ್ತು ನೀರಿನ ಮರುಬಳಕೆ, ಹಸಿರು ಇಂಧನ–ಪಳೆಯುಳಿಕೆ ಇಂಧನವನ್ನು ಕಡಿಮೆ ಮಾಡಿ ಸೌರ ಮತ್ತು ವಾಯು ಶಕ್ತಿಯತ್ತ ಮುಖ ಮಾಡುವುದು, ಹಾಗೂ ನಗರಾಭಿವೃದ್ಧಿ–ಪರ್ವತ ಪ್ರದೇಶಗಳಲ್ಲಿ ಅವೈಜ್ಞಾನಿಕ ಕಟ್ಟಡ ನಿರ್ಮಾಣಕ್ಕೆ ತಡೆ ಮುಖ್ಯವಾಗಿವೆ. ಮುಖ್ಯ ಅಂಶವೆಂದರೆ, ಹಿಮಾಲಯದ ಹವಾಮಾನ ಬದಲಾವಣೆ ಒಂದು ದೇಶಕ್ಕೆ ಸೀಮಿತ ಸಮಸ್ಯೆಯಲ್ಲ; ಇದು ಗಡಿಯಾಚೆಗಿನ ನದಿಗಳು, ಆಹಾರ ಭದ್ರತೆ ಮತ್ತು ಜೀವಿಕೆಗೆ ಪರಿಣಾಮ ಬೀರುವುದರಿಂದ, ಈ

ಪ್ರದೇಶದ ಎಂಟು ರಾಷ್ಟ್ರಗಳ ನಡುವೆ ಪ್ರಾದೇಶಿಕ ಸಹಕಾರವೇ ಇಂದಿನ ತುರ್ತು ಅಗತ್ಯವಾಗಿದೆ.

## 13 Jan 2026

### ಭಾರತದ ವಾಯುಮಾಲಿನ್ಯದ ಆತಂಕಕಾರಿ ವರದಿ: 1,787 ನಗರಗಳಲ್ಲಿ ವಿಷಗಾಳಿ! ಕೇವಲ 4% ನಗರಗಳಿಗಷ್ಟೇ ಸರ್ಕಾರದ ರಕ್ಷಣೆ?



➤ ದೇಶದ ವಾಯುಮಾಲಿನ್ಯ ಪರಿಸ್ಥಿತಿ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದ್ದು, ಉಪಗ್ರಹ ಆಧರಿತ ಅಧ್ಯಯನವೊಂದು ಆತಂಕಕಾರಿ ವಾಸ್ತವಾಂಶಗಳನ್ನು ಬಹಿರಂಗಪಡಿಸಿದೆ. ಇಂಧನ ಹಾಗೂ ಶುದ್ಧಗಾಳಿ ಸಂಶೋಧನಾ ಕೇಂದ್ರ (Centre for Research on Energy and Clean Air – CREA) ನಡೆಸಿದ ಅಧ್ಯಯನದ ಪ್ರಕಾರ, ಭಾರತದ 4,041 ನಗರಗಳ ಪೈಕಿ 1,787 ನಗರಗಳು ದೀರ್ಘಕಾಲಿಕ ವಾಯುಮಾಲಿನ್ಯ ಸಮಸ್ಯೆಯಿಂದ ಬಳಲುತ್ತಿವೆ. ಈ ನಗರಗಳ ಪೈಕಿ ಕೇವಲ 130 ನಗರಗಳು ಮಾತ್ರ ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮ (NCAP) ವ್ಯಾಪ್ತಿಗೆ ಸೇರಿವೆ. ಅಂದರೆ, ದೇಶದ ದೀರ್ಘಕಾಲಿಕವಾಗಿ ಮಾಲಿನ್ಯಗೊಂಡ ನಗರಗಳಲ್ಲಿ ಕೇವಲ 4% ನಗರಗಳಿಗಷ್ಟೇ ಸರ್ಕಾರದ ವಿಶೇಷ ಶುದ್ಧಗಾಳಿ ಕ್ರಮಗಳು ಲಭ್ಯವಿವೆ.

➤ ಅಧ್ಯಯನದ ಪ್ರಕಾರ, ದೇಶದ ಬಹುತೇಕ ನಗರಗಳಲ್ಲಿ ಪಿಎಂ 2.5 (PM2.5) ಎನ್ನುವ ಸೂಕ್ಷ್ಮ ಕಣಗಳು ಅಧಿಕ ಪ್ರಮಾಣದಲ್ಲಿ ಕಂಡುಬಂದಿವೆ. ಈ ಕಣಗಳು ಕ್ಯಾನ್ಸರ್, ಶ್ವಾಸಕೋಶ ಕಾಯಿಲೆ, ಹೃದಯ ಸಂಬಂಧಿ ಸಮಸ್ಯೆಗಳಿಗೆ ನೇರ ಕಾರಣವಾಗುತ್ತವೆ. CREA ವಿಶ್ಲೇಷಣೆಯಂತೆ, ಸುಮಾರು 44% ಭಾರತೀಯ ನಗರಗಳು ವಾಯುಮಾಲಿನ್ಯ ಕಡಿಮೆ ಮಾಡುವಲ್ಲಿ ಯಾವುದೇ ಗಮನಾರ್ಹ ಸುಧಾರಣೆಯನ್ನು ಸಾಧಿಸಿಲ್ಲ, ಇದು ತಾತ್ಕಾಲಿಕ ಸಮಸ್ಯೆಯಲ್ಲದೆ, ಮೂಲಭೂತ ವ್ಯವಸ್ಥಾತ್ಮಕ ಸಮಸ್ಯೆ ಎನ್ನುವುದನ್ನು ತೋರಿಸುತ್ತದೆ.

**➤ 2025ರ ಪಿಎಂ 2.5 ಶ್ರೇಯಾಂಕ: ಅತ್ಯಂತ ಮಾಲಿನ್ಯಗೊಂಡ ನಗರಗಳು:**

1. ಬರ್ನಿಹಾಟ್ (ಮೇಘಾಲಯ) – 100 µg/m$^3$
2. ದೆಹಲಿ – 96 µg/m$^3$
3. ಘಾಜಿಯಾಬಾದ್ (ಉತ್ತರ ಪ್ರದೇಶ) – 93 µg/m$^3$

ಇವು ದೇಶದ ಅತ್ಯಂತ ಮಾಲಿನ್ಯಗೊಂಡ ನಗರಗಳಾಗಿವೆ.ಈ ಪಟ್ಟಿಯಲ್ಲಿ ನೋಯ್ಡಾ ನಾಲ್ಕನೇ ಸ್ಥಾನದಲ್ಲಿದ್ದು, ನಂತರ ಗುರುಗ್ರಾಮ್, ಗ್ರೇಟರ್ ನೋಯ್ಡಾ, ಭಿವಾಡಿ, ಹಾಜಿಪುರ, ಮುಜಾಫರ್‌ನಗರ ಮತ್ತು ಹಾಪುರ್ ನಗರಗಳಿವೆ.

➤ ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮ (NCAP) ಅನ್ನು 2019ರ ಜನವರಿಯಲ್ಲಿ ಆರಂಭಿಸಲಾಗಿದ್ದು, ಮೊದಲ ಹಂತದಲ್ಲಿ 130 ನಗರಗಳಲ್ಲಿ ಮಾಲಿನ್ಯ ನಿಯಂತ್ರಣ ಗುರಿ ಇಡಲಾಗಿತ್ತು.ಎರಡನೇ ಹಂತದಲ್ಲಿ (2025–26ರವರೆಗೆ) ಪಿಎಂ ಕಣಗಳನ್ನು 40% ಕಡಿಮೆ ಮಾಡುವ ಗುರಿ ಹೊಂದಲಾಗಿದೆ. ಈ ಉದ್ದೇಶಕ್ಕಾಗಿ ₹19,614 ಕೋಟಿ ಅನುದಾನವನ್ನು ಮೀಸಲಿಡಲಾಗಿದ್ದು, ಇದರಲ್ಲಿ ಅನೇಕ ರಾಜ್ಯಗಳು ಭಾಗಶಃ ಮಾತ್ರ ಬಳಕೆ ಮಾಡಿವೆ. ಇದುವರೆಗೆ ₹13,415 ಕೋಟಿ ಬಿಡುಗಡೆಗೊಂಡಿದ್ದು, ಅದರ ಪೈಕಿ ₹9,929 ಕೋಟಿ (ಶೇ.74) ಮಾತ್ರ ಉಪಯೋಗಿಸಲಾಗಿದೆ.

➤ ಅಧ್ಯಯನದ ಪ್ರಕಾರ, ವಾಯುಮಾಲಿನ್ಯ ನಿಯಂತ್ರಣ ಮಾನದಂಡಗಳನ್ನು ನಿರಂತರವಾಗಿ ಮೀರಿ ಹೋಗುವ (Non-attainment cities) ನಗರಗಳ ಸಂಖ್ಯೆ: ಉತ್ತರ ಪ್ರದೇಶ – 416 ರಾಜಸ್ಥಾನ – 158 ಗುಜರಾತ್ – 152 ಮಧ್ಯಪ್ರದೇಶ – 143 ಪಂಜಾಬ್ ಮತ್ತು ಬಿಹಾರ – ತಲಾ 136 ಪಶ್ಚಿಮ ಬಂಗಾಳ – 124 ಇದು ಉತ್ತರ ಭಾರತದ ವಾಯುಮಾಲಿನ್ಯ ಸಮಸ್ಯೆಯ ಗಂಭೀರತೆಯನ್ನು ತೋರಿಸುತ್ತದೆ.

# NCAP ವ್ಯಾಪ್ತಿಯ 130 ನಗರಗಳಲ್ಲಿ: 28 ನಗರಗಳಲ್ಲಿ ನಿರಂತರ ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರಗಳೇ ಇಲ್ಲ ಉಳಿದ 102 ನಗರಗಳಲ್ಲಿ, 100 ನಗರಗಳು ಪಿಎಂ10 ಮಟ್ಟದಲ್ಲಿ ಶೇ.80ಕ್ಕಿಂತ ಅಧಿಕ ಪ್ರಮಾಣ ದಾಖಲಿಸಿವೆ.

ಪಿಎಂ10 ನಿಯಂತ್ರಣದಲ್ಲಿ: 23 ನಗರಗಳು 40% ಗುರಿ ಸಾಧನೆ 28 ನಗರಗಳು 21–40% ಸುಧಾರಣೆ 26 ನಗರಗಳು ಅಲ್ಪ ಸುಧಾರಣೆ 23 ನಗರಗಳಲ್ಲಿ ಮಾಲಿನ್ಯ ಮಟ್ಟ ಇನ್ನಷ್ಟು ಹೆಚ್ಚಳ

**# ದೆಹಲಿ ಪಿಎಂ10 ಮಾಲಿನ್ಯದಲ್ಲಿ ಅಗ್ರಸ್ಥಾನ :**

1. ದೆಹಲಿ – 197 µg/m$^3$ (ರಾಷ್ಟ್ರೀಯ ಮಾನದಂಡಕ್ಕಿಂತ 3 ಪಟ್ಟು ಹೆಚ್ಚು)
2. ಘಾಜಿಯಾಬಾದ್ – 190 µg/m$^3$
3. ಗ್ರೇಟರ್ ನೋಯ್ಡಾ – 188 µg/m$^3$

**# ಟಾಪ್ 50 ಪಿಎಂ10 ಮಾಲಿನ್ಯ ನಗರಗಳಲ್ಲಿ:**

1. ರಾಜಸ್ಥಾನ – 18 ನಗರಗಳು
2. ಉತ್ತರ ಪ್ರದೇಶ – 10
3. ಮಧ್ಯಪ್ರದೇಶ – 5
4. ಬಿಹಾರ ಮತ್ತು ಒಡಿಶಾ – ತಲಾ 4

➤ CREAನ ಭಾರತ ವಿಶ್ಲೇಷಕ ಮನೋಜ್ ಕುಮಾರ್ ಅವರು ಹೇಳುವಂತೆ, ಭಾರತದಲ್ಲಿ ವಾಯುಮಾಲಿನ್ಯ ಸಮಸ್ಯೆ ನಿವಾರಣೆಗೆ ಪಿಎಂ10ಕ್ಕಿಂತ ಪಿಎಂ2.5 ಹಾಗೂ ಅದರ ಮೂಲ ಅನಿಲಗಳಾದ ಸಲ್ಫರ್ ಡೈಆಕ್ಸೈಡ್ ಮತ್ತು ನೈಟ್ರೋಜನ್ ಡೈಆಕ್ಸೈಡ್ ಮೇಲೆ ಹೆಚ್ಚು ಗಮನ ಹರಿಸಬೇಕು.

### ಭಾರತಕ್ಕೆ ಜಾಗತಿಕ ಹೆಮ್ಮೆ: UN ಪ್ರಶಸ್ತಿ ಗೆದ್ದ ಮೇಜರ್ ಸ್ವಾತಿ ಶಾಂತ ಕುಮಾರ್



➤ ಬೆಂಗಳೂರಿನ ಮೂಲದ ಭಾರತೀಯ ಸೇನಾಧಿಕಾರಿ ಮೇಜರ್ ಸ್ವಾತಿ ಶಾಂತ ಕುಮಾರ್ ಅವರಿಗೆ ವಿಶ್ವಸಂಸ್ಥೆಯು ನೀಡುವ 2025ನೇ ಸಾಲಿನ ಪ್ರತಿಷ್ಠಿತ "ಲಿಂಗ ಸಮಾನತೆ ಪ್ರತಿಪಾದಕ ಪ್ರಶಸ್ತಿ (UN Secretary-General's Award for Gender Equality)" ಲಭಿಸಿದೆ. ಈ ಗೌರವವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಪ್ರಕಟಿಸಿದ್ದಾರೆ. ದಕ್ಷಿಣ ಸುಡಾನ್ ನಲ್ಲಿನ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆ (UNMISS) ಯಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವಲ್ಲಿ ಮೇಜರ್ ಸ್ವಾತಿ ಶಾಂತ ಕುಮಾರ್ ಅವರು ತೋರಿದ ಅತ್ಯುತ್ತಮ ನಾಯಕತ್ವ ಮತ್ತು ಕಾರ್ಯಚಟುವಟಿಕೆಗಳಿಗಾಗಿ ಈ ಪ್ರಶಸ್ತಿ ನೀಡಲಾಗಿದೆ.

➤ ಈ ಪ್ರತಿಷ್ಠಿತ ಪ್ರಶಸ್ತಿಯು: ಲಿಂಗ ಸಮಾನತೆಯನ್ನು ಉತ್ತೇಜಿಸುವ, ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವ, ಲಿಂಗ-ಪ್ರತಿಕ್ರಿಯಾಶೀಲ ಶಾಂತಿಪಾಲನಾ ಕಾರ್ಯಾಚರಣೆಗಳನ್ನು ಬಲಪಡಿಸುವ ವಿಶ್ವಸಂಸ್ಥೆಯ ಉಪಕ್ರಮಗಳನ್ನು ಗುರುತಿಸಲು ನೀಡಲಾಗುತ್ತದೆ. ವಿಶ್ವದಾದ್ಯಂತ ಇರುವ ಎಲ್ಲಾ ವಿಶ್ವಸಂಸ್ಥೆ ಶಾಂತಿಪಾಲನಾ ಕಾರ್ಯಾಚರಣೆಗಳು ಮತ್ತು ಅಂಗಸಂಸ್ಥೆಗಳಿಂದ ನಾಮನಿರ್ದೇಶನಗಳನ್ನು ಆಹ್ವಾನಿಸಲಾಗುತ್ತದೆ. ತಜ್ಞರ ಸಮಿತಿಯ ಪರಿಶೀಲನೆಯ ನಂತರ, ಅಂತಿಮವಾಗಿ ವಿಶ್ವಸಂಸ್ಥೆಯೊಳಗಿನ ಮತದಾನ ಪ್ರಕ್ರಿಯೆ ಮೂಲಕ ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ. 2025ರಲ್ಲಿ ನಾಲ್ಕು ಅಂತಿಮ ಸ್ಪರ್ಧಿಗಳ ಪೈಕಿ ಮೇಜರ್ ಸ್ವಾತಿ ಅವರು ಅತ್ಯಧಿಕ ಮತಗಳನ್ನು ಪಡೆದು ಪ್ರಶಸ್ತಿಗೆ ಭಾಜನರಾದರು.

➤ "ಸಮಾನ ಪಾಲುದಾರರು, ಶಾಶ್ವತ ಶಾಂತಿ (Equal Partners, Lasting Peace)" ಎಂಬ ಯೋಜನೆಯನ್ನು ಮೇಜರ್ ಸ್ವಾತಿ ಶಾಂತ

ಕುಮಾರ್ ಅವರು ರೂಪಿಸಿ ಮುನ್ನಡೆಸಿದ್ದು, ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಮಹಿಳೆಯರ ಸಮಾನ ಪಾಲುದಾರಿಕೆಯನ್ನು ಖಚಿತಪಡಿಸುವುದು, ಸ್ಥಳೀಯ ಸಮುದಾಯಗಳೊಂದಿಗೆ ಪರಸ್ಪರ ನಂಬಿಕೆ ಬೆಳೆಸುವುದು ಮತ್ತು ಶಾಶ್ವತ ಶಾಂತಿ ಹಾಗೂ ಸಾಮಾಜಿಕ ಸ್ಥಿರತೆಯನ್ನು ಸಾಧಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ. ದಕ್ಷಿಣ ಸುಡಾನ್‌ನಲ್ಲಿನ UNMISS ಅಡಿಯಲ್ಲಿ ಕಾರ್ಯನಿರ್ವಹಿಸಿದ Indian Engagement Team ಗೆ ಅವರು ನಾಯಕತ್ವ ವಹಿಸಿ, ಮಹಿಳಾ ಶಾಂತಿಪಾಲಕರ ಸಕ್ರಿಯ ಪಾತ್ರದ ಮೂಲಕ ಸಮುದಾಯ ಸಂಪರ್ಕ ಮತ್ತು ಶಾಂತಿಪಾಲನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸಿದರು.

**➤ ಯೋಜನೆಯ ಪ್ರಮುಖ ಸಾಧನೆಗಳು:-**

=> ಮಹಿಳಾ ಶಾಂತಿಪಾಲಕರನ್ನು ಪರಿಣಾಮಕಾರಿಯಾಗಿ ನಿಯೋಜನೆ

=> ದೂರದ ಮತ್ತು ಸಂಘರ್ಷಪೀಡಿತ ಪ್ರದೇಶಗಳಲ್ಲಿ ಸುರಕ್ಷಿತ ಗಸ್ತು

=> ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಬಲವರ್ಧನೆ

=> ಮಹಿಳೆಯರು ಸಾರ್ವಜನಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಸುರಕ್ಷಿತ ವಾತಾವರಣ

ಈ ಯೋಜನೆಯ ಮೂಲಕ 5,000ಕ್ಕೂ ಹೆಚ್ಚು ಮಹಿಳೆಯರಿಗೆ ನೇರ ನೆರವು ದೊರೆತಿದೆ.

➤ ಯೋಜನೆಯ ಮಹತ್ವ:-

=> ಲಿಂಗ ಸಮಾನತೆ ಶಾಂತಿಪಾಲನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತದೆ ಎಂಬುದಕ್ಕೆ ಜಾಗತಿಕ ಮಾದರಿ

=> ಸ್ಥಳೀಯ ಸಮುದಾಯಗಳಲ್ಲಿ ವಿಶ್ವಸಂಸ್ಥೆಯ ಮೇಲಿನ ವಿಶ್ವಾಸ ವೃದ್ಧಿ

=> ಮಹಿಳಾ ನಾಯಕತ್ವವು ಶಾಂತಿ ಸ್ಥಾಪನೆಗೆ ಎಷ್ಟು ಅಗತ್ಯ ಎಂಬುದನ್ನು ಸ್ಪಷ್ಟಪಡಿಸಿದೆ

=> ದೀರ್ಘಕಾಲೀನ ಶಾಂತಿ ಮತ್ತು ಸ್ಥಿರತೆಯತ್ತ ಮಹತ್ವದ ಹೆಜ್ಜೆ

➤ ಇದು ಭಾರತಕ್ಕೆ ಮತ್ತೊಂದು ಮಹತ್ವದ ಗೌರವ. ಇದಕ್ಕೂ ಮೊದಲು 2023ರಲ್ಲಿ ಭಾರತೀಯ ಸೇನೆಯ ಮೇಜರ್ ರಾಧಿಕಾ ಸೆನ್ ಅವರು ಇದೇ ಲಿಂಗ ಸಮಾನತೆ ಪ್ರತಿಪಾದಕ ಪ್ರಶಸ್ತಿಯನ್ನು ಪಡೆದಿದ್ದರು. ಇದು ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾರತದ ಬಲವಾದ ಪಾತ್ರವನ್ನು ಮತ್ತೊಮ್ಮೆ ಸಾಬೀತುಪಡಿಸುತ್ತದೆ.

## ಇತಿಹಾಸ ಸೃಷ್ಟಿಸಿದ ನ್ಯಾಯಮೂರ್ತಿ ರೇವತಿ ಮೊಹಿತೆ ಡೇರೆ: ಮೇಘಾಲಯ ಹೈಕೋರ್ಟ್‌ನ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ




➤ ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆಗೆ ಹೆಸರಾದ ಈಶಾನ್ಯ ಭಾರತದ ಮೇಘಾಲಯ ರಾಜ್ಯದಲ್ಲಿ ಮೊದಲ ಬಾರಿಗೆ ಮಹಿಳೆಯೊಬ್ಬರು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವುದು ಐತಿಹಾಸಿಕ ಘಟ್ಟವಾಗಿದೆ. ನ್ಯಾಯಮೂರ್ತಿ ರೇವತಿ ಮೊಹಿತೆ ಡೇರೆ ಅವರು ಶನಿವಾರ (ಜನವರಿ 10) ಶಿಲಾಂಗ್‌ನ ಲೋಕಭವನದ ದರ್ಬಾರ್ ಹಾಲ್‌ನಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಮೇಘಾಲಯ ಹೈಕೋರ್ಟ್‌ನ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

➤ಮೇಘಾಲಯದ ರಾಜ್ಯಪಾಲರಾದ ಚಂದ್ರಶೇಖರ್ ಎಚ್. ವಿಜಯಶಂಕರ್ ಅವರು ನ್ಯಾಯಮೂರ್ತಿ ರೇವತಿ ಮೊಹಿತೆ ಡೇರೆ ಅವರಿಗೆ ಪದವಿ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ಈ ಸಮಾರಂಭದಲ್ಲಿ ಹಿರಿಯ ನ್ಯಾಯಾಧೀಶರು, ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು ಮತ್ತು ಕಾನೂನು ಕ್ಷೇತ್ರದ ಗಣ್ಯರು ಉಪಸ್ಥಿತರಿದ್ದರು. ಈ ನೇಮಕಾತಿಯು ಭಾರತದ ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿನ ಒಂದು ಪ್ರಮುಖ ಹೆಜ್ಜೆಯಾಗಿದೆ.

➤ ನ್ಯಾಯಮೂರ್ತಿ ರೇವತಿ ಮೊಹಿತೆ ದೇರೆ ಅವರು ಈ ಹಿಂದೆ ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದರು. ಅವರು: ಸಂವಿಧಾನಾತ್ಮಕ ಕಾನೂನು, ಅಪರಾಧ ನ್ಯಾಯಶಾಸ್ತ್ರ, ನಾಗರಿಕ ಕಾನೂನು ಕ್ಷೇತ್ರಗಳಲ್ಲಿ ತಮ್ಮ ವಿಶಿಷ್ಟ ಪರಿಣತಿ ಮತ್ತು ನಿಷ್ಪಕ್ಷಪಾತ ತೀರ್ಪುಗಳಿಗಾಗಿ ಖ್ಯಾತರಾಗಿದ್ದಾರೆ. ಅವರ ನ್ಯಾಯಾಂಗ ಅನುಭವ, ಪ್ರಾಮಾಣಿಕತೆ ಮತ್ತು ಕಾರ್ಯನಿಷ್ಠೆಯನ್ನು ಗುರುತಿಸಿ, ಕಳೆದ ವರ್ಷ ಡಿಸೆಂಬರ್ 18ರಂದು ಸುಪ್ರೀಂ ಕೋರ್ಟ್ ಕೊಲಿಜಿಯಂ ಅವರು ಅವರನ್ನು ಮೇಘಾಲಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಶಿಫಾರಸು ಮಾಡಿತ್ತು.

➤ ಮೇಘಾಲಯ ಹೈಕೋರ್ಟ್‌ನ ಹಿಂದಿನ ಮುಖ್ಯ ನ್ಯಾಯಮೂರ್ತಿ ನ್ಯಾಯಮೂರ್ತಿ ಸೌಮೆನ್ ಸೆನ್ ಅವರನ್ನು ಕೇರಳ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ. ಅವರ ವರ್ಗಾವಣೆಯ ನಂತರ, ನ್ಯಾಯಮೂರ್ತಿ ರೇವತಿ ಮೊಹಿತೆ ಡೇರೆ ಅವರಿಗೆ ಈ ಪ್ರಮುಖ ಜವಾಬ್ದಾರಿ ವಹಿಸಲಾಯಿತು.

**➤ ನ್ಯಾಯಮೂರ್ತಿ ಡೇರೆ ಅವರ ನೇಮಕಾತಿ:**

=> ಮಹಿಳಾ ಪ್ರತಿನಿಧಿತ್ವವನ್ನು ಹೆಚ್ಚಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ

=> ಉನ್ನತ ನ್ಯಾಯಾಂಗದಲ್ಲಿ ಲಿಂಗ ಸಮಾನತೆಯ ಸಂಕೇತ

=> ಮಾತೃಪ್ರಧಾನ ಸಮಾಜವಿದ್ದರೂ ಇತ್ತೀಚೆಗೆ ಮಾತ್ರ ಮಹಿಳಾ ಮುಖ್ಯ ನ್ಯಾಯಮೂರ್ತಿ ನೇಮಕವಾದುದರ ವೈಶಿಷ್ಟ್ಯ

ಎಂಬ ಅಂಶಗಳಿಂದ ವಿಶೇಷ ಗಮನಸೆಳೆದಿದೆ. ಕಾನೂನು ತಜ್ಞರ ಅಭಿಪ್ರಾಯದಂತೆ, ಇದು ಭಾರತದ ಉನ್ನತ ನ್ಯಾಯಾಂಗದಲ್ಲಿ ಸಮಾವೇಶ ಮತ್ತು ಸಂಸ್ಥಾತ್ಮಕ ಸಮಾನತೆಯನ್ನು ಬಲಪಡಿಸುವ ಸಂಕೇತವಾಗಿದೆ.

➤ ನ್ಯಾಯಮೂರ್ತಿ ರೇವತಿ ಮೊಹಿತೆ ಡೇರೆ ಅವರ ನಾಯಕತ್ವದಲ್ಲಿ:

=> ನ್ಯಾಯಾಂಗದಲ್ಲಿ ಸಮಯಬದ್ಧ ನ್ಯಾಯ ವಿತರಣೆ

=> ಸಂವಿಧಾನಾತ್ಮಕ ಆಡಳಿತದ ಬಲವರ್ಧನೆ

=> ಈಶಾನ್ಯ ಪ್ರದೇಶಗಳಲ್ಲಿ ನ್ಯಾಯದ ಪ್ರಾಪ್ಯತೆಯ ವಿಸ್ತರಣೆ

ಮುಂದುವರೆಯಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

## ಸೋಮನಾಥದಲ್ಲಿ ಭಕ್ತಿಯ ಪರಾಕಾಷ್ಠೆ: ಪ್ರಧಾನಿ ಮೋದಿಯಿಂದ ವಿಶೇಷ ಪೂಜೆ ಹಾಗೂ ಶೌರ್ಯ ಯಾತ್ರೆಗೆ ಚಾಲನೆ.



➤ ಗುಜರಾತಿನ ಪವಿತ್ರ ಸೋಮನಾಥ ದೇವಾಲಯದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಶನಿವಾರ ವಿಶೇಷ ಪೂಜೆ ಸಲ್ಲಿಸಿ, ಐತಿಹಾಸಿಕ 'ಸೋಮನಾಥ ಸ್ವಾಭಿಮಾನ ಪರ್ವ್' ಆಚರಣೆಗಳಲ್ಲಿ ಭಾಗವಹಿಸಿದರು. ಕ್ರಿ.ಶ. 1026ರಲ್ಲಿ ಮಹ್ಮೂದ್ ಗಜ್ನಿ ನಡೆಸಿದ ಸೋಮನಾಥ ದೇವಾಲಯದ ಮೊದಲ ದಾಳಿಗೆ 1,000 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ಸ್ವಾಭಿಮಾನ ಪರ್ವ್ ಆಚರಿಸಲಾಗುತ್ತಿದೆ. ಪ್ರಧಾನಮಂತ್ರಿಯವರು ದೇವಾಲಯದಲ್ಲಿ ಓಂಕಾರ ಮಂತ್ರ ಜಪದಲ್ಲಿ ಭಾಗವಹಿಸಿ, ವಿಶೇಷ ಪೂಜೆ-ವಿಧಿಗಳನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಭಕ್ತರೊಂದಿಗೆ ಆತ್ಮೀಯವಾಗಿ ಧಾರ್ಮಿಕ ಆಚರಣೆಗಳಲ್ಲಿ ತೊಡಗಿಸಿಕೊಂಡರು.

➤ ಸ್ವಾಭಿಮಾನ ಪರ್ವ್ ಅಂಗವಾಗಿ ಆಯೋಜಿಸಿದ್ದ ವಿಶಾಲ ಡ್ರೋನ್ ಶೋ ಪ್ರಮುಖ ಆಕರ್ಷಣೆಯಾಗಿತ್ತು. ಸುಮಾರು 3,000 ಡ್ರೋನ್‌ಗಳು ಬಳಸಲ್ಪಟ್ಟು, ಭಗವಾನ್ ಶಿವ, ಶಿವಲಿಂಗ ಹಾಗೂ ಸೋಮನಾಥ ದೇವಾಲಯದ 3ಡಿ ರೂಪಕಗಳನ್ನು

ಪ್ರದರ್ಶಿಸಲಾಯಿತು. ಜೊತೆಗೆ ದೇವಾಲಯದ ಇತಿಹಾಸಕ್ಕೆ ಸಂಬಂಧಿಸಿದ ಪ್ರಮುಖ ಘಟನೆಗಳನ್ನು ಡ್ರೋನ್‌ಗಳ ಮೂಲಕ ಸೃಜನಾತ್ಮಕವಾಗಿ ಅನಾವರಣಗೊಳಿಸಲಾಯಿತು. ಇದು ದೇಶದಲ್ಲೇ ದೇವಾಲಯದ ಸಮೀಪ ಆಯೋಜಿಸಲಾದ ಅತಿದೊಡ್ಡ ಡ್ರೋನ್ ಪ್ರದರ್ಶನಗಳಲ್ಲಿ ಒಂದಾಗಿದೆ.

➤ ಈ ಸಮಾರಂಭದಲ್ಲಿ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹಾಗೂ ಉಪಮುಖ್ಯಮಂತ್ರಿ ಹರ್ಷ್ ಸಂಘವಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಜನವರಿ 8ರಂದು ಆರಂಭವಾದ ಸೋಮನಾಥ ಸ್ವಾಭಿಮಾನ ಪರ್ವ್ ಜನವರಿ 11ರಂದು ಸಮಾಪ್ತಿಯಾಗಲಿದೆ. ಪ್ರಧಾನಮಂತ್ರಿ ಅವರು ಮೂರು ದಿನಗಳ ಗುಜರಾತ್ ಪ್ರವಾಸದಲ್ಲಿದ್ದು, ಈ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಸೋಮನಾಥ ದೇವಾಲಯಕ್ಕೆ ಆಗಮಿಸಿದ ವೇಳೆ, ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹಾಗೂ ಇತರ ಗಣ್ಯರು ಅವರಿಗೆ ಭವ್ಯ ಸ್ವಾಗತ ಕೋರಿದರು. ದೇವಾಲಯದ ಸಮೀಪದ ವಿಐಪಿ ಸರ್ಕ್ಯೂಟ್ ಹೌಸ್‌ಗೆ ತೆರಳುವ ಮಾರ್ಗದಲ್ಲಿ ಪ್ರಧಾನಿ ಅವರು ಸಂಕ್ಷಿಪ್ತ ರಸ್ತೆ ಪ್ರದರ್ಶನ (ರೋಡ್‌ಶೋ) ನಡೆಸಿದರು. ರಸ್ತೆಯ ಎರಡೂ ಬದಿಗಳಲ್ಲಿ ನೆರೆದಿದ್ದ ಸ್ಥಳೀಯರು ಮತ್ತು ಭಕ್ತರು ಉತ್ಸಾಹದಿಂದ ಸ್ವಾಗತಿಸಿದರು.

➤ ಭಾನುವಾರ 11-01 -2026 ರಂದು ನಡೆದ 'ಶೌರ್ಯ ಯಾತ್ರೆ' ಯಲ್ಲಿ ಪ್ರಧಾನಿ ಭಾಗವಹಿಸಿದ್ದರು ಸೋಮನಾಥ ದೇವಾಲಯವನ್ನು ರಕ್ಷಿಸುವ ವೇಳೆ ಪ್ರಾಣ ತ್ಯಾಗ ಮಾಡಿದ ವೀರರನ್ನು ಸ್ಮರಿಸಲು ಈ ಯಾತ್ರೆ ಆಯೋಜಿಸಲಾಗಿದ್ದು, 108 ಕುದುರೆಗಳ ಸಂಕೇತಾತ್ಮಕ ಮೆರವಣಿಗೆ ಇದರ ವಿಶೇಷವಾಗಿದೆ. ಇತಿಹಾಸದ ಅನೇಕ ದಾಳಿಗಳ ನಡುವೆಯೂ ಸೋಮನಾಥ ದೇವಾಲಯವು ಇಂದು ಅಚಲ ಧೈರ್ಯ, ಆಸ್ಥೆ ಮತ್ತು ರಾಷ್ಟ್ರೀಯ ಸ್ವಾಭಿಮಾನದ ಶಕ್ತಿಶಾಲಿ ಸಂಕೇತವಾಗಿ ನಿಂತಿದೆ ಎಂದು ಸರ್ಕಾರ ತನ್ನ ಪ್ರಕಟಣೆಯಲ್ಲಿ ಹೇಳಿದೆ. ದೇವಾಲಯದ ಪುನರುತ್ಥಾನವು ಸಮೂಹ ಸಂಕಲ್ಪ ಮತ್ತು ನಿರಂತರ ಪ್ರಯತ್ನಗಳ ಫಲವೆಂದು ಸರ್ಕಾರ ಅಭಿಪ್ರಾಯಪಟ್ಟಿದೆ.

➤ ಸೋಮನಾಥ ಸ್ವಾಭಿಮಾನ ಪರ್ವ್‌ನಲ್ಲಿ ಪ್ರಧಾನಮಂತ್ರಿ ಅವರ ಭಾಗವಹಿಸುವಿಕೆ, ಭಾರತದ ನಾಗರಿಕತೆಯ ಶಾಶ್ವತ ಆತ್ಮಬಲವನ್ನು ಪ್ರತಿಬಿಂಬಿಸುವುದರ ಜೊತೆಗೆ, ದೇಶದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಸಂರಕ್ಷಿಸಿ ಸಂಭ್ರಮಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

## ಅಂತರರಾಷ್ಟ್ರೀಯ ಕ್ರಿಕೆಟ್ ಇತಿಹಾಸದಲ್ಲಿ ವಿರಾಟ್ ಕೊಹ್ಲಿ ಮತ್ತೊಂದು ಮೈಲಿಗಲ್ಲು: ದ್ವಿತೀಯ ಅತಿ ಹೆಚ್ಚು ರನ್‌ಗಳ ಸಾಧಕ




* ಭಾರತೀಯ ಕ್ರಿಕೆಟ್‌ನ ಮಹಾನ್ ಬ್ಯಾಟರ್ ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಇತಿಹಾಸದಲ್ಲಿ ಮತ್ತೊಂದು ಅದ್ಭುತ ಸಾಧನೆ ಮಾಡಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ (ಒಡಿಐ) ಕೇವಲ 41 ರನ್‌ಗಳ ಅಗತ್ಯವಿದ್ದ ಕೊಹ್ಲಿ, ಶ್ರೀಲಂಕಾದ ಮಾಜಿ ನಾಯಕ ಕುಮಾರ್ ಸಂಗಕ್ಕಾರರನ್ನು ಹಿಂದಿಕ್ಕಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಎರಡನೇ ಅತಿ ಹೆಚ್ಚು ರನ್‌ಗಳ ಸಾಧಕರಾಗಿ ಹೊರಹೊಮ್ಮಿದ್ದಾರೆ.

* ಈ ಸಾಧನೆಯೊಂದಿಗೆ ಕೊಹ್ಲಿ ಈಗ ಕೇವಲ ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಅವರ ಹಿಂದೆ ಮಾತ್ರ ಇದ್ದಾರೆ. ಬಾರೋಡಾದಲ್ಲಿ ಭಾನುವಾರ (ಜನವರಿ 11) ನಡೆದ ಪಂದ್ಯದಲ್ಲಿ ಈ ಮೈಲಿಗಲ್ಲು ತಲುಪಿದ ಕೊಹ್ಲಿ, 2026ನೇ ವರ್ಷವನ್ನು ಅದ್ಭುತ ಶೈಲಿಯಲ್ಲಿ ಆರಂಭಿಸಿದ್ದಾರೆ. ಇದು ಹೊಸ ವರ್ಷವಾಗಿದ್ದರೂ, ಮೈದಾನದಲ್ಲಿ ಅಭಿಮಾನಿಗಳಿಗೆ ಪರಿಚಿತವಾಗಿರುವ ಅದೇ ವಿರಾಟ್ ಕೊಹ್ಲಿಯ ಆತ್ಮವಿಶ್ವಾಸ ಮತ್ತು ಸತತ ಪ್ರದರ್ಶನ ಮುಂದುವರಿದಿದೆ. ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಮೂರು ಪಂದ್ಯಗಳಲ್ಲಿ 302 ರನ್ ಗಳಿಸಿದ್ದ ಕೊಹ್ಲಿ, ನಂತರ ವಿಜಯ್ ಹಜಾರೆ ಟ್ರೋಫಿಯಲ್ಲಿ ದೆಹಲಿ ಪರ ಆಡುತ್ತಾ ಒಂದು ಶತಕ ಮತ್ತು ಅರ್ಧಶತಕ ದಾಖಲಿಸಿದ್ದರು.

* ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 28,000 ರನ್‌ಗಳನ್ನು ಅತೀ ವೇಗವಾಗಿ ಪೂರ್ಣಗೊಳಿಸಿದ ಆಟಗಾರ ಎಂಬ ಮತ್ತೊಂದು ದಾಖಲೆಗೂ ಪಾತ್ರರಾಗಿದ್ದಾರೆ. ಈ ಮೂಲಕ ಸಚಿನ್ ತೆಂಡೂಲ್ಕರ್ ಹಾಗೂ ಕುಮಾರ್ ಸಂಗಕ್ಕಾರರ ದಾಖಲೆಗಳನ್ನು ಮುರಿದಿದ್ದಾರೆ.

* ಇತ್ತೀಚಿನ ದಿನಗಳಲ್ಲಿ ಕೊಹ್ಲಿಯ ಒಡಿಐ ಬ್ಯಾಟಿಂಗ್ ಶೈಲಿಯಲ್ಲಿ ಬದಲಾವಣೆ ಕಾಣಿಸುತ್ತಿದೆ. ಇನ್ನಿಂಗ್ಸ್ ಆರಂಭದಲ್ಲೇ ಹೆಚ್ಚು ಆಕ್ರಮಣಕಾರಿ ಆಟವಾಡುತ್ತಿರುವ ಅವರು, ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲೂ ಅದನ್ನು ತೋರಿಸಿದರು. ಇನ್ನಿಂಗ್ಸ್ ಆರಂಭದಲ್ಲೇ ಅದ್ಭುತ ಸ್ಟ್ರೈಟ್ ಡ್ರೈವ್ ಮೂಲಕ ರನ್ ಖಾತೆ ತೆರೆದ ಕೊಹ್ಲಿ, ನಿರಂತರವಾಗಿ ಬೌಂಡರಿಗಳ ಮೂಲಕ ಎದುರಾಳಿ ಬೌಲರ್‌ಗಳ ಮೇಲೆ ಒತ್ತಡ ಹೇರಿದರು. ವಯಸ್ಸು ಕೇವಲ ಸಂಖ್ಯೆ ಎಂಬುದನ್ನು ಸಾಬೀತುಪಡಿಸುತ್ತಿರುವ ವಿರಾಟ್ ಕೊಹ್ಲಿ, ಪ್ರತೀ ಪಂದ್ಯದಲ್ಲೂ ಹೊಸ ದಾಖಲೆಗಳನ್ನು ನಿರ್ಮಿಸುತ್ತಾ ಭಾರತೀಯ ಕ್ರಿಕೆಟ್‌ಗೆ ಮತ್ತಷ್ಟು ಗೌರವ ತರುತ್ತಿದ್ದಾರೆ.

## ಗೋವಾ ಉದ್ಯಮಿ ಶ್ರೀನಿವಾಸ್ ದೆಂಪೋಗೆ ಇಟಲಿಯ ಪ್ರತಿಷ್ಠಿತ ನಾಗರಿಕ ಗೌರವ



* ಗೋವಾ ಮೂಲದ ಪ್ರಸಿದ್ಧ ಉದ್ಯಮಿ ಶ್ರೀನಿವಾಸ್ ದೆಂಪೋ ಅವರಿಗೆ ಇಟಲಿ ದೇಶವು ತನ್ನ ಅತ್ಯುನ್ನತ ನಾಗರಿಕ ಗೌರವಗಳಲ್ಲಿ ಒಂದಾದ 'ಕವಾಲಿಯರೆ ದೆಲ್' ಒರ್ಡಿನೆ ದೆಲ್ಲಾ ಸ್ಟೆಲ್ಲಾ ಡಿ' ಇಟಾಲಿಯಾ' (Cavaliere dell'Ordine della Stella d'Italia) ಪ್ರಶಸ್ತಿಯನ್ನು ಪ್ರದಾನ ಮಾಡಿದೆ. ಭಾರತ-ಇಟಲಿ ನಡುವಿನ ದ್ವಿಪಕ್ಷೀಕ ಸಂಬಂಧಗಳನ್ನು ವ್ಯಾಪಾರ, ಸಂಸ್ಕೃತಿ ಹಾಗೂ ಸಮುದಾಯ ಮಟ್ಟದಲ್ಲಿ ಬಲಪಡಿಸುವಲ್ಲಿ ಅವರು ನೀಡಿದ ಮಹತ್ವದ ಕೊಡುಗೆಗಳಿಗೆ ಈ ಗೌರವ ನೀಡಲಾಗಿದೆ.

* ಶ್ರೀನಿವಾಸ್ ದೆಂಪೋ ಅವರು ವರ್ಷಗಳಿಂದ ಭಾರತ ಮತ್ತು ಇಟಲಿ ನಡುವಿನ ಸಂಸ್ಥಾತ್ಮಕ ಹಾಗೂ ಸಮುದಾಯ ಮಟ್ಟದ ಸಂಪರ್ಕಗಳನ್ನು ಬಲಪಡಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಇಟಾಲಿಯನ್ ನಾಗರಿಕರಿಗೆ ಸಹಾಯ ಮಾಡುವುದರ ಜೊತೆಗೆ, ಎರಡು ದೇಶಗಳ ನಡುವೆ ವ್ಯಾಪಾರಿಕ ಸಹಭಾಗಿತ್ವ, ಸಾಂಸ್ಕೃತಿಕ ವಿನಿಮಯ ಮತ್ತು ಸಾಮಾಜಿಕ ಉಪಕ್ರಮಗಳಿಗೆ ಉತ್ತೇಜನ ನೀಡಿರುವುದು ಈ ಗೌರವಕ್ಕೆ ಪ್ರಮುಖ ಕಾರಣವಾಗಿದೆ. ಅವರ ಕಾರ್ಯಗಳು ಪ್ರಾದೇಶಿಕ ಮಟ್ಟದ ಉದ್ಯಮ ನಾಯಕರು ಅಂತಾರಾಷ್ಟ್ರೀಯ ಸಹಕಾರ ಮತ್ತು ರಾಜತಾಂತ್ರಿಕ ಬಾಂಧವ್ಯವನ್ನು ಹೇಗೆ ಬಲಪಡಿಸಬಹುದು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

* ಈ ಪ್ರಶಸ್ತಿಯನ್ನು ಗೋವಾದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಅಧಿಕೃತವಾಗಿ ಪ್ರದಾನ ಮಾಡಲಾಯಿತು. ಇಟಲಿ ಸರ್ಕಾರದ ಪರವಾಗಿ ಮುಂಬೈನ ಇಟಾಲಿಯನ್ ಕಾನ್ಸುಲ್ ಜನರಲ್ ವಾಲ್ಟರ್ ಫೆರಾರಾ ಅವರು ಶ್ರೀನಿವಾಸ್ ದೆಂಪೋ ಅವರಿಗೆ ಈ ಗೌರವವನ್ನು ನೀಡಿದರು. ಈ ಸಮಾರಂಭದಲ್ಲಿ ಹಿರಿಯ ಅಧಿಕಾರಿಗಳು, ರಾಜತಾಂತ್ರಿಕರು ಹಾಗೂ ಉದ್ಯಮ ವಲಯದ ಪ್ರತಿನಿಧಿಗಳು ಭಾಗವಹಿಸಿದ್ದರು. ಇದರಿಂದ ಭಾರತ-ಇಟಲಿ ಸಂಬಂಧಗಳಲ್ಲಿ ಪ್ರಾದೇಶಿಕ ಮತ್ತು ಜನಮಟ್ಟದ ಸಹಕಾರಕ್ಕೆ ಇಟಲಿ ನೀಡುತ್ತಿರುವ ಮಹತ್ವ ಸ್ಪಷ್ಟವಾಗುತ್ತದೆ.

* ಭಾರತ ಮತ್ತು ಇಟಲಿ ನಡುವಿನ ಸಂಬಂಧಗಳು ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ, ತಾಂತ್ರಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ

ವೇಗವಾಗಿ ವಿಸ್ತರಿಸುತ್ತಿವೆ. ಯುರೋಪಿಯನ್ ಯೂನಿಯನ್ ಒಳಗೆ ಇಟಲಿ ಭಾರತಕ್ಕೆ ಪ್ರಮುಖ ಪಾಲುದಾರ ದೇಶವಾಗಿದ್ದು, ಉತ್ಪಾದನೆ, ವಿನ್ಯಾಸ, ಮೂಲಸೌಕರ್ಯ ಮತ್ತು ಕೈಗಾರಿಕಾ ಸಹಕಾರದಲ್ಲಿ ಮಹತ್ವದ ಪಾತ್ರ ವಹಿಸಿದೆ.

## ಮಿಲಿಟರಿ-ನಾಗರಿಕ ಸಮನ್ವಯ ಬಲಪಡಿಸಿದ 'ಸಂಯುಕ್ತ ಶಕ್ತಿ' ಸಮರಾಭ್ಯಾಸ



➤ ಭಾರತೀಯ ಸೇನೆಯು ಮಿಲಿಟರಿ ಪಡೆಗಳು ಹಾಗೂ ನಾಗರಿಕ ಸಂಸ್ಥೆಗಳ ನಡುವಿನ ಸಮನ್ವಯ ಮತ್ತು ಸಹಕಾರವನ್ನು ಬಲಪಡಿಸುವ ಉದ್ದೇಶದಿಂದ ಜನವರಿ 8–9, 2026ರಂದು ಮಹಾರಾಷ್ಟ್ರದ ಪುಣೆ ಜಿಲ್ಲೆಯ ದಿಘಿ ಹಿಲ್ಸ್ ಶ್ರೇಣಿಯಲ್ಲಿ 'ಸಂಯುಕ್ತ ಶಕ್ತಿ' ಎಂಬ ಹೆಸರಿನ ಸಮರಾಭ್ಯಾಸವನ್ನು ಯಶಸ್ವಿಯಾಗಿ ನಡೆಸಿತು. ಈ ಸಮರಾಭ್ಯಾಸವು ದಕ್ಷಿಣ ಕಮಾಂಡ್ ಅಡಿಯಲ್ಲಿ ಆಯೋಜಿಸಲ್ಪಟ್ಟಿದ್ದು, 2026ರಲ್ಲಿ ಭಾರತೀಯ ಸೇನೆ ನಡೆಸಿದ ಮೊದಲ ಯುದ್ಧಾಭ್ಯಾಸ ಎಂಬ ವಿಶೇಷತೆ ಹೊಂದಿದೆ.

➤ ಈ ಬಾನಾಗರಿಕ ಸಮರಾಭ್ಯಾಸದ ಮುಖ್ಯ ಉದ್ದೇಶವು ತುರ್ತು ಪ್ರತಿಕ್ರಿಯೆ ವ್ಯವಸ್ಥೆ, ವಿಪತ್ತು ನಿರ್ವಹಣೆ ಹಾಗೂ ಸಾರ್ವಜನಿಕ ಸುರಕ್ಷತೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಸುಧಾರಿಸುವುದು ಆಗಿದೆ. ಸಮರಾಭ್ಯಾಸದಲ್ಲಿ ಸೇನೆ ಮತ್ತು ನಾಗರಿಕ ಸಂಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಮೂಲಕ, ಸಂಕೀರ್ಣ ಭದ್ರತಾ ಸವಾಲುಗಳು, ನೈಸರ್ಗಿಕ ವಿಕೋಪಗಳು ಮತ್ತು ತುರ್ತು ಪರಿಸ್ಥಿತಿಗಳನ್ನು ಎದುರಿಸುವ ತಂತ್ರಗಳ ಕುರಿತು ಅನುಭವ ಹಾಗೂ ಜ್ಞಾನ ವಿನಿಮಯ ನಡೆಸಲಾಯಿತು.

➤ ಈ ಅಭ್ಯಾಸದಲ್ಲಿ ಭಾರತೀಯ ಸೇನೆಯ ಜೊತೆಗೆ ಮಹಾರಾಷ್ಟ್ರ ಪೊಲೀಸ್, ಫೋರ್ಸ್ ವನ್, ಅಗ್ನಿಶಾಮಕ ಸೇವೆಗಳು ಸೇರಿದಂತೆ ಒಟ್ಟು 16 ನಾಗರಿಕ ಸಂಸ್ಥೆಗಳ ಸುಮಾರು 350 ಸಿಬ್ಬಂದಿ ಭಾಗವಹಿಸಿದ್ದರು. ಈ ಜಂಟಿ ಸಮರಾಭ್ಯಾಸವು ಮಿಲಿಟರಿ-ನಾಗರಿಕ ಸಂಯೋಜನೆಯ ಅಗತ್ಯತೆ ಮತ್ತು ಪರಿಣಾಮಕಾರಿತ್ವವನ್ನು ಸ್ಪಷ್ಟವಾಗಿ ಪ್ರದರ್ಶಿಸಿದೆ.

➤ 'ಸಂಯುಕ್ತ ಶಕ್ತಿ' ಸಮರಾಭ್ಯಾಸವು ದೇಶದ ಆಂತರಿಕ ಭದ್ರತೆ, ವಿಪತ್ತು ನಿರ್ವಹಣೆ ಮತ್ತು ಸಾರ್ವಜನಿಕ ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸುವಲ್ಲಿ ಅತ್ಯಂತ ಮಹತ್ವದ ಉಪಕ್ರಮವಾಗಿದೆ. ಭವಿಷ್ಯದಲ್ಲಿ ತುರ್ತು ಸಂದರ್ಭಗಳಲ್ಲಿ ವೇಗವಾದ, ಸಮನ್ವಿತ ಮತ್ತು ಪರಿಣಾಮಕಾರಿ ಪ್ರತಿಕ್ರಿಯೆ ನೀಡುವ ಸಾಮರ್ಥ್ಯವನ್ನು ಇದು ಮತ್ತಷ್ಟು ಹೆಚ್ಚಿಸಲಿದೆ.

## NH-544G ನಿರ್ಮಾಣದಲ್ಲಿ NHAI ಐತಿಹಾಸಿಕ ಸಾಧನೆ: ನಾಲ್ಕು ಗಿನ್ನೆಸ್ ವಿಶ್ವ ದಾಖಲೆಗಳು




➤ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (NHAI) ಆಂಧ್ರಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಬೆಂಗಳೂರು-ಕಡಪ-ವಿಜಯವಾಡ ಆರ್ಥಿಕ ಕಾರಿಡಾರ್ (NH-544G) ಯೋಜನೆಯಲ್ಲಿ ಒಟ್ಟು ನಾಲ್ಕು ಗಿನ್ನೆಸ್ ವಿಶ್ವ ದಾಖಲೆಗಳನ್ನು ನಿರ್ಮಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಭಾರತದ ತಾಂತ್ರಿಕ ಸಾಮರ್ಥ್ಯವನ್ನು ಸಾಬೀತುಪಡಿಸಿದೆ. ಈ ಕುರಿತು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಮಾಹಿತಿ ಹಂಚಿಕೊಂಡಿದ್ದಾರೆ.

**➤ ಪ್ರಮುಖ ದಾಖಲೆಗಳ ವಿವರ:-**

1. ಅತಿ ಉದ್ದದ ನಿರಂತರ ಬಿಟುಮಿನಸ್ ಕಾಂಕ್ರೀಟ್ ರಸ್ತೆ: NHAI ಕೇವಲ ಒಂದೇ ಹಂತದಲ್ಲಿ 156 ಕಿಲೋಮೀಟರ್ ಉದ್ದದ ರಸ್ತೆಗೆ ನಿರಂತರವಾಗಿ ಬಿಟುಮಿನಸ್ ಕಾಂಕ್ರೀಟ್ ಹಾಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದೆ. ಇದು ಈ ಹಿಂದೆ ಇದ್ದ 84.4 ಕಿ.ಮೀ ವಿಶ್ವ ದಾಖಲೆಯನ್ನು ಅಳಿಸಿಹಾಕಿದೆ.
2. ಗರಿಷ್ಠ ಪ್ರಮಾಣದ ಕಾಂಕ್ರೀಟ್ ಬಳಕೆ: ಈ ಬೃಹತ್ ಕಾಮಗಾರಿಯಲ್ಲಿ ಒಟ್ಟು 57,500 ಮೆಟ್ರಿಕ್ ಟನ್ ಬಿಟುಮಿನಸ್ ಕಾಂಕ್ರೀಟ್ ಅನ್ನು ಬಳಸಲಾಗಿದೆ. ಇದು ಜಾಗತಿಕವಾಗಿ ಅತಿ ಹೆಚ್ಚು ಪ್ರಮಾಣದ ಕಾಂಕ್ರೀಟ್ ಬಳಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.
3. 24 ಗಂಟೆಗಳಲ್ಲಿ ಅತಿ ವೇಗದ ಕಾಮಗಾರಿ: ಜನವರಿ 6 ರಂದು ಪುಟ್ಟಪರ್ತಿ ಬಳಿ ಕೇವಲ 24 ಗಂಟೆಗಳಲ್ಲಿ ನಿರಂತರವಾಗಿ 29.95 ಕಿ.ಮೀ ಉದ್ದದ ರಸ್ತೆಯನ್ನು ನಿರ್ಮಿಸುವ ಮೂಲಕ NHAI ಈಗಾಗಲೇ ಎರಡು ವಿಶ್ವ ದಾಖಲೆಗಳನ್ನು ತನ್ನದಾಗಿಸಿಕೊಂಡಿತ್ತು.

➤ ಈ ದಾಖಲೆ ಸಾಧನೆ ಆಂಧ್ರಪ್ರದೇಶದ ಪುಟ್ಟಪರ್ತಿ ಸಮೀಪ, ಆರು ಪಥಗಳ ಬೆಂಗಳೂರು-ಕಡಪ-ವಿಜಯವಾಡ ಆರ್ಥಿಕ ಕಾರಿಡಾರ್‌ನ ಪ್ಯಾಕೇಜ್-2 ಮತ್ತು ಪ್ಯಾಕೇಜ್-3 ವಿಭಾಗಗಳಲ್ಲಿ ಸಾಧಿಸಲಾಯಿತು. ಸುಧಾರಿತ ಯಂತ್ರೋಪಕರಣಗಳು, ಬಲವಾದ ಲಾಜಿಸ್ಟಿಕ್ಸ್ ವ್ಯವಸ್ಥೆ, ಕಟ್ಟುನಿಟ್ಟಿನ ಗುಣಮಟ್ಟ ನಿಯಂತ್ರಣ ಹಾಗೂ ಐಐಟಿ ಬಾಂಬೆಯಂತಹ ಪ್ರಮುಖ ತಾಂತ್ರಿಕ ಸಂಸ್ಥೆಗಳ ಬೆಂಬಲ ಈ ಸಾಧನೆಗೆ ಕಾರಣವಾಗಿದೆ ಎಂದು ನಿತಿನ್ ಗಡ್ಕರಿ ತಿಳಿಸಿದ್ದಾರೆ.

➤ ಸ್ಪರ್ಧಾತ್ಮಕ ಪರೀಕ್ಷೆಗಳ ದೃಷ್ಟಿಯಿಂದ ಪ್ರಾಮುಖ್ಯತೆ:

=> ಯೋಜನೆಯ ಹೆಸರು: ಬೆಂಗಳೂರು-ಕಡಪ-ವಿಜಯವಾಡ ಆರ್ಥಿಕ ಕಾರಿಡಾರ್ (NH-544G).

=> ದಾಖಲೆ ನಿರ್ಮಿಸಿದ ಸಂಸ್ಥೆ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI).

=> ಸಚಿವಾಲಯ: ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ (ಸಚಿವ: ನಿತಿನ್ ಗಡ್ಕರಿ).

## ಜರ್ಮನಿ ಪ್ರಯಾಣ ಇನ್ನು ಸುಲಭ: ಭಾರತೀಯರಿಗೆ ಟ್ರಾನ್ಸಿಟ್ ವೀಸಾ ಮುಕ್ತ ಘೋಷಣೆ! ಮೋದಿ-ಮೆರ್ಜ್ ಭೇಟಿಯ ಪ್ರಮುಖ ನಿರ್ಧಾರಗಳು




➤ ಜರ್ಮನಿಯು ಭಾರತೀಯ ನಾಗರಿಕರಿಗೆ ಮಹತ್ವದ ಸಡಿಲಿಕೆ ಘೋಷಿಸಿದ್ದು, ಜರ್ಮನ್ ವಿಮಾನ ನಿಲ್ದಾಣಗಳ ಅಂತರರಾಷ್ಟ್ರೀಯ ಟ್ರಾನ್ಸಿಟ್ ವಲಯದ ಮೂಲಕ ಪ್ರಯಾಣಿಸುವ ಸಂದರ್ಭದಲ್ಲಿ ಇನ್ನು ಮುಂದೆ ಏರ್‌ಪೋರ್ಟ್ ಟ್ರಾನ್ಸಿಟ್ ವೀಸಾ ಅಗತ್ಯವಿರುವುದಿಲ್ಲ ಎಂದು ಪ್ರಕಟಿಸಿದೆ. ಈ ನಿರ್ಧಾರವು ಜರ್ಮನಿಯ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಅವರ ಮೊದಲ ಅಧಿಕೃತ ಭಾರತ ಭೇಟಿಯ ವೇಳೆ ಘೋಷಣೆಯಾಯಿತು.

➤ ಈ ಹಿಂದೆ ಭಾರತೀಯ ಪ್ರಯಾಣಿಕರು ಜರ್ಮನಿಯ ವಿಮಾನ ನಿಲ್ದಾಣಗಳಲ್ಲಿ ಸುರಕ್ಷಿತ ಅಂತರರಾಷ್ಟ್ರೀಯ ಸಂಪರ್ಕ ಹೊಂದಿದ್ದರೂ ಶೆಂಗನ್ ಟ್ರಾನ್ಸಿಟ್ ವೀಸಾ ಪಡೆಯಬೇಕಾಗಿತ್ತು. ಹೊಸ ನಿರ್ಧಾರದಿಂದ ಭಾರತೀಯ ಪ್ರಯಾಣಿಕರಿಗೆ ಪ್ರಯಾಣ ಸುಲಭವಾಗುವ ಜೊತೆಗೆ ಜನ-ಜನ ಸಂಪರ್ಕ ಮತ್ತಷ್ಟು ಬಲಗೊಳ್ಳಲಿದೆ.

➤ ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ಭಾರತ-ಜರ್ಮನಿ ನಿಯೋಗ ಮಟ್ಟದ ಮಾತುಕತೆಗಳ ಬಳಿಕ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಈ ನಿರ್ಧಾರಕ್ಕೆ ಚಾನ್ಸೆಲರ್ ಮೆರ್ಜ್ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಜೊತೆಗೆ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ರೂಪಿಸಲಾದ ಸಮಗ್ರ ಮಾರ್ಗಸೂಚಿ ದ್ವಿಪಕ್ಷೀಯ ಶೈಕ್ಷಣಿಕ ಸಹಕಾರಕ್ಕೆ ಹೊಸ ದಿಕ್ಕು ನೀಡಲಿದೆ ಎಂದು ಹೇಳಿದರು. ಜರ್ಮನಿ

ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್ ತೆರೆಯಲು ಮುಕ್ತ ಆಹ್ವಾನ ನೀಡಲಾಗಿದೆ.

➤ ಭಾರತ-ಜರ್ಮನಿ ನಡುವಿನ ದ್ವಿಪಕ್ಷೀಯ ವ್ಯಾಪಾರವು 50 ಬಿಲಿಯನ್ ಡಾಲರ್‌ಗಿಂತ ಹೆಚ್ಚು ದಾಟಿದ್ದು, ಜರ್ಮನಿಯ 2,000ಕ್ಕೂ ಅಧಿಕ ಕಂಪನಿಗಳು ಭಾರತದಲ್ಲಿ ಕಾರ್ಯನಿರ್ವಹಿಸುತ್ತಿವೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಉಭಯ ದೇಶಗಳು ಸಹಕರಿಸುತ್ತಿದ್ದು, ಈ ಸಹಕಾರವನ್ನು ವಿಸ್ತರಿಸಲು ಭಾರತ-ಜರ್ಮನಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪಿಸುವ ಯೋಜನೆ ಘೋಷಿಸಲಾಯಿತು.

➤ ಚರ್ಚೆಗಳ ವೇಳೆ ಉಕ್ರೇನ್ ಮತ್ತು ಗಾಜಾ ಸಂಘರ್ಷ, ಭಯೋತ್ಪಾದನೆ ವಿರುದ್ಧದ ಹೋರಾಟ, ಜಾಗತಿಕ ಸಂಸ್ಥೆಗಳ ಸುಧಾರಣೆ, ಯುಎನ್ ಭದ್ರತಾ ಮಂಡಳಿ ಸುಧಾರಣೆಗೆ ಜಿ4 ಗುಂಪಿನ ಸಹಕಾರ, ಹಸಿರು ಇಂಧನ, ಹೈಡ್ರೋಜನ್ ಯೋಜನೆಗಳು, ರಕ್ಷಣೆ ಮತ್ತು ತಂತ್ರಜ್ಞಾನ ಕ್ಷೇತ್ರದ ಸಹಕಾರ ಕುರಿತು ಒಪ್ಪಂದಗಳಾಯಿತು. ಭಾರತ-ಜರ್ಮನಿ ರಾಜತಾಂತ್ರಿಕ ಸಂಬಂಧಗಳಿಗೆ 75 ವರ್ಷಗಳು ಮತ್ತು ಕಾರ್ಯತಂತ್ರದ ಪಾಲುದಾರಿಕೆಗೆ 25 ವರ್ಷಗಳು ಪೂರ್ಣಗೊಂಡ ಸಂದರ್ಭದಲ್ಲಿ ಈ ಭೇಟಿ ನಡೆದಿದ್ದು, ದ್ವಿಪಕ್ಷೀಯ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ಮಹತ್ವದ ಹೆಜ್ಜೆಯಾಗಿದೆ.

## ಭಾರತದ 38ನೇ ಸೂಪರ್ ಕಂಪ್ಯೂಟರ್ 'ಪರಮ್ ರುದ್ರ'




➤ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಸಾಧನೆ ದಾಖಲೆಯಾಗಿದೆ. ಮುಂಬೈನ ಭಾರತೀಯ ತಾಂತ್ರಿಕ ಸಂಸ್ಥೆ (ಐಐಟಿ ಬಾಂಬೆ) ಯಲ್ಲಿ ದೇಶದ 38ನೇ ಸೂಪರ್ ಕಂಪ್ಯೂಟರ್ 'ಪರಮ್ ರುದ್ರ' ಅನ್ನು ಅಧಿಕೃತವಾಗಿ ಕಾರ್ಯಾರಂಭಗೊಳಿಸಲಾಗಿದೆ. ಇದು ಕೇವಲ ಐಐಟಿ ಬಾಂಬೆಯ ಸಂಶೋಧಕರಿಗಷ್ಟೇ ಸೀಮಿತವಾಗದೆ, ದೇಶದಾದ್ಯಂತದ ವೈಜ್ಞಾನಿಕ ಸಮುದಾಯಕ್ಕೆ ಮಹತ್ವದ ಬೆಂಬಲ ಒದಗಿಸಲಿದೆ.

➤ 'ಪರಮ್ ರುದ್ರ' ಸೂಪರ್ ಕಂಪ್ಯೂಟರ್ ಅನ್ನು ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್ (NSM) ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಮಿಷನ್ ಅನ್ನು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (MeitY) ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (DST) ಜಂಟಿಯಾಗಿ ಅನುಷ್ಠಾನಗೊಳಿಸುತ್ತಿವೆ. ಈ ಯೋಜನೆಯನ್ನು ಸಿಡಾಕ್ (C-DAC), ಪುಣೆ ಮತ್ತು ಭಾರತೀಯ ವಿಜ್ಞಾನ ಸಂಸ್ಥೆ (IISc), ಬೆಂಗಳೂರು ಜಾರಿಗೆ ತರುತ್ತಿವೆ.

➤ 'ಪರಮ್ ರುದ್ರ' ಸೂಪರ್ ಕಂಪ್ಯೂಟರ್ 3 ಪೆಟಾಫ್ಲಾಪ್ಸ್ ಕಾರ್ಯಕ್ಷಮತೆಯುಳ್ಳ ಅತ್ಯಾಧುನಿಕ ಹೈ-ಪರ್ಫಾರ್ಮೆನ್ಸ್ ಕಂಪ್ಯೂಟಿಂಗ್ (HPC) ವ್ಯವಸ್ಥೆಯಾಗಿದೆ. ಇದನ್ನು ಸಂಪೂರ್ಣವಾಗಿ ಸ್ವದೇಶಿ ತಂತ್ರಜ್ಞಾನದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಸಿಡಾಕ್ (C-DAC), ಪುಣೆ ಇದರ ವಿನ್ಯಾಸ ಮತ್ತು ನಿರ್ಮಾಣಕ್ಕೆ ಪ್ರಮುಖ ಪಾತ್ರವಹಿಸಿದೆ. ಈ ವ್ಯವಸ್ಥೆಯ ವಿಶೇಷತೆಯೆಂದರೆ, ಅತ್ಯಾಧುನಿಕ Direct Contact Liquid Cooling ತಂತ್ರಜ್ಞಾನವನ್ನು ಅಳವಡಿಸಿರುವುದು. ಹೆಚ್ಚಿನ ವೇಗದಲ್ಲಿ ಗಣನೆ ನಡೆಯುವ ಸಂದರ್ಭದಲ್ಲಿ ಉಂಟಾಗುವ ಅತಿಯಾದ ಉಷ್ಣತೆಯನ್ನು ಈ ಲಿಕ್ವಿಡ್ ಕೂಲಿಂಗ್ ವ್ಯವಸ್ಥೆ ಪರಿಣಾಮಕಾರಿಯಾಗಿ ನಿಯಂತ್ರಿಸಿ, ಯಂತ್ರದ ಸ್ಥಿರ ಕಾರ್ಯಕ್ಷಮತೆಯನ್ನು ಕಾಪಾಡುತ್ತದೆ. ಇದರ ಫಲವಾಗಿ ಶಕ್ತಿ ಬಳಕೆ ಕಡಿಮೆಯಾಗುವುದರೊಂದಿಗೆ, ಗಣನೆಯ ವೇಗ, ದಕ್ಷತೆ ಮತ್ತು ವಿಶ್ವಾಸಾರ್ಹತೆ ಮತ್ತಷ್ಟು ಹೆಚ್ಚಾಗುತ್ತದೆ.

**➤ 'ಪರಮ್ ರುದ್ರ' ಸೂಪರ್ ಕಂಪ್ಯೂಟರ್ ವಿವಿಧ ಉನ್ನತ ಸಂಶೋಧನಾ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿದೆ:**

=> ಕೃತಕ ಬುದ್ಧಿಮತ್ತೆ (AI) ಮತ್ತು ಡೇಟಾ ಅನಾಲಿಟಿಕ್ಸ್

=> ಬಯೋಟೆಕ್ನಾಲಜಿ ಮತ್ತು ವೈದ್ಯಕೀಯ ಸಂಶೋಧನೆ

=> ಹವಾಮಾನ ಮುನ್ಸೂಚನೆ ಮತ್ತು ಚಂಡಮಾರುತ ಅಧ್ಯಯನ

=> ಮುಂದುವರಿದ ಉತ್ಪಾದನಾ ತಂತ್ರಜ್ಞಾನ

=> ಅಂತರಿಕ್ಷ ಮತ್ತು ಖಗೋಳ ಸಂಶೋಧನೆ

ಐಐಟಿ ಬಾಂಬೆಯ ಸುಮಾರು 200ಕ್ಕೂ ಹೆಚ್ಚು ಅಧ್ಯಾಪಕರು ಮತ್ತು 1,200ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಸಂಕೀರ್ಣ ಸಂಶೋಧನೆಗಳಿಗೆ ಈ ಸೌಲಭ್ಯವನ್ನು ಬಳಸಿಕೊಳ್ಳಲಿದ್ದಾರೆ. ಜೊತೆಗೆ ಸ್ಟಾರ್ಟ್‌ಅಪ್‌ಗಳು, MSMEಗಳು ಮತ್ತು ಕೈಗಾರಿಕಾ ಸಂಶೋಧನೆಗಳಿಗೂ ಇದು ಮಹತ್ವದ ಸಹಾಯವಾಗಲಿದೆ.

**➤ ಪ್ರಮುಖ ಸಂಶೋಧನಾ ಉಪಯೋಗಗಳು:-**

=> ಬಾಹ್ಯಾಕಾಶ ಸಂಶೋಧನೆ: ಜೈಂಟ್ ಮೀಟರ್ ವೇವ್ ರೇಡಿಯೋ ಟೆಲಿಸ್ಕೋಪ್ (GMRT) ದತ್ತಾಂಶಗಳ ವೇಗದ ಸಂಸ್ಕರಣೆ

=> ಹವಾಮಾನ ಅಧ್ಯಯನ: ಚಂಡಮಾರುತ, ಭಾರೀ ಮಳೆ, ಉಷ್ಣ ಅಲೆಗಳ ನಿಖರ ಮುನ್ಸೂಚನೆ

=> ವೈದ್ಯಕೀಯ ಕ್ಷೇತ್ರ: ಹೊಸ ಔಷಧಗಳ ಪತ್ತೆ, ಕ್ಯಾನ್ಸರ್ ಮುಂತಾದ ಕಾಯಿಲೆಗಳ ಜೀನ್ ಮ್ಯಾಪಿಂಗ್

➤ ಪರಮ್ ರುದ್ರ: ಒಟ್ಟು ₹130 ಕೋಟಿ ವೆಚ್ಚದಲ್ಲಿ ಮೂರು 'ಪರಮ್ ರುದ್ರ' ಸೂಪರ್ ಕಂಪ್ಯೂಟರ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. **ಅವುಗಳನ್ನು ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ:**

- ದೆಹಲಿ: Inter University Accelerator Centre (IUAC)
- ಪುಣೆ: Giant Metre Radio Telescope (GMRT)
- ಕೊಲ್ಕತ್ತಾ: S N Bose National Centre for Basic Sciences

➤ 'ಪರಮ್ ರುದ್ರ' ಸೇರ್ಪಡೆಯೊಂದಿಗೆ, ಭಾರತದಲ್ಲಿ ಒಟ್ಟು 38 ಸೂಪರ್ ಕಂಪ್ಯೂಟರ್‌ಗಳು ಸ್ಥಾಪನೆಯಾಗಿದ್ದು, ಅವುಗಳ ಒಟ್ಟು ಗಣನಾ ಸಾಮರ್ಥ್ಯ 44 ಪೆಟಾಫ್ಲಾಪ್ಸ್ ಗೆ ಏರಿಕೆಯಾಗಿದೆ. ಇದು ಭಾರತವನ್ನು ಜಾಗತಿಕ ಸೂಪರ್ ಕಂಪ್ಯೂಟಿಂಗ್ ಶಕ್ತಿಗಳ ಸಾಲಿಗೆ ಮತ್ತಷ್ಟು ಹತ್ತಿರ ತರುತ್ತಿದೆ.

➤ 'ಪರಮ್ ರುದ್ರ' ಸೂಪರ್ ಕಂಪ್ಯೂಟರ್ ಭಾರತದ ಆತ್ಮನಿರ್ಭರ ಭಾರತ ದೃಷ್ಟಿಕೋನಕ್ಕೆ ಬಲ ನೀಡುವ ಮಹತ್ವದ ಹೆಜ್ಜೆಯಾಗಿದೆ. ವಿಜ್ಞಾನ, ತಂತ್ರಜ್ಞಾನ, ಹವಾಮಾನ, ಆರೋಗ್ಯ ಮತ್ತು ಅಂತರಿಕ್ಷ ಸಂಶೋಧನೆಗಳಲ್ಲಿ ಜಾಗತಿಕ ಮಟ್ಟದ ಸಾಧನೆಗಳನ್ನು ಸಾಧ್ಯವಾಗಿಸುವ ಸಾಮರ್ಥ್ಯ ಇದಕ್ಕೆ ಇದೆ.

# 14 Jan 2026

## ಇಸ್ರೋದ 2026ರ ಮೊದಲ ಉಡಾವಣೆ ವಿಫಲ: PSLV-C62 ಮಿಷನ್‌ನಲ್ಲಿ ತಾಂತ್ರಿಕ ದೋಷ




➤ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) 2026ರ ಮೊದಲ ಬಾಹ್ಯಾಕಾಶ ಉಡಾವಣೆಯಲ್ಲಿ ವಿಫಲವಾಗಿದೆ. ಶ್ರೀಹರಿಕೋಟಾದ ಸತೀಶ್ ಧವನ ಬಾಹ್ಯಾಕಾಶ ಕೇಂದ್ರದಿಂದ ಉಡಾಯಿಸಲಾದ PSLV-C62 ರಾಕೆಟ್, ಭೂ ವೀಕ್ಷಣಾ ಉಪಗ್ರಹ EOS-N1 (ಅನ್ವೇಷ) ಮತ್ತು ಅದರೊಂದಿಗೆ ಇದ್ದ 15 ಸಹಯಾತ್ರಿ ಉಪಗ್ರಹಗಳನ್ನು ನಿರ್ದಿಷ್ಟ ಕಕ್ಷೆಗೆ ತಲುಪಿಸಲು ವಿಫಲವಾಯಿತು.

➤ ಉಡಾವಣೆಯ ಸುಮಾರು 30 ನಿಮಿಷಗಳ ನಂತರ, ಮೂರನೇ ಹಂತದ (Third Stage) ಅಂತ್ಯದ ವೇಳೆಗೆ ರಾಕೆಟ್‌ನಲ್ಲಿ ಅಸಾಮಾನ್ಯ ತಾಂತ್ರಿಕ ವ್ಯತ್ಯಯ ಉಂಟಾಗಿ, ರಾಕೆಟ್ ತನ್ನ ನಿಗದಿತ ಹಾರಾಟ ಮಾರ್ಗದಿಂದ ವಿಚಲಿತಗೊಂಡಿತು ಎಂದು

ಇಸ್ರೋ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಇಸ್ರೋ ಸಂಪೂರ್ಣ ತನಿಖೆ ಆರಂಭಿಸಿದೆ.

➤ ಇದು ಪಿಎಸ್‌ಎಲ್‌ವಿಗೆ ಸತತ ಎರಡನೇ ವಿಫಲ ಉಡಾವಣೆ ಆಗಿದೆ. ಕಳೆದ ವರ್ಷ ಮೇ 19ರಂದು ನಡೆದ EOS-9 ಉಪಗ್ರಹ ಉಡಾವಣೆಯಲ್ಲೂ ಮೂರನೇ ಹಂತದ ತೊಂದರೆಯಿಂದಲೇ ವಿಫಲವಾಗಿತ್ತು. ಪಿಎಸ್‌ಎಲ್‌ವಿ ಇಸ್ರೋದ 'ವರ್ಕ್‌ಹಾರ್ಸ್' ಎಂದು ಕರೆಯಲ್ಪಡುವ ರಾಕೆಟ್ ಆಗಿದ್ದು, ಇದುವರೆಗೆ ಚಂದ್ರಯಾನ್-1, ಮಂಗಳಯಾನ ಮತ್ತು ಆದಿತ್ಯ-L1 ಸೇರಿದಂತೆ 63 ಯಶಸ್ವಿ ಉಡಾವಣೆಗಳನ್ನು ನಡೆಸಿದೆ. ಈ ಉಡಾವಣೆ PSLV-DL ರೂಪಾಂತರದ ರಾಕೆಟ್ ಬಳಸಿ ನಡೆಸಲಾಗಿತ್ತು. ಇದರಲ್ಲಿ ಎರಡು ಸ್ಟ್ರ್ಯಾಪ್-ಆನ್ ಮೋಟಾರ್‌ಗಳಿದ್ದು, ಅವು ಸರಿಯಾಗಿ ಕಾರ್ಯನಿರ್ವಹಿಸಿದರೂ ಮೂರನೇ ಹಂತದ ನಂತರ ಸಮಸ್ಯೆ ಎದುರಾಯಿತು.

➤ ಈ ಮಿಷನ್‌ನಲ್ಲಿ ಡಿಆರ್‌ಡಿಒ ಮತ್ತು ಇಸ್ರೋ ಸಂಯುಕ್ತವಾಗಿ ಅಭಿವೃದ್ಧಿಪಡಿಸಿದ EOS-N1 ಅನ್ವೇಷ ಉಪಗ್ರಹದ ಜೊತೆಗೆ, ಭಾರತ ಮತ್ತು ವಿದೇಶಗಳ ಹಲವಾರು ಸ್ಟಾರ್ಟ್‌ಅಪ್‌ಗಳು ಹಾಗೂ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಉಪಗ್ರಹಗಳು ಸೇರಿದ್ದವು. ಕರ್ನಾಟಕ, ಒಡಿಶಾ, ಮಣಿಪುರ ಮತ್ತು ಅಸ್ಸಾಂ ರಾಜ್ಯಗಳ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ ಉಪಗ್ರಹಗಳೂ ಇದರಲ್ಲಿ ಸೇರಿವೆ.

➤ ಮುಖ್ಯವಾಗಿ, ಈ ಮಿಷನ್‌ನಲ್ಲಿ ಸ್ಪೇನ್‌ನ Orbital Paradigm ಸ್ಟಾರ್ಟ್‌ಅಪ್ ಅಭಿವೃದ್ಧಿಪಡಿಸಿದ KID ಕ್ಯಾಪ್ಸೂಲ್ ಕೂಡ ಇದ್ದು, ಭೂಮಿಯ ವಾತಾವರಣಕ್ಕೆ ಮರುಪ್ರವೇಶ (Re-entry) ಪ್ರದರ್ಶನ ನಡೆಸುವುದು ಇದರ ಉದ್ದೇಶವಾಗಿತ್ತು. ಈ ಕ್ಯಾಪ್ಸೂಲ್ ಪಿಎಸ್ ಎಲ್‌ವಿ ನಾಲ್ಕನೇ ಹಂತದೊಂದಿಗೆ ದಕ್ಷಿಣ ಪೆಸಿಫಿಕ್ ಮಹಾಸಾಗರದಲ್ಲಿ ಬೀಳಬೇಕಿತ್ತು. ಆದರೆ ಮಿಷನ್ ವಿಫಲವಾದ ಕಾರಣ, ಎಲ್ಲಾ ಪೇಲೋಡ್‌ಗಳು ನಷ್ಟವಾಗಿರುವ ಸಾಧ್ಯತೆ ಇದೆ. ಈ ಉಡಾವಣೆಯಲ್ಲಿ ಯುಕೆ-ಥೈಲ್ಯಾಂಡ್‌ನ Theos-2 ಉಪಗ್ರಹ, ಬ್ರೆಜಿಲ್‌ನ ಐದು ಉಪಗ್ರಹಗಳು, ನೇಪಾಳದ ತಂತ್ರಜ್ಞಾನ ಪ್ರದರ್ಶನ ಉಪಗ್ರಹ ಮತ್ತು ವಿವಿಧ ವಾಣಿಜ್ಯ ಪ್ರಯೋಗಾತ್ಮಕ ಪೇಲೋಡ್‌ಗಳು ಸೇರಿದ್ದವು.

➤ ಇತ್ತೀಚಿನ ವರ್ಷಗಳಲ್ಲಿ ಇಸ್ರೋ ವಿಳಂಬಗಳು ಮತ್ತು ವಿಫಲತೆಗಳನ್ನು ಎದುರಿಸುತ್ತಿದ್ದು, ಕಳೆದ ಒಂದು ವರ್ಷದಲ್ಲಿ ಐದು ಮಿಷನ್‌ಗಳ ಪೈಕಿ ಮೂರು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಆದರೂ 2026ರಲ್ಲಿ ಇನ್ನೂ ಐದು ಪ್ರಮುಖ ಮಿಷನ್‌ಗಳನ್ನು ಇಸ್ರೋ ಯೋಜಿಸಿದ್ದು, ಅವುಗಳಲ್ಲಿ ಗಗನಯಾನ ಮಾನವರಹಿತ ಪರೀಕ್ಷಾ ಹಾರಾಟ ಮತ್ತು ಮೊದಲ ಉದ್ಯಮ ನಿರ್ಮಿತ ಪಿಎಸ್‌ಎಲ್‌ವಿ ಉಡಾವಣೆಯೂ ಸೇರಿವೆ. ಪ್ರಸ್ತುತ, PSLV-C62 ಮಿಷನ್‌ನ ಪೇಲೋಡ್‌ಗಳನ್ನು ಮರುಪಡೆಯುವ ಸಾಧ್ಯತೆ ಅಥವಾ ಮಿಷನ್ ಪುನಃ ಪ್ರಯತ್ನಿಸುವ ಬಗ್ಗೆ ಇಸ್ರೋ ಅಧಿಕೃತ ಘೋಷಣೆ ನೀಡಿಲ್ಲ.

## ಅಮೆರಿಕ-ವೆನೆಜುವೆಲಾ ಸಂಘರ್ಷ: 'ವೆನೆಜುವೆಲಾದ ಹಂಗಾಮಿ ಅಧ್ಯಕ್ಷ ನಾನೇ' ಎಂದ ಟ್ರಂಪ್! ಜಾಗತಿಕ ರಾಜಕಾರಣದಲ್ಲಿ ಹೊಸ ಸಂಚಲನ




➤ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒಂದು ಸಾಮಾಜಿಕ ಜಾಲತಾಣದ ಪೋಸ್ಟ್ ಈಗ ಇಡೀ ವಿಶ್ವದ ಗಮನವನ್ನು ಸೆಳೆದಿದೆ. ತಮ್ಮ ಅಧಿಕೃತ 'ಟ್ರೂತ್ ಸೋಶಿಯಲ್' (Truth Social) ಖಾತೆಯಲ್ಲಿ ತಾವು "ವೆನೆಜುವೆಲಾದ ಹಂಗಾಮಿ ಅಧ್ಯಕ್ಷ" (Acting President of Venezuela) ಎಂದು ಘೋಷಿಸಿಕೊಂಡಿರುವುದು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರೀ ಚರ್ಚೆಗೆ ಹಾಗೂ ವಿವಾದಕ್ಕೆ ನಾಂದಿ ಹಾಡಿದೆ.

ಟ್ರಂಪ್ ಹಂಚಿಕೊಂಡಿರುವ ಚಿತ್ರವು ವಿಕಿಪೀಡಿಯಾ ಪುಟದ ಅಧಿಕೃತ ಶೈಲಿಯನ್ನು ಹೋಲುತ್ತಿದ್ದು, ಅದರಲ್ಲಿ "Incumbent January 2026" ಎಂದು ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲದೆ, ತಾವು ಅಮೆರಿಕದ 45ನೇ ಮತ್ತು 47ನೇ ಅಧ್ಯಕ್ಷ ಎಂಬ ಮಾಹಿತಿಯ ಜೊತೆಗೆ ವೆನೆಜುವೆಲಾದ ಉಸ್ತುವಾರಿಯನ್ನೂ ವಹಿಸಿಕೊಂಡಿರುವುದಾಗಿ ಇದರಲ್ಲಿ ಬಿಂಬಿಸಲಾಗಿದೆ.


ಅಮೆರಿಕದ ಪ್ರಮುಖ ಮಾಧ್ಯಮ ಸಂಸ್ಥೆ Media ITE ಇದನ್ನು "ಅತ್ಯಂತ ವಿಚಿತ್ರ ಪೋಸ್ಟ್" ಎಂದು ಕರೆದರೆ, ಭಾರತದ ದಿ ಎಕನಾಮಿಕ್ ಟೈಮ್ಸ್ ಸೇರಿದಂತೆ ಹಲವು ಸಂಸ್ಥೆಗಳು ಇದು ಡಿಜಿಟಲ್ ರೂಪಾಂತರಿತ (Doctored/Altered) ಚಿತ್ರ ಎಂದು ವರದಿ ಮಾಡಿವೆ.

➤ ಜನವರಿ 3ರಂದು ಅಮೆರಿಕ ವೆನೆಜುವೆಲಾದ ಮೇಲೆ ಭಾರಿ ಪ್ರಮಾಣದ ವಾಯುದಾಳಿ ನಡೆಸಿ, ಅಧ್ಯಕ್ಷ ನಿಕೋಲಸ್ ಮಡೂರೊ ಮತ್ತು ಅವರ ಪತ್ನಿಯನ್ನು ಬಂಧಿಸಿದೆ ಎಂಬ ವರದಿಗಳೂ ಹೊರಬಂದಿವೆ. ನಂತರ ವೆನೆಜುವೆಲಾದ ಉಪಾಧ್ಯಕ್ಷೆಯಾಗಿದ್ದ ಡೆಲ್ಸಿ ರಾಡ್ರಿಗಸ್ ಅವರು ಜನವರಿ 5ರಂದು ಹಂಗಾಮಿ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ ಎಂದು ಶಿನ್‌ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

➤ ಟ್ರಂಪ್ ಅವರ ಈ ಪೋಸ್ಟ್‌ಗೆ ವೆನೆಜುವೆಲಾ ಸರ್ಕಾರದಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಅನೇಕರು ಈ ಹೇಳಿಕೆಯನ್ನು ಅಕ್ರಮ, ವಸಾಹತು ಮನೋಭಾವದ ಪ್ರತೀಕ ಎಂದು ಟೀಕಿಸಿದ್ದಾರೆ. ಕೆಲ ಭೌಗೋಳಿಕ-ರಾಜಕೀಯ ವಿಶ್ಲೇಷಕರು, ಅಮೆರಿಕದ ಇತಿಹಾಸದಲ್ಲಿ ಯಾವುದೇ ಅಧ್ಯಕ್ಷರು ವಿದೇಶಿ ರಾಷ್ಟ್ರದ ಮೇಲೆ ಕಾರ್ಯನಿರ್ವಹಣಾಧಿಕಾರ ಘೋಷಿಸಿರುವ ಉದಾಹರಣೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

➤ ಇದಕ್ಕೂ ಮುನ್ನ ಟ್ರಂಪ್ ಅವರು ವೆನೆಜುವೆಲಾದ ತೈಲ ಮೂಲಸೌಕರ್ಯವನ್ನು ಪುನರ್ ನಿರ್ಮಿಸಿದ ಬಳಿಕ ಮಾತ್ರ ಅಲ್ಲಿ ಚುನಾವಣೆ ನಡೆಸಲಾಗುವುದು ಎಂದು ಹೇಳಿದ್ದರು. ಜೊತೆಗೆ, ವೆನೆಜುವೆಲಾದ ತೈಲ ಆದಾಯವನ್ನು ಅಮೆರಿಕದ ಖಜಾನೆಯಲ್ಲಿ ರಕ್ಷಿಸುವ ಉದ್ದೇಶದಿಂದ ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಿಸುವ ಕಾರ್ಯಕಾರಿ ಆದೇಶಕ್ಕೂ ಸಹಿ ಹಾಕಿದ್ದಾರೆ.

➤ ಟ್ರಂಪ್ ಅವರ ಈ ಹೇಳಿಕೆ ಕೇವಲ ಸಾಮಾಜಿಕ ಜಾಲತಾಣದ ಪೋಸ್ಟ್ ಆಗಿದ್ದರೂ, ಅದು ಅಮೆರಿಕ-ವೆನೆಜುವೆಲಾ ನಡುವಿನ ಉದ್ವಿಗ್ನತೆ, ಅಂತರರಾಷ್ಟ್ರೀಯ ಕಾನೂನು ಮತ್ತು ಸಾರ್ವಭೌಮತ್ವದ ಪ್ರಶ್ನೆಗಳನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ.



## ಭಾರತೀಯ ಮೂಲದ ಖಗೋಳಶಾಸ್ತ್ರಜ್ಞರಿಗೆ ಯುಕೆ ರಾಯಲ್ ಆಸ್ಟ್ರೋನಾಮಿಕಲ್ ಸೊಸೈಟಿ ಚಿನ್ನದ ಪದಕ



➤ ಭಾರತೀಯ ಮೂಲದ ಖ್ಯಾತ ವಿಜ್ಞಾನಿ ಪ್ರೊ. ಶ್ರೀನಿವಾಸ ಕುಲಕರ್ಣಿ ಅವರು ಬ್ರಿಟನ್‌ನ ಪ್ರತಿಷ್ಠಿತ 'ರಾಯಲ್ ಅಸ್ಟ್ರನಾಮಿಕಲ್ ಸೊಸೈಟಿ'ಯ (RAS) ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ. ಖಗೋಳ ಭೌತಶಾಸ್ತ್ರ ಮತ್ತು 'ಟೈಮ್-ಡೊಮೇನ್ ಆಸ್ಟ್ರೋನಮಿ' ಕ್ಷೇತ್ರದಲ್ಲಿ ಅವರು ಕೈಗೊಂಡಿರುವ 'ಕ್ಷಣಿಕ ಬಹುತರಂಗಾಂತರ' (Multi-wavelength transient) ಸಂಶೋಧನೆಗಳಿಗಾಗಿ ಈ ಅತ್ಯುನ್ನತ ಗೌರವ ನೀಡಲಾಗಿದೆ. 200 ವರ್ಷಗಳ ಇತಿಹಾಸವಿರುವ ಈ ಪ್ರಶಸ್ತಿಯನ್ನು ಈ ಹಿಂದೆ ಅಲ್ಬರ್ಟ್ ಐನ್‌ಸ್ಟೀನ್, ಎಡ್ವಿನ್ ಹಬಲ್ ಮತ್ತು ಸ್ಟೀಫನ್ ಹಾಕಿಂಗ್ ಅವರಂತಹ ದಿಗ್ಗಜ ವಿಜ್ಞಾನಿಗಳು ಪಡೆದಿದ್ದು, ಇದೀಗ ಆ ಸಾಲಿಗೆ ಕನ್ನಡಿಗರೂ ಆದ ಕುಲಕರ್ಣಿ ಅವರು ಸೇರ್ಪಡೆಯಾಗಿರುವುದು ಹೆಮ್ಮೆಯ ವಿಷಯವಾಗಿದೆ.

➤ ಶ್ರೀನಿವಾಸ ಕುಲಕರ್ಣಿ ಅವರ ಸಾಧನೆಗಳು:-

=> ಮಹತ್ವದ ಅನ್ವೇಷಣೆಗಳು: ಇವರು ಬ್ರೌನ್ ಡ್ವಾರ್ಫ್ಸ್ (Brown Dwarfs), ದೂರದ ಗಾಮಾ ಕಿರಣಗಳ ಸ್ಫೋಟ (Gamma-ray bursts) ಮತ್ತು ಮೊದಲ 'ಮಿಲಿಸೆಕೆಂಡ್ ಪಲ್ಸರ್' ಅನ್ನು ಪತ್ತೆಹಚ್ಚುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

=> ತಾಂತ್ರಿಕ ಕೊಡುಗೆ: ಖಗೋಳ ವೀಕ್ಷಣೆಗೆ ಸಂಬಂಧಿಸಿದಂತೆ ಇವರು ಈವರೆಗೆ ಸುಮಾರು 10 ಅತ್ಯಾಧುನಿಕ ಉಪಕರಣಗಳನ್ನು (Gizmos) ರೂಪಿಸಿದ್ದಾರೆ.

=> ಅಂತರಾಷ್ಟ್ರೀಯ ಯೋಜನೆಗಳು: ಪ್ರಸ್ತುತ ಇವರು ನಾಸಾದ (NASA) ನೇರಳಾತೀತ ಕಿರಣಗಳ ಅನ್ವೇಷಣೆಗೆ ಸಂಬಂಧಿಸಿದ UVEX (Ultraviolet Explorer) ಯೋಜನೆಯ ಭಾಗವಾಗಿದ್ದಾರೆ.

=> ZTF ಮತ್ತು PTF: ಇವರು ಪಾಲೋಮರ್ ಟ್ರಾನ್ಸಿಯೆಂಟ್ ಫ್ಯಾಕ್ಟರಿ (PTF) ಮತ್ತು ಜ್ವಿಕಿ ಟ್ರಾನ್ಸಿಯೆಂಟ್ ಫೆಸಿಲಿಟಿ (ZTF) ನಾಯಕತ್ವ ವಹಿಸಿ, ಆಕಾಶದಲ್ಲಿ ಸಂಭವಿಸುವ ಕ್ಷಣಿಕ ವಿದ್ಯಮಾನಗಳ (ನಕ್ಷತ್ರಗಳ ಸ್ಫೋಟ ಇತ್ಯಾದಿ) ಅಧ್ಯಯನದಲ್ಲಿ ಕ್ರಾಂತಿ ಮಾಡಿದ್ದಾರೆ.

➤ ಮೂಲತಃ ಕರ್ನಾಟಕದವರಾದ ಪ್ರೊ. ಶ್ರೀನಿವಾಸ ಕುಲಕರ್ಣಿ ಅವರು ಮಹಾರಾಷ್ಟ್ರದಲ್ಲಿ ಜನಿಸಿದರು. ಇವರು ಪ್ರಖ್ಯಾತ ಲೇಖಕಿ ಹಾಗೂ ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅವರ ಸಹೋದರರಾಗಿದ್ದಾರೆ. ಇವರ ಶೈಕ್ಷಣಿಕ ಪಯಣ ಅತ್ಯಂತ ಪ್ರಭಾವಶಾಲಿಯಾಗಿದ್ದು, 1978ರಲ್ಲಿ ದೆಹಲಿಯ ಭಾರತೀಯ ತಾಂತ್ರಿಕ ಸಂಸ್ಥೆಯಲ್ಲಿ (IIT Delhi) ಸ್ನಾತಕೋತ್ತರ ಪದವಿಯನ್ನು ಪೂರೈಸಿದರು. ನಂತರ 1983ರಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿಯಲ್ಲಿ ಪಿಎಚ್.ಡಿ ಪದವಿ ಪಡೆದರು. ಪ್ರಸ್ತುತ ಇವರು ಅಮೆರಿಕದ ಪ್ರತಿಷ್ಠಿತ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (Caltech) ಖಗೋಳವಿಜ್ಞಾನದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇತ್ತೀಚೆಗಷ್ಟೇ (2024) ಅವರು ಹಾಂಕಾಂಗ್ ನೀಡುವ ಪ್ರತಿಷ್ಠಿತ 'ಶಾ ಪ್ರಶಸ್ತಿ' (Shaw Prize) ಗೆ ಆಯ್ಕೆಯಾಗಿದ್ದರು.

➤ ಸ್ಪರ್ಧಾತ್ಮಕ ಪರೀಕ್ಷೆಗಳ ದೃಷ್ಟಿಯಿಂದ ನೆನಪಿಡಿ:-

- RAS Gold Medal ಅನ್ನು 1824 ರಿಂದ ನೀಡಲಾಗುತ್ತಿದೆ.
- ಇದು ಖಗೋಳ ವಿಜ್ಞಾನ ಮತ್ತು ಭೂಭೌತಶಾಸ್ತ್ರ (Geophysics) ಎಂಬ ಎರಡು ವಿಭಾಗಗಳಲ್ಲಿ ನೀಡಲಾಗುತ್ತದೆ.
- 2024ರ ಭೂಭೌತಶಾಸ್ತ್ರ ವಿಭಾಗದ ಪದಕವನ್ನು ಆಂಡ್ರ್ಯೂ ಜಾಕ್ಸನ್ ಪಡೆದಿದ್ದಾರೆ.

## ಪಶ್ಚಿಮ ಬಂಗಾಳದಲ್ಲಿ ನಿಪಾ ವೈರಸ್ ಆತಂಕ: ಪುಣೆ NIV ಯಿಂದ ಇಬ್ಬರು ಶುಶ್ರೂಷಕರಿಗೆ ಸೋಂಕು ದೃಢೀಕರಣ.




➤ ಪಶ್ಚಿಮ ಬಂಗಾಳದ ಬಾರಾಸತ್‌ನಲ್ಲಿ ಇಬ್ಬರು ಶುಶ್ರೂಷಕರಿಗೆ (Nurses) ನಿಪಾ ವೈರಸ್ ತಗುಲಿರುವುದು ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ (NIV) ಪ್ರಯೋಗಾಲಯದಿಂದ ದೃಢಪಟ್ಟಿದೆ. ಇದರಿಂದಾಗಿ ರಾಜ್ಯ ಆರೋಗ್ಯ ಇಲಾಖೆ ತೀವ್ರ ಕಟ್ಟೆಚ್ಚರ ವಹಿಸಿದ್ದು, ಸಾರ್ವಜನಿಕರಲ್ಲಿ ಆತಂಕ ಮನೆಮಾಡಿದೆ.

➤ ನಿಪಾ ವೈರಸ್ (Nipah Virus): ಇದು ಒಂದು ಅಪಾಯಕಾರಿ ಪ್ರಾಣಿಜನ್ಯ (Zoonotic) ವೈರಸ್ ಆಗಿದ್ದು, ಪ್ರಮುಖವಾಗಿ ಹಣ್ಣು ತಿನ್ನುವ ಬಾವಲಿಗಳಿಂದ (Fruit Bats) ಹರಡುತ್ತದೆ. ಸೋಂಕಿತ ಪ್ರಾಣಿಗಳ ನೇರ ಸಂಪರ್ಕದಿಂದ ಅಥವಾ ಅವುಗಳು ಕಚ್ಚಿ ಕಲುಷಿತಗೊಂಡ ಹಣ್ಣುಗಳನ್ನು ಸೇವಿಸುವುದರಿಂದ ಈ ವೈರಸ್ ಮನುಷ್ಯರಿಗೆ ಹರಡುತ್ತದೆ. ಇದಲ್ಲದೆ, ಸೋಂಕಿತ ವ್ಯಕ್ತಿಯಿಂದ ಮತ್ತೊಬ್ಬರಿಗೆ (ಮಾನವನಿಂದ ಮಾನವನಿಗೆ) ಹರಡುವ ಸಾಮರ್ಥ್ಯವನ್ನೂ ಇದು ಹೊಂದಿದೆ. ನಿಪಾ ವೈರಸ್ ಅತಿ ಹೆಚ್ಚು ಮರಣ ಪ್ರಮಾಣವನ್ನು (Fatality Rate) ಹೊಂದಿರುವ ಮಾರಣಾಂತಿಕ ಕಾಯಿಲೆಗಳಲ್ಲಿ ಒಂದಾಗಿದೆ.

➤ ಸೋಂಕಿತ ಇಬ್ಬರು ನರ್ಸ್‌ಗಳ ಪರಿಸ್ಥಿತಿ ಗಂಭೀರವಾಗಿದ್ದು, ಪ್ರಸ್ತುತ ವೆಂಟಿಲೇಟರ್ ಸಹಾಯದೊಂದಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ ಓರ್ವ ಮಹಿಳಾ ನರ್ಸ್ ಕೋಮಾ ಸ್ಥಿತಿಗೆ ತಲುಪಿದ್ದಾರೆ ಎಂದು ವರದಿಯಾಗಿದೆ.ಸೋಂಕಿತರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಸುಮಾರು 120ಕ್ಕೂ ಹೆಚ್ಚು ಜನರನ್ನು ಗುರುತಿಸಲಾಗಿದೆ. ಇದರಲ್ಲಿ ವೈದ್ಯರು, ಕುಟುಂಬ ಸದಸ್ಯರು ಮತ್ತು ಆಂಬ್ಯುಲೆನ್ಸ್ ಚಾಲಕರು ಸೇರಿದ್ದಾರೆ. ಇವರೆಲ್ಲರನ್ನೂ ಪ್ರಸ್ತುತ ಹೋಮ್ ಐಸೋಲೇಶನ್‌ನಲ್ಲಿ ಇರಿಸಲಾಗಿದೆ.

➤ ಸೋಂಕಿನ ನಿಖರ ಮೂಲ ಇನ್ನೂ ಪತ್ತೆಯಾಗಿಲ್ಲ. ಆದರೆ, ಕೆಲವು ವಾರಗಳ ಹಿಂದೆ ಇದೇ ಆಸ್ಪತ್ರೆಯ ಸಿಬ್ಬಂದಿಯೊಬ್ಬರು ನಿಪಾ ಲಕ್ಷಣಗಳೊಂದಿಗೆ ಮೃತಪಟ್ಟಿದ್ದರು. ಇದು ಮಾನವನಿಂದ ಮಾನವನಿಗೆ ಹರಡಿರುವ ಸಾಧ್ಯತೆ ಅಥವಾ ಕಲುಷಿತ ಹಣ್ಣುಗಳು/ಖರ್ಜೂರದ ರಸದ ಸೇವನೆಯಿಂದ ಬಂದಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದೆ.

➤ ಸರ್ಕಾರದ ಕ್ರಮಗಳು: ಕೇಂದ್ರ ಆರೋಗ್ಯ ಸಚಿವಾಲಯವು ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ರಾಷ್ಟ್ರೀಯ ಜಂಟಿ ಏಕಾಏಕಿ ಪ್ರತಿಕ್ರಿಯೆ ತಂಡವನ್ನು (National Joint Outbreak Response Team) ಕಳುಹಿಸಿದೆ. ಬಾರಾಸತ್, ಕಟ್ವಾ ಮತ್ತು ಬುರ್ದ್ವಾನ್ ಆಸ್ಪತ್ರೆಗಳಲ್ಲಿ ಕಟ್ಟುನಿಟ್ಟಿನ ಸೋಂಕು ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಲಾಗಿದೆ.ನಿಪಾ ವೈರಸ್ ಪತ್ತೆ ಹಚ್ಚುವ ಪ್ರಮುಖ ಸಂಸ್ಥೆ ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ (NIV) ಆಗಿದೆ. ಇದು ಭಾರತದ ಪ್ರಮುಖ ವೈರಸ್ ಸಂಶೋಧನಾ ಕೇಂದ್ರವಾಗಿದೆ.

## ರಷ್ಯಾ ಇಂಧನ ಆಮದು: 3ನೇ ಸ್ಥಾನಕ್ಕೆ ಕುಸಿದ ಭಾರತ - ಟರ್ಕಿಗೆ ದ್ವಿತೀಯ ಸ್ಥಾನ!




➤ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಭಾರತದ ಆಮದು ನೀತಿಯಲ್ಲಿ ಮಹತ್ವದ ಬದಲಾವಣೆ ಕಂಡುಬಂದಿದೆ. Centre for

Research on Energy and Clean Air (CREA) ಸಂಸ್ಥೆಯ ಇತ್ತೀಚಿನ ವರದಿಯ ಪ್ರಕಾರ, 2025ರ ಡಿಸೆಂಬರ್ ತಿಂಗಳಿನಲ್ಲಿ ರಷ್ಯಾದಿಂದ ಪಳೆಯುಳಿಕೆ ಇಂಧನಗಳನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು ಎರಡನೇ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಕುಸಿದಿದೆ.

➤ ಆಮದಿನಲ್ಲಿ ಇಳಿಕೆ: ನವೆಂಬರ್‌ನಲ್ಲಿ €3.3 ಬಿಲಿಯನ್ ಆಗಿದ್ದ ಭಾರತದ ಒಟ್ಟು ಹೈಡ್ರೋಕಾರ್ಬನ್ ಆಮದು, ಡಿಸೆಂಬರ್‌ನಲ್ಲಿ €2.3 ಬಿಲಿಯನ್‌ಗೆ ಇಳಿಕೆಯಾಗಿದೆ. ಕಚ್ಚಾ ತೈಲದ ಪಾಲು: ಭಾರತದ ಒಟ್ಟು ಆಮದಿನಲ್ಲಿ ಕಚ್ಚಾ ತೈಲದ ಪಾಲು ಶೇ. 78 ರಷ್ಟಿದ್ದು (€1.8 ಬಿಲಿಯನ್), ಕಲ್ಲಿದ್ದಲು (€424 ಮಿಲಿಯನ್) ಮತ್ತು ಇತರ ತೈಲ ಉತ್ಪನ್ನಗಳು (€82 ಮಿಲಿಯನ್) ಉಳಿದ ಭಾಗವನ್ನು ಒಳಗೊಂಡಿವೆ.

➤ ರಿಲಯನ್ಸ್ ಮತ್ತು ಸರ್ಕಾರಿ ಸಂಸ್ಥೆಗಳ ಪಾತ್ರ: ರಿಲಯನ್ಸ್ ಇಂಡಸ್ಟ್ರೀಸ್‌ನ ಜಾಮ್‌ನಗರ ಸಂಸ್ಕರಣಾಗಾರವು ತನ್ನ ಆಮದನ್ನು ಶೇ. 49 ರಷ್ಟು ಕಡಿತಗೊಳಿಸಿದೆ. ಹಾಗೆಯೇ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾಗಾರಗಳು ಶೇ. 15 ರಷ್ಟು ಆಮದನ್ನು ಕಡಿಮೆ ಮಾಡಿವೆ.

➤ ಜಾಗತಿಕ ಶ್ರೇಯಾಂಕ: 1. ಚೀನಾ: ರಷ್ಯಾದ ಇಂಧನದ ಅತಿದೊಡ್ಡ ಖರೀದಿದಾರ (ಶೇ. 48 ರಷ್ಟು ಪಾಲು, €6 ಬಿಲಿಯನ್). 2. ಟರ್ಕಿ: €2.6 ಬಿಲಿಯನ್ ಆಮದಿನೊಂದಿಗೆ ಎರಡನೇ ಸ್ಥಾನ. 3. ಭಾರತ: €2.3 ಬಿಲಿಯನ್ ಆಮದಿನೊಂದಿಗೆ ಮೂರನೇ ಸ್ಥಾನ.

➤ ವರದಿಯ ಪ್ರಕಾರ, ಬೆಲೆ ಮಿತಿ (Price Cap) ನೀತಿ ಜಾರಿಗೆ ಬಂದ ನಂತರ ಭಾರತವು ರಷ್ಯಾದಿಂದ ಆಮದು ಮಾಡಿಕೊಂಡ ಅತ್ಯಂತ ಕಡಿಮೆ ಪ್ರಮಾಣದ ಕಚ್ಚಾ ತೈಲ ಇದಾಗಿದೆ. ಆದಾಗ್ಯೂ, 2026ರ ಜನವರಿ ತಿಂಗಳಿನಲ್ಲಿ ಈ ಪ್ರಮಾಣವು ಮತ್ತೆ ಚೇತರಿಕೆ ಕಾಣುತ್ತಿದೆ ಎಂದು ಅಂಕಿಅಂಶಗಳು ಸೂಚಿಸುತ್ತವೆ.

## BRICS 2026ಕ್ಕೆ ಭಾರತದ ಆತಿಥ್ಯ: ಲೋಗೋ-ಥೀಮ್ ಅನಾವರಣಗೊಳಿಸಿದ ಎಸ್. ಜೈಶಂಕರ್




➤ ಭಾರತವು 2026ರ ಸಾಲಿನ ಬ್ರಿಕ್ಸ್ (BRICS) ಒಕ್ಕೂಟದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಸಜ್ಜಾಗುತ್ತಿದ್ದು, ಕೇಂದ್ರ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಮಂಗಳವಾರ (13-01-2026) ನವದೆಹಲಿಯಲ್ಲಿ ಈ ಸಂಬಂಧಿತ ಅಧಿಕೃತ ಲೋಗೋ (Logo), ವೆಬ್‌ಸೈಟ್ ಮತ್ತು ಥೀಮ್ (Theme) ಅನ್ನು ಅನಾವರಣಗೊಳಿಸಿದರು. ಈ ಮೂಲಕ ಭಾರತದ ದೃಷ್ಟಿಕೋನ, ಆದ್ಯತೆಗಳು ಮತ್ತು ಜಾಗತಿಕ ಬದ್ಧತೆಯನ್ನು ವಿಶ್ವದ ಮುಂದೆ ಸ್ಪಷ್ಟಪಡಿಸಿದ್ದಾರೆ. ಬ್ರಿಕ್ಸ್ ಸ್ಥಾಪನೆಯಾಗಿ 20 ವರ್ಷಗಳು ಪೂರೈಸುತ್ತಿರುವ ಸಂದರ್ಭದಲ್ಲಿ ಈ ಅಧ್ಯಕ್ಷತೆ ದೊರೆತಿರುವುದು ವಿಶೇಷ ಮಹತ್ವವನ್ನು ಹೊಂದಿದೆ.

➤ ಧ್ಯೇಯವಾಕ್ಯ (Theme): ಭಾರತದ ಅಧ್ಯಕ್ಷತೆಯ ಅಧಿಕೃತ ಘೋಷವಾಕ್ಯ 'Building for Resilience, Innovation, Cooperation and Sustainability' (ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ).

➤ ಲೋಗೋದ ವೈಶಿಷ್ಟ್ಯ: * ಲೋಗೋದಲ್ಲಿನ ದಳಗಳು ಸದಸ್ಯ ರಾಷ್ಟ್ರಗಳ ಬಣ್ಣಗಳನ್ನು ಪ್ರತಿನಿಧಿಸುತ್ತಿದ್ದು, ಏಕತೆಯನ್ನು ಸಾರುತ್ತವೆ. ಮಧ್ಯದಲ್ಲಿರುವ 'ನಮಸ್ತೆ' ಮುದ್ರೆಯು ಭಾರತದ ಅತಿಥಿ ಸತ್ಕಾರ, ಗೌರವ ಮತ್ತು ಸಾಮರಸ್ಯದ ಸಂಕೇತವಾಗಿದೆ.

➤ ಬ್ರಿಕ್ಸ್ ಒಕ್ಕೂಟ: ಹಿಂದೆ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ಎಂಬ ಐದು ರಾಷ್ಟ್ರಗಳಿಗೆ ಸೀಮಿತವಾಗಿದ್ದ ಬ್ರಿಕ್ಸ್ ಇದೀಗ ವಿಸ್ತಾರಗೊಂಡ ಜಾಗತಿಕ ವೇದಿಕೆಯಾಗುತ್ತಿದೆ. 2024–25ರ ಅವಧಿಯಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ, ಯುಎಇ ಮತ್ತು ಇಂಡೋನೇಷ್ಯಾ ಹೊಸ ಸದಸ್ಯರಾಗಿ ಸೇರಿಕೊಂಡಿವೆ. ಇದಲ್ಲದೆ, ಬೆಲಾರಸ್, ವಿಯೆಟ್ನಾಂ, ಥೈಲ್ಯಾಂಡ್ ಸೇರಿದಂತೆ 10 ರಾಷ್ಟ್ರಗಳು 2025ರಲ್ಲಿ ಪಾಲುದಾರ ರಾಷ್ಟ್ರಗಳಾಗಿ ಸೇರ್ಪಡೆಗೊಂಡಿದ್ದು, ಬ್ರಿಕ್ಸ್‌ನ ಜಾಗತಿಕ ಪ್ರಭಾವವನ್ನು ಮತ್ತಷ್ಟು ಹೆಚ್ಚಿಸಿದೆ.

**➤ ಭಾರತದ ಅಧ್ಯಕ್ಷತೆಯ ಮೂರು ಪ್ರಮುಖ ಸ್ತಂಭಗಳು: ಭಾರತವು ತನ್ನ ಬ್ರಿಕ್ಸ್ ಅಧ್ಯಕ್ಷತಾ ಅವಧಿಯಲ್ಲಿ ಮೂರು ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಲಿದೆ:**

1. ರಾಜಕೀಯ ಮತ್ತು ಭದ್ರತೆ – ಭಯೋತ್ಪಾದನೆ ವಿರುದ್ಧದ ಹೋರಾಟ, ಶಾಂತಿ ಸ್ಥಾಪನೆ ಮತ್ತು ಜಾಗತಿಕ ಆಡಳಿತ ವ್ಯವಸ್ಥೆಯ ಸುಧಾರಣೆ.
2. ಆರ್ಥಿಕ ಮತ್ತು ಹಣಕಾಸು – ವ್ಯಾಪಾರ ವೃದ್ಧಿ, ಹೂಡಿಕೆ ಉತ್ತೇಜನ ಮತ್ತು ಸುಸ್ಥಿರ ಆರ್ಥಿಕ ಅಭಿವೃದ್ಧಿ.
3. ಸಾಂಸ್ಕೃತಿಕ ಮತ್ತು ಜನಸಂಪರ್ಕ – ಕ್ರೀಡೆ, ಶಿಕ್ಷಣ, ಪ್ರವಾಸೋದ್ಯಮ ಮತ್ತು ಜನರ ನಡುವಿನ ಬಾಂಧವ್ಯವನ್ನು ಬಲಪಡಿಸುವುದು.

➤ 2025ರ ರಿಯೋ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದಂತೆ, "Humanity First" (ಮಾನವೀಯತೆ ಮೊದಲು) ಎಂಬ ತತ್ವದಡಿ ಭಾರತವು 2026ರಲ್ಲಿ ಬ್ರಿಕ್ಸ್ ಮೂಲಕ ಜಾಗತಿಕ ನಾಯಕತ್ವವನ್ನು ವಹಿಸಿಕೊಳ್ಳಲಿದೆ. ಸಹಕಾರ, ಸಮಾವೇಶ ಮತ್ತು ಸುಸ್ಥಿರ ಅಭಿವೃದ್ಧಿಯ ಸಂದೇಶದೊಂದಿಗೆ, ಭಾರತದ ಬ್ರಿಕ್ಸ್ ಅಧ್ಯಕ್ಷತೆ ವಿಶ್ವ ರಾಜಕಾರಣದಲ್ಲಿ ಹೊಸ ದಿಕ್ಕು ನೀಡುವ ನಿರೀಕ್ಷೆಯಿದೆ.

➤ ಬ್ರಿಕ್ಸ್ (BRICS) ಹಿನ್ನೆಲೆ:
- ಸ್ಥಾಪನೆ: 2006ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ವಿದೇಶಾಂಗ ಸಚಿವರ ಸಭೆಯಲ್ಲಿ ಬ್ರಿಕ್ (BRIC) ಔಪಚಾರಿಕವಾಗಿ ಚಾಲನೆ ಪಡೆಯಿತು.
- ಮೊದಲ ಶೃಂಗಸಭೆ: 2009ರಲ್ಲಿ ರಷ್ಯಾದ ಯೆಕಟೆರಿನ್ಬರ್ಗ್‌ನಲ್ಲಿ ನಡೆಯಿತು.
- ವಿಸ್ತರಣೆ: 2010ರಲ್ಲಿ ದಕ್ಷಿಣ ಆಫ್ರಿಕಾ ಸೇರ್ಪಡೆಯೊಂದಿಗೆ ಇದು 'BRICS' ಆಯಿತು. 2024 ಮತ್ತು 2025ರಲ್ಲಿ ಹಂತ ಹಂತವಾಗಿ ಹೊಸ ರಾಷ್ಟ್ರಗಳು ಸೇರ್ಪಡೆಗೊಂಡಿವೆ. ಪ್ರಸ್ತುತ ಬ್ರಿಕ್ಸ್‌ನಲ್ಲಿ ಭಾರತ, ಬ್ರೆಜಿಲ್, ಚೀನಾ, ರಷ್ಯಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ, ಯುಎಇ ಮತ್ತು ಇಂಡೋನೇಷ್ಯಾ ಸೇರಿದಂತೆ 11 ಪೂರ್ಣ ಪ್ರಮಾಣದ ಸದಸ್ಯ ರಾಷ್ಟ್ರಗಳಿವೆ.

## ಬಾಮನ್‌ವಾಸ್ ಕಾಂಕರ್: ರಾಜಸ್ಥಾನದ ಮೊದಲ ಸಂಪೂರ್ಣ ಆರ್ಗ್ಯಾನಿಕ್ ಪಂಚಾಯತ್




➤ ರಾಜಸ್ಥಾನದ ಕೋಟ್ಪುಟ್ಲಿ-ಬೇರೋರ್ ಜಿಲ್ಲೆಯಲ್ಲಿ ಇರುವ ಬಾಮನ್‌ವಾಸ್ ಕಾಂಕರ್ ಗ್ರಾಮ ಪಂಚಾಯತ್ ರಾಜ್ಯದ ಮೊದಲ ಸಂಪೂರ್ಣ ಆರ್ಗ್ಯಾನಿಕ್ ಪ್ರಮಾಣೀಕೃತ ಪಂಚಾಯತ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರೊಂದಿಗೆ ಇದು ಉತ್ತರ-ಪಶ್ಚಿಮ ಭಾರತದ ಮೊದಲ ಸಂಪೂರ್ಣ ಆರ್ಗ್ಯಾನಿಕ್ ಪಂಚಾಯತ್ ಆಗಿಯೂ ಹೊರಹೊಮ್ಮಿದೆ. ಈ ಪಂಚಾಯತ್ ಏಳು ಹಳ್ಳಿಗಳನ್ನು ಒಳಗೊಂಡಿದ್ದು, ಸಮುದಾಯದ ನೇತೃತ್ವದಲ್ಲಿ ನಡೆಸಿದ ಸುಸ್ಥಿರ ಕೃಷಿ ಪ್ರಯತ್ನಗಳು ಪರಿಸರ ಸಂರಕ್ಷಣೆಗೆ ಮಹತ್ವದ ಮೈಲಿಗಲ್ಲಾಗಿವೆ.

➤ ಹಲವು ವರ್ಷಗಳಿಂದ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದಾಗಿ ಮಣ್ಣಿನ ಫಲವತ್ತತೆ

ಕುಸಿತ, ಅಂತರ್ಜಲ ಮಟ್ಟ ಇಳಿಕೆ ಮತ್ತು ಜನರ ಆರೋಗ್ಯದ ಮೇಲೆ ಉಂಟಾದ ದುಷ್ಪರಿಣಾಮಗಳನ್ನು ಗಮನಿಸಿದ ಗ್ರಾಮಸ್ಥರು ಸಾವಯವ ಕೃಷಿಯತ್ತ ಮುಖ ಮಾಡಿದರು. ಸರಪಂಚ್ ಗಣೇಶ್ ಜಾಟ್ ಅವರ ನೇತೃತ್ವದಲ್ಲಿ, ಏಳು ಹಳ್ಳಿಗಳ ರೈತರು ಒಗ್ಗೂಡಿ ರಾಸಾಯನಿಕ ಮುಕ್ತ ಕೃಷಿಗೆ ಪಣತೊಟ್ಟರು.

➤ ಅನುಸರಿಸುತ್ತಿರುವ ಸಾವಯವ ಪದ್ಧತಿಗಳು: ಈ ಪಂಚಾಯತ್ ವ್ಯಾಪ್ತಿಯಲ್ಲಿ ಈಗ ಸಂಪೂರ್ಣವಾಗಿ ರಾಸಾಯನಿಕ ಮುಕ್ತ ಕೃಷಿ ನಡೆಯುತ್ತಿದೆ:

=> ನೈಸರ್ಗಿಕ ಗೊಬ್ಬರ: ಕೃತಕ ಗೊಬ್ಬರದ ಬದಲಿಗೆ ವರ್ಮಿಕಾಂಪೋಸ್ಟ್ (ಎರೆಹುಳು ಗೊಬ್ಬರ) ಮತ್ತು ಸಾವಯವ ಮಣ್ಣಿನ ಸುಧಾರಕಗಳನ್ನು ಬಳಸಲಾಗುತ್ತಿದೆ.

=> ಸಸ್ಯ ಸಂರಕ್ಷಣೆ: ರಾಸಾಯನಿಕ ಕೀಟನಾಶಕಗಳ ಬದಲು ಜೈವಿಕ ಕೀಟ ನಿಯಂತ್ರಣ ಮತ್ತು ಬಲೆಗಳನ್ನು ಬಳಸಲಾಗುತ್ತಿದೆ.

=> ಪಶುಸಂಗೋಪನೆ: ಜಾನುವಾರುಗಳಿಗೆ ನೈಸರ್ಗಿಕ ಮೇವು ನೀಡುವುದರ ಮೂಲಕ ವಿಷಮುಕ್ತ ಹೈನುಗಾರಿಕೆಗೆ ಒತ್ತು ನೀಡಲಾಗಿದೆ.

=> ಇತರ ವಿಧಾನಗಳು: ಬೆಳೆ ಪರಿವರ್ತನೆ (Crop Rotation) ಮತ್ತು ಮಲ್ಚಿಂಗ್ (Mulching) ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿದೆ.

➤ ಸಂಸ್ಥಾತ್ಮಕ ಬೆಂಬಲ ಮತ್ತು ಪ್ರಮಾಣೀಕರಣ: ಈ ಪರಿವರ್ತನೆಗೆ COFED (Cofarmin Federation of Organic Societies and Producer Companies) ಸಂಸ್ಥೆ ತಾಂತ್ರಿಕ ಮಾರ್ಗದರ್ಶನ, ಮಾರುಕಟ್ಟೆ ಸಂಪರ್ಕ ಮತ್ತು ಪ್ರಮಾಣೀಕರಣ ಸಹಾಯ ನೀಡಿದೆ. ಪಂಚಾಯತ್‌ಗೆ ರಾಷ್ಟ್ರೀಯ ಆರ್ಗ್ಯಾನಿಕ್ ಉತ್ಪಾದನಾ ಕಾರ್ಯಕ್ರಮ (NPOP) ಮಾನದಂಡಗಳ ಅಡಿಯಲ್ಲಿ ಸಂಪೂರ್ಣ ಆರ್ಗ್ಯಾನಿಕ್ ಪ್ರಮಾಣಪತ್ರ ದೊರೆತಿದೆ.

➤ ರೈತರು: ಮಣ್ಣಿನ ಆರೋಗ್ಯ ಸುಧಾರಣೆ, ಜೈವ ವೈವಿಧ್ಯ ಹೆಚ್ಚಳ, ದುಬಾರಿ ರಾಸಾಯನಿಕಗಳ ಮೇಲಿನ ಅವಲಂಬನೆ ಕಡಿತ ಎಂಬ ಲಾಭಗಳನ್ನು ಅನುಭವಿಸುತ್ತಿದ್ದಾರೆ. ಜನವರಿ 2ರಂದು ಪಂಚಾಯತ್‌ನಲ್ಲಿ ರಾಸಾಯನಿಕ ಕೃಷಿ ವಿರೋಧಿ ಅಧಿಕೃತ ಪ್ರತಿಜ್ಞೆ ಕೈಗೊಳ್ಳಲಾಯಿತು.

➤ COFED ಸಂಸ್ಥಾಪಕ ಜೀತೇಂದ್ರ ಸೇವಾವತ್ ಅವರ ಪ್ರಕಾರ, ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಸುಸ್ಥಿರ ಕೃಷಿ ಯಶಸ್ವಿಯಾಗಬಹುದು ಎಂಬುದಕ್ಕೆ ಇದು ಉತ್ತಮ ಉದಾಹರಣೆ. COFED ಸಂಸ್ಥೆ ಈ ವರ್ಷಾಂತ್ಯಕ್ಕೆ ರಾಜಸ್ಥಾನದ 300 ಪಂಚಾಯತ್‌ಗಳನ್ನು ಸಂಪೂರ್ಣ ಆರ್ಗ್ಯಾನಿಕ್ ಮಾಡಲು ಉದ್ದೇಶಿಸಿದೆ.

## ಜಾಗತಿಕ ಪಾಸ್‌ಪೋರ್ಟ್ ರ‍್ಯಾಂಕಿಂಗ್ 2026: ಯುಎಇ(UAE)ಗೆ 5ನೇ ಸ್ಥಾನ



➤ ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕ 2026ರ ವರದಿಯಂತೆ, ಯುನೈಟೆಡ್ ಅರಬ್ ಎಮಿರೇಟ್ಸ್ (UAE) ಪಾಸ್‌ಪೋರ್ಟ್ ಜಾಗತಿಕವಾಗಿ 5ನೇ ಸ್ಥಾನ ಪಡೆದು ಇತಿಹಾಸ ನಿರ್ಮಿಸಿದೆ. ಕಳೆದ 20 ವರ್ಷಗಳಲ್ಲಿ 57 ಸ್ಥಾನಗಳ ಏರಿಕೆ ಸಾಧಿಸಿರುವ ಯುಎಇ, ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕದ ಇತಿಹಾಸದಲ್ಲೇ ಅತಿದೊಡ್ಡ ದೀರ್ಘಕಾಲೀನ ಪ್ರಗತಿ ದಾಖಲಿಸಿದ ದೇಶವಾಗಿದೆ. ಈ ಸೂಚ್ಯಂಕವು ಅಂತರರಾಷ್ಟ್ರೀಯ ವಿಮಾನ ಸಾರಿಗೆ ಸಂಘ (IATA) ನೀಡಿದ ವಿಶೇಷ ಮಾಹಿತಿಯ ಆಧಾರದ ಮೇಲೆ ತಯಾರಿಸಲಾಗಿದ್ದು, 2026ರಲ್ಲಿ ಯುಎಇ ನಾಗರಿಕರು 184 ದೇಶಗಳಿಗೆ ವೀಸಾ-ರಹಿತ ಅಥವಾ ವೀಸಾ-ಆನ್-ಅರೈವಲ್ ಪ್ರವೇಶ ಪಡೆಯುತ್ತಿದ್ದಾರೆ. 2006ರಲ್ಲಿ ಕೇವಲ 35 ಗಮ್ಯಸ್ಥಾನಗಳಿಗೆ ಪ್ರವೇಶ ಇದ್ದರೆ, ಇದೀಗ 149 ಹೊಸ ಗಮ್ಯಸ್ಥಾನಗಳ ಹೆಚ್ಚಳವಾಗಿದೆ.

**➤ ಯುಎಇ ಪಾಸ್‌ಪೋರ್ಟ್ ಶಕ್ತಿಯ ಈ ಏರಿಕೆಗೆ ಪ್ರಮುಖ ಕಾರಣಗಳು:-**

=> ಸತತ ಮತ್ತು ಪರಿಣಾಮಕಾರಿ ರಾಜತಾಂತ್ರಿಕ ಪ್ರಯತ್ನಗಳು

=> ತಂತ್ರಾತ್ಮಕ ವೀಸಾ ನೀತಿಗಳು

=> ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಅಂತರರಾಷ್ಟ್ರೀಯ ಸಹಕಾರ

=> ರಾಜಕೀಯ ಮತ್ತು ಆರ್ಥಿಕ ಸ್ಥಿರತೆ

=> ಪ್ರವಾಸೋದ್ಯಮ ಮತ್ತು ಜಾಗತಿಕ ತೆರೆದತನ

ಹೆನ್ಲಿ & ಪಾರ್ಟ್ನರ್ಸ್ ಅಧ್ಯಕ್ಷ ಡಾ. ಕ್ರಿಶ್ಚಿಯನ್ ಎಚ್. ಕೈಲಿನ್ ಅವರ ಪ್ರಕಾರ, ಯುಎಇಯ ಈ ಸಾಧನೆ ಜಾಗತಿಕವಾಗಿ ಅಪೂರ್ವವಾಗಿದ್ದು, ದೀರ್ಘಕಾಲೀನ ದೃಷ್ಟಿ ಮತ್ತು ರಾಜತಾಂತ್ರಿಕ ನಂಬಿಕೆ ಪಾಸ್‌ಪೋರ್ಟ್ ಶಕ್ತಿಗೆ ಹೇಗೆ ನೇರವಾಗಿ ಅನುವಾದವಾಗುತ್ತದೆ ಎಂಬುದಕ್ಕೆ ಉತ್ತಮ ಉದಾಹರಣೆ.

➤ ಈ ಸಾಧನೆಯೊಂದಿಗೆ ಯುಎಇ: ನ್ಯೂಜಿಲ್ಯಾಂಡ್ (6ನೇ), ಯುಕೇ ಮತ್ತು ಆಸ್ಟ್ರೇಲಿಯಾ (7ನೇ), ಕೆನಡಾ (8ನೇ) ಮತ್ತು ಅಮೆರಿಕ (10ನೇ) ದೇಶಗಳನ್ನು ಹಿಂದಿಕ್ಕಿದೆ. ವಿದೇಶಾಂಗ ಸಚಿವಾಲಯದ ಅಂಡರ್‌ಸೆಕ್ರಟರಿ ಓಮರ್ ಒಬೈದ್ ಅಲ್ ಶಮ್ಸಿ ಅವರು, ಈ ಸಾಧನೆ ಯುಎಇ ನಾಯಕತ್ವದ ಮುಂದೋಚನೆಯ ದೃಷ್ಟಿ ಮತ್ತು ಜಾಗತಿಕ ಸಹಕಾರದ ಪ್ರತಿಫಲವಾಗಿದೆ ಎಂದು ಹೇಳಿದ್ದಾರೆ.

➤ IATA ಅಂದಾಜಿನಂತೆ 2026ರಲ್ಲಿ ಜಾಗತಿಕವಾಗಿ 5.2 ಬಿಲಿಯನ್ ಗಿಂತ ಹೆಚ್ಚು ಪ್ರಯಾಣಿಕರು ವಿಮಾನ ಪ್ರಯಾಣ ಮಾಡುವ ಸಾಧ್ಯತೆ ಇದ್ದು, ಇಂತಹ ಸಂದರ್ಭದಲ್ಲಿ ಪಾಸ್‌ಪೋರ್ಟ್ ಶಕ್ತಿ ದೇಶಗಳ ಆರ್ಥಿಕ, ಸಾಮಾಜಿಕ ಭಾಗವಹಿಕೆ ಮತ್ತು ಸಾಫ್ಟ್ ಪವರ್ ಅನ್ನು ನಿರ್ಧರಿಸುವ ಪ್ರಮುಖ ಅಂಶವಾಗುತ್ತಿದೆ. ಯುಎಇ ಪಾಸ್ ಪೋರ್ಟ್ ಯಶಸ್ಸು ಯೋಜಿತ ರಾಜತಾಂತ್ರಿಕ ನೀತಿ, ಪರಸ್ಪರ ವೀಸಾ ಸೌಲಭ್ಯಗಳು ಮತ್ತು ಜಾಗತಿಕ ತೊಡಗಿಸಿಕೊಳ್ಳುವಿಕೆ ದೇಶದ ನಾಗರಿಕರಿಗೆ ಹೇಗೆ ವಾಸ್ತವಿಕ ಲಾಭ ನೀಡುತ್ತದೆ ಎಂಬುದಕ್ಕೆ ಅತ್ಯುತ್ತಮ ಮಾದರಿಯಾಗಿದೆ.

## ಮೊದಲ ಸೌರಶಕ್ತಿ ATM ವ್ಯಾನ್ ಪರಿಚಯಿಸಿದ ತ್ರಿಪುರಾ ಗ್ರಾಮೀಣ ಬ್ಯಾಂಕ್‌ಗೆ ಪ್ರತಿಷ್ಠಿತ SKOCH ಸಿಲ್ವರ್ ಪ್ರಶಸ್ತಿ



➤ ತ್ರಿಪುರಾ ಗ್ರಾಮೀಣ ಬ್ಯಾಂಕ್ (Tripura Gramin Bank) ದೇಶದಲ್ಲೇ ಮೊದಲ ಬಾರಿಗೆ ಸೌರಶಕ್ತಿ ಆಧಾರಿತ ATM ವ್ಯಾನ್‌ಅನ್ನು ಪರಿಚಯಿಸುವ ಮೂಲಕ ರಾಷ್ಟ್ರೀಯ ಮಟ್ಟದ ಮಹತ್ವದ ಮೈಲಿಗಲ್ಲು ಸಾಧಿಸಿದೆ. ಈ ನವೀನ ಹಾಗೂ ಪರಿಸರ ಸ್ನೇಹಿ ಉಪಕ್ರಮಕ್ಕಾಗಿ ಬ್ಯಾಂಕ್‌ಗೆ ಪ್ರತಿಷ್ಠಿತ SKOCH ಸಿಲ್ವರ್ ಪ್ರಶಸ್ತಿ-2025 ಲಭಿಸಿದೆ. ಈ ವಿಶಿಷ್ಟ ATM ವ್ಯಾನ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2023ರ ಜುಲೈ 21ರಂದು ತ್ರಿಪುರಾ ಭೇಟಿಯ ವೇಳೆ ಅಧಿಕೃತವಾಗಿ ಉದ್ಘಾಟಿಸಿದರು. ಇದು ವಿದ್ಯುತ್ ಸೌಲಭ್ಯ ಕಡಿಮೆಯಿರುವ ಹಾಗೂ ದೂರದ ಗ್ರಾಮೀಣ ಪ್ರದೇಶಗಳಲ್ಲಿ ನಿರಂತರ ಬ್ಯಾಂಕಿಂಗ್ ಸೇವೆ ಒದಗಿಸಲು ಸಹಕಾರಿಯಾಗುತ್ತಿದೆ.

➤ ತ್ರಿಪುರಾ ಗ್ರಾಮೀಣ ಬ್ಯಾಂಕ್ ರಾಜ್ಯದ ಮೂಲೆಮೂಲೆಗಳಲ್ಲಿ ಸುಮಾರು 150 ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿ ಮತ್ತು ಹಣಕಾಸು ಒಳಗೊಳ್ಳುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪ್ರಸ್ತುತ ಬ್ಯಾಂಕ್ ಮೂರು ಸೌರಶಕ್ತಿ ATM ವ್ಯಾನ್‌ಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದೆ.

➤ ಬ್ಯಾಂಕ್‌ನ ಮಾರ್ಕೆಟಿಂಗ್ ಮುಖ್ಯಸ್ಥ ಜೀತ್ ಭಟ್ಟಾಚಾರ್ಯ ಅವರು,"ಇದು ತ್ರಿಪುರಾದ ಪ್ರತಿಯೊಬ್ಬ ನಾಗರಿಕನಿಗೂ ಹೆಮ್ಮೆಯ ಕ್ಷಣ. ನವೀನ ಪ್ರಯತ್ನಗಳಿಗಾಗಿ SKOCH ಗ್ರೂಪ್‌ನಿಂದ ಈ

ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿ ದೊರೆತಿರುವುದು ನಮಗೆ ಗೌರವದ ವಿಷಯ" ಎಂದು ಹೇಳಿದರು.

➤ ಇಂತಹ ಸೌರಶಕ್ತಿ ATM ಸೇವೆಯನ್ನು ಭಾರತದಲ್ಲಿನ ಯಾವುದೇ ಗ್ರಾಮೀಣ ಬ್ಯಾಂಕ್ ಮೊದಲ ಬಾರಿಗೆ ಪರಿಚಯಿಸಿರುವುದು ಈ ಸಾಧನೆಯನ್ನು ಇನ್ನಷ್ಟು ಮಹತ್ವಪೂರ್ಣವಾಗಿಸಿದೆ. ಈ ಉಪಕ್ರಮದ ಮೂಲಕ ತ್ರಿಪುರಾ ಗ್ರಾಮೀಣ ಬ್ಯಾಂಕ್ ಸತತ, ಸುಸ್ಥಿರ ಮತ್ತು ಸಮಾವೇಶಿತ ಬ್ಯಾಂಕಿಂಗ್ ಸೇವೆಗಳ ಹೊಸ ಮಾನದಂಡವನ್ನು ಸ್ಥಾಪಿಸಿದ್ದು, ರಾಷ್ಟ್ರಮಟ್ಟದಲ್ಲಿ ತ್ರಿಪುರಾದ ನವೀನ ಸಾಧನೆಯನ್ನು ಗುರುತಿಸಿದೆ.

## 15 Jan 2026

### ಜಪಾನ್‌ನ ಪುರಾತನ 'ಸಮುರಾಯಿ' ಕಲೆಗೆ ಆಯ್ಕೆಯಾದ ಮೊದಲ ಭಾರತೀಯ ಪವನ್ ಕಲ್ಯಾಣ್




➤ ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಹಾಗೂ ಖ್ಯಾತ ನಟ ಪವನ್ ಕಲ್ಯಾಣ್ (Pawan Kalyan) ಅವರು ಅಂತರಾಷ್ಟ್ರೀಯ ಮಟ್ಟದಲ್ಲಿ ಅಪರೂಪದ ಗೌರವಕ್ಕೆ ಪಾತ್ರರಾಗಿದ್ದಾರೆ. ಜಪಾನ್‌ನ ಅತ್ಯಂತ ಪುರಾತನ ಮತ್ತು ಪವಿತ್ರವೆಂದು ಪರಿಗಣಿಸಲಾದ 'ಕೆಂಜುಟ್ಸು' (Kenjutsu) ಸಮುರಾಯಿ ಯುದ್ಧಕಲೆಯಲ್ಲಿ ಅಧಿಕೃತವಾಗಿ ಪ್ರವೇಶ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ರಾಜಕೀಯ ಮತ್ತು ಸಿನಿಮಾ ರಂಗದ ಆಚೆಗೂ ಪವನ್ ಕಲ್ಯಾಣ್ ಅವರ ಶಿಸ್ತು ಮತ್ತು ಕಠಿಣ ಪರಿಶ್ರಮಕ್ಕೆ ಈ ಗೌರವ ಸಾಕ್ಷಿಯಾಗಿದೆ.

**➤ Kenjutsu ಯುದ್ಧಕಲೆ ಮಹತ್ವ**

=> Kenjutsu ಜಪಾನ್‌ನ ಪುರಾತನ ಸಮುರಾಯಿ ಕತ್ತಿ ಯುದ್ಧಕಲೆ.

=> ಇದು ಶಿಸ್ತು, ನಿಖರತೆ, ಮನೋನಿಯಂತ್ರಣ ಮತ್ತು ನೈತಿಕ ಮೌಲ್ಯಗಳ ಮೇಲೆ ಆಧಾರಿತವಾಗಿದೆ.

=> ಸಮುರಾಯಿ ಯೋಧರ ಯುದ್ಧ ತಂತ್ರಗಳು ಮತ್ತು ತತ್ವಶಾಸ್ತ್ರ ಇದರ ಮೂಲ.

=> ಪರಂಪರೆಯಿಂದಲೂ ಈ ಕಲೆ ಜಪಾನ್‌ನೊಳಗೆ ಮಾತ್ರ ಸೀಮಿತವಾಗಿದ್ದು, ವಿದೇಶಿಗಳಿಗೆ ಪ್ರವೇಶ ಅಪರೂಪ.

=> ಪವನ್ ಕಲ್ಯಾಣ್ ಅವರ ಪ್ರವೇಶವು ಕೇವಲ ತಾಂತ್ರಿಕ ಕೌಶಲ್ಯವಷ್ಟೇ ಅಲ್ಲ, ಜಪಾನ್‌ನ ಶತಮಾನಗಳ ಪುರಾತನ ಸಂಸ್ಕೃತಿಯ ಅಂಗೀಕಾರವೂ ಹೌದು.

➤ ಸಮುರಾಯಿ ಪರಂಪರೆಯಲ್ಲಿ ಪವನ್ ಕಲ್ಯಾಣ್ ಅವರ ಪ್ರವೇಶ:

=> ಈ ಗೌರವದೊಂದಿಗೆ, ಜಪಾನ್ ಹೊರಗೆ ಸಮುರಾಯಿ ಯುದ್ಧಕಲೆಯಲ್ಲಿ ಪ್ರವೇಶ ಪಡೆದ ಅತಿ ವಿರಳ ಭಾರತೀಯರ ಪೈಕಿ ಪವನ್ ಕಲ್ಯಾಣ್ ಸೇರಿದ್ದಾರೆ.

=> ಇತಿಹಾಸ ಪ್ರಸಿದ್ಧ ಸಮುರಾಯಿ ಯೋಧರೊಂದಿಗೆ ಸಂಬಂಧಿಸಿದ ಯುದ್ಧಕಲೆಯಲ್ಲಿ ಅವರ ಸೇರ್ಪಡೆ ವಿಶಿಷ್ಟ ಸಾಧನೆ.

=> ರಾಜಕೀಯ ಹಾಗೂ ಸಿನಿರಂಗದ ಹೊರತಾಗಿ, ಅವರ ದೀರ್ಘಕಾಲದ ಯುದ್ಧಕಲೆ ಅಭ್ಯಾಸ, ಶಿಸ್ತು ಮತ್ತು ವೈಯಕ್ತಿಕ ಬೆಳವಣಿಗೆಯನ್ನು ಇದು ಪ್ರತಿಬಿಂಬಿಸುತ್ತದೆ.

➤ ಇದಕ್ಕೂ ಮೊದಲು, ಪವನ್ ಕಲ್ಯಾಣ್ ಅವರನ್ನು ಜಪಾನ್‌ನ ಪ್ರಸಿದ್ಧ ಸಮುರಾಯಿ ವಂಶಾವಳಿಯಾದ ಟಕೆಡಾ ಶಿಂಗನ್ ಕ್ಲಾನ್ ನಲ್ಲಿ ಸೋಕೆ ಮುರಾಮತ್ಸು ಸೆನ್ಸೆ ಅವರ ಮಾರ್ಗದರ್ಶನದಲ್ಲಿ ಅಧಿಕೃತವಾಗಿ ಸೇರಿಸಲಾಯಿತು. ಈ ಗೌರವವನ್ನು ಪಡೆದ ಮೊದಲ ತೆಲುಗು ಭಾಷಿಕ ವ್ಯಕ್ತಿ ಎಂಬ ವಿಶಿಷ್ಟ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದು, ಸಾಮಾನ್ಯವಾಗಿ ಜಪಾನೀಯರಿಗೆ ಮಾತ್ರ ಸೀಮಿತವಾಗಿರುವ ಇಂತಹ ಮಾನ್ಯತೆ ವಿದೇಶಿಗೆ ದೊರೆತಿರುವುದು ಅವರ ಯುದ್ಧಕಲೆ ಸಾಧನೆಯ ಅಪರೂಪದ ಮಹತ್ವವನ್ನು ತೋರಿಸುತ್ತದೆ.

➤ ಪವನ್ ಕಲ್ಯಾಣ್ ಅವರ ಯುದ್ಧಕಲೆ ಕ್ಷೇತ್ರದ ಪ್ರಗತಿಗೆ ಕಠಿಣ ತರಬೇತಿ ಮತ್ತು ಶ್ರೇಷ್ಠ ಮಾರ್ಗದರ್ಶನ ಪ್ರಮುಖ ಪಾತ್ರವಹಿಸಿದೆ. ಅವರು ಹಾಂಶಿ ಪ್ರೊ. ಡಾ. ಸಿದ್ದೀಕ್ ಮಹಮೂದಿ ಅವರ ಮಾರ್ಗದರ್ಶನದಲ್ಲಿ ಕೇಂಡೋ (Kendo) ಹಾಗೂ ಬುಡೋ ತತ್ವಶಾಸ್ತ್ರದಲ್ಲಿ ತರಬೇತಿ ಪಡೆದಿದ್ದು, ಈ ಅಭ್ಯಾಸ ದೈಹಿಕ ಕೌಶಲ್ಯಕ್ಕಿಂತಲೂ ಹೆಚ್ಚಾಗಿ ಮನಸ್ಸಿನ ಶಿಸ್ತು, ಗೌರವ ಮತ್ತು ತತ್ವಚಿಂತನೆಗೆ ಮಹತ್ವ ನೀಡುತ್ತದೆ.

➤ ಈ ಗೌರವವು ಪವನ್ ಕಲ್ಯಾಣ್ ಅವರ ವೈಯಕ್ತಿಕ ಸಾಧನೆಯಷ್ಟೇ ಅಲ್ಲದೆ ಭಾರತ-ಜಪಾನ್ ಸಾಂಸ್ಕೃತಿಕ ಹಾಗೂ ರಾಜತಾಂತ್ರಿಕ ಸಂಬಂಧಗಳ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಪರಂಪರೆಯ ಯುದ್ಧಕಲೆಗಳ ಮೂಲಕ ಎರಡು ದೇಶಗಳ ಜನಸಂಪರ್ಕ, ಪರಸ್ಪರ ಗೌರವ ಮತ್ತು ಸಾಂಸ್ಕೃತಿಕ ವಿನಿಮಯವನ್ನು ಬಲಪಡಿಸುವುದರೊಂದಿಗೆ, ಜಾಗತಿಕ ಸಾಂಸ್ಕೃತಿಕ ವೇದಿಕೆಯಲ್ಲಿ ಭಾರತದ ಸಕ್ರಿಯ ಹಾಗೂ ಗೌರವಾನ್ವಿತ ಪಾತ್ರವನ್ನು ಇದು ಪ್ರತಿಬಿಂಬಿಸುತ್ತದೆ.

**➤ ಸಮುರಾಯಿ ಯುದ್ಧಕಲೆಗಳ ಬಗ್ಗೆ:-**

=> Kenjutsu, Kendo, Budo ಮುಂತಾದ ಸಮುರಾಯಿ ಯುದ್ಧಕಲೆಗಳು ಜಪಾನ್‌ನ ಸಾಮಂತ ಯುಗದಲ್ಲಿ ಉದ್ಭವಿಸಿದವು.

=> ಶಿಸ್ತು, ಗೌರವ, ಧೈರ್ಯ ಮತ್ತು ಮನಸ್ಸು-ದೇಹದ ಏಕಾಗ್ರತೆ ಈ ಕಲೆಯ ಮೂಲ ತತ್ವಗಳು.

=> ಕಠಿಣ ಪರಂಪರೆ ಮತ್ತು ವಂಶಾವಳಿಗಳ ಮೂಲಕ ಈ ಕಲೆಗಳನ್ನು ಸಂರಕ್ಷಿಸಲಾಗುತ್ತಿದೆ.

=> ವಿದೇಶಿಗಳಿಗೆ ಪ್ರವೇಶ ನೀಡುವುದು ಅತ್ಯಂತ ಅಪರೂಪ.

### ಹಿಮಪಾತ ದುರಂತದಲ್ಲಿ ಒಲಿಂಪಿಕ್ ಸ್ನೋಬೋರ್ಡರ್ ಯುಲಿ ಕೆಸ್ಟೆನ್ಹೋಲ್ಜ್ ನಿಧನ



➤ ಒಲಿಂಪಿಕ್ ಸ್ನೋಬೋರ್ಡಿಂಗ್ ಕ್ರೀಡೆಯನ್ನು ಜಾಗತಿಕ ಮಟ್ಟದಲ್ಲಿ ಸ್ಥಾಪಿಸಲು ಪ್ರಮುಖ ಪಾತ್ರ ವಹಿಸಿದ್ದ ಸ್ವಿಸ್ ಕ್ರೀಡಾಪಟು ಯುಲಿ ಕೆಸ್ಟೆನ್ಹೋಲ್ಜ್ ಅವರು ಸ್ವಿಟ್ಜರ್ಲ್ಯಾಂಡ್‌ನ ಲೊಟ್ಚೆಂಟಲ್ ಕಣಿವೆಯಲ್ಲಿ ಸಂಭವಿಸಿದ ಹಿಮಪಾತ ದುರಂತದಲ್ಲಿ ಸಿಲುಕಿಕೊಂಡು ನಿಧನರಾದರು. 1998ರ ನಗಾನೋ ಒಲಿಂಪಿಕ್ಸ್‌ನಲ್ಲಿ ಸ್ನೋಬೋರ್ಡಿಂಗ್‌ನ ಮೊದಲ ಪದಕ ವಿಜೇತರಾಗಿದ್ದ ಅವರು, ಈ ಕ್ರೀಡೆಯನ್ನು ಒಲಿಂಪಿಕ್ ವೇದಿಕೆಗೆ ತರುವಲ್ಲಿ ಮಹತ್ವದ ಕೊಡುಗೆ ನೀಡಿದ್ದರು. 50 ವರ್ಷ ವಯಸ್ಸಿನ ಅವರ ಅಕಾಲಿಕ ನಿಧನವು ಜಾಗತಿಕ ಕ್ರೀಡಾ ಸಮುದಾಯದಲ್ಲಿ ತೀವ್ರ ದುಃಖ ಮತ್ತು ಸಂತಾಪಕ್ಕೆ ಕಾರಣವಾಗಿದೆ.

➤ ಸ್ವಿಟ್ಜರ್ಲ್ಯಾಂಡ್‌ನ ವಲಾಯಿಸ್ ಕ್ಯಾಂಟನ್‌ನ ಲೊಟ್ಚೆಂಟಲ್ ಕಣಿವೆಯಲ್ಲಿ ಸುಮಾರು 2,400 ಮೀಟರ್ ಎತ್ತರದಲ್ಲಿ ಈ ಹಿಮಪಾತ ದುರಂತ ಸಂಭವಿಸಿದೆ. ಸ್ನೋಬೋರ್ಡಿಂಗ್ ವೇಳೆ ಯುಲಿ ಕೆಸ್ಟೆನ್ಹೋಲ್ಜ್ ಅವರು ಹಿಮಪಾತದಲ್ಲಿ ಸಿಲುಕಿಕೊಂಡರು, ಆದರೆ ಅವರ ಸಹ ಆಟಗಾರರು ಸುರಕ್ಷಿತವಾಗಿ ಪಾರಾದರು. ಕೆಸ್ಟೆನ್ಹೋಲ್ಜ್ ಅವರನ್ನು ರಕ್ಷಣಾ ತಂಡ ಹೆಲಿಕಾಪ್ಟರ್ ಮೂಲಕ ವಿಸ್‌ಪ್ ಹಾಗೂ ನಂತರ ಸಿಯೋನ್ ಆಸ್ಪತ್ರೆಗೆ ಕರೆದೊಯ್ಯಲಾದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ನಿಧನರಾದರು. ಈ ದುರ್ಘಟನೆ ಕುರಿತು ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

➤ ಒಲಿಂಪಿಕ್ ಮತ್ತು ಕ್ರೀಡಾ ಸಾಧನೆಗಳು:-

=> 1998 ನಗಾನೋ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ನಡೆದ ಮೊದಲ ಸ್ನೋಬೋರ್ಡಿಂಗ್ ಸ್ಪರ್ಧೆಯಲ್ಲಿ (Parallel Giant Slalom) ಕಾಂಸ್ಯ ಪದಕ (Bronze Medal) ಗೆದ್ದು ಇತಿಹಾಸ ನಿರ್ಮಿಸಿದರು.

=> ಸ್ನೋಬೋರ್ಡಿಂಗ್ ಅನ್ನು ಒಲಿಂಪಿಕ್ ಕ್ರೀಡೆಯಾಗಿ ಗುರುತಿಸುವಲ್ಲಿ ಅವರ ಪಾತ್ರ ಅತ್ಯಂತ ಮಹತ್ವದ್ದು.
=> 2002 ಸಾಲ್ಟ್ ಲೇಕ್ ಸಿಟಿ ಮತ್ತು 2006 ಟುರಿನ್ ಒಲಿಂಪಿಕ್ಸ್‌ಗಳಲ್ಲಿ ಸ್ವಿಟ್ಜರ್ಲ್ಯಾಂಡ್ ಪ್ರತಿನಿಧಿಸಿದರು.
=> X Games 2003 ಮತ್ತು 2004ರಲ್ಲಿ ಸ್ನೋಬೋರ್ಡ್‌ಕ್ರಾಸ್ ವಿಭಾಗದಲ್ಲಿ ಎರಡು ಚಿನ್ನದ ಪದಕಗಳು.
=> 14 ವಿಶ್ವಕಪ್ ಗೆಲುವುಗಳು ಅವರ ಖಾತೆಯಲ್ಲಿವೆ.
=> 2006 ಟುರಿನ್ ಒಲಿಂಪಿಕ್ಸ್‌ನಲ್ಲಿ ಸ್ನೋಬೋರ್ಡ್‌ಕ್ರಾಸ್ ವಿಭಾಗದ ಪಯೋನಿಯರ್‌ಗಳಲ್ಲೊಬ್ಬರಾಗಿದ್ದರು.

➤ 2006ರಲ್ಲಿ ಸ್ಪರ್ಧಾತ್ಮಕ ಕ್ರೀಡೆಯಿಂದ ನಿವೃತ್ತಿಯಾದ ಬಳಿಕವೂ ಅವರು ಸಕ್ರಿಯ ಸಾಹಸ ಕ್ರೀಡಾಪಟುವಾಗಿಯೇ ಉಳಿದರು. ಅವರು ಫ್ರೀರೈಡ್ ಸ್ನೋಬೋರ್ಡಿಂಗ್, ಸ್ಪೀಡ್‌ರೈಡಿಂಗ್, ಪ್ಯಾರಾಗ್ಲೈಡಿಂಗ್, ಕೈಟ್‌ಸರ್ಫಿಂಗ್, ಸ್ಕೈಡೈವಿಂಗ್, ಸರ್ಫಿಂಗ್, ವಿಂಗ್‌ಫಾಯಿಲಿಂಗ್ ಹಾಗೂ ಮೌಂಟನ್ ಬೈಕಿಂಗ್ ಗಳಲ್ಲಿ ತೊಡಗಿಸಿಕೊಂಡಿದ್ದರು. ಫ್ರೀರೈಡ್ ಸ್ನೋಬೋರ್ಡಿಂಗ್ ಪ್ರಕೃತಿಯ ಮಧ್ಯೆ ಸ್ವಾತಂತ್ರ್ಯವನ್ನು ಪ್ರತಿಬಿಂಬಿಸುವ ಕ್ರೀಡೆಯಾಗಿದ್ದು, ಆದರೆ ಹಿಮಪಾತದಂತಹ ಅಪಾಯಗಳು ಹೆಚ್ಚಾಗಿರುತ್ತವೆ.

➤ ಸ್ವಿಸ್-ಸ್ಕೀ (Swiss-Ski) ಸಂಸ್ಥೆ ಅವರ ನಿಧನಕ್ಕೆ ಸಂತಾಪ ಸೂಚಿಸಿ,"ಸ್ವಿಸ್-ಸ್ಕೀ ಮತ್ತು ಸಂಪೂರ್ಣ ಸ್ನೋಬೋರ್ಡಿಂಗ್ ಸಮುದಾಯ ಶೋಕದಲ್ಲಿದೆ" ಎಂದು ಹೇಳಿದೆ.

## ವಿಶ್ವಸಂಸ್ಥೆಯ 7 ಪ್ರಮುಖ ಸಂಸ್ಥೆಗಳೊಂದಿಗೆ ಸಂಬಂಧ ಕಡಿತಗೊಳಿಸಿದ ಇಸ್ರೇಲ್!



➤ ಇಸ್ರೇಲ್ ಸರ್ಕಾರವು ರಾಜಕೀಯ ಪಕ್ಷಪಾತ, ಅಕಾರ್ಯಕ್ಷಮತೆ ಹಾಗೂ ಇಸ್ರೇಲ್ ವಿರೋಧಿ ನಿಲುವುಗಳ ಆರೋಪದ ಹಿನ್ನೆಲೆಯಲ್ಲಿ ಏಳು ಯುಎನ್ ಸಂಸ್ಥೆಗಳೊಂದಿಗೆ ತನ್ನ ಸಂಬಂಧವನ್ನು ಕಡಿತಗೊಳಿಸುವುದಾಗಿ ಘೋಷಿಸಿದೆ. ಅಮೆರಿಕವು ಹಲವು ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಹಿಂದೆ ಸರಿದ ಬಳಿಕ ನಡೆದ ಪರಿಶೀಲನೆಯ ಆಧಾರದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಯುಎನ್ ಸಂಸ್ಥೆಗಳಲ್ಲಿ ನಡೆಯುತ್ತಿರುವ ರಾಜಕೀಯೀಕರಣ ಮತ್ತು ಇಸ್ರೇಲ್ ವಿರೋಧಿ ವರದಿಗಳೇ ಈ ಕ್ರಮಕ್ಕೆ ಪ್ರಮುಖ ಕಾರಣವೆಂದು ಇಸ್ರೇಲ್ ತಿಳಿಸಿದೆ.

➤ ಇಸ್ರೇಲ್ ಸಂಬಂಧ ಕಡಿತಗೊಳಿಸಿದ ಯುಎನ್ ಸಂಸ್ಥೆಗಳು:-

**# ಈಗಾಗಲೇ ಸಂಪರ್ಕ ಕಡಿತಗೊಳಿಸಿದ ಸಂಸ್ಥೆಗಳು:**

1. ಮಕ್ಕಳು ಮತ್ತು ಸಶಸ್ತ್ರ ಸಂಘರ್ಷಗಳ ಕುರಿತ ಯುಎನ್ ವಿಶೇಷ ಪ್ರತಿನಿಧಿ ಕಚೇರಿ:
- 2024ರಲ್ಲಿ ಇಸ್ರೇಲಿ ರಕ್ಷಣಾ ಪಡೆ (IDF) ಯನ್ನು 'ಬ್ಲ್ಯಾಕ್‌ಲಿಸ್ಟ್' ಮಾಡಿದ್ದ ಆರೋಪ
- ಐಸಿಸ್ ಮತ್ತು ಬೋಕೊ ಹರಾಮ್ ಮುಂತಾದ ಭಯೋತ್ಪಾದಕ ಸಂಘಟನೆಗಳ ಜೊತೆಗೆ ಇಸ್ರೇಲ್ ಅನ್ನು ಪಟ್ಟಿ ಮಾಡಲಾಗಿದೆ ಎಂಬ ಆಕ್ಷೇಪ

2. ಯುಎನ್ ವುಮನ್ (UN Women / UNWOMEN):
- 2023 ಅಕ್ಟೋಬರ್ 7ರಂದು ಇಸ್ರೇಲಿ ಮಹಿಳೆಯರ ಮೇಲೆ ನಡೆದ ಲೈಂಗಿಕ ಹಿಂಸೆಯನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದೆ ಎಂಬ ಆರೋಪ
- 2024 ಜುಲೈನಲ್ಲಿ ಅಧಿಕೃತವಾಗಿ ಸಹಕಾರ ಒಪ್ಪಂದ ರದ್ದುಪಡಿಸಲಾಗಿದೆ

3. ಯುಎನ್ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನ (UNCTAD):
- ಇಸ್ರೇಲ್ ವಿರೋಧಿ ಅನೇಕ ವರದಿಗಳನ್ನು ಪ್ರಕಟಿಸಿದ್ದ ಆರೋಪ
- ಹಲವು ವರ್ಷಗಳಿಂದಲೇ ಇಸ್ರೇಲ್ disengaged ಆಗಿತ್ತು

4. ಪಶ್ಚಿಮ ಏಷ್ಯಾ ಯುಎನ್ ಆರ್ಥಿಕ ಮತ್ತು ಸಾಮಾಜಿಕ ಆಯೋಗ (ESCWA):
ಪ್ರತಿವರ್ಷ ಇಸ್ರೇಲ್ ವಿರೋಧಿ ವರದಿಗಳನ್ನು ನೀಡುತ್ತದೆ ಎಂಬ ಆರೋಪ

# ಇತ್ತೀಚೆಗೆ ಸಂಪರ್ಕ ಕಡಿತಗೊಳಿಸಿದ ಹೆಚ್ಚುವರಿ ಸಂಸ್ಥೆಗಳು:


5.ಯುಎನ್ ಅಲಯನ್ಸ್ ಆಫ್ ಸಿವಿಲೈಸೇಶನ್ಸ್ (UN Alliance of Civilizations)
- ಅಂತರಸಾಂಸ್ಕೃತಿಕ ಸಂವಾದದ ಉದ್ದೇಶ ಇದ್ದರೂ, ಇಸ್ರೇಲ್ ಅನ್ನು ಹೊರಗಿಟ್ಟು,
- ಇಸ್ರೇಲ್ ವಿರೋಧಿ ವೇದಿಕೆಯಾಗಿ ಬಳಸಲಾಗಿದೆ ಎಂಬ ಆರೋಪ

6. ಯುಎನ್ ಎನರ್ಜಿ (UN Energy)
ಅಕಾರ್ಯಕ್ಷಮ ಮತ್ತು ಅನಾವಶ್ಯಕ ಬ್ಯೂರೋಕ್ರಸಿಯ ಉದಾಹರಣೆ ಎಂದು ಇಸ್ರೇಲ್ ಟೀಕೆ

7. ಜಾಗತಿಕ ವಲಸೆ ಮತ್ತು ಅಭಿವೃದ್ಧಿ ವೇದಿಕೆ (Global Forum on Migration and Development)
- ರಾಷ್ಟ್ರಗಳ ಸ್ವಾಯತ್ತ ವಲಸೆ ನೀತಿಯನ್ನು ದುರ್ಬಲಗೊಳಿಸುತ್ತದೆ ಎಂಬ ಆರೋಪ

➤ ಇಸ್ರೇಲ್ ವಿದೇಶಾಂಗ ಸಚಿವಾಲಯವು ಇತರ ಯುಎನ್ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಹಕಾರ ಮುಂದುವರಿಸಬೇಕೇ ಎಂಬುದನ್ನು ಸಂಬಂಧಿತ ಸಚಿವಾಲಯಗಳೊಂದಿಗೆ ಚರ್ಚಿಸಿ ಪರಿಶೀಲನೆ ನಡೆಸಲಿದೆ ಮುಂದಿನ ದಿನಗಳಲ್ಲಿ ಇನ್ನಷ್ಟು ಸಂಸ್ಥೆಗಳ ವಿರುದ್ಧ ನಿರ್ಧಾರಗಳು ಕೈಗೊಳ್ಳುವ ಸಾಧ್ಯತೆ ಇದೆ

## ಜನವರಿ-15 ಭಾರತೀಯ ಸೇನಾ ದಿನ




➤ ಭಾರತ ಮಾತೆಯ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುವ ವೀರ ಯೋಧರ ತ್ಯಾಗ ಮತ್ತು ಬಲಿದಾನವನ್ನು ಸ್ಮರಿಸಲು ಪ್ರತಿವರ್ಷ ಜನವರಿ 15 ರಂದು 'ಭಾರತೀಯ ಸೇನಾ ದಿನ' (Indian Army Day) ವನ್ನು ಆಚರಿಸಲಾಗುತ್ತದೆ. ಈ ವರ್ಷ (2026) ಭಾರತೀಯ ಸೇನೆಯು 78ನೇ ಸೇನಾ ದಿನವನ್ನು ಆಚರಿಸುತ್ತಿದ್ದು, ಇದು ದೇಶದ ಭದ್ರತೆ ಮತ್ತು ಆತ್ಮನಿರ್ಭರತೆಯ ಸಂಕೇತವಾಗಿದೆ.

➤ 2026 ರ ಭಾರತೀಯ ಸೇನಾ ದಿನದ ಥೀಮ್ "ನೆಟ್‌ವರ್ಕಿಂಗ್ ಮತ್ತು ಡೇಟಾ ಕೇಂದ್ರಿತತೆಯ ವರ್ಷ". ಈ ಥೀಮ್ ಸಂವಹನ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಯುದ್ಧಭೂಮಿ ದಕ್ಷತೆಯನ್ನು ಬಲಪಡಿಸಲು ಭಾರತೀಯ ಸೇನೆಯು ಡಿಜಿಟಲೀಕರಣ ಮತ್ತು ಆಧುನಿಕ ತಂತ್ರಜ್ಞಾನದ ಬಳಕೆಯ ಮೇಲೆ ಕೇಂದ್ರೀಕರಿಸುವುದನ್ನು ಎತ್ತಿ ತೋರಿಸುತ್ತದೆ.

➤ ಭಾರತೀಯ ಸೇನೆಯು ಬ್ರಿಟಿಷ್ ಆಳ್ವಿಕೆಯಲ್ಲಿ ಏಪ್ರಿಲ್ 1, 1895 ರಂದು ಸ್ಥಾಪನೆಯಾಯಿತು. ಆದರೆ, 1949 ಜನವರಿ 15 ರಂದು, ಬ್ರಿಟಿಷ್ ಕಮಾಂಡರ್-ಇನ್-ಚೀಫ್ ಜನರಲ್ ಫ್ರಾನ್ಸಿಸ್ ಬುಚರ್ ಅವರಿಂದ ಭಾರತದ ಫೀಲ್ಡ್ ಮಾರ್ಷಲ್ ಕೆ.ಎಂ. ಕರಿಯಪ್ಪ ಅವರು ಅಧಿಕಾರ ವಹಿಸಿಕೊಂಡರು. ಇದರೊಂದಿಗೆ ಕೆ.ಎಂ. ಕರಿಯಪ್ಪ ಅವರು ಸ್ವತಂತ್ರ ಭಾರತದ ಮೊದಲ ಭಾರತೀಯ ಕಮಾಂಡರ್-ಇನ್-ಚೀಫ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಐತಿಹಾಸಿಕ ಘಟನೆಯ ನೆನಪಿಗಾಗಿ ಪ್ರತಿವರ್ಷ ಸೇನಾ ದಿನವನ್ನು ಆಚರಿಸಲಾಗುತ್ತದೆ.

➤ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸುವುದು ಮತ್ತು ಶಕ್ತಿ ಪ್ರದರ್ಶನ: ಈ ದಿನದಂದು ದೆಹಲಿ ಮತ್ತು ವಿವಿಧ ಕಮಾಂಡ್ ಕೇಂದ್ರಗಳಲ್ಲಿ ಪೆರೇಡ್, ಸಾಹಸ ಪ್ರದರ್ಶನಗಳ ಮೂಲಕ ಸೇನೆಯ ಶಿಸ್ತು ಮತ್ತು ಬಲವನ್ನು ಪ್ರದರ್ಶಿಸಲಾಗುತ್ತದೆ. 2026ರ ವಿಶೇಷ: ಈ ವರ್ಷದ ಮುಖ್ಯ ಪರೇಡ್ ಮಹಲ್ ರಸ್ತೆಯಲ್ಲಿ ನಡೆಯಲಿದ್ದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಭಾಗವಹಿಸಲಿದ್ದಾರೆ.

**➤ ಭವಿಷ್ಯದ ಯುದ್ಧಭೂಮಿ – ತಂತ್ರಜ್ಞಾನ:-**

=> ಎಕ್ಸೋಸ್ಕೆಲೆಟನ್‌ಗಳು: ಸೈನಿಕರ ಶಕ್ತಿ ಮತ್ತು ಸಹನಶೀಲತೆ ಹೆಚ್ಚಳ
=> ಸ್ವಯಂಚಾಲಿತ ಯುದ್ಧ ವಾಹನಗಳು (ACVs): ಮಾನವ ಹಾನಿ ಕಡಿತ
=> ಕೃತಕ ಬುದ್ಧಿಮತ್ತೆ (AI): ವೇಗವಾದ, ನಿಖರ ಯುದ್ಧ ನಿರ್ಧಾರಗಳು
ಇವುಗಳಿಂದ ಯುದ್ಧದಲ್ಲಿ ಮಾನವ ಹಾನಿ ಕಡಿಮೆಯಾಗಲಿದ್ದು, ಸೇನೆಯ ಕಾರ್ಯಕ್ಷಮತೆ ಹೆಚ್ಚಾಗಲಿದೆ.
➤ "ಸೇವಾ ಪರಮೋ ಧರ್ಮಃ" ಎಂಬ ಮಂತ್ರದೊಂದಿಗೆ ಕಾರ್ಯನಿರ್ವಹಿಸುವ ಭಾರತೀಯ ಸೇನೆಯು ಇಂದು ಆಧುನಿಕ ತಂತ್ರಜ್ಞಾನವನ್ನು ಅಪ್ಪಿಕೊಳ್ಳುವ ಮೂಲಕ ಜಗತ್ತಿನ ಬಲಿಷ್ಠ ಸೇನೆಗಳಲ್ಲಿ ಒಂದಾಗಿ ಹೊರಹೊಮ್ಮುತ್ತಿದೆ.

## ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕ 2026: ಭಾರತದ ಶ್ರೇಯಾಂಕದಲ್ಲಿ ಸುಧಾರಣೆ; ಇಲ್ಲಿದೆ ಟಾಪ್ 10 ದೇಶಗಳ ಪಟ್ಟಿ!



➤ ಜಾಗತಿಕ ಮಟ್ಟದಲ್ಲಿ ಪಾಸ್‌ಪೋರ್ಟ್‌ಗಳ ಸಾಮರ್ಥ್ಯವನ್ನು ಅಳೆಯುವ 'ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕ 2026' (Henley Passport Index 2026) ಬಿಡುಗಡೆಯಾಗಿದ್ದು, ಭಾರತೀಯರಿಗೆ ಶುಭ ಸುದ್ದಿಯಿದೆ. 2025ರ ಸಾಲಿನಲ್ಲಿ ಕುಸಿತ ಕಂಡಿದ್ದ ಭಾರತದ ಪಾಸ್ ಪೋರ್ಟ್ ಶಕ್ತಿ, ಈ ಬಾರಿ ಚೇತರಿಕೆ ಕಂಡು 80ನೇ ಸ್ಥಾನಕ್ಕೆ ಏರಿಕೆಯಾಗಿದೆ.
ಭಾರತದ ಇತ್ತೀಚಿನ ಸಾಧನೆಯಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ: ಕಳೆದ ವರ್ಷ 85ನೇ ಸ್ಥಾನದಲ್ಲಿದ್ದ ಭಾರತ, ಈ ಬಾರಿ 5 ಸ್ಥಾನಗಳ ಜಿಗಿತದೊಂದಿಗೆ 80ನೇ ಸ್ಥಾನಕ್ಕೆ ಏರಿದೆ. ಇದರ ಜೊತೆಗೆ, ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರು ಈಗ ವಿಶ್ವದ 55 ದೇಶಗಳಿಗೆ ವೀಸಾ-ರಹಿತವಾಗಿ (Visa-Free ಅಥವಾ Visa-on-Arrival) ಪ್ರಯಾಣಿಸುವ ಅವಕಾಶ ಪಡೆದಿದ್ದಾರೆ. ಇದೇ ಶ್ರೇಯಾಂಕವನ್ನು ನೈಜರ್ ಮತ್ತು ಅಲ್ಜೀರಿಯಾ ದೇಶಗಳು ಸಹ ಭಾರತದೊಂದಿಗೆ ಸಮಾನವಾಗಿ (80ನೇ ಸ್ಥಾನ) ಹಂಚಿಕೊಂಡಿವೆ.
➤ ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕವು ಜಾಗತಿಕ ಮಟ್ಟದಲ್ಲಿ ಪಾಸ್‌ಪೋರ್ಟ್‌ಗಳ ಶಕ್ತಿಯನ್ನು ಅಳೆಯಲು ಬಳಸುವ ಪ್ರಮುಖ ಸೂಚ್ಯಂಕವಾಗಿದ್ದು, ಇದರಲ್ಲಿ ವಿಶ್ವದ 199 ಪಾಸ್‌ಪೋರ್ಟ್‌ಗಳು ಮತ್ತು 227 ದೇಶಗಳು/ಪ್ರದೇಶಗಳನ್ನು ಪರಿಗಣಿಸಲಾಗುತ್ತದೆ. ಈ ಸೂಚ್ಯಂಕವು International Air Transport Association (IATA) ನೀಡುವ ವಿಶಿಷ್ಟ ಡೇಟಾವನ್ನು ಆಧರಿಸಿಕೊಂಡಿದ್ದು, ಪಾಸ್ ಪೋರ್ಟ್ ಹೊಂದಿರುವವರು ಮುಂಚಿತ ವೀಸಾ ಇಲ್ಲದೆ ಪ್ರವೇಶಿಸಬಹುದಾದ ವೀಸಾ-ರಹಿತ ಮತ್ತು ವೀಸಾ-ಆನ್-ಅರೈವಲ್ ದೇಶಗಳ ಸಂಖ್ಯೆಯ ಮೇಲೆ ರ್ಯಾಂಕಿಂಗ್ ನಿರ್ಧರಿಸಲಾಗುತ್ತದೆ. ಜೊತೆಗೆ, ರಾಷ್ಟ್ರಗಳ ನಡುವೆ ಇರುವ ದ್ವೈಪಕ್ಷೀಯ ಒಪ್ಪಂದಗಳು, ವೀಸಾ ನೀತಿಗಳ ಬದಲಾವಣೆಗಳು ಮತ್ತು ರಾಜತಾಂತ್ರಿಕ ಸಂಬಂಧಗಳು ವರ್ಷದಿಂದ ವರ್ಷಕ್ಕೆ ಪಾಸ್ ಪೋರ್ಟ್ ರ್ಯಾಂಕ್‌ಗಳಲ್ಲಿ ಏರಿಳಿತಕ್ಕೆ ಕಾರಣವಾಗುತ್ತವೆ.
**➤ ಜಾಗತಿಕ ಮಟ್ಟದಲ್ಲಿ ಟಾಪ್ 10 ಶಕ್ತಿಶಾಲಿ ಪಾಸ್‌ಪೋರ್ಟ್‌ಗಳು**
1. ಸಿಂಗಪೂರ್ – 192 ದೇಶಗಳಿಗೆ ವೀಸಾ-ರಹಿತ ಪ್ರವೇಶ (ಮೊದಲ ಸ್ಥಾನ)
2. ಜಪಾನ್ ಮತ್ತು ದಕ್ಷಿಣ ಕೊರಿಯಾ – 188 ದೇಶಗಳು
3. ಡೆನ್ಮಾರ್ಕ್, ಸ್ವಿಟ್ಜರ್‌ಲ್ಯಾಂಡ್, ಸ್ವೀಡನ್, ಸ್ಪೇನ್, ಲಕ್ಸಂಬರ್ಗ್ – 186 ದೇಶಗಳು
4. ಆಸ್ಟ್ರಿಯಾ, ಬೆಲ್ಜಿಯಂ, ಫಿನ್ಲ್ಯಾಂಡ್, ಫ್ರಾನ್ಸ್, ಜರ್ಮನಿ, ಇಟಲಿ, ನೆದರ್ಲ್ಯಾಂಡ್ಸ್ - 185
5. ಯುಎಇ (UAE), ಹಂಗೇರಿ, ಪೋರ್ಚುಗಲ್ - 184
6. ನ್ಯೂಜಿಲೆಂಡ್, ಪೋಲೆಂಡ್, ಜೆಕ್ ಗಣರಾಜ್ಯ - 183
7. ಯುನೈಟೆಡ್ ಕಿಂಗ್‌ಡಮ್ (UK), ಆಸ್ಟ್ರೇಲಿಯಾ - 182
8. ಕೆನಡಾ, ಐಸ್‌ಲ್ಯಾಂಡ್ - 181
9. ಮಲೇಷ್ಯಾ - 180
10. ಅಮೆರಿಕ ಸಂಯುಕ್ತ ಸಂಸ್ಥಾನ (USA) - 179
ಯುಎಇ (UAE) – 5ನೇ ಸ್ಥಾನ (ಗಮನಾರ್ಹ ಏರಿಕೆ)
**➤ ಕಡಿಮೆ ಶ್ರೇಣಿಯ ಪಾಸ್‌ಪೋರ್ಟ್‌ಗಳು:-**
- ಅಫ್ಘಾನಿಸ್ತಾನ – 101ನೇ ಸ್ಥಾನ (24 ದೇಶಗಳಿಗೆ ಮಾತ್ರ ಪ್ರವೇಶ)
- ಪಾಕಿಸ್ತಾನ – 98ನೇ ಸ್ಥಾನ

➤ ಭಾರತದ ರ್ಯಾಂಕ್ ಸುಧಾರಣೆ ಒಂದು ಧನಾತ್ಮಕ ಸೂಚಕವಾಗಿದ್ದರೂ, ಇನ್ನೂ ಅನೇಕ ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಹಿಂದೆ ಇದೆ. ಮುಂದಿನ ದಿನಗಳಲ್ಲಿ ಬಲವಾದ ರಾಜತಾಂತ್ರಿಕ ಸಂಬಂಧಗಳು ಮತ್ತು ಪ್ರಯಾಣ ಸೌಲಭ್ಯ ವಿಸ್ತರಣೆ ಭಾರತಕ್ಕೆ ಅಗತ್ಯವಾಗಿದೆ.

## ಭಾರತದ ಮೊದಲ ಸ್ವದೇಶಿ ಲೆಗ್ಡ್ ಮೊಬೈಲ್ ಮ್ಯಾನಿಪ್ಯುಲೇಟರ್ 'SCORP' ಅನಾವರಣ




➤ ಭಾರತವು ಸುಧಾರಿತ ರೊಬೊಟಿಕ್ಸ್ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ಐಐಟಿ ಕಾನ್ಪುರದಲ್ಲಿ (IIT Kanpur) ಅಭಿವೃದ್ಧಿಗೊಂಡ ಉದಯೋನ್ಮುಖ ಸ್ಟಾರ್ಟ್‌ಅಪ್ 'xTerra Robotics', ಭಾರತದ ಮೊಟ್ಟಮೊದಲ ಕಾಲುಗಳುಳ್ಳ ಮೊಬೈಲ್ ಮ್ಯಾನಿಪ್ಯುಲೇಟರ್ (Legged Mobile Manipulator) ಆದ 'SCORP' ಅನ್ನು ಪರಿಚಯಿಸಿದೆ. SCORP ಎಂಬುದು ನಾಲ್ಕು ಕಾಲುಗಳನ್ನು ಹೊಂದಿರುವ ರೋಬೋಟ್ ಆಗಿದ್ದು, ಇದರ ಮೇಲೆ ಒಂದು ಸಂಕೀರ್ಣವಾದ ರೊಬೊಟಿಕ್ ಹಸ್ತವನ್ನು (Robotic Arm) ಅಳವಡಿಸಲಾಗಿದೆ. ಇದು ಕೇವಲ ಚಲಿಸುವುದು ಮಾತ್ರವಲ್ಲದೆ, ವಸ್ತುಗಳನ್ನು ಎತ್ತಲು ಮತ್ತು ನಿರ್ವಹಿಸಲು ಶಕ್ತವಾಗಿದೆ.
➤ ಈ ರೋಬೋಟ್‌ನ ಪ್ರಮುಖ ವೈಶಿಷ್ಟ್ಯಗಳು:-
=> ಅಪ್ರತಿಮ ಚಲನಶೀಲತೆ: ಚಕ್ರದ ರೋಬೋಟ್‌ಗಳು ಹೋಗಲಾಗದ ಮೆಟ್ಟಿಲುಗಳು, ಕಲ್ಲು-ಕಸದ ರಾಶಿಗಳು ಮತ್ತು ಸಮತಟ್ಟಲ್ಲದ ಕೈಗಾರಿಕಾ ಪ್ರದೇಶಗಳಲ್ಲಿ ಇದು ಸುಲಭವಾಗಿ ಚಲಿಸಬಲ್ಲದು.
=> ಬುದ್ಧಿವಂತ ಸಂವೇದಕಗಳು (Sensors): ಇದರಲ್ಲಿ ಸ್ಟೀರಿಯೋ ಡೆಪ್ತ್ ಕ್ಯಾಮೆರಾಗಳು ಮತ್ತು ಸುಧಾರಿತ ಸೆನ್ಸಾರ್‌ಗಳಿವೆ. ಇವು ಪೈಪ್‌ಲೈನ್‌ಗಳಲ್ಲಿನ ಬಿರುಕುಗಳು ಅಥವಾ ತುಕ್ಕು ಹಿಡಿದಿರುವುದನ್ನು ಪತ್ತೆಹಚ್ಚಲು ಸಹಾಯ ಮಾಡುತ್ತವೆ.
=> ಬಹುಮುಖ ಕಾರ್ಯದಕ್ಷತೆ: ಇದರ ರೊಬೊಟಿಕ್ ಹಸ್ತವು ಅಪಾಯಕಾರಿ ವಸ್ತುಗಳನ್ನು ಎತ್ತಲು, ಉಪಕರಣಗಳನ್ನು ಬಳಸಲು ಮತ್ತು ತಪಾಸಣೆ ನಡೆಸಲು ನೆರವಾಗುತ್ತದೆ.
=> ಸ್ವದೇಶಿ ತಂತ್ರಜ್ಞಾನ: ಇದು ಸಂಪೂರ್ಣವಾಗಿ ಭಾರತದಲ್ಲಿಯೇ ವಿನ್ಯಾಸಗೊಳಿಸಲ್ಪಟ್ಟಿದ್ದು, ರೊಬೊಟಿಕ್ಸ್ ಕ್ಷೇತ್ರದಲ್ಲಿ ಭಾರತದ 'ಆತ್ಮನಿರ್ಭರತೆ'ಯನ್ನು ಎತ್ತಿ ತೋರಿಸುತ್ತದೆ.
**➤ SCORP ಎಲ್ಲೆಲ್ಲಿ ಬಳಕೆಯಾಗುತ್ತದೆ?**
=> ದುರಂತ ನಿರ್ವಹಣೆ: ಭೂಕಂಪ ಅಥವಾ ಕಟ್ಟಡ ಕುಸಿತದಂತಹ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯಾಚರಣೆಗೆ ಉಪಯುಕ್ತ.
=> ಕೈಗಾರಿಕಾ ತಪಾಸಣೆ: ತೈಲ ಮತ್ತು ಅನಿಲ ಘಟಕಗಳಲ್ಲಿ ಮಾನವರಿಗೆ ಅಪಾಯಕಾರಿಯಾದ ಸ್ಥಳಗಳ ಪರಿಶೀಲನೆ.
=> ರಕ್ಷಣೆ ಮತ್ತು ಭದ್ರತೆ: ಬಾಂಬ್ ಪತ್ತೆ ಮಾಡುವುದು ಅಥವಾ ಗಸ್ತು ತಿರುಗುವಿಕೆಗೆ (Patrolling) ಬಳಕೆಯಾಗಬಹುದು.
=> ತ್ಯಾಜ್ಯ ನಿರ್ವಹಣೆ: ಸ್ವಯಂಚಾಲಿತವಾಗಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಸಹಕಾರಿ.

➤ SVAN ನಿಂದ SCORP ವರೆಗೆ xTerra Robotics ಸಂಸ್ಥೆಯು ಸುಧಾರಿತ ರೋಬೋಟ್‌ಗಳ ತಯಾರಿಕೆಯಲ್ಲಿ ಹಂತಹಂತವಾಗಿ ಯಶಸ್ಸು ಸಾಧಿಸುತ್ತಾ ಬಂದಿದೆ. ಈ ಹಿಂದೆ ಸಂಸ್ಥೆಯು ಅಭಿವೃದ್ಧಿಪಡಿಸಿದ್ದ SVAN M1 ಆವೃತ್ತಿಯು ನಾಲ್ಕು ಕಾಲುಗಳ ನಡಿಗೆಯ ಸ್ಥಿರತೆಯನ್ನು (Stable Locomotion) ಯಶಸ್ವಿಯಾಗಿ ಸಾಬೀತುಪಡಿಸಿತ್ತು. ಇದರ ಮುಂದುವರಿದ ಭಾಗವಾದ SVAN M2, ಕೃತಕ ಬುದ್ಧಿಮತ್ತೆ (AI) ಆಧಾರಿತ ಮ್ಯಾಪಿಂಗ್ ಮತ್ತು ಸ್ವಯಂಚಾಲಿತ ನ್ಯಾವಿಗೇಷನ್ ಸಾಮರ್ಥ್ಯ ಹೊಂದಿದ ಭಾರತದ ಮೊದಲ ವಾಣಿಜ್ಯ ಬಳಕೆಯ ರೋಬೋಟ್ ಆಗಿ ಗುರುತಿಸಿಕೊಂಡಿತು. ಆದರೆ, ಇವೆರಡೂ ರೋಬೋಟ್‌ಗಳು ಕೇವಲ ವೀಕ್ಷಣೆ ಮತ್ತು ದತ್ತಾಂಶ ಸಂಗ್ರಹಣೆಗೆ ಸೀಮಿತವಾಗಿದ್ದವು. ಈ ಎಲ್ಲಾ ತಾಂತ್ರಿಕ ಅನುಭವವನ್ನು ಬಳಸಿಕೊಂಡು ಈಗ ಸಿದ್ಧಪಡಿಸಲಾಗಿರುವ 'SCORP', ಕೇವಲ 'ನೋಡುವ' ಸಾಧನವಾಗದೆ 'ಕೆಲಸ ಮಾಡುವ' ಶಕ್ತಿಯಾಗಿ ಹೊರಹೊಮ್ಮಿದೆ. ಇದಕ್ಕೆ ಜೋಡಿಸಲಾದ ವಿಶೇಷ ರೊಬೊಟಿಕ್ ಹಸ್ತವು ವಸ್ತುಗಳನ್ನು ಹಿಡಿಯಲು, ತಿರುಗಿಸಲು ಮತ್ತು ಸಂಕೀರ್ಣ ಕಾರ್ಯಗಳನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಹೀಗೆ ಸಕ್ರಿಯವಾಗಿ ಪರಿಸರದೊಂದಿಗೆ ಸಂವಹನ ನಡೆಸುವ ಸಾಮರ್ಥ್ಯವು SCORP ಅನ್ನು ತನ್ನ ಹಿಂದಿನ ಆವೃತ್ತಿಗಳಿಗಿಂತ ಹೆಚ್ಚು ಶಕ್ತಿಶಾಲಿ ಮತ್ತು ಉಪಯುಕ್ತವಾಗಿಸಿದೆ.

## ಭಾರತೀಯ ರೈಲ್ವೆಯಿಂದ ದೇಶಾದ್ಯಂತ OTP ಆಧಾರಿತ ಟಿಕೆಟಿಂಗ್ ವ್ಯವಸ್ಥೆ ಜಾರಿ




➤ ಟಿಕೆಟ್ ಬುಕಿಂಗ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಲು ಮತ್ತು ಅಕ್ರಮ ಬುಕಿಂಗ್‌ಗಳನ್ನು ತಡೆಗಟ್ಟಲು, ಭಾರತೀಯ ರೈಲ್ವೆಯು ದೇಶಾದ್ಯಂತ 'ಒನ್-ಟೈಮ್ ಪಾಸ್‌ವರ್ಡ್' (OTP) ಆಧಾರಿತ ಟಿಕೆಟಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಈ ಹೊಸ ಡಿಜಿಟಲ್ ಸುರಕ್ಷತಾ ಕ್ರಮವು ಜನವರಿ 12 ರಿಂದ ಜಾರಿಗೆ ಬಂದಿದೆ.

➤ ಮೊದಲ ಹಂತದಲ್ಲಿ ರಾಜಧಾನಿ, ಶತಾಬ್ದಿ ಮತ್ತು ದುರಂತೋ ಎಕ್ಸ್‌ಪ್ರೆಸ್ ಸೇರಿದಂತೆ ಸುಮಾರು 300 ಪ್ರಮುಖ ರೈಲುಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಆನ್‌ಲೈನ್ ಅಥವಾ ರೈಲ್ವೆ ಕೌಂಟರ್‌ಗಳಲ್ಲಿ ಟಿಕೆಟ್ ಪಡೆಯಲು ಪ್ರಯಾಣಿಕರು ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ಒದಗಿಸಬೇಕು. ವ್ಯವಸ್ಥೆಯು ಮೊಬೈಲ್‌ಗೆ OTP ಕಳುಹಿಸುತ್ತದೆ, ಅದನ್ನು ದೃಢೀಕರಿಸಿದ ನಂತರವೇ ಟಿಕೆಟ್ ವಿತರಿಸಲಾಗುತ್ತದೆ. ಇದು ಆನ್ ಲೈನ್ ಬುಕಿಂಗ್ ಮತ್ತು ಕೌಂಟರ್ ಟಿಕೆಟ್ ಎರಡಕ್ಕೂ ಅನ್ವಯಿಸುತ್ತದೆ.

➤ **ಉದ್ದೇಶಗಳು:-**

=> ಅಕ್ರಮ ಬುಕಿಂಗ್ ತಡೆ: ಅನಧಿಕೃತ ಏಜೆಂಟ್‌ಗಳು ಬೃಹತ್ ಪ್ರಮಾಣದಲ್ಲಿ (Bulk Booking) ಟಿಕೆಟ್ ಬುಕ್ ಮಾಡುವುದನ್ನು ತಪ್ಪಿಸುವುದು.

=> ಗುರುತಿನ ದೃಢೀಕರಣ: ಪ್ರಯಾಣಿಕರ ನಿಜವಾದ ಗುರುತನ್ನು ಖಚಿತಪಡಿಸಿಕೊಳ್ಳುವುದು ಮತ್ತು ನಕಲಿ ಬುಕಿಂಗ್‌ಗಳನ್ನು ನಿಯಂತ್ರಿಸುವುದು.

=> ಪಾರದರ್ಶಕತೆ: ರೈಲ್ವೆ ಟಿಕೆಟಿಂಗ್ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವುದು ಮತ್ತು ಸಾಮಾನ್ಯ ಪ್ರಯಾಣಿಕರಿಗೆ ಸುಲಭವಾಗಿ ಟಿಕೆಟ್ ಸಿಗುವಂತೆ ಮಾಡುವುದು.

➤ ಆನ್‌ಲೈನ್ ಮತ್ತು ಕೌಂಟರ್ ಬುಕಿಂಗ್‌ಗಳೆರಡಕ್ಕೂ ಇದು ಅನ್ವಯಿಸಲಿದ್ದು, ಅನಧಿಕೃತ ಏಜೆಂಟ್‌ಗಳ ಹಾವಳಿಯನ್ನು ನಿಯಂತ್ರಿಸುವ ಗುರಿ ಹೊಂದಿದೆ. ಪ್ರಯಾಣಿಕರ ಭದ್ರತೆ ಮತ್ತು ಮೂಲಸೌಕರ್ಯದ ದುರ್ಬಳಕೆಯನ್ನು ತಡೆಯಲು ರೈಲ್ವೆ ಇಲಾಖೆ ತೆಗೆದುಕೊಂಡ ಪ್ರಮುಖ ಡಿಜಿಟಲ್ ಹೆಜ್ಜೆ ಇದಾಗಿದೆ.

## ಅಮೆರಿಕದ ವೀಸಾ ನೀತಿಯಲ್ಲಿ ಭಾರೀ ಬದಲಾವಣೆ: 75 ದೇಶಗಳಿಗೆ ನಿರ್ಬಂಧ




➤ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಕಳೆದ ವರ್ಷ ಒಂದು ಲಕ್ಷಕ್ಕೂ ಹೆಚ್ಚು ವೀಸಾಗಳನ್ನು ರದ್ದುಪಡಿಸಿರುವುದು ವರದಿಯಾಗಿದೆ. ಇದರಲ್ಲಿ ಕಾನೂನು ಉಲ್ಲಂಘನೆ, ಅಪರಾಧ ಹಿನ್ನೆಲೆ ಹಾಗೂ ವಲಸೆ ನಿಯಮಗಳ ದುರುಪಯೋಗ ಮಾಡಿರುವ ವಿದೇಶಿಗರು ಪ್ರಮುಖ ಕಾರಣರಾಗಿದ್ದಾರೆ. ಅಮೆರಿಕವು ವಲಸೆ ನೀತಿಯನ್ನು ಮತ್ತಷ್ಟು ಕಠಿಣಗೊಳಿಸಿದ್ದು, ವಿಶ್ವದ 75 ರಾಷ್ಟ್ರಗಳ ವೀಸಾ ಪ್ರಕ್ರಿಯೆಯನ್ನು ಜನವರಿ 21, 2026 ರಿಂದ ಜಾರಿಗೆ ಬರುವಂತೆ ಅನಿರ್ದಿಷ್ಟಾವಧಿಗೆ ಸ್ಥಗಿತಗೊಳಿಸಿದೆ.

➤ ಭಾರತಕ್ಕೆ ವಿನಾಯಿತಿ: ಈ ಕಠಿಣ ನಿರ್ಧಾರದಿಂದ ಭಾರತಕ್ಕೆ ಸದ್ಯ ಯಾವುದೇ ತೊಂದರೆಯಿಲ್ಲ. 75 ದೇಶಗಳ ಪಟ್ಟಿಯಲ್ಲಿ ಭಾರತದ ಹೆಸರಿಲ್ಲದ ಕಾರಣ, ಭಾರತೀಯ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ಎಂದಿನಂತೆ ವೀಸಾ ಪ್ರಕ್ರಿಯೆಯನ್ನು ಮುಂದುವರಿಸಬಹುದು.

➤ ಅಮೆರಿಕದ ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕತೆಯನ್ನು ರಕ್ಷಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಮುಖ್ಯವಾಗಿ 'Public Charge' (ಅಮೆರಿಕ ಸರ್ಕಾರದ ಸೌಲಭ್ಯಗಳ ಮೇಲೆ ಅವಲಂಬಿತರಾಗುವ ಸಾಧ್ಯತೆ ಇರುವವರು) ಆಧಾರದ ಮೇಲೆ ಅರ್ಜಿದಾರರ ಆರೋಗ್ಯ, ವಯಸ್ಸು, ಇಂಗ್ಲಿಷ್ ಭಾಷಾ ಪ್ರಾವೀಣ್ಯತೆ ಮತ್ತು ಆರ್ಥಿಕ ಸ್ಥಿತಿಯನ್ನು ಕಟ್ಟುನಿಟ್ಟಾಗಿ ಪರಿಶೀಲಿಸಲಾಗುತ್ತದೆ.

➤ ಅಫ್ಘಾನಿಸ್ತಾನ, ಬಾಂಗ್ಲಾದೇಶ, ಪಾಕಿಸ್ತಾನ, ನೇಪಾಳ, ಭೂತಾನ್, ರಷ್ಯಾ ಸೇರಿದಂತೆ ಒಟ್ಟು 75 ದೇಶಗಳ ಪ್ರಜೆಗಳಿಗೆ ಪ್ರವಾಸೋದ್ಯಮ, ಶಿಕ್ಷಣ ಮತ್ತು ಉದ್ಯೋಗ ವೀಸಾಗಳು ಸದ್ಯಕ್ಕೆ ದೊರೆಯುವುದಿಲ್ಲ. ಕಳೆದ ವರ್ಷ ಅಮೆರಿಕದ ಕಾನೂನು ಉಲ್ಲಂಘಿಸಿದ ಸುಮಾರು 1 ಲಕ್ಷಕ್ಕೂ ಅಧಿಕ ವೀಸಾಗಳನ್ನು ರದ್ದುಪಡಿಸಲಾಗಿದೆ. ಇದರಲ್ಲಿ ಸುಮಾರು 8,000 ವಿದ್ಯಾರ್ಥಿ ವೀಸಾಗಳು ಹಾಗೂ 2,500 ಎಚ್-1ಬಿ (H-1B) ವೀಸಾಗಳು ಸೇರಿವೆ.

➤ ಪಟ್ಟಿಯಲ್ಲಿ ಭಾರತ ಇಲ್ಲದಿದ್ದರೂ, ಅಮೆರಿಕವು ವೀಸಾ ನಿಯಮಗಳನ್ನು ಬಿಗಿಗೊಳಿಸಿರುವುದರಿಂದ ಅನಿವಾಸಿ ಭಾರತೀಯರು ಮತ್ತು ಅಲ್ಲಿಗೆ ತೆರಳುವ ವೃತ್ತಿಪರರು ಹೆಚ್ಚಿನ ತಪಾಸಣೆಗೆ ಒಳಗಾಗಬೇಕಾಗುತ್ತದೆ. ಪ್ರಸ್ತುತ ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ಚೀನಾ ವಿದ್ಯಾರ್ಥಿಗಳಿಗಿಂತ ಭಾರತೀಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಬದಲಾಗುತ್ತಿರುವ ವೀಸಾ ನೀತಿಗಳ ಮೇಲೆ ನಿಗಾವಹಿಸುವುದು ಅಗತ್ಯವಾಗಿದೆ.

## 28ನೇ ಕಾಮನ್‌ವೆಲ್ತ್ ಸ್ಪೀಕರ್‌ಗಳ ಸಮ್ಮೇಳನ (CSPOC 2026): ಸಂವಿಧಾನ ಸದನದಲ್ಲಿ ಪ್ರಧಾನಿ ಮೋದಿ ಚಾಲನೆ




➤ ಭಾರತವು 28ನೇ ಕಾಮನ್‌ವೆಲ್ತ್ ಸಂಸತ್ತಿನ ಸ್ಪೀಕರ್‌ಗಳು ಮತ್ತು ಅಧ್ಯಕ್ಷೀಯ ಅಧಿಕಾರಿಗಳ ಸಮ್ಮೇಳನ (CSPOC 2026) ಅನ್ನು 2026ರ ಜನವರಿ 14ರಿಂದ 16ರವರೆಗೆ ನವದೆಹಲಿಯಲ್ಲಿ ಆಯೋಜಿಸಿದೆ. ಈ ಕಾರ್ಯಕ್ರಮವನ್ನು ಜನವರಿ 15ರಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ನವದೆಹಲಿಯ ಸಂಸತ್ ಭವನ ಸಂಕೀರ್ಣದ ಐತಿಹಾಸಿಕ ಸಂವಿಧಾನ ಸದನ

(Samvidhan Sadan) ದಲ್ಲಿ ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ವಹಿಸಿದ್ದರು.

➤ ಈ ಬಾರಿಯ ಸಮ್ಮೇಳನದ ಕೇಂದ್ರ ಬಿಂದು(THEME) "ಸಂಸದೀಯ ಪ್ರಜಾಪ್ರಭುತ್ವದ ಪರಿಣಾಮಕಾರಿ ವಿತರಣೆ" (Effective Delivery of Parliamentary Democracy) ಎಂಬುದಾಗಿದೆ.

➤ ಕಾಮನ್‌ವೆಲ್ತ್ ದೇಶಗಳ ಸಂಸದೀಯ ಸಂಸ್ಥೆಗಳ ನಡುವೆ ಜ್ಞಾನದ ಹಂಚಿಕೆ, ಪ್ರಜಾಪ್ರಭುತ್ವದ ಮೌಲ್ಯಗಳ ಬಲವರ್ಧನೆ ಮತ್ತು ಉತ್ತಮ ಆಡಳಿತದ ಬಗ್ಗೆ ಚರ್ಚಿಸುವುದು ಈ ಸಮ್ಮೇಳನದ ಪ್ರಮುಖ ಉದ್ದೇಶವಾಗಿದೆ. ಭಾರತವು ಈ ಸಮ್ಮೇಳನವನ್ನು ಆಯೋಜಿಸುತ್ತಿರುವುದು ಇದು ನಾಲ್ಕನೇ ಬಾರಿ (ಹಿಂದೆ 1971, 1986 ಮತ್ತು 2010ರಲ್ಲಿ ಆಯೋಜಿಸಲಾಗಿತ್ತು).

➤ ಪ್ರಮುಖ ಚರ್ಚಾ ವಿಷಯಗಳು:- ಮೂರು ದಿನಗಳ ಈ ಸಮಾವೇಶದಲ್ಲಿ ಸಂಸದೀಯ ವ್ಯವಸ್ಥೆಯ ಆಧುನೀಕರಣಕ್ಕೆ ಸಂಬಂಧಿಸಿದಂತೆ ಕೆಳಗಿನ ವಿಷಯಗಳ ಮೇಲೆ ಬೆಳಕು ಚೆಲ್ಲಲಾಯಿತು:

=> ಕೃತಕ ಬುದ್ಧಿಮತ್ತೆ (AI): ಸಂಸತ್ತಿನ ಕಾರ್ಯಕಲಾಪಗಳಲ್ಲಿ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಮತ್ತು ಭಾಷಾ ಅನುವಾದಕ್ಕಾಗಿ ಅದರ ಬಳಕೆ.

=> ಸಾಮಾಜಿಕ ಮಾಧ್ಯಮ: ಜನಪ್ರತಿನಿಧಿಗಳ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ ಮತ್ತು ಸಾರ್ವಜನಿಕರೊಂದಿಗೆ ಸಂಪರ್ಕ ಸಾಧಿಸುವ ರೀತಿ.

=> ಸಾರ್ವಜನಿಕ ಸಹಭಾಗಿತ್ವ: ಚುನಾವಣೆಗಳ ಹೊರತಾಗಿ ನಾಗರಿಕರು ಸಂಸದೀಯ ಪ್ರಕ್ರಿಯೆಯಲ್ಲಿ ಹೇಗೆ ಭಾಗವಹಿಸಬಹುದು ಎಂಬ ನವೀನ ಆಲೋಚನೆಗಳು.

=> ಸಂಸದರ ಕ್ಷೇಮಾಭಿವೃದ್ಧಿ: ಸದಸ್ಯರ ಭದ್ರತೆ, ಆರೋಗ್ಯ ಮತ್ತು ಒಟ್ಟಾರೆ ಕಲ್ಯಾಣಕ್ಕೆ ಸಂಬಂಧಿಸಿದ ವಿಚಾರಗಳು.

➤ ಪ್ರಧಾನಿಯವರ ಭಾಷಣದ ಹೂರಣ: ಭಾರತವನ್ನು 'Mother of Democracy' ಎಂದು ಕರೆದ ಪ್ರಧಾನಿ, ವೇದಗಳ ಕಾಲದ ಚರ್ಚಾ ಪರಂಪರೆಯನ್ನು ನೆನಪಿಸಿದರು.ಪ್ರಜಾಪ್ರಭುತ್ವದ ಯಶಸ್ಸು ಎಂದರೆ ಸರಕಾರದ ಸೌಲಭ್ಯಗಳು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ತಲುಪುವುದು (Last-mile delivery). 2024ರ ಚುನಾವಣೆಯಲ್ಲಿ ಮಹಿಳೆಯರ ಭವ್ಯ ಭಾಗವಹಿಸುವಿಕೆ ಮತ್ತು ಭಾರತದ ಸ್ಥಳೀಯ ಸಂಸ್ಥೆಗಳಲ್ಲಿರುವ 1.5 ಮಿಲಿಯನ್ ಮಹಿಳಾ ಪ್ರತಿನಿಧಿಗಳ ದಾಖಲೆಯನ್ನು ಉಲ್ಲೇಖಿಸಿದರು.ಭಾರತವು ಅಭಿವೃದ್ಧಿಶೀಲ ರಾಷ್ಟ್ರಗಳ ದನಿಯಾಗಿ ಕೆಲಸ ಮಾಡುತ್ತಿದೆ ಮತ್ತು ತನ್ನ ಮುಕ್ತ ತಂತ್ರಜ್ಞಾನ ವೇದಿಕೆಗಳನ್ನು ಇತರ ದೇಶಗಳೊಂದಿಗೆ ಹಂಚಿಕೊಳ್ಳಲು ಸಿದ್ಧವಿದೆ ಎಂದು ತಿಳಿಸಿದರು.

➤ ಜವಾಬ್ದಾರಿಯ ಹಸ್ತಾಂತರ: ಸಮ್ಮೇಳನದ ಸಮಾರೋಪದ ನಂತರ, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು CSPOC ಅಧ್ಯಕ್ಷತೆಯ ಜವಾಬ್ದಾರಿಯನ್ನು ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್ ನ ಸ್ಪೀಕರ್ ಲಿಂಡ್ಸೆ ಹೋಯ್ಲ್ (Lindsay Hoyle) ಅವರಿಗೆ ಹಸ್ತಾಂತರಿಸಲಿದ್ದಾರೆ.

## ಅಮೆರಿಕದ FDA ಯಿಂದ ಜೀವಘಾತಕ 'ಮೆಂಕೀಸ್ ರೋಗ'ಕ್ಕೆ ಮೊದಲ ಔಷಧ 'Zycubo' ಅನುಮೋದನೆ: ಭಾರತೀಯ ಕಂಪನಿಯ ಸಾಧನೆ!





➤ವೈದ್ಯಕೀಯ ಜಗತ್ತಿನಲ್ಲಿ ಒಂದು ಮಹತ್ವದ ಮೈಲಿಗಲ್ಲು ಸ್ಥಾಪನೆಯಾಗಿದೆ. ಮಕ್ಕಳಲ್ಲಿ ಕಂಡುಬರುವ ಅತ್ಯಂತ ಅಪರೂಪದ ಮತ್ತು ಜೀವಘಾತಕವಾದ 'ಮೆಂಕೀಸ್ ರೋಗ' (Menkes Disease) ಚಿಕಿತ್ಸೆಗೆ ಅಮೆರಿಕದ ಆಹಾರ ಮತ್ತು ಔಷಧ ಆಡಳಿತ ಸಂಸ್ಥೆಯು (US FDA) 'Zycubo' (Copper Histidinate) ಇಂಜೆಕ್ಷನ್ ಅನ್ನು ಅಧಿಕೃತವಾಗಿ ಅನುಮೋದಿಸಿದೆ.

ವಿಶೇಷವೆಂದರೆ, ಈ ಔಷಧಿಯನ್ನು ಅಭಿವೃದ್ಧಿಪಡಿಸಿದ ಕಂಪನಿಯು ಭಾರತದ ಪ್ರಖ್ಯಾತ 'ಝೈಡಸ್ ಲೈಫ್‌ಸೈನ್ಸ್' (Zydus Lifesciences) ಸಂಸ್ಥೆಯ ಅಂಗಸಂಸ್ಥೆಯಾಗಿದೆ.

➤ ಏನಿದು ಮೆಂಕೀಸ್ ರೋಗ? (What is Menkes Disease?)
ಮೆಂಕೀಸ್ ರೋಗವು ಒಂದು ಅಪರೂಪದ ಆನುವಂಶಿಕ ನರಕ್ಷಯ (Neurodegenerative) ಕಾಯಿಲೆಯಾಗಿದ್ದು, ದೇಹವು ಆಹಾರದಿಂದ ತಾಮ್ರವನ್ನು (Copper) ಸರಿಯಾಗಿ ಹೀರಿಕೊಳ್ಳಲು ಅಥವಾ ಶೇಖರಿಸಲು ವಿಫಲವಾದಾಗ ಕಾಣಿಸಿಕೊಳ್ಳುತ್ತದೆ; ಇದರ ಪರಿಣಾಮವಾಗಿ ಮಕ್ಕಳಲ್ಲಿ ತೂಕ ಕಡಿಮೆಯಾಗುವುದು, ಬೆಳವಣಿಗೆ ಕುಂಠಿತವಾಗುವುದು, ಸ್ನಾಯುಗಳ ದೌರ್ಬಲ್ಯ, ಎಲುಬುಗಳ ವಿಕಾರ ಹಾಗೂ ಬುದ್ಧಿಮಾಂದ್ಯತೆ ಉಂಟಾಗುತ್ತವೆ, ಮತ್ತು ಈ ರೋಗವು ಮುಖ್ಯವಾಗಿ ನರಮಂಡಲ, ರಕ್ತನಾಳಗಳು ಹಾಗೂ ಮೂತ್ರಕೋಶದ ಮೇಲೆ ತೀವ್ರ ಪರಿಣಾಮ ಬೀರುತ್ತದೆ, ಸಾಮಾನ್ಯವಾಗಿ ಇದರಿಂದ ಪೀಡಿತ ಮಕ್ಕಳು 3 ವರ್ಷಕ್ಕಿಂತ ಹೆಚ್ಚು ಕಾಲ ಬದುಕುವುದಿಲ್ಲ.

➤ 'Zycubo' ಔಷಧಿಯ ಕಾರ್ಯನಿರ್ವಹಣೆ ಮತ್ತು ಮಹತ್ವ:
Zycubo ಔಷಧಿಯು ಮೆಂಕೀಸ್ ರೋಗಕ್ಕೆ ಲಭ್ಯವಿರುವ ವಿಶ್ವದ ಮೊದಲ ಹಾಗೂ ಏಕೈಕ FDA ಅನುಮೋದಿತ ಚಿಕಿತ್ಸೆ ಆಗಿದ್ದು, ಇದು ತಾಮ್ರ ಮರುಪೂರಣ ಚಿಕಿತ್ಸೆ (Copper Replacement Therapy) ಯ ಭಾಗವಾಗಿ ಚರ್ಮದ ಮೂಲಕ (Subcutaneous Injection) ನೀಡಲಾಗುತ್ತದೆ ಮತ್ತು ದೇಹಕ್ಕೆ ಅಗತ್ಯವಿರುವ ತಾಮ್ರವನ್ನು ನೇರವಾಗಿ ಒದಗಿಸಿ ಕೊರತೆಯನ್ನು ನೀಗಿಸುತ್ತದೆ; ಕ್ಲಿನಿಕಲ್ ಟ್ರಯಲ್‌ಗಳ ಪ್ರಕಾರ ಮಗು ಹುಟ್ಟಿದ 4 ವಾರಗಳೊಳಗೆ ಚಿಕಿತ್ಸೆ ಆರಂಭಿಸಿದರೆ ಸಾವಿನ ಅಪಾಯವು 78% ರಷ್ಟು ಕಡಿಮೆಯಾಗುತ್ತದೆ, ಹಾಗೂ ಚಿಕಿತ್ಸೆ ಪಡೆದ ಕೆಲವು ಮಕ್ಕಳು 12 ವರ್ಷಗಳಿಗಿಂತ ಹೆಚ್ಚು ಕಾಲ ಬದುಕಿರುವುದು ದಾಖಲಾಗಿದ್ದು, ಈ ಮಹತ್ವದ ಔಷಧಿಗೆ FDA ಯಿಂದ 'Priority Review', 'Fast Track' ಮತ್ತು 'Orphan Drug' ಎಂಬ ವಿಶೇಷ ಮಾನ್ಯತೆಗಳು ನೀಡಲಾಗಿದೆ.

➤ Zycubo ಔಷಧಿಯನ್ನು Sentynl Therapeutics Inc. ಅಭಿವೃದ್ಧಿಪಡಿಸಿದ್ದು, ಇದು ಭಾರತದ Zydus Lifesciences ಸಂಸ್ಥೆಯ ಸಂಪೂರ್ಣ ಅಂಗಸಂಸ್ಥೆಯಾಗಿದೆ. Sentynl ಕಂಪನಿಯು 2023ರಲ್ಲಿ ಈ ಔಷಧಿಯನ್ನು Cyprium Therapeutics ನಿಂದ ಪಡೆದುಕೊಂಡಿತು. Zycubo ಔಷಧಿಗೆ FDA ಯಿಂದ Priority Review, Fast Track, Breakthrough Therapy, Orphan Drug ಹಾಗೂ Rare Paediatric Disease Designation ನೀಡಲಾಗಿದ್ದು, ಇದೇ ಔಷಧಿಗೆ ಯೂರೋಪಿಯನ್ ಮೆಡಿಸಿನ್ಸ್ ಏಜೆನ್ಸಿ (EMA) ಕೂಡ Orphan Drug ಮಾನ್ಯತೆ ನೀಡಿದೆ.



# 16 Jan 2026

## NITI ಆಯೋಗದ ರಫ್ತು ಸಿದ್ಧತಾ ಸೂಚ್ಯಂಕ (EPI) 2024: ಮಹಾರಾಷ್ಟ್ರಕ್ಕೆ ಅಗ್ರಸ್ಥಾನ




➤ ಇತ್ತೀಚೆಗೆ NITI ಆಯೋಗವು ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ರಫ್ತು ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವ 'ರಫ್ತು ಸಿದ್ಧತಾ ಸೂಚ್ಯಂಕ (Export Preparedness Index - EPI) 2024' ರ ನಾಲ್ಕನೇ ಆವೃತ್ತಿಯನ್ನು ಬಿಡುಗಡೆ ಮಾಡಿದೆ. ಭಾರತದ ಜಾಗತಿಕ ವ್ಯಾಪಾರದಲ್ಲಿ ರಾಜ್ಯಗಳ ಪಾತ್ರವನ್ನು ಗುರುತಿಸುವುದು ಈ ವರದಿಯ ಮುಖ್ಯ ಉದ್ದೇಶವಾಗಿದೆ. ಮಹಾರಾಷ್ಟ್ರ ದೊಡ್ಡ ರಾಜ್ಯಗಳ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದೆ.

➤ ರಫ್ತು ಸಿದ್ಧತಾ ಸೂಚ್ಯಂಕವು ಭಾರತದಲ್ಲಿನ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ರಫ್ತು ಮಾಡಲು ಎಷ್ಟು ಸಿದ್ಧವಾಗಿವೆ, ಅವರ ಸೌಕರ್ಯ, ನೀತಿ, ವ್ಯಾಪಾರ ವಾತಾವರಣ ಮತ್ತು ರಫ್ತು ಫಲಿತಾಂಶಗಳನ್ನು ಅಳೆಯುವ ಸೂಚ್ಯಂಕವಾಗಿದೆ. ಈ ಸೂಚ್ಯಂಕವು FY 2022 ರಿಂದ FY 2024 ಅವಧಿಯ ಮಾಹಿತಿಯನ್ನು ಆಧರಿಸಿದೆ.

**➤ಸೂಚ್ಯಂಕದ ನಾಲ್ಕು ಪ್ರಮುಖ ಸ್ತಂಭಗಳು (Pillars): EPI 2024 ವರದಿಯನ್ನು ಒಟ್ಟು 70 ಸೂಚಕಗಳನ್ನು ಒಳಗೊಂಡ 4 ಪ್ರಮುಖ ಸ್ತಂಭಗಳ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ:**

1. ವ್ಯಾಪಾರ ಪರಿಸರ ವ್ಯವಸ್ಥೆ (Business Ecosystem): ಇದಕ್ಕೆ ಗರಿಷ್ಠ 40% ಆದ್ಯತೆ ನೀಡಲಾಗಿದೆ. ಇದು ಹೂಡಿಕೆ ಮತ್ತು ವ್ಯಾಪಾರಕ್ಕೆ ಪೂರಕವಾದ ವಾತಾವರಣವನ್ನು ಅಳೆಯುತ್ತದೆ.
2. ರಫ್ತು ಮೂಲಸೌಕರ್ಯ (Export Infrastructure): ರಫ್ತು ಚಟುವಟಿಕೆಗಳಿಗೆ ಅಗತ್ಯವಿರುವ ಸಾರಿಗೆ ಮತ್ತು ಲಾಜಿಸ್ಟಿಕ್ಸ್ ಸೌಲಭ್ಯಗಳನ್ನು ಇದು ಗಮನಿಸುತ್ತದೆ (20% ಆದ್ಯತೆ).
3. ನೀತಿ ಮತ್ತು ಆಡಳಿತ (Policy and Governance): ರಾಜ್ಯ ಸರ್ಕಾರಗಳು ರಫ್ತು ಉತ್ತೇಜನಕ್ಕೆ ರೂಪಿಸಿರುವ ನಿಯಮಗಳು ಮತ್ತು ಸಾಂಸ್ಥಿಕ ಬೆಂಬಲವನ್ನು ಅಳೆಯುತ್ತದೆ (20% ಆದ್ಯತೆ).
4. ರಫ್ತು ಪ್ರದರ್ಶನ (Export Performance): ವಾಸ್ತವವಾಗಿ ರಾಜ್ಯವು ಎಷ್ಟು ರಫ್ತು ಮಾಡುತ್ತಿದೆ ಮತ್ತು ಅದರ ಬೆಳವಣಿಗೆಯ ದರವನ್ನು ಇದು ಪರಿಶೀಲಿಸುತ್ತದೆ (20% ಆದ್ಯತೆ).

➤ಈ ಬಾರಿ MSMEಗಳು ಮತ್ತು ಜಿಲ್ಲಾ ಮಟ್ಟದ ರಫ್ತು ಸಾಮರ್ಥ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ರಾಜ್ಯಗಳು ತಮ್ಮ ರಫ್ತು ತಂತ್ರಗಳನ್ನು ರಾಷ್ಟ್ರೀಯ ಗುರಿಗಳಿಗೆ ಅನುಗುಣವಾಗಿ ರೂಪಿಸಲು ಈ ಸೂಚ್ಯಂಕವು ದಿಕ್ಸೂಚಿಯಾಗಿದೆ. ರಾಜ್ಯಗಳ ನಡುವೆ ರಫ್ತು ಕ್ಷೇತ್ರದಲ್ಲಿ ಆರೋಗ್ಯಕರ ಸ್ಪರ್ಧೆಯನ್ನು ಏರ್ಪಡಿಸಲು ಇದು ಸಹಕಾರಿಯಾಗಿದೆ.

➤ ವಿಭಾಗವಾರು ಶ್ರೇಷ್ಠ ಪ್ರದರ್ಶನ ನೀಡಿದ ರಾಜ್ಯಗಳು:-

=> ದೊಡ್ಡ ರಾಜ್ಯಗಳು: ಮಹಾರಾಷ್ಟ್ರ – 1ನೇ ಸ್ಥಾನ, ತಮಿಳುನಾಡು, ಗುಜರಾತ್, ಉತ್ತರ ಪ್ರದೇಶ, ಆಂಧ್ರ ಪ್ರದೇಶ ಈ ರಾಜ್ಯಗಳು ಮೂಲಸೌಕರ್ಯ, ವ್ಯಾಪಾರ ಪರಿಸರ, ಆಡಳಿತ ಮತ್ತು ರಫ್ತು ಫಲಿತಾಂಶಗಳಲ್ಲಿ ಬಲವಾದ ಪ್ರದರ್ಶನ ನೀಡಿವೆ.

=> ಸಣ್ಣ ರಾಜ್ಯಗಳು, ಉತ್ತರ ಪೂರ್ವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು: ಉತ್ತರಾಖಂಡ, ಜಮ್ಮು ಮತ್ತು ಕಾಶ್ಮೀರ, ನಾಗಾಲ್ಯಾಂಡ್, ದಾದ್ರಾ ಮತ್ತು ನಗರ ಹವೇಲಿ ಹಾಗೂ ದಮನ್ ಮತ್ತು ದಿಯು, ಗೋವಾ ಇವು ರಚನಾತ್ಮಕ ಸವಾಲುಗಳಿದ್ದರೂ, ರಫ್ತು ಉತ್ತೇಜನ ಮತ್ತು ನೀತಿ ಬೆಂಬಲದಲ್ಲಿ ಉತ್ತಮ ಸಾಧನೆ ಮಾಡಿವೆ.

=> Challenger States (ದೊಡ್ಡ ರಾಜ್ಯಗಳು): ಮಧ್ಯ ಪ್ರದೇಶ, ಹರಿಯಾಣ, ಕೇರಳ ಮತ್ತು ಪಶ್ಚಿಮ ಬಂಗಾಳ

=> Aspirer States (ಕಡಿಮೆ ಸ್ಥಾನ): ಒಡಿಶಾ, ಛತ್ತೀಸ್‌ಗಢ, ರಾಜಸ್ಥಾನ, ಬಿಹಾರ ಮತ್ತು ಜಾರ್ಖಂಡ್ ಈ ರಾಜ್ಯಗಳಿಗೆ ಕೇಂದ್ರಿತ ನೀತಿ ಹಸ್ತಕ್ಷೇಪ ಮತ್ತು ಮೂಲಸೌಕರ್ಯ ಸುಧಾರಣೆ ಅಗತ್ಯವಿದೆ.

➤ ಭಾರತವು ಜಾಗತಿಕವಾಗಿ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲು ರಾಜ್ಯಗಳ ರಫ್ತು ಸಿದ್ಧತೆ ಅತ್ಯಗತ್ಯ. NITI ಆಯೋಗದ ಈ ವರದಿಯು ರಾಜ್ಯಗಳಲ್ಲಿನ ನ್ಯೂನತೆಗಳನ್ನು ಗುರುತಿಸಿ, ಸುಧಾರಣೆಗೆ ಪೂರಕವಾದ ದತ್ತಾಂಶವನ್ನು ಒದಗಿಸುತ್ತದೆ.

## ಜನವರಿ 16 : ರಾಷ್ಟ್ರೀಯ ನವೋದ್ಯಮ ದಿನ




➤ ಪ್ರತಿ ವರ್ಷ ಜನವರಿ 16ರಂದು ರಾಷ್ಟ್ರೀಯ ನವೋದ್ಯಮ ದಿನವನ್ನು ದೇಶಾದ್ಯಂತ ಆಚರಿಸಲಾಗುತ್ತದೆ. ಭಾರತದ ನವೋದ್ಯಮ (Startup) ಸಂಸ್ಕೃತಿಯನ್ನು ಉತ್ತೇಜಿಸುವುದು, ಉದ್ಯಮಶೀಲತೆಯನ್ನು ಬೆಳೆಸುವುದು ಹಾಗೂ ನವೀನ ಆಲೋಚನೆಗಳ ಮೂಲಕ ಆರ್ಥಿಕ ಬೆಳವಣಿಗೆಗೆ ವೇದಿಕೆ ಒದಗಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು 2022ರ ಜನವರಿ 16ರಂದು ರಾಷ್ಟ್ರೀಯ ನವೋದ್ಯಮ ದಿನದ ಆಚರಣೆಯನ್ನು ಘೋಷಿಸಿದ್ದರು.

➤ ಸ್ಟಾರ್ಟಪ್ ಇಂಡಿಯಾ: 2016ರ ಜನವರಿ 16ರಂದು 'ಸ್ಟಾರ್ಟಪ್ ಇಂಡಿಯಾ' ಉಪಕ್ರಮವನ್ನು ಪ್ರಧಾನಿ ಮೋದಿ ಅವರು ಆರಂಭಿಸಿದರು. ಉದ್ಯೋಗಾಕಾಂಕ್ಷಿಗಳ ಬದಲು ಉದ್ಯೋಗ ಸೃಷ್ಟಿಕರ್ತರ ರಾಷ್ಟ್ರವನ್ನಾಗಿಸುವುದು ಇದರ ಗುರಿಯಾಗಿತ್ತು. 2026ರಲ್ಲಿ ಈ ಮಹತ್ವದ ಉಪಕ್ರಮವು 10 ವರ್ಷಗಳನ್ನು ಪೂರೈಸಿದೆ. ಸ್ಟಾರ್ಟಪ್ ಇಂಡಿಯಾ ಉಪಕ್ರಮದ ದಶಕ ಪೂರ್ಣಗೊಂಡ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ದಿಲ್ಲಿಯಲ್ಲಿ ನವೋದ್ಯಮಿಗಳೊಂದಿಗೆ ಸಂವಾದ ನಡೆಸಿ "ನವೋದ್ಯಮ ದಿನವು ಭಾರತದ ಯುವಜನರ ಧೈರ್ಯ, ನವೀನ ಚಿಂತನೆ ಮತ್ತು ಉದ್ಯಮಶೀಲ ಉತ್ಸಾಹವನ್ನು ಸಂಭ್ರಮಿಸುವ ದಿನವಾಗಿದೆ" ಎಂದು ಹೇಳಿದ್ದಾರೆ.

➤ ಭಾರತೀಯ ನವೋದ್ಯಮ (Start-up) ಕ್ಷೇತ್ರವು (2025ರ ಅಂತ್ಯಕ್ಕೆ) ಕಳೆದ ದಶಕದಲ್ಲಿ ಅದ್ಭುತ ಪ್ರಗತಿ ಸಾಧಿಸಿದ್ದು,ಇಂದು ವಿಶ್ವದ 3ನೇ ಅತಿದೊಡ್ಡ ನವೋದ್ಯಮ ಪರಿಸರ ವ್ಯವಸ್ಥೆಯಾಗಿ ಹೊರಹೊಮ್ಮಿದೆ. ದೇಶದಲ್ಲಿ ಪ್ರಸ್ತುತ 2 ಲಕ್ಷಕ್ಕೂ ಅಧಿಕ ಗುರುತಿಸಲ್ಪಟ್ಟ ಸ್ಟಾರ್ಟಪ್‌ಗಳಿದ್ದು, ಅವು ಸುಮಾರು 21 ಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸಿವೆ. ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲಾಗಿದ್ದು, 73,000ಕ್ಕೂ ಹೆಚ್ಚು ಮಹಿಳಾ ನೇತೃತ್ವದ ನವೋದ್ಯಮಗಳು ಕಾರ್ಯಾಚರಿಸುತ್ತಿವೆ. ಕೇವಲ ಹತ್ತು ವರ್ಷಗಳಲ್ಲಿ ಯುನಿಕಾರ್ನ್ ಕಂಪನಿಗಳ ಸಂಖ್ಯೆ 4 ರಿಂದ 120ಕ್ಕೆ ಏರಿಕೆಯಾಗುವ ಮೂಲಕ, ಭಾರತದ ಆರ್ಥಿಕತೆಗೆ (GDP) ಇವು ಇಂದು ಶೇ. 10 ರಿಂದ 15 ರಷ್ಟು ಕೊಡುಗೆ ನೀಡುತ್ತಿವೆ.

➤ ಮುಂಚೂಣಿಯಲ್ಲಿರುವ ರಾಜ್ಯಗಳು ಮತ್ತು ವಲಯಗಳು:

=> ರಾಜ್ಯಗಳು: ಮಹಾರಾಷ್ಟ್ರ, ತಮಿಳುನಾಡು ಮತ್ತು ಕರ್ನಾಟಕ ಸ್ಟಾರ್ಟಪ್ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿವೆ.

=> ವಲಯಗಳು: ಐಟಿ (IT), ಆರೋಗ್ಯ (Healthcare), ಮತ್ತು ವೃತ್ತಿಪರ ಸೇವಾ ವಲಯಗಳಲ್ಲಿ ಅತಿ ಹೆಚ್ಚು ನವೋದ್ಯಮಗಳಿವೆ.

=> ವಿಕೇಂದ್ರೀಕರಣ: ಕೇವಲ ಮೆಟ್ರೋ ನಗರಗಳಲ್ಲದೆ, ಶೇ. 50ರಷ್ಟು ಸ್ಟಾರ್ಟಪ್‌ಗಳು Tier-II ಮತ್ತು Tier-III ನಗರಗಳಿಂದ ಹೊರಹೊಮ್ಮುತ್ತಿವೆ.

**➤ ಸರ್ಕಾರದ ಪ್ರಮುಖ ಯೋಜನೆಗಳು:**

=> Startup India Seed Fund Scheme (SISFS): ಆರಂಭಿಕ ಹಂತದಲ್ಲಿ ಬಂಡವಾಳ ನೆರವು ನೀಡಲು ₹945 ಕೋಟಿ ಹಂಚಿಕೆ.

=> Fund of Funds for Startups (FFS): ₹10,000 ಕೋಟಿ ನಿಧಿಯ ಮೂಲಕ ಹೂಡಿಕೆಗೆ ಬೆಂಬಲ.

=> MAARG ಪೋರ್ಟಲ್: ನವೋದ್ಯಮಿಗಳಿಗೆ ಮಾರ್ಗದರ್ಶನ (Mentorship) ನೀಡುವ ವೇದಿಕೆ.
=> ಅಟಲ್ ಇನ್ನೋವೇಶನ್ ಮಿಷನ್ (AIM): ಶಾಲಾ ಮಟ್ಟದಲ್ಲಿ ನಾವೀನ್ಯತೆ ಬೆಳೆಸಲು 10,000ಕ್ಕೂ ಹೆಚ್ಚು ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಸ್ಥಾಪನೆ.
➤ ನವೋದ್ಯಮಗಳ ಉಸ್ತುವಾರಿ ವಹಿಸುವ ಇಲಾಖೆ: DPIIT (ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ)

## ವಿಶ್ವ ಬ್ಯಾಂಕ್ ವರದಿ 2026: ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಭಾರತ; GDP ಅಂದಾಜು ಶೇ. 7.2 ಕ್ಕೆ ಏರಿಕೆ!




➤ ಜಾಗತಿಕವಾಗಿ ಯುದ್ಧಗಳು, ಹಣದುಬ್ಬರ ಮತ್ತು ಆರ್ಥಿಕ ಅಸ್ಥಿರತೆಗಳು ತಾಂಡವವಾಡುತ್ತಿರುವ ಈ ಸಂಕಷ್ಟದ ಸಮಯದಲ್ಲಿ, ಭಾರತವು ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಇತ್ತೀಚೆಗೆ ವಿಶ್ವ ಬ್ಯಾಂಕ್ (World Bank) ಬಿಡುಗಡೆ ಮಾಡಿದ ತನ್ನ 'ಜಾಗತಿಕ ಆರ್ಥಿಕ ಮುನ್ನೋಟ' (Global Economic Prospects) ವರದಿಯಲ್ಲಿ ಭಾರತದ ಆರ್ಥಿಕ ಶಕ್ತಿಯನ್ನು ಶ್ಲಾಘಿಸಿದೆ.2024-25ನೇ ಹಣಕಾಸು ವರ್ಷಕ್ಕೆ ಭಾರತದ ಜಿಡಿಪಿ (GDP) ಬೆಳವಣಿಗೆಯ ದರವನ್ನು ಈ ಹಿಂದೆ ಅಂದಾಜಿಸಿದ್ದ ಶೇ. 6.6 ರಿಂದ ನೇರವಾಗಿ ಶೇ. 7.2 ಕ್ಕೆ ಹೆಚ್ಚಿಸಲಾಗಿದೆ.ಭಾರತ ಸರ್ಕಾರದ ಅಂಕಿಅಂಶಗಳ ಸಚಿವಾಲಯದ ಪ್ರಕಾರ ಈ ಬೆಳವಣಿಗೆ ಶೇ. 7.4 ರಷ್ಟಿರಲಿದೆ ಎಂದು ಅಂದಾಜಿಸಲಾಗಿದೆ.

**➤ ಆರ್ಥಿಕ ಬೆಳವಣಿಗೆಗೆ ಪ್ರಮುಖ ಕಾರಣಗಳು: ಭಾರತದ ಆರ್ಥಿಕತೆಯು ಈ ಮಟ್ಟದ ಚೇತರಿಕೆ ಕಾಣಲು ಕೆಲವು ಪ್ರಮುಖ ಅಂಶಗಳು ಕಾರಣವಾಗಿವೆ:**
=> ಬಲವಾದ ದೇಶೀಯ ಬೇಡಿಕೆ: ಭಾರತದ ಬೃಹತ್ ಜನಸಂಖ್ಯೆ ಮತ್ತು ಜನರ ಹೆಚ್ಚುತ್ತಿರುವ ಖರೀದಿ ಸಾಮರ್ಥ್ಯವು ಆರ್ಥಿಕತೆಗೆ ದೊಡ್ಡ ಬಲ ನೀಡಿದೆ.
=> ಸರ್ಕಾರದ ಹೂಡಿಕೆ: ರಸ್ತೆ, ರೈಲ್ವೆ ಮತ್ತು ಮೂಲಸೌಕರ್ಯಗಳ ಮೇಲೆ ಸರ್ಕಾರವು ಮಾಡುತ್ತಿರುವ ಬೃಹತ್ ಹೂಡಿಕೆಯು ಉದ್ಯೋಗ ಸೃಷ್ಟಿ ಮತ್ತು ವ್ಯಾಪಾರಕ್ಕೆ ಪೂರಕವಾಗಿದೆ.
=> ಸೇವಾ ಮತ್ತು ತಯಾರಿಕಾ ವಲಯ: ಐಟಿ, ಬ್ಯಾಂಕಿಂಗ್ ಮತ್ತು ವಿಮಾ ವಲಯಗಳ ಜೊತೆಗೆ 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ತಯಾರಿಕಾ ವಲಯವು ಉತ್ತಮ ಪ್ರಗತಿ ಸಾಧಿಸುತ್ತಿದೆ.
=> ಕೃಷಿ ವಲಯದ ಚೇತರಿಕೆ: ಉತ್ತಮ ಮುಂಗಾರು ಮಳೆಯ ನಿರೀಕ್ಷೆಯು ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ ಗ್ರಾಮೀಣ ಆದಾಯವನ್ನು ವೃದ್ಧಿಸಿದೆ.
=> ತೆರಿಗೆ ಸುಧಾರಣೆಗಳು: ಜಿಎಸ್‌ಟಿ ಸೇರಿದಂತೆ ವಿವಿಧ ತೆರಿಗೆ ಸುಧಾರಣೆಗಳು ಮತ್ತು ರಫ್ತು ವಲಯದ ಸ್ಥಿರತೆ ಆರ್ಥಿಕತೆಗೆ ವೇಗ ನೀಡಿವೆ.
➤ ಜಾಗತಿಕ ಸವಾಲುಗಳು ಮತ್ತು ಭಾರತದ ಸ್ಥಿತಿಸ್ಥಾಪಕತ್ವ: ವಿಶ್ವ ಬ್ಯಾಂಕ್ ವರದಿಯು ಕೆಲವು ಜಾಗತಿಕ ಸವಾಲುಗಳ ಬಗ್ಗೆಯೂ ಎಚ್ಚರಿಸಿದೆ:
=> ಜಾಗತಿಕ ಸಂಘರ್ಷಗಳು: ರಷ್ಯಾ-ಉಕ್ರೇನ್ ಮತ್ತು ಮಧ್ಯಪ್ರಾಚ್ಯದ ಯುದ್ಧಗಳು ಸರಕುಗಳ ಬೆಲೆ ಏರಿಕೆಗೆ ಕಾರಣವಾಗಬಹುದು.
=> ಅಮೆರಿಕದ ಸುಂಕ ನೀತಿ: ಅಮೆರಿಕವು ವಿಧಿಸಿರುವ ಆಮದು ಸುಂಕಗಳ ಹೊರತಾಗಿಯೂ ಭಾರತದ ರಫ್ತು ವಲಯವು ಸ್ಥಿರತೆಯನ್ನು ಕಾಯ್ದುಕೊಂಡಿದೆ.
=> ಹಣದುಬ್ಬರ ನಿಯಂತ್ರಣ: ಭಾರತೀಯ ರಿಸರ್ವ್ ಬ್ಯಾಂಕ್ (RBI) ಕೈಗೊಂಡ ಕ್ರಮಗಳಿಂದಾಗಿ ಹಣದುಬ್ಬರ ಹತೋಟಿಗೆ ಬರುತ್ತಿರುವುದು ಆರ್ಥಿಕತೆಗೆ ವರವಾಗಿದೆ.
➤ ವಿಶ್ವ ಬ್ಯಾಂಕ್ ಅಂದಾಜನ್ನು ಹೆಚ್ಚಿಸಿರುವುದರಿಂದ ಅಂತರಾಷ್ಟ್ರೀಯ ಹೂಡಿಕೆದಾರರು ಭಾರತದ ಮೇಲೆ ಹೆಚ್ಚಿನ ನಂಬಿಕೆ ಇಡಲಿದ್ದಾರೆ. ಇದು ವಿದೇಶಿ ನೇರ ಹೂಡಿಕೆ (FDI) ಹೆಚ್ಚಳಕ್ಕೆ ಕಾರಣವಾಗಿ, ರೂಪಾಯಿ ಮೌಲ್ಯವನ್ನು ಸ್ಥಿರಗೊಳಿಸಲು ಮತ್ತು ದೇಶದ ಜನರ ತಲಾ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

## ಭಾರತದ ಇಂಧನ ಕ್ಷೇತ್ರದಲ್ಲಿ ಐತಿಹಾಸಿಕ ಮೈಲಿಗಲ್ಲು: 55 ವರ್ಷಗಳಲ್ಲಿ ಮೊದಲ ಬಾರಿಗೆ ಕಲ್ಲಿದ್ದಲು ವಿದ್ಯುತ್ ಉತ್ಪಾದನೆ ಇಳಿಕೆ!



➤ "ಇಂಧನ ಮತ್ತು ಶುದ್ಧ ಗಾಳಿ ಸಂಶೋಧನಾ ಕೇಂದ್ರ (CREA) ಮತ್ತು ಕೇಂದ್ರ ವಿದ್ಯುತ್ ಪ್ರಾಧಿಕಾರ (CEA) ಬಿಡುಗಡೆ ಮಾಡಿದ ಇತ್ತೀಚಿನ ವರದಿಯ ಪ್ರಕಾರ, ಭಾರತವು ತನ್ನ ಇಂಧನ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲನ್ನು ತಲುಪಿದ್ದು, ಕಳೆದ 55 ವರ್ಷಗಳಲ್ಲಿ (ಕೋವಿಡ್ ಸಮಯ ಹೊರತುಪಡಿಸಿ) ಇದೇ ಮೊದಲ ಬಾರಿಗೆ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಿ ಗಣನೀಯ ಕುಸಿತ ದಾಖಲಾಗಿದೆ. ಈ ಐತಿಹಾಸಿಕ ಬದಲಾವಣೆಗೆ ಪೂರಕವಾಗಿ ದೇಶದಲ್ಲಿ ಸೌರ ಮತ್ತು ಪವನ ಶಕ್ತಿಯಂತಹ ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆ ದಾಖಲೆ ಮಟ್ಟದಲ್ಲಿ ಏರಿಕೆಯಾಗುತ್ತಿರುವುದು, ಭಾರತವು ಪಳೆಯುಳಿಕೆ ಇಂಧನಗಳಿಂದ ಸುಸ್ಥಿರ ಇಂಧನದತ್ತ ವೇಗವಾಗಿ ಹೆಜ್ಜೆ ಹಾಕುತ್ತಿರುವುದನ್ನು ಸಾಬೀತುಪಡಿಸಿದೆ." ಇದು 1970ರ ನಂತರದ ಅರ್ಧ ಶತಮಾನದಲ್ಲಿ ಕಂಡ ಎರಡನೇ ದೊಡ್ಡ ಕುಸಿತವಾಗಿದೆ.
➤ ಪ್ರಮುಖ ದತ್ತಾಂಶಗಳು ಮತ್ತು ವಿಶ್ಲೇಷಣೆ:
=> ಕಲ್ಲಿದ್ದಲು ಆಧಾರಿತ ಉತ್ಪಾದನೆಯಲ್ಲಿ ಕುಸಿತ: 2025ನೇ ಸಾಲಿನಲ್ಲಿ ಭಾರತದ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯು ಶೇಕಡಾ 3.4 ರಷ್ಟು ಕುಸಿದು 1,247 TWh ಗೆ ತಲುಪಿದೆ. ಇದು 2020ರ ನಂತರದ ಮೊದಲ ಕುಸಿತವಾಗಿದ್ದು, ಇಂಧನ ಕ್ಷೇತ್ರದಲ್ಲಿ ಆಗುತ್ತಿರುವ ರಚನಾತ್ಮಕ ಬದಲಾವಣೆಯನ್ನು ಸೂಚಿಸುತ್ತದೆ.
=> ಶುದ್ಧ ಇಂಧನದ ಕ್ರಾಂತಿ:
- ಸೌರ ಮತ್ತು ಪವನ ಶಕ್ತಿ: ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯು ಶೇ. 22 ರಷ್ಟು ಏರಿಕೆಯಾಗಿ 270 TWh ತಲುಪಿದೆ.
- ಸ್ಥಾಪಿತ ಸಾಮರ್ಥ್ಯ: 2025ರ ನವೆಂಬರ್ ವೇಳೆಗೆ ಭಾರತವು ದಾಖಲೆಯ 44.5 GW ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಸೇರ್ಪಡೆಗೊಳಿಸಿದೆ.- ಸೌರಶಕ್ತಿ ಮೈಲಿಗಲ್ಲು: ಭಾರತದ ಸೌರಶಕ್ತಿ ಸ್ಥಾಪಿತ ಸಾಮರ್ಥ್ಯವು 100 GW ಗಡಿಯನ್ನು ದಾಟಿದೆ.➤ ಜಾಗತಿಕ ಸ್ಥಾನಮಾನ: ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಿ ಭಾರತವು ಚೀನಾದ ನಂತರದ ಸ್ಥಾನದಲ್ಲಿದೆ. ಚೀನಾ ಮತ್ತು ಭಾರತ ಒಟ್ಟಾಗಿ ಜಾಗತಿಕ ಕಲ್ಲಿದ್ದಲು ವಿದ್ಯುತ್‌ನ ಅರ್ಧಕ್ಕಿಂತ ಹೆಚ್ಚು ಪಾಲನ್ನು ಹೊಂದಿವೆ. ಆದರೆ, 2025ರಲ್ಲಿ ಎರಡೂ ದೇಶಗಳಲ್ಲಿ ಏಕಕಾಲಕ್ಕೆ ಕಲ್ಲಿದ್ದಲು ಬಳಕೆ ಕುಂಠಿತವಾಗಿರುವುದು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ ಬೆಳವಣಿಗೆಯಾಗಿದೆ.
➤ ಕುಸಿತಕ್ಕೆ ಪ್ರಮುಖ ಕಾರಣಗಳು:
=> ದಾಖಲೆಯ ಮಳೆ: ಕಳೆದ ವರ್ಷ ಸುದೀರ್ಘ ಮಳೆಗಾಲವಿದ್ದ ಕಾರಣ ಜಲವಿದ್ಯುತ್ (Hydro Power) ಉತ್ಪಾದನೆ ಹೆಚ್ಚಾಯಿತು.

=> ತಾಪಮಾನ ಇಳಿಕೆ: ಬೇಸಿಗೆಯ ತಾಪಮಾನವು ಹಿಂದಿನ ವರ್ಷಕ್ಕಿಂತ ತುಸು ಕಡಿಮೆಯಿದ್ದ ಕಾರಣ ಎಸಿ (AC) ಮತ್ತು ಕೂಲರ್‌ಗಳಿಗಾಗಿ ಇದ್ದ ವಿದ್ಯುತ್ ಬೇಡಿಕೆ ತಗ್ಗಿತು.

=> ಸರ್ಕಾರದ ಗುರಿ: 2030ರ ವೇಳೆಗೆ 500 GW ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಹೊಂದುವ ಭಾರತದ ಗುರಿಯತ್ತ ವೇಗದ ಹೆಜ್ಜೆ.

➤ "ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಬದ್ಧವಾಗಿರುವ ಭಾರತವು 2070ರ ವೇಳೆಗೆ 'ನಿವ್ವಳ ಶೂನ್ಯ' (Net Zero) ಇಂಧನ ಹೊರಸೂಸುವಿಕೆಯ ಗುರಿಯನ್ನು ಹೊಂದಿದ್ದು, ಈ ದಿಶೆಯಲ್ಲಿ ದಾಪುಗಾಲು ಹಾಕುತ್ತಿದೆ. ಪ್ರಸ್ತುತ ಜಾಗತಿಕ ಮಟ್ಟದಲ್ಲಿ ನವೀಕರಿಸಬಹುದಾದ ಇಂಧನ ಸ್ಥಾಪಿತ ಸಾಮರ್ಥ್ಯದಲ್ಲಿ ಭಾರತವು 4ನೇ ಸ್ಥಾನವನ್ನು ಅಲಂಕರಿಸುವ ಮೂಲಕ ವಿಶ್ವದ ಇಂಧನ ಬದಲಾವಣೆಯ ಕ್ರಾಂತಿಯಲ್ಲಿ ಮುಂಚೂಣಿಯ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ."

## ಚೆನ್ನೈನಲ್ಲಿ ಇಂದಿನಿಂದ 4ನೇ ಅಂತರರಾಷ್ಟ್ರೀಯ ಪುಸ್ತಕ ಮೇಳ: 100ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗಿ

CIBF 2026 CHENNAI INTERNATIONAL BOOK FAIR
A CONVERSATION BETWEEN CIVILISATIONS

➤ ಚೆನ್ನೈನ ಕಲೈವಾನರ್ ಅರಂಗಂನಲ್ಲಿ ಇಂದಿನಿಂದ (ಜನವರಿ 16) 4ನೇ ಆವೃತ್ತಿಯ ಅಂತರರಾಷ್ಟ್ರೀಯ ಪುಸ್ತಕ ಮೇಳವು ಆರಂಭವಾಗುತ್ತಿದೆ. ಜನವರಿ 16ರಿಂದ 18, 2026ರವರೆಗೆ ಮೂರು ದಿನಗಳ ಸಾಹಿತ್ಯಕ ಹಬ್ಬದಲ್ಲಿ ಜಗತ್ತಿನ 100ಕ್ಕೂ ಹೆಚ್ಚು ದೇಶಗಳ ಪ್ರಕಾಶಕರು ಮತ್ತು ಲೇಖಕರು ಭಾಗವಹಿಸುತ್ತಿದ್ದಾರೆ. ತಮಿಳು ಸಾಹಿತ್ಯವನ್ನು ಜಾಗತಿಕ ವೇದಿಕೆಗೆ ಪರಿಚಯಿಸುವ ಮತ್ತು ವಿಶ್ವ ಸಾಹಿತ್ಯವನ್ನು ತಮಿಳಿಗೆ ತರುವ ಉದ್ದೇಶ ಹೊಂದಿರುವ ಈ ಮೇಳವು, ದಕ್ಷಿಣ ಭಾರತದ ಪ್ರಕಾಶನ ಲೋಕವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಸೆಯುವ ಪ್ರಮುಖ ಕೊಂಡಿಯಾಗಿದೆ.

4ನೇ ಆವೃತ್ತಿಯ ಅಂತರರಾಷ್ಟ್ರೀಯ ಪುಸ್ತಕ ಮೇಳದ ಘೋಷವಾಕ್ಯ: 'ನಾಗರಿಕತೆಗಳ ನಡುವಿನ ಸಂವಹನ'

➤ ತಮಿಳುನಾಡಿನ ಶಾಲಾ ಶಿಕ್ಷಣ ಸಚಿವ ಡಾ. ಅನ್ಬಿಲ್ ಮಹೇಶ್ ಪೊಯ್ಯಮೊಳಿ ಅವರು ಉದ್ಘಾಟಿಸಲಿರುವ ಈ ಮೇಳದಲ್ಲಿ ಸಂಸದೆ ಕೆ. ಕನಿಮೊಳಿ ದಿಕ್ಸೂಚಿ ಭಾಷಣ ಮಾಡಲಿದ್ದು, ಕರ್ನಾಟಕದ ಸಚಿವ ಮಧು ಬಂಗಾರಪ್ಪ ಹಾಗೂ ಕೇರಳದ ಸಚಿವ ವಿ. ಶಿವನ್ ಕುಟ್ಟಿ ವಿಶೇಷ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

➤ ಜ. 17ರಂದು ನಡೆಯಲಿರುವ 'ಫೋರ್ ಲ್ಯಾಂಗ್ವೇಜಸ್ - ಒನ್ ಥಂಡರ್' ಎಂಬ ವಿಶೇಷ ಸಂವಾದ ಗೋಷ್ಠಿಯಲ್ಲಿ ಕನ್ನಡದ ಖ್ಯಾತ ಕವಯಿತ್ರಿ ಪ್ರತಿಭಾ ನಂದಕುಮಾರ್ ಭಾಗವಹಿಸಲಿದ್ದಾರೆ. ಈ ಗೋಷ್ಠಿಯ ನಿರ್ವಹಣೆಯನ್ನು ಕನ್ನಡದ ಲೇಖಕಿ ಡಾ. ಎಚ್.ಎಸ್. ಅನುಪಮಾ ಮಾಡಲಿದ್ದಾರೆ. ಅಲ್ಲದೆ, ಅನುವಾದಕಿ ದೀಪಾ ಭಾಸ್ತಿ ಅವರು 'ದ ಇನ್‌ವಿಸಿಬಲ್ ಹ್ಯಾಂಡ್' ಗೋಷ್ಠಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

➤ 49ನೇ ಚೆನ್ನೈ ಪುಸ್ತಕ ಮೇಳ (BAPASI): ಅಂತರರಾಷ್ಟ್ರೀಯ ಮೇಳದ ಜೊತೆಜೊತೆಗೆ, ಜನವರಿ 8 ರಿಂದ 21 ರವರೆಗೆ ನಂದನಂನ YMCA ಮೈದಾನದಲ್ಲಿ ಸಾರ್ವಜನಿಕರಿಗಾಗಿ ಬೃಹತ್ ಪುಸ್ತಕ ಮೇಳ ನಡೆಯುತ್ತಿದ್ದು, ಪ್ರತಿದಿನ ಬೆಳಗ್ಗೆ 11:00 ರಿಂದ ರಾತ್ರಿ 8:30 ರವರೆಗೆ 1,000ಕ್ಕೂ ಹೆಚ್ಚು ಮಳಿಗೆಗಳಲ್ಲಿ ಪುಸ್ತಕಗಳ ಮೇಲೆ ಕನಿಷ್ಠ 10% ರಿಯಾಯಿತಿ ಹಾಗೂ ಉಚಿತ ಪ್ರವೇಶವನ್ನು ಕಲ್ಪಿಸಲಾಗಿದೆ.

➤ ತಮಿಳುನಾಡು ಅನುವಾದ ಅನುದಾನ ಯೋಜನೆ (Translation Grant): ತಮಿಳು ಸಾಹಿತ್ಯವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ತಮಿಳುನಾಡು ಸರ್ಕಾರವು ₹3 ಕೋಟಿ ಮೊತ್ತದ ಅನುದಾನವನ್ನು ಮೀಸಲಿಟ್ಟಿದೆ. ಈ ಯೋಜನೆಯಡಿ:

=> ತಮಿಳು ಕೃತಿಗಳನ್ನು ಭಾರತದ ಇತರ ಭಾಷೆಗಳಿಗೆ (ಕನ್ನಡ ಸೇರಿದಂತೆ) ಮತ್ತು ವಿದೇಶಿ ಭಾಷೆಗಳಿಗೆ ಅನುವಾದಿಸಲು ಹಣಕಾಸಿನ ನೆರವು ನೀಡಲಾಗುತ್ತದೆ.

=> ಅನುವಾದಕರಿಗೆ ಫೆಲೋಶಿಪ್ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

=> ಈ ಬಾರಿ ಸುಮಾರು 1,500ಕ್ಕೂ ಹೆಚ್ಚು ಅನುವಾದ ಒಪ್ಪಂದಗಳು (MoUs) ನಡೆಯುವ ನಿರೀಕ್ಷೆಯಿದೆ.

➤ ಈ ಪುಸ್ತಕ ಮೇಳವು ದಕ್ಷಿಣ ಏಷ್ಯಾದಲ್ಲೇ ಅತಿ ದೊಡ್ಡ ಸಾಹಿತ್ಯಿಕ ಮಾರುಕಟ್ಟೆಯಾಗಿ ಹೊರಹೊಮ್ಮುತ್ತಿದ್ದು, ಜಾಗತಿಕ ಪ್ರಕಾಶನ ಲೋಕದಲ್ಲಿ ಭಾರತದ ಸ್ಥಾನಮಾನವನ್ನು ಹೆಚ್ಚಿಸುತ್ತಿದೆ.

## 'Inspiring Innovators': ಭಾರತದ ನಾವೀನ್ಯತೆ ಉತ್ತೇಜಿಸಲು ನೆಟ್‌ಫ್ಲಿಕ್ಸ್ ಜೊತೆ ಕೇಂದ್ರ ಸರ್ಕಾರ ಕೈಜೋಡಿ



➤ ಭಾರತದ ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು (Innovation Ecosystem) ಬಲಪಡಿಸಲು ಮತ್ತು 'ಆತ್ಮನಿರ್ಭರ ಭಾರತ'ದ ದೃಷ್ಟಿಕೋನಕ್ಕೆ ಅನುಗುಣವಾಗಿ ಕೇಂದ್ರ ಸರ್ಕಾರವು ನೆಟ್‌ಫ್ಲಿಕ್ಸ್ ಇಂಡಿಯಾದೊಂದಿಗೆ ಕೈಜೋಡಿಸಿದೆ. ಈ ಸಹಯೋಗದ ಅಡಿಯಲ್ಲಿ 'ಇನ್ಸ್‌ಪೈರಿಂಗ್ ಇನ್ನೋವೇಟರ್ಸ್: ನಯೇ ಭಾರತ್ ಕಿ ನಯಿ ಪೆಹಚಾನ್' (Inspiring Innovators: Naye Bharat Ki Nayi Pehchaan) ಎಂಬ ನೂತನ ಉಪಕ್ರಮವನ್ನು ಜಾರಿಗೆ ತರಲಾಗಿದೆ.

➤ ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರ (PSA) ಕಚೇರಿ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ನೆಟ್‌ಫ್ಲಿಕ್ಸ್‌ನೊಂದಿಗೆ ಪಾಲುದಾರಿಕೆ ಮಾಡಿಕೊಂಡಿದ್ದು, 'ನೆಟ್‌ಫ್ಲಿಕ್ಸ್ ಫಂಡ್ ಫಾರ್ ಕ್ರಿಯೇಟಿವ್ ಈಕ್ವಿಟಿ' ಬೆಂಬಲದೊಂದಿಗೆ 'ಗ್ರಾಫಿಟಿ ಸ್ಟುಡಿಯೋಸ್' ಈ ಯೋಜನೆಯನ್ನು ಜಾರಿಗೆ ತರುತ್ತಿದೆ; ಇದು ಯುವಜನತೆಯಲ್ಲಿ ಕೌಶಲ ವೃದ್ಧಿಸುವ ಜೊತೆಗೆ ಸೃಜನಶೀಲ ಕಥೆ ಹೇಳುವಿಕೆಯ (Storytelling) ಮೂಲಕ ಭಾರತೀಯ ಸ್ಟಾರ್ಟ್‌ಅಪ್‌ಗಳ ನಾವೀನ್ಯತೆಯನ್ನು ಜಗತ್ತಿಗೆ ಪರಿಚಯಿಸುವ ಪ್ರಮುಖ ಉದ್ದೇಶವನ್ನು ಹೊಂದಿದೆ.

**➤ ಪ್ರಮುಖ ವೈಶಿಷ್ಟ್ಯಗಳು:-**

=> ಎಂಟು ಸ್ಟಾರ್ಟ್‌ಅಪ್‌ಗಳ ಗುರುತಿಸುವಿಕೆ: ಸಾಮಾಜಿಕ ಬದಲಾವಣೆಗೆ ಪೂರಕವಾಗಿ ಕೆಲಸ ಮಾಡುತ್ತಿರುವ ಎಂಟು ಪ್ರಮುಖ ಭಾರತೀಯ ಸ್ಟಾರ್ಟ್‌ಅಪ್‌ಗಳನ್ನು ಈ ಉಪಕ್ರಮದ ಅಡಿ ಆಯ್ಕೆ ಮಾಡಲಾಗಿದೆ.

=> ಕಿರು ಅನಿಮೇಟೆಡ್ ಚಿತ್ರಗಳು: ಈ ಎಂಟು ಸ್ಟಾರ್ಟ್‌ಅಪ್‌ಗಳ ಸಾಧನೆಯನ್ನು ಆಧರಿಸಿ ಎಂಟು ಕಿರು ಅನಿಮೇಟೆಡ್ ಚಿತ್ರಗಳನ್ನು ನಿರ್ಮಿಸಲಾಗಿದೆ.

=> ವಿದ್ಯಾರ್ಥಿಗಳ ಸಹಭಾಗಿತ್ವ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ (NID), ಚಿತ್ರಾ ಯೂನಿವರ್ಸಿಟಿ ಸೇರಿದಂತೆ ದೇಶದ ವಿವಿಧ ಎಂಟು ವಿಶ್ವವಿದ್ಯಾಲಯಗಳ 26 ವಿದ್ಯಾರ್ಥಿಗಳು ಈ ಚಿತ್ರಗಳನ್ನು ತಯಾರಿಸಿದ್ದಾರೆ.

=> ಸಮಾನ ಅವಕಾಶ: ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಲ್ಲಿ ಶೇ. 50 ರಷ್ಟು ಮಹಿಳೆಯರಿದ್ದಾರೆ ಮತ್ತು ಅನೇಕರು ಎರಡನೇ ಹಂತದ (Tier-2) ನಗರಗಳಿಂದ ಬಂದವರಾಗಿದ್ದಾರೆ.

=> ವಾಯ್ಸ್‌ಬಾಕ್ಸ್ (Voicebox) ಯೋಜನೆ: ಈ ಚಿತ್ರಗಳಿಗೆ ಧ್ವನಿ ನೀಡಲು ನೆಟ್‌ಫ್ಲಿಕ್ಸ್ ಮತ್ತು ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮ (NFDC) ಜಂಟಿಯಾಗಿ ಹಮ್ಮಿಕೊಂಡಿರುವ 'ವಾಯ್ಸ್‌ಬಾಕ್ಸ್' ಕೌಶಲ ಯೋಜನೆಯ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗಿದೆ.

➤ ಈ ಉಪಕ್ರಮದ ಬಗ್ಗೆ ಮಾತನಾಡಿದ ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರಾದ ಅಜಯ್ ಕುಮಾರ್ ಸೂದ್ ಅವರು, 'ಈ ಯೋಜನೆಯು ಸ್ಟಾರ್ಟ್‌ಅಪ್‌ಗಳು ಮತ್ತು

ವಿದ್ಯಾರ್ಥಿಗಳನ್ನು ಒಟ್ಟುಗೂಡಿಸುವ ಮೂಲಕ ಭಾರತದ ನಾವೀನ್ಯತೆ ಪರಿಸರವನ್ನು ಬಲಪಡಿಸುತ್ತದೆ' ಎಂದು ತಿಳಿಸಿದರೆ, ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವರಾದ ಎಲ್. ಮುರುಗನ್ ಅವರು, 'ಸೃಜನಶೀಲತೆಯು ಸಮಾಜದ ಸೇವೆಗೆ ಹೇಗೆ ಪರಿಣಾಮಕಾರಿಯಾಗಿ ಬಳಕೆಯಾಗಬಹುದು ಎಂಬುದಕ್ಕೆ ಈ ಯೋಜನೆಯೇ ಅತ್ಯುತ್ತಮ ಸಾಕ್ಷಿ.' ಎಂದು ಶ್ಲಾಘಿಸಿದರು.

## ಲಖ್ಪತಿ ದೀದಿ ಯೋಜನೆಗೆ ಹೊಸ ಚೈತನ್ಯ: 3 ಕೋಟಿ ಗ್ರಾಮೀಣ ಮಹಿಳೆಯರನ್ನು ಉದ್ಯಮಿಗಳನ್ನಾಗಿ ರೂಪಿಸಲು ಕೇಂದ್ರದ ರಾಷ್ಟ್ರೀಯ ಅಭಿಯಾನ!




➤ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ದೀನ್ ದಯಾಳ್ ಅಂತ್ಯೋದಯ ಯೋಜನೆ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM) ಅಡಿಯಲ್ಲಿ ಗ್ರಾಮೀಣ ಮಹಿಳೆಯರ ಆದಾಯವನ್ನು ಹೆಚ್ಚಿಸಲು ಮತ್ತು ಅವರನ್ನು ಉದ್ಯಮಿಗಳನ್ನಾಗಿ ರೂಪಿಸಲು ಬೃಹತ್ ರಾಷ್ಟ್ರೀಯ ಅಭಿಯಾನವನ್ನು ಪ್ರಾರಂಭಿಸಿದೆ.

➤ ಅಭಿಯಾನದ ಘೋಷವಾಕ್ಯ: "ಗ್ರಾಮೀಣ ಮಹಿಳಾ ಉದ್ಯಮಶೀಲತೆ ಉತ್ತೇಜನ - ಹರ್ ಘರ್ ಉದ್ಯಮ್, ಹರ್ ಗಾಂವ್ ಸಮೃದ್ಧ್" (Har Ghar Udyam, Har Gaon Samriddh).

➤ ಈ ರಾಷ್ಟ್ರೀಯ ಉದ್ಯಮಶೀಲತಾ ಅಭಿಯಾನವು 50,000 ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಸಜ್ಜುಗೊಳಿಸುವ ಮೂಲಕ 50 ಲಕ್ಷ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಉದ್ಯಮಶೀಲತಾ ತರಬೇತಿ ನೀಡಿ, ದೇಶದ 3 ಕೋಟಿ ಮಹಿಳೆಯರನ್ನು 'ಲಖ್ಪತಿ ದೀದಿ'ಯರನ್ನಾಗಿ ರೂಪಿಸುವ ಗುರಿಯನ್ನು ಹೊಂದಿದೆ.

**➤ ಅಭಿಯಾನದ ಉದ್ದೇಶಗಳು:-**

=> ಕೃಷಿಯೇತರ ಜೀವನೋಪಾಯ: ಗ್ರಾಮೀಣ ಭಾಗದಲ್ಲಿ ಕೃಷಿಯಲ್ಲದ ಇತರ ಉದ್ಯಮಗಳನ್ನು (Non-farm enterprises) ಉತ್ತೇಜಿಸಿ ಆದಾಯದ ಮೂಲಗಳನ್ನು ವೈವಿಧ್ಯಗೊಳಿಸುವುದು.

=> ಮಾರ್ಗದರ್ಶನ ಮತ್ತು ಬೆಂಬಲ: ತರಬೇತಿ ಪಡೆದ ಸಮುದಾಯ ಕೆಡರ್ (Cadre) ಮೂಲಕ ಉದ್ಯಮ ಗುರುತಿಸುವಿಕೆ, ಆರಂಭಿಕ ಬೆಂಬಲ ಮತ್ತು ನಿರಂತರ ಮಾರ್ಗದರ್ಶನ ನೀಡುವುದು.

=> ಹಣಕಾಸಿನ ನೆರವು: ತಳಮಟ್ಟದ ಉದ್ಯಮಗಳಿಗೆ ಮತ್ತು ಮಹಿಳಾ ಉದ್ಯಮಿಗಳಿಗೆ ಬ್ಯಾಂಕುಗಳಂತಹ ಔಪಚಾರಿಕ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ ದೊರಕಿಸಿಕೊಡುವುದು.

=> ಆರ್ಥಿಕ ಸ್ವಾವಲಂಬನೆ: ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಅಂತರ್ಗತ ಮತ್ತು ಸ್ವಾವಲಂಬಿ ಭಾರತದ ಕನಸನ್ನು ನನಸಾಗಿಸುವುದು.

➤ ಜನವರಿ 12, 2026 ರಂದು ನಡೆದ ಸಮಾರಂಭದಲ್ಲಿ ಈ ಅಭಿಯಾನಕ್ಕೆ ಅಧಿಕೃತ ಚಾಲನೆ ನೀಡಲಾಯಿತು. ಇದರಲ್ಲಿ ನೀತಿ ಆಯೋಗ, ನಬಾರ್ಡ್ (NABARD), ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಶನ್ ಮತ್ತು ಐಐಎಂ ಕಲ್ಕತ್ತಾ ಇನ್ನೋವೇಶನ್ ಪಾರ್ಕ್ ನಂತಹ ಪ್ರಮುಖ ಸಂಸ್ಥೆಗಳು ಭಾಗವಹಿಸಿವೆ.

## ಬಜಾಜ್ ಪುಣೆ ಗ್ರಾಂಡ್ ಟೂರ್ 2026: ಭಾರತದ ಮೊದಲ ಅಂತರಾಷ್ಟ್ರೀಯ ಸೈಕ್ಲಿಂಗ್ ರೇಸ್‌ಗೆ ಎಂ.ಎಸ್. ಧೋನಿ ರಾಯಭಾರಿ!




➤ ಭಾರತದ ವೃತ್ತಿಪರ ಸೈಕ್ಲಿಂಗ್ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆಯಲಿರುವ 'ಬಜಾಜ್ ಪುಣೆ ಗ್ರಾಂಡ್ ಟೂರ್ 2026' ರಾಯಭಾರಿಯಾಗಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ (MS Dhoni) ಅವರನ್ನು ನೇಮಕ ಮಾಡಲಾಗಿದೆ. ಇದು ಭಾರತದ ಮೊಟ್ಟಮೊದಲ ಯುನಿಯನ್ ಸೈಕ್ಲಿಸ್ಟ ಇಂಟರ್ನ್ಯಾಷನಲ್ (UCI) 2.2 ಕೆಟಗರಿ ಕಾಂಟಿನೆಂಟಲ್ ರೋಡ್ ಸೈಕ್ಲಿಂಗ್ ರೇಸ್ ಆಗಿದೆ.

➤ ಭಾರತದ ಮೊದಲ UCI Union Cycliste Internationale (ಅಂತರಾಷ್ಟ್ರೀಯ ಸೈಕ್ಲಿಂಗ್ ಒಕ್ಕೂಟ) ಮಾನ್ಯತೆ ಪಡೆದ ರೇಸ್ ಐದು ದಿನಗಳ ಬಹು-ಹಂತದ ರೇಸ್ 2026ರ ಜನವರಿ 19 ರಿಂದ 23 ರವರೆಗೆ ಮಹಾರಾಷ್ಟ್ರದ ಪುಣೆಯಲ್ಲಿ ನಡೆಯಲಿದೆ. ಈ ರೇಸ್ ಸುಮಾರು 437 ಕಿಲೋಮೀಟರ್ ಉದ್ದವಿದ್ದು, ಡೆಕ್ಕನ್ ಪ್ರಸ್ಥಭೂಮಿ ಮತ್ತು ಸಹ್ಯಾದ್ರಿ ಪರ್ವತ ಶ್ರೇಣಿಗಳ ಕಠಿಣ ಭೂಪ್ರದೇಶಗಳನ್ನು ಒಳಗೊಂಡಿದೆ. ಇದು 9 ತಾಲ್ಲೂಕುಗಳು ಮತ್ತು 150 ಕ್ಕೂ ಹೆಚ್ಚು ಹಳ್ಳಿಗಳ ಮೂಲಕ ಹಾದುಹೋಗಲಿದೆ.

➤ ಈ ಪಂದ್ಯಾವಳಿಯಲ್ಲಿ 5 ಖಂಡಗಳ 35 ದೇಶಗಳ 29 ವೃತ್ತಿಪರ ತಂಡಗಳು ಮತ್ತು ಒಟ್ಟು 171 ಸೈಕ್ಲಿಸ್ಟ್‌ಗಳು ಭಾಗವಹಿಸಲಿದ್ದಾರೆ. ಸ್ಪೇನ್‌ನ 'ಬರ್ಗೋಸ್ ಬರ್ಪೆಲೆಟ್ ಬಿಎಚ್' (ವಿಶ್ವ ಶ್ರೇಯಾಂಕ 27), ಚೀನಾದ 'ಲಿ ನಿಂಗ್ ಸ್ಟಾರ್' ಮತ್ತು ಮಲೇಷ್ಯಾದ 'ತೆರೆಂಗಾನು ಸೈಕ್ಲಿಂಗ್ ತಂಡ'ಗಳು ಪ್ರಮುಖ ಆಕರ್ಷಣೆಯಾಗಿವೆ.

➤ ಭಾರತದ ಸವಾಲನ್ನು ಖ್ಯಾತ ಸೈಕ್ಲಿಸ್ಟ ನವೀನ್ ಜಾನ್ ಮುನ್ನಡೆಸಲಿದ್ದಾರೆ. ಭಾರತೀಯ ರಾಷ್ಟ್ರೀಯ ತಂಡ ಮತ್ತು ಭಾರತೀಯ ಅಭಿವೃದ್ಧಿ ತಂಡ ಸೇರಿದಂತೆ ಒಟ್ಟು 12 ಭಾರತೀಯ ಸೈಕ್ಲಿಸ್ಟ್‌ಗಳು ಈ ರೇಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

➤ ಎಂ.ಎಸ್. ಧೋನಿ ಅವರ ಪಾತ್ರ: ಧೋನಿ ಅವರ ಫಿಟ್ನೆಸ್ ಮತ್ತು ಶಿಸ್ತಿನ ಗುಣಗಳು ಸೈಕ್ಲಿಂಗ್ ಕ್ರೀಡೆಗೆ ಪೂರಕವಾಗಿವೆ. ಸೈಕ್ಲಿಂಗ್ ಅನ್ನು ಭಾರತದಲ್ಲಿ ವೃತ್ತಿಪರ ಕ್ರೀಡೆಯಾಗಿ ಬೆಳೆಸಲು ಮತ್ತು ಯುವ ಕ್ರೀಡಾಪಟುಗಳನ್ನು ಉತ್ತೇಜಿಸಲು ಅವರು ಗುಡ್ ವಿಲ್ ಅಂಬಾಸಿಡರ್ (ಸೌಹಾರ್ದ ರಾಯಭಾರಿ) ಆಗಿ ಕಾರ್ಯನಿರ್ವಹಿಸಲಿದ್ದಾರೆ.

➤ ಈ ಕ್ರೀಡಾಕೂಟವನ್ನು ಪುಣೆ ಜಿಲ್ಲಾಡಳಿತ, ಭಾರತೀಯ ಸೈಕ್ಲಿಂಗ್ ಫೆಡರೇಶನ್ ಮತ್ತು ಮಹಾರಾಷ್ಟ್ರ ಸರ್ಕಾರದ ಸಹಯೋಗದೊಂದಿಗೆ ಆಯೋಜಿಸಲಾಗಿದೆ. ಇದು ಕ್ರೀಡೆಯ ಜೊತೆಗೆ ಗ್ರಾಮೀಣ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

## ಕರ್ನಾಟಕ ಬ್ಯಾಂಕ್‌ಗೆ ಐಬಿಎ (IBA) ತಾಂತ್ರಿಕ ಪ್ರಶಸ್ತಿಗಳ ಗರಿ: ಡಿಜಿಟಲ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ರಾಜ್ಯದ ಬ್ಯಾಂಕ್ ಅಪ್ರತಿಮ ಸಾಧನೆ!



➤ ಕರ್ನಾಟಕದ ಹೆಮ್ಮೆಯ ಹಣಕಾಸು ಸಂಸ್ಥೆಯಾದ ಕರ್ನಾಟಕ ಬ್ಯಾಂಕ್, ತಂತ್ರಜ್ಞಾನ ಮತ್ತು ಡಿಜಿಟಲ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತನ್ನ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಇತ್ತೀಚೆಗೆ ಭಾರತೀಯ ಬ್ಯಾಂಕುಗಳ ಸಂಘ (IBA) ಆಯೋಜಿಸಿದ್ದ ಬ್ಯಾಂಕಿಂಗ್

ತಂತ್ರಜ್ಞಾನ ಪ್ರಶಸ್ತಿ ಸಮಾರಂಭದಲ್ಲಿ ಕರ್ನಾಟಕ ಬ್ಯಾಂಕ್ ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ಡಿಜಿಟಲ್ ರೂಪಾಂತರ ಮತ್ತು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಲ್ಲಿ ಬ್ಯಾಂಕ್ ತೋರಿರುವ ಅಸಾಧಾರಣ ಬದ್ಧತೆಗೆ ಈ ಗೌರವ ಸಂದಿದೆ.

➤ **ಪ್ರಮುಖ ಪ್ರಶಸ್ತಿಗಳ ವಿವರ:**

1. ವಿಜೇತರು: ‘ಅತ್ಯುತ್ತಮ ಫಿನ್‌ಟೆಕ್ ಮತ್ತು ಡಿಪಿಐ ಅಳವಡಿಕೆ’ (Best Fintech & DPI Adoption) ವಿಭಾಗದಲ್ಲಿ ಕರ್ನಾಟಕ ಬ್ಯಾಂಕ್ ಅಗ್ರಸ್ಥಾನ ಪಡೆದಿದೆ. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು (DPI) ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಕ್ಕಾಗಿ ಈ ಪ್ರಶಸ್ತಿ ಲಭಿಸಿದೆ.

2. ರನ್ನರ್-ಅಪ್: ‘ಅತ್ಯುತ್ತಮ ತಾಂತ್ರಿಕ ಪ್ರತಿಭೆ’ (Best Tech Talent) ವಿಭಾಗದಲ್ಲಿ ದ್ವಿತೀಯ ಸ್ಥಾನ.

3. ವಿಶೇಷ ಉಲ್ಲೇಖ (Special Mention): ಈ ಕೆಳಗಿನ ಮೂರು ವಿಭಾಗಗಳಲ್ಲಿ ಬ್ಯಾಂಕ್ ವಿಶೇಷ ಉಲ್ಲೇಖದ ಗೌರವಕ್ಕೆ ಪಾತ್ರವಾಗಿದೆ:

i. ಅತ್ಯುತ್ತಮ ತಂತ್ರಜ್ಞಾನ ಬ್ಯಾಂಕ್ (Best Technology Bank)

ii. ಅತ್ಯುತ್ತಮ ಡಿಜಿಟಲ್ ಹಣಕಾಸು ಒಳಗೊಳ್ಳುವಿಕೆ (Best Digital Financial Inclusion)

iii ಅತ್ಯುತ್ತಮ ಡಿಜಿಟಲ್ ಮಾರಾಟ (Best Digital Sales)

➤ ಕರ್ನಾಟಕ ಬ್ಯಾಂಕ್ ಫೆಬ್ರುವರಿ 18, 1924 ರಂದು ಮಂಗಳೂರಿನಲ್ಲಿ ಸ್ಥಾಪನೆಯಾದ ಭಾರತದ ಪ್ರತಿಷ್ಠಿತ ಖಾಸಗಿ ವಲಯದ ಬ್ಯಾಂಕ್ ಆಗಿದ್ದು, ಪ್ರಸ್ತುತ ಶ್ರೀ ರಾಘವೇಂದ್ರ ಎಸ್. ಭಟ್ ಅವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ.ತನ್ನ ಶತಮಾನೋತ್ಸವ ಸಂಭ್ರಮದಲ್ಲಿರುವ (1924-2024) ಈ ಬ್ಯಾಂಕ್, 'KBL-NxT' ಯೋಜನೆಯ ಮೂಲಕ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದು, ಕೃಷಿ ಮತ್ತು MSME ವಲಯಗಳಿಗೆ ಹೆಚ್ಚಿನ ಒತ್ತು ನೀಡುತ್ತಾ "Your Family Bank. Across India" ಎಂಬ ಧ್ಯೇಯವಾಕ್ಯದೊಂದಿಗೆ ದೇಶಾದ್ಯಂತ ವಿಸ್ತರಿಸಿದೆ.

➤ ಬ್ಯಾಂಕ್‌ನ ಪ್ರತಿಕ್ರಿಯೆ: ಈ ಸಾಧನೆಯ ಕುರಿತು ಮಾತನಾಡಿದ ಕರ್ನಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆದ ಶ್ರೀ ರಾಘವೇಂದ್ರ ಎಸ್. ಭಟ್ ಅವರು, "ಈ ಪ್ರಶಸ್ತಿಗಳು ನಮ್ಮ ಐಟಿ (IT) ಮತ್ತು ವ್ಯವಹಾರ ತಂಡಗಳ ಸಂಯೋಜಿತ ಪ್ರಯತ್ನಕ್ಕೆ ಸಂದ ಜಯವಾಗಿದೆ. ಗ್ರಾಹಕ ಕೇಂದ್ರಿತ ಡಿಜಿಟಲ್ ಸೇವೆಗಳನ್ನು ಒದಗಿಸಲು ಮತ್ತು ತಾಂತ್ರಿಕ ಪ್ರತಿಭೆಗಳನ್ನು ಪೋಷಿಸಲು ನಮ್ಮ ಬ್ಯಾಂಕ್ ಸದಾ ಬದ್ಧವಾಗಿದೆ," ಎಂದು ತಿಳಿಸಿದ್ದಾರೆ.

## ಯೆಮನ್ ರಾಜಕೀಯದಲ್ಲಿ ಭಾರಿ ಬದಲಾವಣೆ: ನೂತನ ಪ್ರಧಾನಿಯಾಗಿ ಶಾಯಾ ಮೊಹ್ಸಿನ್ ಅಲ್-ಜಿಂದಾನಿ ನೇಮಕ!



➤ ಕಳೆದ ದಶಕದಿಂದ ಅಂತರ್ಯುದ್ಧ ಮತ್ತು ಆಡಳಿತಾತ್ಮಕ ಅಸ್ಥಿರತೆಯಿಂದ ತತ್ತರಿಸುತ್ತಿರುವ ಯೆಮನ್ ದೇಶದಲ್ಲಿ ಮಹತ್ವದ ರಾಜಕೀಯ ಬದಲಾವಣೆ ಸಂಭವಿಸಿದೆ. ಯೆಮನ್‌ನ ಸೌದಿ ಬೆಂಬಲಿತ ಪ್ರೆಸಿಡೆನ್ಶಿಯಲ್ ಲೀಡರ್‌ಶಿಪ್ ಕೌನ್ಸಿಲ್ (PLC) ದೇಶದ ನೂತನ ಪ್ರಧಾನ ಮಂತ್ರಿಯಾಗಿ ಹಿರಿಯ ರಾಜತಾಂತ್ರಿಕ ಮತ್ತು ವಿದೇಶಾಂಗ ಸಚಿವ ಶಾಯಾ ಮೊಹ್ಸಿನ್ ಅಲ್-ಜಿಂದಾನಿ (Shaya Mohsin al-Zindani) ಅವರನ್ನು ನೇಮಕ ಮಾಡಿದೆ.

ಪ್ರಧಾನಿ ಸಲೇಮ್ ಬಿನ್ ಬ್ರೈಕ್ ಅವರ ರಾಜೀನಾಮೆಯನ್ನು ಅಂಗೀಕರಿಸಿದ ನಂತರ ಅಧ್ಯಕ್ಷ ರಶಾದ್ ಅಲ್-ಅಲಿಮಿ ಅವರು ಈ ಆದೇಶ ಹೊರಡಿಸಿದ್ದಾರೆ.

➤ ಯೆಮನ್‌ನ ಅಧಿಕೃತ ಸುದ್ದಿ ಸಂಸ್ಥೆ 'ಸಬಾ' (Saba) ವರದಿಯ ಪ್ರಕಾರ, ಕೌನ್ಸಿಲ್ ಅಧ್ಯಕ್ಷ ರಶಾದ್ ಅಲ್-ಅಲಿಮಿ ಅವರು ಜಿಂದಾನಿ ಅವರಿಗೆ ಹೊಸ ಸಚಿವ ಸಂಪುಟ ರಚಿಸುವಂತೆ ಸೂಚಿಸಿದ್ದಾರೆ. ಮಾಜಿ ಪ್ರಧಾನಿ ಸಲೇಮ್ ಬಿನ್ ಬ್ರೈಕ್ ಅವರು ಔಪಚಾರಿಕವಾಗಿ ಸಲ್ಲಿಸಿದ ರಾಜೀನಾಮೆಯನ್ನು ಕೌನ್ಸಿಲ್ ಅನುಮೋದಿಸಿದೆ.

➤ ಈ ಬದಲಾವಣೆಯು ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (UAE) ನಡುವೆ ಯೆಮನ್ ಮೇಲಿನ ಪ್ರಭಾವಕ್ಕಾಗಿ ನಡೆಯುತ್ತಿರುವ ಪೈಪೋಟಿಯ ನಡುವೆ ಸಂಭವಿಸಿದೆ. ಯುಎಇ ಬೆಂಬಲಿತ 'ದಕ್ಷಿಣ ಪರಿವರ್ತನಾ ಮಂಡಳಿ' (STC) ಇತ್ತೀಚೆಗೆ ಸೌದಿ ಗಡಿಯ ಸಮೀಪವಿರುವ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದು ಉಭಯ ದೇಶಗಳ ನಡುವೆ ಆತಂಕ ಮೂಡಿಸಿತ್ತು.

➤ ಕೌನ್ಸಿಲ್‌ನಲ್ಲಿ ಬದಲಾವಣೆಗಳು: ಸೌದಿ ಅರೇಬಿಯಾ ಯೆಮನ್‌ನ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯ ಮೇಲೆ ತನ್ನ ಸಂಪೂರ್ಣ ನಿಯಂತ್ರಣವನ್ನು ಸಾಧಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ:

=> ದಕ್ಷಿಣದ ಪ್ರತ್ಯೇಕತಾವಾದಿ ನಾಯಕ ಫರಾಜ್ ಸಲ್ಮೀನ್ ಅಲ್-ಬಹ್ಸಾನಿ ಅವರನ್ನು ಕೌನ್ಸಿಲ್ ಸದಸ್ಯತ್ವದಿಂದ ವಜಾಗೊಳಿಸಲಾಗಿದೆ.

=> ಈ ಹಿಂದೆ ಎಸ್‌ಟಿಸಿ (STC) ನಾಯಕ ಐದರೂಸ್ ಅಲ್-ಜುಬೈದಿ ಅವರನ್ನು ದೇಶದ್ರೋಹದ ಆರೋಪದ ಮೇಲೆ ವಜಾಗೊಳಿಸಲಾಗಿತ್ತು.

=> ಇವರ ಬದಲಿಗೆ ಸೌದಿ ಪರ ನಿಲುವು ಹೊಂದಿರುವ ಲೆಫ್ಟಿನೆಂಟ್ ಜನರಲ್ ಮಹಮೂದ್ ಅಲ್-ಸುಬೈಹಿ ಮತ್ತು ಹದ್ರಮೌತ್ ಗವರ್ನರ್ ಸಲೇಮ್ ಅಲ್-ಖಾನ್‌ಬಾಶಿ ಅವರನ್ನು ನೇಮಿಸಲಾಗಿದೆ.

➤ ಆರ್ಥಿಕ ನೆರವು: ಆಡಳಿತಾತ್ಮಕ ಬದಲಾವಣೆಯ ಬೆನ್ನಲ್ಲೇ, ಯೆಮನ್‌ನ ಸರ್ಕಾರಿ ನೌಕರರ ಎರಡು ತಿಂಗಳ ವೇತನ ಪಾವತಿಗಾಗಿ ಸೌದಿ ಅರೇಬಿಯಾ 90 ಮಿಲಿಯನ್ ಡಾಲರ್ ಆರ್ಥಿಕ ಸಹಾಯವನ್ನು ಘೋಷಿಸಿದೆ.

➤ ಯೆಮನ್ ಕಳೆದ ಹಲವಾರು ವರ್ಷಗಳಿಂದ ಅಂತರ್ಯುದ್ಧದಿಂದ ತತ್ತರಿಸುತ್ತಿದೆ. ಇರಾನ್ ಬೆಂಬಲಿತ ಹೌತಿ ಬಂಡುಕೋರರ ವಿರುದ್ಧ ಸೌದಿ ನೇತೃತ್ವದ ಒಕ್ಕೂಟ ಹೋರಾಡುತ್ತಿದೆ. ಪ್ರಸ್ತುತ ಬದಲಾವಣೆಗಳು ಯೆಮನ್‌ನ ಆಡಳಿತದಲ್ಲಿ ಸ್ಥಿರತೆ ತರುವ ಮತ್ತು ಸೌದಿ ಅರೇಬಿಯಾದ ಹಿಡಿತವನ್ನು ಬಲಪಡಿಸುವ ಪ್ರಯತ್ನವೆಂದು ವಿಶ್ಲೇಷಿಸಲಾಗುತ್ತಿದೆ.

# 17 Jan 2026

## ಮಧ್ಯಪ್ರದೇಶ ಆಡಳಿತದಲ್ಲಿ ಕೃತಕ ಬುದ್ಧಿಮತ್ತೆ: 'ಡಿಜಿಟಲ್ ಇಂಡಿಯಾ ಭಾಷಿಣಿ' ಜೊತೆ ಒಪ್ಪಂದ.




➤ ಭೋಪಾಲ್‌ನಲ್ಲಿ ನಡೆದ 'ಮಧ್ಯಪ್ರದೇಶ ಪ್ರಾದೇಶಿಕ AI ಪ್ರಭಾವ ಸಮ್ಮೇಳನ 2026' ರ ಸಂದರ್ಭದಲ್ಲಿ, ಮಧ್ಯಪ್ರದೇಶ ಸರ್ಕಾರವು ತನ್ನ ಡಿಜಿಟಲ್ ಆಡಳಿತ ವೇದಿಕೆಗಳಲ್ಲಿ ಬಹುಭಾಷಾ AI ತಂತ್ರಜ್ಞಾನವನ್ನು ಅಳವಡಿಸಲು ಕೇಂದ್ರ ಸರ್ಕಾರದ 'ಡಿಜಿಟಲ್ ಇಂಡಿಯಾ ಭಾಷಿಣಿ' (Digital India BHASHINI) ವಿಭಾಗದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಸರ್ಕಾರಿ ಸೇವೆಗಳನ್ನು ಸಾಮಾನ್ಯ ಜನರಿಗೆ ಅವರದೇ ಮಾತೃಭಾಷೆಯಲ್ಲಿ ತಲುಪಿಸುವುದು ಮತ್ತು ಡಿಜಿಟಲ್ ಸಾಕ್ಷರತೆ ಕಡಿಮೆ ಇರುವವರಿಗೂ ಧ್ವನಿ ಆಧಾರಿತ (Voice-first) ಸೇವೆಗಳನ್ನು ಒದಗಿಸುವ ಗುರಿ ಇದು ಹೊಂದಿದೆ.

➤ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ರಾಜ್ಯದಲ್ಲಿ ಶೀಘ್ರದಲ್ಲೇ 'ರಾಜ್ಯ AI ನೀತಿ'ಯನ್ನು (State AI Policy) ಮಿಷನ್ ಮೋಡ್‌ನಲ್ಲಿ ಜಾರಿಗೆ ತರುವುದಾಗಿ

ಘೋಷಿಸಿದ್ದಾರೆ. ಈ ಸಮ್ಮೇಳನವನ್ನು ಮಧ್ಯಪ್ರದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು 'ಇಂಡಿಯಾ AI ಮಿಷನ್' (IndiaAI Mission) ಸಹಯೋಗದೊಂದಿಗೆ ಆಯೋಜಿಸಿತ್ತು.

➤ ಭಾಷಿಣಿ ಎಂಬುದು ಭಾರತ ಸರ್ಕಾರದ ರಾಷ್ಟ್ರೀಯ ಡಿಜಿಟಲ್ ವೇದಿಕೆಯಾಗಿದ್ದು, ಕೃತಕ ಬುದ್ಧಿಮತ್ತೆ (AI) ಆಧಾರಿತ ಭಾಷಾ ಅನುವಾದ ಮತ್ತು ಧ್ವನಿ ಪರಿಹಾರಗಳನ್ನು ಒದಗಿಸುತ್ತದೆ. ಇದು ಪಠ್ಯದಿಂದ ಪಠ್ಯ (Text-to-Text), ಭಾಷಣದಿಂದ ಪಠ್ಯ (Speech-to-Text) ಮತ್ತು ಧ್ವನಿಯಿಂದ ಧ್ವನಿಗೆ (Speech-to-Speech) ಅನುವಾದವನ್ನು ಬೆಂಬಲಿಸುತ್ತದೆ. ಇದರ ಮೂಲಕ ಗ್ರಾಮೀಣ ಭಾಗದ ಜನರಿಗೆ ಮತ್ತು ಹಿರಿಯ ನಾಗರಿಕರಿಗೆ ಭಾಷೆಯ ಅಡೆತಡೆಯಿಲ್ಲದೆ ಸರ್ಕಾರಿ ಯೋಜನೆಗಳ ಮಾಹಿತಿ ಸುಲಭವಾಗಿ ಸಿಗಲಿದೆ.

**➤ ಈ ಒಪ್ಪಂದದ ಮಹತ್ವ:**

=> ಅಂತರ್ಗತ ಆಡಳಿತ: ಭಾಷೆಯ ಕಾರಣದಿಂದ ಯಾವುದೇ ವ್ಯಕ್ತಿ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಬಾರದು ಎಂಬ ಉದ್ದೇಶ.

=> ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (DPI): ಭಾರತದ ಭಾಷಾ ವೈವಿಧ್ಯತೆಯನ್ನು ಡಿಜಿಟಲ್ ಜಗತ್ತಿನಲ್ಲಿ ಬಲಪಡಿಸುವುದು.

=> ಕೊನೆಯ ಮೈಲಿ ವಿತರಣೆ: ಕಟ್ಟಕಡೆಯ ವ್ಯಕ್ತಿಗೂ ತಂತ್ರಜ್ಞಾನದ ಮೂಲಕ ಸಾರ್ವಜನಿಕ ಸೇವೆಗಳನ್ನು ತಲುಪಿಸುವುದು.

## ಇಂಡಿಯಾ ಪೋಸ್ಟ್‌ನಿಂದ ONDC ಮೂಲಕ ಮೊದಲ ಆರ್ಡರ್ ವಿತರಣೆ: ಡಿಜಿಟಲ್ ಲಾಜಿಸ್ಟಿಕ್ಸ್ ಯುಗದ ಆರಂಭ

➤ ಭಾರತೀಯ ಅಂಚೆ ಇಲಾಖೆಯು (India Post) Open Network for Digital Commerce (ONDC) ವೇದಿಕೆಯ ಅಡಿಯಲ್ಲಿ 'ಲಾಜಿಸ್ಟಿಕ್ಸ್ ಸೇವಾ ಪೂರೈಕೆದಾರ' (Logistics Service Provider - LSP) ಆಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ. ಜನವರಿ 15, 2026 ರಂದು ತನ್ನ ಮೊದಲ ಪಾರ್ಸೆಲ್ ಅನ್ನು ಯಶಸ್ವಿಯಾಗಿ ವಿತರಿಸುವ ಮೂಲಕ ಈ ಡಿಜಿಟಲ್ ಮೈಲಿಗಲ್ಲನ್ನು ಸಾಧಿಸಿದೆ.

➤ ಜನವರಿ 13, 2026 ರಂದು 'ಉದ್ಯಮ್‌ವೆಲ್' (UdyamWell) ಎಂಬ ಸಂಸ್ಥೆಯ ಮೂಲಕ ಮೊದಲ ಬುಕಿಂಗ್ ನಡೆದಿತ್ತು. ಇದನ್ನು ಜನವರಿ 15 ರಂದು ಗ್ರಾಹಕರಿಗೆ ತಲುಪಿಸಲಾಯಿತು. ಇದು ಗ್ರಾಮೀಣ ಉದ್ಯಮಿಗಳು, ಕುಶಲಕರ್ಮಿಗಳು ಮತ್ತು ರೈತರಿಗೆ ಬೆಂಬಲ ನೀಡುವ ONDC ಆಧಾರಿತ ಉಪಕ್ರಮವಾಗಿದೆ.

➤ ಪ್ರಸ್ತುತ ಅಂಚೆ ಇಲಾಖೆಯು ONDC ಯಲ್ಲಿ "ಕ್ಲಿಕ್ ಮತ್ತು ಬುಕ್" (Click & Book) ಮಾದರಿಯಡಿ ಕಾರ್ಯನಿರ್ವಹಿಸುತ್ತಿದೆ:

=> ಡಿಜಿಟಲ್ ವಿನಂತಿ: ಮಾರಾಟಗಾರರು ಡಿಜಿಟಲ್ ಮೂಲಕ ಪಾರ್ಸೆಲ್ ಪಿಕಪ್ ವಿನಂತಿಯನ್ನು ಸಲ್ಲಿಸಬಹುದು.

=> ಪಿಕಪ್ ಸೇವೆ: ಅಂಚೆ ಇಲಾಖೆಯ ಸಿಬ್ಬಂದಿ ಮಾರಾಟಗಾರರ ಮನೆ ಅಥವಾ ಕಚೇರಿಗೆ ಬಂದು ಪಾರ್ಸೆಲ್ ಸಂಗ್ರಹಿಸುತ್ತಾರೆ.

=> ತಂತ್ರಜ್ಞಾನದ ಬಳಕೆ: ಪಾರ್ಸೆಲ್ ಸಂಗ್ರಹಿಸುವಾಗ ಅಂಚೆ ವೆಚ್ಚವನ್ನು ಪಡೆಯಲಾಗುತ್ತದೆ ಮತ್ತು ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ಮೂಲಕ ಅದನ್ನು ಟ್ರ್ಯಾಕ್ (Track) ಮಾಡಿ ವಿತರಿಸಲಾಗುತ್ತದೆ.

**➤ ಇದರ ಪ್ರಾಮುಖ್ಯತೆ ಮತ್ತು ಪ್ರಯೋಜನಗಳು:-**

=> MSMEಗಳಿಗೆ ವರದಾನ: ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು (MSME) ಮತ್ತು ಗ್ರಾಮೀಣ ಉದ್ಯಮಿಗಳಿಗೆ ಇದು ರಾಷ್ಟ್ರವ್ಯಾಪಿ ಮಾರುಕಟ್ಟೆಯನ್ನು ತಲುಪಲು ಸಹಾಯ ಮಾಡುತ್ತದೆ.

=> ಅಂಚೆ ಜಾಲದ ಬಳಕೆ: ವಿಶ್ವದ ಅತಿದೊಡ್ಡ ಅಂಚೆ ಜಾಲಗಳಲ್ಲಿ ಒಂದಾದ ಇಂಡಿಯಾ ಪೋಸ್ಟ್‌ನ ಸೇವೆಯನ್ನು ಈಗ ಇ-ಕಾಮರ್ಸ್ ಕ್ಷೇತ್ರಕ್ಕೂ ಬಳಸಿಕೊಳ್ಳಲಾಗುತ್ತಿದೆ.

=> ಕೊನೆಯ ಹಂತದ ಸಂಪರ್ಕ (Last-mile connectivity): ಖಾಸಗಿ ಲಾಜಿಸ್ಟಿಕ್ಸ್ ಸಂಸ್ಥೆಗಳು ತಲುಪದ ದೂರದ ಹಳ್ಳಿಗಳಿಗೂ ಈ ಸೇವೆಯ ಮೂಲಕ ಡಿಜಿಟಲ್ ವ್ಯವಹಾರ ವಿಸ್ತರಿಸಲು ಸಾಧ್ಯವಾಗುತ್ತದೆ.

➤ ONDC ಇದು ಇ-ಕಾಮರ್ಸ್ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು ತಡೆಗಟ್ಟಲು ಮತ್ತು ಮುಕ್ತ ಮಾರುಕಟ್ಟೆಯನ್ನು ಉತ್ತೇಜಿಸಲು ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಆರಂಭಿಸಿದ ಉಪಕ್ರಮವಾಗಿದೆ.

## ಭಾರತದ 92ನೇ ಚೆಸ್ ಗ್ರ್ಯಾಂಡ್‌ಮಾಸ್ಟರ್ ಆಗಿ ಆರ್ಯನ್ ವರ್ಷ್ನೆ ಸಾಧನೆ



➤ ಭಾರತದ ಚೆಸ್ ಇತಿಹಾಸದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪನೆಯಾಗಿದೆ. ದೆಹಲಿಯ 21 ವರ್ಷದ ಯುವ ಆಟಗಾರ ಆರ್ಯನ್ ವರ್ಷ್ನೆ (Aaryan Varshney) ಅವರು ಭಾರತದ 92ನೇ ಗ್ರ್ಯಾಂಡ್‌ಮಾಸ್ಟರ್ (GM) ಆಗಿ ಹೊರಹೊಮ್ಮಿದ್ದಾರೆ. ಅರ್ಮೇನಿಯಾದಲ್ಲಿ ನಡೆದ 'ಆಂಡ್ರಾನಿಕ್ ಮಾರ್ಗರಿಯನ್ ಮೆಮೋರಿಯಲ್' ಟೂರ್ನಮೆಂಟ್‌ನಲ್ಲಿ ತಮ್ಮ ಅಂತಿಮ ಜಿಎಂ ನಾರ್ಮ್ (GM Norm) ಪೂರೈಸುವ ಮೂಲಕ ಈ ಸಾಧನೆ ಮಾಡಿದ್ದಾರೆ.

➤ ಮನೆಯಲ್ಲೇ ಕಲಿತ ವಿದ್ಯೆ: ಆರ್ಯನ್ ಅವರ ಸಾಧನೆ ವಿಶಿಷ್ಟವಾದುದು. ಯಾವುದೇ ವೃತ್ತಿಪರ ಅಕಾಡೆಮಿ ಅಥವಾ ತರಬೇತುದಾರರ ಸಹಾಯವಿಲ್ಲದೆ, ಅವರು ಕೇವಲ ತಮ್ಮ ತಂದೆ ಗೌರವ್ ವರ್ಷ್ನೆ (ಭೌತಶಾಸ್ತ್ರ ಶಿಕ್ಷಕ) ಅವರ ಮಾರ್ಗದರ್ಶನದಲ್ಲಿ ಈ ಮಟ್ಟಕ್ಕೆ ಬೆಳೆದಿದ್ದಾರೆ. 2014 ರಲ್ಲಿ ಕೇವಲ 1261 ರೇಟಿಂಗ್ ನೊಂದಿಗೆ ಆರಂಭಿಸಿದ ಇವರು, ನಾಲ್ಕೇ ವರ್ಷಗಳಲ್ಲಿ 2300 ರೇಟಿಂಗ್ ದಾಟಿದರು. 2018 ರಲ್ಲಿ ರಾಷ್ಟ್ರೀಯ ಅಂಡರ್-13 ಚಾಂಪಿಯನ್ ಆಗಿದ್ದರು.

➤ಶಿಸ್ತು ಮತ್ತು ಸ್ವಯಂ ಅಧ್ಯಯನ: ಆರ್ಯನ್ ಇದುವರೆಗೆ ಯಾವುದೇ ಚೆಸ್ ಪುಸ್ತಕಗಳನ್ನು ಓದಿಲ್ಲದಿರುವುದು ವಿಶೇಷ. ಅವರು ಕೇವಲ ChessBase ಸಾಫ್ಟ್‌ವೇರ್ ಮತ್ತು ತಮ್ಮ ಹಿಂದಿನ ಆಟಗಳ ವಿಶ್ಲೇಷಣೆಯ ಮೂಲಕವೇ ತಂತ್ರಗಳನ್ನು ಕರಗತ ಮಾಡಿಕೊಂಡಿದ್ದಾರೆ.

➤ ವಿದೇಶಗಳಲ್ಲಿ ತರಬೇತಿ ಪಡೆಯುವಷ್ಟು ಆರ್ಥಿಕ ಸ್ಥಿತಿವಂತರಲ್ಲದಿದ್ದರೂ, ಕಳೆದ ಆರು ತಿಂಗಳಲ್ಲಿ ಗ್ರೀಸ್, ಬಾಂಗ್ಲಾದೇಶ ಮತ್ತು ಅರ್ಮೇನಿಯಾದಲ್ಲಿ ನಡೆದ ಸರಣಿ ಪಂದ್ಯಗಳಲ್ಲಿ ಅದ್ಭುತ ಪ್ರದರ್ಶನ ನೀಡಿ ಮೂರು ಜಿಎಂ ನಾರ್ಮ್ ಗಳನ್ನು ಪಡೆದುಕೊಂಡಿದ್ದಾರೆ.

➤ ವಿಶ್ವ ಚಾಂಪಿಯನ್ ಆಗುವುದು ಆರ್ಯನ್ ಅವರ ಕನಸಾಗಿದೆ. ಪ್ರಸ್ತುತ ವಿಶ್ವ ಚಾಂಪಿಯನ್ ಆಗಿರುವ ಭಾರತದವರೇ ಆದ ಗುಕೇಶ್ ಡಿ. ಅವರ ವಿರುದ್ಧ ಜಯ ದಾಖಲಿಸುವುದು ತಮ್ಮ ಗುರಿ ಎಂದು ಅವರು ಹೇಳಿಕೊಂಡಿದ್ದಾರೆ.

## ಕೇಂದ್ರ ಸರ್ಕಾರದಿಂದ 242 ಅಕ್ರಮ ಬೆಟ್ಟಿಂಗ್ ವೆಬ್‌ಸೈಟ್‌ಗಳ ನಿಷೇಧ



➤ ಕೇಂದ್ರ ಸರ್ಕಾರವು ಅಕ್ರಮ ಆನ್‌ಲೈನ್ ಬೆಟ್ಟಿಂಗ್ ಮತ್ತು ಗ್ಯಾಂಬ್ಲಿಂಗ್ (ಜೂಜಾಟ) ವಿರುದ್ಧದ ಹೋರಾಟವನ್ನು ತೀವ್ರಗೊಳಿಸಿದ್ದು, ಶುಕ್ರವಾರದಂದು (ಜನವರಿ 16) ಹೊಸದಾಗಿ 242 ವೆಬ್‌ಸೈಟ್ ಲಿಂಕ್‌ಗಳನ್ನು ನಿರ್ಬಂಧಿಸಿದೆ. ಇದು ಯುವಜನತೆಯನ್ನು ಆರ್ಥಿಕ ಮತ್ತು ಸಾಮಾಜಿಕ ಹಾನಿಯಿಂದ ರಕ್ಷಿಸುವ ಸರ್ಕಾರದ ಬದ್ಧತೆಯ ಭಾಗವಾಗಿದೆ.

➤ ಇಲ್ಲಿಯವರೆಗೆ ಸರ್ಕಾರವು ಒಟ್ಟು 7,800ಕ್ಕೂ ಹೆಚ್ಚು ಅಕ್ರಮ ಬೆಟ್ಟಿಂಗ್ ಮತ್ತು ಜೂಜಿನ ವೆಬ್‌ಸೈಟ್‌ಗಳನ್ನು ತೆರವುಗೊಳಿಸಿದೆ. ಅಕ್ಟೋಬರ್ 1, 2025 ರಂದು ಜಾರಿಗೆ ಬಂದ 'ಆನ್‌ಲೈನ್ ಗೇಮಿಂಗ್ ಕಾಯ್ದೆ'ಯ ನಂತರ ಇಂತಹ ಅಕ್ರಮ ಸೈಟ್‌ಗಳ ವಿರುದ್ಧದ ಕ್ರಮಗಳು ಗಣನೀಯವಾಗಿ ಹೆಚ್ಚಾಗಿವೆ. ಈ ಕಾಯ್ದೆಯು ಇ-ಸ್ಪೋರ್ಟ್ಸ್ (E-sports) ಮತ್ತು ಶೈಕ್ಷಣಿಕ ಗೇಮಿಂಗ್‌ಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿದ್ದರೆ, ಹಣದ ಪಣವಿಟ್ಟು ಆಡುವ (Real money gaming) ಅಕ್ರಮ ಜೂಜಾಟಗಳನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ.

➤ ಕಾಯ್ದೆಯ ವಿಶೇಷತೆಗಳು:-

=> ಬಳಕೆದಾರರಿಗೆ ದಂಡವಿಲ್ಲ: ಈ ಕಾನೂನಿನ ಅಡಿಯಲ್ಲಿ ಪಂದ್ಯಗಳಲ್ಲಿ ಹಣ ಹೂಡಿ ಆಡುವ ಆಟಗಾರರನ್ನು (Users) ಅಪರಾಧಿಗಳೆಂದು ಪರಿಗಣಿಸದೆ, ಸೇವಾ ಪೂರೈಕೆದಾರರು ಮತ್ತು ಪ್ರವರ್ತಕರನ್ನು ಗುರಿಯಾಗಿಸಲಾಗುತ್ತದೆ.

=> ಸೇವಾ ಪೂರೈಕೆದಾರರ ಮೇಲೆ ಕ್ರಮ: ಅಕ್ರಮ ಆ್ಯಪ್‌ಗಳು, ಜಾಹೀರಾತುದಾರರು, ಪ್ರವರ್ತಕರು ಮತ್ತು ಅಕ್ರಮ ಹಣಕಾಸು ವಹಿವಾಟಿಗೆ ನೆರವಾಗುವ ಸಂಸ್ಥೆಗಳ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲಾಗುತ್ತದೆ.

=> ಅಕ್ರಮ ಹಣದ ಹರಿವಿಗೆ ತಡೆ: ಇನ್ಫ್ಲುಯೆನ್ಸರ್‌ಗಳ ಮೂಲಕ ನಡೆಯುವ ಪ್ರಚಾರ ಮತ್ತು ವಿದೇಶಿ ಮೂಲದ ಅಕ್ರಮ ಪ್ಲಾಟ್‌ಫಾರ್ಮ್‌ಗಳ ಹಣಕಾಸು ಮಾರ್ಗಗಳನ್ನು (Money trails) ಕಡಿಯುವುದು ಈ ಕ್ರಮದ ಮುಖ್ಯ ಉದ್ದೇಶವಾಗಿದೆ.

➤ ಬೆಟ್ಟಿಂಗ್ ಮತ್ತು ಜೂಜಿನ ವೆಬ್‌ಸೈಟ್‌ಗಳು ಯುವಜನರಲ್ಲಿ ವ್ಯಸನ, ದತ್ತಾಂಶ ಸೋರಿಕೆ (Data misuse) ಮತ್ತು ಭಾರಿ ಹಣಕಾಸಿನ ನಷ್ಟವನ್ನು ಉಂಟುಮಾಡುತ್ತಿವೆ. ಇದನ್ನು ತಡೆಯಲು ಸರ್ಕಾರವು ವೇಗದ ತಡೆ ವ್ಯವಸ್ಥೆ (Takedown mechanisms) ಮತ್ತು ಪಾವತಿ ನೆಟ್‌ವರ್ಕ್‌ಗಳೊಂದಿಗೆ ನಿಕಟ ಸಮನ್ವಯ ಸಾಧಿಸುತ್ತಿದೆ.

## ರಕ್ಷಣಾ ವಲಯದ FDI ಮಿತಿ ಶೇ. 49 ರಿಂದ ಶೇ. 74ಕ್ಕೆ ಏರಿಕೆ: ದೇಶೀಯ ಉತ್ಪಾದನೆಗೆ ಸಿಗಲಿದೆಯೇ ಹೊಸ ವೇಗ




➤ ಭಾರತ ಸರ್ಕಾರವು ದೇಶೀಯ ರಕ್ಷಣಾ ಉತ್ಪಾದನೆಯನ್ನು ಬಲಪಡಿಸುವ ಹಾಗೂ ಜಾಗತಿಕ ರಕ್ಷಣಾ ಕಂಪನಿಗಳನ್ನು ದೇಶಕ್ಕೆ ಆಕರ್ಷಿಸುವ ಉದ್ದೇಶದಿಂದ ರಕ್ಷಣಾ ವಲಯದಲ್ಲಿನ ವಿದೇಶಿ ನೇರ ಹೂಡಿಕೆ (FDI) ನಿಯಮಗಳನ್ನು ಮತ್ತಷ್ಟು ಸಡಿಲಿಸುವತ್ತ ಹೆಜ್ಜೆ ಇಡುತ್ತಿದೆ ಎಂದು ವರದಿಯಾಗಿದೆ. ಈ ಕ್ರಮವು 'ಮೇಕ್ ಇನ್ ಇಂಡಿಯಾ' , 'ಆತ್ಮನಿರ್ಭರ ಭಾರತ' ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವ ಸರ್ಕಾರದ ದೀರ್ಘಕಾಲೀನ ದೃಷ್ಟಿಕೋನದ ಭಾಗವಾಗಿದೆ.

➤ ಈಗಿರುವ ನಿಯಮದಂತೆ, ಅಸ್ತಿತ್ವದಲ್ಲಿರುವ ರಕ್ಷಣಾ ಪರವಾನಗಿ ಹೊಂದಿರುವ ಕಂಪನಿಗಳಲ್ಲಿ ಶೇ. 49ರಷ್ಟು ಮಾತ್ರ ಸ್ವಯಂಚಾಲಿತ ಮಾರ್ಗದ ಮೂಲಕ ಹೂಡಿಕೆ ಮಾಡಲು ಅವಕಾಶವಿದೆ. ಇದನ್ನು ಶೇ. 74ಕ್ಕೆ ಏರಿಸಲು ಸರ್ಕಾರ ನಿರ್ಧರಿಸಿದೆ. 74 ಶೇಕಡಾ ವರೆಗೆ FDIಗೆ ಸ್ವಯಂ ಅನುಮೋದನಾ ಮಾರ್ಗದಲ್ಲಿ ಅವಕಾಶವಿದ್ದು, ಅದಕ್ಕಿಂತ ಹೆಚ್ಚಿನ ಹೂಡಿಕೆಗೆ ಸರ್ಕಾರದ ವಿಶೇಷ ಅನುಮೋದನೆ ಅಗತ್ಯವಿದೆ. ಆದರೆ, ಈ ಮಿತಿಯನ್ನು ಇನ್ನಷ್ಟು ಸಡಿಲಿಸಿ, ನಿರ್ದಿಷ್ಟ ತಂತ್ರಜ್ಞಾನಗಳು, ಉನ್ನತ ಮಟ್ಟದ ರಕ್ಷಣಾ ಉತ್ಪನ್ನಗಳು ಹಾಗೂ ತಂತ್ರಾತ್ಮಕ ಅಗತ್ಯಗಳಿಗೆ ಸಂಬಂಧಿಸಿದ ಯೋಜನೆಗಳಲ್ಲಿ 100 ಶೇಕಡಾ ವರೆಗೆ FDIಗೆ ಸುಲಭ ಅವಕಾಶ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ ಎನ್ನಲಾಗಿದೆ.

➤ ಈ ಸಡಿಲಿಕೆಯ ಪ್ರಮುಖ ಉದ್ದೇಶಗಳು ಇಂತಿವೆ:

=> ಜಾಗತಿಕ ರಕ್ಷಣಾ ಕಂಪನಿಗಳಿಂದ ಆಧುನಿಕ ತಂತ್ರಜ್ಞಾನ ಮತ್ತು ಪರಿಣತಿ ಭಾರತಕ್ಕೆ ತರಲು

=> ದೇಶೀಯ ಖಾಸಗಿ ವಲಯ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ವಿದೇಶಿ ಹೂಡಿಕೆ ಮತ್ತು ಸಹಭಾಗಿತ್ವದ ಅವಕಾಶ ಹೆಚ್ಚಿಸಲು

=> ಆಮದುಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ರಕ್ಷಣಾ ಉತ್ಪನ್ನಗಳ ದೇಶೀಯ ಉತ್ಪಾದನೆ ಮತ್ತು ರಫ್ತು ಹೆಚ್ಚಿಸಲು

=> ರಕ್ಷಣಾ ವಲಯದಲ್ಲಿ ಉದ್ಯೋಗ ಸೃಷ್ಟಿ ಮತ್ತು ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡಲು

➤ ಸರ್ಕಾರದ ಅಂದಾಜಿನ ಪ್ರಕಾರ, FDI ನಿಯಮಗಳ ಸಡಿಲಿಕೆಯಿಂದ ಭಾರತವು ಜಾಗತಿಕ ರಕ್ಷಣಾ ಉತ್ಪಾದನಾ ಕೇಂದ್ರವಾಗಿ ರೂಪುಗೊಳ್ಳಲು ನೆರವಾಗಲಿದ್ದು, ದೊಡ್ಡ ಪ್ರಮಾಣದ ಹೂಡಿಕೆ ಹರಿದುಬರುವ ಸಾಧ್ಯತೆ ಇದೆ. ಜೊತೆಗೆ, ಭಾರತೀಯ ಸಶಸ್ತ್ರ ಪಡೆಗಳಿಗೆ ಅಗತ್ಯವಿರುವ ಶಸ್ತ್ರಾಸ್ತ್ರಗಳು ಮತ್ತು ಉಪಕರಣಗಳನ್ನು ದೇಶದಲ್ಲೇ ತಯಾರಿಸುವ ಸಾಮರ್ಥ್ಯವೂ ಹೆಚ್ಚಲಿದೆ.

➤ ತಜ್ಞರ ಅಭಿಪ್ರಾಯದಂತೆ, ಈ ಕ್ರಮವನ್ನು ಸಮರ್ಪಕ ನೀತಿ ಚೌಕಟ್ಟಿನೊಂದಿಗೆ ಜಾರಿಗೊಳಿಸಿದಲ್ಲಿ, ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕ ಬೆಳವಣಿಗೆ ಎರಡಕ್ಕೂ ಲಾಭವಾಗಲಿದೆ. ಆದರೆ, ತಂತ್ರಜ್ಞಾನ ವರ್ಗಾವಣೆ, ಡೇಟಾ ಭದ್ರತೆ ಮತ್ತು ದೇಶೀಯ ಕಂಪನಿಗಳ ಹಿತಾಸಕ್ತಿಗಳನ್ನು ಕಾಪಾಡುವತ್ತ ಸರ್ಕಾರ ಸೂಕ್ತ ಸಮತೋಲನ ಸಾಧಿಸುವ ಅಗತ್ಯವೂ ಇದೆ.

## ಆಂಧ್ರಪ್ರದೇಶದಲ್ಲಿ ಭಾರತದ ಮೊದಲ ಹಸಿರು ಅಮೋನಿಯಾ ಯೋಜನೆಗೆ ಚಾಲನೆ




➤ ಭಾರತದ ಇಂಧನ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ಮುನ್ನುಡಿ ಬರೆಯುತ್ತಾ, ದೇಶದ ಮೊದಲ ಹಸಿರು ಅಮೋನಿಯಾ (Green Ammonia) ಯೋಜನೆಯ ನಿರ್ಮಾಣ ಕಾಮಗಾರಿಯು ಆಂಧ್ರಪ್ರದೇಶದ ಕಾಕಿನಾಡದಲ್ಲಿ ಆರಂಭವಾಗಲಿದೆ. ಈ ಬೃಹತ್ ಯೋಜನೆಯು ಭಾರತವನ್ನು ಜಾಗತಿಕ ಹಸಿರು ಇಂಧನ ರಫ್ತು ಭೂಪಟದಲ್ಲಿ ಪ್ರಮುಖ ಸ್ಥಾನಕ್ಕೆ ಏರಿಸಲಿದೆ.

➤ ಹಸಿರು ಅಮೋನಿಯಾ : ಸಾಂಪ್ರದಾಯಿಕ ಅಮೋನಿಯಾವನ್ನು ನೈಸರ್ಗಿಕ ಅನಿಲದಿಂದ ತಯಾರಿಸಲಾಗುತ್ತದೆ, ಇದು ಪರಿಸರಕ್ಕೆ ಹಾನಿಕಾರಕ ಇಂಗಾಲವನ್ನು ಬಿಡುಗಡೆ ಮಾಡುತ್ತದೆ. ಆದರೆ ಹಸಿರು ಅಮೋನಿಯಾವನ್ನು ಸೌರ ಅಥವಾ ಮಾರುತ ಶಕ್ತಿಯಂತಹ ನವೀಕರಿಸಬಹುದಾದ ಮೂಲಗಳಿಂದ ಪಡೆದ ವಿದ್ಯುತ್ ಬಳಸಿ, ನೀರಿನಿಂದ ಹೈಡ್ರೋಜನ್ ಬೇರ್ಪಡಿಸಿ ತಯಾರಿಸಲಾಗುತ್ತದೆ.

ಇದನ್ನು ಹಡಗುಗಳ ಇಂಧನವಾಗಿ, ವಿದ್ಯುತ್ ಉತ್ಪಾದನೆಯಲ್ಲಿ ಮತ್ತು ರಸಗೊಬ್ಬರಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ.

➤ ಈ ಯೋಜನೆಯನ್ನು AM Green ಸಂಸ್ಥೆಯು ಸುಮಾರು 10 ಬಿಲಿಯನ್ ಡಾಲರ್ (ಅಂದಾಜು ₹83,000 ಕೋಟಿ) ಹೂಡಿಕೆಯೊಂದಿಗೆ ಕೈಗೆತ್ತಿಕೊಂಡಿದೆ. ಇದು ಭಾರತದ ಅತಿದೊಡ್ಡ ಕ್ಲೀನ್-ಎನರ್ಜಿ ಹೂಡಿಕೆಗಳಲ್ಲಿ ಒಂದಾಗಿದೆ. ನಿರ್ಮಾಣ ಹಂತದಲ್ಲಿ ಸುಮಾರು 8,000 ಉದ್ಯೋಗಗಳು ಸೃಷ್ಟಿಯಾಗಲಿವೆ. ಜೊತೆಗೆ ಕಾರ್ಯಾಚರಣೆಯ ಸಮಯದಲ್ಲಿ ನವೀಕರಿಸಬಹುದಾದ ಇಂಧನ, ಲಾಜಿಸ್ಟಿಕ್ಸ್ ಮತ್ತು ಬಂದರು ಸೇವೆಗಳಲ್ಲಿ ಹೆಚ್ಚಿನ ಸಂಖ್ಯೆಯ ಉನ್ನತ ಕೌಶಲ್ಯದ ಉದ್ಯೋಗಗಳು ಲಭ್ಯವಾಗಲಿವೆ.

➤ ಕಾಕಿನಾಡದಲ್ಲಿ ಸ್ಥಾಪನೆಯಾಗುತ್ತಿರುವ ಈ ಸಂಕೀರ್ಣವು ವಾರ್ಷಿಕ 1.5 ಮಿಲಿಯನ್ ಟನ್ (MTPA) ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ಇದು ವಿಶ್ವದ ಅತಿದೊಡ್ಡ ಹಸಿರು ಅಮೋನಿಯಾ ಸಂಕೀರ್ಣಗಳಲ್ಲಿ ಒಂದಾಗಲಿದೆ.

**ಹಂತವಾರು ಅನುಷ್ಠಾನ:**


- 2027ರ ವೇಳೆಗೆ: 0.5 MTPA
- 2028ರ ವೇಳೆಗೆ: 1.0 MTPA
- 2030ರ ವೇಳೆಗೆ: 1.5 MTPA

**➤ ತಾಂತ್ರಿಕ ಹಿನ್ನೆಲೆ ಮತ್ತು ವಿಶೇಷತೆ:**

=> ಪರಿಸರ ಸ್ನೇಹಿ ಇಂಧನ: ಈ ಯೋಜನೆಯು 7.5 GW ಸೌರ ಮತ್ತು ಮಾರುತ ಶಕ್ತಿ, 1,950 MW ಎಲೆಕ್ಟ್ರೋಲೈಸರ್ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತದೆ.

=> ಪಂಪ್ಡ್ ಹೈಡ್ರೋ ಸ್ಟೋರೇಜ್: ನಿರಂತರ ವಿದ್ಯುತ್ ಪೂರೈಕೆಗಾಗಿ ಆಂಧ್ರಪ್ರದೇಶದ ಪಿನ್ನಾಪುರಂನಲ್ಲಿರುವ ಭಾರತದ ಮೊದಲ ಪಂಪ್ಡ್ ಹೈಡ್ರೋ ಸ್ಟೋರೇಜ್ ಯೋಜನೆಯ ಬೆಂಬಲವನ್ನು ಇದು ಪಡೆಯಲಿದೆ.

=> ರಫ್ತು ಮಾರುಕಟ್ಟೆ: ಭಾರತದಲ್ಲಿ ತಯಾರಾದ ಈ ಹಸಿರು ಇಂಧನ ಕಣಗಳನ್ನು ಮೊದಲ ಬಾರಿಗೆ ಜರ್ಮನಿ, ಜಪಾನ್ ಮತ್ತು ಸಿಂಗಾಪುರ ಸೇರಿದಂತೆ ಜಾಗತಿಕ ಮಾರುಕಟ್ಟೆಗಳಿಗೆ ರಫ್ತು ಮಾಡಲಾಗುವುದು. ಜರ್ಮನಿಯ 'ಯುನಿಪರ್' (Uniper) ಸಂಸ್ಥೆಯೊಂದಿಗೆ ಈಗಾಗಲೇ ದೀರ್ಘಾವಧಿಯ ಒಪ್ಪಂದ ಮಾಡಿಕೊಳ್ಳಲಾಗಿದೆ.



## ಉತ್ತರ ಪ್ರದೇಶದ ಮೂಲಸೌಕರ್ಯ ಕ್ರಾಂತಿ: 20 ಜಿಲ್ಲೆಗಳನ್ನು ಬೆಸೆಯುವ 2,340 ಕಿ.ಮೀ ಉದ್ದದ ಬೃಹತ್ 'ಉತ್ತರ-ದಕ್ಷಿಣ ಕಾರಿಡಾರ್'



➤ ಉತ್ತರ ಪ್ರದೇಶ ಸರ್ಕಾರವು ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲು ಮುಂದಾಗಿದೆ. ಈವರೆಗೆ ಹೆಚ್ಚಾಗಿ ಪೂರ್ವ-ಪಶ್ಚಿಮ ದಿಕ್ಕಿನ ಹೆದ್ದಾರಿಗಳಿಗೆ (ಉದಾಹರಣೆಗೆ ಎಕ್ಸ್‌ಪ್ರೆಸ್‌ವೇಗಳು) ಆದ್ಯತೆ ನೀಡಿದ್ದ ಸರ್ಕಾರ, ಇದೇ ಮೊದಲ ಬಾರಿಗೆ ರಾಜ್ಯದ 20 ಜಿಲ್ಲೆಗಳನ್ನು ಸಂಪರ್ಕಿಸುವ 2,340 ಕಿ.ಮೀ ಉದ್ದದ ಬೃಹತ್ ಉತ್ತರ-ದಕ್ಷಿಣ ಕಾರಿಡಾರ್ (North-South Corridor) ಯೋಜನೆಯನ್ನು ರೂಪಿಸಿದೆ. ಲೋಕೋಪಯೋಗಿ ಇಲಾಖೆ (PWD) ಸಿದ್ಧಪಡಿಸಿರುವ ಈ ಪ್ರಸ್ತಾವನೆಗೆ ಮುಖ್ಯಮಂತ್ರಿಗಳ ಕಚೇರಿ ಈಗಾಗಲೇ ಅನುಮೋದನೆ ನೀಡಿದ್ದು, ಒಟ್ಟು 6 ಪ್ರಮುಖ ಮಾರ್ಗಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

➤ ಉತ್ತರ ಪ್ರದೇಶದ 20 ಜಿಲ್ಲೆಗಳನ್ನು ಸಂಪರ್ಕಿಸುವ 2,340 ಕಿ.ಮೀ ಉದ್ದದ ಈ ಮೊದಲ 'ಉತ್ತರ-ದಕ್ಷಿಣ' ಕಾರಿಡಾರ್ ಯೋಜನೆಯು, ಲಿಂಕ್ ರಸ್ತೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ ಗಂಗಾ, ಪೂರ್ವಾಂಚಲ್ ಮತ್ತು ಬುಂದೇಲ್‌ಖಂಡ್ ಎಕ್ಸ್‌ಪ್ರೆಸ್ ವೇಗಳಂತಹ ಪ್ರಮುಖ ಹೆದ್ದಾರಿಗಳನ್ನು ಪರಸ್ಪರ ಜೋಡಿಸುವ ಗುರಿಯನ್ನು ಹೊಂದಿದೆ.

**➤ ಆರು ಪ್ರಮುಖ ಕಾರಿಡಾರ್‌ಗಳ ವಿವರ:**

1. ಇಕೌನಾ (ಶ್ರಾವಸ್ತಿ) - ಪ್ರಯಾಗ್‌ರಾಜ್ ಕಾರಿಡಾರ್ (262 ಕಿ.ಮೀ):-

=> ಇದು ಅಯೋಧ್ಯಾ ಮತ್ತು ಸುಲ್ತಾನ್‌ಪುರ ಮೂಲಕ ಹಾದುಹೋಗುತ್ತದೆ.

=> ಇದು ಶಾಮ್ಲಿ-ಗೋರಖ್‌ಪುರ ಹೆದ್ದಾರಿ ಮತ್ತು ಪೂರ್ವಾಂಚಲ್ ಎಕ್ಸ್‌ಪ್ರೆಸ್‌ವೇಗಳನ್ನು ಸಂಧಿಸುತ್ತದೆ.

=> ಪ್ರತಾಪ್‌ಗಢ-ಪ್ರಯಾಗ್‌ರಾಜ್ ಭಾಗವು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ಉಳಿದ ಭಾಗಗಳನ್ನು 2025-26ರ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುವುದು.

2. ಕುಶಿನಗರ - ವಾರಣಾಸಿ ಕಾರಿಡಾರ್ (220 ಕಿ.ಮೀ):-

=> ಕುಶಿನಗರ, ದೇವೂರಿಯಾ, ದೋಹ್ರಿಗಾಟ್ ಮತ್ತು ಗಾಜಿಪುರಗಳನ್ನು ಸಂಪರ್ಕಿಸುತ್ತದೆ.

=> ಗಾಜಿಪುರ-ವಾರಣಾಸಿ ರಸ್ತೆ ಈಗಾಗಲೇ ಸಿದ್ಧವಿದ್ದು, ದೇವೂರಿಯಾ ಭಾಗದ ಅಭಿವೃದ್ಧಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

3. ಪಿಪ್ರಿ (ನೇಪಾಳ ಗಡಿ) - ಪ್ರಯಾಗ್‌ರಾಜ್ ಕಾರಿಡಾರ್ (295 ಕಿ.ಮೀ): ಸಿದ್ಧಾರ್ಥನಗರದ ಬಾನ್ಸಿ ಮೂಲಕ ಸಾಗುವ ಈ ಮಾರ್ಗವು ಭಾರತ-ನೇಪಾಳ ಗಡಿಯನ್ನು ಪ್ರಯಾಗ್‌ರಾಜ್‌ಗೆ ನೇರವಾಗಿ ಸಂಪರ್ಕಿಸುತ್ತದೆ.

4. ಲಖಿಂಪುರ - ಬಂಡಾ ಕಾರಿಡಾರ್ (502 ಕಿ.ಮೀ): ಸೀತಾಪುರ, ನವಾಬ್‌ಗಂಜ್ ಮೂಲಕ ಹಾದುಹೋಗುವ ಈ ಬೃಹತ್ ರಸ್ತೆಯ ಕೆಲವು ಭಾಗಗಳು (ಉದಾ: ಲಖಿಂಪುರ-ಸೀತಾಪುರ) ಈಗಾಗಲೇ ನಾಲ್ಕು ಪಥದ ರಸ್ತೆಗಳಾಗಿವೆ.

5. ಬರೇಲಿ - ಲಲಿತ್‌ಪುರ ಕಾರಿಡಾರ್ (547 ಕಿ.ಮೀ): ಆಗ್ರಾ ಮತ್ತು ಝಾನ್ಸಿ ಮೂಲಕ ಸಾಗುವ ಈ ಮಾರ್ಗವು ಪಶ್ಚಿಮ ಯುಪಿಯನ್ನು ಬುಂದೇಲ್‌ಖಂಡ್ ಪ್ರದೇಶಕ್ಕೆ ಜೋಡಿಸುತ್ತದೆ. ಆಗ್ರಾ-ಝಾನ್ಸಿ ಭಾಗವು ಈಗಾಗಲೇ ಸುಸಜ್ಜಿತವಾಗಿದೆ.

6. ಮುಸ್ತಫಾಬಾದ್ (ಪಿಲಿಭಿತ್) - ಹರ್ಪಾಲ್‌ಪುರ ಕಾರಿಡಾರ್ (514 ಕಿ.ಮೀ): ಪಿಲಿಭಿತ್ ಟೈಗರ್ ರಿಸರ್ವ್‌ನಿಂದ ಶಹಜಹಾನ್‌ಪುರ ಮತ್ತು ಒರೈ ಮೂಲಕ ಸಾಗುವ ಈ ಮಾರ್ಗವು ಬುಂದೇಲ್‌ಖಂಡ್ ಎಕ್ಸ್‌ಪ್ರೆಸ್‌ವೇಗೆ ಸಂಪರ್ಕ ಕಲ್ಪಿಸುತ್ತದೆ.

## ಬುಡಕಟ್ಟು ವೈದ್ಯರಿಗಾಗಿ ಭಾರತದ ಮೊದಲ ರಾಷ್ಟ್ರೀಯ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ - 2026




➤ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಹೈದರಾಬಾದ್‌ನ ಕನ್ಹಾ ಶಾಂತಿ ವನದಲ್ಲಿ ಜನವರಿ 16-17, 2026 ರಂದು ಬುಡಕಟ್ಟು ವೈದ್ಯರಿಗಾಗಿ ಭಾರತದ ಮೊಟ್ಟಮೊದಲ ರಾಷ್ಟ್ರೀಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದೆ. 'ವಿಕಸಿತ ಭಾರತ'ದ ಸಂಕಲ್ಪದಂತೆ, ಬುಡಕಟ್ಟು ಪ್ರದೇಶಗಳಲ್ಲಿ ಆರೋಗ್ಯ ಸೇವೆಯನ್ನು ಕೊನೆಯ ಹಂತದ ವ್ಯಕ್ತಿಗೂ ತಲುಪಿಸುವುದು ಮತ್ತು ಸ್ಥಳೀಯ ವೈದ್ಯಕೀಯ ಜ್ಞಾನವನ್ನು ವೈಜ್ಞಾನಿಕವಾಗಿ ಬಳಸಿಕೊಳ್ಳುವುದು ಇದರ ಉದ್ದೇಶವಾಗಿದೆ. ಬುಡಕಟ್ಟು ವ್ಯವಹಾರಗಳ ಸಚಿವಾಲಯವು ICMR-ಆರ್.ಎಂ.ಆರ್.ಸಿ ಭುವನೇಶ್ವರ ಜೊತೆಗೂಡಿ ಭಾರತದ ಮೊದಲ ರಾಷ್ಟ್ರೀಯ ಬುಡಕಟ್ಟು ಆರೋಗ್ಯ ವೀಕ್ಷಣಾಲಯ (B-THO - Bharat Tribal Health Observatory) ಸ್ಥಾಪಿಸಲು ಒಪ್ಪಂದ ಮಾಡಿಕೊಂಡಿದೆ.

**➤ ಕಾರ್ಯಕ್ರಮದ ಪ್ರಮುಖ ಉದ್ದೇಶಗಳು:-**

=> ಅಧಿಕೃತ ಮಾನ್ಯತೆ: ತಲೆಮಾರುಗಳಿಂದ ಬುಡಕಟ್ಟು ಸಮುದಾಯಗಳಲ್ಲಿ ಆರೋಗ್ಯ ಸೇವೆ ನೀಡುತ್ತಿರುವ 'ಬುಡಕಟ್ಟು ವೈದ್ಯರನ್ನು' (Tribal Healers) ಭಾರತದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಅಧಿಕೃತ ಭಾಗವಾಗಿಸುವುದು.

=> ಸಮಗ್ರ ಆರೋಗ್ಯ ಸೇವೆ: ಆಧುನಿಕ ವೈದ್ಯಕೀಯ ಪದ್ಧತಿ ಮತ್ತು ಬುಡಕಟ್ಟು ಜನರ ಸಾಂಪ್ರದಾಯಿಕ ಜ್ಞಾನದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವುದು.

=> ರೋಗಗಳ ನಿರ್ಮೂಲನೆ: ಮಲೇರಿಯಾ, ಕ್ಷಯ (TB), ಕುಷ್ಠರೋಗ ಮತ್ತು ಸಿಕ್ಕಲ್ ಸೆಲ್ ಅನಿಮಿಯಾದಂತಹ ರೋಗಗಳನ್ನು ಬುಡಕಟ್ಟು ಪ್ರದೇಶಗಳಿಂದ ಸಂಪೂರ್ಣವಾಗಿ ಹೋಗಲಾಡಿಸುವುದು.

➤ ಭಾರತ್ ಟ್ರೈಬಲ್ ಹೆಲ್ತ್ ಅಬ್ಸರ್ವೇಟರಿ (B-THO): ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಪ್ರಾಜೆಕ್ಟ್ ದೃಷ್ಟಿ (Project DRISTI) ಅಡಿಯಲ್ಲಿ ICMR-RMRC ಭುವನೇಶ್ವರ ತಾಂತ್ರಿಕ ಸಹಯೋಗದೊಂದಿಗೆ, ಬುಡಕಟ್ಟು ಸಮುದಾಯಗಳ ನಿಖರ ಆರೋಗ್ಯ ದತ್ತಾಂಶ ಸಂಗ್ರಹಣೆ ಮತ್ತು ಸಂಶೋಧನೆ ಆಧಾರಿತ ಯೋಜನೆಗಳಿಗಾಗಿ ಭಾರತದ ಮೊದಲ 'ಭಾರತ್ ಟ್ರೈಬಲ್ ಹೆಲ್ತ್ ಅಬ್ಸರ್ವೇಟರಿ' (B-THO) ಸ್ಥಾಪಿಸಲು ಒಪ್ಪಂದ ಮಾಡಿಕೊಂಡಿದೆ.

➤ ಬುಡಕಟ್ಟು ವೈದ್ಯರ ಪಾತ್ರ: ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಸುಮಾರು 1 ಲಕ್ಷ ಬುಡಕಟ್ಟು ವೈದ್ಯರನ್ನು ಗುರುತಿಸಿ, ಅವರಿಗೆ ಕಾಯಿಲೆಗಳ ಆರಂಭಿಕ ಪತ್ತೆ ಹಚ್ಚುವಿಕೆ, ಸಕಾಲಿಕ ಆಸ್ಪತ್ರೆ ಶಿಫಾರಸು (Referral) ಮತ್ತು ತಡೆಗಟ್ಟುವ ಆರೋಗ್ಯ ರಕ್ಷಣೆಯ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸಲು ತರಬೇತಿ ನೀಡುವ ಗುರಿಯನ್ನು ಹೊಂದಿದೆ.

➤ ಸರ್ಕಾರಿ ಯೋಜನೆಗಳ ಸಮನ್ವಯ (Convergence): ಈ ಉಪಕ್ರಮವು ಈ ಕೆಳಗಿನ ಪ್ರಮುಖ ಯೋಜನೆಗಳೊಂದಿಗೆ ಸಂಯೋಜಿತವಾಗಿದೆ:

=> PM-JANMAN: ವಿಶೇಷವಾಗಿ ದುರ್ಬಲ ಬುಡಕಟ್ಟು ಗುಂಪುಗಳ (PVTGs) ಅಭಿವೃದ್ಧಿಗಾಗಿ.

=> DAJGUA (ಧರ್ತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ): ಬುಡಕಟ್ಟು ಗ್ರಾಮಗಳ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗೆ.

=> ರಾಷ್ಟ್ರೀಯ ಸಿಕ್ಕಲ್ ಸೆಲ್ ಅನಿಮಿಯಾ ನಿರ್ಮೂಲನಾ ಮಿಷನ್: 2047ರ ವೇಳೆಗೆ ಈ ರೋಗವನ್ನು ನಿರ್ಮೂಲನೆ ಮಾಡುವ ಗುರಿ.

➤ ಈ ಕಾರ್ಯಕ್ರಮವು ಕೇವಲ ವೈದ್ಯಕೀಯ ತರಬೇತಿಯಲ್ಲ, ಬದಲಿಗೆ ಬುಡಕಟ್ಟು ಜನರ ಪಾರಂಪರಿಕ ಜ್ಞಾನಕ್ಕೆ ಗೌರವ ನೀಡಿ, ಅವರನ್ನು ರಾಷ್ಟ್ರದ ಮುಖ್ಯವಾಹಿನಿಯ ಆರೋಗ್ಯ ವ್ಯವಸ್ಥೆಯಲ್ಲಿ ಪಾಲುದಾರರನ್ನಾಗಿ ಮಾಡುವ ಒಂದು 'ಪ್ಯಾರಾಡೈಮ್ ಶಿಫ್ಟ್' (ಮಾದರಿ ಬದಲಾವಣೆ) ಆಗಿದೆ.

## ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿಯ ಬಾನ್ಸೇರಾ ಪಾರ್ಕ್‌ನಲ್ಲಿ 3ನೇ ಅಂತರಾಷ್ಟ್ರೀಯ ಪತಂಗ ಉತ್ಸವವನ್ನು ಉದ್ಘಾಟಿಸಿದರು.



➤ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿಯ 'ಬಾನ್ಸೇರಾ ಪಾರ್ಕ್'ನಲ್ಲಿ (Baansera Park) ಶುಕ್ರವಾರದಂದು (16-01-2026) 3ನೇ ಅಂತರಾಷ್ಟ್ರೀಯ ಪತಂಗ ಉತ್ಸವವನ್ನು ಉದ್ಘಾಟಿಸಿದರು. ಈ ಉತ್ಸವವು 2026ರ ಜನವರಿ 16 ರಿಂದ ಜನವರಿ 18 ರವರೆಗೆ (ಮೂರು ದಿನಗಳ ಕಾಲ) ನಡೆಯುತ್ತದೆ. ಈ ಸಂದರ್ಭದಲ್ಲಿ ಅವರು ಭಾರತೀಯ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಪತಂಗ ಹಾರಿಸುವ ಮಹತ್ವವನ್ನು ಒತ್ತಿ ಹೇಳಿದರು. ಈ ಸಂದರ್ಭದಲ್ಲಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಮತ್ತು ಮುಖ್ಯಮಂತ್ರಿ ರೇಖಾ ಗುಪ್ತಾ ಉಪಸ್ಥಿತರಿದ್ದರು.


➤ ಅಂತರಾಷ್ಟ್ರೀಯ ಪತಂಗ ಉತ್ಸವ: "ಈ ಉತ್ಸವವು ಭಾರತ ಮತ್ತು ವಿದೇಶಗಳ ಪತಂಗಗಾರರ ಕಲಾ ಪ್ರದರ್ಶನ, ಪತಂಗಗಳ ವಿಕಾಸ ಹಾಗೂ ಯುದ್ಧಗಳಲ್ಲಿನ ಅವುಗಳ ಬಳಕೆಯ ಇತಿಹಾಸವನ್ನು ಸಾರುವ ವಿಶೇಷ ಪೆವಿಲಿಯನ್‌ಗಳು ಮತ್ತು ವಿವಿಧ ರಾಜ್ಯಗಳ ಜಾನಪದ ಕಲೆ ಹಾಗೂ ಆಹಾರ ಮಳಿಗೆಗಳನ್ನೊಳಗೊಂಡ ಸಾಂಸ್ಕೃತಿಕ ಸಂಭ್ರಮವನ್ನು ಒಳಗೊಂಡಿದೆ."

➤ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿಯನ್ನು ಪತಂಗ ಉತ್ಸವಗಳ ರಾಷ್ಟ್ರೀಯ ಹಬ್ ಆಗಿ ಅಭಿವೃದ್ಧಿಪಡಿಸಲು ಕರೆ ನೀಡಿದರು. ಕಾಳಿದಾಸನ "ಉತ್ಸವ ಪ್ರಿಯ ಜನಾಃ" ಎಂಬ ನುಡಿಗಟ್ಟನ್ನು ಉಲ್ಲೇಖಿಸಿದ ಅವರು, ಭಾರತೀಯರು ಹಬ್ಬಗಳ ಮೂಲಕ ಸಾಮಾಜಿಕ ಏಕತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ ಎಂದು ತಿಳಿಸಿದರು. ಅಲ್ಲದೆ, ಮಕರ ಸಂಕ್ರಾಂತಿಯನ್ನು ರೈತರ ಹೊಸ ವರ್ಷದ ಸಂಕೇತವೆಂದು ಬಣ್ಣಿಸಿ ಶುಭ ಹಾರೈಸಿದರು.

➤ ಅಮಿತ್ ಶಾ ಅವರು ಸ್ವಾತಂತ್ರ್ಯ ಹೋರಾಟದ ಒಂದು ಕುತೂಹಲಕಾರಿ ಸಂಗತಿಯನ್ನು ನೆನಪಿಸಿಕೊಂಡರು: ಬ್ರಿಟಿಷರ ಕಾಲದಲ್ಲಿ ಸೈಮನ್ ಕಮಿಷನ್ ವಿರುದ್ಧ ಪ್ರತಿಭಟಿಸುವಾಗ, ಭಾರತೀಯರು ಉತ್ತರಾಯಣದಂದು ಆಕಾಶಕ್ಕೆ "ಸೈಮನ್ ಗೋ ಬ್ಯಾಕ್" (Simon Go Back) ಎಂದು ಬರೆದ ಪತಂಗಗಳನ್ನು ಹಾರಿಸುವ ಮೂಲಕ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿದ್ದರು. ಇದು ಅಂದಿನ ಕಾಲದ ಬಲಿಷ್ಠ ಸಾಮೂಹಿಕ ಪ್ರತಿಭಟನೆಯಾಗಿತ್ತು.

➤ ಸೋಮನಾಥ ದೇವಾಲಯದ ಮೇಲಿನ ಮೊದಲ ದಾಳಿಗೆ 1,000 ವರ್ಷಗಳು ತುಂಬಿದ ನೆನಪಿಗಾಗಿ ಆಯೋಜಿಸಲಾದ 'ಸೋಮನಾಥ ಸ್ವಾಭಿಮಾನ ಪರ್ವ' ಬಗ್ಗೆ ಮಾತನಾಡುತ್ತಾ, "ಆಕ್ರಮಣಕಾರರು ಇತಿಹಾಸದ ಪುಟಗಳಿಂದ ಮರೆಯಾಗಿದ್ದಾರೆ, ಆದರೆ ಸೋಮನಾಥ ದೇವಾಲಯವು ಸನಾತನ ಧರ್ಮದ ಅಮರತ್ವವನ್ನು ಸಾರುತ್ತಾ ಇಂದಿಗೂ ಹೆಮ್ಮೆಯಿಂದ ನಿಂತಿದೆ" ಎಂದು ಹೇಳಿದರು.

## ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು: 'ಅನಾರಕ್ಷಿತ' (Unreserved) ಸೀಟುಗಳು ಎಲ್ಲರಿಗೂ ಮುಕ್ತ - ಅರ್ಹತೆಯೇ ಮಾನದಂಡ




➤ ಇತ್ತೀಚೆಗೆ ಸುಪ್ರೀಂ ಕೋರ್ಟ್ ಸಾಂವಿಧಾನಿಕ ಸಮಾನತೆಯನ್ನು ಎತ್ತಿಹಿಡಿಯುವ ಒಂದು ಮಹತ್ವದ ತೀರ್ಪನ್ನು ನೀಡಿದೆ. ಸಾರ್ವಜನಿಕ ಉದ್ಯೋಗ ನೇಮಕಾತಿಯಲ್ಲಿ 'ಅನಾರಕ್ಷಿತ' (Unreserved) ವರ್ಗವು ಕೇವಲ ಸಾಮಾನ್ಯ ವರ್ಗದವರಿಗೆ ಮೀಸಲಾದ ಕೋಟಾವಲ್ಲ, ಬದಲಾಗಿ ಅದು ಪ್ರತಿಭೆಯ ಆಧಾರದ ಮೇಲೆ ಎಲ್ಲರಿಗೂ ಲಭ್ಯವಿರುವ 'ಮುಕ್ತ' (Open) ವರ್ಗವಾಗಿದೆ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

➤ ತೀರ್ಪಿನ ಪ್ರಮುಖ ಅಂಶಗಳು:-

=> ಮೆರಿಟ್ ಆಧಾರಿತ ಆಯ್ಕೆ (Merit-Based Selection): ಮೀಸಲಾತಿ ವರ್ಗಕ್ಕೆ ಸೇರಿದ (SC, ST, OBC) ಅಭ್ಯರ್ಥಿಗಳು ಸಾಮಾನ್ಯ ವರ್ಗದ ಕಟ್-ಆಫ್‌ಗಿಂತ ಹೆಚ್ಚಿನ ಅಂಕಗಳನ್ನು ಗಳಿಸಿದರೆ, ಅವರನ್ನು ಅನಾರಕ್ಷಿತ (Unreserved) ಸೀಟುಗಳಲ್ಲೇ ಪರಿಗಣಿಸಬೇಕು.

=> ಮೆರಿಟ್ ಇಂಡ್ಯೂಸ್ಡ್ ಶಿಫ್ಟ್ (Merit Induced Shift): ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರು ವಿವರಿಸಿದಂತೆ, ಮೀಸಲಾತಿ ವರ್ಗದ ಅಭ್ಯರ್ಥಿಯು ವಯೋಮಿತಿ ಸಡಿಲಿಕೆ ಅಥವಾ ಶುಲ್ಕ ವಿನಾಯಿತಿಯಂತಹ ಯಾವುದೇ ಸೌಲಭ್ಯಗಳನ್ನು ಪಡೆಯದೆ, ಸಾಮಾನ್ಯ ಅಭ್ಯರ್ಥಿಯಷ್ಟೇ ಮಾನದಂಡಗಳಲ್ಲಿ ತೇರ್ಗಡೆಯಾದರೆ, ಅವರನ್ನು 'ಓಪನ್' ಅಭ್ಯರ್ಥಿ ಎಂದೇ ಪರಿಗಣಿಸುವುದು ಕಡ್ಡಾಯ.

=> ಮೀಸಲಾತಿಯ ಉದ್ದೇಶ: ಹೀಗೆ ಮಾಡುವುದರಿಂದ ಮೀಸಲಾತಿ ಅಡಿಯಲ್ಲಿರುವ ಸೀಟುಗಳು ಆಯಾ ವರ್ಗದ ಮುಂದಿನ ಅರ್ಹ ಅಭ್ಯರ್ಥಿಗಳಿಗೆ ಲಭ್ಯವಾಗುತ್ತವೆ. ಇದು ಸಾಮಾಜಿಕ ನ್ಯಾಯ ಮತ್ತು ಪ್ರತಿಭೆ (Meritocracy) ಎರಡನ್ನೂ ಸಮತೋಲನಗೊಳಿಸುತ್ತದೆ.

➤ 2013 ರಲ್ಲಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (AAI) ನಡೆಸಿದ ಜೂನಿಯರ್ ಅಸಿಸ್ಟೆಂಟ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಈ ವಿವಾದ ಉಂಟಾಗಿತ್ತು. ಹೆಚ್ಚು ಅಂಕ ಗಳಿಸಿದ ಮೀಸಲಾತಿ ಅಭ್ಯರ್ಥಿಗಳನ್ನು ಅನ್-ರಿಸರ್ವ್ಡ್ ಸೀಟುಗಳಲ್ಲಿ ನೇಮಕ ಮಾಡಿದ್ದನ್ನು ಕೇರಳ ಹೈಕೋರ್ಟ್ ಈ ಹಿಂದೆ ಪ್ರಶ್ನಿಸಿತ್ತು. ಈಗ ಸುಪ್ರೀಂ ಕೋರ್ಟ್ ಹೈಕೋರ್ಟ್‌ನ ಆ ತೀರ್ಪನ್ನು ರದ್ದುಗೊಳಿಸಿ, ಸಂವಿಧಾನದ ವಿಧಿ 14 (ಸಮಾನತೆಯ ಹಕ್ಕು) ಮತ್ತು ವಿಧಿ 16 (ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ) ರ ಅಡಿಯಲ್ಲಿ ಈ ತೀರ್ಪು ನೀಡಿದೆ.

➤ ಅನಾರಕ್ಷಿತ ವರ್ಗ ಎಂದರೆ ಅದು 'ಸಾಮಾನ್ಯ ವರ್ಗದ ಕೋಟಾ' ಅಲ್ಲ, ಬದಲಾಗಿ ಅದು ಹೆಚ್ಚು ಅಂಕ ಗಳಿಸಿದ ಯಾವುದೇ ಅಭ್ಯರ್ಥಿ ಪಡೆಯಬಹುದಾದ 'ಓಪನ್ ಪೂಲ್' ಎಂಬ ಗೊಂದಲಕ್ಕೆ ಈಗ ತೆರೆ ಬಿದ್ದಿದೆ.

## ವಿಶ್ವದ ಅತ್ಯಂತ ಹಳೆಯ ನದಿ: ಆಸ್ಟ್ರೇಲಿಯಾದ 'ಫಿಂಕೆ ನದಿ'



➤ ಇತ್ತೀಚಿನ ಭೌಗೋಳಿಕ ಪುರಾವೆಗಳ ಪ್ರಕಾರ ಆಸ್ಟ್ರೇಲಿಯಾದ ಫಿಂಕೆ ನದಿ ಸುಮಾರು 30 ರಿಂದ 40 ಕೋಟಿ ವರ್ಷಗಳಷ್ಟು ಹಳೆಯದಾಗಿದ್ದು, ಭೂಮಿಯ ಮೇಲೆ ಹರಿಯುತ್ತಿರುವ ಅತ್ಯಂತ ಹಳೆಯ ನದಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ತಾಂತ್ರಿಕ ಪದಆಂಟಿಸಿಡೆಂಟ್ ಡ್ರೈನೇಜ್ (Antecedent Drainage) ಆಸ್ಟ್ರೇಲಿಯಾದ ಒಣ ಭೂಭಾಗದಲ್ಲಿ ಹರಿಯುವ ಈ ನದಿಯನ್ನು ಸ್ಥಳೀಯ ಬುಡಕಟ್ಟು ಭಾಷೆಯಲ್ಲಿ 'ಲಾರಾಪಿಂಟಾ' ಎಂದು ಕರೆಯಲಾಗುತ್ತದೆ. ಇದರ ಅರ್ಥ "ಉಪ್ಪುನೀರಿನ ನದಿ" ಎಂದಾಗುತ್ತದೆ. ಇದು ತನ್ನ ವಿಶಿಷ್ಟ ಭೌಗೋಳಿಕ ಗುಣಲಕ್ಷಣಗಳಿಂದಾಗಿ ವಿಜ್ಞಾನಿಗಳ ಕುತೂಹಲಕ್ಕೆ ಕಾರಣವಾಗಿದೆ.

➤ ಈ ನದಿಯ ವಿಶೇಷತೆಗಳು:-

=> ಪರ್ವತಗಳನ್ನು ಸೀಳುವ ಹರಿವು: ಈ ನದಿಯು ಮ್ಯಾಕ್‌ಡೊನೆಲ್ ಪರ್ವತ ಶ್ರೇಣಿಗಳ (MacDonnell Ranges) ಸುತ್ತ ಬಳುಕುವ ಬದಲು, ನೇರವಾಗಿ ಪರ್ವತಗಳ ನಡುವೆಯೇ ಕಣಿವೆಯನ್ನು ನಿರ್ಮಿಸಿ ಹರಿಯುತ್ತದೆ. ಭೂವಿಜ್ಞಾನದಲ್ಲಿ ಇದನ್ನು 'ಪೂರ್ವಜ ನದಿ' (Antecedent River) ಎಂದು ಕರೆಯುತ್ತಾರೆ. ಪರ್ವತಗಳು ರೂಪುಗೊಳ್ಳುವ ಮೊದಲೇ ಈ ನದಿ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಇದು ಪ್ರಬಲ ಸಾಕ್ಷಿಯಾಗಿದೆ.

=> ಅಂತರಾಳದ ಹರಿವು (Intermittent Flow): ಈ ನದಿ ವರ್ಷಪೂರ್ತಿ ಹರಿಯುವುದಿಲ್ಲ. ಮಳೆಗಾಲದಲ್ಲಿ ಮಾತ್ರ ಪೂರ್ಣ ಪ್ರಮಾಣದಲ್ಲಿ ತುಂಬಿ ಹರಿಯುತ್ತದೆ. ಉಳಿದ ಸಮಯದಲ್ಲಿ ಇದು ಮರುಭೂಮಿಯಾದ್ಯಂತ ಹರಡಿರುವ ಸಣ್ಣ ಸಣ್ಣ ಜಲಮೂಲಗಳಂತೆ (Waterholes) ಕಾಣಿಸಿಕೊಳ್ಳುತ್ತದೆ.

=> ಡೆವೊನಿಯನ್ ಯುಗ: ಇದರ ಉಗಮವು ಭೂಮಿಯ ಇತಿಹಾಸದ 'ಡೆವೊನಿಯನ್' (Devonian Period) ಕಾಲಕ್ಕೆ ಸೇರಿದ್ದೆಂದು ಅಂದಾಜಿಸಲಾಗಿದೆ. ಅಂದರೆ, ಅಟ್ಲಾಂಟಿಕ್ ಮಹಾಸಾಗರ ಸೃಷ್ಟಿಯಾಗುವ ಮೊದಲೇ ಈ ನದಿ ಹರಿಯಲು ಆರಂಭಿಸಿತ್ತು.

➤ ನದಿಯ ಸ್ವರೂಪ: ಇದೊಂದು ಅಲ್ಪಕಾಲಿಕ ನದಿ (Ephemeral River). ಅಂದರೆ ಇದು ವರ್ಷಪೂರ್ತಿ ಹರಿಯುವ ನದಿಯಲ್ಲಮಳೆಯಿಲ್ಲದ ಸಮಯದಲ್ಲಿ ಇದು ಮರುಭೂಮಿಯ ಉದ್ದಕ್ಕೂ ಅಲ್ಲಲ್ಲಿ ನೀರಿನ ಗುಂಡಿಗಳಂತೆ (Waterholes) ಕಾಣುತ್ತದೆ. ಈ ಗುಂಡಿಗಳು ಮರುಭೂಮಿಯ ವನ್ಯಜೀವಿಗಳಿಗೆ ಆಸರೆಯಾಗಿವೆ.

## ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ 2025: ಕೊಡಗಿನ 'ಜಮ್ಮಾ ಬಾನೆ' ಜಮೀನು ದಾಖಲೆಗಳ ಸುಧಾರಣೆ




➤ ಕರ್ನಾಟಕ ಸರ್ಕಾರವು ಕೊಡಗು ಜಿಲ್ಲೆಯ ವಿಶಿಷ್ಟ ಭೂ ಹಿಡುವಳಿ ಪದ್ಧತಿಯಾದ 'ಜಮ್ಮಾ ಬಾನೆ' (Jamma Bane) ಜಮೀನು ದಾಖಲೆಗಳಲ್ಲಿನ ದೋಷಗಳನ್ನು ಸರಿಪಡಿಸಲು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಕಾಯ್ದೆ 2025 ಅನ್ನು ಜಾರಿಗೆ ತಂದಿದೆ. ಈ ತಿದ್ದುಪಡಿ ಕಾಯ್ದೆಗೆ ಜನವರಿ 7, 2026 ರಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಅಂಕಿತ ಹಾಕಿದ್ದಾರೆ.

➤ ಜಮ್ಮಾ ಬಾನೆ ಎನ್ನುವುದು ಕೊಡಗು ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಒಂದು ವಿಶಿಷ್ಟ ಅನುವಂಶಿಕ ಭೂ ಹಿಡುವಳಿ ಪದ್ಧತಿಯಾಗಿದೆ. 17 ರಿಂದ 19 ನೇ ಶತಮಾನದ ಅವಧಿಯಲ್ಲಿ ಕೊಡಗಿನ ಅರಸರು ಮತ್ತು ನಂತರ ಬ್ರಿಟಿಷರು, ಸೈನಿಕ ಸೇವೆಯನ್ನು ಪರಿಗಣಿಸಿ ಅಲ್ಲಿನ ನಿವಾಸಿಗಳಿಗೆ ಈ ಜಮೀನುಗಳನ್ನು ನೀಡಿದ್ದರು. ಇದು ಮುಖ್ಯವಾಗಿ ಭತ್ತದ ಗದ್ದೆಗಳು ಮತ್ತು

ಕಾಡುಗಳಿಂದ ಕೂಡಿದ ಎತ್ತರದ ಪ್ರದೇಶಗಳನ್ನು ಒಳಗೊಂಡಿದೆ. ಇವುಗಳಲ್ಲಿ ಹೆಚ್ಚಿನವು ಇಂದು ಕಾಫಿ ತೋಟಗಳಾಗಿ ಮಾರ್ಪಟ್ಟಿವೆ.

➤ ಈ ತಿದ್ದುಪಡಿಯು ಕೊಡಗು ಜಿಲ್ಲೆಯ ತಹಶೀಲ್ದಾರ್‌ಗಳಿಗೆ 'ಜಮ್ಮಾ ಬಾನೆ' ಜಮೀನಿನ ಹಳೆಯ ದಾಖಲೆಗಳನ್ನು ಸರಿಪಡಿಸಲು ಕಾನೂನುಬದ್ಧ ಅಧಿಕಾರ ನೀಡುವ ಮೂಲಕ ಭೂ ಮಾಲೀಕತ್ವದ ಗೊಂದಲಗಳನ್ನು ನಿವಾರಿಸಿ, ಕಂದಾಯ ವ್ಯವಸ್ಥೆಯನ್ನು ಆಧುನೀಕರಿಸುವ ಗುರಿ ಹೊಂದಿದೆ.

➤ ತಿದ್ದುಪಡಿಯ ಅಗತ್ಯ:-

=> ದಾಖಲೆಗಳಲ್ಲಿನ ವ್ಯತ್ಯಾಸ: ತಲೆಮಾರುಗಳು ಕಳೆದರೂ ಭೂ ದಾಖಲೆಗಳಲ್ಲಿ (RTC) ಮೂಲ ಮಾಲೀಕರ (ಪಟ್ಟೇದಾರರ) ಹೆಸರೇ ಮುಂದುವರಿಯುತ್ತಿತ್ತು. ಇದು ಉತ್ತರಾಧಿಕಾರ ಮತ್ತು ಮಾಲೀಕತ್ವದ ಹಕ್ಕುಗಳನ್ನು ಸಾಬೀತುಪಡಿಸಲು ಅಡ್ಡಿಯಾಗಿತ್ತು.

=> ಆರ್ಥಿಕ ಅಡೆತಡೆಗಳು: ಜಮೀನು ದಾಖಲೆಗಳು ಸರಿಯಾಗಿ ಇಲ್ಲದ ಕಾರಣ ಬ್ಯಾಂಕ್ ಸಾಲ ಪಡೆಯಲು, ಜಮೀನು ಮಾರಾಟ ಮಾಡಲು ಮತ್ತು ನೋಂದಣಿ ಪ್ರಕ್ರಿಯೆಗಳಲ್ಲಿ ರೈತರು ತೊಂದರೆ ಅನುಭವಿಸುತ್ತಿದ್ದರು.

=> ಕಾನೂನು ಸಂಘರ್ಷ: 1964 ರ ಕರ್ನಾಟಕ ಭೂ ಕಂದಾಯ ಕಾಯ್ದೆ ಜಾರಿಗೆ ಬಂದಿದ್ದರೂ, ಕೊಡಗಿನ ಹಳೆಯ ಪದ್ಧತಿಯಿಂದಾಗಿ ದಾಖಲೆಗಳಲ್ಲಿ ಗೊಂದಲ ಮುಂದುವರಿದಿತ್ತು.

➤ ಕಾಯ್ದೆಯ ಪ್ರಮುಖ ಬದಲಾವಣೆಗಳು ಮತ್ತು ಪ್ರಯೋಜನಗಳು:-

=> ತಹಶೀಲ್ದಾರ್‌ಗಳಿಗೆ ಅಧಿಕಾರ: ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಸೆಕ್ಷನ್ 127 ಕ್ಕೆ ಹೊಸ ಉಪ-ವಿಭಾಗವನ್ನು ಸೇರಿಸಲಾಗಿದೆ. ಇದರ ಅನ್ವಯ, ತಹಶೀಲ್ದಾರ್‌ಗಳು ಸೂಕ್ತ ವಿಚಾರಣೆ ನಡೆಸಿ ಹಳೆಯ ದಾಖಲೆಗಳನ್ನು ಸರಿಪಡಿಸಬಹುದು.

=> ಭೂಮಿ (Bhoomi) ಯೋಜನೆಗೆ ಪೂರಕ: ಈ ತಿದ್ದುಪಡಿಯು ರಾಜ್ಯದ ಭೂ ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆಗೆ ಹೆಚ್ಚಿನ ವೇಗ ನೀಡಲಿದೆ.

=> ಅಪೀಲು ಸಲ್ಲಿಸುವ ಅವಕಾಶ: ಕಂದಾಯ ಅಧಿಕಾರಿಗಳ ನಿರ್ಧಾರದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಇದು ಪಾರದರ್ಶಕತೆಯನ್ನು ಖಚಿತಪಡಿಸುತ್ತದೆ.

=> ಸಾಮಾಜಿಕ ಪರಿಣಾಮ: ಕೊಡಗಿನ ಮೂಲ ನಿವಾಸಿಗಳಿಗೆ ತಮ್ಮ ಭೂಮಿಯ ಮೇಲೆ ಕಾನೂನುಬದ್ಧ ಹಕ್ಕು ದೊರೆಯಲಿದ್ದು, ದೀರ್ಘಕಾಲದ ಭೂ ವಿವಾದಗಳು ಇತ್ಯರ್ಥವಾಗಲಿವೆ.

➤ ಈ ಐತಿಹಾಸಿಕ ತಿದ್ದುಪಡಿಯು ಕೊಡಗು ಜಿಲ್ಲೆಯ ಭೂ ಆಡಳಿತವನ್ನು ಆಧುನೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಇದು ಕೇವಲ ದಾಖಲೆಗಳ ತಿದ್ದುಪಡಿಯಲ್ಲದೆ, ಅಲ್ಲಿನ ರೈತ ಸಮುದಾಯದ ಆರ್ಥಿಕ ಸಬಲೀಕರಣಕ್ಕೆ ನಾಂದಿ ಹಾಡಲಿದೆ.

## 19 Jan 2026

## ಮಹಿಳಾ ಉದ್ಯಮಿಗಳಿಗಾಗಿ ರಾಜ್ಯದ ಮೊದಲ ಅಧಿಕೃತ ಇ-ಕಾಮರ್ಸ್ ಪೋರ್ಟಲ್ 'ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್' ಬಿಡುಗಡೆ



➤ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ರಾಜ್ಯದ ಮಹಿಳಾ ಉದ್ಯಮಿಗಳ ಆರ್ಥಿಕ ಸ್ವಾತಂತ್ರ್ಯ ಮತ್ತು ಡಿಜಿಟಲ್ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ 'ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್' (Gruha Lakshmi Digital Marketing) ಎಂಬ ವಿನೂತನ ಇ-ಕಾಮರ್ಸ್ ಪೋರ್ಟಲ್ ಅನ್ನು ಬಿಡುಗಡೆ ಮಾಡಿದೆ.

➤ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ನೇತೃತ್ವ ಹಾಗೂ ಜಿ. ಪದ್ಮಾವತಿ ಅವರ ಅಧ್ಯಕ್ಷತೆಯಲ್ಲಿ, ರಾಜ್ಯದ ಮಹಿಳಾ ಉದ್ಯಮಿಗಳ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

➤ ಪೋರ್ಟಲ್‌ನ ಪ್ರಮುಖ ಉದ್ದೇಶಗಳು:-

=> ಆರ್ಥಿಕ ಸ್ವಾವಲಂಬನೆ: ಮಹಿಳಾ ಉದ್ಯಮಿಗಳು ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರವಾಗಿ ಗ್ರಾಹಕರನ್ನು ತಲುಪುವಂತೆ ಮಾಡುವುದು.

=> ಡಿಜಿಟಲ್ ಒಳಗೊಳ್ಳುವಿಕೆ: ತಾಂತ್ರಿಕವಾಗಿ ಹಿಂದುಳಿದಿರುವ ಗ್ರಾಮೀಣ ಮಹಿಳಾ ಕುಶಲಕರ್ಮಿಗಳಿಗೆ ಆಧುನಿಕ ಇ-ಕಾಮರ್ಸ್ ಜಗತ್ತಿನ ಪರಿಚಯ ಮಾಡಿಕೊಡುವುದು.

=> ಜಾಗತಿಕ ಮಾನ್ಯತೆ: ಕರ್ನಾಟಕದ ವಿಶಿಷ್ಟ ಕಲೆ, ಕರಕುಶಲ ಮತ್ತು ಸ್ಥಳೀಯ ಉತ್ಪನ್ನಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ರ್ಯಾಂಡಿಂಗ್ ಒದಗಿಸುವುದು.

**➤ ಪೋರ್ಟಲ್‌ನ ಪ್ರಮುಖ ವೈಶಿಷ್ಟ್ಯಗಳು:-**

=> ಜಾಗತಿಕ ವೇದಿಕೆ: gruhalakshmidigital.org ಪೋರ್ಟಲ್ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳಾ ಕುಶಲಕರ್ಮಿಗಳ ಉತ್ಪನ್ನಗಳಿಗೆ ಅಂತರಾಷ್ಟ್ರೀಯ ಮಾರುಕಟ್ಟೆ ಒದಗಿಸುವುದು.

=> ವೈವಿಧ್ಯಮಯ ಉತ್ಪನ್ನಗಳು: ಕರಕುಶಲ ವಸ್ತುಗಳು, ಕೈಮಗ್ಗ, ಆಹಾರ ಪದಾರ್ಥಗಳು ಸೇರಿದಂತೆ ವಿವಿಧ ಉತ್ಪನ್ನಗಳ ಪ್ರದರ್ಶನ.

=> ದೃಢೀಕೃತ ಉದ್ಯಮಿಗಳು: ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವ ಉದ್ಯಮಿಗಳನ್ನು ಸರ್ಕಾರವು ಪರಿಶೀಲಿಸಿ, ಅಧಿಕೃತತೆಗೆ ಆದ್ಯತೆ ನೀಡುತ್ತದೆ.

=> ಗ್ರಾಹಕ ಸ್ನೇಹಿ ವಿನ್ಯಾಸ: ಸುಲಭವಾಗಿ ಶಾಪಿಂಗ್ ಮಾಡಲು ಪೂರಕವಾದ ತಾಂತ್ರಿಕ ವ್ಯವಸ್ಥೆ.

➤ ನೋಂದಣಿ ಪ್ರಕ್ರಿಯೆ:- ಅರ್ಹ ಮಹಿಳಾ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಈ ವೇದಿಕೆಯಲ್ಲಿ ನೋಂದಾಯಿಸಲು ಮೂರು ಮಾರ್ಗಗಳಿವೆ:

1. ಆನ್‌ಲೈನ್: ನೇರವಾಗಿ gruhalakshmidigital.org ವೆಬ್‌ಸೈಟ್ ಮೂಲಕ.
2. ಜಿಲ್ಲಾ ಮಟ್ಟದಲ್ಲಿ: ಆಯಾ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಅಧಿಕಾರಿಗಳನ್ನು ಸಂಪರ್ಕಿಸುವ ಮೂಲಕ.
3. ಕೇಂದ್ರ ಕಚೇರಿ: ಬೆಂಗಳೂರಿನ ಇಲಾಖಾ ಮುಖ್ಯ ಕಚೇರಿಗೆ ಭೇಟಿ ನೀಡುವ ಮೂಲಕ.

➤ ಈ ಉಪಕ್ರಮವು ಕರ್ನಾಟಕದ ಮಹಿಳೆಯರನ್ನು ಕೇವಲ ಉತ್ಪಾದಕರನ್ನಾಗಿ ಮಾತ್ರವಲ್ಲದೆ, ಯಶಸ್ವಿ ಡಿಜಿಟಲ್ ಉದ್ಯಮಿಗಳನ್ನಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

## ವಾಯುಪಡೆಯ ಆಧುನೀಕರಣ: 114 ರಫೇಲ್ ವಿಮಾನಗಳ ಖರೀದಿಗೆ DPB ಅನುಮೋದನೆ.




➤ ಭಾರತೀಯ ವಾಯುಪಡೆಯ (IAF) ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಒಂದು ಮಹತ್ವದ ಹೆಜ್ಜೆ ಇಟ್ಟಿದೆ. ಸುಮಾರು 36 ಬಿಲಿಯನ್ ಡಾಲರ್ (ಅಂದಾಜು ₹3.25 ಲಕ್ಷ ಕೋಟಿ) ವೆಚ್ಚದಲ್ಲಿ 114 ರಫೇಲ್ ಮಲ್ಟಿರೋಲ್ ಯುದ್ಧ ವಿಮಾನಗಳನ್ನು ಖರೀದಿಸುವ ಪ್ರಸ್ತಾವನೆಗೆ ರಕ್ಷಣಾ ಖರೀದಿ ಮಂಡಳಿಯು (DPB) ಪ್ರಾಥಮಿಕ ಅನುಮೋದನೆ ನೀಡಿದೆ.

➤ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ನೇತೃತ್ವದ ಮಂಡಳಿಯು ಜನವರಿ 16 ರಂದು ಈ ಮೆಗಾ ಡೀಲ್‌ಗೆ ಹಸಿರು ನಿಶಾನೆ ತೋರಿಸಿದೆ. ಈ ಪ್ರಸ್ತಾವನೆಯು ಈಗ ರಕ್ಷಣಾ ಸಚಿವ

ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ (DAC) ಮತ್ತು ಅಂತಿಮವಾಗಿ ಪ್ರಧಾನಿ ಮೋದಿಯವರ ನೇತೃತ್ವದ ಕ್ಯಾಬಿನೆಟ್ ಭದ್ರತಾ ಸಮಿತಿ (CCS) ಮುಂದೆ ಹೋಗಲಿದೆ.

➤ ಒಟ್ಟು 114 ವಿಮಾನಗಳಲ್ಲಿ, 12 ರಿಂದ 18 ವಿಮಾನಗಳು ನೇರವಾಗಿ ಫ್ರಾನ್ಸ್‌ನಿಂದ ಸಿದ್ಧ ಸ್ಥಿತಿಯಲ್ಲಿ (Fly-away condition) ಬರಲಿವೆ. ಉಳಿದ ವಿಮಾನಗಳನ್ನು 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ಭಾರತದಲ್ಲೇ ತಯಾರಿಸಲಾಗುತ್ತದೆ. ಮಹಾರಾಷ್ಟ್ರದ ನಾಗ್ಪುರದಲ್ಲಿ ಡಸಾಲ್ಟ್ ಏವಿಯೇಷನ್‌ನ ಅಂತಿಮ ಜೋಡಣಾ ಘಟಕ (Assembly Line) ಸ್ಥಾಪನೆಯಾಗುವ ಸಾಧ್ಯತೆಯಿದೆ. ಟಾಟಾ, ಮಹೀಂದ್ರಾ ಮತ್ತು ಡೈನಾಮ್ಯಾಟಿಕ್ ಟೆಕ್ನಾಲಜೀಸ್‌ನಂತಹ ಭಾರತೀಯ ಕಂಪನಿಗಳು ಇದರಲ್ಲಿ ಪಾಲ್ಗೊಳ್ಳಲಿವೆ. ಈ ವಿಮಾನಗಳಲ್ಲಿ ಭಾರತೀಯ ನಿರ್ಮಿತ ಶಸ್ತ್ರಾಸ್ತ್ರಗಳು ಮತ್ತು ಎಲೆಕ್ಟ್ರಾನಿಕ್ ವ್ಯವಸ್ಥೆಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ.

➤ ಈ ಒಪ್ಪಂದದ ಪ್ರಾಮುಖ್ಯತೆ :

=> ವಾಯುಪಡೆಯ ಬಲವರ್ಧನೆ: ಪ್ರಸ್ತುತ ಭಾರತೀಯ ವಾಯುಪಡೆಯು 29 ಸ್ಕ್ವಾಡ್ರನ್‌ಗಳನ್ನು ಹೊಂದಿದ್ದು, ಅಧಿಕೃತ ಸಾಮರ್ಥ್ಯವಾದ 42 ಕ್ಕಿಂತ ಕಡಿಮೆ ಇದೆ. ಈ ಒಪ್ಪಂದವು ಈ ಕೊರತೆಯನ್ನು ನೀಗಿಸಲು ಸಹಕಾರಿ.

=> ರಫೇಲ್ ಸಂಖ್ಯೆ ಹೆಚ್ಚಳ: ಈ ಒಪ್ಪಂದ ಪೂರ್ಣಗೊಂಡರೆ ಭಾರತದ ಬಳಿ ಒಟ್ಟು ರಫೇಲ್ ವಿಮಾನಗಳ ಸಂಖ್ಯೆ 176 ಕ್ಕೆ ಏರಲಿದೆ (ಈಗಾಗಲೇ ಇರುವ 36 ವಾಯುಪಡೆ ಜೆಟ್ + ನೌಕಾಪಡೆಗೆ ಆರ್ಡರ್ ಮಾಡಲಾದ 26 ಜೆಟ್ ಸೇರಿದಂತೆ).

=> ಉದ್ಯೋಗ ಮತ್ತು ತಂತ್ರಜ್ಞಾನ: ಹೈದರಾಬಾದ್‌ನಲ್ಲಿ ಇಂಜಿನ್ ನಿರ್ವಹಣಾ ಕೇಂದ್ರ (MRO) ಮತ್ತು ನಾಗ್ಪುರದಲ್ಲಿ ಉತ್ಪಾದನಾ ಘಟಕ ಸ್ಥಾಪನೆಯಾಗುವುದರಿಂದ ರಕ್ಷಣಾ ಕ್ಷೇತ್ರದಲ್ಲಿ ಭಾರತವು ಸ್ವಾವಲಂಬನೆಯತ್ತ ಸಾಗಲಿದೆ.

➤ ಫೆಬ್ರವರಿ ತಿಂಗಳಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರ ಭಾರತ ಭೇಟಿಯ ಸಂದರ್ಭದಲ್ಲಿ ಅಧಿಕೃತ ಪ್ರಕಟಣೆ ಹೊರಬೀಳುವ ಸಾಧ್ಯತೆಯಿದ್ದು, 2026 ರ ಅಂತ್ಯದ ವೇಳೆಗೆ ಒಪ್ಪಂದ ಅಂತಿಮಗೊಳ್ಳಬಹುದು.

## ದೇಶದ ಮೊದಲ 'ವಂದೇ ಭಾರತ್ ಸ್ಲೀಪರ್' ರೈಲಿಗೆ ಪ್ರಧಾನಿ ಮೋದಿ ಚಾಲನೆ



➤ ಭಾರತೀಯ ರೈಲ್ವೆಯ ಆಧುನೀಕರಣದ ಭಾಗವಾಗಿ, ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 17, 2025 ರಂದು ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ರೈಲಿಗೆ ಚಾಲನೆ ನೀಡಿದರು. ಪಶ್ಚಿಮ ಬಂಗಾಳದ ಹೌರಾ ಮತ್ತು ಅಸ್ಸಾಂನ ಗುವಾಹಟಿ (ಕಾಮಾಖ್ಯ) ನಡುವೆ ಸಂಚರಿಸುವ ಈ ರೈಲು, ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆಯನ್ನು ಹೊಂದಿದ್ದು, ಪ್ರಯಾಣಿಕರಿಗೆ ಕಡಿಮೆ ವೆಚ್ಚದಲ್ಲಿ ವಿಮಾನದಂತಹ ಸೌಕರ್ಯಗಳನ್ನು ಒದಗಿಸುತ್ತದೆ. ಸುಮಾರು 14 ಗಂಟೆಗಳ ಪ್ರಯಾಣದಲ್ಲಿ ಹಳೆಯ ರೈಲುಗಳಿಗಿಂತ 2.5 ಗಂಟೆಗಳ ಕಾಲ ಸಮಯ ಉಳಿತಾಯ ಮಾಡುವ ಈ ಸೇವೆಯು, ಬಂಗಾಳದ ಕಾಳಿ ಮತ್ತು ಅಸ್ಸಾಂನ ಕಾಮಾಖ್ಯ ದೇಗುಲಗಳನ್ನು ಬೆಸೆಯುವ ಧಾರ್ಮಿಕ ಹಾಗೂ ಪ್ರವಾಸೋದ್ಯಮದ ಕೊಂಡಿಯಾಗಿದೆ.

**➤ ಇತರ ಪ್ರಮುಖ ರೈಲುಗಳ ಉದ್ಘಾಟನೆ: ಇದೇ ಸಂದರ್ಭದಲ್ಲಿ ಪ್ರಧಾನಿಯವರು ಪಶ್ಚಿಮ ಬಂಗಾಳದಿಂದ ವಿವಿಧ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ 4 ಹೊಸ ಅಮೃತ್ ಭಾರತ್ (Amrit Bharat) ರೈಲುಗಳಿಗೆ ಚಾಲನೆ ನೀಡಿದರು:**

=> ನ್ಯೂ ಜಲ್ಪೈಗುರಿ - ನಾಗರ್‌ಕೋಯಿಲ್ ಅಮೃತ್ ಭಾರತ್ ಎಕ್ಸ್ ಪ್ರೆಸ್.

=> ನ್ಯೂ ಜಲ್ಪೈಗುರಿ - ತಿರುಚಿರಾಪಳ್ಳಿ ಅಮೃತ್ ಭಾರತ್ ಎಕ್ಸ್ ಪ್ರೆಸ್.

=> ಅಲಿಪುರ್ದುವಾರ್ - ಬೆಂಗಳೂರು (SMVT) ಅಮೃತ್ ಭಾರತ್ ಎಕ್ಸ್‌ಪ್ರೆಸ್.

=> ಅಲಿಪುರ್ದುವಾರ್ - ಮುಂಬೈ (ಪನ್ವೇಲ್) ಅಮೃತ್ ಭಾರತ್ ಎಕ್ಸ್‌ಪ್ರೆಸ್.

➤ ಅಭಿವೃದ್ಧಿ ಯೋಜನೆಗಳು:

=> ಸುಮಾರು 3,250 ಕೋಟಿ ರೂ. ವೆಚ್ಚದ ವಿವಿಧ ರೈಲು ಮತ್ತು ರಸ್ತೆ ಮೂಲಸೌಕರ್ಯ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

=> ಬಾಲೂರ್‌ಘಾಟ್ ಮತ್ತು ಹಿಲಿ ನಡುವೆ ಹೊಸ ರೈಲು ಮಾರ್ಗ ಹಾಗೂ 'ನೆಕ್ಸ್ಟ್ ಜನರೇಷನ್ ಫ್ರೈಟ್ ಮೇಂಟೆನೆನ್ಸ್' (Next Generation Freight Maintenance) ಸೌಲಭ್ಯಗಳನ್ನು ಸ್ಥಾಪಿಸಲಾಗುತ್ತಿದೆ. ಇದು ಸರಕು ಸಾಗಣೆ ರೈಲುಗಳ ನಿರ್ವಹಣೆಯನ್ನು ವೇಗಗೊಳಿಸುತ್ತದೆ.

➤ ವಂದೇ ಭಾರತ್ ರೈಲುಗಳು ಸಂಪೂರ್ಣವಾಗಿ ಭಾರತದಲ್ಲೇ ತಯಾರಾಗುತ್ತಿದ್ದು, ವಿದೇಶಿ ಪ್ರವಾಸಿಗರ ಗಮನ ಸೆಳೆಯುತ್ತಿವೆ ಎಂದು ಪ್ರಧಾನಿ ಹೆಮ್ಮೆಯಿಂದ ತಿಳಿಸಿದರು. ದೇಶಾದ್ಯಂತ ಇದುವರೆಗೆ 150 ವಂದೇ ಭಾರತ್ ರೈಲುಗಳು ಕಾರ್ಯಾಚರಣೆ ನಡೆಸುತ್ತಿದ್ದು, ಇದು ಭಾರತೀಯ ರೈಲ್ವೆಯ ವೇಗ ಮತ್ತು ಆಧುನಿಕತೆಯ ಸಂಕೇತವಾಗಿದೆ. ರೈಲಿನಲ್ಲಿ ಅಸ್ಸಾಂ ಮತ್ತು ಬಂಗಾಳದ ಸ್ಥಳೀಯ ಖಾದ್ಯಗಳನ್ನು (Local Cuisine) ಪರಿಚಯಿಸುವ ಮೂಲಕ ಪ್ರಾದೇಶಿಕ ಸಂಸ್ಕೃತಿಗೆ ಬೆಂಬಲ ನೀಡಲಾಗುತ್ತಿದೆ.

## 77ನೇ ಗಣರಾಜ್ಯೋತ್ಸವ: ಯುರೋಪಿಯನ್ ಒಕ್ಕೂಟದ (EU) ಗಣ್ಯರು ಮುಖ್ಯ ಅತಿಥಿಗಳು;



➤ ನವದೆಹಲಿ: ಭಾರತವು ತನ್ನ 77ನೇ ಗಣರಾಜ್ಯೋತ್ಸವವನ್ನು 2026ರ ಜನವರಿ 26ರಂದು ಅತ್ಯಂತ ಸಂಭ್ರಮದಿಂದ ಆಚರಿಸಲು ಸಜ್ಜಾಗಿದೆ. ರಾಷ್ಟ್ರ ರಾಜಧಾನಿಯ ಐತಿಹಾಸಿಕ 'ಕರ್ತವ್ಯ ಪಥ' ಈ ಬಾರಿ ಸಾಂಸ್ಕೃತಿಕ ವೈಭವ ಮತ್ತು ಅತ್ಯಾಧುನಿಕ ರಕ್ಷಣಾ ಸಾಮರ್ಥ್ಯದ ಅನಾವರಣಕ್ಕೆ ಸಾಕ್ಷಿಯಾಗಲಿದೆ. ಈ ವರ್ಷದ ಆಚರಣೆಯು ಹಲವು ಐತಿಹಾಸಿಕ ಮತ್ತು ಪ್ರಥಮ ಎನ್ನಬಹುದಾದ ವಿಶೇಷತೆಗಳನ್ನು ಒಳಗೊಂಡಿದೆ.

# ಉರ್ಸುಲಾ ವಾನ್ ಡರ್ ಲೇಯೆನ್ – ಯುರೋಪಿಯನ್ ಆಯೋಗದ ಅಧ್ಯಕ್ಷೆ

# ಆಂಟೋನಿಯೊ ಕೋಸ್ಟಾ – ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ

➤ ಈ ವರ್ಷದ ಗಣರಾಜ್ಯೋತ್ಸವದ ಪ್ರಮುಖ ಥೀಮ್: 'ವಂದೇ ಮಾತರಂ - 150' : ಬಂಕಿಮಚಂದ್ರ ಚಟ್ಟೋಪಾಧ್ಯಾಯರು ರಚಿಸಿದ 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ನೆನಪಿಗಾಗಿ, ಇದನ್ನೇ ಈ ಬಾರಿಯ ಕೇಂದ್ರ ಪರಿಕಲ್ಪನೆಯಾಗಿ (Theme) ಆಯ್ಕೆ ಮಾಡಲಾಗಿದೆ. ಬಿಟಿಂಗ್ ದಿ ರಿಟ್ರೀಟ್ (Beating the Retreat) ಸಮಾರಂಭದಲ್ಲೂ ಇದೇ ಧಾಟಿಯ ಸಂಗೀತ ಇರಲಿದೆ. ಕಲಾವಿದ ತೇಜೇಂದ್ರ ಕುಮಾರ್ ಮಿತ್ರ ಅವರು ಚಿತ್ರಿಸಿದ ವಂದೇ ಮಾತರಂನ ಸಾಲುಗಳನ್ನು ಬಿಂಬಿಸುವ ಕಲಾಕೃತಿಗಳು ಕರ್ತವ್ಯ ಪಥದಲ್ಲಿ ಪ್ರದರ್ಶನಗೊಳ್ಳಲಿವೆ.

**➤ ರಕ್ಷಣಾ ಪಡೆಗಳ ವಿಶೇಷ ಆಕರ್ಷಣೆ:-**

=> ಭೈರವ್ ಕಮಾಂಡೋ ಬೆಟಾಲಿಯನ್: ಇದೇ ಮೊದಲ ಬಾರಿಗೆ ಪಥಸಂಚಲನದಲ್ಲಿ ಭಾಗವಹಿಸಲಿದೆ.

=> ಶಕ್ತಿಬಾನ್ ರೆಜಿಮೆಂಟ್ ಮತ್ತು ಡ್ರೋನ್ ಶಕ್ತಿ: ಇತ್ತೀಚಿನ ರಕ್ಷಣಾ ತಂತ್ರಜ್ಞಾನಗಳ ಪ್ರದರ್ಶನ.

=> ಯುರೋಪಿಯನ್ ನೌಕಾಪಡೆ: ಮೊದಲ ಬಾರಿಗೆ ಯುರೋಪಿಯನ್ ನೌಕಾಪಡೆಯ ತುಕಡಿ ಭಾರತದ ಪಥಸಂಚಲನದಲ್ಲಿ ಹೆಜ್ಜೆ ಹಾಕಲಿದೆ.

=> ಪ್ರಾಣಿ ದಳ: ಜಾನ್ಸ್ಕರ್ ಕುದುರೆಗಳು, ಬ್ಯಾಕ್ಟ್ರಿಯನ್ ಒಂಟೆಗಳು ಮತ್ತು ನಾಯಿಗಳ ದಳವು ಭಾರತದ ವೈವಿಧ್ಯಮಯ ಕಾರ್ಯಾಚರಣಾ ಪರಿಸರವನ್ನು ಪ್ರತಿನಿಧಿಸಲಿವೆ.

➤ ಪಥಸಂಚಲನದ ಹೈಲೈಟ್ಸ್: ಈ ಬಾರಿಯ ಗಣರಾಜ್ಯೋತ್ಸವದ ಪಥಸಂಚಲನವು ಒಟ್ಟು 90 ನಿಮಿಷಗಳ ಕಾಲ ನಡೆಯಲಿದ್ದು, ಪ್ರಮುಖ ಆಕರ್ಷಣೆಯಾಗಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ 17 ಹಾಗೂ ವಿವಿಧ ಸಚಿವಾಲಯಗಳಿಂದ 13 ಸೇರಿದಂತೆ ಒಟ್ಟು 30 ಭವ್ಯ ಸ್ತಬ್ಧಚಿತ್ರಗಳು ಕರ್ತವ್ಯ ಪಥದಲ್ಲಿ ಸಾಗಲಿವೆ. ಕಾರ್ಯಕ್ರಮದ ಆರಂಭದಲ್ಲಿ 100 ಜನ ಕಲಾವಿದರು ಭಾರತೀಯ ಸಮರ ಕಲೆಗಳ ಸಂಗೀತ ವಾದ್ಯಗಳನ್ನು ನುಡಿಸುವ ಮೂಲಕ ಸಾಂಸ್ಕೃತಿಕ ಚಾಲನೆ ನೀಡಲಿದ್ದಾರೆ. ಇನ್ನು ಬಾನಂಗಳದಲ್ಲಿ ರಫೇಲ್, ಸುಖೋಯ್-30 ಮತ್ತು ತೇಜಸ್ ಸೇರಿದಂತೆ ಅತ್ಯಾಧುನಿಕ ಯುದ್ಧ ವಿಮಾನಗಳು ನಡೆಸುವ 'ಫ್ಲೈಪಾಸ್ಟ್' (Flypast) ಸಾಹಸ ಪ್ರದರ್ಶನವು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಲಿದೆ.

➤ ರಕ್ಷಣಾ ಇಲಾಖೆಯು ಈ ಬಾರಿ ವಿಶೇಷ ಬದಲಾವಣೆ ಮಾಡಿದ್ದು, ಪಥಸಂಚಲನದ ಆವರಣಗಳಿಗೆ ಭಾರತದ ನದಿಗಳ ಹೆಸರನ್ನು ಮತ್ತು ಬಿಟಿಂಗ್ ದಿ ರಿಟ್ರೀಟ್ ಆವರಣಗಳಿಗೆ ಸಂಗೀತ ವಾದ್ಯಗಳ ಹೆಸರನ್ನು ಇಡುವ ಮೂಲಕ ಸಾಂಕೇತಿಕವಾಗಿ ವಿಐಪಿ ಸಂಸ್ಕೃತಿಯನ್ನು ದೂರವಿಟ್ಟಿದೆ.

## ವಿಶ್ವ ರಾಜಕೀಯದಲ್ಲಿ ಸಂಚಲನ: ಟ್ರಂಪ್‌ಗೆ ತನ್ನ 'ನೊಬೆಲ್ ಶಾಂತಿ ಪದಕ' ಹಸ್ತಾಂತರಿಸಿದ ಮಾರಿಯಾ ಮಚಾದೊ



➤ ವಾಷಿಂಗ್ಟನ್: ಜಾಗತಿಕ ರಾಜಕೀಯ ಇತಿಹಾಸದಲ್ಲೇ ಹಿಂದೆಂದೂ ನಡೆಯದ ಅಪರೂಪದ ಘಟನೆಯೊಂದಕ್ಕೆ ಅಮೆರಿಕದ ಶ್ವೇತಭವನ ಸಾಕ್ಷಿಯಾಗಿದೆ. 2025ರ ನೊಬೆಲ್ ಶಾಂತಿ ಪುರಸ್ಕೃತೆ, ವೆನೆಜುವೆಲಾದ ವಿರೋಧಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾದೊ (María Corina Machado) ಅವರು ತಮ್ಮ ನೊಬೆಲ್ ಶಾಂತಿ ಪದಕವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಹಸ್ತಾಂತರಿಸಿದ್ದಾರೆ.

ಜನವರಿ 15, 2026 ರಂದು ಶ್ವೇತಭವನದಲ್ಲಿ ನಡೆದ ಭೇಟಿಯ ವೇಳೆ ಈ ಐತಿಹಾಸಿಕ ಬೆಳವಣಿಗೆ ನಡೆದಿದೆ. ವೆನೆಜುವೆಲಾದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗೆ ಟ್ರಂಪ್ ತೋರಿದ ದೃಢ ನಿಲುವು ಮತ್ತು ಸಹಾಯಕ್ಕಾಗಿ ಕೃತಜ್ಞತೆ ಸಲ್ಲಿಸಲು ಅವರು ಈ ಕ್ರಮ ಕೈಗೊಂಡಿದ್ದಾರೆ.

➤ ಈ ಬಗ್ಗೆ 'ಟ್ರುತ್ ಸೋಷಿಯಲ್'ನಲ್ಲಿ ಹಂಚಿಕೊಂಡಿರುವ ಟ್ರಂಪ್, "ಎಂಟು ಯುದ್ಧಗಳನ್ನು ಕೊನೆಗಾಣಿಸಿದ್ದಕ್ಕಾಗಿ ಮಾರಿಯಾ ಅವರು ಈ ಗೌರವ ನೀಡಿದ್ದಾರೆ. ಇದು ಪರಸ್ಪರ ಗೌರವದ ಸಂಕೇತ," ಎಂದು ಬಣ್ಣಿಸಿದ್ದಾರೆ.

➤ ವೆನೆಜುವೆಲಾದಲ್ಲಿನ ರಾಜಕೀಯ ಬಿಕ್ಕಟ್ಟು ಮತ್ತು ಅಧ್ಯಕ್ಷೀಯ ಚುನಾವಣೆಯ ವಿವಾದಗಳ ನಡುವೆ, ಟ್ರಂಪ್ ಅವರು ಅಲ್ಲಿನ ವಿರೋಧಪಕ್ಷದ ಹೋರಾಟಕ್ಕೆ ಬೆಂಬಲ ನೀಡುತ್ತಾ ಬಂದಿದ್ದಾರೆ. ಈ ಬೆಂಬಲವನ್ನು ಗುರುತಿಸಿ ಮಾರಿಯಾ ಅವರು ಈ ಪದಕವನ್ನು ಟ್ರಂಪ್‌ಗೆ ಅರ್ಪಿಸಿದ್ದಾರೆ.

➤ ಈ ಬೆಳವಣಿಗೆಯ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ನಾರ್ವೆಯ ನೊಬೆಲ್ ಸಮಿತಿಯು, "ನೊಬೆಲ್ ಪುರಸ್ಕಾರವು ಸಾರ್ವಕಾಲಿಕವಾದುದು. ಪದಕವನ್ನು ಭೌತಿಕವಾಗಿ ಹಸ್ತಾಂತರಿಸಬಹುದು ಅಥವಾ ಮಾರಾಟ ಮಾಡಬಹುದು, ಆದರೆ 'ನೊಬೆಲ್ ಪುರಸ್ಕೃತ' ಎಂಬ ಅಧಿಕೃತ ಹೆಸರನ್ನು ಮತ್ತೊಬ್ಬರಿಗೆ ವರ್ಗಾಯಿಸಲು ಸಾಧ್ಯವಿಲ್ಲ," ಎಂದು ಸ್ಪಷ್ಟಪಡಿಸಿದೆ.

## ಭಾರತದ ನೆಲದಲ್ಲಿ ಮೊದಲ ಬಾರಿಗೆ ಏಕದಿನ ಸರಣಿ ಗೆದ್ದ ನ್ಯೂಜಿಲೆಂಡ್



➤ ಬೆಂಗಳೂರು: ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಪ್ರವಾಸಿ ನ್ಯೂಜಿಲೆಂಡ್ ತಂಡವು ಹೊಸ ದಾಖಲೆ ಬರೆದಿದೆ. ಜನವರಿ 2026ರಲ್ಲಿ ನಡೆದ ಮೂರು ಪಂದ್ಯಗಳ ರೋಚಕ ಏಕದಿನ ಸರಣಿಯನ್ನು ನ್ಯೂಜಿಲೆಂಡ್ 2-1 ಅಂತರದಲ್ಲಿ ವಶಪಡಿಸಿಕೊಳ್ಳುವ ಮೂಲಕ, ಭಾರತದ ನೆಲದಲ್ಲಿ ತನ್ನ ಮೊತ್ತಮೊದಲ ಏಕದಿನ ಸರಣಿ ಗೆಲುವಿನ ಐತಿಹಾಸಿಕ ಸಾಧನೆ ಮಾಡಿದೆ.

➤ ಮಿಚೆಲ್-ಫಿಲಿಪ್ಸ್ ದಾಖಲೆಯ ಜೊತೆಯಾಟ: ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ಕೇವಲ 5 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ಹಂತದಲ್ಲಿ ಜೊತೆಯಾದ ಡ್ಯಾರಿಲ್ ಮಿಚೆಲ್ (137) ಮತ್ತು ಗ್ಲೆನ್ ಫಿಲಿಪ್ಸ್ (106) ನಾಲ್ಕನೇ ವಿಕೆಟ್‌ಗೆ 219 ರನ್‌ಗಳ ಬೃಹತ್ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 337/8ಕ್ಕೆ ತಲುಪಿಸಿದರು. ಮಿಚೆಲ್ ಅವರು ಈ ಸರಣಿಯಲ್ಲಿ ಸತತ ಎರಡನೇ ಶತಕ ದಾಖಲಿಸಿ ಮಿಂಚಿದರು.

➤ ವಿರಾಟ್ ಕೊಹ್ಲಿ ಹೋರಾಟ ವ್ಯರ್ಥ: 338 ರನ್‌ಗಳ ಗುರಿ ಬೆನ್ನಟ್ಟಿದ ಭಾರತಕ್ಕೆ ಆರಂಭಿಕ ಆಘಾತ ಎದುರಾಯಿತು (71/4). ಈ ಹಂತದಲ್ಲಿ ವಿರಾಟ್ ಕೊಹ್ಲಿ ಅವರು ಏಕಾಂಗಿ ಹೋರಾಟ ನಡೆಸಿ 124 ರನ್ (108 ಎಸೆತ) ಗಳಿಸಿದರು. ಇದು ಅವರ ವೃತ್ತಿಜೀವನದ 54ನೇ ಏಕದಿನ ಶತಕ ಹಾಗೂ ನ್ಯೂಜಿಲೆಂಡ್ ವಿರುದ್ಧದ 7ನೇ ಶತಕವಾಗಿತ್ತು. ಆದರೆ ಇತರ ಬ್ಯಾಟರ್‌ಗಳಿಂದ ಬೆಂಬಲ ಸಿಗದ ಕಾರಣ ಭಾರತ 296 ರನ್‌ಗಳಿಗೆ ಆಲೌಟ್ ಆಗಿ, 41 ರನ್‌ಗಳ ಸೋಲೊಪ್ಪಿಕೊಂಡಿತು.

➤ ನ್ಯೂಜಿಲೆಂಡ್‌ನ ಐತಿಹಾಸಿಕ ಸಾಧನೆ: ನಾಯಕ ಮೈಕಲ್ ಬ್ರೇಸ್‌ವೆಲ್ ನೇತೃತ್ವದಲ್ಲಿ ನ್ಯೂಜಿಲೆಂಡ್ ತಂಡವು 1988ರ ನಂತರ ಮೊದಲ ಬಾರಿಗೆ ಭಾರತದಲ್ಲಿ ಏಕದಿನ ಸರಣಿಯನ್ನು ಗೆದ್ದು ಇತಿಹಾಸ ನಿರ್ಮಿಸಿದೆ. ಬೌಲಿಂಗ್‌ನಲ್ಲಿ ಕಿವೀಸ್ ಪರ ಝಾಕ್ ಫೌಲ್ಕ್ಸ್ (3/77) ಮತ್ತು ಕ್ರಿಸ್ಟಿಯನ್ ಕ್ಲಾರ್ಕ್ (3/54) ಪ್ರಮುಖ ವಿಕೆಟ್ ಪಡೆಯುವ ಮೂಲಕ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

## ಇಂಡಿಯಾ ಓಪನ್ ಬ್ಯಾಡ್ಮಿಂಟನ್ 2026: ಲಿನ್ ಚುನ್-ಯಿ ಮತ್ತು ಆನ್ ಸೆ-ಯಂಗ್‌ಗೆ ಪ್ರಶಸ್ತಿ ಕಿರೀಟ



➤ ನವದೆಹಲಿಯಲ್ಲಿ ನಡೆದ ಪ್ರತಿಷ್ಠಿತ ಇಂಡಿಯಾ ಓಪನ್ ಸೂಪರ್ 750 (India Open Super 750) ಬ್ಯಾಡ್ಮಿಂಟನ್ ಟೂರ್ನಿಯು ಭಾನುವಾರ (18-01-2026) ಮುಕ್ತಾಯಗೊಂಡಿತು. ಈ ಟೂರ್ನಿಯಲ್ಲಿ ತೈವಾನ್‌ನ ಲಿನ್ ಚುನ್-ಯಿ ಮತ್ತು ದಕ್ಷಿಣ ಕೊರಿಯಾದ ಆನ್ ಸೆ-ಯಂಗ್ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ.

➤ ಪುರುಷರ ಸಿಂಗಲ್ಸ್:- ತೈವಾನ್‌ನ ಭರವಸೆಯ ಆಟಗಾರ ಲಿನ್ ಚುನ್-ಯಿ (Lin Chun-Yi) ಅವರು ಫೈನಲ್‌ನಲ್ಲಿ ಇಂಡೋನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರನ್ನು 21-10, 21-18 ನೇರ ಸೆಟ್‌ಗಳಿಂದ ಸೋಲಿಸಿ ತಮ್ಮ ಚೊಚ್ಚಲ ಸೂಪರ್ 750 ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಪ್ರಸ್ತುತ ವಿಶ್ವ

ಕ್ರಮಾಂಕದಲ್ಲಿ 12ನೇ ಸ್ಥಾನದಲ್ಲಿರುವ ಲಿನ್, ಗಾಯದ ನಡುವೆಯೂ ಅದ್ಭುತ ಪ್ರದರ್ಶನ ನೀಡಿದರು.

➤ ಮಹಿಳೆಯರ ಸಿಂಗಲ್ಸ್:- ವಿಶ್ವದ ನಂಬರ್ 1 ಆಟಗಾರ್ತಿ ಮತ್ತು ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾದ ಆನ್ ಸೆ-ಯಂಗ್ (An Se-Young) ಅವರು ಚೀನಾದ ವಾಂಗ್ ಜಿಯಿ ವಿರುದ್ಧ 21-13, 21-11 ಅಂತರದಲ್ಲಿ ಜಯಗಳಿಸಿ ಪ್ರಶಸ್ತಿಯನ್ನು ಉಳಿಸಿಕೊಂಡರು. ಇದು ಈ ಋತುವಿನಲ್ಲಿ ಆನ್ ಸೆ-ಯಂಗ್ ಗೆದ್ದ ಎರಡನೇ ಪ್ರಶಸ್ತಿಯಾಗಿದೆ.

➤ ಮಹಿಳೆಯರ ಡಬಲ್ಸ್:- ಚೀನಾದ ಲಿಯು ಶೆಂಗ್ಶು ಮತ್ತು ಟ್ಯಾನ್ ನಿಂಗ್ ಜೋಡಿಯು ಜಪಾನ್‌ನ ಯೂಕಿ ಫುಕುಶಿಮಾ ಮತ್ತು ಸಾಯಕ ಮತ್ಸುಮೊಟೊ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು.

➤ ಮಿಶ್ರ ಡಬಲ್ಸ್:- ಥೈಲ್ಯಾಂಡ್‌ನ ಡೆಚಾಪೋಲ್ ಪುವಾವರನುಕ್ರೋಃ ಮತ್ತು ಸುಪಿಸ್ಸರಾ ಪೇವ್‌ಸಂಪ್ರಾನ್ ಜೋಡಿಯು ಡೆನ್ಮಾರ್ಕ್‌ನ ಮಥಿಯಾಸ್ ಕ್ರಿಸ್ಟಿಯನ್ಸೆನ್ ಮತ್ತು ಅಲೆಕ್ಸಾಂಡ್ರಾ ಬೋಜೆ ಅವರನ್ನು ಸೋಲಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

## ದಾವೋಸ್ ಶೃಂಗಸಭೆ 2026: ವಿಶ್ವ ಆರ್ಥಿಕ ವೇದಿಕೆಯಲ್ಲಿ ಭಾರತದ ಆರ್ಥಿಕ ಶಕ್ತಿ ಪ್ರದರ್ಶನ




➤ ದಾವೋಸ್, ಸ್ವಿಟ್ಜರ್ಲೆಂಡ್: ವಿಶ್ವದ ಅತ್ಯಂತ ಪ್ರತಿಷ್ಠಿತ ಆರ್ಥಿಕ ಸಮಾವೇಶವಾದ ವಿಶ್ವ ಆರ್ಥಿಕ ವೇದಿಕೆಯ (World Economic Forum - WEF) ವಾರ್ಷಿಕ ಶೃಂಗಸಭೆಯು ಇಂದಿನಿಂದ (ಜನವರಿ 19, 2026) ಸ್ವಿಟ್ಜರ್ಲೆಂಡ್‌ನ ಸುಂದರ ಪರ್ವತ ನಗರಿ ದಾವೋಸ್ ನಲ್ಲಿ ಅದ್ದೂರಿಯಾಗಿ ಆರಂಭವಾಗಿದೆ. ಜನವರಿ 23ರವರೆಗೆ ನಡೆಯಲಿರುವ ಈ ಐದು ದಿನಗಳ ಜಾಗತಿಕ ಸಮ್ಮೇಳನದಲ್ಲಿ ಭಾರತವು ತನ್ನ 'ವಿಕಸಿತ ಭಾರತ'ದ ಗುರಿ ಮತ್ತು ಆರ್ಥಿಕ ವೇಗವನ್ನು ಜಗತ್ತಿನ ಮುಂದೆ ಪ್ರಸ್ತುತಪಡಿಸಲಿದೆ.

- ಸಭೆಯ ಕೇಂದ್ರ ವಿಷಯ (Theme): ಸಂವಾದದ ಮನೋಭಾವ (A Spirit of Dialogue).
- ಚರ್ಚೆಯ ವಿಷಯಗಳು: ಆರ್ಥಿಕ ಸ್ಥಿತಿಸ್ಥಾಪಕತ್ವ, ಕೃತಕ ಬುದ್ಧಿಮತ್ತೆ (AI), ಇಂಧನ ಪರಿವರ್ತನೆ, ಜಾಗತಿಕ ಭೌಗೋಳಿಕ ರಾಜಕೀಯ ಸವಾಲುಗಳು ಮತ್ತು ವಿಶ್ವಾಸದ ಮರುಸ್ಥಾಪನೆ.
- ಭಾರತದ ಅಜೆಂಡಾ: ಭಾರತವು ಕೇವಲ 'ಭವಿಷ್ಯದ ಅವಕಾಶ'ವಲ್ಲ, ಬದಲಿಗೆ ಜಾಗತಿಕ ಬೆಳವಣಿಗೆಯ 'ಪ್ರಸ್ತುತ ಎಂಜಿನ್' ಎಂಬುದನ್ನು ಬಿಂಬಿಸುವುದು. ಉತ್ಪಾದನೆ, ಡಿಜಿಟಲ್ ಮೂಲಸೌಕರ್ಯ (DPI) ಮತ್ತು ಶುದ್ಧ ಇಂಧನಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು.

➤ ಈ ಶೃಂಗಸಭೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್ಸ್ಕಿ ಸೇರಿದಂತೆ 64 ದೇಶಗಳ ಮುಖ್ಯಸ್ಥರು ಮತ್ತು 3,000ಕ್ಕೂ ಹೆಚ್ಚು ಜಾಗತಿಕ ನಾಯಕರು ಪಾಲ್ಗೊಳ್ಳುತ್ತಿದ್ದಾರೆ. 1945ರ ನಂತರ ಜಗತ್ತು ಎದುರಿಸುತ್ತಿರುವ ಅತ್ಯಂತ ಸಂಕೀರ್ಣ ಭೌಗೋಳಿಕ ರಾಜಕೀಯ ಪರಿಸ್ಥಿತಿಯ ನಡುವೆ ಈ ಸಭೆಯು ನಿರ್ಣಾಯಕವೆಂದು ಪರಿಗಣಿಸಲಾಗಿದೆ.

➤ ದಾವೋಸ್‌ನಲ್ಲಿ ಭಾರತದ ನಿಯೋಗ:- ಭಾರತದಿಂದ ಈ ಬಾರಿ ಕೇಂದ್ರ ಸಚಿವರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉದ್ಯಮಿಗಳನ್ನೊಳಗೊಂಡ ಬಲಿಷ್ಠ ತಂಡ ಭಾಗವಹಿಸುತ್ತಿದೆ.

=> ಕೇಂದ್ರ ಸಚಿವರು: ಅಶ್ವಿನಿ ವೈಷ್ಣವ್, ಶಿವರಾಜ್ ಸಿಂಗ್ ಚೌಹಾಣ್, ಪ್ರಹ್ಲಾದ್ ಜೋಶಿ ಮತ್ತು ಕೆ. ರಾಮಮೋಹನ್ ನಾಯ್ಡು ಅವರು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದಾರೆ.

=> ರಾಜ್ಯಗಳ ಪ್ರಾತಿನಿಧ್ಯ: ಆರು ರಾಜ್ಯಗಳ ಮುಖ್ಯಮಂತ್ರಿಗಳು ಹೂಡಿಕೆದಾರರನ್ನು ಆಕರ್ಷಿಸಲು ಸಭೆಯಲ್ಲಿ ಭಾಗಿಯಾಗುತ್ತಿದ್ದಾರೆ: ದೇವೇಂದ್ರ ಫಡಣವೀಸ್ (ಮಹಾರಾಷ್ಟ್ರ), ಎನ್. ಚಂದ್ರಬಾಬು ನಾಯ್ಡು (ಆಂಧ್ರಪ್ರದೇಶ), ಹಿಮಂತ ಬಿಸ್ವ ಶರ್ಮಾ (ಅಸ್ಸಾಂ), ಮೋಹನ್ ಯಾದವ್ (ಮಧ್ಯಪ್ರದೇಶ), ಎ. ರೇವಂತ್ ರೆಡ್ಡಿ (ತೆಲಂಗಾಣ) ಮತ್ತು ಹೇಮಂತ್ ಸೊರೇನ್ (ಜಾರ್ಖಂಡ್).ಗುಜರಾತ್ ಉಪಮುಖ್ಯಮಂತ್ರಿ ಹರ್ಷ ಸಂಘವಿ ಹಾಗೂ ಉತ್ತರ ಪ್ರದೇಶ ಮತ್ತು ಕೇರಳದ ಉನ್ನತ ಮಟ್ಟದ ಅಧಿಕಾರಿಗಳ ತಂಡವೂ ಉಪಸ್ಥಿತರಿದೆ.

=> ಕರ್ನಾಟಕದ ಪಾತ್ರ: ಕರ್ನಾಟಕದ ಪರವಾಗಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ನೇತೃತ್ವದ ನಿಯೋಗ ದಾವೋಸ್‌ಗೆ ತೆರಳಿದೆ. ಅಮೆಜಾನ್ ವೆಬ್ ಸರ್ವೀಸಸ್, ಲೆನೊವೊ ಮತ್ತು ಕೋಕಾ-ಕೋಲಾದಂತಹ ಜಾಗತಿಕ ಸಂಸ್ಥೆಗಳೊಂದಿಗೆ ಸುಮಾರು 45ಕ್ಕೂ ಹೆಚ್ಚು ದ್ವಿಪಕ್ಷೀಯ ಸಭೆಗಳನ್ನು ಈ ತಂಡ ನಡೆಸಲಿದೆ. ತಯಾರಿಕೆ, ಎಲೆಕ್ಟ್ರಾನಿಕ್ಸ್ ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳ (GCC) ಸ್ಥಾಪನೆಯೇ ಕರ್ನಾಟಕದ ಮುಖ್ಯ ಗುರಿಯಾಗಿದೆ.

=> ಪ್ರಮುಖ ಉದ್ಯಮಿಗಳು: ರಿಲಯನ್ಸ್‌ನ ಮುಖೇಶ್ ಅಂಬಾನಿ, ಟಾಟಾ ಗ್ರೂಪ್‌ನ ಎನ್. ಚಂದ್ರಶೇಖರನ್, ಅದಾನಿ ಗ್ರೂಪ್, ಇನ್ಫೋಸಿಸ್‌ನ ನಂದನ್ ನಿಲೇಕಣಿ ಮತ್ತು ಸಲೀಲ್ ಪರೇಖ್, ವಿಪ್ರೋದ ರಿಷಾದ್ ಪ್ರೇಮ್‌ಜೀ, ಮತ್ತು ಜೆರೋಧಾದ ನಿಖಿಲ್ ಕಾಮತ್ ಸೇರಿದಂತೆ 100ಕ್ಕೂ ಹೆಚ್ಚು ಉದ್ಯಮ ದಿಗ್ಗಜರು ಭಾಗವಹಿಸುತ್ತಿದ್ದಾರೆ.

➤ ವಿಶ್ವ ಆರ್ಥಿಕ ವೇದಿಕೆಯು (WEF) 1971 ರಲ್ಲಿ ಕ್ಲೌಸ್ ಶ್ವಾಬ್ ಅವರಿಂದ ಸ್ಥಾಪಿಸಲ್ಪಟ್ಟ ಸ್ವಿಟ್ಜರ್ಲೆಂಡ್ ಮೂಲದ ಅಂತರಾಷ್ಟ್ರೀಯ ಸಂಸ್ಥೆಯಾಗಿದ್ದು, ಪ್ರತಿ ವರ್ಷ ಜಾಗತಿಕ ಸವಾಲುಗಳ ಕುರಿತು ಚರ್ಚಿಸಲು ವಿಶ್ವ ನಾಯಕರ ಶೃಂಗಸಭೆಯನ್ನು ಆಯೋಜಿಸುತ್ತದೆ. ಇದರ ಪ್ರಧಾನ ಕಚೇರಿ ಸ್ವಿಟ್ಜರ್ಲೆಂಡ್‌ನ ಜಿನೀವಾ ಸಮೀಪದ ಕಲೋನಿ (Cologny) ನಲ್ಲಿದೆ. ಆರಂಭದಲ್ಲಿ ಇದನ್ನು 'ಯುರೋಪಿಯನ್ ಮ್ಯಾನೇಜ್‌ಮೆಂಟ್ ಫೋರಂ' ಎಂದು ಕರೆಯಲಾಗುತ್ತಿತ್ತು, ನಂತರ 1987ರಲ್ಲಿ 'ವಿಶ್ವ ಆರ್ಥಿಕ ವೇದಿಕೆ' ಎಂದು ಮರುನಾಮಕರಣ ಮಾಡಲಾಯಿತು. ಪ್ರತಿ ವರ್ಷ ಜನವರಿ ತಿಂಗಳಲ್ಲಿ ಸ್ವಿಟ್ಜರ್ಲೆಂಡ್‌ನ ಸುಂದರ ಪರ್ವತ ಪ್ರದೇಶವಾದ ದಾವೋಸ್ (Davos) ನಲ್ಲಿ ಈ ಸಭೆ ನಡೆಯುತ್ತದೆ. ಆದ್ದರಿಂದ ಇದನ್ನು ಸಾಮಾನ್ಯವಾಗಿ 'ದಾವೋಸ್ ಶೃಂಗಸಭೆ' ಎಂದೇ ಕರೆಯಲಾಗುತ್ತದೆ.

## ನಂದಗಡದಲ್ಲಿ ಸಂಗೊಳ್ಳಿ ರಾಯಣ್ಣ ಸ್ಮರಣಾರ್ಥ 'ವೀರಭೂಮಿ' ಲೋಕಾರ್ಪಣೆ.



➤ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ತ್ಯಾಗ ಮತ್ತು ಬಲಿದಾನದ ನೆನಪಿಗಾಗಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ನಂದಗಡದಲ್ಲಿ ನಿರ್ಮಿಸಲಾದ 'ವೀರಭೂಮಿ'ಯನ್ನು January 19, 2026 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಾರ್ಪಣೆ ಮಾಡಿದರು. ವೀರಭೂಮಿ' ಎಂದರೆ ಸಂಗೊಳ್ಳಿ ರಾಯಣ್ಣನ ಸ್ಮರಣಾರ್ಥ ನಂದಗಡದಲ್ಲಿ ನಿರ್ಮಿಸಲಾದ ಪ್ರೇಕ್ಷಣೀಯ ಸ್ಥಳ ಮತ್ತು ಸ್ಮಾರಕ ಇದನ್ನು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಾಗೂ ಅವರ ಸಹಚರರನ್ನು ಬ್ರಿಟಿಷರು (ಜನವರಿ 26, 1831) ಗಲ್ಲಿಗೇರಿಸಿದ ಐತಿಹಾಸಿಕ ಸ್ಥಳದಲ್ಲಿ ನಿರ್ಮಿಸಲಾಗಿದೆ.

**➤ ವೀರಭೂಮಿಯ ವಿಶೇಷತೆಗಳು:-**

=> ಅಭಿವೃದ್ಧಿ ಪ್ರಾಧಿಕಾರ: ಈ ಯೋಜನೆಯನ್ನು 'ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ'ದ ವತಿಯಿಂದ ಅತ್ಯಂತ ಆಕರ್ಷಕವಾಗಿ ಅಭಿವೃದ್ಧಿಪಡಿಸಲಾಗಿದೆ.

=> ಕೋಟೆ ಮತ್ತು ಪ್ರತಿಮೆಗಳು: ವೀರಭೂಮಿಯ ಸುತ್ತಲೂ ಕೋಟೆ ಮಾದರಿಯ ಗೋಡೆ ನಿರ್ಮಿಸಲಾಗಿದ್ದು, ಒಳಗೆ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರ ಬದುಕು ಹಾಗೂ ಬ್ರಿಟಿಷರ ವಿರುದ್ಧದ ಹೋರಾಟವನ್ನು ಬಿಂಬಿಸುವ ಸುಂದರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ.
=> ವಸ್ತು ಸಂಗ್ರಹಾಲಯ: ಕೆರೆಯ ಮಧ್ಯೆ ರಾಯಣ್ಣನ ಬೃಹತ್ ಪ್ರತಿಮೆಯನ್ನು ನಿರ್ಮಿಸಲಾಗಿದ್ದು, ಸುಸಜ್ಜಿತ ವಸ್ತು ಸಂಗ್ರಹಾಲಯವನ್ನೂ ಸಾರ್ವಜನಿಕರಿಗಾಗಿ ಮುಕ್ತಗೊಳಿಸಲಾಗಿದೆ.
=> ಆಧುನಿಕ ತಂತ್ರಜ್ಞಾನ: ರಾಯಣ್ಣನ ಜೀವನದ 200 ವರ್ಷಗಳ ಹಳೆಯ ಯಶೋಗಾಥೆಯನ್ನು ಇಂದಿನ ಪೀಳಿಗೆಗೆ ಪರಿಚಯಿಸಲು ರೋಬೋಟಿಕ್ ತಂತ್ರಜ್ಞಾನ, 3D ಚಿತ್ರಮಂದಿರ, ಧ್ವನಿ ಮತ್ತು ಬೆಳಕು (Sound and Light) ಪ್ರಭಾವಗಳನ್ನು ಬಳಸಲಾಗಿದೆ.
=> ಚಾರಿತ್ರಿಕ ಸನ್ನಿವೇಶಗಳು: ಹಂಡಿ ಬಡಗನಾಥ ಮಠ, ಸಂಪಗಾವಿ ತಾಲ್ಲೂಕು ಕಚೇರಿ ದಾಳಿ, ಸುರಪುರ ಅರಮನೆಯ ಸಂಪರ್ಕ ಸೇರಿದಂತೆ ರಾಯಣ್ಣನ ಜೀವನದ ಪ್ರಮುಖ ಘಟ್ಟಗಳನ್ನು ಕಥಾಚಿತ್ರ ಮತ್ತು ಉಬ್ಬುಶಿಲ್ಪಗಳ ಮೂಲಕ ಮರುಸೃಷ್ಟಿಸಲಾಗಿದೆ.
➤ ಯುವ ಪೀಳಿಗೆಯಲ್ಲಿ ದೇಶಪ್ರೇಮವನ್ನು ಜಾಗೃತಗೊಳಿಸುವುದು ಮತ್ತು ನಾಡಿನ ವೀರ ಹೋರಾಟಗಾರರ ಇತಿಹಾಸವನ್ನು ದಾಖಲಿಸಿ ಸಂರಕ್ಷಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

## ತಂತ್ರಜ್ಞಾನ ಕ್ರಾಂತಿ: ಅಮೆರಿಕವನ್ನು ಹಿಂದಿಕ್ಕಿ ವಿಶ್ವದ 2ನೇ ಅತಿದೊಡ್ಡ 5G ಮಾರುಕಟ್ಟೆಯಾದ ಭಾರತ




➤ ನವದೆಹಲಿ: ಜಾಗತಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಅಭೂತಪೂರ್ವ ಇತಿಹಾಸ ಬರೆದಿದೆ. ಕೇವಲ ಎರಡು ವರ್ಷಗಳ ಹಿಂದೆ (2022) 5G ಸೇವೆಯನ್ನು ಆರಂಭಿಸಿದ ಭಾರತ, ಇಂದು ಅಮೆರಿಕವನ್ನು ಹಿಂದಿಕ್ಕಿ ಚೀನಾದ ನಂತರ ವಿಶ್ವದ ಎರಡನೇ ಅತಿದೊಡ್ಡ 5G ಸ್ಮಾರ್ಟ್‌ಫೋನ್ ಮಾರುಕಟ್ಟೆಯಾಗಿ ಹೊರಹೊಮ್ಮಿದೆ. ಇದು ದೇಶದ ಡಿಜಿಟಲ್ ಮೂಲಸೌಕರ್ಯದ ವೇಗ ಮತ್ತು 'ಡಿಜಿಟಲ್ ಇಂಡಿಯಾ' ಅಭಿಯಾನದ ಯಶಸ್ಸಿಗೆ ಸಾಕ್ಷಿಯಾಗಿದೆ.
- ಭಾರತದಲ್ಲಿ 5G ಬಳಕೆದಾರರ ಸಂಖ್ಯೆ ಈಗಾಗಲೇ 40 ಕೋಟಿ (400 Million) ದಾಟಿದೆ.
- ದೇಶದ ಸುಮಾರು 85% ಜನಸಂಖ್ಯೆಯನ್ನು 5G ನೆಟ್‌ವರ್ಕ್ ತಲುಪಿದ್ದು, ಸುಮಾರು 4.69 ಲಕ್ಷ 5G ಬೇಸ್ ಸ್ಟೇಷನ್‌ಗಳನ್ನು ಅಳವಡಿಸಲಾಗಿದೆ.
- ಭಾರತದಲ್ಲಿ ಒಟ್ಟು ಇಂಟರ್ನೆಟ್ ಸಂಪರ್ಕಗಳ ಸಂಖ್ಯೆ 100 ಕೋಟಿಯ ಗಡಿಯನ್ನು ದಾಟಿದೆ.

**➤ ಈ ಅಭೂತಪೂರ್ವ ಯಶಸ್ಸಿಗೆ ಕಾರಣಗಳು:-**
=> ಟೆಲಿಕಾಂ ಸಂಸ್ಥೆಗಳ ಕೊಡುಗೆ: ರಿಲಯನ್ಸ್ ಜಿಯೋ ಮತ್ತು ಏರ್‌ಟೆಲ್ ಸಂಸ್ಥೆಗಳು ನಡೆಸಿದ ಆಕ್ರಮಣಕಾರಿ ನೆಟ್‌ವರ್ಕ್ ವಿಸ್ತರಣೆ ಮತ್ತು ಸಾವಿರಾರು ಕೋಟಿ ರೂಪಾಯಿಗಳ ಹೂಡಿಕೆ.
=> ಕೈಗೆಟುಕುವ ದರದ ಸ್ಮಾರ್ಟ್‌ಫೋನ್‌ಗಳು: ಸ್ಯಾಮ್‌ಸಂಗ್, ಶಿಯೋಮಿ ಮತ್ತು ವಿವೋದಂತಹ ಕಂಪನಿಗಳು ಬಜೆಟ್ ಬೆಲೆಯಲ್ಲಿ 5G ಫೋನ್‌ಗಳನ್ನು ಬಿಡುಗಡೆ ಮಾಡಿದ್ದು ಸಾಮಾನ್ಯ ಜನರಿಗೂ ತಂತ್ರಜ್ಞಾನ ಲಭ್ಯವಾಗುವಂತೆ ಮಾಡಿದೆ.
=> ಗ್ರಾಮೀಣ ಸಂಪರ್ಕ: ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಹೈಸ್ಪೀಡ್ ಇಂಟರ್ನೆಟ್ ಇಂದು ಗ್ರಾಮೀಣ ಭಾಗಗಳಿಗೂ ತಲುಪಿದೆ. ಕಳೆದ ದಶಕದಲ್ಲಿ ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗದಲ್ಲಿ ಟೆಲಿಫೋನ್ ಸಂಪರ್ಕದ ಬೆಳವಣಿಗೆ ದುಪ್ಪಟ್ಟಾಗಿದೆ.

**➤ 5G ತಂತ್ರಜ್ಞಾನದ ಪ್ರಯೋಜನಗಳು:-**
=> ಆರ್ಥಿಕ ಬೆಳವಣಿಗೆ: ಇ-ಕಾಮರ್ಸ್, ಡಿಜಿಟಲ್ ಪಾವತಿ ಮತ್ತು ಉದ್ಯಮಗಳಿಗೆ ಹೊಸ ಚೈತನ್ಯ.
=> ಶಿಕ್ಷಣ ಮತ್ತು ಆರೋಗ್ಯ: ಆನ್‌ಲೈನ್ ಶಿಕ್ಷಣ (Online Education) ಮತ್ತು ಟೆಲಿ-ಮೆಡಿಸಿನ್ ಸೇವೆಗಳು ಇನ್ನಷ್ಟು ಸುಧಾರಿಸಲಿವೆ.
=> ಉದ್ಯೋಗಾವಕಾಶ: ಕೃತಕ ಬುದ್ಧಿಮತ್ತೆ (AI) ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ (IoT) ಆಧಾರಿತ ಉದ್ಯಮಗಳಲ್ಲಿ ಹೊಸ ಉದ್ಯೋಗಗಳ ಸೃಷ್ಟಿ.
➤ 'ಭಾರತ 6G ವಿಷನ್':- 5G ಯಲ್ಲಿ ಜಾಗತಿಕ ಸಾಧನೆ ಮಾಡಿರುವ ಭಾರತದ ಗುರಿ ಈಗ 6G ಕಡೆಗಿದೆ. ಕೇಂದ್ರ ಸರ್ಕಾರವು ಈಗಾಗಲೇ 'ಭಾರತ 6G ವಿಷನ್' ಯೋಜನೆಯನ್ನು ಪ್ರಕಟಿಸಿದ್ದು, 2030ರ ವೇಳೆಗೆ 6G ಸೇವೆಯನ್ನು ಜಾರಿಗೆ ತರುವ ಮೂಲಕ ಜಗತ್ತಿಗೆ ತಾಂತ್ರಿಕ ನಾಯಕತ್ವ ನೀಡಲು ಸನ್ನದ್ಧವಾಗುತ್ತಿದೆ. ಅಲ್ಲದೆ, ಭಾರತವು ತನ್ನದೇ ಆದ ಸ್ವದೇಶಿ 4G ಮತ್ತು 5G ತಂತ್ರಜ್ಞಾನ ವ್ಯವಸ್ಥೆಯನ್ನು (Stack) ಅಭಿವೃದ್ಧಿಪಡಿಸಿರುವುದು ವಿಶೇಷ.
➤ ಸ್ಪರ್ಧಾತ್ಮಕ ಪರೀಕ್ಷೆಗಳ ದೃಷ್ಟಿಯಿಂದ ಮುಖ್ಯ ಮಾಹಿತಿ:
- 5G ಸೇವೆಯು ಭಾರತದಲ್ಲಿ ಅಕ್ಟೋಬರ್ 1, 2022 ರಂದು ಚಾಲನೆ ಪಡೆಯಿತು.
- ಪ್ರಸ್ತುತ ಕೇಂದ್ರ ಸಂಪರ್ಕ ಸಚಿವರು: ಜ್ಯೋತಿರಾದಿತ್ಯ ಸಿಂಧಿಯಾ.

## ಐತಿಹಾಸಿಕ ಸಾಧನೆ: OTA ಗ್ವಾಲಿಯರ್‌ನಲ್ಲಿ ಚಿನ್ನದ ಪದಕ ಗೆದ್ದ ಈಶಾನ್ಯ ಭಾರತದ ಮೊದಲ ಮಹಿಳಾ ಅಧಿಕಾರಿ ಲೆಫ್ಟಿನೆಂಟ್ ಡಾ. ಕೆ.ಎಂ. ಸುಧಾ



➤ಗ್ವಾಲಿಯರ್: ದೇಶದ ಪ್ರತಿಷ್ಠಿತ ಸೇನಾ ತರಬೇತಿ ಕೇಂದ್ರಗಳಲ್ಲಿ ಒಂದಾದ ಗ್ವಾಲಿಯರ್‌ನ ಆಫೀಸರ್ ಟ್ರೈನಿಂಗ್ ಅಕಾಡೆಮಿ (OTA) ಯಲ್ಲಿ ನಡೆದ ವಾರ್ಷಿಕ ಎನ್‌ಸಿಸಿ ಅಧಿಕಾರಿಗಳ ತರಬೇತಿ ಸಮಾರಂಭವು ಈ ಬಾರಿ ವಿಶೇಷ ಇತಿಹಾಸಕ್ಕೆ ಸಾಕ್ಷಿಯಾಯಿತು. ಈಶಾನ್ಯ ಭಾರತದ ಲೆಫ್ಟಿನೆಂಟ್ ಡಾ. ಕೆ.ಎಂ. ಸುಧಾ ಅವರು ಈ ಅಕಾಡೆಮಿಯಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ.
➤ ಗುವಾಹಟಿಯ ರಾಯಲ್ ಗ್ಲೋಬಲ್ ಯೂನಿವರ್ಸಿಟಿಯ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮತ್ತು 30 ಅಸ್ಸಾಂ ಬೆಟಾಲಿಯನ್‌ನ ಅಸೋಸಿಯೇಟ್ ಎನ್‌ಸಿಸಿ ಅಧಿಕಾರಿಯಾದ (ANO) ಲೆಫ್ಟಿನೆಂಟ್ ಡಾ. ಕೆ.ಎಂ. ಸುಧಾ ಅವರು ಈ ಅಮೋಘ ಸಾಧನೆ ಮಾಡಿದರು. ಕಳೆದ ಹಲವು ದಶಕಗಳಿಂದ ನಡೆಯುತ್ತಿರುವ ಈ ರಾಷ್ಟ್ರಮಟ್ಟದ ಕಾರ್ಯಕ್ರಮದಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡ ಈಶಾನ್ಯ ಭಾರತದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಇವರು ಪಾತ್ರರಾಗಿದ್ದಾರೆ.
➤ ದೇಶಾದ್ಯಂತದ ವಿವಿಧ ರಾಜ್ಯಗಳಿಂದ ಆಗಮಿಸಿದ್ದ 127 ಅಸೋಸಿಯೇಟ್ ಎನ್‌ಸಿಸಿ ಅಧಿಕಾರಿಗಳೊಂದಿಗೆ ಸ್ಪರ್ಧಿಸಿದ ಡಾ. ಸುಧಾ ಅವರು, ಅಕಾಡೆಮಿಯ 'ಅತ್ಯುತ್ತಮ ಶೂಟರ್' (Best Firer) ಪ್ರಶಸ್ತಿಯನ್ನು ಗೆದ್ದಿದ್ದಾರೆ. ಅಷ್ಟೇ ಅಲ್ಲದೆ, ತರಬೇತಿಯ ಅಂತಿಮ ಮೆರಿಟ್ ಪಟ್ಟಿಯಲ್ಲಿ 'A' ಗ್ರೇಡ್ ಪಡೆಯುವ ಮೂಲಕ ತಮ್ಮ ಶೈಕ್ಷಣಿಕ ಮತ್ತು ಶಿಸ್ತಿನ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಈ ತರಬೇತಿಯ ಯಶಸ್ವಿ ಮುಕ್ತಾಯದ ನಂತರ, ಅವರಿಗೆ ಅಧಿಕೃತವಾಗಿ ಭಾರತೀಯ ಸೇನೆಯ 'ಲೆಫ್ಟಿನೆಂಟ್' ಶ್ರೇಣಿಯನ್ನು ನೀಡಿ ಗೌರವಿಸಲಾಯಿತು.
➤ ಅತ್ಯಂತ ಕಠಿಣವಾದ ಈ ತರಬೇತಿ ಅವಧಿಯಲ್ಲಿ ಡಾ. ಸುಧಾ ಅವರು ಸರ್ವತೋಮುಖ ಪ್ರದರ್ಶನ ನೀಡಿದ್ದಾರೆ. ಇವರು ಕೇವಲ ಶಸ್ತ್ರಾಸ್ತ್ರ ತರಬೇತಿಯಲ್ಲಿ ಮಾತ್ರವಲ್ಲದೆ, ಡ್ರಿಲ್ ಸ್ಪರ್ಧೆ, ಯೋಗ

ಸೂಚನಾ ಅಭ್ಯಾಸ, ಉಪನ್ಯಾಸ ತರಬೇತಿ, ಮ್ಯಾಪ್ ರೀಡಿಂಗ್ (ನಕ್ಷೆ ಓದುವಿಕೆ) ಮುಂತಾದ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಕೌಶಲ್ಯ ಪ್ರದರ್ಶಿಸಿದ್ದಾರೆ. ಅಕಾಡೆಮಿಕ್ ಮತ್ತು ಮಿಲಿಟರಿ ಶಿಸ್ತಿನ ಈ ಸಮನ್ವಯವು ಭವಿಷ್ಯದ ಯುವ ಕೆಡೆಟ್‌ಗಳಿಗೆ ಮತ್ತು ಶಿಕ್ಷಕರಿಗೆ ದೊಡ್ಡ ಸ್ಫೂರ್ತಿಯಾಗಿದೆ.

➤ ಈ ಸಾಧನೆಯು ರಾಷ್ಟ್ರೀಯ ರಕ್ಷಣಾ ತರಬೇತಿ ಕ್ಷೇತ್ರದಲ್ಲಿ ಈಶಾನ್ಯ ಭಾರತದ ಪ್ರಾತಿನಿಧ್ಯವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಈ ಭಾಗದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಎನ್‌ಸಿಸಿ ಮತ್ತು ರಕ್ಷಣಾ ಪಡೆಗಳಿಗೆ ಸೇರಲು ಇದು ಉತ್ತೇಜನ ನೀಡುತ್ತದೆ ಎಂದು ರಾಯಲ್ ಗ್ಲೋಬಲ್ ಯೂನಿವರ್ಸಿಟಿಯ ಅಧಿಕಾರಿಗಳು ಶ್ಲಾಘಿಸಿದ್ದಾರೆ. ಈ ಐತಿಹಾಸಿಕ ಯಶಸ್ಸು ಕೇವಲ ವೈಯಕ್ತಿಕ ಸಾಧನೆಯಲ್ಲದೆ, ಇಡೀ ಪ್ರಾದೇಶಿಕ ಏಕೀಕರಣ ಮತ್ತು ರಾಷ್ಟ್ರೀಯ ಶಕ್ತಿಯ ಸಂಕೇತವಾಗಿ ಹೊರಹೊಮ್ಮಿದೆ.

## ಮಕ್ಕಳ ಕಳ್ಳಸಾಗಾಣಿಕೆ ತಡೆಗೆ ಶ್ರಮಿಸಿದ ಆರ್‌ಪಿಎಫ್ ಅಧಿಕಾರಿ ಚಂದನಾ ಸಿನ್ಹಾ ಅವರಿಗೆ ರೈಲ್ವೆ ಇಲಾಖೆಯ ಅತ್ಯುನ್ನತ ಪ್ರಶಸ್ತಿ ಗೌರವ



➤ ಭಾರತೀಯ ರೈಲ್ವೆಯ ರೈಲ್ವೆ ಸುರಕ್ಷತಾ ಪಡೆಯ (RPF) ಹಿರಿಯ ಅಧಿಕಾರಿ ಚಂದನಾ ಸಿನ್ಹಾ ಅವರಿಗೆ ರೈಲ್ವೆ ಇಲಾಖೆಯ ಅತ್ಯುನ್ನತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ರೈಲ್ವೆ ಜಾಲದ ಮೂಲಕ ನಡೆಯುವ ಮಕ್ಕಳ ಸಾಗಾಣಿಕೆ (Child Trafficking) ತಡೆಗಟ್ಟುವಲ್ಲಿ ಅವರು ಮಾಡಿದ ಅಸಾಧಾರಣ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

➤ ಭಾರತೀಯ ರೈಲ್ವೆಯ ಅತ್ಯುನ್ನತ ಪ್ರಶಸ್ತಿ:- ಈ ಪ್ರಶಸ್ತಿಯು ಕೇವಲ ಕಾರ್ಯಾಚರಣೆಯ ಯಶಸ್ಸನ್ನು ಮಾತ್ರವಲ್ಲದೆ, ಸೇವೆಯಲ್ಲಿನ ಮಾನವೀಯ ಪರಿಣಾಮವನ್ನು ಪರಿಗಣಿಸಿ ನೀಡಲಾಗುತ್ತದೆ. ಇದು ರೈಲ್ವೆ ಇಲಾಖೆಯು ಕೇವಲ ಸಾರಿಗೆಗೆ ಸೀಮಿತವಾಗದೆ, ಸಾಮಾಜಿಕ ಜವಾಬ್ದಾರಿಯನ್ನೂ ಹೊಂದಿದೆ ಎಂಬುದನ್ನು ಸಾಬೀತುಪಡಿಸುತ್ತದೆ.

➤ ಚಂದನಾ ಸಿನ್ಹಾ ಅವರು ರೈಲ್ವೆ ಸುರಕ್ಷತಾ ಪಡೆಯ (RPF) ಹಿರಿಯ ಅಧಿಕಾರಿಯಾಗಿದ್ದಾರೆ. ಅವರು ಕೇವಲ ಕಾನೂನು ಜಾರಿ ಮಾಡುವುದಷ್ಟೇ ಅಲ್ಲದೆ, ಮಕ್ಕಳ ಸುರಕ್ಷತೆಯ ಬಗ್ಗೆ ತಳಮಟ್ಟದಲ್ಲಿ ಕೆಲಸ ಮಾಡಿದ್ದಾರೆ. ಕಳ್ಳಸಾಗಾಣಿಕೆಗೆ ಒಳಗಾದ ಮಕ್ಕಳನ್ನು ಗುರುತಿಸುವುದು, ರಕ್ಷಿಸುವುದು ಮತ್ತು ಅವರಿಗೆ ಸೂಕ್ತ ಪುನರ್ವಸತಿ ಕಲ್ಪಿಸುವುದಕ್ಕೆ ಅವರು ಮೊದಲ ಆದ್ಯತೆ ನೀಡಿದರು. ಎನ್‌ಜಿಒಗಳು (NGO), ಮಕ್ಕಳ ಕಲ್ಯಾಣ ಸಮಿತಿಗಳು ಮತ್ತು ರಾಜ್ಯ ಸರ್ಕಾರಿ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ಅವರು ಯಶಸ್ವಿಯಾಗಿದ್ದಾರೆ.

➤ ಭಾರತದ ರೈಲ್ವೆ ಜಾಲವು ಬೃಹತ್ ಪ್ರಮಾಣದ ಪ್ರಯಾಣಿಕರನ್ನು ಹೊಂದಿರುವುದರಿಂದ, ಕಳ್ಳಸಾಗಾಣಿಕೆದಾರರು ಮಕ್ಕಳನ್ನು ಸಾಗಿಸಲು ಇದನ್ನು ಸುಲಭ ಮಾರ್ಗವಾಗಿ ಬಳಸಿಕೊಳ್ಳುತ್ತಾರೆ.

- ಪ್ರತಿ ವರ್ಷ ಸಾವಿರಾರು ಮಕ್ಕಳು ರೈಲುಗಳ ಮೂಲಕ ಓಡಿಹೋಗುತ್ತಾರೆ ಅಥವಾ ಕಳ್ಳಸಾಗಾಣಿಕೆಗೆ ಒಳಗಾಗುತ್ತಾರೆ.
- ಸಂದೇಹಾಸ್ಪದ ಓಡಾಟವನ್ನು ಪತ್ತೆಹಚ್ಚುವಲ್ಲಿ ಮತ್ತು ಸಮಯೋಚಿತವಾಗಿ ಮಧ್ಯಪ್ರವೇಶಿಸುವಲ್ಲಿ ಆರ್‌ಪಿಎಫ್ ಅಧಿಕಾರಿಗಳ ಪಾತ್ರ ಬಹಳ ಮುಖ್ಯವಾಗಿದೆ.

**➤ ಚಂದನಾ ಸಿನ್ಹಾ ಅವರ ಪ್ರಮುಖ ಕೊಡುಗೆಗಳು:-**

=> ಆರಂಭಿಕ ಪತ್ತೆ: ಒಬ್ಬಂಟಿಯಾಗಿ ಅಥವಾ ಸಂಶಯಾಸ್ಪದ ವ್ಯಕ್ತಿಗಳೊಂದಿಗೆ ಪ್ರಯಾಣಿಸುತ್ತಿರುವ ಮಕ್ಕಳನ್ನು ತ್ವರಿತವಾಗಿ ಗುರುತಿಸುವ ತಂತ್ರಜ್ಞಾನ ಮತ್ತು ಕಾರ್ಯವಿಧಾನಗಳನ್ನು ಜಾರಿಗೆ ತಂದರು.

=> ಮಕ್ಕಳ ಸ್ನೇಹಿ ಪ್ರೋಟೋಕಾಲ್: ರಕ್ಷಿಸಲ್ಪಟ್ಟ ಮಕ್ಕಳನ್ನು ಅಪರಾಧಿಗಳಂತೆ ನೋಡದೆ, ಸಂತ್ರಸ್ತರಂತೆ ಕಂಡು ಅವರಿಗೆ ಮಾನವೀಯತೆಯಿಂದ ಸ್ಪಂದಿಸುವ ವ್ಯವಸ್ಥೆಯನ್ನು ಆರ್‌ಪಿಎಫ್‌ನಲ್ಲಿ ಬಲಪಡಿಸಿದರು.

=> ಅಂತರ-ಸಂಸ್ಥೆ ಸಹಯೋಗ: ರೈಲ್ವೆ ಮತ್ತು ಮಕ್ಕಳ ರಕ್ಷಣಾ ಸಂಸ್ಥೆಗಳ ನಡುವಿನ ಕಂದಕವನ್ನು ಕಡಿಮೆ ಮಾಡಿ, ರಕ್ಷಿಸಿದ ಮಕ್ಕಳನ್ನು ಸುರಕ್ಷಿತವಾಗಿ ಕಲ್ಯಾಣ ಸಂಸ್ಥೆಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆಯನ್ನು ವೇಗಗೊಳಿಸಿದರು.

**➤ ರೈಲ್ವೆ ಸುರಕ್ಷತಾ ಪಡೆ (RPF) ಬಗ್ಗೆ:-**

- ಇದು ಭಾರತೀಯ ರೈಲ್ವೆ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.
- ರೈಲ್ವೆ ಆಸ್ತಿ ಮತ್ತು ಪ್ರಯಾಣಿಕರ ಸುರಕ್ಷತೆಯು ಇದರ ಪ್ರಮುಖ ಜವಾಬ್ದಾರಿಯಾಗಿದೆ.
- 'ಆಪರೇಷನ್ ನನ್ಹೆ ಫರಿಸ್ತೆ' (Operation Nanhe Farishte) ಅಡಿಯಲ್ಲಿ ಆರ್‌ಪಿಎಫ್ ಮಕ್ಕಳು ಮತ್ತು ಮಹಿಳೆಯರ ರಕ್ಷಣೆಗಾಗಿ ವಿಶೇಷ ಕಾರ್ಯಾಚರಣೆಗಳನ್ನು ನಡೆಸುತ್ತದೆ.

# 20 Jan 2026

## ಹಿಮಾಚಲ ಪ್ರದೇಶಕ್ಕೆ ಎರಡು ಹೊಸ MSME ತಂತ್ರಜ್ಞಾನ ಕೇಂದ್ರಗಳ ಕೊಡುಗೆ: ಕೈಗಾರಿಕಾ ಪ್ರಗತಿಗೆ ಹೊಸ ವೇಗ




➤ ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯವು (MSME) ಹಿಮಾಚಲ ಪ್ರದೇಶದ ಉನಾ ಜಿಲ್ಲೆಯ ಪಂಡೋಗಾ (Pandoga) ಮತ್ತು ಸೋಲನ್ ಜಿಲ್ಲೆಯ ಪರ್ವಾನೂ (Parwanoo) ಎಂಬಲ್ಲಿ ತಲಾ ₹10 ಕೋಟಿ ವೆಚ್ಚದಲ್ಲಿ ಎರಡು ಹೊಸ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಅನುಮೋದನೆ ನೀಡಿದೆ. ಇದು ರಾಜ್ಯದ ಕೈಗಾರಿಕಾ ಪ್ರಗತಿ ಮತ್ತು ಯುವಜನರ ಕೌಶಲ್ಯ ಅಭಿವೃದ್ಧಿಗೆ ಪೂರಕವಾಗಲಿದೆ.

➤ MSME ಸಚಿವಾಲಯದ ಪಾತ್ರ: ಕೇಂದ್ರ MSME ಸಚಿವಾಲಯವು ಸಣ್ಣ ಉದ್ಯಮಗಳು, ಉದ್ಯಮಶೀಲತೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಣಕಾಸಿನ ನೆರವು, ಮೂಲಸೌಕರ್ಯ ಅಭಿವೃದ್ಧಿ ಮತ್ತು ತಾಂತ್ರಿಕ ತರಬೇತಿಯ ಮೂಲಕ ಇದು ಸಣ್ಣ ಉದ್ದಿಮೆದಾರರಿಗೆ ಬೆಂಬಲ ನೀಡುತ್ತದೆ. ವಿಶೇಷವಾಗಿ ಗುಡ್ಡಗಾಡು ಪ್ರದೇಶಗಳಾದ ಹಿಮಾಚಲ ಪ್ರದೇಶದಲ್ಲಿ ಕೈಗಾರಿಕೀಕರಣವನ್ನು ಉತ್ತೇಜಿಸಲು ಈ ಕ್ರಮ ಕೈಗೊಳ್ಳಲಾಗಿದೆ.

**➤ ಪ್ರಮುಖ ಪ್ರಯೋಜನಗಳು:**

=> ತಾಂತ್ರಿಕ ಬೆಂಬಲ: ಸ್ಥಳೀಯ ಕೈಗಾರಿಕೆಗಳಿಗೆ ಸುಧಾರಿತ ಉತ್ಪಾದನಾ ತಂತ್ರಗಳು ಮತ್ತು ಗುಣಮಟ್ಟ ಸುಧಾರಣೆಗೆ ಈ ಕೇಂದ್ರಗಳು ನೆರವಾಗಲಿವೆ.

=> ಕೌಶಲ್ಯ ಅಭಿವೃದ್ಧಿ: ಯುವಜನರಿಗೆ ತಾಂತ್ರಿಕ ತರಬೇತಿ ಮತ್ತು ಹ್ಯಾಂಡ್ಸ್-ಆನ್ ಸ್ಕಿಲ್ ಪ್ರೋಗ್ರಾಂಗಳ ಮೂಲಕ ಉದ್ಯೋಗಾರ್ಹತೆಯನ್ನು ಹೆಚ್ಚಿಸುವುದು.

=> ಹೂಡಿಕೆ ಆಕರ್ಷಣೆ: ಉತ್ತಮ ಮೂಲಸೌಕರ್ಯ ಲಭ್ಯತೆಯಿಂದಾಗಿ ಉತ್ಪಾದನಾ ವಲಯದಲ್ಲಿ ಹೊಸ ಹೂಡಿಕೆಗಳು ರಾಜ್ಯಕ್ಕೆ ಹರಿದು ಬರಲಿವೆ.

=> ಸ್ಥಳೀಯ ಆರ್ಥಿಕತೆ ಬಲವರ್ಧನೆ: ಸ್ವಯಂ ಉದ್ಯೋಗ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ ನೀಡುವ ಮೂಲಕ ರಾಜ್ಯದಿಂದ ವಲಸೆಯನ್ನು ತಡೆಗಟ್ಟಿ ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುವುದು ಇದರ ಗುರಿಯಾಗಿದೆ.





## ಭಾರತದ ಎಲೆಕ್ಟ್ರಾನಿಕ್ಸ್ ರಫ್ತಿನಲ್ಲಿ ಐತಿಹಾಸಿಕ ದಾಖಲೆ: 2025 ರಲ್ಲಿ $47 ಬಿಲಿಯನ್ ಸಾಧನೆ!




➤ ಭಾರತದ ಎಲೆಕ್ಟ್ರಾನಿಕ್ಸ್ ರಫ್ತು ಕ್ಷೇತ್ರವು 2025ರಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಿದೆ. ಮೊದಲ ಬಾರಿಗೆ ಎಲೆಕ್ಟ್ರಾನಿಕ್ಸ್ ರಫ್ತು 47 ಬಿಲಿಯನ್ ಡಾಲರ್ (ಅಂದಾಜು ₹4.15 ಲಕ್ಷ ಕೋಟಿ) ಗಡಿಯನ್ನು ದಾಟಿದೆ. ಸ್ಮಾರ್ಟ್‌ಫೋನ್ ಉತ್ಪಾದನೆಗೆ ನೀಡಲಾದ ಉತ್ಪಾದನಾ ಆಧಾರಿತ ಪ್ರೋತ್ಸಾಹಕ (PLI) ಯೋಜನೆಯು ಈ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ.

- ಬೃಹತ್ ಬೆಳವಣಿಗೆ: 2024 ರಲ್ಲಿ 34.93 ಬಿಲಿಯನ್ ಡಾಲರ್ ಇದ್ದ ರಫ್ತು, 2025 ರಲ್ಲಿ 37% ರಷ್ಟು ಏರಿಕೆ ಕಂಡು 47 ಬಿಲಿಯನ್ ಡಾಲರ್‌ಗೆ ತಲುಪಿದೆ.
- ಮಾಸಿಕ ಸಾಧನೆ: 2025 ರ 12 ತಿಂಗಳುಗಳಲ್ಲಿ 7 ತಿಂಗಳು ರಫ್ತು ಪ್ರಮಾಣವು 4 ಬಿಲಿಯನ್ ಡಾಲರ್ ಮೊತ್ತವನ್ನು ಮೀರಿಸಿದೆ.
- ಡಿಸೆಂಬರ್ ದಾಖಲೆ: ಡಿಸೆಂಬರ್ 2025 ರಲ್ಲಿ ಮಾತ್ರ $4.17 ಬಿಲಿಯನ್ ಮೌಲ್ಯದ ರಫ್ತು ನಡೆದಿದ್ದು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ 16.8% ಹೆಚ್ಚಳವಾಗಿದೆ.

➤ ಸ್ಮಾರ್ಟ್‌ಫೋನ್ ಮತ್ತು ಐಫೋನ್ (iPhone) ಪಾತ್ರ:-

=> ಒಟ್ಟು ಎಲೆಕ್ಟ್ರಾನಿಕ್ಸ್ ರಫ್ತಿನಲ್ಲಿ ಸುಮಾರು ಮರನೇ ಎರಡು ಭಾಗ ($30 ಬಿಲಿಯನ್) ಪಾಲು ಸ್ಮಾರ್ಟ್‌ಫೋನ್‌ಗಳದ್ದಾಗಿದೆ.

=> ಆಪಲ್ (Apple) ಕಂಪನಿಯ ಐಫೋನ್‌ಗಳು ಈ ಬೆಳವಣಿಗೆಯ ಎಂಜಿನ್ ಆಗಿ ಕಾರ್ಯನಿರ್ವಹಿಸಿವೆ. ಒಟ್ಟು ರಫ್ತಿನಲ್ಲಿ ಐಫೋನ್‌ಗಳ ಪಾಲು ಗಣನೀಯವಾಗಿದೆ.

=> ಕಳೆದ ಐದು ವರ್ಷಗಳಲ್ಲಿ (2021-2025) ಭಾರತದಿಂದ ಒಟ್ಟು $79.03 ಬಿಲಿಯನ್ ಮೌಲ್ಯದ ಸ್ಮಾರ್ಟ್‌ಫೋನ್ ರಫ್ತಾಗಿದ್ದು, ಇದರಲ್ಲಿ 2025 ರ ಕೊಡುಗೆ ಅತ್ಯಂತ ಹೆಚ್ಚಾಗಿದೆ.

➤ **ಇತರ ರಫ್ತು ಉತ್ಪನ್ನಗಳು: ಕೇವಲ ಸ್ಮಾರ್ಟ್‌ಫೋನ್ ಮಾತ್ರವಲ್ಲದೆ, ಈ ಕೆಳಗಿನ ಉತ್ಪನ್ನಗಳು ಕೂಡ ರಫ್ತು ಹೆಚ್ಚಳಕ್ಕೆ ಸಹಕಾರಿಯಾಗಿವೆ:**

1. ಫೋಟೋವೋಲ್ಟಾಯಿಕ್ ಸೆಲ್‌ಗಳು (ಸೌರಶಕ್ತಿ ಉಪಕರಣಗಳು).
2. ರೂಟರ್‌ಗಳು ಮತ್ತು ನೆಟ್‌ವರ್ಕಿಂಗ್ ಸಾಧನಗಳು.
3. ಚಾರ್ಜರ್ ಅಡಾಪ್ಟರ್‌ಗಳು.
4. ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ ಅಸೆಂಬ್ಲಿಗಳು (PCBA).

➤ PLI (Production-Linked Incentive - PLI) ಯೋಜನೆಯ ಪ್ರಭಾವ:- ಭಾರತ ಸರ್ಕಾರದ ಉತ್ಪಾದನಾ ಆಧಾರಿತ ಪ್ರೋತ್ಸಾಹಕ (PLI) ಯೋಜನೆಯು ಜಾಗತಿಕ ಕಂಪನಿಗಳು ಭಾರತದಲ್ಲಿ ತಮ್ಮ ಘಟಕಗಳನ್ನು ಸ್ಥಾಪಿಸಲು ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಪ್ರೇರೇಪಿಸಿದೆ. ಇದು ಭಾರತವನ್ನು ಜಾಗತಿಕ ಪೂರೈಕೆ ಸರಪಳಿಯಲ್ಲಿ (Global Supply Chain) ಪ್ರಮುಖ ಕೇಂದ್ರವನ್ನಾಗಿ ರೂಪಿಸುತ್ತಿದೆ.

➤ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರ ಪ್ರಕಾರ, ಸೆಮಿಕಂಡಕ್ಟರ್ ಉತ್ಪಾದನೆಗೆ ನೀಡುತ್ತಿರುವ ಉತ್ತೇಜನದಿಂದಾಗಿ ಮುಂದಿನ ದಿನಗಳಲ್ಲಿ ರಫ್ತು ಇನ್ನೂ ಹೆಚ್ಚಾಗಲಿದೆ. ಮುಂದಿನ ಗುರಿ 55 ಬಿಲಿಯನ್ ಡಾಲರ್ ತಲುಪುವುದಾಗಿದೆ. ಆದರೆ, ಜಾಗತಿಕ ಸುಂಕದ ನೀತಿಗಳು ಮತ್ತು ವ್ಯಾಪಾರ ನಿರ್ಬಂಧಗಳ ಸವಾಲುಗಳನ್ನು ಎದುರಿಸುವುದು ಇಲ್ಲಿ ಮುಖ್ಯವಾಗಿದೆ.

## ಏಷ್ಯನ್ ಬಾಕ್ಸಿಂಗ್ ಕೌನ್ಸಿಲ್ ಸದಸ್ಯರಾಗಿ ಭಾರತದ ಬಾಕ್ಸಿಂಗ್ ದಿಗ್ಗಜ ವಿಜೇಂದರ್ ಸಿಂಗ್ ನೇಮಕ



➤ ಭಾರತದ ಖ್ಯಾತ ಬಾಕ್ಸರ್ ಮತ್ತು ಒಲಿಂಪಿಕ್ ಪದಕ ವಿಜೇತ ವಿಜೇಂದರ್ ಸಿಂಗ್ ಅವರನ್ನು ಏಷ್ಯನ್ ಬಾಕ್ಸಿಂಗ್ ಕೌನ್ಸಿಲ್ (Asian Boxing Council) ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ ಎಂದು ಭಾರತೀಯ ಬಾಕ್ಸಿಂಗ್ ಫೆಡರೇಶನ್ (BFI) ಶನಿವಾರ (17-01-2026) ಘೋಷಿಸಿದೆ. ಏಷ್ಯನ್ ಬಾಕ್ಸಿಂಗ್ ಕೌನ್ಸಿಲ್ ವಿಶ್ವ ಬಾಕ್ಸಿಂಗ್ ಕೌನ್ಸಿಲ್ (WBC) ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

➤ 40 ವರ್ಷದ ವಿಜೇಂದರ್ ಸಿಂಗ್ ಅವರು 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಮೊದಲ ಒಲಿಂಪಿಕ್ ಪದಕ ತಂದುಕೊಟ್ಟ ಹಿರಿಮೆ ಹೊಂದಿದ್ದಾರೆ. ಅಮೆಚೂರ್ ಮತ್ತು ವೃತ್ತಿಪರ ಬಾಕ್ಸಿಂಗ್ ಎರಡರಲ್ಲೂ ಎರಡು ದಶಕಗಳಿಗೂ ಹೆಚ್ಚು ಕಾಲದ ಅಪಾರ ಅನುಭವವನ್ನು ಅವರು ಹೊಂದಿದ್ದಾರೆ.

➤ "ಬೀಜಿಂಗ್‌ನಲ್ಲಿ ಇತಿಹಾಸ ನಿರ್ಮಿಸಿದಂತೆ, ಏಷ್ಯನ್ ಬಾಕ್ಸಿಂಗ್‌ನ ಬೆಳವಣಿಗೆಗೆ ಶ್ರಮಿಸಲು ನಾನು ಬದ್ಧನಾಗಿದ್ದೇನೆ. ವಿಶೇಷವಾಗಿ ಭಾರತೀಯ ಬಾಕ್ಸರ್‌ಗಳ ಮೇಲೆ ಗಮನ ಹರಿಸಿ, ಅವರು ಭವಿಷ್ಯದಲ್ಲಿ ಹೆಚ್ಚಿನ ಯಶಸ್ಸು ಸಾಧಿಸಲು ಸಹಾಯ ಮಾಡುತ್ತೇನೆ" ಎಂದು ವಿಜೇಂದರ್ ಸಿಂಗ್ ಹೇಳಿದ್ದಾರೆ.

➤ **ಇತರ ಸಾಧನೆಗಳು:**

=> 2010ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಮತ್ತು 2006ರಲ್ಲಿ ಕಂಚಿನ ಪದಕ.

=> **ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಮೂರು ಬಾರಿ ಪದಕ ವಿಜೇತ**

-2006 ರಲ್ಲಿ ಬೆಳ್ಳಿ,
-2014ರಲ್ಲಿ ಬೆಳ್ಳಿ,
-2010ರಲ್ಲಿ ಕಂಚು.

=> ವೃತ್ತಿಪರ ಬಾಕ್ಸಿಂಗ್: 2015ರಲ್ಲಿ ವೃತ್ತಿಪರ ಬಾಕ್ಸಿಂಗ್‌ಗೆ ಪಾದಾರ್ಪಣೆ ಮಾಡಿದ ಇವರು, ಇದುವರೆಗೆ ಆಡಿದ 14 ಪಂದ್ಯಗಳಲ್ಲಿ 13ರಲ್ಲಿ ಜಯಗಳಿಸಿದ್ದಾರೆ (9 ನಾಕೌಟ್ ಜಯಗಳು).

➤ ಏಷ್ಯನ್ ಬಾಕ್ಸಿಂಗ್ ಕೌನ್ಸಿಲ್ (ABC) : ಏಷ್ಯನ್ ಬಾಕ್ಸಿಂಗ್ ಕೌನ್ಸಿಲ್ ಏಷ್ಯಾ ಖಂಡದಲ್ಲಿ ವೃತ್ತಿಪರ ಬಾಕ್ಸಿಂಗ್ ಅನ್ನು ನಿಯಂತ್ರಿಸುವ ಮತ್ತು ಉತ್ತೇಜಿಸುವ ಅತ್ಯುನ್ನತ ಸಂಸ್ಥೆಯಾಗಿದೆ. ಇದು ವಿಶ್ವದ ಅತ್ಯಂತ ಪ್ರಭಾವಶಾಲಿ ಬಾಕ್ಸಿಂಗ್ ಸಂಸ್ಥೆಯಾದ ವರ್ಲ್ಡ್ ಬಾಕ್ಸಿಂಗ್ ಕೌನ್ಸಿಲ್ (World Boxing Council - WBC) ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಇದರ ಪ್ರಧಾನ ಕಛೇರಿ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿದೆ. ಏಷ್ಯಾ ಮಾತ್ರವಲ್ಲದೆ, ಇದು ಆಸ್ಟ್ರೇಲಿಯಾ ಮತ್ತು ಓಷಿಯಾನಿಯಾ ಪ್ರದೇಶಗಳ ಬಾಕ್ಸಿಂಗ್ ಚಟುವಟಿಕೆಗಳನ್ನು ಸಹ ನೋಡಿಕೊಳ್ಳುತ್ತದೆ.

## ನಾಸಾದಿಂದ ಐತಿಹಾಸಿಕ ಆರ್ಟೆಮಿಸ್-2 ಚಂದ್ರಯಾನ: ಫೆಬ್ರವರಿ 6ರಂದು ಉಡಾವಣೆ



➤ ಅಮೆರಿಕದ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆ ನಾಸಾ (NASA), ಐದು ದಶಕಗಳ ಸುದೀರ್ಘ ಕಾಯುವಿಕೆಯ ನಂತರ ಮತ್ತೆ ಮಾನವ ಸಹಿತ ಚಂದ್ರಯಾನಕ್ಕೆ ಸಿದ್ಧತೆ ನಡೆಸಿದ್ದು, ಮಹತ್ವಾಕಾಂಕ್ಷೆಯ 'ಆರ್ಟೆಮಿಸ್-2' (Artemis II) ಮಿಷನ್ ಅನ್ನು 2026ರ ಫೆಬ್ರವರಿ 6 ರಂದು ಉಡಾವಣೆ ಮಾಡುವ ಗುರಿ ಹೊಂದಿದೆ. ಈ ಯೋಜನೆಯಲ್ಲಿ ಸ್ಪೇಸ್ ಲಾಂಚ್ ಸಿಸ್ಟಮ್ (SLS) ರಾಕೆಟ್ ಮತ್ತು ಓರಿಯನ್ (Orion) ಬಾಹ್ಯಾಕಾಶ ನೌಕೆಯನ್ನು ಬಳಸಲಾಗುತ್ತಿದ್ದು, ಸುಮಾರು 10 ದಿನಗಳ ಈ ಯಾನದಲ್ಲಿ ಗಗನಯಾತ್ರಿಗಳು ಚಂದ್ರನ ಮೇಲೆ ಇಳಿಯದೆ, ಅದರ ಸುತ್ತ **ಪ್ರದಕ್ಷಿಣೆ ಹಾಕಿ ಸುರಕ್ಷಿತವಾಗಿ ಭೂಮಿಗೆ ಮರಳಲಿದ್ದಾರೆ.**

**➤ ತಂಡದಲ್ಲಿರುವ ನಾಲ್ವರು ಗಗನಯಾತ್ರಿಗಳು: ಈ ಮಿಷನ್ ಐತಿಹಾಸಿಕವಾಗಿ ಮಹತ್ವ ಪಡೆದಿದೆ ಏಕೆಂದರೆ ಇದರಲ್ಲಿ ವೈವಿಧ್ಯಮಯ ತಂಡವಿದೆ:**

1. ರೀಡ್ ವಿಸ್ಮನ್ (ಕಮಾಂಡರ್): ನಾಸಾದ ಅನುಭವಿ ಗಗನಯಾತ್ರಿ.
2. ವಿಕ್ಟರ್ ಗ್ಲೋವರ್ (ಪೈಲಟ್): ಚಂದ್ರನತ್ತ ಪ್ರಯಾಣಿಸಲಿರುವ ಮೊದಲ ಕಪ್ಪು ವರ್ಣೀಯ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.
3. ಕ್ರಿಸ್ಟಿನಾ ಕೋಚ್ (ಮಿಷನ್ ಸ್ಪೆಷಲಿಸ್ಟ್): ಚಂದ್ರನತ್ತ ಸಾಗಲಿರುವ ಮೊದಲ ಮಹಿಳಾ ಗಗನಯಾತ್ರಿ.
4. ಜೆರೆಮಿ ಹ್ಯಾನ್ಸನ್ (ಮಿಷನ್ ಸ್ಪೆಷಲಿಸ್ಟ್): ಕೆನಡಾ ಬಾಹ್ಯಾಕಾಶ ಸಂಸ್ಥೆಯ ಇವರು, ಚಂದ್ರನತ್ತ ಪ್ರಯಾಣಿಸಲಿರುವ ಅಮೆರಿಕನ್ ಅಲ್ಲದ ಮೊದಲ ವ್ಯಕ್ತಿ.

**➤ ಆರ್ಟೆಮಿಸ್ ಯೋಜನೆಯ ಉದ್ದೇಶ ಮತ್ತು ಮುಂದಿನ ಹಂತಗಳು:-**

=> ಆರ್ಟೆಮಿಸ್-2 ರ ಗುರಿ: ಮಾನವರನ್ನು ಭೂಮಿಯಿಂದ ಅತ್ಯಂತ ದೂರದ ಬಾಹ್ಯಾಕಾಶಕ್ಕೆ ಕರೆದೊಯ್ಯುವುದು ಮತ್ತು ಮುಂದಿನ ಚಂದ್ರನ ಇಳಿಯುವಿಕೆಗೆ (Landing) ಅಗತ್ಯವಾದ ತಾಂತ್ರಿಕ ಪರೀಕ್ಷೆಗಳನ್ನು ನಡೆಸುವುದು.

=> ಆರ್ಟೆಮಿಸ್-3: ಈ ಯೋಜನೆಯು 2027 ಅಥವಾ 2028 ರಲ್ಲಿ ನಡೆಯಲಿದ್ದು, ಈ ಮೂಲಕ ಮಾನವನು ಸುಮಾರು 50 ವರ್ಷಗಳ ನಂತರ ಮೊದಲ ಬಾರಿಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲಿದ್ದಾನೆ.

=> ಗೇಟ್‌ವೇ (Gateway): ಮುಂದಿನ ಹಂತದಲ್ಲಿ ಚಂದ್ರನ ಸುತ್ತ ಸಣ್ಣ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಿಸುವ ಗುರಿಯನ್ನು ನಾಸಾ ಹೊಂದಿದೆ.

➤ ಇತರ ರಾಷ್ಟ್ರಗಳ ಚಂದ್ರಯಾನದ ಗುರಿಗಳು:

=> ಚೀನಾ: 2030ರ ವೇಳೆಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ತನ್ನ ಗಗನಯಾತ್ರಿಗಳನ್ನು ಇಳಿಸುವ ಗುರಿ ಹೊಂದಿದೆ.

=> ಭಾರತ: ಚಂದ್ರಯಾನ-3ರ ಯಶಸ್ಸಿನ ನಂತರ, ಭಾರತವು 2040ರ ವೇಳೆಗೆ ಭಾರತೀಯ ಗಗನಯಾತ್ರಿಯನ್ನು ಚಂದ್ರನ ಮೇಲೆ ಇಳಿಸುವ ಗುರಿಯನ್ನು ಹೊಂದಿದೆ.

=> ರಷ್ಯಾ ಮತ್ತು ಜಪಾನ್: ಇವುಗಳೂ ಸಹ 2030-2035ರ ಅವಧಿಯಲ್ಲಿ ವಿವಿಧ ಚಂದ್ರಯಾನ ಯೋಜನೆಗಳನ್ನು ಹಮ್ಮಿಕೊಂಡಿವೆ.

➤ 1972ರ ಅಪೋಲೊ-17 ಮಿಷನ್ ನಂತರ ಮನುಷ್ಯನು ಚಂದ್ರನತ್ತ ಪ್ರಯಾಣ ಬೆಳೆಸುತ್ತಿರುವ ಮೊದಲ ಮಿಷನ್ ಇದಾಗಿದೆ. ಇದು ಕೇವಲ ಚಂದ್ರನಿಗೆ ಸೀಮಿತವಾಗದೆ, ಭವಿಷ್ಯದ ಮಂಗಳ ಗ್ರಹದ (Mars) ಯಾನಕ್ಕೆ ತಳಪದಿಯಾಗಲಿದೆ.

## ಅಂಡಮಾನ್‌ನಲ್ಲಿ ಭಾರತದ ಮೊದಲ 'ಮುಕ್ತ ಸಮುದ್ರ ಮೀನು ಸಾಕಾಣಿಕೆ' ಯೋಜನೆಗೆ ಚಾಲನೆ




➤ ಭಾರತದ ಸುಮಾರು 7,517 ಕಿ.ಮೀ ಉದ್ದದ ವಿಶಾಲ ಕರಾವಳಿ ತೀರವನ್ನು ಕೇವಲ ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕಷ್ಟೇ ಸೀಮಿತಗೊಳಿಸದೆ, ದೇಶದ ಆಹಾರ ಭದ್ರತೆಯ ಕೇಂದ್ರವನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಮುಂದಾಗಿದೆ. 'ನೀಲಿ ಆರ್ಥಿಕತೆ' (Blue Economy) ದೃಷ್ಟಿಕೋನದಡಿ ಸಮುದ್ರ ಸಂಪನ್ಮೂಲಗಳನ್ನು ಸುಸ್ಥಿರವಾಗಿ ಬಳಸಿಕೊಳ್ಳಲು ಕೇಂದ್ರ ಮೀನುಗಾರಿಕೆ ಸಚಿವಾಲಯವು ಅಂಡಮಾನ್‌ನ ನಾರ್ತ್ ಬೇಯಲ್ಲಿ ದೇಶದ ಮೊದಲ 'ಮುಕ್ತ ಸಮುದ್ರ ಮೀನು ಸಾಕಾಣಿಕೆ ಯೋಜನೆ' (Open-Sea Fish Farming) ಗೆ ಚಾಲನೆ ನೀಡಿದೆ.

➤ ಯೋಜನೆಯ ಸ್ವರೂಪ ಮತ್ತು ತಂತ್ರಜ್ಞಾನ:-

=> ಸಿ-ಕೇಜ್ ಕಲ್ಚರ್ (Sea-Cage Culture): ಸಾಂಪ್ರದಾಯಿಕವಾಗಿ ಮೀನು ಹಿಡಿಯುವ ಬದಲು, ಸಮುದ್ರದ ನಡುವೆ ಬೃಹತ್ ಪಂಜರಗಳನ್ನು ನಿರ್ಮಿಸಿ ಅಲ್ಲಿ ನಿರ್ದಿಷ್ಟ ತಳಿಯ ಮೀನುಗಳನ್ನು ಸಾಕುವುದೇ ಈ ಯೋಜನೆಯ ವಿಶೇಷ.

=> ಪ್ರಮುಖ ತಳಿಗಳು: ಈ ಯೋಜನೆಯಲ್ಲಿ ಹೆಚ್ಚಿನ ವಾಣಿಜ್ಯ ಮೌಲ್ಯವಿರುವ ಕೋಬಿಯಾ (Cobia) ಮತ್ತು ಸೀ ಬಾಸ್ (Sea Bass) ಮೀನುಗಳನ್ನು ಸಾಕಲು ಆದ್ಯತೆ ನೀಡಲಾಗಿದೆ.

=> ತಾಂತ್ರಿಕ ನೆರವು: ಕೊಚ್ಚಿಯ ಕೇಂದ್ರ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆ (CMFRI) ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಷನ್ ಟೆಕ್ನಾಲಜಿ (NIOT) ಈ ಯೋಜನೆಗೆ ತಾಂತ್ರಿಕ ಮಾರ್ಗದರ್ಶನ ನೀಡುತ್ತಿವೆ.

**➤ 'ಸುಸ್ಥಿರ ಮೀನುಗಾರಿಕೆ ನಿಯಮಗಳು 2025' (EEZ Rules 2025): ಕೇಂದ್ರ ಸರ್ಕಾರವು ಇತ್ತೀಚೆಗೆ ಭಾರತದ ಆರ್ಥಿಕ ವಲಯದಲ್ಲಿ (Exclusive Economic Zone - EEZ) ಮೀನುಗಾರಿಕೆಯನ್ನು ನಿಯಂತ್ರಿಸಲು ಹೊಸ ನಿಯಮಗಳನ್ನು ಜಾರಿಗೊಳಿಸಿದೆ:**

=> ವಿನಾಶಕಾರಿ ಪದ್ಧತಿಗಳ ನಿಷೇಧ: ಸಮುದ್ರದ ಪರಿಸರಕ್ಕೆ ಹಾನಿ ಮಾಡುವ ಎಲ್‌ಇಡಿ (LED) ಮೀನುಗಾರಿಕೆ ಮತ್ತು ಬುಲ್ ಟ್ರಾಲಿಂಗ್ ಅನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

=> ತಂತ್ರಜ್ಞಾನದ ಬಳಕೆ: ಉಪಗ್ರಹ ಆಧಾರಿತ ಮೇಲ್ವಿಚಾರಣೆ ಮತ್ತು ಕೃತಕ ಬುದ್ಧಿಮತ್ತೆ (AI) ಆಧಾರಿತ ಮೀನುಗಳಿಗೆ ಆಹಾರ ನೀಡುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುತ್ತಿದೆ.

=> ಸಮುದ್ರ ಪಾಚಿ ಕೃಷಿ: ಮೀನು ಸಾಕಾಣಿಕೆಯೊಂದಿಗೆ ಸಮುದ್ರ ಪಾಚಿ (Seaweed) ಕೃಷಿಗೂ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ.

➤ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ (PMMSY) ಪಾತ್ರ: ಈ ಮಹತ್ವಾಕಾಂಕ್ಷೆಯ ಯೋಜನೆಯಡಿ ಸರ್ಕಾರವು 682.6 ಕೋಟಿ ರೂ. ಹೂಡಿಕೆಯೊಂದಿಗೆ ದೇಶಾದ್ಯಂತ 11 ಸಮಗ್ರ ಅಕ್ವಾಪಾರ್ಕ್‌ಗಳನ್ನು (Integrated Aquaparks) ಅಭಿವೃದ್ಧಿಪಡಿಸಲು

ಅನುಮೋದನೆ ನೀಡಿದೆ. ಇದು ಮೀನುಗಾರಿಕೆ ಮೌಲ್ಯವರ್ಧನೆ ಮತ್ತು ಸಂಸ್ಕರಣೆಗೆ ಸಹಕಾರಿಯಾಗಲಿದೆ.

**➤ ಯೋಜನೆಯ ಪ್ರಮುಖ ಲಾಭಗಳು:-**

=> ಸ್ಥಿರ ಆದಾಯ: ಹವಾಮಾನ ಬದಲಾವಣೆಯಿಂದಾಗಿ ಸಮುದ್ರದಲ್ಲಿ ಮೀನುಗಳ ಸಂಖ್ಯೆ ಕ್ಷೀಣಿಸುತ್ತಿರುವಾಗ, ಈ ಪಂಜರ ಕೃಷಿಯು ಮೀನುಗಾರರಿಗೆ ಖಚಿತವಾದ ಇಳುವರಿ ಮತ್ತು ಸ್ಥಿರ ಆದಾಯವನ್ನು ನೀಡುತ್ತದೆ.

=> ರಫ್ತು ಉತ್ತೇಜನ: ಗುಣಮಟ್ಟದ ಮತ್ತು ರೋಗಮುಕ್ತ ಮೀನುಗಳನ್ನು ಬೆಳೆಸುವ ಮೂಲಕ ಅಂತರಾಷ್ಟ್ರೀಯ ಮಾರುಕಟ್ಟೆಗೆ ರಫ್ತು ಪ್ರಮಾಣವನ್ನು ದ್ವಿಗುಣಗೊಳಿಸುವ ಗುರಿ ಹೊಂದಿದೆ.

=> ಸ್ಥಳೀಯ ಸಬಲೀಕರಣ: ಮೀನುಗಾರ ಸಹಕಾರ ಸಂಘಗಳು ಮತ್ತು ಮೀನು ಉತ್ಪಾದಕರ ಸಂಘಗಳಿಗೆ (FFPOs) ತಾಂತ್ರಿಕ ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಯೋಜನೆಯ ಉದ್ದೇಶವಾಗಿದೆ.

➤ ಭಾರತವು ತನ್ನ ವಿಶಾಲವಾದ ಸಮುದ್ರ ತೀರವನ್ನು ಬಳಸಿಕೊಂಡು ಜಾಗತಿಕ ಸಾಗರ ಶಕ್ತಿಯಾಗಿ ಹೊರಹೊಮ್ಮಲು ಈ 'ಮುಕ್ತ ಸಮುದ್ರ ಕೃಷಿ' ಅತ್ಯಂತ ನಿರ್ಣಾಯಕವಾಗಿದೆ. ಇದು ಪರಿಸರ ಸಂರಕ್ಷಣೆಯೊಂದಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವ 'ಸುಸ್ಥಿರ ಅಭಿವೃದ್ಧಿ ಗುರಿ'ಗಳಿಗೆ (SDGs) ಪೂರಕವಾಗಿದೆ.

## ಗುಜರಾತ್‌ನಲ್ಲಿ ಮಾರುತಿ ಸುಜುಕಿಯ ಎರಡನೇ ಬೃಹತ್ ಕಾರು ಘಟಕ: ₹35,000 ಕೋಟಿ ಹೂಡಿಕೆ




➤ ಭಾರತದ ಪ್ರಮುಖ ವಾಹನ ತಯಾರಿಕಾ ಸಂಸ್ಥೆಯಾದ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ (MSIL), ಗುಜರಾತ್‌ನ ಗಾಂಧಿನಗರ ಸಮೀಪದ ಖೋರಾಜ್ (Khoraj) ನಲ್ಲಿ ತನ್ನ ಎರಡನೇ ಬೃಹತ್ ಕಾರು ಉತ್ಪಾದನಾ ಘಟಕವನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಮಾರುತಿ ಸುಜುಕಿ ಈ ಯೋಜನೆಯಡಿ ಒಟ್ಟು 35,000 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಲಿದೆ. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರ ಸಮ್ಮುಖದಲ್ಲಿ ಮಾರುತಿ ಸುಜುಕಿಯ ವ್ಯವಸ್ಥಾಪಕ ನಿರ್ದೇಶಕ ಹಿಸಾಶಿ ಟಕೆಚಿ ಅವರು ಹೂಡಿಕೆ ಪತ್ರವನ್ನು ಹಸ್ತಾಂತರಿಸಿದರು.

➤ ಈ ಹೊಸ ಘಟಕವು ವಾರ್ಷಿಕವಾಗಿ 10 ಲಕ್ಷ (1 ಮಿಲಿಯನ್) ಕಾರುಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರಲಿದೆ. ಇದು ತಲಾ 2.5 ಲಕ್ಷ ಸಾಮರ್ಥ್ಯದ ನಾಲ್ಕು ಉತ್ಪಾದನಾ ಲೈನ್‌ಗಳನ್ನು ಒಳಗೊಂಡಿರಲಿದೆ. ಈ ಯೋಜನೆಯಿಂದ ಸುಮಾರು 12,000 ಜನರಿಗೆ ನೇರ ಉದ್ಯೋಗ ಲಭಿಸಲಿದೆ. ಇದರೊಂದಿಗೆ ಸಾವಿರಾರು ಜನರಿಗೆ ಪರೋಕ್ಷವಾಗಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (MSME) ಮೂಲಕ ಉದ್ಯೋಗ ದೊರೆಯಲಿದೆ. ಗುಜರಾತ್ ಕೈಗಾರಿಕಾ ಅಭಿವೃದ್ಧಿ ನಿಗಮ (GIDC) ಒದಗಿಸಿರುವ 1,750 ಎಕರೆ ಭೂಮಿಯಲ್ಲಿ ಈ ಪ್ಲಾಂಟ್ ನಿರ್ಮಾಣವಾಗಲಿದೆ.

➤ ಈ ಒಪ್ಪಂದದ ಪ್ರಾಮುಖ್ಯತೆ:

=> ಮೇಕ್ ಇನ್ ಇಂಡಿಯಾ: ಪ್ರಧಾನಿ ನರೇಂದ್ರ ಮೋದಿಯವರ 'ಮೇಕ್ ಇನ್ ಇಂಡಿಯಾ' ಕನಸಿಗೆ ಈ ಯೋಜನೆ ದೊಡ್ಡ ಬಲ ನೀಡಲಿದೆ.

=> ರಫ್ತು ದಾಖಲೆ: ಮಾರುತಿ ಸುಜುಕಿ 2025ರ ವರ್ಷದಲ್ಲಿ 22.55 ಲಕ್ಷ ವಾಹನಗಳನ್ನು ಉತ್ಪಾದಿಸುವ ಮೂಲಕ ಹೊಸ ದಾಖಲೆ ಬರೆದಿದೆ. ಅಲ್ಲದೆ, 2025ರಲ್ಲಿ 3.95 ಲಕ್ಷ ವಾಹನಗಳನ್ನು ರಫ್ತು ಮಾಡುವ ಮೂಲಕ ತನ್ನ ರಫ್ತು ವಹಿವಾಟಿನಲ್ಲಿ ಶೇ. 21ಕ್ಕಿಂತ ಹೆಚ್ಚಿನ ಪ್ರಗತಿ ಸಾಧಿಸಿದೆ.

=> ಆಟೋಮೊಬೈಲ್ ಹಬ್: ಈ ಹೂಡಿಕೆಯೊಂದಿಗೆ ಗುಜರಾತ್ ಭಾರತದ ಪ್ರಮುಖ ಆಟೋಮೊಬೈಲ್ ಉತ್ಪಾದನಾ ಕೇಂದ್ರವಾಗಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದೆ.

## ಪ್ರಸಿದ್ಧ ಸಂಗೀತ ನಿರ್ದೇಶಕ ಇಳಯರಾಜಾ ಅವರಿಗೆ 2026ರ 'ಪದ್ಮಪಾಣಿ ಪ್ರಶಸ್ತಿ' ಘೋಷಣೆ



➤ ಭಾರತೀಯ ಚಿತ್ರರಂಗದ ದಂತಕಥೆ ಹಾಗೂ 'ಇಸೈಜ್ಞಾನಿ' ಎಂದೇ ಖ್ಯಾತರಾದ ಮಾಂತ್ರಿಕ ಸಂಗೀತ ನಿರ್ದೇಶಕ ಇಳಯರಾಜಾ ಅವರನ್ನು 11ನೇ ಆವೃತ್ತಿಯ ಅಜಂತಾ-ಎಲ್ಲೋರಾ ಅಂತರಾಷ್ಟ್ರೀಯ ಚಲನಚಿತ್ರೋತ್ಸವದ (AIFF) ಪ್ರತಿಷ್ಠಿತ 'ಪದ್ಮಪಾಣಿ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. 2 ಲಕ್ಷ ರೂಪಾಯಿ ನಗದು, ಪದ್ಮಪಾಣಿ ಸ್ಮರಣಿಕೆ ಮತ್ತು ಗೌರವ ಪ್ರಶಸ್ತಿ ಪತ್ರವನ್ನೊಳಗೊಂಡ ಈ ಪ್ರತಿಷ್ಠಿತ 'ಪದ್ಮಪಾಣಿ ಪ್ರಶಸ್ತಿ'ಯನ್ನು, ಜನವರಿ 28, 2026 ರಂದು ಛತ್ರಪತಿ ಸಂಭಾಜಿನಗರದ MGM ಕ್ಯಾಂಪಸ್‌ನಲ್ಲಿರುವ ರುಕ್ಮಿಣಿ ಸಭಾಂಗಣದಲ್ಲಿ ನಡೆಯಲಿರುವ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಇಳಯರಾಜಾ ಅವರಿಗೆ ನೀಡಿ ಗೌರವಿಸಲಾಗುವುದು.

➤ ಆಯ್ಕೆ ಸಮಿತಿ: ಖ್ಯಾತ ಚಲನಚಿತ್ರ ವಿಮರ್ಶಕಿ ಲತಿಕಾ ಪದ್ಗಾಂವ್ಕರ್ ನೇತೃತ್ವದ ಸಮಿತಿಯು ಇಳಯರಾಜಾ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದೆ. ಈ ಸಮಿತಿಯಲ್ಲಿ ನಿರ್ದೇಶಕ ಅಶುತೋಷ್ ಗೋವಾರಿಕರ್, ಸುನಿಲ್ ಸುಕ್ತಂಕರ್ ಮತ್ತು ಚಂದ್ರಕಾಂತ್ ಕುಲಕರ್ಣಿ ಸದಸ್ಯರಾಗಿದ್ದರು. ಚಲನಚಿತ್ರೋತ್ಸವದ ಅವಧಿ: 11ನೇ ಅಜಂತಾ-ಎಲ್ಲೋರಾ ಅಂತರಾಷ್ಟ್ರೀಯ ಚಲನಚಿತ್ರೋತ್ಸವವು ಜನವರಿ 28 ರಿಂದ ಫೆಬ್ರವರಿ 1, 2026 ರವರೆಗೆ ನಡೆಯಲಿದೆ.

➤ ಇಳಯರಾಜಾ ಅವರ ಸಾಧನೆ: ಐದು ದಶಕಗಳಿಗೂ ಹೆಚ್ಚು ಕಾಲದ ವೃತ್ತಿಜೀವನದಲ್ಲಿ ಅವರು 1,500 ಕ್ಕೂ ಹೆಚ್ಚು ಚಲನಚಿತ್ರಗಳಿಗೆ ಸಂಗೀತ ನೀಡಿದ್ದಾರೆ ಮತ್ತು 7,000 ಕ್ಕೂ ಹೆಚ್ಚು ಹಾಡುಗಳನ್ನು ಸಂಯೋಜಿಸಿದ್ದಾರೆ. ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿ ಮತ್ತು ಮರಾಠಿ ಸೇರಿದಂತೆ ಹಲವು ಭಾಷೆಗಳಲ್ಲಿ ಇವರ ಕೊಡುಗೆ ಅಪಾರ. ಭಾರತೀಯ ಶಾಸ್ತ್ರೀಯ ಮತ್ತು ಜಾನಪದ ಸಂಗೀತವನ್ನು ಪಾಶ್ಚಿಮಾತ್ಯ ಸಿಂಫನಿಗಳೊಂದಿಗೆ ಸುಂದರವಾಗಿ ಸಮ್ಮಿಲನಗೊಳಿಸುವಲ್ಲಿ ಅವರು ಸಿದ್ಧಹಸ್ತರು.

➤ ಈ ಚಲನಚಿತ್ರೋತ್ಸವವನ್ನು ಭಾರತ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ಮಹಾರಾಷ್ಟ್ರ ಸರ್ಕಾರದ ಸಾಂಸ್ಕೃತಿಕ ವ್ಯವಹಾರಗಳ ಇಲಾಖೆ ಹಾಗೂ ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮದ (NFDC) ಸಹಯೋಗದೊಂದಿಗೆ ಆಯೋಜಿಸಲಾಗಿದೆ.

➤ ಇಳಯರಾಜಾ ಅವರು ಈ ಹಿಂದೆ ಭಾರತ ಸರ್ಕಾರದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮ ವಿಭೂಷಣ'ಕ್ಕೂ ಭಾಜನರಾಗಿದ್ದಾರೆ.

## ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ 2026: ಭಾರತಕ್ಕೆ 16ನೇ ಸ್ಥಾನ




➤ ಇತ್ತೀಚೆಗೆ ಬಿಡುಗಡೆಯಾದ ಚೊಚ್ಚಲ 'ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ' (Responsible Nations Index - RNI) ದಲ್ಲಿ

ಭಾರತವು ವಿಶ್ವದ 154 ದೇಶಗಳ ಪೈಕಿ 16ನೇ ಸ್ಥಾನವನ್ನು ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ. ಈ ಸೂಚ್ಯಂಕವನ್ನು ದೆಹಲಿ ಮೂಲದ ವರ್ಲ್ಡ್ ಇಂಟೆಲೆಕ್ಚುವಲ್ ಫೌಂಡೇಶನ್ (WIF) ಅಭಿವೃದ್ಧಿಪಡಿಸಿದೆ. ಒಂದು ದೇಶವು ತನ್ನ ಪ್ರಜೆಗಳು, ಪರಿಸರ ಮತ್ತು ಜಗತ್ತಿನ ಕಡೆಗೆ ತನ್ನ ಅಧಿಕಾರವನ್ನು ಎಷ್ಟು ಜವಾಬ್ದಾರಿಯುತವಾಗಿ ಬಳಸುತ್ತದೆ ಎಂಬುದನ್ನು ಇದು ಅಳೆಯುತ್ತದೆ. ಕೇವಲ ಆರ್ಥಿಕ ಅಥವಾ ಮಿಲಿಟರಿ ಶಕ್ತಿಯು ಒಂದು ದೇಶದ ಜವಾಬ್ದಾರಿಯನ್ನು ನಿರ್ಧರಿಸುವುದಿಲ್ಲ ಎಂಬುದು ಈ ಸೂಚ್ಯಂಕದ ಮುಖ್ಯ ಆಶಯವಾಗಿದೆ.

➤ **ಸೂಚ್ಯಂಕದ ಪ್ರಮುಖ ಆಯಾಮಗಳು: ಈ ಶ್ರೇಯಾಂಕವನ್ನು ನೀಡಲು ಮೂರು ಮುಖ್ಯ ಅಂಶಗಳನ್ನು ಪರಿಗಣಿಸಲಾಗುತ್ತದೆ:**

1. ಆಂತರಿಕ ಜವಾಬ್ದಾರಿ: ನಾಗರಿಕರ ಘನತೆ, ಸಾಮಾಜಿಕ ನ್ಯಾಯ ಮತ್ತು ಜನರ ಕಲ್ಯಾಣ.
2. ಪರಿಸರ ಜವಾಬ್ದಾರಿ: ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಹವಾಮಾನ ಬದಲಾವಣೆಯ ವಿರುದ್ಧದ ಕ್ರಮಗಳು.
3. ಅಂತರಾಷ್ಟ್ರೀಯ ವರ್ತನೆ: ಜಾಗತಿಕ ಶಾಂತಿ, ಸಹಕಾರ ಮತ್ತು ಸ್ಥಿರತೆಗೆ ನೀಡುವ ಕೊಡುಗೆ.

ಇದಕ್ಕಾಗಿ ವಿಶ್ವ ಬ್ಯಾಂಕ್, ವಿಶ್ವಸಂಸ್ಥೆ ಮತ್ತು ವರ್ಲ್ಡ್ ಜಸ್ಟಿಸ್ ಪ್ರಾಜೆಕ್ಟ್‌ನಂತಹ ವಿಶ್ವಾಸಾರ್ಹ ಮೂಲಗಳ ದತ್ತಾಂಶವನ್ನು ಬಳಸಲಾಗಿದೆ.

➤ ಭಾರತದ ಸಾಧನೆ ಮತ್ತು ಪ್ರಾಮುಖ್ಯತೆ: ಭಾರತವು 16ನೇ ಸ್ಥಾನ ಪಡೆಯುವ ಮೂಲಕ ಅಮೆರಿಕ (66ನೇ ಸ್ಥಾನ) ಮತ್ತು ಚೀನಾ (68ನೇ ಸ್ಥಾನ) ಗಳಿಗಿಂತಲೂ ಉತ್ತಮ ಪ್ರದರ್ಶನ ನೀಡಿದೆ. ಆರೋಗ್ಯ ರಕ್ಷಣೆ, ಸಾಮಾಜಿಕ ಸಮಾನತೆ, ಪರಿಸರ ನೀತಿಗಳು ಮತ್ತು ಜನಕೇಂದ್ರಿತ ಆಡಳಿತದಲ್ಲಿ ಭಾರತ ಪ್ರಗತಿ ಸಾಧಿಸಿರುವುದನ್ನು ಈ ಶ್ರೇಯಾಂಕವು ಪ್ರತಿಬಿಂಬಿಸುತ್ತದೆ. ಆರ್ಥಿಕವಾಗಿ ಶ್ರೀಮಂತವಾಗಿರುವ ದೇಶಗಳಿಗಿಂತಲೂ ಅಭಿವೃದ್ಧಿಶೀಲ ರಾಷ್ಟ್ರಗಳು ಸಾಮಾಜಿಕ ಮತ್ತು ಪರಿಸರ ರಕ್ಷಣೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಇದು ಸಾಬೀತುಪಡಿಸಿದೆ.

➤ **ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ (RNI) - ಅಗ್ರ 10 ದೇಶಗಳು:-**

1. ಸಿಂಗಾಪುರ-0.619452
2. ಸ್ವಿಟ್ಜರ್ಲೆಂಡ್-0.586923
3. ಡೆನ್ಮಾರ್ಕ್-0.583724
4. ಸೈಪ್ರಸ್-0.577375
5. ಸ್ವೀಡನ್-0.573976
6. ಚೆಕಿಯಾ (ಚೆಕ್ ಗಣರಾಜ್ಯ)-0.570377
7. ಬೆಲ್ಜಿಯಂ-0.569008
8. ಆಸ್ಟ್ರಿಯಾ-0.566459
9. ಐರ್ಲೆಂಡ್-0.5633610
10. ಜಾರ್ಜಿಯಾ-0.55805

16ನೇ ಸ್ಥಾನ ಭಾರತ

➤ **ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ (RNI) - ಕೊನೆಯ 10** ದೇಶಗಳು

145 ಅಫ್ಘಾನಿಸ್ತಾನ-0.41398
146 ಉತ್ತರ ಕೊರಿಯಾ-0.41329
147 ಪಪುವಾ ನ್ಯೂಗಿನಿ-0.41172
148 ಚಾಡ್-0.40310
149 ಸುಡಾನ್-0.40120
150 ಸೋಮಾಲಿಯಾ-0.39995
151 ಯೆಮೆನ್-0.38265
152 ದಕ್ಷಿಣ ಸುಡಾನ್-0.37389
153 ಸಿರಿಯಾ-0.37254
154 ಮಧ್ಯ ಆಫ್ರಿಕನ್ ಗಣರಾಜ್ಯ-0.೩೫೭೧೫

## ವಿಪತ್ತು ನಿರ್ವಹಣೆಯ ಕ್ರಾಂತಿಕಾರಿ ತಂತ್ರಜ್ಞಾನ 'ಸೆಲ್ ಬ್ರಾಡ್‌ಕಾಸ್ಟ್ ಸಲ್ಯೂಷನ್'ಗೆ ಪ್ರತಿಷ್ಠಿತ 'ಸ್ಕೋಚ್ ಪ್ರಶಸ್ತಿ' ಗೌರವ



➤ ಕೇಂದ್ರ ಸರ್ಕಾರಿ ಸ್ವಾಮ್ಯದ ಟೆಲಿಕಾಂ ಸಂಶೋಧನಾ ಸಂಸ್ಥೆಯಾದ 'ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಟೆಲಿಮ್ಯಾಟಿಕ್ಸ್' (C-DOT) ಅಭಿವೃದ್ಧಿಪಡಿಸಿರುವ 'ಸೆಲ್ ಬ್ರಾಡ್ ಕಾಸ್ಟ್ ಸಲ್ಯೂಷನ್' (Cell Broadcast Solution - CBS) ತಂತ್ರಜ್ಞಾನಕ್ಕೆ 2025ರ ಸಾಲಿನ 'ಸ್ಕೋಚ್ ಪ್ರಶಸ್ತಿ' ಲಭಿಸಿದೆ. ವಿಕಸಿತ ಭಾರತದ ಗುರಿಯೊಂದಿಗೆ ಆಯೋಜಿಸಲಾಗಿದ್ದ 104ನೇ ಸ್ಕೋಚ್ ಶೃಂಗಸಭೆಯಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಇದು ವಿಪತ್ತು ನಿರ್ವಹಣಾ ಸಮಯದಲ್ಲಿ ಮೊಬೈಲ್ ಫೋನ್‌ಗಳ ಮೂಲಕ ಜೀವ ಉಳಿಸುವ ತುರ್ತು ಸಂದೇಶಗಳನ್ನು ನಿಖರವಾದ ಭೌಗೋಳಿಕ ಪ್ರದೇಶಗಳಿಗೆ ರವಾನಿಸುವ ಅತ್ಯಾಧುನಿಕ ವೇದಿಕೆಯಾಗಿದೆ.

➤ **ಸೆಲ್ ಬ್ರಾಡ್‌ಕಾಸ್ಟ್ ಸಲ್ಯೂಷನ್ ತಂತ್ರಜ್ಞಾನದ (CBS) ವಿಶೇಷತೆಗಳು:**

=> ಏಕೀಕೃತ ವೇದಿಕೆ: ಹವಾಮಾನ ಇಲಾಖೆ (IMD), ಕೇಂದ್ರ ಜಲ ಆಯೋಗ (CWC), ಸುನಾಮಿ ಎಚ್ಚರಿಕೆ ಕೇಂದ್ರ (INCOIS) ಮತ್ತು ಅರಣ್ಯ ಸಮೀಕ್ಷೆ ಸಂಸ್ಥೆಗಳಂತಹ ವಿವಿಧ ಎಚ್ಚರಿಕೆ ನೀಡುವ ಸಂಸ್ಥೆಗಳನ್ನು ಒಂದೇ ವೇದಿಕೆಯಡಿ ತರಲಾಗಿದೆ.

=> ಬಹುಭಾಷಾ ಬೆಂಬಲ: ಈ ವ್ಯವಸ್ಥೆಯು ಕನ್ನಡ ಸೇರಿದಂತೆ ಒಟ್ಟು 21 ಭಾಷೆಗಳಲ್ಲಿ ಎಚ್ಚರಿಕೆ ಸಂದೇಶಗಳನ್ನು ಕಳುಹಿಸುವ ಸಾಮರ್ಥ್ಯ ಹೊಂದಿದೆ.

=> ನೈಜ-ಸಮಯದ ಎಚ್ಚರಿಕೆ: ಪ್ರವಾಹ, ಭೂಕುಸಿತ, ಚಂಡಮಾರುತ ಅಥವಾ ಕಾಡ್ಗಿಚ್ಚಿನಂತಹ ತುರ್ತು ಸಂದರ್ಭಗಳಲ್ಲಿ ಅತಿ ವೇಗವಾಗಿ (Real-time) ಬಾಧಿತ ಪ್ರದೇಶದ ಜನರಿಗೆ ಸಂದೇಶ ರವಾನಿಸುತ್ತದೆ.

=> ಜಾಗತಿಕ ಮಾನದಂಡ: ಇದು ವಿಶ್ವಸಂಸ್ಥೆಯ 'ಎಲ್ಲರಿಗೂ ಮುನ್ಸೂಚನೆ' (#EW4All) ಉಪಕ್ರಮ ಮತ್ತು ಅಂತರಾಷ್ಟ್ರೀಯ ದೂರಸಂಪರ್ಕ ಒಕ್ಕೂಟದ (ITU) ಮಾನದಂಡಗಳಿಗೆ ಅನುಗುಣವಾಗಿದೆ.

➤ ಸಿ-ಡಾಟ್ (C-DOT) : ಸಿ-ಡಾಟ್ನ ಸಿಇಒ: ಡಾ. ರಾಜಕುಮಾರ್ ಉಪಾಧ್ಯಾಯ. ಇದು ಭಾರತ ಸರ್ಕಾರದ ದೂರಸಂಪರ್ಕ ಇಲಾಖೆಯ ಅಡಿಯಲ್ಲಿ ಬರುವ ಪ್ರಮುಖ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವಾಗಿದೆ. 'ಆತ್ಮನಿರ್ಭರ ಭಾರತ', 'ಡಿಜಿಟಲ್ ಇಂಡಿಯಾ' ಮತ್ತು 'ಮೇಕ್ ಇನ್ ಇಂಡಿಯಾ' ಯೋಜನೆಗಳಿಗೆ ಪೂರಕವಾಗಿ ಇದು ಕೆಲಸ ಮಾಡುತ್ತಿದೆ. ಪ್ರಸ್ತುತ ಸಿ-ಡಾಟ್ ಸಂಸ್ಥೆಯು 5G, 6G, ಕ್ವಾಂಟಮ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (AI) ಮತ್ತು ಸೈಬರ್ ಭದ್ರತೆಯಂತಹ ಭವಿಷ್ಯದ ತಂತ್ರಜ್ಞಾನಗಳ ಮೇಲೆ ಸಂಶೋಧನೆ ನಡೆಸುತ್ತಿದೆ.

## 21 Jan 2026

### ಚೀನಾದಲ್ಲಿ ಜನಸಂಖ್ಯಾ ಕುಸಿತದ ಆತಂಕ: ಸತತ 4ನೇ ವರ್ಷವೂ ಜನಸಂಖ್ಯೆ ಇಳಿಮುಖ!




ಬೀಜಿಂಗ್/ನವದೆಹಲಿ: ವಿಶ್ವದ ಅತಿ ದೊಡ್ಡ ಆರ್ಥಿಕ ಶಕ್ತಿಗಳಲ್ಲಿ ಒಂದಾದ ಚೀನಾ ಇಂದು ಗಂಭೀರವಾದ 'ಜನಸಂಖ್ಯಾ ಬಿಕ್ಕಟ್ಟನ್ನು' (Demographic Crisis) ಎದುರಿಸುತ್ತಿದೆ. ಚೀನಾ ಸರ್ಕಾರದ ಹತ್ತು ಹಲವು ಪ್ರೋತ್ಸಾಹಕ ಕ್ರಮಗಳ ಹೊರತಾಗಿಯೂ, 2025ರಲ್ಲಿ ಸತತ ನಾಲ್ಕನೇ ವರ್ಷ ಜನಸಂಖ್ಯೆಯಲ್ಲಿ ಭಾರೀ ಇಳಿಕೆ ಕಂಡುಬಂದಿದೆ. ಈ ಬೆಳವಣಿಗೆಯು ಜಾಗತಿಕ ಕಾರ್ಮಿಕ ಮಾರುಕಟ್ಟೆ ಮತ್ತು ಚೀನಾದ ಭವಿಷ್ಯದ ಆರ್ಥಿಕತೆಯ ಮೇಲೆ ಕರಾಳ ಛಾಯೆ ಬೀರಿದೆ.

➤ ಚೀನಾದ ಜನಸಂಖ್ಯಾ ಬಿಕ್ಕಟ್ಟು 2025ರಲ್ಲಿ ಮತ್ತಷ್ಟು ತೀವ್ರಗೊಂಡಿದೆ. ಸರ್ಕಾರದ ವಿವಿಧ ಪ್ರೋತ್ಸಾಹಕ ಕ್ರಮಗಳ ಹೊರತಾಗಿಯೂ, ಸತತ ನಾಲ್ಕನೇ ವರ್ಷ ಜನಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದೆ. ಈ ಬೆಳವಣಿಗೆಯು ಜಾಗತಿಕ ಆರ್ಥಿಕತೆ ಮತ್ತು ಚೀನಾದ ಭವಿಷ್ಯದ ಮೇಲೆ ಸಾಮಾಜಿಕವಾಗಿ ದೊಡ್ಡ ಪರಿಣಾಮ ಬೀರಲಿದೆ. 2025ರ ಅಂಕಿಅಂಶಗಳ ಪ್ರಕಾರ, ಚೀನಾದ ಒಟ್ಟು ಜನಸಂಖ್ಯೆಯು 30 ಲಕ್ಷದಷ್ಟು (3 Million) ಇಳಿಕೆಯಾಗಿದ್ದು, ಪ್ರಸ್ತುತ 1.404 ಶತಕೋಟಿಗೆ ತಲುಪಿದೆ. ಇದರೊಂದಿಗೆ ಚೀನಾ ವಿಶ್ವದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿ ಮುಂದುವರಿದಿದೆ (ಭಾರತ ಮೊದಲ ಸ್ಥಾನದಲ್ಲಿದೆ).

➤ 2025ರಲ್ಲಿ ಕೇವಲ 7.92 ಮಿಲಿಯನ್ ಶಿಶುಗಳು ಜನಿಸಿವೆ. ಇದು 2024ಕ್ಕೆ ಹೋಲಿಸಿದರೆ ಶೇ. 17 ರಷ್ಟು (1.62 ಮಿಲಿಯನ್) ಕಡಿಮೆಯಾಗಿದೆ. ಪ್ರತಿ 1,000 ಜನರಿಗೆ ಜನನ ದರವು 5.63 ಕ್ಕೆ ಕುಸಿದಿದೆ, ಇದು ಚೀನಾದ ಆಧುನಿಕ ಇತಿಹಾಸದಲ್ಲೇ ಅತ್ಯಂತ ಕನಿಷ್ಠ ಮಟ್ಟವಾಗಿದೆ.

**➤ ಜನಸಂಖ್ಯೆ ಇಳಿಕೆಗೆ ಪ್ರಮುಖ ಕಾರಣಗಳು:-**

=> ಫಲವತ್ತತೆ ದರದಲ್ಲಿ ಕುಸಿತ (Fertility Rate): ಜನಸಂಖ್ಯೆಯನ್ನು ಸ್ಥಿರವಾಗಿಡಲು ಪ್ರತಿ ಮಹಿಳೆಗೆ ಸರಾಸರಿ 2.1 ಫಲವತ್ತತೆ ದರ ಇರಬೇಕು. ಆದರೆ ಚೀನಾದಲ್ಲಿ ಇದು ಪ್ರಸ್ತುತ 1.0 ಕ್ಕೆ ತಲುಪಿದೆ ಎಂದು ಅಂದಾಜಿಸಲಾಗಿದೆ.

=> ಆರ್ಥಿಕ ಒತ್ತಡ: ಜೀವನ ವೆಚ್ಚ ಏರಿಕೆ, ಶಿಕ್ಷಣಕ್ಕಾಗಿ ಅತಿಯಾದ ವೆಚ್ಚ ಮತ್ತು ವಸತಿ ಸಮಸ್ಯೆಗಳಿಂದಾಗಿ ಯುವ ದಂಪತಿಗಳು ಮಕ್ಕಳನ್ನು ಹೊಂದಲು ಹಿಂದೇಟು ಹಾಕುತ್ತಿದ್ದಾರೆ.

=> ಉದ್ಯೋಗ ಮಾರುಕಟ್ಟೆಯ ಅಸ್ಥಿರತೆ: ಆರ್ಥಿಕ ಹಿಂಜರಿತ ಮತ್ತು ಉದ್ಯೋಗ ಭದ್ರತೆಯ ಕೊರತೆಯು ಕುಟುಂಬ ಯೋಜನೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ.

**➤ ಸರ್ಕಾರದ ಕ್ರಮಗಳು ಮತ್ತು ಅವುಗಳ ಮಿತಿ: ಚೀನಾ ಸರ್ಕಾರವು ಜನಸಂಖ್ಯೆ ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಂಡಿದೆ:**

=> ಹಣಕಾಸಿನ ನೆರವು: ಪ್ರತಿ ಮಗುವಿಗೆ 3,600 ಯುವಾನ್ ನಗದು ಸಬ್ಸಿಡಿ ಘೋಷಿಸಲಾಗಿದೆ.

=> ತೆರಿಗೆ ವಿನಾಯಿತಿ: ಶಿಶುವಿಹಾರ (Kindergartens) ಮತ್ತು ಡೇ-ಕೇರ್ ಕೇಂದ್ರಗಳಿಗೆ ತೆರಿಗೆ ವಿನಾಯಿತಿ ನೀಡಲಾಗಿದೆ.

=> ನೀತಿ ಬದಲಾವಣೆ: 2015ರಲ್ಲಿ 'ಒಂದು ಮಗು' ನೀತಿಯನ್ನು ಕೈಬಿಟ್ಟು, 2021ರಲ್ಲಿ 'ಮೂರು ಮಕ್ಕಳಿಗೆ' ಅವಕಾಶ ನೀಡಲಾಗಿತ್ತು.

=> ವಿವಾದಾತ್ಮಕ ನಿರ್ಧಾರ: ಜನನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಕಾಂಡೊಮ್‌ಗಳಂತಹ ಗರ್ಭನಿರೋಧಕಗಳ ಮೇಲಿದ್ದ ತೆರಿಗೆ ವಿನಾಯಿತಿಯನ್ನು ರದ್ದುಗೊಳಿಸಿ, ಅವುಗಳ ಮೇಲೆ ಶೇ. 13 ರಷ್ಟು ವ್ಯಾಟ್ (VAT) ವಿಧಿಸಲಾಗಿದೆ.

➤ ದಶಕಗಳ ಕಾಲ ಜಾರಿಯಲ್ಲಿದ್ದ ಕಟ್ಟುನಿಟ್ಟಿನ 'ಒಂದು ಮಗು' ನೀತಿ ಮತ್ತು ಬದಲಾದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು ಚೀನಾವನ್ನು ಈ ಜನಸಂಖ್ಯಾ ಬಿಕ್ಕಟ್ಟಿಗೆ ತಳ್ಳಿವೆ. ಇದು ಕೇವಲ ಕಾರ್ಮಿಕ ಶಕ್ತಿಯ ಕೊರತೆಯನ್ನು ಮಾತ್ರವಲ್ಲದೆ, ವಯಸ್ಸಾದವರ ಸಂಖ್ಯೆ ಹೆಚ್ಚಾಗುವ ಮೂಲಕ ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ಹೊರೆ ಉಂಟುಮಾಡಲಿದೆ.

### ತ್ರಿಪುರಾ, ಮಣಿಪುರ, ಮೇಘಾಲಯ 54ನೇ ರಾಜ್ಯೋತ್ಸವ ಸಂಭ್ರಮ




➤ ಜನವರಿ 21, 2026 ರಂದು ಈಶಾನ್ಯ ಭಾರತದ ಮೂರು ಪ್ರಮುಖ ರಾಜ್ಯಗಳಾದ ತ್ರಿಪುರಾ, ಮಣಿಪುರ ಮತ್ತು ಮೇಘಾಲಯ ತಮ್ಮ 54ನೇ ಸಂಸ್ಥಾಪನಾ ದಿನವನ್ನು (Foundation Day) ಆಚರಿಸುತ್ತಿವೆ. 1971ರ ಈಶಾನ್ಯ ಪ್ರದೇಶಗಳ (ಪುನರ್ ಸಂಘಟನೆ) ಕಾಯ್ದೆಯಡಿ ಈ ರಾಜ್ಯಗಳು 1972 ರಲ್ಲಿ ಪೂರ್ಣ ಪ್ರಮಾಣದ ರಾಜ್ಯಗಳಾಗಿ ಅಸ್ತಿತ್ವಕ್ಕೆ ಬಂದವು.

**➤ ರಾಜ್ಯಗಳ ಉದಯದ ಇತಿಹಾಸ:**

1. ಮಣಿಪುರ (Manipur): ಮಣಿಪುರವು ಸ್ವಾತಂತ್ರ್ಯಕ್ಕೂ ಮೊದಲು ಒಂದು ಸಂಸ್ಥಾನವಾಗಿತ್ತು. 1949 ರಲ್ಲಿ ಮಹಾರಾಜ ಬೋಧಚಂದ್ರ ಸಿಂಗ್ ಅವರು ಭಾರತದೊಂದಿಗೆ ವಿಲೀನ ಒಪ್ಪಂದಕ್ಕೆ ಸಹಿ ಹಾಕಿದರು. ಆರಂಭದಲ್ಲಿ ಕೇಂದ್ರಾಡಳಿತ ಪ್ರದೇಶವಾಗಿದ್ದ ಮಣಿಪುರ, ಸುದೀರ್ಘ ಹೋರಾಟದ ನಂತರ 1972 ರಲ್ಲಿ ಭಾರತದ 19ನೇ ರಾಜ್ಯವಾಗಿ ಉದಯಿಸಿತು.

2. ತ್ರಿಪುರಾ (Tripura): ಶತಮಾನಗಳ ಕಾಲ ಮಾಣಿಕ್ಯ ರಾಜವಂಶದ ಆಳ್ವಿಕೆಯಲ್ಲಿದ್ದ ತ್ರಿಪುರಾ, 1949 ರಲ್ಲಿ ಭಾರತದೊಂದಿಗೆ ವಿಲೀನವಾಯಿತು. ಆಡಳಿತಾತ್ಮಕ ಸವಾಲುಗಳು ಮತ್ತು ರಾಜಕೀಯ ಸ್ವಾಯತ್ತತೆಯ ಬೇಡಿಕೆಯಿಂದಾಗಿ, 1972 ರಲ್ಲಿ ಇದನ್ನು ಪೂರ್ಣ ಪ್ರಮಾಣದ ರಾಜ್ಯವನ್ನಾಗಿ ಮಾಡಲಾಯಿತು.

3. ಮೇಘಾಲಯ (Meghalaya): ಆರಂಭದಲ್ಲಿ ಮೇಘಾಲಯವು ಅಸ್ಸಾಂ ರಾಜ್ಯದ ಭಾಗವಾಗಿತ್ತು (ಖಾಸಿ, ಜೈಂತಿಯಾ ಮತ್ತು ಗಾರೊ ಹಿಲ್ಸ್ ಪ್ರದೇಶಗಳು). ಬುಡಕಟ್ಟು ಸಂಸ್ಕೃತಿ ಮತ್ತು ಹಕ್ಕುಗಳ ರಕ್ಷಣೆಗಾಗಿ ನಡೆದ ಚಳವಳಿಯ ಫಲವಾಗಿ, 1970 ರಲ್ಲಿ ಸ್ವಾಯತ್ತ ರಾಜ್ಯವಾಗಿ ಮತ್ತು 1972 ರಲ್ಲಿ ಭಾರತದ 21ನೇ ರಾಜ್ಯವಾಗಿ ರಚನೆಯಾಯಿತು.

➤ ಈಶಾನ್ಯ ಪ್ರದೇಶಗಳ (ಪುನರ್ ಸಂಘಟನೆ) ಕಾಯ್ದೆ, 1971: ಈ ಕಾಯ್ದೆಯು ಈಶಾನ್ಯ ಭಾರತದ ನಕ್ಷೆಯನ್ನೇ ಬದಲಿಸಿದ ಐತಿಹಾಸಿಕ ಶಾಸನವಾಗಿದೆ. ಇದು ಮಣಿಪುರ, ತ್ರಿಪುರಾ ಮತ್ತು ಮೇಘಾಲಯ ರಾಜ್ಯಗಳನ್ನು ಸೃಷ್ಟಿಸಿತು. ಅದೇ ಸಮಯದಲ್ಲಿ ಮಿಜೋರಾಂ ಮತ್ತು ಅರುಣಾಚಲ ಪ್ರದೇಶಗಳನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ರೂಪಿಸಿತು (ಇವು ನಂತರ ರಾಜ್ಯಗಳಾದವು).ಅಸ್ಸಾಂ ರಾಜ್ಯದ ಗಡಿಗಳನ್ನು ಮರುಹಂಚಿಕೆ ಮಾಡುವುದರೊಂದಿಗೆ, ಈ ಪ್ರದೇಶದಲ್ಲಿ ಆಡಳಿತಾತ್ಮಕ ದಕ್ಷತೆಯನ್ನು ಹೆಚ್ಚಿಸಲು ಇದು ಸಹಕಾರಿಯಾಯಿತು.

**➤ ಸಾಂಸ್ಕೃತಿಕ ಮಹತ್ವ:**

=> ಮಣಿಪುರ: ತನ್ನ ಶಾಸ್ತ್ರೀಯ ನೃತ್ಯ ಮತ್ತು ಕೈಮಗ್ಗದ ಕೆಲಸಕ್ಕೆ ಹೆಸರುವಾಸಿ.

=> ತ್ರಿಪುರಾ: ಬಿದಿರಿನ ಕರಕುಶಲ ವಸ್ತುಗಳು ಮತ್ತು ಐತಿಹಾಸಿಕ ಉಜ್ಜಯಂತ ಅರಮನೆಗೆ ಪ್ರಸಿದ್ಧ.

=> ಮೇಘಾಲಯ: "ಮೋಡಗಳ ನಾಡು" ಎಂದು ಕರೆಯಲ್ಪಡುವ ಇಲ್ಲಿನ ಮಾತೃಪ್ರಧಾನ ಸಮಾಜ ಮತ್ತು ಪ್ರಕೃತಿ ಸೌಂದರ್ಯ ಅನನ್ಯವಾದುದು.

## ನಾಸಾದ ಐಕಾನ್ ಸುನಿತಾ ವಿಲಿಯಮ್ಸ್ ಅಧಿಕೃತ ನಿವೃತ್ತಿ ಘೋಷಣೆ



➤ ಭಾರತೀಯ ಮೂಲದ ಖ್ಯಾತ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ತಮ್ಮ 27 ವರ್ಷಗಳ ಸುದೀರ್ಘ ಮತ್ತು ಸ್ಫೂರ್ತಿದಾಯಕ ವೃತ್ತಿಜೀವನದ ನಂತರ ಡಿಸೆಂಬರ್ 27, 2025 ರಂದು ನಾಸಾದಿಂದ ಅಧಿಕೃತವಾಗಿ ನಿವೃತ್ತರಾಗಿದ್ದಾರೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ISS) ಮೂರು ಪ್ರಮುಖ ಕಾರ್ಯಾಚರಣೆಗಳನ್ನು ಪೂರೈಸಿದ ಅವರು, ಮಾನವ ಬಾಹ್ಯಾಕಾಶ ಯಾನದ ಇತಿಹಾಸದಲ್ಲಿ ಅಳಿಸಲಾಗದ ಮುದ್ರೆ ಒತ್ತಿದ್ದಾರೆ.

**➤ ಪ್ರಮುಖ ಸಾಧನೆಗಳು ಮತ್ತು ದಾಖಲೆಗಳು:-**

=> ಬಾಹ್ಯಾಕಾಶದಲ್ಲಿ ಕಳೆದ ಸಮಯ: ಅವರು ಒಟ್ಟು 608 ದಿನಗಳನ್ನು ಬಾಹ್ಯಾಕಾಶದಲ್ಲಿ ಕಳೆದಿದ್ದಾರೆ. ಇದು ನಾಸಾ ಗಗನಯಾತ್ರಿಗಳ ಪೈಕಿ ಎರಡನೇ ಅತಿ ಹೆಚ್ಚು ಅವಧಿಯಾಗಿದೆ.

=> ಸ್ಪೇಸ್‌ವಾಕ್ (Spacewalk) ದಾಖಲೆ: ಸುನಿತಾ ಅವರು ಒಟ್ಟು 9 ಬಾರಿ ಸ್ಪೇಸ್‌ವಾಕ್ ಮಾಡಿದ್ದು, ಒಟ್ಟು 62 ಗಂಟೆ 6 ನಿಮಿಷಗಳ ಕಾಲ ನೌಕೆಯ ಹೊರಗೆ ಕೆಲಸ ಮಾಡಿದ್ದಾರೆ. ಇದು ಮಹಿಳಾ ಗಗನಯಾತ್ರಿಯೊಬ್ಬರು ಮಾಡಿದ ಅತಿ ಹೆಚ್ಚು ಸಮಯದ ಸ್ಪೇಸ್ ವಾಕ್ ದಾಖಲೆಯಾಗಿದೆ.

=> ಬಾಹ್ಯಾಕಾಶದಲ್ಲಿ ಮ್ಯಾರಥಾನ್: ಬಾಹ್ಯಾಕಾಶ ನಿಲ್ದಾಣದಲ್ಲೇ ಟ್ರೆಡ್‌ಮಿಲ್ ಮೇಲೆ ಓಡುವ ಮೂಲಕ 'ಬಾಹ್ಯಾಕಾಶದಲ್ಲಿ ಮ್ಯಾರಥಾನ್' ಪೂರ್ಣಗೊಳಿಸಿದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಇವರು ಪಾತ್ರರಾಗಿದ್ದಾರೆ.

**➤ ವೃತ್ತಿಜೀವನದ ಪ್ರಮುಖ ಘಟ್ಟಗಳು:-**

=> ಆರಂಭಿಕ ಜೀವನ: ಇವರು ಅಮೆರಿಕದ ನೌಕಾಪಡೆಯಲ್ಲಿ ಪೈಲಟ್ ಆಗಿ ವೃತ್ತಿ ಆರಂಭಿಸಿದರು. 1998ರಲ್ಲಿ ನಾಸಾ ಇವರನ್ನು ಗಗನಯಾತ್ರಿಯಾಗಿ ಆಯ್ಕೆ ಮಾಡಿತು.

=> ಮೊದಲ ಯಾನ (2006): ಡಿಸ್ಕವರಿ ನೌಕೆಯ ಮೂಲಕ ಮೊದಲ ಬಾರಿಗೆ ಬಾಹ್ಯಾಕಾಶಕ್ಕೆ ತೆರಳಿದರು.

=> ಎರಡನೇ ಯಾನ (2012): ಎಕ್ಸ್‌ಪೆಡಿಶನ್ 32/33 ರ ಭಾಗವಾಗಿ ತೆರಳಿ, ಬಾಹ್ಯಾಕಾಶ ನಿಲ್ದಾಣದ ಕಮಾಂಡರ್ ಆಗಿ ಜವಾಬ್ದಾರಿ ನಿರ್ವಹಿಸಿದರು.

=> ಕೊನೆಯ ಯಾನ (2024-25): ಜೂನ್ 2024 ರಲ್ಲಿ ಬೋಯಿಂಗ್ ಸ್ಟಾರ್‌ಲೈನರ್ ಮೂಲಕ ತೆರಳಿದ್ದ ಅವರು, ತಾಂತ್ರಿಕ ಕಾರಣಗಳಿಂದಾಗಿ ಅಲ್ಲಿಯೇ ಹೆಚ್ಚು ದಿನ ಉಳಿಯಬೇಕಾಯಿತು. ಅಂತಿಮವಾಗಿ ಮಾರ್ಚ್ 2025 ರಲ್ಲಿ ಸ್ಪೇಸ್‌ಎಕ್ಸ್ ಕ್ರೂ-9 ಮೂಲಕ ಭೂಮಿಗೆ ಮರಳಿದರು.

➤ ಸುನಿತಾ ಅವರ ತಂದೆ ದೀಪಕ್ ಪಾಂಡ್ಯ ಅವರು ಗುಜರಾತ್ ಮೂಲದವರು (ಅವರು 2020 ರಲ್ಲಿ ನಿಧನರಾದರು). ತಾಯಿ ಬೋನಿ ಪಾಂಡ್ಯ ಸ್ಲೋವೇನಿಯಾ ಮೂಲದವರು.

➤ ಇತ್ತೀಚೆಗೆ ದೆಹಲಿಗೆ ಭೇಟಿ ನೀಡಿದ್ದ ಸುನಿತಾ ಅವರು, ಭಾರತೀಯ ಮೂಲದ ಮೊದಲ ಮಹಿಳಾ ಗಗನಯಾತ್ರಿ ದಿವಂಗತ ಕಲ್ಪನಾ ಚಾವ್ಲಾ ಅವರ ಕುಟುಂಬವನ್ನು ಭೇಟಿ ಮಾಡಿದ್ದರು.

## ನ್ಯೂಜಿಲೆಂಡ್ ಹಾಗೂ ಜಾರ್ಜಿಯಾಗೆ ಹೊಸ ಭಾರತೀಯ ರಾಯಭಾರಿಗಳು




➤ ಭಾರತ ಸರ್ಕಾರವು ಜಾಗತಿಕ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸುವ ಉದ್ದೇಶದಿಂದ ಇಬ್ಬರು ಹಿರಿಯ ರಾಜತಾಂತ್ರಿಕರನ್ನು ಹೊಸ ವಿದೇಶಿ ಪ್ರತಿನಿಧಿಗಳಾಗಿ ನೇಮಕ ಮಾಡಿದೆ. ಮುವಾಂಪುಯಿ ಸೈಯಾವಿ ಅವರನ್ನು ನ್ಯೂಜಿಲೆಂಡ್‌ನ ಭಾರತದ ಮುಂದಿನ ಹೈಕಮಿಷನರ್ ಆಗಿ ಹಾಗೂ ಅಮಿತ್ ಕುಮಾರ್ ಮಿಶ್ರಾ ಅವರನ್ನು ಜಾರ್ಜಿಯಾದ ಭಾರತದ ಮುಂದಿನ ರಾಯಭಾರಿಯಾಗಿ ನೇಮಕ ಮಾಡಲಾಗಿದ್ದು, ಈ ನೇಮಕಾತಿಗಳು ಸಂಬಂಧಿತ ದೇಶಗಳೊಂದಿಗೆ ಭಾರತದ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿರೀಕ್ಷೆಯಿದೆ. ಈ ನೇಮಕಾತಿಗಳು 2026ರ ಜನವರಿ 19 ಮತ್ತು 20 ರಂದು ಅಧಿಕೃತವಾಗಿ ಪ್ರಕಟವಾಗಿವೆ.

➤ ಮುವಾಂಪುಯಿ ಸೈಯಾವಿ: ನ್ಯೂಜಿಲೆಂಡ್‌ನ ಹೊಸ ಹೈಕಮಿಷನರ್: ಮುವಾಂಪುಯಿ ಸೈಯಾವಿ ಅವರು 2005ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿಯಾಗಿದ್ದು, ಪ್ರಸ್ತುತ ವಿದೇಶಾಂಗ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿದ್ದಾರೆ.

ಗುರಿ: ಶಿಕ್ಷಣ, ವ್ಯಾಪಾರ, ಕೃಷಿ ಮತ್ತು ಇಂಡೋ-ಪೆಸಿಫಿಕ್ ವಲಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಸಹಕಾರವನ್ನು ಹೆಚ್ಚಿಸುವುದು.

# ಭಾರತ ಮತ್ತು ನ್ಯೂಜಿಲೆಂಡ್ ಸಂಬಂಧ: ಎರಡೂ ದೇಶಗಳ ನಡುವೆ ರಾಜತಾಂತ್ರಿಕ ಬಾಂಧವ್ಯ 1952ರಲ್ಲಿ ಆರಂಭವಾಯಿತು. ಎರಡೂ ದೇಶಗಳು ಕಾಮನ್‌ವೆಲ್ತ್ ಸದಸ್ಯತ್ವ, ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಾಮಾನ್ಯ ಕಾನೂನು (Common Law) ಪದ್ಧತಿಗಳನ್ನು ಹಂಚಿಕೊಂಡಿವೆ.ಕ್ರಿಕೆಟ್, ಹಾಕಿ ಮತ್ತು ಪರ್ವತಾರೋಹಣ (Mountaineering) ಎರಡು ದೇಶಗಳ ನಡುವಿನ ಸ್ನೇಹಕ್ಕೆ ಪ್ರಮುಖ ಕಾರಣಗಳಾಗಿವೆ.

**=> ಕಾರ್ಯತಂತ್ರದ ನೀತಿಗಳು:**

- ನ್ಯೂಜಿಲೆಂಡ್ 2011ರಲ್ಲಿ "Opening Doors to India" ಎಂಬ ನೀತಿಯನ್ನು ಜಾರಿಗೆ ತಂದಿತು.
- 2020ರಲ್ಲಿ "India-NZ 2025" ಎಂಬ ಕಾರ್ಯತಂತ್ರದ ದಾಖಲೆಯನ್ನು ಬಿಡುಗಡೆ ಮಾಡಿ, ಮುಂದಿನ ಐದು ವರ್ಷಗಳಲ್ಲಿ ಭಾರತದೊಂದಿಗೆ ದೃಢವಾದ ಸಂಬಂಧ ಹೊಂದಲು ಗುರಿ ಹಾಕಿಕೊಂಡಿದೆ.

ಇತ್ತೀಚಿನ ಬೆಳವಣಿಗೆ: 2024ರ ಅಕ್ಟೋಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಲಾವೋಸ್‌ನಲ್ಲಿ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

➤ ಅಮಿತ್ ಕುಮಾರ್ ಮಿಶ್ರಾ: ಜಾರ್ಜಿಯಾದ ಹೊಸ ರಾಯಭಾರಿ: 2004ರ ಬ್ಯಾಚ್‌ನ ಅಧಿಕಾರಿಯಾದ ಅಮಿತ್ ಕುಮಾರ್ ಮಿಶ್ರಾ ಅವರು ಜಾರ್ಜಿಯಾದಲ್ಲಿ ಭಾರತದ ರಾಯಭಾರಿಯಾಗಿ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ.

# ಜಾರ್ಜಿಯಾದೊಂದಿಗೆ ಭಾರತದ ಬಾಂಧವ್ಯ: ಜಾರ್ಜಿಯಾವು ಭಾರತೀಯ ವೈದ್ಯಕೀಯ ವಿದ್ಯಾರ್ಥಿಗಳಿಗೆ (Medical Students) ನೆಚ್ಚಿನ ತಾಣವಾಗಿದೆ. ಕೃಷಿ, ಮೂಲಸೌಕರ್ಯ ಮತ್ತು ಇಂಧನ ವಲಯದಲ್ಲಿ ಭಾರತೀಯ ಕಂಪನಿಗಳು ಜಾರ್ಜಿಯಾದಲ್ಲಿ ಆಸಕ್ತಿ ಹೊಂದಿವೆ. ಯುರೋಪ್ ಮತ್ತು ಏಷ್ಯಾವನ್ನು ಸಂಪರ್ಕಿಸುವ ಜಾರ್ಜಿಯಾ, ಭಾರತದ 'ಕನೆಕ್ಟ್ ಸೆಂಟ್ರಲ್ ಏಷ್ಯಾ' ನೀತಿಗೆ ಪೂರಕವಾಗಿದೆ.

➤ ಕಾಮನ್‌ವೆಲ್ತ್ ಒಕ್ಕೂಟದ ಸದಸ್ಯ ರಾಷ್ಟ್ರಗಳ ನಡುವೆ ನೇಮಕವಾಗುವ ರಾಜತಾಂತ್ರಿಕ ಪ್ರತಿನಿಧಿಯನ್ನು 'ಹೈಕಮಿಷನರ್' ಎನ್ನಲಾಗುತ್ತದೆ, ಆದರೆ ಕಾಮನ್‌ವೆಲ್ತ್ ಅಲ್ಲದ ಇತರ ದೇಶಗಳಿಗೆ ನೇಮಕವಾಗುವ ಪ್ರತಿನಿಧಿಯನ್ನು 'ರಾಯಭಾರಿ' (Ambassador) ಎಂದು ಕರೆಯಲಾಗುತ್ತದೆ.

## ನಿತಿನ್ ನಬಿನ್: ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ



➤ ಭಾರತೀಯ ಜನತಾ ಪಕ್ಷದ (ಬಿಜೆಪಿ) ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವರು ಮಂಗಳವಾರ (20-01-2026) ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು. ನಿಕಟಪೂರ್ವ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಅಧಿಕಾರಾವಧಿ ಮುಕ್ತಾಯವಾದ ನಂತರ ನಡೆದ ಪಕ್ಷದ ಸಾಂಸ್ಥಿಕ ಚುನಾವಣೆಯಲ್ಲಿ ನಬಿನ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರು ಬಿಜೆಪಿಯ 12ನೇ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ.

➤ 45 ವರ್ಷದ ನಿತಿನ್ ನಬಿನ್ ಅವರು ಬಿಜೆಪಿ ಇತಿಹಾಸದಲ್ಲೇ ಅತ್ಯಂತ ಕಿರಿಯ ವಯಸ್ಸಿನ ರಾಷ್ಟ್ರೀಯ ಅಧ್ಯಕ್ಷ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದು ಪಕ್ಷದಲ್ಲಿನ ತಲೆಮಾರುಗಳ ಬದಲಾವಣೆಯನ್ನು ಸೂಚಿಸುತ್ತದೆ. ನವದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಲವು ಗಣ್ಯರ ಸಮ್ಮುಖದಲ್ಲಿ ಇವರು ಅಧಿಕಾರ ವಹಿಸಿಕೊಂಡರು.

➤ ಬಿಜೆಪಿಯ ಸಾಂಸ್ಥಿಕ ಚುನಾವಣೆಯ ಚುನಾವಣಾಧಿಕಾರಿ ಕೆ. ಲಕ್ಷ್ಮಣ್ ಅವರು ನಬಿನ್ ಅವರ ಆಯ್ಕೆಯನ್ನು ಘೋಷಿಸಿ, ಅಧಿಕೃತ ಪ್ರಮಾಣಪತ್ರವನ್ನು ಹಸ್ತಾಂತರಿಸಿದರು. ರಾಷ್ಟ್ರೀಯ ಅಧ್ಯಕ್ಷರಾಗುವ ಮೊದಲು, ನಿತಿನ್ ನಬಿನ್ ಅವರು ಡಿಸೆಂಬರ್ 2025 ರಲ್ಲಿ ಬಿಜೆಪಿಯ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡಿದ್ದರು. ಬಿಹಾರದ ಮಾಜಿ ಶಾಸಕರಾಗಿರುವ ಇವರು ಪಕ್ಷದ ಸಂಘಟನೆಯಲ್ಲಿ ಸುದೀರ್ಘ ಅನುಭವ ಹೊಂದಿದ್ದಾರೆ.

➤ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಅಸ್ಸಾಂ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಹತ್ತಿರವಿರುವ ಸಮಯದಲ್ಲಿ ಇವರು ಅಧಿಕಾರ ವಹಿಸಿಕೊಂಡಿದ್ದು, ಸಂಘಟನಾತ್ಮಕವಾಗಿ ಪಕ್ಷವನ್ನು ಬಲಪಡಿಸುವ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ (RSS) ಸಮನ್ವಯ ಸಾಧಿಸುವ ಮಹತ್ತರ ಜವಾಬ್ದಾರಿ ಇವರ ಮೇಲಿದೆ.

## "ಒಲಿಂಪಿಕ್ ಪದಕ ವಿಜೇತ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಅವರಿಂದ ನಿವೃತ್ತಿ ಘೋಷಣೆ."



➤ ಭಾರತದ ಖ್ಯಾತ ಬ್ಯಾಡ್ಮಿಂಟನ್ ಆಟಗಾರ್ತಿ, ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಅವರು ಸ್ಪರ್ಧಾತ್ಮಕ ಬ್ಯಾಡ್ಮಿಂಟನ್‌ಗೆ ಅಧಿಕೃತವಾಗಿ ನಿವೃತ್ತಿ ಘೋಷಿಸಿದ್ದಾರೆ. ದೀರ್ಘಕಾಲದ ಮೊಣಕಾಲು ನೋವು ಮತ್ತು ಸಂಧಿವಾತದ (Arthritis) ಕಾರಣದಿಂದಾಗಿ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

➤ ಸೈನಾ ಅವರು ಪಾಡ್‌ಕಾಸ್ಟ್ ಒಂದರಲ್ಲಿ ಮಾತನಾಡುತ್ತಾ, ತಮ್ಮ ಮೊಣಕಾಲಿನ ಕಾರ್ಟಿಲೆಜ್ (Cartilage) ಸಂಪೂರ್ಣವಾಗಿ ಸವಿದುಹೋಗಿದ್ದು, ದಿನಕ್ಕೆ 8-9 ಗಂಟೆಗಳ ಕಾಲ ಅಭ್ಯಾಸ ಮಾಡುವುದು ಅಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ. "ನನ್ನ ದೇಹವು ಈಗ ಆಟಕ್ಕೆ ಸ್ಪಂದಿಸುತ್ತಿಲ್ಲ, ಹಾಗಾಗಿ ನಾನು ಸ್ವಇಚ್ಛೆಯಿಂದ ಹಿಂದೆ ಸರಿಯುತ್ತಿದ್ದೇನೆ" ಎಂದು ಅವರು ಭಾವನಾತ್ಮಕವಾಗಿ ನುಡಿದಿದ್ದಾರೆ.

➤ ಹರಿಯಾಣದ ಹಿಸಾರ್ ಮೂಲದ, ಪರುಪಳ್ಳಿ ಕಶ್ಯಪ್ ಅವರನ್ನು ವಿವಾಹವಾಗಿರುವ ಸೈನಾ ನೆಹ್ವಾಲ್ ಅವರು 17 ಮಾರ್ಚ್ 1990 ರಂದು ಜನಿಸಿದ್ದು, 2023ರ ಸಿಂಗಪುರ ಓಪನ್‌ನಲ್ಲಿ ತಮ್ಮ ವೃತ್ತಿಜೀವನದ ಕೊನೆಯ ಪಂದ್ಯವನ್ನಾಡಿದ್ದಾರೆ.

➤ ಪ್ರಮುಖ ಜಯಗಳು ಮತ್ತು ದಾಖಲೆಗಳು:

=> ವಿಶ್ವದ ನಂ. 1 ಶ್ರೇಯಾಂಕ:2015ರಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಬ್ಯಾಡ್ಮಿಂಟನ್ ಆಟಗಾರ್ತಿ ಎಂಬ ಹೆಗ್ಗಳಿಕೆ ಪಾತ್ರರಾಗಿದ್ದರು (ಪ್ರಕಾಶ್ ಪಡುಕೋಣೆ ನಂತರ ಎರಡನೇ ಭಾರತೀಯರು).

=> ಒಲಿಂಪಿಕ್ಸ್ ಸಾಧನೆ:2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಬ್ಯಾಡ್ಮಿಂಟನ್‌ನಲ್ಲಿ ಒಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯರಾದರು.

=> ವಿಶ್ವ ಚಾಂಪಿಯನ್‌ಶಿಪ್: 2015ರಲ್ಲಿ ಬೆಳ್ಳಿ ಮತ್ತು 2017ರಲ್ಲಿ ಕಂಚಿನ ಪದಕ.

=> ಕಾಮನ್‌ವೆಲ್ತ್ ಗೇಮ್ಸ್: ಒಟ್ಟು 3 ಚಿನ್ನದ ಪದಕಗಳು ಸೇರಿದಂತೆ ಹಲವು ಪದಕಗಳನ್ನು ಗೆದ್ದಿದ್ದಾರೆ.

=> ಸೂಪರ್ ಸೀರಿಸ್: 2009ರಲ್ಲಿ ಇಂಡೋನೇಷ್ಯಾ ಓಪನ್ ಗೆಲ್ಲುವ ಮೂಲಕ ಬಿಡಬ್ಲ್ಯುಎಫ್ ಸೂಪರ್ ಸೀರಿಸ್ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಎಂಬ ಇತಿಹಾಸ ಸೃಷ್ಟಿಸಿದ್ದರು.

**➤ ಪ್ರಶಸ್ತಿ ಮತ್ತು ಗೌರವಗಳು:**

1. 2009 - ಅರ್ಜುನ ಪ್ರಶಸ್ತಿ
2. 2010 - ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ
3. 2010 - ಪದ್ಮಶ್ರೀ
4. 2016 - ಪದ್ಮಭೂಷಣ

**➤ ವೃತ್ತಿಜೀವನದ ಸಂಕ್ಷಿಪ್ತ ಅಂಕಿಅಂಶಗಳು:**

=> ಒಟ್ಟು ಅಂತರರಾಷ್ಟ್ರೀಯ ಪ್ರಶಸ್ತಿಗಳು: 24

=> ಬಿಡಬ್ಲ್ಯುಎಫ್ ಸೂಪರ್ ಸೀರಿಸ್ ಕಿರೀಟಗಳು: 10

=> ಬಿಡಬ್ಲ್ಯುಎಫ್ ಗ್ರಾನ್‌ಪ್ರಿ ಪ್ರಶಸ್ತಿಗಳು: 10

=> ಏಷ್ಯನ್ ಗೇಮ್ಸ್ ಪದಕಗಳು: 2 ಕಂಚು (2014, 2018)

➤ ಸೈನಾ ನೆಹ್ವಾಲ್ ಅವರು ಭಾರತೀಯ ಬ್ಯಾಡ್ಮಿಂಟನ್ ಲೋಕದ ಕ್ರಾಂತಿಕಾರಿ ಆಟಗಾರ್ತಿ. ಅವರ ಆತ್ಮಕಥೆ ಆಧಾರಿತ 'Saina' ಎಂಬ ಬಯೋಪಿಕ್ 2021ರಲ್ಲಿ ಬಿಡುಗಡೆಯಾಗಿತ್ತು. ಮಹಿಳಾ ಕ್ರೀಡಾಲೋಕದಲ್ಲಿ ಭಾರತದ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಿದವರಲ್ಲಿ ಇವರು ಮುಂಚೂಣಿಯಲ್ಲಿದ್ದಾರೆ.

## ರವಿಶಂಕರ್ ಛಬ್ಬಿ: CRPF ನೂತನ ಡಿಐಜಿ (DIG) ಆಗಿ ನೇಮಕ



➤ ಕೇಂದ್ರ ಗೃಹ ಸಚಿವಾಲಯವು 2007ರ ಬ್ಯಾಚ್‌ನ ಉತ್ತರ ಪ್ರದೇಶ ಕೆಡರ್‌ನ ಐಪಿಎಸ್ ಅಧಿಕಾರಿ ರವಿಶಂಕರ್ ಛಬ್ಬಿ ಅವರನ್ನು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (CRPF) ಉಪ ಮಹಾನಿರೀಕ್ಷಕರಾಗಿ (DIG) ನೇಮಕ ಮಾಡಿದೆ. ಇವರು ಕೇಂದ್ರ ನಿಯೋಜನೆ (Central Deputation) ಅಡಿಯಲ್ಲಿ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ.ಜನವರಿ 19, 2026 ರಂದು ಕೇಂದ್ರ ಗೃಹ ಸಚಿವಾಲಯವು ಈ ನೇಮಕಾತಿಗೆ ಅನುಮೋದನೆ ನೀಡಿದೆ.

➤ ರವಿಶಂಕರ್ ಛಬ್ಬಿ ಅವರು ಈ ಹಿಂದೆ ಮಹಿಳಾ ಪವರ್‌ಲೈನ್-1090 ರ ಮುಖ್ಯಸ್ಥರಾಗಿ, ಜೌನ್‌ಪುರದ ಎಸ್ಪಿಯಾಗಿ ಮತ್ತು ಕಾರಾಗೃಹ ಸುಧಾರಣಾ ವಿಭಾಗದ ಡಿಐಜಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.ಇವರು ಉತ್ತರ

ಪ್ರದೇಶದ ಲಕ್ನೋದ ಡಿಜಿಪಿ ಪ್ರಧಾನ ಕಚೇರಿಯಲ್ಲಿ ಡಿಐಜಿ (ಸಾರ್ವಜನಿಕ ಕುಂದುಕೊರತೆ) ಆಗಿ ಕಾರ್ಯನಿರ್ವಹಿಸುತ್ತಿದ್ದರು.

➤ ಕೇಂದ್ರೀಯ ಮೀಸಲು ಪೊಲೀಸ್ ಪಡೆ (CRPF): CRPF ಭಾರತದ ಅತಿದೊಡ್ಡ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯಾಗಿದೆ ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿರುವ CRPF ಅನ್ನು 1939 ರಲ್ಲಿ 'ಕ್ರೌನ್ ರೆಪ್ರೆಸೆಂಟೇಟಿವ್ ಪೊಲೀಸ್' ಆಗಿ ಸ್ಥಾಪಿಸಲಾಯಿತು ಮತ್ತು 1949 ರ ಡಿಸೆಂಬರ್ 28 ರಂದು 'ಕೇಂದ್ರೀಯ ಮೀಸಲು ಪೊಲೀಸ್ ಪಡೆ' (CRPF) ಎಂದು ಮರುನಾಮಕರಣ ಮಾಡಲಾಯಿತು

**➤ CRPF ನ ಪ್ರಮುಖ ಕಾರ್ಯಗಳು:-**

- ಆಂತರಿಕ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವುದು.
- ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಕಾರ್ಯಾಚರಣೆ (Left Wing Extremism).
- ಚುನಾವಣೆಗಳ ಸಂದರ್ಭದಲ್ಲಿ ಭದ್ರತೆ ಒದಗಿಸುವುದು.
- ವಿವಿಐಪಿಗಳ ರಕ್ಷಣೆ ಮತ್ತು ನೈಸರ್ಗಿಕ ವಿಕೋಪಗಳ ಸಮಯದಲ್ಲಿ ರಕ್ಷಣಾ ಕಾರ್ಯ.

➤ ಪ್ರತಿ ವರ್ಷ ಅಕ್ಟೋಬರ್ 21 ರಂದು 1959ರಲ್ಲಿ ಲಡಾಖ್‌ನಲ್ಲಿ ಚೀನಾ ಸೈನಿಕರ ವಿರುದ್ಧ ಹೋರಾಡಿ ಹುತಾತ್ಮರಾದ CRPF ಯೋಧರ ನೆನಪಿಗಾಗಿ 'ಪೊಲೀಸ್ ಸಂಸ್ಮರಣಾ ದಿನ'ವನ್ನು ಆಚರಿಸಲಾಗುತ್ತದೆ.

## 22 Jan 2026

### ಬೀದಿ ನಾಯಿಗಳ ಹಾವಳಿಗೆ ಮುಕ್ತಿ: ಲೂಧಿಯಾನದಲ್ಲಿ ದೇಶದ ಮಾದರಿ 'ಡಾಗ್ ಸ್ಯಾಂಕ್ಚುರಿ' ಉದ್ಘಾಟನೆ



➤ ಲೂಧಿಯಾನ/ಚಂಡೀಗಢ: ನಗರ ಪ್ರದೇಶಗಳಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಬೀದಿ ನಾಯಿಗಳ ಹಾವಳಿ ಮತ್ತು ನಾಯಿ ಕಡಿತದ ಪ್ರಕರಣಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪಂಜಾಬ್‌ನ ಲೂಧಿಯಾನದಲ್ಲಿ ಒಂದು ವಿನೂತನ ಹೆಜ್ಜೆ ಇಡಲಾಗಿದೆ. ಲೂಧಿಯಾನದಲ್ಲಿ ರಾಜ್ಯದ ಮೊದಲ ಹಾಗೂ ಅತ್ಯಾಧುನಿಕ 'ಡಾಗ್ ಸ್ಯಾಂಕ್ಚುರಿ' (ನಾಯಿಗಳ ಅಭಯಾರಣ್ಯ) ಉದ್ಘಾಟನೆಗೊಂಡಿದ್ದು, ಇದು ದೇಶದ ಇತರ ನಗರಗಳಿಗೆ ಮಾದರಿಯಾಗಿದೆ.

ಏನಿದು ಡಾಗ್ ಸ್ಯಾಂಕ್ಚುರಿ?

➤ ಲೂಧಿಯಾನದಲ್ಲಿ ಆರಂಭಗೊಂಡಿರುವ ಈ ಡಾಗ್ ಸ್ಯಾಂಕ್ಚುರಿ ಯೋಜನೆಯ ಪ್ರಮುಖ ಉದ್ದೇಶ ಬೀದಿ ನಾಯಿಗಳನ್ನು ಹಿಡಿದು ಕೇವಲ ABC (ಸಂತಾನಶಕ್ತಿ ಹರಣ) ಚಿಕಿತ್ಸೆ ನೀಡಿ ಮತ್ತೆ ಅದೇ ಸ್ಥಳಕ್ಕೆ ಬಿಡುವ ಬದಲು, ಅವುಗಳಿಗೆ ಶಾಶ್ವತ ಮತ್ತು ಸುರಕ್ಷಿತ ವಾಸಸ್ಥಾನ ಒದಗಿಸುವುದು ಆಗಿದೆ. ಹಂಪಿ ಪ್ರದೇಶದ ಬಳಿ ನಿರ್ಮಿಸಲಾದ ಈ ಅಭಯಾರಣ್ಯವು ಏಕಕಾಲದಲ್ಲಿ ನೂರಾರು ಬೀದಿ ನಾಯಿಗಳಿಗೆ ಆಶ್ರಯ ನೀಡುವ ಸಾಮರ್ಥ್ಯ ಹೊಂದಿದ್ದು, ಇಲ್ಲಿ ಪ್ರತ್ಯೇಕ ಕೆನಲ್‌ಗಳು, ವೈದ್ಯಕೀಯ ತಪಾಸಣಾ ಕೊಠಡಿ, ಶಸ್ತ್ರಚಿಕಿತ್ಸಾ ಘಟಕ ಹಾಗೂ ಆಹಾರ ತಯಾರಿಕಾ ಘಟಕ ಸೇರಿದಂತೆ ಸಮಗ್ರ ಸೌಲಭ್ಯಗಳನ್ನು ಒಳಗೊಂಡಿದೆ.

➤ ಈ ಯೋಜನೆಯ ಅಗತ್ಯವು ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಬೀದಿ ನಾಯಿಗಳ ಸಂಖ್ಯೆ ಸಾರ್ವಜನಿಕರಿಗೆ–ವಿಶೇಷವಾಗಿ ಮಕ್ಕಳು ಮತ್ತು ವಯೋವೃದ್ಧರಿಗೆ ಭಯದ ವಾತಾವರಣ ನಿರ್ಮಿಸಿದ್ದರಿಂದ ಉದ್ಭವಿಸಿತು. ಈ ಕೇಂದ್ರದ ಮೂಲಕ ನಾಯಿ ಕಡಿತ ಘಟನೆಗಳ ನಿಯಂತ್ರಣ, ಹುಚ್ಚು ಅಥವಾ ಆಕ್ರಮಣಕಾರಿ ನಾಯಿಗಳ ಪ್ರತ್ಯೇಕ ಸಂರಕ್ಷಣೆ, ಹಾಗೂ ನಿಯಮಿತ ಲಸಿಕೆಕರಣದ ಮೂಲಕ ರೇಬಿಸ್ ನಂತಹ ರೋಗಗಳ ತಡೆ ಸಾಧ್ಯವಾಗುತ್ತದೆ. ಜೊತೆಗೆ, ಬೀದಿಗಳಲ್ಲಿ ಆಹಾರವಿಲ್ಲದೆ ಅಥವಾ ಅಪಘಾತಕ್ಕೀಡಾಗುವ ನಾಯಿಗಳಿಗೆ ಮಾನವೀಯ ಆರೈಕೆ ಮತ್ತು ಸುರಕ್ಷಿತ ಆಶ್ರಯ ಒದಗಿಸುವ ಮೂಲಕ ಪ್ರಾಣಿ ದಯೆ ಮತ್ತು ವೈಜ್ಞಾನಿಕ ನಿರ್ವಹಣೆಗೂ ಒತ್ತು ನೀಡಲಾಗಿದೆ.

➤ ಅಧಿಕೃತ ಅಂಕಿಅಂಶಗಳ ಪ್ರಕಾರ, ಲೂಧಿಯಾನದಲ್ಲಿ 2025 ರಲ್ಲಿ ದಾಖಲೆಯ 13,728 ನಾಯಿ ಕಡಿತದ ಪ್ರಕರಣಗಳು ವರದಿಯಾಗಿವೆ. ಇದು ಕಳೆದ ಐದು ವರ್ಷಗಳಲ್ಲೇ ಗರಿಷ್ಠ ಮಟ್ಟವಾಗಿದೆ. ನಗರದಲ್ಲಿ ಅಂದಾಜು 25,000 ಬೀದಿ ನಾಯಿಗಳಿದ್ದು, ಸಾರ್ವಜನಿಕ ಸುರಕ್ಷತೆಯ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

### ಭಾರತೀಯ ರೈಲ್ವೆಯ OSOP ಯೋಜನೆ: 2,000 ರೈಲು ನಿಲ್ದಾಣಗಳಲ್ಲಿ ಸ್ಥಳೀಯ ಕಲೆ




➤ ಭಾರತೀಯ ರೈಲ್ವೆಯ 'ಒಂದು ನಿಲ್ದಾಣ ಒಂದು ಉತ್ಪನ್ನ' (One Station One Product - OSOP) ಯೋಜನೆಯು ಸ್ಥಳೀಯ ಕುಶಲಕರ್ಮಿಗಳನ್ನು ಉತ್ತೇಜಿಸುವಲ್ಲಿ ಮತ್ತು ಗ್ರಾಮೀಣ ಮಟ್ಟದ ಉದ್ಯಮಶೀಲತೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ರೈಲ್ವೆ ನಿಲ್ದಾಣಗಳನ್ನು ಭಾರತದ ಶ್ರೀಮಂತ ಪ್ರಾದೇಶಿಕ ವೈವಿಧ್ಯತೆಯ ಪ್ರದರ್ಶನ ಮಳಿಗೆಗಳನ್ನಾಗಿ ಪರಿವರ್ತಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಯ ಧ್ಯೇಯವಾಕ್ಯ: "ವೋಕಲ್ ಫಾರ್ ಲೋಕಲ್" (Vocal for Local)

➤ 19 ಜನವರಿ 2026 ರ ಹೊತ್ತಿಗೆ, ದೇಶದ 2,002 ರೈಲ್ವೆ ನಿಲ್ದಾಣಗಳಲ್ಲಿ ಒಟ್ಟು 2,326 OSOP ಮಳಿಗೆಗಳನ್ನು ಸ್ಥಾಪಿಸಲಾಗಿದೆ. ಈ ಯೋಜನೆಯು ಇದುವರೆಗೆ ಸುಮಾರು 1.32 ಲಕ್ಷಕ್ಕೂ ಹೆಚ್ಚು ಕುಶಲಕರ್ಮಿಗಳು, ನೇಕಾರರು ಮತ್ತು ಸಣ್ಣ ಉತ್ಪಾದಕರಿಗೆ ನೇರ ಆರ್ಥಿಕ ಅವಕಾಶಗಳನ್ನು ಒದಗಿಸಿದೆ. ಯೋಜನೆಯನ್ನು ಭಾರತೀಯ ರೈಲ್ವೆಯು 2022 ರಲ್ಲಿ ಪ್ರಾರಂಭಿಸಿತು.


**➤ ಯೋಜನೆಯ ಪ್ರಮುಖ ಪ್ರಯೋಜನಗಳು:-**

=> ನೇರ ಮಾರುಕಟ್ಟೆ ಸಂಪರ್ಕ: ಮಧ್ಯವರ್ತಿಗಳ ಹಾವಳಿಯಿಲ್ಲದೆ, ಸ್ಥಳೀಯ ಕುಶಲಕರ್ಮಿಗಳು ಪ್ರತಿದಿನ ಲಕ್ಷಾಂತರ ಪ್ರಯಾಣಿಕರಿಗೆ ನೇರವಾಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದು.

=> ಪ್ರಾದೇಶಿಕ ಪರಂಪರೆಯ ಪುನಶ್ಚೇತನ: ಈಶಾನ್ಯ ರಾಜ್ಯಗಳ ಬಿದಿರಿನ ಕೆಲಸ, ಕೈಮಗ್ಗದ ಬಟ್ಟೆಗಳು, ಪ್ರಾದೇಶಿಕ ಮಸಾಲೆಗಳು ಮತ್ತು ಸ್ಥಳೀಯ ಸಿಹಿ ತಿಂಡಿಗಳಂತಹ ಮರೆಯಾಗುತ್ತಿರುವ ಕಲೆಗಳಿಗೆ ಈ ಯೋಜನೆಯು ಹೊಸ ಜೀವ ನೀಡಿದೆ.

=> ಅಂತರ್ಗತ ಆರ್ಥಿಕ ಬೆಳವಣಿಗೆ: ಸಣ್ಣ ಉದ್ಯಮಿಗಳಿಗೆ ಸ್ಥಿರ ಆದಾಯ ಮತ್ತು ಉದ್ಯೋಗದ ಭರವಸೆಯನ್ನು ನೀಡುವ ಮೂಲಕ ರೈಲ್ವೆ ನಿಲ್ದಾಣಗಳನ್ನು ವಾಣಿಜ್ಯ ಮತ್ತು ಸಂಸ್ಕೃತಿಯ ಕೇಂದ್ರಗಳನ್ನಾಗಿ ಮಾಡಲಾಗಿದೆ.

➤ OSOP ಯೋಜನೆಯು ಕೇವಲ ವಾಣಿಜ್ಯ ಚಟುವಟಿಕೆಯಲ್ಲದೆ, ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮತ್ತು ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುವ ಒಂದು ಶಕ್ತಿಯುತ ಮಾದರಿಯಾಗಿ ಹೊರಹೊಮ್ಮಿದೆ.




## ರಕ್ಷಣಾ ಕ್ರಾಂತಿ: ಭಾರತದ ಸ್ವದೇಶಿ ಮಾನವರಹಿತ ನೌಕಾ ತಂತ್ರಜ್ಞಾನ




➤ ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರ ಭಾರತದತ್ತ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿರುವ ಭಾರತವು, ಸಮುದ್ರದ ಆಳ ಮತ್ತು ವಿಸ್ತಾರವನ್ನು ಮನುಷ್ಯನ ಹಸ್ತಕ್ಷೇಪವಿಲ್ಲದೆಯೇ ನಿಯಂತ್ರಿಸುವ ಅತ್ಯಾಧುನಿಕ 'ಮಾನವರಹಿತ ನೌಕಾ ಸಂಚಾರ ತಂತ್ರಜ್ಞಾನ' (Unmanned Surface Vessel - USV) ವನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದೆ.ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL) ಮತ್ತು ಭಾರತೀಯ ನೌಕಾಪಡೆಯ ಶಸ್ತ್ರಾಸ್ತ್ರ ಹಾಗೂ ವಿದ್ಯುನ್ಮಾನ ಇಂಜಿನಿಯರಿಂಗ್ ವಿಭಾಗ (WESEE) ಜಂಟಿಯಾಗಿ ಈ ತಂತ್ರಜ್ಞಾನವನ್ನು ರೂಪಿಸಿವೆ.

➤ A2NCS ತಂತ್ರಜ್ಞಾನ: ಈ ಸಾಫ್ಟ್‌ವೇರ್ ಅನ್ನು 'ಅಡ್ವಾನ್ಸ್ ಆಟೋನಮಸ್ ನ್ಯಾವಿಗೇಷನ್ ಆಂಡ್ ಕಂಟ್ರೋಲ್ ಸಾಫ್ಟ್‌ವೇರ್' (A2NCS) ಎಂದು ಕರೆಯಲಾಗುತ್ತದೆ. ಇದು ಯುದ್ಧ ನೌಕೆಗಳಿಗೆ ಸ್ವತಂತ್ರವಾಗಿ ಆಲೋಚಿಸುವ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ನೀಡುತ್ತದೆ.

➤ ಪ್ರಮುಖ ವೈಶಿಷ್ಟ್ಯಗಳು:

=> ಸ್ವಯಂಚಾಲಿತ ನಿರ್ಧಾರ: ಸಮುದ್ರದಲ್ಲಿ ಚಲಿಸುವಾಗ ಎದುರಾಗುವ ಅಡೆತಡೆಗಳನ್ನು ಗುರುತಿಸಿ, ಅಂತಾರಾಷ್ಟ್ರೀಯ ಕಡಲ ಸಂಚಾರ ನಿಯಮಗಳ (COLREGs) ಅನ್ವಯ ಯಾವ ದಿಕ್ಕಿಗೆ ತಿರುಗಬೇಕು ಎಂಬ ನಿರ್ಧಾರವನ್ನು ಈ ಸಾಫ್ಟ್‌ವೇರ್ ಸ್ವಯಂಪ್ರೇರಿತವಾಗಿ ತೆಗೆದುಕೊಳ್ಳುತ್ತದೆ.

=> ಸೈಬರ್ ಭದ್ರತೆ: ಮಾಹಿತಿ ಸೋರಿಕೆಯನ್ನು ತಡೆಗಟ್ಟಲು ಸಂಪೂರ್ಣವಾಗಿ ದೇಶೀಯವಾಗಿ ರೂಪಿಸಲಾದ ಗೂಢಲಿಪೀಕರಣ (Encryption) ವ್ಯವಸ್ಥೆಯನ್ನು ಇದು ಹೊಂದಿದೆ.

=> ಮಾಡ್ಯುಲರ್ ವಿನ್ಯಾಸ: ಕಾರ್ಯಾಚರಣೆಯ ಅಗತ್ಯಕ್ಕೆ ತಕ್ಕಂತೆ ಇದರ ಮೇಲೆ ಸೋನಾರ್, ರಿಮೋಟ್ ಗನ್ ಸಿಸ್ಟಮ್ ಮತ್ತು ಎಲೆಕ್ಟ್ರಾನಿಕ್ ವಾರ್ಫೇರ್ ಉಪಕರಣಗಳನ್ನು ಅಳವಡಿಸಬಹುದು.

=> ಹೈಬ್ರಿಡ್ ಪ್ರೊಪಲ್ಷನ್: ಇಂಧನ ಉಳಿತಾಯ ಮತ್ತು ಶಬ್ದರಹಿತ ಸಂಚಾರಕ್ಕಾಗಿ ಹೈಬ್ರಿಡ್ ಇಂಜಿನ್ ವ್ಯವಸ್ಥೆಯನ್ನು ಬಳಸಲಾಗಿದೆ.

**➤ ಕಾರ್ಯಾಚರಣೆಯ ಮೂರು ವಿಧಾನಗಳು (Modes):**

1. ರಿಮೋಟ್ ಕಂಟ್ರೋಲ್ ಮೋಡ್: ನೂರಾರು ಕಿಲೋಮೀಟರ್ ದೂರದ ಕಂಟ್ರೋಲ್ ರೂಂನಿಂದ ತಜ್ಞರು ನಿಯಂತ್ರಿಸಬಹುದು.
2. ಆಟೋನಮಸ್ ವೇ ಪಾಯಿಂಟ್ ನ್ಯಾವಿಗೇಷನ್: ಮೊದಲೇ ನಿಗದಿಪಡಿಸಿದ ಮಾರ್ಗದಲ್ಲಿ ನೌಕೆಯು ಸ್ವತಂತ್ರವಾಗಿ ಸಂಚರಿಸುತ್ತದೆ.
3. ಪೂರ್ಣ ಸ್ವಯಂಚಾಲಿತ ಮೋಡ್: ಮನುಷ್ಯರ ಯಾವುದೇ ಸೂಚನೆಯಿಲ್ಲದೆ, ಬದಲಾಗುವ ವಾತಾವರಣಕ್ಕೆ ತಕ್ಕಂತೆ ನೌಕೆಯು ತಾನೇ ಗುರಿ ತಲುಪುತ್ತದೆ.

➤ ರಕ್ಷಣಾತ್ಮಕ ಲಾಭಗಳು:

=> ಸಮುದ್ರದಾಳದ ಬಾಂಬ್‌ಗಳನ್ನು (Mines) ಪತ್ತೆಹಚ್ಚಲು ಮತ್ತು ನಾಶಪಡಿಸಲು ಸಹಕಾರಿ.

=> ಅಪಾಯಕಾರಿ ಪ್ರದೇಶಗಳಲ್ಲಿ ಮನುಷ್ಯರ ಜೀವಕ್ಕೆ ಅಪಾಯವಿಲ್ಲದಂತೆ ಶತ್ರುಗಳ ಮೇಲೆ ನಿಗಾ ಇಡಬಹುದು.

=> ಭಾರತೀಯ ನೌಕಾಪಡೆಯ 'ಫಾಸ್ಟ್ ಇಂಟರ್‌ಸೆಪ್ಟರ್ ಬೋಟ್ಸ್' (FIB) ಗಳಿಗೆ ಈ ತಂತ್ರಜ್ಞಾನ ಅಳವಡಿಸಲಾಗಿದ್ದು, ಇವು ಈಗ 'ಸ್ವಯಂಚಾಲಿತ ನೌಕೆಗಳಾಗಿ' ಮಾರ್ಪಟ್ಟಿವೆ.

➤ ಭಾರತೀಯ ಶಿಪ್ಪಿಂಗ್ ರಿಜಿಸ್ಟರ್‌ನಿಂದ 'ಐಆರ್ -ಕ್ಲಾಸ್' (IRClass) ಪ್ರಮಾಣಪತ್ರ ಪಡೆದ ದೇಶದ ಮೊದಲ ಸ್ವದೇಶಿ ಯುಎಸ್‌ವಿ ಸಾಫ್ಟ್‌ವೇರ್ ಇದಾಗಿದೆ. ಇದು ಭಾರತವನ್ನು ಸ್ವಯಂಚಾಲಿತ ನೌಕಾ ತಂತ್ರಜ್ಞಾನ ಹೊಂದಿರುವ ವಿಶ್ವದ ಆಯ್ದ ರಾಷ್ಟ್ರಗಳ ಸಾಲಿಗೆ ಸೇರಿಸಿದೆ.

## ನಂಬಿಯೊ ಸುರಕ್ಷತಾ ಸೂಚ್ಯಂಕ 2026 : ಮಂಗಳೂರು ಭಾರತದಲ್ಲಿ ಅಗ್ರಸ್ಥಾನ




* ಜನವರಿ 2026 ರಲ್ಲಿ ನಂಬಿಯೊ ಸುರಕ್ಷತಾ ಸೂಚ್ಯಂಕ 2026 ಶ್ರೇಯಾಂಕಗಳನ್ನು ಬಿಡುಗಡೆ ಮಾಡಲಾಯಿತು, ಸುರಕ್ಷತಾ ಗ್ರಹಿಕೆ ಅಂಕಗಳ ಆಧಾರದ ಮೇಲೆ ಕ್ವಿಂಗ್ಡಾವೊ (ಚೀನಾ) ವಿಶ್ವದ ಸುರಕ್ಷಿತ ನಗರ ಮತ್ತು ಮಂಗಳೂರು (ಭಾರತ) ಅತ್ಯಂತ ಸುರಕ್ಷಿತ ಭಾರತೀಯ ನಗರಗಳಾಗಿವೆ.
* ನಂಬಿಯೊ ಸುರಕ್ಷತಾ ಸೂಚ್ಯಂಕ 2026 ಶ್ರೇಯಾಂಕಗಳನ್ನು ಬಿಡುಗಡೆ ಮಾಡಲಾಗಿದೆ ಇದು ನಗರ ಮಟ್ಟದ ಸುರಕ್ಷತಾ ಗ್ರಹಿಕೆಗಳ ಜಾಗತಿಕ ಸ್ನ್ಯಾಪ್‌ಶಾಟ್ ಅನ್ನು ಒದಗಿಸುತ್ತದೆ. ವಿಶ್ವಾದ್ಯಂತ 304 ನಗರಗಳನ್ನು ಒಳಗೊಂಡ ಈ ಸೂಚ್ಯಂಕವು ಅಪರಾಧ ಮತ್ತು ಸುರಕ್ಷತೆಗೆ ಸಂಬಂಧಿಸಿದ ಸಮೀಕ್ಷೆಯ ಪ್ರತಿಕ್ರಿಯೆಗಳ ಆಧಾರದ ಮೇಲೆ ನಗರಗಳನ್ನು ಶ್ರೇಣೀಕರಿಸುತ್ತದೆ.
* ಕರ್ನಾಟಕದ ಮಂಗಳೂರು ಭಾರತದ ಸುರಕ್ಷಿತ ನಗರವಾಗಿ ಹೊರಹೊಮ್ಮಿದರೆ, ಚೀನಾದ ಕ್ವಿಂಗ್ಡಾವೊ ಜಾಗತಿಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ, ಇದು ಪ್ರದೇಶಗಳಲ್ಲಿನ ವಿವಿಧ ನಗರ ಸುರಕ್ಷತಾ ಪರಿಸ್ಥಿತಿಗಳನ್ನು ಪ್ರತಿಬಿಂಬಿಸುತ್ತದೆ.
* ನಂಬಿಯೊ ಬಗ್ಗೆ :

ನಂಬಿಯೊವನ್ನು 2009 ರಲ್ಲಿ ಸ್ಥಾಪಿಸಲಾಯಿತು ಮತ್ತು ಸೆರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ. ಇದು ಜೀವನ ವೆಚ್ಚ, ಜೀವನದ ಗುಣಮಟ್ಟ, ಮಾಲಿನ್ಯ, ಸಂಚಾರ ಮತ್ತು ಅಪರಾಧಗಳ ಕುರಿತು ವಿಶ್ವದ ಅತಿದೊಡ್ಡ ಜನಸಮೂಹ

ಮೂಲದ ಡೇಟಾಬೇಸ್ ಆಗಿದೆ. ನಂಬಿಯೊದ ಸಿಇಒ ಮ್ಲಾಡೆನ್ ಅಡಾಮೊವಿಕ್.

*** ವಿಶ್ವದ ಟಾಪ್ 10 ಸುರಕ್ಷಿತ ನಗರಗಳು (2026)**

1 ಕಿಂಗ್ದಾವೊ, ಶಾಂಡೊಂಗ್ ಚೀನಾ - ಸುರಕ್ಷತಾ ಸ್ಕೋರ್ 89.2
2 ಅಬುಧಾಬಿ ಯುಎಇ - ಸುರಕ್ಷತಾ ಸ್ಕೋರ್ 88.9
3 ದೋಹಾ ಕತಾರ್ - ಸುರಕ್ಷತಾ ಸ್ಕೋರ್ 84.5
4 ಶಾರ್ಜಾ ಯುಎಇ - ಸುರಕ್ಷತಾ ಸ್ಕೋರ್ 84.5
5 ದುಬೈ ಯುಎಇ - ಸುರಕ್ಷತಾ ಸ್ಕೋರ್ 83.9
6 ತೈಪೆ ತೈವಾನ್ - ಸುರಕ್ಷತಾ ಸ್ಕೋರ್ 83.5
7 ಮನಾಮ ಬಹ್ರೇನ್ - ಸುರಕ್ಷತಾ ಸ್ಕೋರ್ 82.0
8 ಮಸ್ಕತ್ ಓಮನ್ - ಸುರಕ್ಷತಾ ಸ್ಕೋರ್ 81.3
9 ಹಾಂಗ್ ಕಾಂಗ್ ಚೀನಾ - ಸುರಕ್ಷತಾ ಸ್ಕೋರ್ 78.6
10 ಚಿಯಾಂಗ್ ಮಾಯ್ ಥೈಲ್ಯಾಂಡ್ - ಸುರಕ್ಷತಾ ಸ್ಕೋರ್ 77.9

*** ಭಾರತದ ಟಾಪ್ 5 ಸುರಕ್ಷಿತ ನಗರಗಳು (2026)**

1 ಮಂಗಳೂರು ಕರ್ನಾಟಕ - ಸುರಕ್ಷತಾ ಸ್ಕೋರ್ 74.4 (ಆಕಾಶ)
2 ಅಹಮದಾಬಾದ್ ಗುಜರಾತ್ - ಸುರಕ್ಷತಾ ಸ್ಕೋರ್ 68.5
3 ಜೈಪುರ ರಾಜಸ್ಥಾನ - ಸುರಕ್ಷತಾ ಸ್ಕೋರ್ 65.3
4 ಕೊಯಮತ್ತೂರು ತಮಿಳುನಾಡು - ಸುರಕ್ಷತಾ ಸ್ಕೋರ್ 62.0
5 ತಿರುವನಂತಪುರಂ ಕೇರಳ - ಸುರಕ್ಷತಾ ಸ್ಕೋರ್ 61.0

* ಪಪುವಾ ನ್ಯೂಗಿನಿಯಾ, ವೆನೆಜುವೆಲಾ ಮತ್ತು ಹೈಟಿ ಜಾಗತಿಕವಾಗಿ ಅತ್ಯಂತ ಕಡಿಮೆ ಸುರಕ್ಷಿತ ರಾಷ್ಟ್ರಗಳಲ್ಲಿ ಸ್ಥಾನ ಪಡೆದಿವೆ, ಇದು ನಿರಂತರ ಕಾನೂನು ಮತ್ತು ಸುವ್ಯವಸ್ಥೆ ಮತ್ತು ಆಡಳಿತ ಸವಾಲುಗಳನ್ನು ಪ್ರತಿಬಿಂಬಿಸುತ್ತದೆ.

* ಸುರಕ್ಷತಾ ಶ್ರೇಯಾಂಕದಲ್ಲಿ ಭಾರತದ ಒಟ್ಟಾರೆ ಸಾಧನೆ

- ಭಾರತವು ಜಾಗತಿಕವಾಗಿ 70 ನೇ ಸ್ಥಾನದಲ್ಲಿದೆ, ಒಟ್ಟಾರೆ ಸುರಕ್ಷತಾ ಅಂಕ 55.8 ರೊಂದಿಗೆ, ಮಧ್ಯಮ ಸುರಕ್ಷತಾ ವಿಭಾಗದಲ್ಲಿ ಸ್ಥಾನ ಪಡೆದಿದೆ.
- ಮಂಗಳೂರು ಮತ್ತು ಅಹಮದಾಬಾದ್‌ನಂತಹ ಕೆಲವು ಭಾರತೀಯ ನಗರಗಳು ಉತ್ತಮ ಪ್ರದರ್ಶನ ನೀಡಿದರೆ, ದೆಹಲಿ, ನೋಯ್ಡಾ ಮತ್ತು ಗುರುಗ್ರಾಮ್‌ನಂತಹ ದೊಡ್ಡ ಮಹಾನಗರಗಳು ಭಾರತದ ಅತ್ಯಂತ ಕಡಿಮೆ ಸುರಕ್ಷಿತ ನಗರಗಳಲ್ಲಿ ಸ್ಥಾನ ಪಡೆದಿವೆ.
- ದೆಹಲಿ ಜಾಗತಿಕವಾಗಿ 255 ನೇ ಸ್ಥಾನದಲ್ಲಿದೆ, ನಗರ ಅಪರಾಧ, ಪೊಲೀಸ್ ವ್ಯವಸ್ಥೆ ಮತ್ತು ಮೆಗಾ ನಗರಗಳಲ್ಲಿನ ಮೂಲಸೌಕರ್ಯಕ್ಕೆ ಸಂಬಂಧಿಸಿದ ಸವಾಲುಗಳನ್ನು ಎತ್ತಿ ತೋರಿಸುತ್ತದೆ.

## ಅಮೆರಿಕಕ್ಕೆ ಇರಾನ್ ಎಚ್ಚರಿಕೆ: ಮಧ್ಯಪ್ರಾಚ್ಯದಲ್ಲಿ ಹೆಚ್ಚಿದ ಸಂಘರ್ಷದ ಭೀತಿ



➤ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರೆಗ್ಚಿ (Abbas Araghchi) ಅವರು 'ವಾಲ್ ಸ್ಟ್ರೀಟ್ ಜರ್ನಲ್' ಲೇಖನದ ಮೂಲಕ ಅಮೆರಿಕಕ್ಕೆ ನೇರ ಎಚ್ಚರಿಕೆ ನೀಡಿದ್ದಾರೆ. "ನಮ್ಮ ಮೇಲೆ ಯಾವುದೇ ರೀತಿಯ ಮಿಲಿಟರಿ ದಾಳಿ ನಡೆದರೆ, ನಮ್ಮಲ್ಲಿರುವ ಸಂಪೂರ್ಣ ಶಕ್ತಿಯನ್ನು ಬಳಸಿ ಪ್ರತಿದಾಳಿ ನಡೆಸುತ್ತೇವೆ" ಎಂದು ಅವರು ಗುಡುಗಿದ್ದಾರೆ. ಇರಾನ್ ಯುದ್ಧವನ್ನು ಬಯಸುವುದಿಲ್ಲ, ಆದರೆ ಆತ್ಮರಕ್ಷಣೆಗಾಗಿ ಹಿಂದೆ ಸರಿಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

➤ ಪ್ರಾದೇಶಿಕ ಭದ್ರತೆಯ ನೆಪದಲ್ಲಿ ಅಮೆರಿಕವು ತನ್ನ ಬೃಹತ್ ಯುದ್ಧನೌಕೆಯಾದ 'ಯುಎಸ್‌ಎಸ್ ಅಬ್ರಹಾಂ ಲಿಂಕನ್' (USS Abraham Lincoln) ಅನ್ನು ಹಿಂದೂ ಮಹಾಸಾಗರದ ಮೂಲಕ ಮಧ್ಯಪ್ರಾಚ್ಯದತ್ತ ಕಳುಹಿಸಿದೆ. ಇದರೊಂದಿಗೆ ಇನ್ನೂ ಮೂರು ಯುದ್ಧ ಹಡಗುಗಳು ತೆರಳುತ್ತಿರುವುದು ಯುದ್ಧದ ಭೀತಿಯನ್ನು ಹೆಚ್ಚಿಸಿದೆ.

➤ ಇರಾನ್ ಆಂತರಿಕ ಪರಿಸ್ಥಿತಿ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ: ಇರಾನ್‌ನಲ್ಲಿ ಕಳೆದ 24 ದಿನಗಳಿಂದ ಭಾರಿ ಪ್ರತಿಭಟನೆಗಳು ನಡೆಯುತ್ತಿವೆ. ಅಮೆರಿಕ ಮೂಲದ 'ಹ್ಯೂಮನ್ ರೈಟ್ಸ್ ಆಕ್ಟಿವಿಸ್ಟ್ ನ್ಯೂಸ್ ಏಜೆನ್ಸಿ' (HRANA) ವರದಿಯ ಪ್ರಕಾರ, ಪ್ರತಿಭಟನೆಯಲ್ಲಿ ಇದುವರೆಗೆ ಸುಮಾರು 4,519 ಜನರು ಸಾವನ್ನಪ್ಪಿದ್ದಾರೆ. ಇದರಲ್ಲಿ 33 ಮಕ್ಕಳು ಸೇರಿದ್ದಾರೆ ಎಂದು ವರದಿಯಾಗಿದೆ. ಸುಮಾರು 26,000ಕ್ಕೂ ಹೆಚ್ಚು ಜನರನ್ನು ಇರಾನ್ ಸರ್ಕಾರ ಬಂಧಿಸಿದೆ ಎನ್ನಲಾಗಿದೆ.

➤ ಇರಾನ್‌ನ ಸರ್ವೋಚ್ಚ ನಾಯಕ ಖಮೇನಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು 'ಅಪರಾಧಿ' ಎಂದು ಕರೆದಿದ್ದಾರೆ. ಇರಾನ್‌ನ ಆಂತರಿಕ ಅಸ್ಥಿರತೆಗೆ ಅಮೆರಿಕದ ಪ್ರಚೋದನೆಯೇ ಕಾರಣ ಎಂದು ಇರಾನ್ ಆರೋಪಿಸಿದೆ. ಇದೇ ವೇಳೆ, ಇರಾನ್‌ನಲ್ಲಿನ ಮಾನವ ಹಕ್ಕುಗಳ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ ಶುಕ್ರವಾರ (23-01-2026) ವಿಶೇಷ ಸಭೆಯನ್ನು ಕರೆದಿದೆ.

➤ ಇರಾನ್ ಸರ್ಕಾರವು ದೇಶಾದ್ಯಂತ ಇಂಟರ್ನೆಟ್ ಮತ್ತು ಸಂಪರ್ಕ ಸಾಧನಗಳ ಮೇಲೆ ಕಟ್ಟುನಿಟ್ಟಿನ ನಿಷೇಧ ಹೇರಿದೆ. ಪ್ರತಿಭಟನಾಕಾರರು ಸಂವಹನ ನಡೆಸದಂತೆ ತಡೆಯಲು VPN ಸೇವೆಗಳನ್ನು ಸಹ ಸ್ಥಗಿತಗೊಳಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

## ಅಕ್ರಮ ಗಣಿಗಾರಿಕೆಗೆ ಬ್ರೇಕ್: ಅರಾವಳಿಗೆ ಸುಪ್ರೀಂ ಕೋರ್ಟ್ ರಕ್ಷಣೆ



➤ ನವದೆಹಲಿ: ಭಾರತದ ಅತ್ಯಂತ ಹಳೆಯ ಮತ್ತು ಪರಿಸರ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮವಾದ ಅರಾವಳಿ ಪರ್ವತ ಶ್ರೇಣಿಯನ್ನು ಅಕ್ರಮ ಗಣಿಗಾರಿಕೆಯಿಂದ ರಕ್ಷಿಸಲು ಸುಪ್ರೀಂಕೋರ್ಟ್ ಮಹತ್ವದ ನಿರ್ಧಾರ ಕೈಗೊಂಡಿದೆ. ಪರ್ವತ ಶ್ರೇಣಿಗಳ ವ್ಯಾಖ್ಯಾನ ಮತ್ತು ಗಣಿಗಾರಿಕೆಯ ಪರಿಣಾಮಗಳನ್ನು ವೈಜ್ಞಾನಿಕವಾಗಿ ಮರುಪರಿಶೀಲಿಸಲು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ಪೀಠವು 'ಹೈಪರ್ ಪವರ್ ತಜ್ಞರ ಸಮಿತಿ' ರಚಿಸುವುದಾಗಿ ಘೋಷಿಸಿದೆ.

**➤ ಸುಪ್ರೀಂಕೋರ್ಟ್‌ನ ಪ್ರಮುಖ ನಿರ್ದೇಶನಗಳು:-**

=> ತಜ್ಞರ ಸಮಿತಿ ರಚನೆ: ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ಪೀಠವು ಗಣಿಗಾರಿಕೆ, ಪರಿಸರ ವಿಜ್ಞಾನ ಮತ್ತು ಭೂವಿಜ್ಞಾನ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರನ್ನು ಒಳಗೊಂಡ ಸಮಿತಿಯನ್ನು ರಚಿಸಲಿದೆ.

=> ಕೇಂದ್ರಕ್ಕೆ ಸೂಚನೆ: ಮುಂದಿನ 4 ವಾರಗಳಲ್ಲಿ ಸಮಿತಿಗೆ ಅರ್ಹರಾದ ಪರಿಸರವಾದಿಗಳು ಮತ್ತು ವಿಜ್ಞಾನಿಗಳ ಹೆಸರನ್ನು ಸೂಚಿಸುವಂತೆ ಕೇಂದ್ರ ಸರ್ಕಾರದ ಪರ ವಕೀಲರಿಗೆ ಕೋರ್ಟ್ ಸೂಚಿಸಿದೆ. ಈ ಸಮಿತಿಯು ಸುಪ್ರೀಂಕೋರ್ಟ್‌ನ ನೇರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಲಿದೆ.

=> ಗಣಿಗಾರಿಕೆಗೆ ತಡೆ: ನ್ಯಾಯಾಲಯದ ಪೂರ್ವಾನುಮತಿ ಇಲ್ಲದೆ ಅರಾವಳಿ ವ್ಯಾಪ್ತಿಯಲ್ಲಿ ಹೊಸ ಗಣಿಗಾರಿಕೆ ಪರವಾನಗಿ ನೀಡುವಂತಿಲ್ಲ ಅಥವಾ ಹಳೆಯ ಪರವಾನಗಿಗಳನ್ನು ನವೀಕರಿಸುವಂತಿಲ್ಲ ಎಂದು ಕೋರ್ಟ್ ತನ್ನ ಹಳೆಯ ಆದೇಶವನ್ನು ಮುಂದುವರಿಸಿದೆ.

➤ ನವೆಂಬರ್ 2025 ರಲ್ಲಿ ಸುಪ್ರೀಂಕೋರ್ಟ್ ಅರಾವಳಿ ಪರ್ವತ ಶ್ರೇಣಿಗಳನ್ನು ಗುರುತಿಸಲು 'ಸಮುದ್ರ ಮಟ್ಟದಿಂದ ಎತ್ತರ' (Elevation-linked definition) ಆಧರಿಸಿದ ಮಾನದಂಡವನ್ನು ಒಪ್ಪಿಕೊಂಡಿತ್ತು. ಅದರಂತೆ 100 ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ಎತ್ತರವಿರುವ ಪ್ರದೇಶಗಳನ್ನು ಅರಾವಳಿ ಎಂದು ಪರಿಗಣಿಸಲಾಗಿತ್ತು. ಈ ಹೊಸ ವ್ಯಾಖ್ಯಾನದಿಂದಾಗಿ ಅನೇಕ ಸಂರಕ್ಷಿತ ಪ್ರದೇಶಗಳು ಗಣಿಗಾರಿಕೆಗೆ ಮುಕ್ತವಾಗಬಹುದು ಮತ್ತು

ಪರಿಸರ ನಾಶಕ್ಕೆ ದಾರಿಯಾಗಬಹುದು ಎಂದು ಪರಿಸರವಾದಿಗಳು ಆತಂಕ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಈಗ ಹಳೆಯ ಆದೇಶಕ್ಕೆ ತಡೆ ನೀಡಿ, ಮರುಪರಿಶೀಲನೆಗೆ ಮುಂದಾಗಿದೆ.

➤ ಅರಾವಳಿ ಪರ್ವತ ಶ್ರೇಣಿಯ ಮಹತ್ವ: ಅರಾವಳಿ ಶ್ರೇಣಿಯನ್ನು ವಾಯುವ್ಯ ಭಾರತದ 'ಹಸಿರು ಶ್ವಾಸಕೋಶ' (Green Lungs) ಎಂದು ಕರೆಯಲಾಗುತ್ತದೆ. ಇದು ಹವಾಮಾನ ಸಮತೋಲನ, ಜೀವ ವೈವಿಧ್ಯ ಮತ್ತು ಮರುಭೂಮಿಕರಣವನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಶ್ರೇಣಿಯು ದೆಹಲಿ, ಹರಿಯಾಣ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಹರಡಿಕೊಂಡಿದೆ.

➤ ಅರಾವಳಿ ಪರ್ವತ ಶ್ರೇಣಿಯ ವ್ಯಾಪ್ತಿ ಮತ್ತು ಅಕ್ರಮ ಗಣಿಗಾರಿಕೆಯ ಪರಿಣಾಮಗಳನ್ನು ಪರಿಶೀಲಿಸಿ ನಿಖರ ವ್ಯಾಖ್ಯಾನ ನೀಡಲು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ಪೀಠವು ಫಾರೆಸ್ಟ್ ಸರ್ವೆ ಆಫ್ ಇಂಡಿಯಾದ ವರದಿಯನ್ನಾಧರಿಸಿ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಿದೆ.

## ಭಾರತ - ಸ್ಪೇನ್ ರಾಜತಾಂತ್ರಿಕ ಸಂಬಂಧಕ್ಕೆ 70ರ ಸಂಭ್ರಮ



➤ ಭಾರತ ಮತ್ತು ಸ್ಪೇನ್ ನಡುವಿನ ರಾಜತಾಂತ್ರಿಕ ಸಂಬಂಧಗಳು ಆರಂಭವಾಗಿ ಈ ವರ್ಷಕ್ಕೆ 70 ವರ್ಷಗಳು ಪೂರ್ಣಗೊಳ್ಳುತ್ತಿವೆ. ಈ ಐತಿಹಾಸಿಕ ಸಂದರ್ಭವನ್ನು ಸ್ಮರಿಸಲು ಮತ್ತು ಉಭಯ ದೇಶಗಳ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಲು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮತ್ತು ಸ್ಪೇನ್ ವಿದೇಶಾಂಗ ಸಚಿವ ಜೋಸೆ ಮ್ಯಾನುಯೆಲ್ ಅಲ್ಬಾರೆಸ್ ಬ್ಯೂನೋ ಅವರು ನವದೆಹಲಿಯಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.

**➤ 2026: ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಎಐ ವರ್ಷ: ಉಭಯ ದೇಶಗಳು 2026ನೇ ವರ್ಷವನ್ನು 'ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಕೃತಕ ಬುದ್ಧಿಮತ್ತೆಯ ದ್ವಿ-ವರ್ಷ' (Dual Year of Culture, Tourism, and AI) ಎಂದು ಘೋಷಿಸಿವೆ.**

=> AI ಇಂಪ್ಯಾಕ್ಟ್ ಸಮ್ಮಿಟ್ 2026: ಮುಂದಿನ ತಿಂಗಳು ನವದೆಹಲಿಯಲ್ಲಿ ಭಾರತವು ಈ ಶೃಂಗಸಭೆಯನ್ನು ಆಯೋಜಿಸಲಿದೆ.

=> ಮಾನವ ಕೇಂದ್ರಿತ ಎಐ: ಭಾರತದ ಎಐ ತಂತ್ರಜ್ಞಾನವು ಮಾನವ ಕೇಂದ್ರಿತ, ಒಳಗೊಳ್ಳುವಿಕೆ ಮತ್ತು ನೈತಿಕ ಮೌಲ್ಯಗಳಿಗೆ ಆದ್ಯತೆ ನೀಡಲಿದ್ದು, ಇದು ಯುರೋಪಿನ ಆಲೋಚನೆಗಳಿಗೆ ಪೂರಕವಾಗಿದೆ ಎಂದು ಜೈಶಂಕರ್ ತಿಳಿಸಿದ್ದಾರೆ.

➤ ಭಯೋತ್ಪಾದನೆ ವಿರುದ್ಧ ಜಂಟಿ ಹೋರಾಟ : ಭಾರತ ಮತ್ತು ಸ್ಪೇನ್ ಎರಡೂ ದೇಶಗಳು ಭಯೋತ್ಪಾದನೆಯ ಸಂತ್ರಸ್ತ ರಾಷ್ಟ್ರಗಳಾಗಿವೆ. ಜಾಗತಿಕವಾಗಿ ಭಯೋತ್ಪಾದನೆಯ ವಿರುದ್ಧ 'ಶೂನ್ಯ ಸಹಿಷ್ಣುತೆ' (Zero-Tolerance) ನೀತಿಯನ್ನು ಅನುಸರಿಸಬೇಕು ಮತ್ತು ಈ ಸಾಮಾನ್ಯ ಸವಾಲನ್ನು ಎದುರಿಸಲು ಪರಸ್ಪರ ಸಹಕರಿಸಬೇಕು ಎಂದು ಸಚಿವರು ಒತ್ತಿಹೇಳಿದ್ದಾರೆ.

➤ ಆರ್ಥಿಕ ಮತ್ತು ವ್ಯಾಪಾರ ಸಂಬಂಧಗಳು: ಯುರೋಪಿಯನ್ ಯೂನಿಯನ್‌ನಲ್ಲಿ (EU) ಭಾರತದ ಪ್ರಮುಖ ವ್ಯಾಪಾರ ಪಾಲುದಾರರಲ್ಲಿ ಸ್ಪೇನ್ ಒಂದಾಗಿದೆ. ಉಭಯ ದೇಶಗಳ ನಡುವಿನ ವ್ಯಾಪಾರವು 8 ಬಿಲಿಯನ್ ಡಾಲರ್ ಗಡಿಯನ್ನು ದಾಟಿದೆ. ಸ್ಪೇನ್ ಕಂಪನಿಗಳು ಭಾರತದ ನವೀಕರಿಸಬಹುದಾದ ಇಂಧನ, ಮೂಲಸೌಕರ್ಯ ಮತ್ತು ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದರೆ, ಭಾರತೀಯ ಕಂಪನಿಗಳು ಸ್ಪೇನ್‌ನ ಐಟಿ ಮತ್ತು ಔಷಧೀಯ (Pharma) ಕ್ಷೇತ್ರಗಳಲ್ಲಿ ಸಕ್ರಿಯವಾಗಿವೆ.

➤ ರಕ್ಷಣಾ ಕ್ಷೇತ್ರ ಮತ್ತು C-295 ವಿಮಾನ: ರಕ್ಷಣಾ ಸಹಕಾರದಲ್ಲಿ ದೊಡ್ಡ ಮೈಲಿಗಲ್ಲಾಗಿ, ಭಾರತದಲ್ಲಿ ತಯಾರಾದ ಮೊದಲ C-295 ರಕ್ಷಣಾ ಸಾರಿಗೆ ವಿಮಾನವು ಈ ವರ್ಷವೇ ಹೊರಬರುವ ನಿರೀಕ್ಷೆಯಿದೆ. ಇದು 'ಮೇಕ್ ಇನ್ ಇಂಡಿಯಾ' ಅಭಿಯಾನಕ್ಕೆ ದೊಡ್ಡ ಬಲ ನೀಡಲಿದೆ.

## ಬದಲಾದ ರಾಜತಾಂತ್ರಿಕ ಗುರುತು: ಉತ್ತರ ಪ್ರದೇಶದ 'ರಾಜಭವನ' ಇನ್ನು ಮುಂದೆ 'ಜನ ಭವನ




➤ ಉತ್ತರ ಪ್ರದೇಶದ ರಾಜಕೀಯ ಮತ್ತು ಆಡಳಿತಾತ್ಮಕ ಇತಿಹಾಸದಲ್ಲಿ ಒಂದು ಪ್ರಮುಖ ಬದಲಾವಣೆ ನಡೆದಿದೆ. ಉತ್ತರ ಪ್ರದೇಶದ ರಾಜ್ಯಪಾಲರ ಅಧಿಕೃತ ನಿವಾಸವಾದ 'ರಾಜಭವನ'ಕ್ಕೆ (Raj Bhavan) ಈಗ ಅಧಿಕೃತವಾಗಿ 'ಜನ ಭವನ' (Jan Bhavan) ಎಂದು ಮರುನಾಮಕರಣ ಮಾಡಲಾಗಿದೆ. ಕೇಂದ್ರ ಗೃಹ ಸಚಿವಾಲಯದ ಸೂಚನೆಯ ಮೇರೆಗೆ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರ ಕಚೇರಿಯು ಈ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಈ ಬದಲಾವಣೆಯು ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ತಿಳಿಸಿದೆ.

➤ ಸಾಮಾನ್ಯವಾಗಿ 'ರಾಜಭವನ' ಎಂಬ ಪದವು ವಸಾಹತುಶಾಹಿ ಕಾಲದ ಸಂಕೇತವಾಗಿ ಕಂಡುಬರುತ್ತಿತ್ತು. ಆಡಳಿತ ಮತ್ತು ಸಾಂವಿಧಾನಿಕ ಸಂಸ್ಥೆಗಳು ಜನಸಾಮಾನ್ಯರಿಗೆ ಹತ್ತಿರವಾಗಬೇಕು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಬೇಕು ಎಂಬ ಉದ್ದೇಶದಿಂದ 'ಜನ ಭವನ' (ಜನರ ಭವನ) ಎಂದು ಹೆಸರಿಸಲಾಗಿದೆ.

➤ ಉತ್ತರ ಪ್ರದೇಶವು ಭಾರತದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯವಾಗಿದ್ದು, ರಾಜಕೀಯವಾಗಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಇಂತಹ ರಾಜ್ಯದ ರಾಜ್ಯಪಾಲರ ನಿವಾಸದ ಹೆಸರು ಬದಲಾವಣೆಯು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದೆ.

## ಎಟರ್ನಲ್ ಗ್ರೂಪ್ (Zomato) ನೂತನ ಸಿಇಒ ಆಗಿ ಅಲ್ಬಿಂದರ್ ಧಿಲ್ಲೋನ್ ನೇಮಕ




➤ ಎಟರ್ನಲ್ ಗ್ರೂಪ್ (ಹಿಂದಿನ ಜೊಮ್ಯಾಟೊ) ಸಂಸ್ಥೆಯ ಸಿಇಒ ಸ್ಥಾನಕ್ಕೆ ಸಂಸ್ಥಾಪಕ ದೀಪಿಂದರ್ ಗೋಯಲ್ ರಾಜೀನಾಮೆ ನೀಡಿದ್ದು, ಬ್ಲಿಂಕಿಟ್ (Blinkit) ಸಂಸ್ಥಾಪಕ ಅಲ್ಬಿಂದರ್ ಧಿಲ್ಲೋನ್ ನೂತನ ಗ್ರೂಪ್ ಸಿಇಒ ಆಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಹೊಸ ಉದ್ಯಮಶೀಲ ಪ್ರಯೋಗಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಗೋಯಲ್ ಈ ನಿರ್ಧಾರ ಕೈಗೊಂಡಿದ್ದು, ಕಂಪನಿಯ ವೈಸ್ ಚೇರ್ಮನ್ ಆಗಿ ದೀಪಿಂದರ್ ಗೋಯಲ್ ಮುಂದುವರಿಯಲಿದ್ದಾರೆ. ಕಂಪನಿಯ ದೈನಂದಿನ ಕಾರ್ಯಾಚರಣೆ ಮತ್ತು ಬೆಳವಣಿಗೆಯ ಜವಾಬ್ದಾರಿ ಇನ್ನು ಮುಂದೆ ಧಿಲ್ಲೋನ್ ಅವರ ಹೆಗಲೇರಲಿದೆ.

➤ ದೀಪಿಂದರ್ ಗೋಯಲ್ ಅವರು ಸಾರ್ವಜನಿಕ ಕಂಪನಿಯ ವ್ಯಾಪ್ತಿಯಿಂದ ಹೊರತಾದ, ಹೆಚ್ಚಿನ ರಿಸ್ಕ್ ಹೊಂದಿರುವ ಹೊಸ ಸ್ಟಾರ್ಟ್‌ಅಪ್ ಆಲೋಚನೆಗಳು ಮತ್ತು ಪ್ರಯೋಗಗಳಲ್ಲಿ

ತೊಡಗಿಸಿಕೊಳ್ಳಲು ಈ ನಿರ್ಧಾರ ಕೈಗೊಂಡಿದ್ದಾರೆ. ಫೆಬ್ರವರಿ 1, 2026 ರಿಂದ ಈ ಬದಲಾವಣೆ ಜಾರಿಗೆ ಬರಲಿದೆ.

➤ ಅಲ್ಬಿಂದರ್ ಧಿಲ್ಲೋನ್: ಇವರು ಐಐಟಿ ದೆಹಲಿ (IIT Delhi) ಪದವೀಧರ ಮತ್ತು ಕೊಲಂಬಿಯಾ ಬಿಸಿನೆಸ್ ಸ್ಕೂಲ್‌ನಿಂದ ಎಂಬಿಎ (MBA) ಪದವಿ ಪಡೆದಿದ್ದಾರೆ. ಈ ಹಿಂದೆ ಜೊಮ್ಯಾಟೊದಲ್ಲಿ ಅಂತರಾಷ್ಟ್ರೀಯ ವಿಸ್ತರಣಾ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದ್ದರು. ನಂತರ ಕ್ವಿಕ್-ಕಾಮರ್ಸ್ ಸಂಸ್ಥೆಯಾದ 'ಗ್ರೋಫರ್ಸ್' (Grofers) ಸ್ಥಾಪಿಸಿದರು, ಇದನ್ನು ಮುಂದೆ 'ಬ್ಲಿಂಕಿಟ್' (Blinkit) ಎಂದು ಮರುನಾಮಕರಣ ಮಾಡಲಾಯಿತು.

- 2022ರಲ್ಲಿ ಜೊಮ್ಯಾಟೊ ಸಂಸ್ಥೆಯು ಬ್ಲಿಂಕಿಟ್ ಅನ್ನು ಸ್ವಾಧೀನಪಡಿಸಿಕೊಂಡಿತ್ತು.

➤ ಎಟರ್ನಲ್ ಗ್ರೂಪ್ (Eternal Group): ಜೊಮ್ಯಾಟೊ ತನ್ನ ಹೆಸರನ್ನು 'ಎಟರ್ನಲ್ ಲಿಮಿಟೆಡ್' ಎಂದು ಬದಲಿಸಿಕೊಂಡಿದ್ದು, ಇದು ಆಹಾರ ವಿತರಣೆ (Zomato), ಕ್ವಿಕ್ ಕಾಮರ್ಸ್ (Blinkit), ಹೈಪರ್‌ಪ್ಯೂರ್ ಮತ್ತು ಮನರಂಜನಾ ವ್ಯವಹಾರಗಳನ್ನು ಒಳಗೊಂಡಿರುವ ಬೃಹತ್ ಸಂಸ್ಥೆಯಾಗಿದೆ.

➤ ಅಲ್ಬಿಂದರ್ ಧಿಲ್ಲೋನ್ ಅವರು ಕಂಪನಿಯ ದೈನಂದಿನ ಕಾರ್ಯಾಚರಣೆ, ಕಾರ್ಯತಂತ್ರ ಮತ್ತು ವ್ಯವಹಾರದ ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದಾರೆ. ದೀಪಿಂದರ್ ಗೋಯಲ್ ಅವರು ಮಂಡಳಿಯ ಉಪಾಧ್ಯಕ್ಷರಾಗಿ ಕಾರ್ಯತಂತ್ರದ ಮಾರ್ಗದರ್ಶನ ನೀಡಲಿದ್ದಾರೆ.

## ಪಂಜಾಬ್ ಪೊಲೀಸ್‌ನಿಂದ 'ಆಪರೇಷನ್ ಪ್ರಹಾರ್' ಚಾಲನೆ: ಗ್ಯಾಂಗ್‌ಸ್ಟರ್ ನೆಟ್‌ವರ್ಕ್‌ಗಳ ಮೇಲೆ ಬೃಹತ್ ದಾಳಿ




➤ ಪಂಜಾಬ್ ರಾಜ್ಯವನ್ನು ಅಪರಾಧ ಮುಕ್ತಗೊಳಿಸಲು ಮತ್ತು ಸಂಘಟಿತ ಅಪರಾಧ ಜಾಲಗಳನ್ನು ಬೇರುಸಹಿತ ಕಿತ್ತೆಸೆಯಲು ಪಂಜಾಬ್ ಪೊಲೀಸರು ಮಂಗಳವಾರದಂದು (20-01-2026) 'ಆಪರೇಷನ್ ಪ್ರಹಾರ್' (Operation Parhar) ಎಂಬ ಬೃಹತ್ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಸುಮಾರು 12,000 ಪೊಲೀಸ್ ಸಿಬ್ಬಂದಿ ಒಳಗೊಂಡ 2,000 ತಂಡಗಳು ರಾಜ್ಯಾದ್ಯಂತ ಏಕಕಾಲದಲ್ಲಿ ದಾಳಿ ನಡೆಸುತ್ತಿವೆ. ವಿದೇಶಗಳಲ್ಲಿ ನೆಲೆಸಿರುವ 60 ಪ್ರಮುಖ ಗ್ಯಾಂಗ್‌ಸ್ಟರ್ ಗಳು ಮತ್ತು ರಾಜ್ಯದಲ್ಲಿರುವ ಅವರ 1,200 ಸಹಚರರನ್ನು ಗುರಿಯಾಗಿಸಿಕೊಂಡು ಈ ಕ್ರಮ ಕೈಗೊಳ್ಳಲಾಗಿದೆ. ಆರಂಭಿಕವಾಗಿ ಇದನ್ನು 72 ಗಂಟೆಗಳ ತೀವ್ರ ಕಾರ್ಯಾಚರಣೆಯಾಗಿ ರೂಪಿಸಲಾಗಿದೆ, ಆದರೆ ಗ್ಯಾಂಗ್‌ಸ್ಟರ್ ಮುಕ್ತವಾಗುವವರೆಗೂ ಇದು ಮುಂದುವರಿಯಲಿದೆ ಎಂದು ಪೊಲೀಸ್ ಮಹಾನಿರ್ದೇಶಕರು (DGP) ತಿಳಿಸಿದ್ದಾರೆ.

**➤ ಕಾರ್ಯಾಚರಣೆಯ ಉದ್ದೇಶಗಳು:**

=> ಪರಿಸರ ವ್ಯವಸ್ಥೆಯ ನಾಶ: ಕೇವಲ ಅಪರಾಧಿಗಳನ್ನು ಬಂಧಿಸುವುದಷ್ಟೇ ಅಲ್ಲದೆ, ಅವರಿಗೆ ಹಣಕಾಸು ನೆರವು ನೀಡುವ ಮಾರ್ಗಗಳು (Financing), ಶಸ್ತ್ರಾಸ್ತ್ರ ಪೂರೈಕೆ ಜಾಲ (Weapon Supply), ಅಡಗುತಾಣಗಳು (Safe Houses) ಮತ್ತು ಸಂವಹನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಧ್ವಂಸಗೊಳಿಸುವುದು.

=> ಆಸ್ತಿ ಮುಟ್ಟುಗೋಲು: ಮಾದಕ ದ್ರವ್ಯ ತಡೆಗಟ್ಟುವ ಕ್ರಮಗಳ ಮಾದರಿಯಲ್ಲೇ, ಅಪರಾಧ ಚಟುವಟಿಕೆಗಳ ಮೂಲಕ ಗಳಿಸಿದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

=> ವಿದೇಶಿ ಪರಾರಿಗಳ ಮೇಲೆ ನಿಗಾ: ವಿದೇಶಗಳಲ್ಲಿ ಕುಳಿತು ಅಪರಾಧ ಎಸಗುವವರನ್ನು ಹಿಡಿಯಲು 'Overseas Fugitive Tracking and Extradition Cell' (OFTEC) ಎಂಬ ವಿಶೇಷ ಘಟಕವನ್ನು ರಚಿಸಲಾಗಿದೆ.

➤ ಸಾರ್ವಜನಿಕ ಸಹಭಾಗಿತ್ವ ಮತ್ತು ಹೆಲ್ಪ್‌ಲೈನ್: ಸಾರ್ವಜನಿಕರು ಗ್ಯಾಂಗ್‌ಸ್ಟರ್‌ಗಳ ಚಟುವಟಿಕೆ ಅಥವಾ ಬೆದರಿಕೆ ಕರೆಗಳ ಬಗ್ಗೆ ಮಾಹಿತಿ ನೀಡಲು ಪಂಜಾಬ್ ಪೊಲೀಸರು 93946-93946 ಎಂಬ ವಿಶೇಷ ಆಂಟಿ-ಗ್ಯಾಂಗ್‌ಸ್ಟರ್ ಹೆಲ್ಪ್‌ಲೈನ್ ಸಂಖ್ಯೆಯನ್ನು ಬಿಡುಗಡೆ ಮಾಡಿದ್ದಾರೆ. ಮಾಹಿತಿ ನೀಡುವವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ಭರವಸೆ ನೀಡಲಾಗಿದೆ.

# 23 Jan 2026

## 'ಖೇಲ್‌ಭೂಮಿ' ಯಲ್ಲಿ ಪ್ಯಾರಾಲಿಂಪಿಕ್ ಪವರ್‌ಲಿಫ್ಟಿಂಗ್ ಸಂಭ್ರಮ




➤ ಜನವರಿ 2026 ರಲ್ಲಿ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರೂರ್ಕಿಯ COER ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾದ ರಾಷ್ಟ್ರೀಯ ಪ್ಯಾರಾಲಿಂಪಿಕ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ಅನ್ನು ವರ್ಚುವಲ್ (Virtual) ಮೂಲಕ ಉದ್ಘಾಟಿಸಿದರು. ಈ ಕ್ರೀಡಾಕೂಟವು ಭಾರತೀಯ ಕ್ರೀಡಾ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದೆ.

➤ ಈ ರಾಷ್ಟ್ರೀಯ ಪ್ಯಾರಾಲಿಂಪಿಕ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ವಿಕಲಚೇತನ ಕ್ರೀಡಾಪಟುಗಳ ಸಬಲೀಕರಣ, ಒಳಗೊಳ್ಳುವ ಕ್ರೀಡೆಗಳ ಪ್ರೋತ್ಸಾಹ ಮತ್ತು ಅವರಿಗೆ ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ವೇದಿಕೆಯನ್ನು ಕಲ್ಪಿಸುವ ಮಹತ್ತರ ಉದ್ದೇಶವನ್ನು ಹೊಂದಿದೆ.

➤ ಉತ್ತರಾಖಂಡ ರಾಜ್ಯವು 'ಖೇಲ್‌ಭೂಮಿ' (Khelbhoomi) ಎಂಬ ತನ್ನ ಗುರುತನ್ನು ಬಲಪಡಿಸುತ್ತಿದೆ. ಇಲ್ಲಿ 38ನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.

➤ ಮುಖ್ಯಮಂತ್ರಿಗಳ ಭಾಷಣ: ಕಳೆದ ದಶಕವನ್ನು ಭಾರತೀಯ ಕ್ರೀಡಾ ಇತಿಹಾಸದ "ಸುವರ್ಣ ಅಧ್ಯಾಯ" ಎಂದು ಸಿಎಂ ಬಣ್ಣಿಸಿದ್ದಾರೆ. ಭಾರತವು 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ದಾಖಲೆಯ 29 ಪದಕಗಳನ್ನು ಗೆದ್ದಿರುವುದನ್ನು ಅವರು ಸ್ಮರಿಸಿದರು. ಪವರ್‌ಲಿಫ್ಟಿಂಗ್ ಕೇವಲ ದೈಹಿಕ ಶಕ್ತಿಯ ಪ್ರದರ್ಶನವಲ್ಲ, ಬದಲಾಗಿ ಇದು ಶಿಸ್ತು, ತಾಳ್ಮೆ, ಧೈರ್ಯ ಮತ್ತು ಆತ್ಮವಿಶ್ವಾಸದ ಸಂಕೇತವಾಗಿದೆ ಎಂದು ಅವರು ಹೇಳಿದರು. ದೇಶದ ಹೆಮ್ಮೆಯ ಪ್ಯಾರಾ ಕ್ರೀಡಾಪಟುಗಳಾದ ಮುರಳಿಕಾಂತ್ ಪೇಟ್ಕರ್ (1972ರ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನ ತಂದುಕೊಟ್ಟವರು) ಮತ್ತು ಸತ್ಯೇಂದ್ರ ಸಿಂಗ್ ಲೋಹಿಯಾ (ಇಂಗ್ಲಿಷ್ ಚಾನೆಲ್ ಈಜಿದ ಮೊದಲ ದಿವ್ಯಾಂಗ ಕ್ರೀಡಾಪಟು) ಅವರ ಸಾಧನೆಗಳನ್ನು ಅವರು ಉಲ್ಲೇಖಿಸಿದರು.

➤ ಈ ಚಾಂಪಿಯನ್‌ಶಿಪ್ ಕೇಂದ್ರ ಸರ್ಕಾರದ 'ಖೇಲೋ ಇಂಡಿಯಾ' ಮತ್ತು ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಉಪಕ್ರಮಗಳಿಗೆ ಅನುಗುಣವಾಗಿದೆ.

➤ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ 2024: ಭಾರತ ಒಟ್ಟು 29 ಪದಕಗಳನ್ನು ಗೆದ್ದಿತ್ತು.

## HDFC ಬ್ಯಾಂಕ್‌ನ ಉಪ ವ್ಯವಸ್ಥಾಪಕ ನಿರ್ದೇಶಕರಾಗಿ ಕೈಜಾದ್ ಭರೂಚಾ ಮರುನೇಮಕ: RBI ಅನುಮೋದನೆ.




➤ ಭಾರತದ ಅತಿದೊಡ್ಡ ಖಾಸಗಿ ವಲಯದ ಬ್ಯಾಂಕ್ ಆದ HDFC ಬ್ಯಾಂಕ್, ತನ್ನ ಹಿರಿಯ ನಾಯಕತ್ವದ ಮುಂದುವರಿಕೆಗೆ ಸಂಬಂಧಿಸಿದಂತೆ ಮಹತ್ವದ ಘೋಷಣೆ ಮಾಡಿದೆ. ಬ್ಯಾಂಕ್‌ನ ಹೋಲ್-ಟೈಮ್ ಡೈರೆಕ್ಟರ್ (ಸಂಪೂರ್ಣ ಸಮಯದ ನಿರ್ದೇಶಕ) ಮತ್ತು ಡೆಪ್ಯುಟಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೈಜಾದ್ ಭರೂಚಾ ಅವರ ಮರುನೇಮಕಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (RBI) ಅನುಮೋದನೆ ನೀಡಿದೆ. ಏಪ್ರಿಲ್ 19, 2026 ರಿಂದ ಜಾರಿಗೆ ಬರುವಂತೆ ಮುಂದಿನ 3 ವರ್ಷಗಳ ಅವಧಿಗೆ ಈ ನೇಮಕಾತಿ ಮಾಡಲಾಗಿದೆ.

➤ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಡಿ, ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳ ಉನ್ನತ ಮಟ್ಟದ ನೇಮಕಾತಿಗಳಿಗೆ ಕೇಂದ್ರೀಯ ಬ್ಯಾಂಕ್‌ನ (RBI) ಅನುಮತಿ ಕಡ್ಡಾಯವಾಗಿದೆ. ಜನವರಿ 20, 2026 ರಂದು RBI ಈ ಅನುಮೋದನೆಯನ್ನು ನೀಡಿದೆ. ಕೈಜಾದ್ ಭರೂಚಾ ಅವರು ಬ್ಯಾಂಕ್‌ನ ಸಂಪೂರ್ಣ ಸಮಯದ ನಿರ್ದೇಶಕ ಮತ್ತು ಉಪ ವ್ಯವಸ್ಥಾಪಕ ನಿರ್ದೇಶಕರಾಗಿ (DMD) ಕಾರ್ಯನಿರ್ವಹಿಸಲಿದ್ದಾರೆ.

➤ ಕೈಜಾದ್ ಭರೂಚಾ ಅವರ ಪಾತ್ರ: ಕೈಜಾದ್ ಭರೂಚಾ ಅವರು HDFC ಬ್ಯಾಂಕ್‌ನ ಆಡಳಿತ ಮಂಡಳಿಯಲ್ಲಿ ದೀರ್ಘಕಾಲದ ಅನುಭವ ಹೊಂದಿರುವ ಪ್ರಮುಖ ಸದಸ್ಯರಾಗಿದ್ದಾರೆ. ಇವರು ಬ್ಯಾಂಕ್‌ನ ಕಾರ್ಯತಂತ್ರಗಳ ಅನುಷ್ಠಾನ, ಅಪಾಯ ನಿರ್ವಹಣೆ (Risk Management) ಮತ್ತು ಕಾರ್ಯಾಚರಣೆಯ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

➤ ಕೈಜಾದ್ ಭರೂಚಾ ಅವರು ಸುಮಾರು 39 ವರ್ಷಗಳಿಗೂ ಹೆಚ್ಚು ಕಾಲ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವ ಹೊಂದಿದ್ದಾರೆ.ಅವರು 1995 ರಲ್ಲಿ HDFC ಬ್ಯಾಂಕ್ ಸ್ಥಾಪನೆಯಾದಾಗಿನಿಂದಲೂ ಬ್ಯಾಂಕ್‌ನ ಅವಿಭಾಜ್ಯ ಅಂಗವಾಗಿದ್ದಾರೆ. ಇವರು ಮುಂಬೈ ವಿಶ್ವವಿದ್ಯಾಲಯದ ಸಿಡನ್ಹ್ಯಾಮ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಎಕನಾಮಿಕ್ಸ್‌ನಿಂದ ವಾಣಿಜ್ಯ ಪದವಿ (B.Com) ಪಡೆದಿದ್ದಾರೆ. HDFC ಬ್ಯಾಂಕ್ ಸೇರುವ ಮೊದಲು ಇವರು SBI ಕಮರ್ಷಿಯಲ್ ಮತ್ತು ಇಂಟರ್ನ್ಯಾಷನಲ್ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸಿದ್ದರು.

➤ ಮಾರುಕಟ್ಟೆಯ ಪ್ರತಿಕ್ರಿಯೆ: ಈ ಸುದ್ದಿಯ ನಂತರ ಮಾರುಕಟ್ಟೆಯಲ್ಲಿ ಹೂಡಿಕೆದಾರರ ವಿಶ್ವಾಸ ವ್ಯಕ್ತವಾಗಿದ್ದು, ಬಾಂಬೆ ಸ್ಟಾಕ್ ಎಕ್ಸ್ಚೇಂಜ್‌ನಲ್ಲಿ (BSE) HDFC ಬ್ಯಾಂಕ್‌ನ ಷೇರುಗಳು ಶೇಕಡಾ 0.38 ರಷ್ಟು ಏರಿಕೆ ಕಂಡು ₹931.15 ಕ್ಕೆ ಸ್ಥಿರಗೊಂಡವು. ಬ್ಯಾಂಕ್‌ನ ಸ್ಥಿರ ನಾಯಕತ್ವವು ಹೂಡಿಕೆದಾರರಿಗೆ ಸಕಾರಾತ್ಮಕ ಸಂಕೇತ ನೀಡಿದೆ.

## ಅಸ್ಸಾಂ ಸರ್ಕಾರದಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಸಿಕ ₹25,000 ಆರ್ಥಿಕ ನೆರವು ಘೋಷಣೆ




➤ ಅಸ್ಸಾಂ ರಾಜ್ಯದ ಸಂಶೋಧನಾ ಮತ್ತು ನಾವೀನ್ಯತಾ ವಲಯಕ್ಕೆ ಬಲ ತುಂಬಲು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು 'ಅಟಲ್ ವಿಚಲ್ ಅಗ್ರಗಾಮಿ ಅಸ್ಸಾಂ' ಎಂಬ ಮಹತ್ವಾಕಾಂಕ್ಷೆಯ ಯೋಜನೆಯನ್ನು ಘೋಷಿಸಿದ್ದಾರೆ. ಈ ಯೋಜನೆಯಡಿ ರಾಜ್ಯದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಸಿಕ ₹25,000 ಹಾಗೂ ದಿವ್ಯಾಂಗ ಸಂಶೋಧಕರಿಗೆ ₹40,000 ಆರ್ಥಿಕ ನೆರವು ನೀಡಲಾಗುವುದು. ಫೆಬ್ರವರಿ 11, 2026 ರಂದು ಅಧಿಕೃತವಾಗಿ ಚಾಲನೆಗೊಳ್ಳಲಿರುವ ಈ ಯೋಜನೆಯು, ವಿದ್ಯಾರ್ಥಿಗಳ ಆರ್ಥಿಕ ಹೊರೆಯನ್ನು ತಗ್ಗಿಸಿ ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಸಂಶೋಧನೆಗೆ ಉತ್ತೇಜನ ನೀಡುವ ಗುರಿಯನ್ನು ಹೊಂದಿದೆ.

➤ **ಯೋಜನೆಯ ಉದ್ದೇಶಗಳು:**

=> ಸಂಶೋಧನೆಗೆ ಉತ್ತೇಜನ: ಉನ್ನತ ಶಿಕ್ಷಣದಲ್ಲಿ ಸಂಶೋಧನೆ, ನಾವೀನ್ಯತೆ (Innovation) ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದು.

=> ಹಣಕಾಸಿನ ನೆರವು: ಸಂಶೋಧನಾ ಸಾಮಗ್ರಿಗಳು, ಕ್ಷೇತ್ರಕಾರ್ಯ (Fieldwork) ಮತ್ತು ದತ್ತಾಂಶ ಸಂಗ್ರಹಣೆಯಂತಹ ವೆಚ್ಚಗಳನ್ನು ಭರಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು.

=> ಅಂತರ್ಗತ ಶಿಕ್ಷಣ: ದಿವ್ಯಾಂಗ ವಿದ್ಯಾರ್ಥಿಗಳಿಗೆ ಹೆಚ್ಚಿನ ಧನಸಹಾಯ ನೀಡುವ ಮೂಲಕ ಒಳಗೊಳ್ಳುವಿಕೆಯ ಶಿಕ್ಷಣಕ್ಕೆ ಆದ್ಯತೆ ನೀಡುವುದು.

=> ಜ್ಞಾನ ಆಧಾರಿತ ಆರ್ಥಿಕತೆ: ಅಸ್ಸಾಂ ರಾಜ್ಯವನ್ನು ಜ್ಞಾನದ ಹಬ್ ಆಗಿ ಪರಿವರ್ತಿಸುವುದು ಮತ್ತು ಮಾನವ ಸಂಪನ್ಮೂಲದಲ್ಲಿ ಹೂಡಿಕೆ ಮಾಡುವುದು.

➤ ಅಸ್ಸಾಂ ಸರ್ಕಾರವು ಈ ಯೋಜನೆಯನ್ನು ರಾಷ್ಟ್ರೀಯ ಆದ್ಯತೆಗಳಾದ 'ಸ್ವಾವಲಂಬನೆ' ಮತ್ತು 'ಸಂಶೋಧನಾ ಉತ್ತೇಜನ'ದ ಭಾಗವಾಗಿ ಜಾರಿಗೆ ತರುತ್ತಿದೆ. ಇದು ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಸಂಸ್ಕೃತಿಯನ್ನು ಬೆಳೆಸಲು ಮತ್ತು ಯುವ ಪ್ರತಿಭೆಗಳನ್ನು ಆಕರ್ಷಿಸಲು ಪೂರಕವಾಗಿದೆ.

## ಜನವರಿ 23 : ಪರಾಕ್ರಮ ದಿವಸ




* ಪ್ರತಿ ವರ್ಷ ಜನವರಿ 23 ರಂದು ಭಾರತದ ಇತಿಹಾಸದಲ್ಲಿ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ ಜನ್ಮದಿನವನ್ನು ಗುರುತಿಸಲು ಭಾರತದಲ್ಲಿ ಪರಾಕ್ರಮ್ ದಿವಸ್ (ಶೌರ್ಯ ದಿನ) ಆಚರಿಸಲಾಗುತ್ತದೆ.

* ಪ್ರತಿ ವರ್ಷ ಜನವರಿ 23 ರಂದು "ಪರಾಕ್ರಮ್ ದಿವಸ್" ಎಂದು ಆಚರಿಸಲು ಸರ್ಕಾರ ಘೋಷಿಸುತ್ತದೆ ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ 125 ನೇ ಜನ್ಮ ವಾರ್ಷಿಕೋತ್ಸವವನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲು ಭಾರತ ಸರ್ಕಾರ ನಿರ್ಧರಿಸಿದೆ, ಇದು ಜನವರಿ 23, 2021 ರಿಂದ ಪ್ರಾರಂಭವಾಗಿದೆ.

* ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಹೆಜ್ಜೆ ಗುರುತನ್ನು ಸ್ಮರಿಸುತ್ತಾ ಪ್ರತಿ ವರ್ಷ ಜನವರಿ 23 ರಂದು ಸುಭಾಷ ಚಂದ್ರ ಬೋಸ್ ಅವರ ಜನ್ಮ ದಿನವನ್ನು ಆಚರಿಸಲಾಗುತ್ತಿದೆ. ಇದು ಅವರ ಜನ್ಮದಿನದ 127 ನೇ ವಾರ್ಷಿಕೋತ್ಸವವಾಗಿದೆ .

* ಸುಭಾಸ್ ಚಂದ್ರ ಬೋಸ್ ಅವರ ಜನ್ಮ ದಿನದಂದು ಪರಾಕ್ರಮ ದಿನವನ್ನಾಗಿ ಆಚರಿಸುವುದರ ಹಿಂದಿನ ಮಹತ್ವ ಸುಭಾಷ್ ಚಂದ್ರ ಬೋಸ್ ಅವರು ಒಡಿಶಾದ ಕಟಕ್ ನಲ್ಲಿ 1897 ರ ಜನವರಿ 23 ರಂದು ಜನಿಸಿದರು.

* ಮೊದಲ ಪರಾಕ್ರಮ್ ದಿವಸ್ ಜನವರಿ 23, 2021 ರಂದು ಕೋಲ್ಕತ್ತಾದ ವಿಕ್ಟೋರಿಯಾ ಸ್ಮಾರಕದಲ್ಲಿತ್ತು. ಮುಂದಿನ ವರ್ಷದಲ್ಲಿ ನೇತಾಜಿಯವರ ಹೊಲೊಗ್ರಾಮ್ ಪ್ರತಿಮೆಯನ್ನು ನವದೆಹಲಿಯ ಇಂಡಿಯಾ ಗೇಟ್‌ನಲ್ಲಿ ಅನಾವರಣಗೊಳಿಸಲಾಯಿತು.

* 2023 ರಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹದಲ್ಲಿ ಹೆಸರಿಸದ 21 ದ್ವೀಪಗಳಿಗೆ 21 ಪರಮ ವೀರ ಚಕ್ರ ಪುಶಸ್ತಿ ಪುರಸ್ಕೃತರ ಹೆಸರನ್ನು ಇಡಲಾಯಿತು. 2024 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಕೆಂಪು ಕೋಟೆಯಲ್ಲಿ ಪರಾಕ್ರಮ್ ದಿವಸ್ ಅನ್ನು ಉದ್ಘಾಟಿಸಿದರು.

* ಬ್ರಿಟಿಷರನ್ನು ಕುರಿತಂತೆ ಕಾಂಗ್ರೆಸ್ ತಾಳಿದ್ದ ದ್ವಂದ್ವ ನೀತಿಗಳಿಂದ ಸುಭಾಸ್ ಚಂದ್ರ ಬೋಸ್ ಅವರು ಮತ್ತು ಚಿತ್ತರಂಜನ್ ದಾಸ್ ಅವರು ಜೆತೆಗೂಡಿ 'ಸ್ವರಾಜ್ ಪಕ್ಷ' ವನ್ನು ಸ್ಥಾಪಿಸಿದರು.

* ನೇತಾಜಿಯವರಂತೆ ಪ್ರತಿಕೂಲ ಪರಿಸ್ಥಿತಿಯಲ್ಲಿ ಸ್ಥೈರ್ಯದಿಂದ ವರ್ತಿಸಲು ಮತ್ತು ಅವರಲ್ಲಿ ದೇಶಭಕ್ತಿಯ ಉತ್ಸಾಹವನ್ನು ತುಂಬಲು ದೇಶದ ಜನರನ್ನು ವಿಶೇಷವಾಗಿ ಯುವಜನರನ್ನು ಪ್ರೇರೇಪಿಸಲು ಜನವರಿ 23 ಅನ್ನು ಪ್ರತಿ ವರ್ಷ ಪರಾಕ್ರಮ್ ದಿವಸ್ ಎಂದು ಆಚರಿಸಲಾಗುತ್ತದೆ.

* ಭಾರತವು ಸ್ವಾತಂತ್ರ್ಯರಾಗಲು ತನ್ನದೇ ಆದ ರೀತಿಯಲ್ಲಿ ಕೊಡುಗೆ ಹೊತ್ತ ಅಪ್ರತಿಮ ದೇಶ ಭಕ್ತರಾಗಿದ್ದ ಸುಭಾಸ್ ಬೋಸ್ ಅವರ ಜಪಾನಿನ ವಿಮಾನ ಅಪಘಾತಕ್ಕೀಡಾದ ನಂತರದಲ್ಲಿ ಆಗಸ್ಟ 18, 1945 ರಂದು ನಿಧನರಾದರು ಎನ್ನಲಾಗಿದೆ.

* ನೇತಾಜಿ ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್‌ನಿಂದ ಹಿಮಾಲಯ ಸಂಸ್ಕೃತಿ, ಭಾಷೆಗಳು ಮತ್ತು ಸಮಾಜದಲ್ಲಿ ಮ್ಯೂಸಿಯಂ ಮತ್ತು ಅಧ್ಯಯನ ಕೇಂದ್ರವಾಗಿ ಇದನ್ನು ಪುನಃ ತೆರೆಯಲಾಯಿತು.

## ಗಾರ್ಡಿಯನ್ ಇಂಡಿಯಾದ ನೂತನ ಕಂಟ್ರಿ ಹೆಡ್ ಆಗಿ ಕರುಣಾಕರನ್ ಅಳಿಸೂರ್ ನೇಮಕ



➤ ಅಮೆರಿಕದ ದಿ ಗಾರ್ಡಿಯನ್ ಲೈಫ್ ಇನ್ಸೂರೆನ್ಸ್ ಕಂಪನಿಯ ಜಾಗತಿಕ ಸಾಮರ್ಥ್ಯ ಕೇಂದ್ರವಾದ (GCC) ಗಾರ್ಡಿಯನ್ ಇಂಡಿಯಾ ಆಪರೇಷನ್ಸ್, ಕರುಣಾಕರನ್ ಅಳಿಸೂರ್ ಅವರನ್ನು 21 ಜನವರಿ 2026 ರಂದು ಭಾರತದ ನೂತನ ಕಂಟ್ರಿ ಹೆಡ್ ಆಗಿ ನೇಮಕ ಮಾಡಿದೆ. ಇವರು ಪ್ರಸ್ತುತ ಚೀಫ್ ಇನ್ಫಾರ್ಮೇಷನ್ ಆಫೀಸರ್ (CIO) ಆಗಿಯೂ ಕಾರ್ಯನಿರ್ವಹಿಸುತ್ತಿದ್ದು, ಈ ದ್ವಿಪಾತ್ರದ ಜವಾಬ್ದಾರಿಯ ಮೂಲಕ ಭಾರತದಲ್ಲಿ ಸಂಸ್ಥೆಯ ತಂತ್ರಜ್ಞಾನ ಆಧಾರಿತ ಬೆಳವಣಿಗೆ ಮತ್ತು ನಾವೀನ್ಯತೆಯನ್ನು ಮುನ್ನಡೆಸಲಿದ್ದಾರೆ. ಗಾರ್ಡಿಯನ್ ಇಂಡಿಯಾ ಮಂಡಳಿಯ ಅಧ್ಯಕ್ಷ ಮೈಕೆಲ್ ಪ್ರೆಸ್ಟಿಲಿಯೊ ಅವರಿಗೆ ವರದಿ ಸಲ್ಲಿಸಲಿರುವ ಅಳಿಸೂರ್ ಅವರ ನಾಯಕತ್ವವು, ಸಂಸ್ಥೆಯ ಜಾಗತಿಕ ಕಾರ್ಯತಂತ್ರದ ಭಾಗವಾಗಿ ತಂತ್ರಜ್ಞಾನ ಮತ್ತು ನುರಿತ ಪ್ರತಿಭೆಗಳ ನಡುವೆ ಸಮನ್ವಯ ಸಾಧಿಸಿ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಗುರಿ ಹೊಂದಿದೆ.

➤ ಕರುಣಾಕರನ್ ಅಳಿಸೂರ್ ಅವರು ಜಾಗತಿಕ ತಂತ್ರಜ್ಞಾನ ನಾಯಕತ್ವದಲ್ಲಿ ಸುಮಾರು 30 ವರ್ಷಗಳ ಅನುಭವ ಹೊಂದಿರುವ ಅನುಭವಿ ತಜ್ಞರಾಗಿದ್ದು, ಪ್ರಸ್ತುತ ಗಾರ್ಡಿಯನ್ ಇಂಡಿಯಾದ ಕಂಟ್ರಿ ಹೆಡ್ ಮತ್ತು ಚೀಫ್ ಇನ್ಫಾರ್ಮೇಷನ್ ಆಫೀಸರ್ (CIO) ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿಂದೆ GE (General Electric) ನಂತಹ ಜಾಗತಿಕ ಕಂಪನಿಗಳಲ್ಲಿ ಹಿರಿಯ ಹುದ್ದೆಗಳನ್ನು ನಿಭಾಯಿಸಿರುವ ಇವರು, ಸಂಕೀರ್ಣ ಡಿಜಿಟಲ್ ರೂಪಾಂತರ ಮತ್ತು ತಾಂತ್ರಿಕ ನಾವೀನ್ಯತೆಗಳನ್ನು ಮುನ್ನಡೆಸುವಲ್ಲಿ ಪರಿಣಿತರು. ಇವರ ನಾಯಕತ್ವವು ತಂತ್ರಜ್ಞಾನ ಮತ್ತು ಪ್ರತಿಭೆಗಳನ್ನು ಸಂಯೋಜಿಸುವ ಮೂಲಕ ಗಾರ್ಡಿಯನ್ ಸಂಸ್ಥೆಯ ಜಾಗತಿಕ ವ್ಯವಹಾರಕ್ಕೆ ಭಾರತದ ಕೇಂದ್ರದಿಂದ ಹೆಚ್ಚಿನ ಮೌಲ್ಯವನ್ನು ನೀಡುವ ಗುರಿಯನ್ನು ಹೊಂದಿದೆ.

➤ ಗಾರ್ಡಿಯನ್ ಇಂಡಿಯಾದ ಶಕ್ತಿ ಅದರ ಜನರು ಮತ್ತು ಸಂಸ್ಕೃತಿಯಲ್ಲಿದೆ ಎಂದು ಅಳಿಸೂರ್ ತಿಳಿಸಿದ್ದಾರೆ. ಮುಂದಿನ ಬೆಳವಣಿಗೆಯ ಹಂತದಲ್ಲಿ, ಸಮರ್ಥ ತಂಡಗಳನ್ನು ಕಟ್ಟುವುದು, ನಾಯಕತ್ವವನ್ನು ಬೆಳೆಸುವುದು ಮತ್ತು ತಂತ್ರಜ್ಞಾನ ಹಾಗೂ ಪ್ರತಿಭೆಗಳು ಒಟ್ಟಾಗಿ ಕೆಲಸ ಮಾಡುವ ವಾತಾವರಣ ನಿರ್ಮಿಸುವುದು ಅವರ ಆದ್ಯತೆಯಾಗಿದೆ.

➤ ಗಾರ್ಡಿಯನ್ ಇಂಡಿಯಾ ಬಗ್ಗೆ: ಇದು ಅಮೆರಿಕದ 'ದಿ ಗಾರ್ಡಿಯನ್ ಲೈಫ್ ಇನ್ಸೂರೆನ್ಸ್' ಕಂಪನಿಗೆ ಡಿಜಿಟಲ್ ಪರಿಹಾರಗಳು, ಐಟಿ ಸೇವೆಗಳು ಮತ್ತು ಅನಾಲಿಟಿಕ್ಸ್ ಬೆಂಬಲವನ್ನು ನೀಡುವ ಪ್ರಮುಖ ಕೇಂದ್ರವಾಗಿದೆ. ಭಾರತದ ಕಾರ್ಯಾಚರಣೆಯನ್ನು ಬಲಪಡಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ವಿಮಾದಾರರಿಗೆ ಉತ್ತಮ ಸೇವೆ ನೀಡಲು ಸಂಸ್ಥೆ ಮುಂದಾಗಿದೆ.

## ಕರ್ನಾಟಕದಲ್ಲಿ ಸಾಂವಿಧಾನಿಕ ಬಿಕ್ಕಟ್ಟು: ರಾಜ್ಯಪಾಲರ ಭಾಷಣ ಮತ್ತು ಸರ್ಕಾರದ ನಡುವಿನ ಸಂಘರ್ಷ



**ಬೆಂಗಳೂರು:** ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಗುರುವಾರ (ಜನವರಿ 22, 2026) ಒಂದು ಅಪರೂಪದ ಹಾಗೂ ಸಾಂವಿಧಾನಿಕ ಚರ್ಚೆಗೆ ಗ್ರಾಸವಾದ ಘಟನೆ ನಡೆದಿದೆ. ರಾಜ್ಯಪಾಲರಾದ ಥಾವರ್‌ಚಂದ್ ಗೆಹೋಟ್ ಅವರು ರಾಜ್ಯ ಸರ್ಕಾರ ಸಿದ್ಧಪಡಿಸಿದ್ದ ಭಾಷಣದ ಕೆಲವು ಭಾಗಗಳನ್ನು ಓದಲು ನಿರಾಕರಿಸಿರುವುದು ಈಗ ದೊಡ್ಡ ವಿವಾದವಾಗಿ ಮಾರ್ಪಟ್ಟಿದೆ.

➤ ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹೋಟ್ ಅವರು ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಪೂರ್ಣವಾಗಿ ಓದಲು ನಿರಾಕರಿಸಿರುವುದು ತೀವ್ರ ಚರ್ಚೆಗೆ ಹಾಗೂ ಸಾಂವಿಧಾನಿಕ ಬಿಕ್ಕಟ್ಟಿಗೆ ಕಾರಣವಾಗಿದೆ. ಕರ್ನಾಟಕ ರಾಜ್ಯಪಾಲರು ರಾಜ್ಯ ಸಚಿವ ಸಂಪುಟ ಅನುಮೋದಿಸಿದ ಭಾಷಣದ ಬದಲಾಗಿ, ತಾವೇ ಸಿದ್ಧಪಡಿಸಿಕೊಂಡಿದ್ದ ಭಾಷಣದ ಕೆಲವು ಭಾಗಗಳನ್ನು ಓದಿದ್ದಾರೆ ಮತ್ತು 11 ಪ್ರಮುಖ ಪ್ಯಾರಾಗಳನ್ನು ಕೈಬಿಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.ಕೇಂದ್ರ ಸರ್ಕಾರದ ನೀತಿಗಳು ಹಾಗೂ 'ನರೇಗಾ' (MGNREGA) ಯೋಜನೆಗೆ ಸಂಬಂಧಿಸಿದ ಟೀಕೆಗಳು ಭಾಷಣದಲ್ಲಿದ್ದವು. ಇವುಗಳನ್ನು ತೆಗೆದುಹಾಕುವಂತೆ ರಾಜ್ಯಪಾಲರು ಸೂಚಿಸಿದ್ದರು, ಆದರೆ ಸರ್ಕಾರ ಅದಕ್ಕೆ ಒಪ್ಪಿರಲಿಲ್ಲ. ಇದು ಸಂವಿಧಾನದ ಅನುಚ್ಛೇದ 176 ಮತ್ತು 163ರ ನೇರ ಉಲ್ಲಂಘನೆಯಾಗಿದೆ ಎಂದು ಸರ್ಕಾರ ಹೇಳಿದೆ.

➤ ಅನುಚ್ಛೇದ 176 (Article 176): ಭಾರತದ ಸಂವಿಧಾನದ ಪ್ರಕಾರ, ಪ್ರತಿ ವರ್ಷದ ಮೊದಲ ಅಧಿವೇಶನದ ಆರಂಭದಲ್ಲಿ ಮತ್ತು ಪ್ರತಿ ಸಾರ್ವತ್ರಿಕ ಚುನಾವಣೆಯ ನಂತರದ ಮೊದಲ ಅಧಿವೇಶನದಲ್ಲಿ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡುವುದು ಕಡ್ಡಾಯವಾಗಿದೆ.

➤ ರಾಜ್ಯಪಾಲರ ಭಾಷಣದ ಸ್ವರೂಪ: ರಾಜ್ಯಪಾಲರು ಓದುವ ಈ ಭಾಷಣವು ವಾಸ್ತವವಾಗಿ ರಾಜ್ಯ ಸಚಿವ ಸಂಪುಟವು ಸಿದ್ಧಪಡಿಸಿದ ನೀತಿ ನಿರೂಪಣೆಯಾಗಿರುತ್ತದೆ. ಇದು ಸರ್ಕಾರದ ಸಾಧನೆಗಳು ಮತ್ತು ಮುಂದಿನ ಯೋಜನೆಗಳನ್ನು ಒಳಗೊಂಡಿರುತ್ತದೆ. ರಾಜ್ಯಪಾಲರು ಇದರಲ್ಲಿ ವೈಯಕ್ತಿಕ ಬದಲಾವಣೆ ಮಾಡುವಂತಿಲ್ಲ ಎಂಬುದು ಸಾಂವಿಧಾನಿಕ ಪದ್ಧತಿ.

➤ ಅನುಚ್ಛೇದ 163 (Article 163): ರಾಜ್ಯಪಾಲರು ಸಚಿವ ಸಂಪುಟದ ನೆರವು ಮತ್ತು ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕು. ಸಂವಿಧಾನವು ವಿವೇಚನಾ ಅಧಿಕಾರ ನೀಡಿದ ಸಂದರ್ಭಗಳನ್ನು ಹೊರತುಪಡಿಸಿ, ಉಳಿದ ವಿಷಯಗಳಲ್ಲಿ ಸಚಿವ ಸಂಪುಟದ ನಿರ್ಧಾರವೇ ಅಂತಿಮವಾಗಿರುತ್ತದೆ.

➤ ಕೇವಲ ಕರ್ನಾಟಕ ಮಾತ್ರವಲ್ಲದೆ, ಇತ್ತೀಚೆಗೆ ತಮಿಳುನಾಡು (ರಾಜ್ಯಪಾಲ ಆರ್.ಎನ್. ರವಿ) ಮತ್ತು ಕೇರಳ (ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್) ರಾಜ್ಯಗಳಲ್ಲಿಯೂ ಸಹ ರಾಜ್ಯಪಾಲರು ಮತ್ತು ಚುನಾಯಿತ ಸರ್ಕಾರಗಳ ನಡುವೆ ಭಾಷಣದ ವಿಚಾರವಾಗಿ ಸಂಘರ್ಷ ನಡೆದಿದೆ. ಈ ಹಿನ್ನಲೆಯಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು "ರಾಜ್ಯಪಾಲರ ಭಾಷಣದ ಸಂಪ್ರದಾಯವನ್ನೇ ಕೈಬಿಡಬೇಕು" ಎಂದು ಅಭಿಪ್ರಾಯಪಟ್ಟಿದ್ದಾರೆ.

➤ ಕರ್ನಾಟಕ ಸರ್ಕಾರವು ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ನಡವಳಿಕೆಯನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದ (Supreme Court) ಮೊರೆ ಹೋಗಲು ಚಿಂತನೆ ನಡೆಸುತ್ತಿದೆ.

## ಐಎನ್‌ಎಸ್ ಸುದರ್ಶಿನಿ 'ಲೋಕಯಾನ-26': ಭಾರತದ ಸಮುದ್ರ ಶಕ್ತಿಯ ಜಾಗತಿಕ ಪಯಣ ಆರಂಭ.



➤ ಭಾರತೀಯ ನೌಕಾಪಡೆಯ ತರಬೇತಿ ನೌಕೆಯಾದ ಐಎನ್‌ಎಸ್ ಸುದರ್ಶಿನಿ (INS Sudarshini) ತನ್ನ ಐತಿಹಾಸಿಕ 'ಲೋಕಯಾನ-26' ಎಂಬ 10 ತಿಂಗಳ ದೀರ್ಘಾವಧಿಯ ಅಂತರಾಷ್ಟ್ರೀಯ ಸಮುದ್ರಯಾನವನ್ನು ಆರಂಭಿಸಿದೆ. ಕೊಚ್ಚಿಯ ನೌಕಾ ನೆಲೆ ಹಾಗೂ ದಕ್ಷಿಣ ನೌಕಾ ಕಮಾಂಡ್‌ನ ಮುಖ್ಯಸ್ಥರಾದ ವೈಸ್ ಅಡ್ಮಿರಲ್ ಸಮೀರ್ ಸಕ್ಸೇನಾ ಅವರು ಈ ಯಾನಕ್ಕೆ ಹಸಿರು ನಿಶಾನೆ ತೋರಿದರು.

➤ ಈ ನೌಕೆಯು ಸುಮಾರು 10 ತಿಂಗಳಲ್ಲಿ 22,000 ನಾಟಿಕಲ್ ಮೈಲು ದೂರವನ್ನು ಕ್ರಮಿಸಲಿದೆ. ಒಟ್ಟು 13 ದೇಶಗಳ 18 ಬಂದರುಗಳಿಗೆ ಭೇಟಿ ನೀಡುವ ಮೂಲಕ ಭಾರತದ ರಾಯಭಾರಿಯಾಗಿ ಕಾರ್ಯನಿರ್ವಹಿಸಲಿದೆ. ಈ ಯಾನದಲ್ಲಿ ಭಾರತೀಯ ನೌಕಾಪಡೆ ಮತ್ತು ಕರಾವಳಿ ರಕ್ಷಣಾ ಪಡೆಯ ಸುಮಾರು 200ಕ್ಕೂ ಹೆಚ್ಚು ತರಬೇತಿ ನಾವಿಕರು ಸಾಂಪ್ರದಾಯಿಕ ನೌಕಾಯಾನ ಮತ್ತು ನಾಯಕತ್ವದ ತರಬೇತಿ ಪಡೆಯಲಿದ್ದಾರೆ.

ವಿಶೇಷ ಕಾರ್ಯಕ್ರಮಗಳು:

=> ಫ್ರಾನ್ಸ್‌ನಲ್ಲಿ ನಡೆಯುವ 'Escale à Sète' ಸಮುದ್ರ ಹಬ್ಬದಲ್ಲಿ ಭಾಗವಹಿಸುವಿಕೆ.

=> ಅಮೆರಿಕದ 250ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನ್ಯೂಯಾರ್ಕ್‌ನಲ್ಲಿ ನಡೆಯಲಿರುವ 'SAIL 250' ಅಂತರಾಷ್ಟ್ರೀಯ ಹಡಗು ಪರೇಡ್‌ನಲ್ಲಿ ಭಾಗಿ.

➤ ಉದ್ದೇಶ: ಜಗತ್ತೇ ಒಂದು ಕುಟುಂಬ ಎಂಬ ಸಂದೇಶ ಸಾರುವುದು. 'ಪ್ರಾಂತೀಯ ಭದ್ರತೆ ಮತ್ತು ಅಭಿವೃದ್ಧಿಗೆ ಪರಸ್ಪರ ಸಹಕಾರ' (Maritime Cooperation for Security and Growth in the Region) ಎಂಬ ಭಾರತದ ದೃಷ್ಟಿಕೋನವನ್ನು ಉತ್ತೇಜಿಸುವುದು ಮತ್ತು ಸಾಗರ್ (SAGAR): 'Security and Growth for All in the Region' ಎಂಬ ಕಾರ್ಯತಂತ್ರದ ಭಾಗವಾಗಿ ಸ್ನೇಹ ಹಸ್ತ ಚಾಚುವುದು.

➤ ಐಎನ್‌ಎಸ್ ಸುದರ್ಶಿನಿ: ಇದು ಗೋವಾ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ದೇಶೀಯವಾಗಿ ನಿರ್ಮಿಸಲ್ಪಟ್ಟ ತರಬೇತಿ ನೌಕೆಯಾಗಿದೆ. ಇದು ಮೂರು ಪಟಗಳಿರುವ (Three-masted sailing ship) ಹಡಗಾಗಿದ್ದು, ಯುವ ನಾವಿಕರಿಗೆ ಪ್ರಾಚೀನ ನೌಕಾಯಾನ ಕಲೆಗಳನ್ನು ಕಲಿಸಲು ಬಳಸಲಾಗುತ್ತದೆ.

## 'ವಂದೇ ಮಾತರಂ' ಧ್ಯೇಯವಾಕ್ಯದಡಿ ಗಣರಾಜ್ಯೋತ್ಸವ ಸ್ತಬ್ಧಚಿತ್ರ




➤ ನವದೆಹಲಿ: ಭಾರತದ 77ನೇ ಗಣರಾಜ್ಯೋತ್ಸವ ಸಂಭ್ರಮಕ್ಕೆ ರಾಜಪಥ (ಕರ್ತವ್ಯ ಪಥ) ಸಜ್ಜಾಗುತ್ತಿದೆ. ಈ ಬಾರಿಯ ಪಥಸಂಚಲನದಲ್ಲಿ ಕೇಂದ್ರ ಸಂಸ್ಕೃತಿ ಸಚಿವಾಲಯವು 'ವಂದೇ ಮಾತರಂ' ಎಂಬ ಶಕ್ತಿಯುತ ಧ್ಯೇಯವಾಕ್ಯದೊಂದಿಗೆ ಅತ್ಯಾಧುನಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಸ್ತಬ್ಧಚಿತ್ರವನ್ನು ಪ್ರದರ್ಶಿಸಲಿದೆ. ದೇಶದ ನಾರೀಶಕ್ತಿ, ಸಾಂಸ್ಕೃತಿಕ ವೈವಿಧ್ಯತೆ ಮತ್ತು ತಾಂತ್ರಿಕ ಪ್ರಗತಿಯನ್ನು ಈ ಸ್ತಬ್ಧಚಿತ್ರವು ಅನಾವರಣಗೊಳಿಸಲಿದೆ.

ಈ ಬಾರಿಯ ಪರೇಡ್‌ನಲ್ಲಿ ಎರಡು ಪ್ರಮುಖ ಪರಿಕಲ್ಪನೆಗಳಡಿ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಲಾಗುವುದು:

1. 'ಸ್ವತಂತ್ರತಾ ಕಾ ಮಂತ್ರ - ವಂದೇ ಮಾತರಂ' (ಸ್ವಾತಂತ್ರ್ಯದ ಮಂತ್ರ - ವಂದೇ ಮಾತರಂ)
2. 'ಸಮೃದ್ಧಿ ಕಾ ಮಂತ್ರ - ಆತ್ಮನಿರ್ಭರ ಭಾರತ' (ಸಮೃದ್ಧಿಯ ಮಂತ್ರ - ಸ್ವಾವಲಂಬಿ ಭಾರತ)

**➤ 2026ರ ಗಣರಾಜ್ಯೋತ್ಸವಕ್ಕೆ ಇಬ್ಬರು ಅಂತರಾಷ್ಟ್ರೀಯ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ:**

1. ಅಂಟೋನಿಯೊ ಕೋಸ್ಟಾ: ಯುರೋಪಿಯನ್ ಕೌನ್ಸಿಲ್‌ನ ಅಧ್ಯಕ್ಷರು.
2. ಉರ್ಸುಲಾ ವಾನ್ ಡೆರ್ ಲೇಯನ್: ಯುರೋಪಿಯನ್ ಕಮಿಷನ್‌ನ ಅಧ್ಯಕ್ಷರು.

**➤ ವಂದೇ ಮಾತರಂ ಸ್ತಬ್ಧಚಿತ್ರದ ವಿಶೇಷತೆಗಳು: ಸಂಸ್ಕೃತಿ ಸಚಿವಾಲಯವು ಪ್ರದರ್ಶಿಸಲಿರುವ ಈ ಸ್ತಬ್ಧಚಿತ್ರದ ಪ್ರಮುಖ ಅಂಶಗಳು ಹೀಗಿವೆ:**

- 1875ರಲ್ಲಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರು ರಚಿಸಿದ ಈ ಹಾಡು ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಹಚ್ಚಿತ್ತು.
- ಸ್ತಬ್ಧಚಿತ್ರದಲ್ಲಿ ವಂದೇ ಮಾತರಂ ಹಾಡಿನ ಮೂಲ ಕೈಬರಹದ ಪ್ರತಿಯನ್ನು ಪ್ರದರ್ಶಿಸಲಾಗುತ್ತದೆ.
- 1923ರಲ್ಲಿ ಕಲಾವಿದ ತೇಜೇಂದ್ರ ಕುಮಾರ್ ಮಿತ್ರ ಅವರು ಈ ಹಾಡಿನ ಸಾಲುಗಳನ್ನು ಆಧರಿಸಿ ಬಿಡಿಸಿದ ಚಿತ್ರಗಳನ್ನು ಕರ್ತವ್ಯ ಪಥದ ಉದ್ದಕ್ಕೂ ಪ್ರದರ್ಶಿಸಲಾಗುತ್ತದೆ.
- ಇಂದಿನ ಪೀಳಿಗೆಯನ್ನು ಪ್ರತಿನಿಧಿಸುವ 'ಜೆನ್-ಜಿ' (Gen-Z) ಯುವಕರು ಈ ಹಾಡನ್ನು ಹಾಡಲಿದ್ದಾರೆ. ಇದರ ಜವಾಬ್ದಾರಿಯನ್ನು ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ (IGNCA) ವಹಿಸಿಕೊಂಡಿದೆ.

➤ ಚಿತ್ರರಂಗದ ಮೊದಲ ಪ್ರವೇಶ : ಖ್ಯಾತ ಚಲನಚಿತ್ರ ನಿರ್ದೇಶಕ ಸಂಜಯ್ ಲೀಲಾ ಭನ್ಸಾಲಿ ಅವರು ಇದೇ ಮೊದಲ ಬಾರಿಗೆ ಭಾರತೀಯ ಸಿನೆಮಾ ರಂಗದ ಸಾಧನೆಯನ್ನು ಬಿಂಬಿಸುವ ಸ್ತಬ್ಧಚಿತ್ರವನ್ನು ಕರ್ತವ್ಯ ಪಥದಲ್ಲಿ ಪ್ರದರ್ಶಿಸಲಿದ್ದಾರೆ.

**➤ ಮಿಲಿಟರಿ ಶಕ್ತಿ ಮತ್ತು ವೈಮಾನಿಕ ಪ್ರದರ್ಶನ:-**

1. ಯುದ್ಧೋಪಕರಣಗಳು: ಟಿ-90 ಟ್ಯಾಂಕ್‌ಗಳು, ಅರ್ಜುನ್ ಎಂ.ಬಿ.ಟಿ, ಬ್ರಹ್ಮೋಸ್ ಕ್ಷಿಪಣಿ, ಆಕಾಶ್ ಕ್ಷಿಪಣಿ ವ್ಯವಸ್ಥೆ ಮತ್ತು ಡ್ರೋನ್‌ಗಳ ಪ್ರದರ್ಶನ ಇರಲಿದೆ.
2. ಫ್ಲೈಪಾಸ್ಟ್: ರಫೇಲ್, ಸುಖೋಯ್-30, ಅಪಾಚೆ ಮತ್ತು ಎಲ್.ಸಿ.ಎಚ್ (LCH) ಹೆಲಿಕಾಪ್ಟರ್‌ಗಳು ಆಕಾಶದಲ್ಲಿ ಸಾಹಸ ಪ್ರದರ್ಶಿಸಲಿವೆ.

**➤ ವಿಶೇಷ ಆಹ್ವಾನಿತರು: ಈ ಬಾರಿ ಸುಮಾರು 10,000 ವಿಶೇಷ ಅತಿಥಿಗಳನ್ನು ಆಹ್ವಾನಿಸಲಾಗಿದೆ:**

- ವಿಶ್ವ ಅಥ್ಲೆಟಿಕ್ ಪ್ಯಾರಾ ಚಾಂಪಿಯನ್‌ಶಿಪ್ ವಿಜೇತರು.
- ನೈಸರ್ಗಿಕ ಕೃಷಿ ಮಾಡುವ ರೈತರು.
- ISRO ದ ಗಗನಯಾನ ಮತ್ತು ಚಂದ್ರಯಾನ ಯೋಜನೆಯ ವಿಜ್ಞಾನಿಗಳು.

- PM SMILE ಯೋಜನೆಯಡಿ ಪುನರ್ವಸತಿ ಪಡೆದ ಮಂಗಳಮುಖಿಯರು ಮತ್ತು ಭಿಕ್ಷುಕರು.

➤ ವಂದೇ ಮಾತರಂ ಹಾಡನ್ನು ಮೊದಲ ಬಾರಿಗೆ 1896ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ಹಾಡಿದ್ದರು




## ರೋಲ್ ಬಾಲ್ ವಿಶ್ವಕಪ್ 2025: ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಭಾರತ ವಿಶ್ವ ಚಾಂಪಿಯನ್



➤ ದುಬೈನ ಶಬಾಬ್ ಅಲ್ ಅಹ್ಲಿ ಕ್ಲಬ್‌ನಲ್ಲಿ ನಡೆದ 7ನೇ ರೋಲ್ ಬಾಲ್ ವಿಶ್ವಕಪ್ 2025 ರಲ್ಲಿ ಭಾರತದ ಪುರುಷ ಮತ್ತು ಮಹಿಳಾ ತಂಡಗಳು ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿವೆ. ಎರಡೂ ವಿಭಾಗಗಳಲ್ಲಿ ಭಾರತವು ಕೀನ್ಯಾವನ್ನು ಸೋಲಿಸಿ ಚಿನ್ನದ ಪದಕ ಗೆದ್ದಿರುವುದು ವಿಶೇಷ. ಈ ಐತಿಹಾಸಿಕ ಗೆಲುವಿನಲ್ಲಿ ಸೂರತ್‌ನ 20 ವರ್ಷದ ಪ್ರತಿಭಾವಂತ ಆಟಗಾರ ಯಶ್ ಅನಿಲ್ ರಶಿಯಾ ಪ್ರಮುಖ ಪಾತ್ರ ವಹಿಸಿದ್ದಾರೆ.

➤ ಪುರುಷರ ವಿಭಾಗ: ಈ ಬಾರಿಯ ರೋಲ್ ಬಾಲ್ ವಿಶ್ವಕಪ್‌ನ ಪುರುಷರ ವಿಭಾಗದಲ್ಲಿ ಭಾರತ ತಂಡವು ಕೀನ್ಯಾ ವಿರುದ್ಧ 11-10 ಅಂತರದ ರೋಚಕ ಜಯ ಸಾಧಿಸಿ, ಐದನೇ ಬಾರಿಗೆ ವಿಶ್ವ ಚಾಂಪಿಯನ್ ಪಟ್ಟವನ್ನು ಅಲಂಕರಿಸಿದೆ.

➤ ಮಹಿಳೆಯರ ವಿಭಾಗ: ಮಹಿಳೆಯರ ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಕೀನ್ಯಾ ವಿರುದ್ಧ 3-2 ಗೋಲುಗಳ ಅಂತರದಿಂದ ಜಯಗಳಿಸುವ ಮೂಲಕ ತನ್ನ ಮೂರನೇ ವಿಶ್ವಕಪ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

➤ ಸೂರತ್‌ನ ಕುವರ ಯಶ್ ರಶಿಯಾ ಅವರ ಐತಿಹಾಸಿಕ ಸಾಧನೆ:ಭಾರತದ ಪುರುಷರ ತಂಡದ ಗೆಲುವಿನಲ್ಲಿ ಗುಜರಾತ್‌ನ ಸೂರತ್ ಮೂಲದ 20 ವರ್ಷದ ಯುವ ಆಟಗಾರ ಯಶ್ ಅನಿಲ್ ರಶಿಯಾ ಮಹತ್ವದ ಪಾತ್ರ ವಹಿಸಿದ್ದಾರೆ.

- ನಿರ್ಣಾಯಕ ಪ್ರದರ್ಶನ: ಯಶ್ ಅವರು ಕೀನ್ಯಾ ವಿರುದ್ಧದ ಫೈನಲ್ ಪಂದ್ಯದಲ್ಲಿ ತಂಡಕ್ಕೆ ಜಯ ತಂದುಕೊಟ್ಟ 'ವಿನ್ನಿಂಗ್ ಗೋಲ್' ಬಾರಿಸಿದರು.

- ಟೂರ್ನಿಯ ಹಾದಿ: ಲೀಗ್ ಹಂತದಲ್ಲಿ ಸೌದಿ ಅರೇಬಿಯಾ ಮತ್ತು ಬ್ರೆಜಿಲ್ ವಿರುದ್ಧ ತಲಾ 2 ಗೋಲು, ಕ್ವಾರ್ಟರ್ ಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ 2 ಗೋಲು ಮತ್ತು ಸೆಮಿಫೈನಲ್‌ನಲ್ಲಿ ಈಜಿಪ್ಟ್ ವಿರುದ್ಧ 1 ಪ್ರಮುಖ ಗೋಲು ಗಳಿಸಿ ಮಿಂಚಿದರು.

**➤ ಯಶ್ ರಶಿಯಾ ಅವರ ಕ್ರೀಡಾ ಹಿನ್ನೆಲೆ:**

=> 2009 ರಲ್ಲಿ ಸ್ಕೇಟಿಂಗ್‌ನಿಂದ ಕ್ರೀಡಾ ಬದುಕು ಆರಂಭಿಸಿದ ಇವರು, 2017 ರಲ್ಲಿ ಕೋಚ್ ಜೈಮಿನ್ ಭರತ್ ಪಟೇಲ್ ಮಾರ್ಗದರ್ಶನದಲ್ಲಿ ರೋಲ್ ಬಾಲ್ ಕ್ರೀಡೆಗೆ ಬದಲಾದರು.

=> ಇವರು 18 ರಾಜ್ಯಗಳಲ್ಲಿ ನಡೆದ 17 ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಪಾಲ್ಗೊಂಡಿದ್ದಾರೆ. ಇತ್ತೀಚೆಗೆ ಇಂದೋರ್ ನಲ್ಲಿ ನಡೆದ 22ನೇ ಸೀನಿಯರ್ ನ್ಯಾಷನಲ್ ಚಾಂಪಿಯನ್‌ಶಿಪ್ ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

=> ಇವರ ಯಶಸ್ಸಿನ ಹಿಂದೆ ತಂದೆ ಅನಿಲ್ ವಿಠ್ಠಲ್ ರಶಿಯಾ ಅವರ ಆರ್ಥಿಕ ಬೆಂಬಲ ಮತ್ತು ಸಹೋದರಿ ಮಿತ್ತಲ್ ಅನಿಲ್ ರಶಿಯಾ ಅವರ ಪ್ರೇರಣೆಯಿದೆ.

➤ 'ರೋಲ್ ಬಾಲ್' ಕ್ರೀಡೆ : ರೋಲ್ ಬಾಲ್ ಒಂದು ವಿಶಿಷ್ಟ ಕ್ರೀಡೆಯಾಗಿದ್ದು, ಇದು ರೋಲರ್ ಸ್ಕೇಟಿಂಗ್ (Roller Skating), ಹ್ಯಾಂಡ್‌ಬಾಲ್ (Handball) ಮತ್ತು ಬಾಸ್ಕೆಟ್‌ಬಾಲ್ (Basketball) ಕೌಶಲಗಳ ಸಮ್ಮಿಶ್ರಣವಾಗಿದೆ. ಪ್ರತಿ ತಂಡದಲ್ಲಿ 6 ಆಟಗಾರರು ಇರುತ್ತಾರೆ. ಇದು ಭಾರತದಲ್ಲಿ (ಪುಣೆ) ಉಗಮವಾದ ಕ್ರೀಡೆಯಾಗಿದ್ದು ಇಂದು ಜಾಗತಿಕವಾಗಿ ಬೆಳೆಯುತ್ತಿದೆ.

➤ ಈ ಯಶಸ್ಸಿನ ನಂತರ ಸೂರತ್‌ನ ಆಟಗಾರರಾದ ಕಾವ್ಯ ನಕ್ರಾನಿ, ರಿನಿ ರೂಪಾವತಿಯಾ ಮತ್ತು ಯಶ್ ಚುಡಾಸಮಾ ಅವರಿಗೂ ಅದ್ದೂರಿ ಸನ್ಮಾನ ಮಾಡಲಾಯಿತು.

## ಆಂಧ್ರದ ಹೋಪ್ ಐಲೆಂಡ್‌ನಲ್ಲಿ ಭಾರತದ 3ನೇ ಬಾಹ್ಯಾಕಾಶ ನಿಲ್ದಾಣ




➤ ಅಮರಾವತಿ/ಕಾಕಿನಾಡ: ಭಾರತದ ಬಾಹ್ಯಾಕಾಶ ಇತಿಹಾಸದಲ್ಲಿ ಮತ್ತೊಂದು ಐತಿಹಾಸಿಕ ಅಧ್ಯಾಯಕ್ಕೆ ಅಡಿಪಾಯ ಬಿದ್ದಿದೆ. ಆಂಧ್ರಪ್ರದೇಶದ ಕಾಕಿನಾಡ ತೀರದಲ್ಲಿರುವ 'ಹೋಪ್ ಐಲೆಂಡ್' (Hope Island) ನಲ್ಲಿ ಭಾರತದ ಮೂರನೇ ಬಾಹ್ಯಾಕಾಶ ಉಡಾವಣಾ ಕೇಂದ್ರ (Space Port) ಸ್ಥಾಪನೆಯಾಗಲಿದೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅಧಿಕೃತವಾಗಿ ಘೋಷಿಸಿದ್ದಾರೆ.

ಶ್ರೀಹರಿಕೋಟ ಮತ್ತು ಕುಲಶೇಖರಪಟ್ಟಣಂ ನಂತರ ದೇಶದ ಮೂರನೇ ಪ್ರಮುಖ ಉಡಾವಣಾ ಕೇಂದ್ರವಾಗಿ ಹೋಪ್ ಐಲೆಂಡ್ ಹೊರಹೊಮ್ಮಲಿದೆ.

➤ ಹೋಪ್ ಐಲೆಂಡ್: ಇದು ಬಂಗಾಳ ಕೊಲ್ಲಿಯ ಕಾಕಿನಾಡ ಕರಾವಳಿಯಲ್ಲಿರುವ ಅತಿ ಸಣ್ಣದಾದ, ಹಾವಿನ ಆಕಾರದ (Tadpole-shaped) ದ್ವೀಪವಾಗಿದೆ. ಇದು 18ನೇ ಶತಮಾನದಲ್ಲಿ ಗೋದಾವರಿ ನದಿಯ ಉಪನದಿಯಾದ ಕೋರಿಂಗಾ ನದಿಯು ತಂದ ಹೂಳು ಸಂಗ್ರಹದಿಂದ ನೈಸರ್ಗಿಕವಾಗಿ ನಿರ್ಮಾಣವಾಗಿದೆ. ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಸುಮಾರು 600 ಕಿ.ಮೀ ದೂರದಲ್ಲಿದೆ. ಇಲ್ಲಿಂದ ಉಪಗ್ರಹ ಉಡಾವಣೆ ಮಾಡುವುದರಿಂದ ಜನವಸತಿ ಪ್ರದೇಶಗಳಿಗೆ ಅಪಾಯ

ಕಡಿಮೆ ಮತ್ತು ಬಂಗಾಳ ಕೊಲ್ಲಿಯ ಮೇಲೆ ಸುಲಭವಾಗಿ ಪಥವನ್ನು ನಿರ್ಧರಿಸಬಹುದು. ಈ ದ್ವೀಪವು ಆಲಿವ್ ರಿಡ್ಲಿ ಆಮೆಗಳ (Olive Ridley turtles) ಸಂತಾನೋತ್ಪತ್ತಿ ಕೇಂದ್ರವಾಗಿದೆ ಮತ್ತು ಸಮೀಪದಲ್ಲೇ ಕೋರಿಂಗಾ ವನ್ಯಜೀವಿ ಧಾಮವಿದೆ.

➤ **ಭಾರತದ ಇತರ ಬಾಹ್ಯಾಕಾಶ ನಿಲ್ದಾಣಗಳು: ಈ ಹೊಸ ಕೇಂದ್ರದೊಂದಿಗೆ ಭಾರತವು ಮೂರು ಪ್ರಮುಖ ಉಡಾವಣಾ ಕೇಂದ್ರಗಳನ್ನು ಹೊಂದಿದಂತಾಗುತ್ತದೆ:**

1. ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ (SHAR), ಶ್ರೀಹರಿಕೋಟಾ: ಇದು ಭಾರತದ ಪ್ರಾಥಮಿಕ ಮತ್ತು ಅತಿದೊಡ್ಡ ಉಡಾವಣಾ ಕೇಂದ್ರವಾಗಿದೆ.
2. ಕುಲಶೇಖರಪಟ್ಟಣಂ (ತಮಿಳುನಾಡು): ಇದು ಸಣ್ಣ ಉಪಗ್ರಹ ಉಡಾವಣಾ ವಾಹನಗಳಿಗಾಗಿ (SSLV) ಅಭಿವೃದ್ಧಿಪಡಿಸಲಾಗುತ್ತಿರುವ ಎರಡನೇ ಕೇಂದ್ರ
3. ಹೋಪ್ ಐಲೆಂಡ್ (ಆಂಧ್ರಪ್ರದೇಶ): ಖಾಸಗಿ ಮತ್ತು ವಾಣಿಜ್ಯ ಉದ್ದೇಶದ ಉಡಾವಣೆಗಳಿಗಾಗಿ ಉದ್ದೇಶಿತ ಕೇಂದ್ರ.

## 24 Jan 2026

## ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ (National Girl Child Day)




➤ ಭಾರತದಲ್ಲಿ ಪ್ರತಿವರ್ಷ ಜನವರಿ 24 ರಂದು 'ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ'ವನ್ನು ಆಚರಿಸಲಾಗುತ್ತದೆ. ಹೆಣ್ಣು ಮಕ್ಕಳು ಎದುರಿಸುತ್ತಿರುವ ಅಸಮಾನತೆ, ಲಿಂಗ ತಾರತಮ್ಯ ಮತ್ತು ದೌರ್ಜನ್ಯಗಳ ವಿರುದ್ಧ ಜಾಗೃತಿ ಮೂಡಿಸಿ, ಅವರ ಹಕ್ಕುಗಳನ್ನು ರಕ್ಷಿಸುವುದು ಈ ದಿನದ ಆಶಯವಾಗಿದೆ. 2008ರಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಮೊದಲ ಬಾರಿಗೆ ಈ ದಿನವನ್ನು ಆಚರಿಸಲು ನಿರ್ಧರಿಸಿತು. 1966ರ ಜನವರಿ 24 ರಂದು ಇಂದಿರಾ ಗಾಂಧಿಯವರು ಭಾರತದ ಮೊದಲ ಮಹಿಳಾ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಆ ಸವಿನೆನಪಿಗಾಗಿ ಮತ್ತು ಮಹಿಳಾ ಸಬಲೀಕರಣದ ಸಂಕೇತವಾಗಿ ಈ ದಿನಾಂಕವನ್ನು ಆಯ್ದುಕೊಳ್ಳಲಾಗಿದೆ.

➤ **ಆಚರಣೆಯ ಪ್ರಮುಖ ಉದ್ದೇಶಗಳು:-**

=> ಲಿಂಗ ಸಮಾನತೆ: ಸಮಾಜದಲ್ಲಿ ಹೆಣ್ಣು ಮತ್ತು ಗಂಡು ಎಂಬ ತಾರತಮ್ಯವನ್ನು ಹೋಗಲಾಡಿಸುವುದು.
=> ಭ್ರೂಣ ಹತ್ಯೆ ತಡೆ: ಹೆಣ್ಣು ಭ್ರೂಣ ಹತ್ಯೆಯನ್ನು ನಿಷೇಧಿಸಿ, ಇಳಿಮುಖವಾಗುತ್ತಿರುವ ಲಿಂಗಾನುಪಾತವನ್ನು ಸುಧಾರಿಸುವುದು.
=> ಶಿಕ್ಷಣ ಮತ್ತು ಆರೋಗ್ಯ: ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ದೊರೆಯುವಂತೆ ಮಾಡುವುದು.
=> ಸುರಕ್ಷತೆ: ಮನೆಯ ಒಳಗೆ ಮತ್ತು ಹೊರಗೆ ಹೆಣ್ಣು ಮಕ್ಕಳಿಗೆ ಸುರಕ್ಷಿತ ವಾತಾವರಣ ನಿರ್ಮಿಸುವುದು ಹಾಗೂ ದೌರ್ಜನ್ಯ ತಡೆಗಟ್ಟುವುದು.

➤ ಬಾಲ್ಯ ವಿವಾಹ ಇಳಿಕೆ: ಭಾರತದಲ್ಲಿ 2006ರಲ್ಲಿ ಶೇ. 47ರಷ್ಟಿದ್ದ ಬಾಲ್ಯ ವಿವಾಹದ ಪ್ರಮಾಣವು 2019-21ರ ವೇಳೆಗೆ ಶೇ. 23.3ಕ್ಕೆ ಇಳಿದಿದೆ. ಆದರೂ ಪಶ್ಚಿಮ ಬಂಗಾಳ, ಬಿಹಾರ ಮತ್ತು ಜಾರ್ಖಂಡ್ ನಂತಹ ರಾಜ್ಯಗಳಲ್ಲಿ ಈ ಸಮಸ್ಯೆ ಇನ್ನೂ ಹೆಚ್ಚಿದೆ.

➤ ಮಹಿಳಾ ಸಾಕ್ಷರತೆ: 2023-24ರ ವರದಿಯಂತೆ ಭಾರತದ ಮಹಿಳಾ ಸಾಕ್ಷರತಾ ಪ್ರಮಾಣ ಶೇ. 74.6ಕ್ಕೆ ಏರಿಕೆಯಾಗಿದೆ. ವಿಶೇಷವಾಗಿ 15-24 ವರ್ಷದ ಯುವತಿಯರಲ್ಲಿ ಸಾಕ್ಷರತೆ ಶೇ. 96ರಷ್ಟಿರುವುದು ಆಶಾದಾಯಕವಾಗಿದೆ. ಕೇರಳ ರಾಜ್ಯವು ಮಹಿಳಾ ಸಾಕ್ಷರತೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ.

➤ **ಪ್ರಮುಖ ಸರ್ಕಾರಿ ಯೋಜನೆಗಳು: ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ:**

=> ಬೇಟಿ ಬಚಾವೋ, ಬೇಟಿ ಪಢಾವೋ: ಹೆಣ್ಣು ಮಕ್ಕಳ ರಕ್ಷಣೆ ಮತ್ತು ಶಿಕ್ಷಣಕ್ಕಾಗಿ.
=> ಸುಕನ್ಯಾ ಸಮೃದ್ಧಿ ಯೋಜನೆ: ಹೆಣ್ಣು ಮಕ್ಕಳ ಭವಿಷ್ಯದ ಉಳಿತಾಯಕ್ಕಾಗಿ.
=> ಮಾತೃ ವಂದನಾ ಯೋಜನೆ: ಗರ್ಭಿಣಿಯರು ಮತ್ತು ಬಾಣಂತಿಯರ ಪೌಷ್ಟಿಕಾಂಶಕ್ಕಾಗಿ.
=> ಕಸ್ತೂರಿ ಬಾ ಗಾಂಧಿ ಬಾಲಿಕಾ ವಿದ್ಯಾಲಯ: ಗ್ರಾಮೀಣ ಹೆಣ್ಣು ಮಕ್ಕಳ ಶಿಕ್ಷಣ ಉತ್ತೇಜಿಸಲು.

## ತಮಿಳುನಾಡು ಸರ್ಕಾರದಿಂದ 'ಸೆಮ್ಮೊಳಿ ಸಾಹಿತ್ಯ ಪ್ರಶಸ್ತಿ' ಘೋಷಣೆ




➤ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಇತ್ತೀಚೆಗೆ ರಾಷ್ಟ್ರೀಯ ಮಟ್ಟದ ನೂತನ ಸಾಹಿತ್ಯ ಪ್ರಶಸ್ತಿಯಾದ "ಸೆಮ್ಮೊಳಿ ಇಲಕಿಯ ವಿರುದು" (Semmozhi Illakiya Virudhu - ಶಾಸ್ತ್ರೀಯ ಭಾಷಾ ಸಾಹಿತ್ಯ ಪ್ರಶಸ್ತಿ) ಅನ್ನು ಘೋಷಿಸಿದ್ದಾರೆ. ಕೇಂದ್ರ ಸರ್ಕಾರದ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳ ವಿಳಂಬ ಮತ್ತು ರಾಜಕೀಯ ಹಸ್ತಕ್ಷೇಪದ ಹಿನ್ನೆಲೆಯಲ್ಲಿ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.

➤ ಸೆಮ್ಮೊಳಿ ಇಲಕಿಯ ವಿರುದು (ಶಾಸ್ತ್ರೀಯ ಭಾಷಾ ಸಾಹಿತ್ಯ ಪ್ರಶಸ್ತಿ): ಪ್ರತಿ ಭಾಷೆಯ ಅತ್ಯುತ್ತಮ ಕೃತಿಗೆ 5 ಲಕ್ಷ ರೂ. ನಗದು ಬಹುಮಾನ ನೀಡಲಾಗುವುದು, ಆರಂಭಿಕ ಹಂತದಲ್ಲಿ ತಮಿಳು, ತೆಲುಗು, ಕನ್ನಡ, ಮಲಯಾಳಂ, ಒಡಿಯಾ, ಬಂಗಾಳಿ ಮತ್ತು ಮರಾಠಿ ಸೇರಿದಂತೆ ಒಟ್ಟು 7 ಭಾಷೆಗಳ ಸಾಹಿತ್ಯ ಕೃತಿಗಳನ್ನು ಪರಿಗಣಿಸಲಾಗುತ್ತದೆ, ಪ್ರಶಸ್ತಿ ವಿಜೇತರನ್ನು ಆಯ್ಕೆ ಮಾಡಲು ಆಯಾ ಭಾಷೆಯ ಖ್ಯಾತ ಸಾಹಿತಿಗಳನ್ನು ಒಳಗೊಂಡ ಸ್ವತಂತ್ರ ತಜ್ಞರ ಸಮಿತಿಯನ್ನು ರಚಿಸಲಾಗುವುದು. ಸರ್ಕಾರವು ಕೇವಲ ಪೋಷಕನಾಗಿ (Patron) ಕಾರ್ಯನಿರ್ವಹಿಸಲಿದೆ.

➤ ಚೆನ್ನೈ ಅಂತಾರಾಷ್ಟ್ರೀಯ ಪುಸ್ತಕ ಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಕೇಂದ್ರ ಸಾಂಸ್ಕೃತಿಕ ಸಚಿವಾಲಯದ ಹಸ್ತಕ್ಷೇಪದಿಂದಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳ ಘೋಷಣೆ ರದ್ದಾಗಿರುವುದನ್ನು ಟೀಕಿಸಿದರು. ಕಲೆ ಮತ್ತು ಸಾಹಿತ್ಯದ ಕ್ಷೇತ್ರದಲ್ಲಿ ರಾಜಕೀಯ ಪ್ರವೇಶವು ಅಪಾಯಕಾರಿ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಅನಿಶ್ಚಿತತೆಯ ನಡುವೆ ಸಾಹಿತಿಗಳಿಗೆ ಗೌರವ ನೀಡಲು ತಮಿಳುನಾಡು ಸರ್ಕಾರವೇ ಈ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಸ್ಥಾಪಿಸಿದೆ.

➤ ಒಕ್ಕೂಟ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಅಸ್ಮಿತೆ: ಈ ಬೆಳವಣಿಗೆಯು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳು ತಮ್ಮ ಸಾಂಸ್ಕೃತಿಕ ಮತ್ತು ಭಾಷಾ ಅಸ್ಮಿತೆಯನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಿರುವುದಕ್ಕೆ ಉತ್ತಮ ಉದಾಹರಣೆಯಾಗಿದೆ.

=> ಸಾಂಸ್ಕೃತಿಕ ಅಸ್ಮಿತೆ: ತಮಿಳು ಭಾಷೆಯು 2004ರಲ್ಲಿ ಭಾರತದ ಮೊದಲ 'ಶಾಸ್ತ್ರೀಯ ಭಾಷೆ' ಎಂಬ ಮಾನ್ಯತೆ ಪಡೆದಿತ್ತು. ಈಗ ಇತರ ಪ್ರಾದೇಶಿಕ ಭಾಷೆಗಳಿಗೂ ಪ್ರಶಸ್ತಿ ನೀಡುವ ಮೂಲಕ ತಮಿಳುನಾಡು ಸಾಂಸ್ಕೃತಿಕ ನಾಯಕತ್ವವನ್ನು ಪ್ರದರ್ಶಿಸುತ್ತಿದೆ.
=> ಸಹಕಾರ ಒಕ್ಕೂಟ ವ್ಯವಸ್ಥೆ: ಕೇಂದ್ರ ಸರ್ಕಾರವು ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತತೆಯನ್ನು ಕಾಪಾಡದಿದ್ದಾಗ, ರಾಜ್ಯ ಸರ್ಕಾರಗಳು ಮುನ್ನೆಲೆಗೆ ಬಂದು ಪ್ರಾದೇಶಿಕ ಭಾಷೆಗಳ ಹಿತಾಸಕ್ತಿಯನ್ನು ರಕ್ಷಿಸುತ್ತವೆ. ಇದು ರಾಜ್ಯಗಳ ನಡುವಿನ ಆರೋಗ್ಯಕರ ಸಾಂಸ್ಕೃತಿಕ ಸ್ಪರ್ಧೆಯನ್ನು (Competitive Federalism) ಉತ್ತೇಜಿಸುತ್ತದೆ.

➤ ಈ ಪ್ರಶಸ್ತಿಯು ಹಿಂದಿಯೇತರ ಭಾಷೆಗಳ ಸಾಹಿತ್ಯಿಕ ವೈವಿಧ್ಯತೆಯನ್ನು ಆಚರಿಸುವ ಮತ್ತು ಪ್ರಾದೇಶಿಕ ಭಾಷೆಗಳ

ಹೆಮ್ಮೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಪಸರಿಸುವ ಉದ್ದೇಶ ಹೊಂದಿದೆ.

## 2026ರ ಬನಾರಸ್ ಸಾಹಿತ್ಯ ಹಬ್ಬದ ಪ್ರಶಸ್ತಿಗಳ ಘೋಷಣೆ: ಸಾಹಿತ್ಯ ಲೋಕದ ಸಾಧಕರಿಗೆ ಸನ್ಮಾನ




➤ ಉತ್ತರಪ್ರದೇಶದ ವಾರಣಾಸಿಯಲ್ಲಿ (ಬನಾರಸ್) ನಡೆದ 2ನೇ ಆವೃತ್ತಿಯ ಬನಾರಸ್ ಲಿಟರೇಚರ್ ಫೆಸ್ಟಿವಲ್ನಲ್ಲಿ 2026ನೇ ಸಾಲಿನ ಪ್ರತಿಷ್ಠಿತ ಪುಸ್ತಕ ಪ್ರಶಸ್ತಿಗಳನ್ನು ಘೋಷಿಸಲಾಗಿದೆ. ಭಾರತೀಯ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಹಿತಿಗಳನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಜನವರಿ 30 ರಿಂದ ಫೆಬ್ರವರಿ 1, 2026 ರವರೆಗೆ ವಾರಣಾಸಿಯಲ್ಲಿ ನಡೆಯಲಿದೆ. ಜೀವಮಾನ ಸಾಧನೆ ಪ್ರಶಸ್ತಿಗೆ 1 ಲಕ್ಷ ರೂ. ಹಾಗೂ ಇತರ ವಿಭಾಗದ ಪ್ರಶಸ್ತಿಗಳಿಗೆ ತಲಾ 51,000 ರೂ. ನಗದು ಬಹುಮಾನ ನೀಡಲಾಗುತ್ತದೆ.

➤ ಜೀವಮಾನ ಸಾಧನೆ ಪ್ರಶಸ್ತಿ (Lifetime Achievement Award): ಖ್ಯಾತ ಸಾಹಿತಿ ಮತ್ತು ಜೈಪುರ ಸಾಹಿತ್ಯ ಹಬ್ಬದ (JLF) ಸಹ-ಸಂಸ್ಥಾಪಕಿ ನಮಿತಾ ಗೋಖಲೆ ಅವರಿಗೆ ಈ ವರ್ಷದ 'ಭಾರತೇಂದು ಹರಿಶ್ಚಂದ್ರ ಜೀವಮಾನ ಸಾಧನೆ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗಿದೆ. ಇವರ ಚೊಚ್ಚಲ ಕಾದಂಬರಿ 'ಪಾರೋ: ಡ್ರೀಮ್ಸ್ ಆಫ್ ಪ್ಯಾಶನ್' ಸಾಹಿತ್ಯ ಲೋಕದಲ್ಲಿ ಅತ್ಯಂತ ಜನಪ್ರಿಯವಾಗಿದೆ. ಇವರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರೂ ಹೌದು.

**➤ ಇಂಗ್ಲಿಷ್ ಭಾಷಾ ವಿಭಾಗದ ಪ್ರಶಸ್ತಿಗಳು:**

1. ಶಿನಿ ಆಂಟೋನಿ ಅವರು ಬರೆದ 'ಈಡನ್ ಅಬ್ಯಾಂಡನ್ಡ್: ದಿ ಸ್ಟೋರಿ ಆಫ್ ಲಿಲಿತ್' (Eden Abandoned: The Story of Lilith) ಎಂಬ ಕೃತಿಗೆ ಕಾದಂಬರಿ ವಿಭಾಗದಲ್ಲಿ ಪ್ರತಿಷ್ಠಿತ ರಸ್ಕಿನ್ ಬಾಂಡ್ ಪ್ರಶಸ್ತಿಯನ್ನು ನೀಡಲಾಗಿದೆ.
2. ಕವಿತೆ ವಿಭಾಗದಲ್ಲಿ, 'ದಿ ಹನುಮಾನ್ ಚಾಲೀಸಾ' (The Hanuman Chalisa) ಕೃತಿಗಾಗಿ ಪ್ರಸಿದ್ಧ ಕವಿ ಅಭಯ್ ಕೆ. ಅವರಿಗೆ ಸರೋಜಿನಿ ನಾಯ್ಡು ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.
3. ಭಾಷಾಶಾಸ್ತ್ರಜ್ಞ ಮತ್ತು ಲೇಖಕಿ ಪೆಗ್ಗಿ ಮೋಹನ್ ಅವರು ರಚಿಸಿದ 'ಫಾದರ್ ಟಂಗ್, ಮದರ್‌ಲ್ಯಾಂಡ್: ದಿ ಬರ್ತ್ ಆಫ್ ಲ್ಯಾಂಗ್ವೇಜ್ ಇನ್ ಸೌತ್ ಏಷ್ಯಾ' (Father Tongue, Motherland) ಎಂಬ ಸಂಶೋಧನಾತ್ಮಕ ಕೃತಿಗೆ ಲಲಿತ ಪ್ರಬಂಧ (Non-Fiction) ವಿಭಾಗದ ಸರ್ವಪಲ್ಲಿ ರಾಧಾಕೃಷ್ಣನ್ ಪ್ರಶಸ್ತಿ ಲಭಿಸಿದೆ.
4. ಅನುವಾದ ವಿಭಾಗದಲ್ಲಿ, ಶಂಕರ್ ಅವರ ಬಂಗಾಳಿ ಕೃತಿಯನ್ನು ಇಂಗ್ಲಿಷ್‌ಗೆ 'ಲಿಮಿಟೆಡ್ / ಅನ್ಲಿಮಿಟೆಡ್' (Limited / Unlimited) ಎಂದು ಅನುವಾದಿಸಿದ ಅರುಣವ ಸಿನ್ಹಾ ಅವರಿಗೆ ರವೀಂದ್ರನಾಥ ಟ್ಯಾಗೋರ್ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಗಿದೆ.

**➤ ಹಿಂದಿ ಸಾಹಿತ್ಯ ಪ್ರಶಸ್ತಿಗಳು: ಹಿಂದಿ ಭಾಷೆಯಲ್ಲಿ ಸಾಹಿತ್ಯ ಕೃಷಿ ಮಾಡಿದವರಿಗೆ ಈ ಕೆಳಗಿನ ಪ್ರಶಸ್ತಿಗಳನ್ನು ನೀಡಲಾಗಿದೆ:**

1. ಪ್ರೇಮಚಂದ್ ಪ್ರಶಸ್ತಿ (ಕಾದಂಬರಿ): ಮಮತಾ ಕಾಲಿಯಾ (ದೂರಸ್ಥ ದಾಂಪತ್ಯ ಕೃತಿಗೆ).
2. ಕಬೀರ್ ಪ್ರಶಸ್ತಿ (ಕವಿತೆ): ಉದಯನ್ ವಾಜಪೇಯಿ (ಪಾಗಲ್ ಗಣಿತಜ್ಞ ಕಿ ಕವಿತಾಯೇಂ ಕೃತಿಗೆ).
3. ರಾಹುಲ್ ಸಂಕೃತ್ಯಾಯನ ಪ್ರಶಸ್ತಿ (Non-Fiction): ಜೆ. ಸುಶೀಲ್ (ದುಃಖ್ ಕಿ ದುನಿಯಾ ಭೀತರ್ ಹೈ ಕೃತಿಗೆ).
4. ಮಹಾದೇವಿ ವರ್ಮಾ ಪ್ರಶಸ್ತಿ (ಅನುವಾದ): ರಾಜಗೋಪಾಲ್ ಸಿಂಗ್ ವರ್ಮಾ.

➤ ವಿಶೇಷ ಗೌರವಗಳು:-

1. ಕಾಳಿದಾಸ ಪ್ರಶಸ್ತಿ (ಭಾರತೀಯ ಭಾಷೆಗಳು): ಕುರುಖ್ ಕವಿ ಮಹದೇವ್ ಟೊಪ್ಪೊ ಅವರಿಗೆ ಭಾರತೀಯ ಭಾಷೆಗಳ ವಿಭಾಗದಲ್ಲಿ ಈ ಪ್ರಶಸ್ತಿ ನೀಡಲಾಗಿದೆ.
2. ವಿವೇಕಾನಂದ ಯುವ ಪ್ರಶಸ್ತಿ: ಯುವ ಬರಹಗಾರ ಪರಾಗ್ ಪವನ್ ಅವರಿಗೆ ಸಂದಿದೆ.

## ವಿಶ್ವ ಆರೋಗ್ಯ ಸಂಸ್ಥೆಯಿಂದ ಅಮೆರಿಕ ಅಧಿಕೃತವಾಗಿ ಹೊರಕ್ಕೆ: ಟ್ರಂಪ್ ಸರ್ಕಾರದ ಐತಿಹಾಸಿಕ ತೀರ್ಮಾನ




➤ ಅಮೆರಿಕ ಸಂಯುಕ್ತ ಸಂಸ್ಥಾನವು (USA) ವಿಶ್ವ ಆರೋಗ್ಯ ಸಂಸ್ಥೆ (WHO) ಇಂದ ಅಧಿಕೃತವಾಗಿ ಹೊರಬಂದಿದೆ. ಡೊನಾಲ್ಡ್ ಟ್ರಂಪ್ ಆಡಳಿತವು ಈ ಮಹತ್ವದ ನಿರ್ಧಾರವನ್ನು ಜಾರಿಗೆ ತಂದಿದ್ದು, ಸಂಸ್ಥೆಗೆ ನೀಡುತ್ತಿದ್ದ ಎಲ್ಲಾ ಆರ್ಥಿಕ ನೆರವನ್ನು ಸ್ಥಗಿತಗೊಳಿಸಿದೆ. ಕೋವಿಡ್-19 ನಿರ್ವಹಣೆಯಲ್ಲಿ WHO ವಿಫಲವಾಗಿದೆ, ಅದು ಅತಿಯಾಗಿ ಚೀನಾ ಪರ (China-centric) ಒಲವು ಹೊಂದಿದೆ ಮತ್ತು ಅಗತ್ಯ ಸುಧಾರಣೆಗಳನ್ನು ತರುವಲ್ಲಿ ಸೋತಿದೆ ಎಂಬುದು ಅಮೆರಿಕದ ಪ್ರಮುಖ ಆರೋಪವಾಗಿದೆ. ಅತಿ ದೊಡ್ಡ ದಾನಿ ರಾಷ್ಟ್ರವಾಗಿದ್ದರೂ ತನ್ನ ಹಿತಾಸಕ್ತಿಗಳಿಗೆ ಧಕ್ಕೆಯಾಗುತ್ತಿದೆ ಎಂದು ವಾದಿಸಿರುವ ಅಮೆರಿಕ, ಇನ್ನು ಮುಂದೆ ಜಾಗತಿಕ ಆರೋಗ್ಯ ವಿಷಯಗಳಲ್ಲಿ ದ್ವಿಪಕ್ಷೀಯ ಒಪ್ಪಂದಗಳ ಮೂಲಕ ಮಾತ್ರ ಕಾರ್ಯನಿರ್ವಹಿಸುವುದಾಗಿ ಘೋಷಿಸಿದೆ.

**➤ ಅಮೆರಿಕದ ನಿರ್ಧಾರದ ಪರಿಣಾಮಗಳು:**

=> ಆರ್ಥಿಕ ನೆರವು ಸ್ಥಗಿತ: WHO ಗೆ ಅತಿದೊಡ್ಡ ದಾನಿಯಾಗಿದ್ದ ಅಮೆರಿಕವು ತನ್ನ ಎಲ್ಲಾ ಆರ್ಥಿಕ ಸಹಕಾರವನ್ನು ನಿಲ್ಲಿಸಿದೆ. 2024 ಮತ್ತು 2025ರ ಸಾಲಿನ ಬಾಕಿ ಉಳಿಸಿಕೊಂಡಿರುವ ಸುಮಾರು $260 ಮಿಲಿಯನ್ ಹಣವನ್ನು ಪಾವತಿಸಲು ನಿರಾಕರಿಸಿದೆ.

=> ಸಿಬ್ಬಂದಿ ಹಿಂಪಡೆಯುವಿಕೆ: ಜಿನೀವಾ ಕೇಂದ್ರ ಕಚೇರಿ ಸೇರಿದಂತೆ ವಿಶ್ವದಾದ್ಯಂತ WHO ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಮೆರಿಕದ ಅಧಿಕಾರಿಗಳು ಮತ್ತು ಗುತ್ತಿಗೆದಾರರನ್ನು ಹಿಂಪಡೆಯಲಾಗಿದೆ.

=> ಜಾಗತಿಕ ಕಾರ್ಯಕ್ರಮಗಳ ಮೇಲೆ ಪ್ರಭಾವ: ಪೋಲಿಯೋ ನಿರ್ಮೂಲನೆ, ಎಚ್‌ಐವಿ (HIV) ನಿಯಂತ್ರಣ ಮತ್ತು ತಾಯಿ-ಮಕ್ಕಳ ಮರಣ ಪ್ರಮಾಣ ತಗ್ಗಿಸುವಂತಹ ಜಾಗತಿಕ ಕಾರ್ಯಕ್ರಮಗಳಿಗೆ ನೀಡುತ್ತಿದ್ದ ಸಹಕಾರಕ್ಕೆ ತಡೆಯುಂಟಾಗಬಹುದು.

=> ದ್ವಿಪಕ್ಷೀಯ ಒಪ್ಪಂದಗಳು: ಇನ್ನು ಮುಂದೆ ಆರೋಗ್ಯ ವಿಷಯಗಳಿಗೆ ಸಂಬಂಧಿಸಿದಂತೆ ಅಮೆರಿಕವು ನೇರವಾಗಿ ಇತರ ದೇಶಗಳೊಂದಿಗೆ (Bilateral) ಒಪ್ಪಂದ ಮಾಡಿಕೊಳ್ಳುವುದಾಗಿ ತಿಳಿಸಿದೆ.

➤ ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿಕ್ರಿಯೆ: WHO ಮಹಾನಿರ್ದೇಶಕರಾದ ಟೆಡ್ರೊಸ್ ಅಧಾನೊಮ್ ಗೆಬ್ರೆಯೆಸಸ್ ಅವರು ಈ ನಿರ್ಧಾರವು ಅಮೆರಿಕ ಮತ್ತು ಜಗತ್ತಿಗೆ ದೊಡ್ಡ ನಷ್ಟ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಮುಂಬರುವ ಫೆಬ್ರವರಿ 2 ರಿಂದ 7 ರವರೆಗೆ ನಡೆಯಲಿರುವ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ವಿಷಯದ ಬಗ್ಗೆ ಗಂಭೀರ ಚರ್ಚೆ ನಡೆಯಲಿದೆ.

## ಭಾರತ-ಬ್ರೆಜಿಲ್ ಸಂಬಂಧ: ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಲುಲಾ ನಡುವೆ ಮಹತ್ವದ ಚರ್ಚೆ.

➤ ಬ್ರೆಜಿಲ್ ಅಧ್ಯಕ್ಷರಾದ ಲುಯಿಜ್ ಇನಾಸಿಯೊ ಲುಲಾ ಡ ಸಿಲ್ವಾ ಅವರು ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ

ದೂರವಾಣಿ ಮೂಲಕ ಸುದೀರ್ಘ ಚರ್ಚೆ ನಡೆಸಿದರು. ಮುಂದಿನ ತಿಂಗಳು (ಫೆಬ್ರವರಿ 19-21) ದೆಹಲಿಯಲ್ಲಿ ನಡೆಯಲಿರುವ ಎಐ (ಕೃತಕ ಬುದ್ಧಿಮತ್ತೆ) ಜಾಗತಿಕ ಸಮಾವೇಶದಲ್ಲಿ ಭಾಗವಹಿಸಲು ಅಧ್ಯಕ್ಷ ಲುಲಾ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ.

➤ ಈ ಸಂದರ್ಭದಲ್ಲಿ ಉಭಯ ನಾಯಕರು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ (UNSC) ತುರ್ತು ಸುಧಾರಣೆಗಳ ಅಗತ್ಯತೆ ಮತ್ತು ಜಾಗತಿಕ ದಕ್ಷಿಣ (Global South) ರಾಷ್ಟ್ರಗಳ ಆದ್ಯತೆಗಳ ಕುರಿತು ವಿಚಾರ ವಿನಿಮಯ ಮಾಡಿಕೊಂಡರು. ಅಲ್ಲದೆ, ರಕ್ಷಣೆ, ವ್ಯಾಪಾರ, ಆರೋಗ್ಯ, ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೈವಿಕ ಇಂಧನ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ಮತ್ತಷ್ಟು ಬಲಪಡಿಸಲು ನಿರ್ಧರಿಸಿದರು. ಸುಮಾರು 45 ನಿಮಿಷಗಳ ಕಾಲ ನಡೆದ ಈ ಸಂಭಾಷಣೆಯಲ್ಲಿ ಉಭಯ ದೇಶಗಳ ನಡುವಿನ 'ಆಯಕಟ್ಟಿನ ಪಾಲುದಾರಿಕೆ' (Strategic Partnership) ಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಭರವಸೆ ನೀಡಲಾಯಿತು.

➤ ಭಾರತ ಮತ್ತು ಬ್ರೆಜಿಲ್ ಎರಡೂ ದೇಶಗಳು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವಕ್ಕಾಗಿ ಒತ್ತಾಯಿಸುತ್ತಿರುವ G-4 ಗುಂಪಿನ ಸದಸ್ಯ ರಾಷ್ಟ್ರಗಳಾಗಿವೆ, ಅಭಿವೃದ್ಧಿಶೀಲ ರಾಷ್ಟ್ರಗಳ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಭಾರತ ಮತ್ತು ಬ್ರೆಜಿಲ್ ಪ್ರಮುಖ ಪಾತ್ರ ವಹಿಸುತ್ತಿವೆ ಮತ್ತು ಇಂಧನ ಸುರಕ್ಷತೆ ಮತ್ತು ಜೈವಿಕ ಇಂಧನ (Bio-fuels) ಕ್ಷೇತ್ರದಲ್ಲಿ ಎರಡೂ ದೇಶಗಳು ನಿಕಟವಾಗಿ ಕಾರ್ಯನಿರ್ವಹಿಸುತ್ತಿವೆ.

## ಜಪಾನ್ ರಾಜಕೀಯ ಸಂಚಲನ: ಫೆಬ್ರವರಿ 8 ರಂದು ಮಧ್ಯಂತರ ಚುನಾವಣೆ



➤ ಜಪಾನ್ ಪ್ರಧಾನಿ ಸನಾಯೆ ತಕೈಚಿ (Sanae Takaichi) ಅವರು ಅಧಿಕಾರಕ್ಕೆ ಬಂದ ಕೇವಲ ಮೂರೇ ತಿಂಗಳಲ್ಲಿ ಸಂಸತ್ತಿನ ಕೆಳಮನೆಯನ್ನು (Lower House) ವಿಸರ್ಜಿಸಿದ್ದು, ದೇಶವು 2026ರ ಫೆಬ್ರವರಿ 8ರಂದು ಮಹತ್ವದ ಚುನಾವಣೆಯನ್ನು ಎದುರಿಸಲಿದೆ. ಕಳೆದ 60 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಸಂಸತ್ತಿನ ಸಾಮಾನ್ಯ ಅಧಿವೇಶನದ ಆರಂಭದಲ್ಲೇ ಸದನವನ್ನು ವಿಸರ್ಜಿಸಲಾಗಿದೆ. ವಿಸರ್ಜನೆಯಾದ ಕೇವಲ 16 ದಿನಗಳಲ್ಲಿ ಚುನಾವಣೆ ನಡೆಯುತ್ತಿರುವುದು ಜಪಾನ್‌ನ ಯುದ್ಧಾನಂತರದ ಇತಿಹಾಸದಲ್ಲೇ ಅತ್ಯಂತ ಕಡಿಮೆ ಅವಧಿಯ ಚುನಾವಣಾ ಪ್ರಚಾರವಾಗಿದೆ. ಒಟ್ಟು 465 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಜನವರಿ 27 ರಿಂದ ಅಧಿಕೃತ ಪ್ರಚಾರ ಕಾರ್ಯ ಆರಂಭವಾಗಲಿದೆ.

**➤ ಚುನಾವಣೆಯ ಪ್ರಮುಖ ವಿಷಯಗಳು (Core Issues):**

=> ಬೆಲೆ ಏರಿಕೆ ಮತ್ತು ತೆರಿಗೆ: ಹೆಚ್ಚುತ್ತಿರುವ ಆಹಾರ ಪದಾರ್ಥಗಳ ಬೆಲೆಯನ್ನು ನಿಯಂತ್ರಿಸುವುದು ಪ್ರಮುಖ ಚರ್ಚೆಯಾಗಿದೆ. ಆಡಳಿತಾರೂಢ ಲಿಬರಲ್ ಡೆಮೋಕ್ರಟಿಕ್ ಪಾರ್ಟಿ (LDP) ಆಹಾರದ ಮೇಲಿನ ಬಳಕೆಯ ತೆರಿಗೆಯನ್ನು (Consumption Tax) ತಾತ್ಕಾಲಿಕವಾಗಿ ಕಡಿತಗೊಳಿಸುವ ಭರವಸೆ ನೀಡಿದೆ.

=> ಆರ್ಥಿಕ ಬಜೆಟ್: 2026ರ ಆರ್ಥಿಕ ವರ್ಷದ ಬಜೆಟ್ ಅನುಮೋದನೆಗೂ ಮುನ್ನವೇ ಚುನಾವಣೆ ಘೋಷಿಸಿರುವುದು ವಿರೋಧ ಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದೆ.

=> ವಿದೇಶಾಂಗ ನೀತಿ: ಚೀನಾ ಜೊತೆಗಿನ ಉದ್ವಿಗ್ನತೆ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ರಕ್ಷಣಾ ವೆಚ್ಚ ಹೆಚ್ಚಿಸುವ ಒತ್ತಡದ ನಡುವೆ ಈ ಚುನಾವಣೆ ನಡೆಯುತ್ತಿದೆ.

=> ವಲಸಿಗರ ನೀತಿ: ತಕೈಚಿ ಸರ್ಕಾರವು ವಿದೇಶಿಯರ ವಾಸ್ತವ್ಯಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವ ಉದ್ದೇಶ ಹೊಂದಿದೆ.

**➤ ರಾಜಕೀಯ ಮೈತ್ರಿಗಳು:**

1. ಆಡಳಿತ ಪಕ್ಷ: ಸನಾಯೆ ತಕೈಚಿ ನೇತೃತ್ವದ 'ಲಿಬರಲ್ ಡೆಮೋಕ್ರಟಿಕ್ ಪಾರ್ಟಿ' (LDP) ಮತ್ತು 'ಜಪಾನ್ ಇನ್ನೋವೇಶನ್ ಪಾರ್ಟಿ' (Nippon Ishin) ಮೈತ್ರಿಕೂಟ.
2. ವಿರೋಧ ಪಕ್ಷ: ಯೋಶಿಹಿಕೊ ನೋಡಾ ನೇತೃತ್ವದ ನೂತನ 'ಸೆಂಟ್ರಿಸ್ಟ್ ರಿಫಾರ್ಮ್ ಅಲೈಯನ್ಸ್' (Centrist Reform Alliance).

➤ ಸನಾಯೆ ತಕೈಚಿ ಅವರು ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿದ್ದು, ತಮ್ಮ ಕಠಿಣ ನಿರ್ಧಾರಗಳಿಗೆ ಹೆಸರಾಗಿದ್ದಾರೆ. ಪ್ರಸ್ತುತ ಸರ್ಕಾರವು ಸಂಸತ್ತಿನಲ್ಲಿ ಅಲ್ಪ ಬಹುಮತವನ್ನು ಹೊಂದಿರುವುದರಿಂದ, ಅಧಿಕೃತವಾಗಿ ಜನರ ಬೆಂಬಲ (Public Mandate) ಪಡೆದು ಆಡಳಿತವನ್ನು ಗಟ್ಟಿಗೊಳಿಸಿಕೊಳ್ಳಲು ಅವರು ಈ 'ಹೈ-ರಿಸ್ಕ್' ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

## 77ನೇ ಗಣರಾಜ್ಯೋತ್ಸವ: ಕರ್ತವ್ಯ ಪಥದಲ್ಲಿ ಮೊದಲ ಬಾರಿಗೆ ಮಹಿಳಾ ಅಗ್ನಿವೀರರ ಪಥಸಂಚಲನ!



➤ ಈ ಬಾರಿಯ ಗಣರಾಜ್ಯೋತ್ಸವ ಪರೇಡ್ ಭಾರತೀಯ ಸಶಸ್ತ್ರ ಪಡೆಗಳಲ್ಲಿ ಮಹಿಳೆಯರ ಸಬಲೀಕರಣ ಮತ್ತು ಹೊಸ ತಲೆಮಾರಿನ 'ಅಗ್ನಿವೀರರ' ಪಾಲ್ಗೊಳ್ಳುವಿಕೆಗೆ ಸಾಕ್ಷಿಯಾಗಲಿದೆ. ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆಯಲಿರುವ ಈ ಪಥಸಂಚಲನದಲ್ಲಿ ಹಲವು ಪ್ರಥಮಗಳು ದಾಖಲಾಗುತ್ತಿವೆ. ಇದೇ ಮೊದಲ ಬಾರಿಗೆ ಭಾರತೀಯ ವಾಯುಪಡೆಯ (IAF) ಬ್ಯಾಂಡ್ ತುಕಡಿಯಲ್ಲಿ ಒಂಬತ್ತು ಮಹಿಳಾ ಅಗ್ನಿವೀರರು ಭಾಗವಹಿಸುತ್ತಿದ್ದಾರೆ. ಒಟ್ಟು 75 ಸದಸ್ಯರ ಈ ಬ್ಯಾಂಡ್‌ನಲ್ಲಿ 66 ಅಗ್ನಿವೀರರಿದ್ದು, ಸಾರ್ಜೆಂಟ್ ಚಾರ್ಲ್ಸ್ ಆಂಟನಿ ಡೇನಿಲ್ ಇದರ ನೇತೃತ್ವ ವಹಿಸಲಿದ್ದಾರೆ.

➤ ಸಿಆರ್‌ಪಿಎಫ್ ತುಕಡಿಗೆ ಮಹಿಳಾ ನಾಯಕಿ: ಕೇಂದ್ರ ಮೀಸಲು ಪೊಲೀಸ್ ಪಡೆಯ (CRPF) 140ಕ್ಕೂ ಹೆಚ್ಚು ಪುರುಷ ಸಿಬ್ಬಂದಿಯನ್ನು ಒಳಗೊಂಡ ತುಕಡಿಯನ್ನು 26 ವರ್ಷದ ಅಸಿಸ್ಟೆಂಟ್ ಕಮಾಂಡೆಂಟ್ ಸಿಮ್ರನ್ ಬಾಲಾ ಮುನ್ನಡೆಸಲಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯವರಾದ ಇವರು ನಕ್ಸಲ್ ವಿರೋಧಿ ಕಾರ್ಯಾಚರಣೆಗಳಲ್ಲಿ ಗುರುತಿಸಿಕೊಂಡಿದ್ದಾರೆ.

➤ ರಾಷ್ಟ್ರಧ್ವಜಾರೋಹಣ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೊಂದಿಗೆ ಫ್ಲೈಟ್ ಲೆಫ್ಟಿನೆಂಟ್ ಅಕ್ಷಿತಾ ಧಾಂಕರ್ ಅವರು ರಾಷ್ಟ್ರಧ್ವಜಾರೋಹಣ ನೆರವೇರಿಸುವ ಮೂಲಕ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲಿದ್ದಾರೆ.

➤ ವಾಯುಪಡೆಯ ಪಥಸಂಚಲನ: ವಾಯುಪಡೆಯ 144 ಸದಸ್ಯರ ಪಥಸಂಚಲನ ದಳವನ್ನು ಸ್ಕ್ವಾಡ್ರನ್ ಲೀಡರ್ ಜಗದೀಶ್ ಕುಮಾರ್ ಮುನ್ನಡೆಸಲಿದ್ದಾರೆ. ಈ ತಂಡದಲ್ಲಿ ಸ್ಕ್ವಾಡ್ರನ್ ಲೀಡರ್ ನಿಕಿತಾ ಚೌಧರಿ ಸೇರಿದಂತೆ ಇತರ ಅಧಿಕಾರಿಗಳು ಇರಲಿದ್ದಾರೆ.

➤ ವೈಮಾನಿಕ ಪ್ರದರ್ಶನ (Flypast) ಮತ್ತು ಸಂಗೀತ: ಈ ಬಾರಿಯ ಪರೇಡ್‌ನಲ್ಲಿ 'ಆಪರೇಷನ್ ಸಿಂಧೂರ್' ಯಶಸ್ಸಿನ ಸ್ಮರಣಾರ್ಥ ವಿಶೇಷ ವಿನ್ಯಾಸದ ಹಾರಾಟ ನಡೆಯಲಿದೆ. ಒಟ್ಟು 29 ವಿಮಾನಗಳು (16 ಯುದ್ಧ ವಿಮಾನಗಳು, 4 ಸಾರಿಗೆ ವಿಮಾನಗಳು ಮತ್ತು 9 ಹೆಲಿಕಾಪ್ಟರ್‌ಗಳು) ವೈಮಾನಿಕ ಪ್ರದರ್ಶನ ನೀಡಲಿವೆ. ವಾಯುಪಡೆಯ ಬ್ಯಾಂಡ್ 'ಸಾರೇ ಜಹಾಂಸೆ ಅಚ್ಛಾ', 'ನಿದರ್ ಯೋಧಾ' ಮತ್ತು 'ಲಡಾಕು' ಅಂತಹ ದೇಶಭಕ್ತಿ ಗೀತೆಗಳನ್ನು ನುಡಿಸಲಿದೆ.

➤ ಉತ್ತರ ಪ್ರದೇಶದ ಮಥುರಾದ 19 ವರ್ಷದ ಅಗ್ನಿವೀರ್ ಸುರಭಿ ಶರ್ಮಾ ಸ್ಯಾಕ್ಸೋಫೋನ್ ನುಡಿಸುವ ಮೂಲಕ ಐತಿಹಾಸಿಕ ಪಥಸಂಚಲನದಲ್ಲಿ ಭಾಗವಹಿಸುತ್ತಿರುವ ಕಿರಿಯ ಮಹಿಳಾ ಸಾಧಕಿಯಾಗಿದ್ದಾರೆ.

# 26 Jan 2026

## ಜನವರಿ -26:77ನೇ ಗಣರಾಜ್ಯೋತ್ಸವ ದಿನ




➤ ಭಾರತವು 2026ರ ಜನವರಿ 26ರ ಸೋಮವಾರದಂದು ತನ್ನ 77ನೇ ಗಣರಾಜ್ಯೋತ್ಸವವನ್ನು ದೆಹಲಿಯ 'ಕರ್ತವ್ಯ ಪಥ'ದಲ್ಲಿ ಅದ್ದೂರಿಯಾಗಿ ಆಚರಿಸಿತು. ಈ ದಿನವು 1950ರಲ್ಲಿ ಭಾರತದ ಸಂವಿಧಾನ ಜಾರಿಗೆ ಬಂದ ನೆನಪಿಗಾಗಿ ಆಚರಿಸಲಾಗುವ ಐತಿಹಾಸಿಕ ದಿನವಾಗಿದೆ. ಈ ವರ್ಷದ ಆಚರಣೆಯು ಈ ಕೆಳಗಿನ **ಪ್ರಮುಖ ಘೋಷವಾಕ್ಯಗಳ ಮೇಲೆ ಕೇಂದ್ರೀಕೃತವಾಗಿತ್ತು:**

1. ವಂದೇ ಮಾತರಂನ 150ನೇ ವರ್ಷ: ಬಂಕಿಮ ಚಂದ್ರ ಚಟ್ಟೋಪಾಧ್ಯಾಯರು ರಚಿಸಿದ ರಾಷ್ಟ್ರೀಯ ಗೀತೆಯ 150ನೇ ವರ್ಷಾಚರಣೆಯ ನೆನಪಿಗಾಗಿ ಈ ವಿಷಯವನ್ನು ಆರಿಸಿಕೊಳ್ಳಲಾಗಿದೆ.
2. ಸ್ವತಂತ್ರತಾ ಕಾ ಮಂತ್ರ: ವಂದೇ ಮಾತರಂ (ಸ್ವಾತಂತ್ರ್ಯದ ಮಂತ್ರ: ವಂದೇ ಮಾತರಂ).
3. ಸಮೃದ್ಧಿ ಕಾ ಮಂತ್ರ: ಆತ್ಮನಿರ್ಭರ ಭಾರತ (ಸಮೃದ್ಧಿಯ ಮಂತ್ರ: ಸ್ವಾವಲಂಬಿ ಭಾರತ).

➤ ಕರ್ನಾಟಕದ ಸ್ತಬ್ಧಚಿತ್ರ: ಸಿರಿಧಾನ್ಯದಿಂದ ಮೈಕ್ರೋಚಿಪ್ ವರೆಗೆ: ಕರ್ನಾಟಕ ರಾಜ್ಯವು ಈ ಬಾರಿ "Millet to Microchip" ಎಂಬ ವಿಶೇಷ ಪರಿಕಲ್ಪನೆಯ ಸ್ತಬ್ಧಚಿತ್ರವನ್ನು ಪ್ರದರ್ಶಿಸಿದೆ. ಇದು ರಾಜ್ಯದ ಕೃಷಿ ಸಮೃದ್ಧಿ (ಸಿರಿಧಾನ್ಯ) ಮತ್ತು ಜಾಗತಿಕ ಮಟ್ಟದ ತಂತ್ರಜ್ಞಾನ ಸಾಧನೆಯನ್ನು (ಸೆಮಿಕಂಡಕ್ಟರ್ ಮತ್ತು ಮೈಕ್ರೋಚಿಪ್) ಸಮತೋಲಿತವಾಗಿ ಬಿಂಬಿಸುತ್ತದೆ.

➤ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸುವ ದೃಷ್ಟಿಯಿಂದ, ಈ ಬಾರಿ ಯುರೋಪಿಯನ್ ಒಕ್ಕೂಟದ (EU) ಇಬ್ಬರು ಗಣ್ಯರನ್ನು ಆಹ್ವಾನಿಸಲಾಗಿತ್ತು: ಆಂಟೋನಿಯೊ ಕೋಸ್ಟಾ (António Costa): ಯುರೋಪಿಯನ್ ಕೌನ್ಸಿಲ್‌ನ ಅಧ್ಯಕ್ಷರು ಮತ್ತು ಉರ್ಸುಲಾ ವಾನ್ ಡೆರ್ ಲೇಯನ್ (Ursula von der Leyen): ಯುರೋಪಿಯನ್ ಕಮಿಷನ್‌ನ ಅಧ್ಯಕ್ಷರು. ಈ ಇಬ್ಬರು ನಾಯಕರು ಭಾರತಕ್ಕೆ ಆಗಮಿಸಿದಾಗ 'ಗಾರ್ಡ್ ಆಫ್ ಆನರ್' ಗೌರವವನ್ನು ಸ್ವೀಕರಿಸಿದರು ಮತ್ತು ಜನವರಿ 27 ರಂದು ಭಾರತ-ಇಯು (EU-India) ನಡುವಿನ ಸಮಗ್ರ ಕಾರ್ಯತಂತ್ರದ ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳುವ ನಿರೀಕ್ಷೆಯಿದೆ.

➤ ಮಹಿಳಾ ಸಬಲೀಕರಣ: ಸಿಆರ್‌ಪಿಎಫ್ (CRPF) ತುಕಡಿಯ ನೇತೃತ್ವವನ್ನು 26 ವರ್ಷದ ಅಸಿಸ್ಟೆಂಟ್ ಕಮಾಂಡಂಟ್ ಸಿಮ್ರನ್ ಬಾಲಾ ವಹಿಸಿದ್ದರು. 140ಕ್ಕೂ ಹೆಚ್ಚು ಪುರುಷ ಸಿಬ್ಬಂದಿಗಳ ತಂಡವನ್ನು ಮಹಿಳಾ ಅಧಿಕಾರಿಯೊಬ್ಬರು ಮುನ್ನಡೆಸಿದ್ದು ಇದೇ ಮೊದಲ ಬಾರಿಯಾಗಿದೆ.

**➤ ಸೇನಾ ಪ್ರದರ್ಶನ ಮತ್ತು ಹೊಸ ಆಕರ್ಷಣೆಗಳು: ಪಥಸಂಚಲನದಲ್ಲಿ ಭಾರತವು ತನ್ನ ರಕ್ಷಣಾ ಸಾಮರ್ಥ್ಯವನ್ನು ಜಗತ್ತಿಗೆ ಅನಾವರಣಗೊಳಿಸಿತು**:

=> ಆಪರೇಷನ್ ಸಿಂಧೂರ್ ಸ್ತಬ್ಧಚಿತ್ರ: ಕಳೆದ ಮೇ ತಿಂಗಳಲ್ಲಿ ನಡೆದ ಕಾರ್ಯಾಚರಣೆಯ ಯಶಸ್ಸನ್ನು ಸಾರುವ ತ್ರಿ-ಸೇವಾ ಸ್ತಬ್ಧಚಿತ್ರವು ಪ್ರಮುಖ ಆಕರ್ಷಣೆಯಾಗಿತ್ತು.

=> ಹೊಸ ತುಕಡಿಗಳು: ಇದೇ ಮೊದಲ ಬಾರಿಗೆ 'ಭೈರವ್ ಲೈಟ್ ಕಮಾಂಡೋ ಬೆಟಾಲಿಯನ್' ಮತ್ತು 'ಶಕ್ತಿಬಾನ್ ರೆಜಿಮೆಂಟ್' (ಡ್ರೋನ್ ಮತ್ತು ಕೌಂಟರ್-ಡ್ರೋನ್ ವ್ಯವಸ್ಥೆ ಹೊಂದಿರುವ ಪಡೆ) ಭಾಗವಹಿಸಿದ್ದವು.

=> ಶಸ್ತ್ರಾಸ್ತ್ರಗಳು: ಬ್ರಹ್ಮೋಸ್, ಆಕಾಶ್ ಕ್ಷಿಪಣಿ ವ್ಯವಸ್ಥೆಗಳು, 'ಸೂರ್ಯಾಸ್ತ್ರ' ರಾಕೆಟ್ ಲಾಂಚರ್ ಮತ್ತು ಅರ್ಜುನ್ ಬ್ಯಾಟಲ್ ಟ್ಯಾಂಕ್‌ಗಳ ಪ್ರದರ್ಶನ ನಡೆಯಿತು.

=> ಹಿಮ್ ಯೋಧ ದಳ: ಹಿಮಾಲಯ ಮತ್ತು ಸಿಯಾಚಿನ್‌ನಂತಹ ಕಠಿಣ ಭೂಭಾಗಗಳಲ್ಲಿ ಕಾರ್ಯನಿರ್ವಹಿಸುವ ವಿಶೇಷ ಪಡೆಯಾದ 'ಹಿಮ್ ಯೋಧ ದಳ' ವಿಶೇಷ ಆಕರ್ಷಣೆಯಾಗಿತ್ತು. ಇದರಲ್ಲಿ ಬ್ಯಾಕ್ಟ್ರಿಯನ್ ಒಂಟೆಗಳು, ಝೂನ್ಸ್ಕರ್ ಕುದುರೆಗಳು, ತರಬೇತಿ ಪಡೆದ ಬ್ಲಾಕ್ ಕೈಟ್ ಪಕ್ಷಿಗಳು ಮತ್ತು ಭಾರತೀಯ ತಳಿಯ ನಾಯಿಗಳು ಭಾಗವಹಿಸಿದ್ದವು.

➤ ಕರ್ತವ್ಯ ಪಥ: ಹಿಂದೆ 'ರಾಜಪಥ್' (ಬ್ರಿಟಿಷರ ಕಾಲದ 'ಕಿಂಗ್ಸ್ ವೇ') ಎಂದು ಕರೆಯಲ್ಪಡುತ್ತಿದ್ದ ಮಾರ್ಗವನ್ನು 2022ರಲ್ಲಿ 'ಕರ್ತವ್ಯ ಪಥ' ಎಂದು ಮರುನಾಮಕರಣ ಮಾಡಲಾಯಿತು. ಇದು ವಸಾಹತುಶಾಹಿ ಗುರುತಿನಿಂದ ಮುಕ್ತವಾಗಿ, ಪ್ರಜೆಗಳ ಜವಾಬ್ದಾರಿ ಮತ್ತು ಸಂವಿಧಾನದ 51A ವಿಧಿಯಡಿ ಇರುವ 'ಮೂಲಭೂತ ಕರ್ತವ್ಯ'ಗಳನ್ನು ಬಿಂಬಿಸುತ್ತದೆ.ಇದು ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್‌ವರೆಗೆ ಸಂಪರ್ಕ ಕಲ್ಪಿಸುವ ಸೆಂಟ್ರಲ್ ವಿಸ್ಟಾ ಯೋಜನೆಯ ಪ್ರಮುಖ ಭಾಗವಾಗಿದೆ.

➤ ಸಾಂಸ್ಕೃತಿಕ ವೈಭವ : ದೇಶದ ವಿವಿಧ ರಾಜ್ಯಗಳಿಂದ ಸುಮಾರು 2,500 ಕಲಾವಿದರು ಸಾಂಸ್ಕೃತಿಕ ಪ್ರದರ್ಶನ ನೀಡಿದರು. ಸುಮಾರು 10,000 ವಿಶೇಷ ಅತಿಥಿಗಳನ್ನು (ವಿವಿಧ ಕ್ಷೇತ್ರಗಳ ಸಾಧಕರು) ಕಾರ್ಯಕ್ರಮ ವೀಕ್ಷಿಸಲು ಆಹ್ವಾನಿಸಲಾಗಿತ್ತು.

## ಪಂಜಾಬ್‌ನಲ್ಲಿ 'ಮುಖ್ಯಮಂತ್ರಿ ಸೆಹತ್ ಯೋಜನೆ' ಜಾರಿ




➤ ಪಂಜಾಬ್‌ನ ಆಮ್ ಆದ್ಮಿ ಪಾರ್ಟಿ (AAP) ಸರ್ಕಾರವು ರಾಜ್ಯದ ಜನತೆಗೆ ಅತ್ಯಂತ ಮಹತ್ವಾಕಾಂಕ್ಷೆಯ ಆರೋಗ್ಯ ವಿಮಾ ಯೋಜನೆಯಾದ 'ಮುಖ್ಯಮಂತ್ರಿ ಸೆಹತ್ ಯೋಜನೆ' (Mukh Mantri Sehat Yojana) ಅನ್ನು ಅಧಿಕೃತವಾಗಿ ಚಾಲನೆಗೊಳಿಸಿದೆ. ಈ ಯೋಜನೆಯು ದೇಶದ ಅತಿದೊಡ್ಡ ಸಾರ್ವಜನಿಕ ಆರೋಗ್ಯ ಯೋಜನೆಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿದೆ. ರಾಜ್ಯದ ಪ್ರತಿ ಕುಟುಂಬಕ್ಕೆ ವಾರ್ಷಿಕ 10 ಲಕ್ಷ ರೂಪಾಯಿಗಳವರೆಗೆ ಸಂಪೂರ್ಣ ಉಚಿತ ಮತ್ತು ನಗದು ರಹಿತ (Cashless) ವೈದ್ಯಕೀಯ ಚಿಕಿತ್ಸೆ ದೊರೆಯಲಿದೆ.

➤ ಈ ಯೋಜನೆಯ ವಿಶೇಷವೆಂದರೆ ಇಲ್ಲಿ ಯಾವುದೇ ಆದಾಯ ಮಿತಿ ಅಥವಾ ಅರ್ಹತಾ ಮಾನದಂಡಗಳಿಲ್ಲ. ಪಂಜಾಬ್‌ನ ಎಲ್ಲಾ 65 ಲಕ್ಷ ಕುಟುಂಬಗಳು (ಸುಮಾರು 3 ಕೋಟಿ ಜನರು) ಇದರ ಪ್ರಯೋಜನ ಪಡೆಯಲಿದ್ದಾರೆ. ಸರ್ಕಾರಿ ಆಸ್ಪತ್ರೆಗಳು ಮಾತ್ರವಲ್ಲದೆ, ನೋಂದಾಯಿತ ಸುಮಾರು 850 ಖಾಸಗಿ ಆಸ್ಪತ್ರೆಗಳಲ್ಲಿಯೂ ಈ ಚಿಕಿತ್ಸೆ ಲಭ್ಯವಿದೆ.

➤ ಈ ಯೋಜನೆಯಡಿ ಸುಮಾರು 2,350ಕ್ಕೂ ಹೆಚ್ಚು ವೈದ್ಯಕೀಯ ಚಿಕಿತ್ಸೆಗಳನ್ನು ಸೇರಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ:
- ಕ್ಯಾನ್ಸರ್ ಚಿಕಿತ್ಸೆ (Oncology)
- ಹೃದಯ ಸಂಬಂಧಿ ಕಾಯಿಲೆಗಳು (Cardiology)
- ಮೂತ್ರಪಿಂಡ ಚಿಕಿತ್ಸೆ (Nephrology)
- ಮೂಳೆ ಮತ್ತು ನರರೋಗ ಸಮಸ್ಯೆಗಳು.
- ಅಂಗಾಂಗ ಕಸಿ (Organ Transplant) ನಂತಹ ದುಬಾರಿ ಚಿಕಿತ್ಸೆಗಳು ಲಭ್ಯವಿವೆ.

➤ ಅರ್ಹತೆ ಮತ್ತು ನೋಂದಣಿ: ಪಂಜಾಬ್ ನಿವಾಸಿಯಾಗಿದ್ದು, ಆಧಾರ್ ಕಾರ್ಡ್ ಅಥವಾ ವೋಟರ್ ಐಡಿ ಹೊಂದಿರುವ ಯಾರಾದರೂ ಈ ಯೋಜನೆಯ ಲಾಭ ಪಡೆಯಬಹುದು. ಸರ್ಕಾರಿ ನೌಕರರು ಮತ್ತು ನಿವೃತ್ತ ವೇತನದಾರರನ್ನು (Pensioners) ಕೂಡ ಈ ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ಬಳಕೆದಾರರಿಗೆ ಹೆಲ್ತ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದ್ದು, ಇವುಗಳನ್ನು ಕಾಮನ್ ಸರ್ವಿಸ್ ಸೆಂಟರ್ (CSC) ಅಥವಾ ಆನ್‌ಲೈನ್ ಮೂಲಕ ಪಡೆಯಬಹುದು.

➤ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮತ್ತು ಆಪ್ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ಮೊಹಾಲಿಯಲ್ಲಿ ಈ ಯೋಜನೆಗೆ ಚಾಲನೆ ನೀಡಿದರು. ಉಚಿತ

ಶಿಕ್ಷಣ, ಉಚಿತ ವಿದ್ಯುತ್ ಮತ್ತು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ನಂತರ, "ಆರೋಗ್ಯ ರಕ್ಷಣೆ"ಯನ್ನು ಪ್ರತಿಯೊಬ್ಬ ನಾಗರಿಕನ ಹಕ್ಕನ್ನಾಗಿ ಮಾಡುವುದು ಈ ಯೋಜನೆಯ ಮೂಲ ಉದ್ದೇಶವಾಗಿದೆ.

## 70 ಸಶಸ್ತ್ರ ಪಡೆ ಸಿಬ್ಬಂದಿಗೆ ಶೌರ್ಯ ಪ್ರಶಸ್ತಿ ಘೋಷಣೆ




➤ ಭಾರತದ 77ನೇ ಗಣರಾಜ್ಯೋತ್ಸವದ ಪೂರ್ವಭಾವಿಯಾಗಿ, ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಭಾರತೀಯ ಸಶಸ್ತ್ರ ಪಡೆಯ 70 ಸಿಬ್ಬಂದಿಗೆ ಶೌರ್ಯ ಪ್ರಶಸ್ತಿಗಳನ್ನು ಅನುಮೋದಿಸಿದ್ದಾರೆ. ಇವುಗಳಲ್ಲಿ ಆರು ಪ್ರಶಸ್ತಿಗಳನ್ನು ಮರಣೋತ್ತರವಾಗಿ ನೀಡಲಾಗುತ್ತಿದೆ. ದೇಶದ ಸಮಗ್ರತೆ ಮತ್ತು ಭದ್ರತೆಯನ್ನು ಕಾಯುವಲ್ಲಿ ಸೈನಿಕರು ತೋರಿದ ಅಪ್ರತಿಮ ಧೈರ್ಯ ಮತ್ತು ಬಲಿದಾನವನ್ನು ಈ ಪ್ರಶಸ್ತಿಗಳು ಗೌರವಿಸುತ್ತವೆ.

**➤ 70 ಶೌರ್ಯ ಪ್ರಶಸ್ತಿಗಳ ವರ್ಗೀಕರಣ ಹೀಗಿದೆ:**

- ಅಶೋಕ ಚಕ್ರ: 01
- ಕೀರ್ತಿ ಚಕ್ರ: 03
- ಶೌರ್ಯ ಚಕ್ರ: 13 (ಒಬ್ಬರಿಗೆ ಮರಣೋತ್ತರ)
- ಸೇನಾ ಪದಕಕ್ಕೆ ಬಾರ್ (ಶೌರ್ಯ): 01
- ಸೇನಾ ಪದಕ (ಶೌರ್ಯ): 44 (ನಾಲ್ವರಿಗೆ ಮರಣೋತ್ತರ)
- ನವ ಸೇನಾ ಪದಕ (ಶೌರ್ಯ): 06
- ವಾಯು ಸೇನಾ ಪದಕ (ಶೌರ್ಯ): 02

**➤ ಪ್ರಮುಖ ಪುರಸ್ಕೃತರು:**

1. ಅಶೋಕ ಚಕ್ರ: ಭಾರತದ ಅತ್ಯುನ್ನತ ಶಾಂತಿಕಾಲದ ಶೌರ್ಯ ಪ್ರಶಸ್ತಿಯಾದ 'ಅಶೋಕ ಚಕ್ರ'ವನ್ನು ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರಿಗೆ ನೀಡಲಾಗಿದೆ. ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ISS) ಭೇಟಿ ನೀಡಿದ ಮೊದಲ ಭಾರತೀಯ ಎಂಬ ಐತಿಹಾಸಿಕ ಸಾಧನೆಗಾಗಿ ಇವರನ್ನು ಗೌರವಿಸಲಾಗಿದೆ.
2. ಕೀರ್ತಿ ಚಕ್ರ: ಈ ಪ್ರಶಸ್ತಿಯನ್ನು ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್, ಮೇಜರ್ ಅರ್ಷದೀಪ್ ಸಿಂಗ್ ಮತ್ತು ನಾಯಬ್ ಸುಬೇದಾರ್ ಡೋಲೇಶ್ವರ್ ಸುಬ್ಬಾ ಅವರಿಗೆ ಘೋಷಿಸಲಾಗಿದೆ.
3. ಉತ್ತಮ ಯುದ್ಧ ಸೇವಾ ಪದಕ: ಅಪ್ರತಿಮ ನಾಯಕತ್ವ ಮತ್ತು ಸೇವೆಗಾಗಿ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಥ್ ಅವರಿಗೆ ಈ ಪದಕ ನೀಡಲಾಗಿದೆ.

ಶೌರ್ಯ ಪ್ರಶಸ್ತಿಗಳನ್ನು ವರ್ಷಕ್ಕೆ ಎರಡು ಬಾರಿ (ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ) ಘೋಷಿಸಲಾಗುತ್ತದೆ.

➤ ಶೌರ್ಯ ಪ್ರಶಸ್ತಿಗಳಲ್ಲದೆ, ರಾಷ್ಟ್ರಪತಿಗಳು 301 ಇತರ ಮಿಲಿಟರಿ ಗೌರವಗಳನ್ನು ಅನುಮೋದಿಸಿದ್ದಾರೆ. ಇದರಲ್ಲಿ ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಮತ್ತು ಯುದ್ಧ ಸೇವಾ ಪದಕಗಳು ಸೇರಿವೆ. ಅಲ್ಲದೆ, ಆಪರೇಷನ್ ರಕ್ಷಕ್, ಮೇಘದೂತ್ ಮತ್ತು ರೈನೋ ಕಾರ್ಯಾಚರಣೆಗಳಲ್ಲಿನ ಸೇವೆಗಾಗಿ 98 ಸಿಬ್ಬಂದಿಗೆ 'ಮೆನ್ಷನ್-ಇನ್-ಡಿಸ್ಪ್ಯಾಚಸ್' ಗೌರವ ನೀಡಲಾಗಿದೆ.

## ಭಾರತೀಯ ಕ್ರಿಕೆಟ್ ಆಡಳಿತದ ದಿಗ್ಗಜ ಇಂದರ್ ಜಿತ್ ಸಿಂಗ್ ಬಿಂದ್ರಾ ನಿಧನ



➤ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (BCCI) ಮಾಜಿ ಅಧ್ಯಕ್ಷ ಮತ್ತು ಖ್ಯಾತ ಕ್ರಿಕೆಟ್ ಆಡಳಿತಗಾರ ಇಂದರ್ ಜಿತ್ ಸಿಂಗ್ (ಐ.ಎಸ್.) ಬಿಂದ್ರಾ ಅವರು ಭಾನುವಾರ ನವದೆಹಲಿಯಲ್ಲಿ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು. ಭಾರತೀಯ ಕ್ರಿಕೆಟ್‌ನ ವಾಣಿಜ್ಯೀಕರಣ ಮತ್ತು ಆಧುನೀಕರಣದಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದು, ಬಿಸಿಸಿಐನ ವಾಣಿಜ್ಯೀಕರಣದ ಪಿತಾಮಹ ಎಂದು ಐ.ಎಸ್. ಬಿಂದ್ರಾ ಅವರನ್ನು ಕರೆಯಲಾಗುತ್ತದೆ.

➤ ಐ.ಎಸ್. ಬಿಂದ್ರಾ ಅವರು 1993 ರಿಂದ 1996 ರವರೆಗೆ ಬಿಸಿಸಿಐ (BCCI) ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.ಅವರು ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ (1978 ರಿಂದ 2014) ಪಂಜಾಬ್ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಅವರ ಗೌರವಾರ್ಥವಾಗಿ ಮೊಹಾಲಿಯ ಪಿಸಿಎ ಕ್ರೀಡಾಂಗಣವನ್ನು 'ಐ.ಎಸ್. ಬಿಂದ್ರಾ ಸ್ಟೇಡಿಯಂ' ಎಂದು 2015 ರಲ್ಲಿ ಮರುನಾಮಕರಣ ಮಾಡಲಾಗಿತ್ತು.

➤ 1987 ರ ಏಕದಿನ ವಿಶ್ವಕಪ್ ಅನ್ನು ಭಾರತ ಮತ್ತು ಪಾಕಿಸ್ತಾನದಲ್ಲಿ ಆಯೋಜಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಇದು ಇಂಗ್ಲೆಂಡ್‌ನ ಹೊರಗೆ ನಡೆದ ಮೊದಲ ವಿಶ್ವಕಪ್ ಆಗಿತ್ತು.

➤ 1994 ರಲ್ಲಿ ಭಾರತೀಯ ಕ್ರಿಕೆಟ್ ಪ್ರಸಾರದಲ್ಲಿ ದೂರದರ್ಶನದ ಏಕಸ್ವಾಮ್ಯವನ್ನು ಪ್ರಶ್ನಿಸಿ, ESPN ಮತ್ತು TWI ನಂತಹ ಖಾಸಗಿ ವಾಹಿನಿಗಳಿಗೆ ದಾರಿ ಮಾಡಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಇದು ಭಾರತೀಯ ಕ್ರಿಕೆಟ್‌ನ ಆರ್ಥಿಕ ಬೆಳವಣಿಗೆಗೆ ಬುನಾದಿ ಹಾಕಿತು. ಇವರು ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ICC) ಪ್ರಧಾನ ಸಲಹೆಗಾರರಾಗಿಯೂ ಕಾರ್ಯನಿರ್ವಹಿಸಿದ್ದರು.

➤ ಐಸಿಸಿ ಅಧ್ಯಕ್ಷರಾದ ಜಯ್ ಶಾ ಅವರು ಬಿಂದ್ರಾ ಅವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದು, "ಬಿಂದ್ರಾ ಅವರು ಭಾರತೀಯ ಕ್ರಿಕೆಟ್ ಆಡಳಿತದ ದಿಗ್ಗಜರಾಗಿದ್ದರು, ಅವರ ಪ್ರಯತ್ನಗಳು ಕ್ರೀಡೆಯ ಮೇಲೆ ಶಾಶ್ವತ ಪ್ರಭಾವ ಬೀರಿವೆ" ಎಂದು ಸ್ಮರಿಸಿದ್ದಾರೆ.

## ಅಂತರಾಷ್ಟ್ರೀಯ ಕಸ್ಟಮ್ಸ್ ದಿನ 2026




➤ ಪ್ರತಿ ವರ್ಷ ಜನವರಿ 26 ರಂದು ಅಂತರಾಷ್ಟ್ರೀಯ ಕಸ್ಟಮ್ಸ್ ದಿನವನ್ನು (ICD) ಆಚರಿಸಲಾಗುತ್ತದೆ. ಜಾಗತಿಕ ವ್ಯಾಪಾರವನ್ನು ಸುಗಮಗೊಳಿಸುವಲ್ಲಿ, ಗಡಿ ಭದ್ರತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಮತ್ತು ಆರ್ಥಿಕ ಬೆಳವಣಿಗೆಯನ್ನು ಬೆಂಬಲಿಸುವಲ್ಲಿ ಕಸ್ಟಮ್ಸ್ ಅಧಿಕಾರಿಗಳ ಪಾತ್ರವನ್ನು ಈ ದಿನವು ಗೌರವಿಸುತ್ತದೆ.

ವಿಶ್ವ ಕಸ್ಟಮ್ಸ್ ಸಂಸ್ಥೆಯು 2026ರ ಸಾಲಿನ ಥೀಮ್ : "Customs protecting society through vigilance and commitment." (ಜಾಗರೂಕತೆ ಮತ್ತು ಬದ್ಧತೆಯ ಮೂಲಕ ಸಮಾಜವನ್ನು ರಕ್ಷಿಸುವ ಕಸ್ಟಮ್ಸ್)

ಈ ವರ್ಷದ ಥೀಮ್ ಇ-ಕಾಮರ್ಸ್, ಗಡಿಯಾಚೆಗಿನ ಅಪರಾಧಗಳು ಮತ್ತು ಪೂರೈಕೆ ಸರಪಳಿ ಅಪಾಯಗಳಂತಹ ಉದಯೋನ್ಮುಖ ಸವಾಲುಗಳಿಗೆ ಸ್ಪಂದಿಸುವಲ್ಲಿ ನಾವೀನ್ಯತೆ ಮತ್ತು ಡಿಜಿಟಲ್ ರೂಪಾಂತರದ ಮೇಲೆ ಕೇಂದ್ರೀಕರಿಸುತ್ತದೆ.

➤ ಅಂತರಾಷ್ಟ್ರೀಯ ಕಸ್ಟಮ್ಸ್ ದಿನದ ಇತಿಹಾಸವು 1953 ರಿಂದ ಪ್ರಾರಂಭವಾಗುತ್ತದೆ. ಬೆಲ್ಜಿಯಂನ ಬ್ರಸೆಲ್ಸ್‌ನಲ್ಲಿ 'ಕಸ್ಟಮ್ಸ್ ಸಹಕಾರ ಮಂಡಳಿ'ಯ (Customs Cooperation Council - CCC) ಮೊದಲ ಅಧಿವೇಶನ ನಡೆದ ನೆನಪಿಗಾಗಿ ಈ ದಿನವನ್ನು ಆಯ್ಕೆ ಮಾಡಲಾಯಿತು. ಇಂದು ಈ ಸಂಸ್ಥೆಯನ್ನು ವಿಶ್ವ ಕಸ್ಟಮ್ಸ್ ಸಂಸ್ಥೆ (World Customs Organization - WCO) ಎಂದು

ಕರೆಯಲಾಗುತ್ತದೆ. ಇದರಲ್ಲಿ ಭಾರತವೂ ಸೇರಿದಂತೆ 185 ಸದಸ್ಯ ರಾಷ್ಟ್ರಗಳಿವೆ.

➤ **ಪ್ರಮುಖ ಮಹತ್ವಗಳು:**

=> ಗಡಿ ರಕ್ಷಣೆ: ಕಸ್ಟಮ್ಸ್ ಅಧಿಕಾರಿಗಳು ದೇಶದ ಗಡಿಗಳಲ್ಲಿ ರಕ್ಷಣೆಯ ಮೊದಲ ಸಾಲಿನಂತೆ ಕಾರ್ಯನಿರ್ವಹಿಸುತ್ತಾರೆ. ಅಕ್ರಮ ಸರಕುಗಳ ಸಾಗಾಣಿಕೆಯನ್ನು ತಡೆದು ಸಮಾಜದ ಸುರಕ್ಷತೆಯನ್ನು ಕಾಪಾಡುತ್ತಾರೆ.

=> ಆದಾಯ ಸಂಗ್ರಹಣೆ: ಆಮದು ಮತ್ತು ರಫ್ತು ಸುಂಕಗಳ ಮೂಲಕ ಸರ್ಕಾರದ ಆದಾಯವನ್ನು ಹೆಚ್ಚಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸುತ್ತಾರೆ.

=> ಜಾಗತಿಕ ವ್ಯಾಪಾರ ಸಂಪರ್ಕ: ಗಡಿಗಳು ರಾಷ್ಟ್ರಗಳನ್ನು ವಿಭಜಿಸಿದರೆ, ಕಸ್ಟಮ್ಸ್ ಆಡಳಿತಗಳು ಸುರಕ್ಷಿತ ವ್ಯಾಪಾರದ ಮೂಲಕ ರಾಷ್ಟ್ರಗಳನ್ನು ಪರಸ್ಪರ ಸಂಪರ್ಕಿಸುತ್ತವೆ.

➤ ಕಸ್ಟಮ್ಸ್ ಆಡಳಿತದ ಪ್ರಮುಖ ಕಾರ್ಯಗಳು:

=> ಕಳ್ಳಸಾಗಣೆ ತಡೆಗಟ್ಟುವಿಕೆ: ಮಾದಕ ದ್ರವ್ಯ, ಆಯುಧಗಳು ಮತ್ತು ಅಕ್ರಮ ಸರಕುಗಳ ಸಾಗಾಟವನ್ನು ಪತ್ತೆ ಹಚ್ಚುವುದು.

=> ವ್ಯಾಪಾರ ಸರಳೀಕರಣ: ರಫ್ತು ಮತ್ತು ಆಮದು ಪ್ರಕ್ರಿಯೆಗಳನ್ನು ಸುಗಮಗೊಳಿಸುವ ಮೂಲಕ ಅಂತರಾಷ್ಟ್ರೀಯ ವ್ಯಾಪಾರಕ್ಕೆ ವೇಗ ನೀಡುವುದು.

=> ಡಿಜಿಟಲ್ ಅಳವಡಿಕೆ: ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ವ್ಯಾಪಾರ ಪ್ರಕ್ರಿಯೆಗಳನ್ನು ಪಾರದರ್ಶಕಗೊಳಿಸುವುದು.

## ಪದ್ಮ ಪ್ರಶಸ್ತಿಗಳು 2026 : ಕರ್ನಾಟಕದ 8 ಮಂದಿ ಸೇರಿ ದೇಶಾದ್ಯಂತ ಒಟ್ಟು 131 ಸಾಧಕರಿಗೆ ಪದ್ಮ ಪ್ರಶಸ್ತಿ ಘೋಷಣೆ




* ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮ ಪ್ರಶಸ್ತಿಗಳನ್ನು 2026ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಘೋಷಿಸಲಾಗಿದೆ. ಕಲೆ, ಸಮಾಜ ಸೇವೆ, ಸಾರ್ವಜನಿಕ ವ್ಯವಹಾರಗಳು, ವಿಜ್ಞಾನ ಮತ್ತು ಇಂಜಿನಿಯರಿಂಗ್, ವ್ಯಾಪಾರ ಮತ್ತು ಕೈಗಾರಿಕೆ, ವೈದ್ಯಕೀಯ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ, ನಾಗರಿಕ ಸೇವೆ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ **ಸಾಧನೆ ಮಾಡಿದವರಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ.**

1.ಪದ್ಮ ವಿಭೂಷಣ: ಅಸಾಧಾರಣ ಮತ್ತು ವಿಶಿಷ್ಟ ಸೇವೆಗಾಗಿ.

2.ಪದ್ಮ ಭೂಷಣ: ಉನ್ನತ ಮಟ್ಟದ ವಿಶಿಷ್ಟ ಸೇವೆಗಾಗಿ.

3.ಪದ್ಮ ಶ್ರೀ: ಯಾವುದೇ ಕ್ಷೇತ್ರದಲ್ಲಿ ವಿಶಿಷ್ಟ ಸೇವೆಗಾಗಿ.

* **ಈ ವರ್ಷ ರಾಷ್ಟ್ರಪತಿಗಳು ಒಟ್ಟು 131 ಪದ್ಮ ಪ್ರಶಸ್ತಿಗಳನ್ನು ಅನುಮೋದಿಸಿದ್ದಾರೆ**

-ಪದ್ಮ ವಿಭೂಷಣ:05

-ಪದ್ಮ ಭೂಷಣ:13

-ಪದ್ಮ ಶ್ರೀ:113

-ಮಹಿಳಾ ಪುರಸ್ಕೃತರು:19

-ಮರಣೋತ್ತರ ಪ್ರಶಸ್ತಿಗಳು:16

-ವಿದೇಶಿಯರು: 06

*** ಪದ್ಮ ವಿಭೂಷಣ ವಿಜೇತರು:**

1.ಶ್ರೀ ಧರ್ಮೇಂದ್ರ ಸಿಂಗ್ ಡಿಯೋಲ್ (ಮರಣೋತ್ತರ) - ಕಲೆ - ಮಹಾರಾಷ್ಟ್ರ

2.ಶ್ರೀ ಕೆ. ಟಿ. ಥಾಮಸ್ಸಾರ್ವಜನಿಕ - ವ್ಯವಹಾರಗಳು - ಕೇರಳ

3.ಕುಮಾರಿ ಎನ್. ರಾಜಂ - ಕಲೆ - ಉತ್ತರ ಪ್ರದೇಶ

4.ಶ್ರೀ ಪಿ. ನಾರಾಯಣನ್ - ಸಾಹಿತ್ಯ ಮತ್ತು ಶಿಕ್ಷಣ- ಕೇರಳ

5.ಶ್ರೀ ವಿ. ಎಸ್. ಅಚ್ಯುತಾನಂದನ್ (ಮರಣೋತ್ತರ) - ಸಾರ್ವಜನಿಕ ವ್ಯವಹಾರಗಳು - ಕೇರಳ

*** ಪದ್ಮಭೂಷಣ ಪಡೆದವರ ಪಟ್ಟಿ :**

ಅಲ್ಕಾ ಯಾಗ್ನಿಕ್- ಕಲೆ ಮಹಾರಾಷ್ಟ್ರ

ಭಗತ್ ಸಿಂಗ್ ಕೋಶಿಯಾರಿ- ಸಾರ್ವಜನಿಕ ವ್ಯವಹಾರಗಳು ಉತ್ತರಾಖಂಡ

ಕಳ್ಳಿಪಟ್ಟಿ ರಾಮಸಾಮಿ ಪಳನಿಸ್ವಾಮಿ- ವೈದ್ಯಕೀಯ ತಮಿಳುನಾಡು

ಮಮ್ಮುಟ್ಟಿ - ಕಲೆ ಕೇರಳ

ಡಾ. ನೋರಿ ದತ್ತಾತ್ರೇಯುಡು- ವೈದ್ಯಕೀಯ ಅಮೇರಿಕಾ (USA)

ಪಿಯೂಷ್ ಪಾಂಡೆ (ಮರಣೋತ್ತರ)- ಕಲೆ ಮಹಾರಾಷ್ಟ್ರ

ಎಸ್. ಕೆ. ಎಂ. ಮೈಲಾನಂದನ್ - ಸಮಾಜ ಸೇವೆ ತಮಿಳುನಾಡು

ಶತಾವಧಾನಿ ಆರ್. ಗಣೇಶ್ - ಕಲೆ ಕರ್ನಾಟಕ

ಶಿಬು ಸೊರೆನ್ (ಮರಣೋತ್ತರ) - ಸಾರ್ವಜನಿಕ ವ್ಯವಹಾರಗಳು ಜಾರ್ಖಂಡ್

ಉದಯ್ ಕೋಟಕ್ - ವಾಣಿಜ್ಯ ಮತ್ತು ಕೈಗಾರಿಕೆ ಮಹಾರಾಷ್ಟ್ರ

ವಿ. ಕೆ. ಮಲ್ಹೋತ್ರಾ (ಮರಣೋತ್ತರ)- ಸಾರ್ವಜನಿಕ ವ್ಯವಹಾರಗಳು ದೆಹಲಿ

ವೆಲ್ಲಪ್ಪಳ್ಳಿ ನಟೇಸನ್- ಸಾರ್ವಜನಿಕ ವ್ಯವಹಾರಗಳು ಕೇರಳ

ವಿಜಯ ಅಮೃತ್‌ರಾಜ್- ಕ್ರೀಡೆ ಅಮೇರಿಕಾ (USA)

*** ಪದ್ಮಶ್ರೀ ಪ್ರಶಸ್ತಿ ಪಡೆದ ಸಾಧಕರು :**

ಎ. ಇ. ಮುತ್ತುನಾಯಗಮ್, ಅನಿಲ್ ಕುಮಾರ್ ರಸ್ತೋಗಿ, ಅಂಕೇಗೌಡ ಎಂ., ಆರ್ಮಿಡಾ ಫರ್ನಾಂಡಿಸ್, ಅರವಿಂದ್ ವೈದ್ಯ, ಅಶೋಕ್ ಖಾಡೆ, ಅಶೋಕ್ ಕುಮಾರ್ ಸಿಂಗ್, ಅಶೋಕ್ ಕುಮಾರ್ ಹಲ್ದಾರ್, ಬಲದೇವ್ ಸಿಂಗ್, ಭಗವಾನ್‌ದಾಸ್ ರೈಕ್ವಾರ್, ಭರತ್ ಸಿಂಗ್ ಭಾರತಿ, ಭಿಕ್ಯಾ ಲಡಕ್ಯಾ ದಿಂಡಾ, ವಿಶ್ವ ಬಂಧು, ಬ್ರಿಜ್ ಲಾಲ್ ಭಟ್, ಬುದ್ರ ರಶ್ಮಿ ಮಣಿ, ಡಾ. ಬುಧ್ರಿ ಟಾಟಿ, ಚಂದ್ರಮೌಳಿ ಗಡ್ಡಮನುಗು, ಚರಣ್ ಹೆಂಬ್ರಮ್, ಚಿರಂಜಿ ಲಾಲ್ ಯಾದವ್, ದೀಪಿಕಾ ರೆಡ್ಡಿ, ಧಾರ್ಮಿಕ್‌ಲಾಲ್ ಚುನಿಲಾಲ್, ಗಡ್ಡೆ ಬಾಬು ರಾಜೇಂದ್ರ ಪ್ರಸಾದ್,ಗಫ್ರುದ್ದೀನ್ ಮೇವಾಟಿ ಜೋಗಿ, ಗಂಭೀರ್ ಸಿಂಗ್ ಯೋನ್ಜೋನ್, ಗರಿಮೆಲ್ಲ ಬಾಲಕೃಷ್ಣ ಪ್ರಸಾದ್ , ಗಾಯತ್ರಿ ಬಾಲಸುಬ್ರಮಣಿಯನ್ ಮತ್ತು ರಂಜನಿ ಬಾಲಸುಬ್ರಮಣಿಯನ್ (ಜೋಡಿ), ಗೋಪಾಲ್ ಜಿ ತ್ರಿವೇದಿ, ಗುಡೂರು ವೆಂಕಟ್ ರಾವ್, ಹೆಚ್. ವಿ. ಹಂಡೆ ವೈದ್ಯಕೀಯ, ಹ್ಯಾಲಿ ವಾರ್, ಹರಿ ಮಾಧಬ್ ಮುಖೋಪಾಧ್ಯಾಯ, ಹರಿಚರಣ್ ಸೈಕಿಯಾ, ಹರ್ಮನ್‌ಪ್ರೀತ್ ಕೌರ್, ಇಂದರ್‌ಜಿತ್ ಸಿಂಗ್ ಸಿಧು, ಜನಾರ್ದನ್ ಬಾಪುರಾವ್ ಬೋಥೆ, ಜೋಗೇಶ್ ದೌರಿ ಇತರೆ, ಜುಜರ್ ವಾಸಿ, ಜ್ಯೋತಿಷ್ ದೇಬ್ನಾಥ್, ಕೆ. ಪಜನಿವೇಲ್, ಕೆ. ರಾಮಸಾಮಿ, ಕೆ. ವಿಜಯ್ ಕುಮಾರ್, ಕಬೀಂದ್ರ ಪುರಕಾಯಸ್ಥ, ಕೈಲಾಶ್ ಚಂದ್ರ ಪಂತ್, ಕಲಾಮಂಡಲಂ ವಿಮಲಾ ಮೆನನ್, ಕೇವಲ್ ಕಿಶನ್ ಥಕ್ರಾಲ್, ಖೇಮ್ ರಾಜ್ ಸುಂದ್ರಿಯಾಲ್, ಕೊಲ್ಲಕಲ್ ದೇವಕಿ ಅಮ್ಮ ಜಿ., ಕೃಷ್ಣಮೂರ್ತಿ ಬಾಲಸುಬ್ರಮಣಿಯನ್, ಕುಮಾರ್ ಬೋಸ್ ಕಲೆ,ಕುಮಾರಸಾಮಿ ತಂಗರಾಜ್, ಪ್ರೊ. (ಡಾ.) ಲಾರ್ಸ್-ಕ್ರಿಶ್ಚಿಯನ್ ಕೋಚ್, ಲಿಯುಡ್ಮಿಲಾ ವಿಕ್ಟೋರೊವ್ನಾ ಖೋಖ್ಲೋವಾ, ಮಾಧವನ್ ರಂಗನಾಥನ್, ಮಾಗಂಟಿ ಮುರಳಿ ಮೋಹನ್, ಮಹೇಂದ್ರ ಕುಮಾರ್, ಮಹೇಂದ್ರ ನಾಥ್ ರಾಯ್, ಮಾಮಿಡಾಲ ಜಗದೀಶ್ ಕುಮಾರ್, ಮಂಗಳಾ ಕಪೂರ್, ಮೀರ್ ಹಾಜಿಭಾಯ್ ಕಸಂಭಾಯ್, ಮೋಹನ್ ನಾಗರ್, ನಾರಾಯಣ ವ್ಯಾಸ್, ನರೇಶ್ ಚಂದ್ರ ದೇವ್ ವರ್ಮಾ, ನೀಲೇಶ್ ವಿನೋದ್‌ಚಂದ್ರ ಮಾಂಡ್ಲೆವಾಲಾ, ನೂರುದ್ದೀನ್ ಅಹ್ಮದ್, ಓಥವಾಲ್ ತಿರುತಣಿ ಸ್ವಾಮಿನಾಥನ್, ಡಾ. ಪದ್ಮ ಗುರ್ಮೆಟ್, ಪಾಲ್ಕೊಂಡ ವಿಜಯ್ ಆನಂದ್ ರೆಡ್ಡಿ, ಪೋಖಿಲಾ ಲೆಕ್ಥೆಪಿ, ಡಾ. ಪ್ರಭಾಕರ್ ಬಸವಪ್ರಭು ಕೋರೆ, ಪ್ರತೀಕ್ ಶರ್ಮಾ, ಪ್ರವೀಣ್ ಕುಮಾರ್, ಪ್ರೇಮ್ ಲಾಲ್ ಗೌತಮ್, ಪ್ರಸೇನ್‌ಜಿತ್ ಚಟರ್ಜಿ, ಡಾ. ಪುಣ್ಯಮೂರ್ತಿ ನಟೇಸನ್, ಆರ್. ಕೃಷ್ಣನ್, ಆರ್. ವಿ. ಎಸ್. ಮಣಿ, ರಬಿಲಾಲ್ ಟುಡು, ರಘುಪತ್ ಸಿಂಗ್, ರಘುವೀರ್ ತುಕಾರಾಮ್ ಖೇಡ್ಕರ್, ರಾಜಸ್ತಪತಿ ಕಾಳಿಯಪ್ಪ ಗೌಂಡರ್, ರಾಜೇಂದ್ರ ಪ್ರಸಾದ್, ರಾಮ ರೆಡ್ಡಿ ಮಾಮಿಡಿ, ರಾಮಮೂರ್ತಿ ಶ್ರೀಧರ್, ರಾಮಚಂದ್ರ ಗೋಡ್ಬೋಲೆ ಮತ್ತು ಸುನೀತಾ ಗೋಡ್ಬೋಲೆ, ರತಿಲಾಲ್ ಬೋರಿಸಾಗರ್, ರೋಹಿತ್ ಶರ್ಮಾ, ಎಸ್. ಜಿ. ಸುಶೀಲಮ್ಮ, ಸಂಗ್ಯುಸಾಂಗ್ ಎಸ್. ಪೊಂಜೆನರ್, ಸಂತ ನಿರಂಜನ್ ದಾಸ್, ಶರತ್ ಕುಮಾರ್, ಸರೋಜ ಮಂಡಲ್, ಸತೀಶ್ ಶಾ, ಸತ್ಯನಾರಾಯಣ ನುವಾಲ್, ಸವಿತಾ

ಪುನಿಯಾ, ಪ್ರೊ. ಶಫಿ ಶೌಕ್, ಶಶಿ ಶೇಖರ್ ವೆಂಪತಿ, ಶ್ರೀರಂಗ ದೇವಾಬಾ ಲಾಡ್, ಶುಭಾ ವೆಂಕಟೇಶ ಅಯ್ಯಂಗಾರ್, ಶ್ಯಾಮ್ ಸುಂದರ್, ಸಿಮಾಂಚಲ್ ಪಾತ್ರೋ, ಶಿವಶಂಕರಿ, ಡಾ. ಸುರೇಶ್ ಹನಗವಾಡಿ, ಸ್ವಾಮಿ ಬ್ರಹ್ಮದೇವ್ ಜಿ ಮಹಾರಾಜ್, ಟಿ. ಟಿ. ಜಗನ್ನಾಥನ್, ತಗಾ ರಾಮ್ ಭೀಲ್, ತರುಣ್ ಭಟ್ಟಾಚಾರ್ಯ, ಟೆಚಿ ಗುಬಿನ್, ತಿರುವಾರೂರ್ ಭಕ್ತವತ್ಸಲಂ, ತೃಪ್ತಿ ಮುಖರ್ಜಿ,ವೀಳಿನಾಥನ್ ಕಾಮಕೋಟಿ, ವೆಂಪತಿ ಕುಟುಂಬ ಶಾಸ್ತ್ರಿ, ವ್ಲಾಡಿಮಿರ್ ಮೆಸ್ಟ್ವಿರಿಶ್ವಿಲಿ, ಯುಮ್ನಾಮ್ ಜಾತ್ರಾ ಸಿಂಗ್,

*** ಕರ್ನಾಟಕದ ಸಾಧಕರು (ಪದ್ಮ ಪ್ರಶಸ್ತಿ ವಿಜೇತರು)**

1.ಶ್ರೀ ಶತಾವಧಾನಿ ಆರ್. ಗಣೇಶ್ -ಕಲೆ.
2.ಶ್ರೀ ಅಂಕೇಗೌಡ ಎಂ.-ಸಮಾಜ ಸೇವೆ (ಸಕ್ಕರೆ ನಾಡಿನ ಪುಸ್ತಕ ಪ್ರೇಮಿ).
3.ಡಾ. ಪ್ರಭಾಕರ್ ಬಸವಪ್ರಭು ಕೋರೆ - ಸಾಹಿತ್ಯ ಮತ್ತು ಶಿಕ್ಷಣ.
4.ಕುಮಾರಿ ಎಸ್. ಜಿ. ಸುಶೀಲಮ್ಮ-ಸಮಾಜ ಸೇವೆ.
5.ಶ್ರೀ ಶಶಿ ಶೇಖರ್ ವೆಂಪತಿ-ಸಾಹಿತ್ಯ ಮತ್ತು ಶಿಕ್ಷಣ.
6.ಕುಮಾರಿ ಶುಭಾ ವೆಂಕಟೇಶ ಅಯ್ಯಂಗಾರ್-ವಿಜ್ಞಾನ ಮತ್ತು ಇಂಜಿನಿಯರಿಂಗ್.
7.ಡಾ. ಸುರೇಶ್ ಹನಗವಾಡಿ-ವೈದ್ಯಕೀಯ.
8.ಶ್ರೀ ಟಿ. ಟಿ. ಜಗನ್ನಾಥನ್ (ಮರಣೋತ್ತರ) -ವ್ಯಾಪಾರ ಮತ್ತು ಕೈಗಾರಿಕೆ.

## ಭಾರತದ ಮಹಿಳಾ ಹಾಕಿ ತಂಡದ ನಾಯಕಿ ಸವಿತಾ ಪುನಿಯಾಗೆ 'ಪದ್ಮಶ್ರೀ' ಗೌರವ



➤ ಭಾರತದ ಅನುಭವಿ ಮಹಿಳಾ ಹಾಕಿ ಗೋಲ್‌ಕೀಪರ್ ಮತ್ತು ತಂಡದ ಪ್ರಮುಖ ಆಟಗಾರ್ತಿ ಸವಿತಾ ಪುನಿಯಾ ಅವರಿಗೆ ದೇಶದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮಶ್ರೀ' ಘೋಷಿಸಲಾಗಿದೆ. ಈ ಪ್ರಶಸ್ತಿಯನ್ನು ಅವರು ವೈಯಕ್ತಿಕ ಸಾಧನೆಗಿಂತ ಹೆಚ್ಚಾಗಿ ಇಡೀ ಭಾರತೀಯ ಮಹಿಳಾ ಹಾಕಿ ತಂಡಕ್ಕೆ ಸಂದ ಗೌರವ ಎಂದು ಬಣ್ಣಿಸಿದ್ದಾರೆ.

➤ ಈ ಪ್ರಶಸ್ತಿಯು ಕೇವಲ ತನಗಷ್ಟೇ ಅಲ್ಲ, ಇಡೀ ತಂಡದ ಸಾಮೂಹಿಕ ಪ್ರಯತ್ನ ಮತ್ತು ಸ್ಥಿತಿಸ್ಥಾಪಕತ್ವಕ್ಕೆ ಸಂದ ಮನ್ನಣೆಯಾಗಿದೆ ಎಂದು ಸವಿತಾ ಹೇಳಿದ್ದಾರೆ. ಸವಿತಾ ಅವರು ಈ ಗೌರವವನ್ನು ತಮ್ಮ ತಂದೆ ಮಹೇಂದರ್ ಪುನಿಯಾ ಅವರಿಗೆ ಅರ್ಪಿಸಿದ್ದಾರೆ. ಕ್ರೀಡಾ ಜೀವನದ ಉದ್ದಕ್ಕೂ ಬೆನ್ನೆಲುಬಾಗಿ ನಿಂತ ಕುಟುಂಬದ ತ್ಯಾಗಕ್ಕೆ ಸಂದ ಪ್ರತಿಫಲ ಇದಾಗಿದೆ ಎಂದು ಅವರು ಹಂಚಿಕೊಂಡಿದ್ದಾರೆ.

➤ ಸವಿತಾ ಪುನಿಯಾ ಅವರು 300ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಪಂದ್ಯಗಳನ್ನು (308 caps) ಆಡಿದ ಅನುಭವ ಹೊಂದಿದ್ದಾರೆ. ಈ ಸಾಧನೆ ಮಾಡಿದ ಭಾರತದ ಎರಡನೇ ಮಹಿಳಾ ಹಾಕಿ ಆಟಗಾರ್ತಿ ಎಂಬ ಹೆಗ್ಗಳಿಕೆ ಇವರದ್ದಾಗಿದೆ. ಇತ್ತೀಚಿನ ಸವಾಲಿನ ಹಂತದ ನಂತರ, ಮಾರ್ಚ್‌ನಲ್ಲಿ ನಡೆಯಲಿರುವ ವಿಶ್ವಕಪ್ ಅರ್ಹತಾ ಪಂದ್ಯಗಳಿಗೆ ಸಜ್ಜಾಗುತ್ತಿರುವ ತಂಡಕ್ಕೆ ಈ ಪ್ರಶಸ್ತಿಯು ಹೆಚ್ಚಿನ ಆತ್ಮವಿಶ್ವಾಸ ನೀಡಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

➤ ಪ್ರಸ್ತುತ ಸವಿತಾ ಅವರು ಬೆಂಗಳೂರಿನ ರಾಷ್ಟ್ರೀಯ ಶಿಬಿರದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಮುಂಬರುವ ವಿಶ್ವಕಪ್ ಅರ್ಹತಾ ಪಂದ್ಯಗಳು ಭಾರತೀಯ ಮಹಿಳಾ ಹಾಕಿಯ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿವೆ.

# 27 Jan 2026

## ಖ್ಯಾತ ಐಪಿಎಸ್ ಅಧಿಕಾರಿ ಕೆ. ವಿಜಯ್ ಕುಮಾರ್ ಅವರಿಗೆ 'ಪದ್ಮಶ್ರೀ' ಗೌರವ




➤ ಭಾರತದ ಅತ್ಯಂತ ಸಾಹಸಿ ಮತ್ತು ದಕ್ಷ ಪೊಲೀಸ್ ಅಧಿಕಾರಿಗಳಲ್ಲಿ ಒಬ್ಬರಾದ ಕೆ. ವಿಜಯ್ ಕುಮಾರ್ ಅವರಿಗೆ 2026ನೇ ಸಾಲಿನ ದೇಶದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮಶ್ರೀ' ನೀಡಿ ಗೌರವಿಸಲಾಗಿದೆ. ತಮಿಳುನಾಡು ಕೆಡರ್‌ನ ಈ ನಿವೃತ್ತ ಐಪಿಎಸ್ ಅಧಿಕಾರಿ, ಭಾರತದ ಆಂತರಿಕ ಭದ್ರತೆ ಮತ್ತು ಆಯಕಟ್ಟಿನ ಪೊಲೀಸ್ ಕಾರ್ಯಾಚರಣೆಗಳಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

➤ ಆಪರೇಷನ್ ಕೊಕೂನ್ (Operation Cocoon) ಮತ್ತು ವೀರಪ್ಪನ್ ಅಂತ್ಯ: ಕೆ. ವಿಜಯ್ ಕುಮಾರ್ ಅವರ ವೃತ್ತಿಜೀವನದ ಅತ್ಯಂತ ಸ್ಮರಣೀಯ ಸಾಧನೆಯೆಂದರೆ ಕಾಡುಗಳ್ಳ ವೀರಪ್ಪನ್ ವಿರುದ್ಧ ನಡೆಸಿದ 'ಆಪರೇಷನ್ ಕೊಕೂನ್'.

=> 2004 ರಲ್ಲಿ ತಮಿಳುನಾಡು ವಿಶೇಷ ಕಾರ್ಯಪಡೆಯ (STF) ಮುಖ್ಯಸ್ಥರಾಗಿದ್ದ ಇವರು, ಸುಮಾರು ಎರಡು ದಶಕಗಳ ಕಾಲ ಕರ್ನಾಟಕ ಮತ್ತು ತಮಿಳುನಾಡು ಪೊಲೀಸರಿಗೆ ಸವಾಲಾಗಿದ್ದ ವೀರಪ್ಪನ್‌ನನ್ನು ಹತ್ಯೆ ಮಾಡುವಲ್ಲಿ ಯಶಸ್ವಿಯಾದ ತಂಡವನ್ನು ಮುನ್ನಡೆಸಿದ್ದರು.

=> ಈ ಕಾರ್ಯಾಚರಣೆಯ ಕುರಿತು ಅವರು "Veerappan: Chasing the Brigand" ಎಂಬ ಖ್ಯಾತ ಪುಸ್ತಕವನ್ನೂ ಬರೆದಿದ್ದಾರೆ.

**➤ ವೃತ್ತಿಜೀವನದ ಪ್ರಮುಖ ಹಂತಗಳು:**

=> 1975ರ ಬ್ಯಾಚ್‌ನ ಐಪಿಎಸ್ ಅಧಿಕಾರಿ: ತಮಿಳುನಾಡು ಕೆಡರ್‌ನ ಅಧಿಕಾರಿಯಾಗಿ ವೃತ್ತಿ ಜೀವನ ಆರಂಭಿಸಿದರು. ಚೆನ್ನೈ ಪೊಲೀಸ್ ಕಮಿಷನರ್, ಬಿಎಸ್‌ಎಫ್ (BSF) ಐಜಿ, ಮತ್ತು ಹೈದರಾಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

=> 2010 ರಲ್ಲಿ ದಂತೇವಾಡದಲ್ಲಿ ನಕ್ಸಲರ ದಾಳಿಯ ನಂತರ, ಅವರು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (CRPF) ಮುಖ್ಯಸ್ಥರಾಗಿ ನೇಮಕಗೊಂಡು ನಕ್ಸಲ್ ನಿಗ್ರಹ ಕಾರ್ಯಾಚರಣೆಗೆ ಹೊಸ ವೇಗ ನೀಡಿದರು.

➤ ನಿವೃತ್ತಿಯ ನಂತರವೂ ಅವರು ಕೇಂದ್ರ ಗೃಹ ಸಚಿವಾಲಯದಲ್ಲಿ ನಕ್ಸಲ್ ಪೀಡಿತ ಪ್ರದೇಶಗಳ ಭದ್ರತಾ ಸಲಹೆಗಾರರಾಗಿ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯಪಾಲರ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಎಡಪಂಥೀಯ ತೀವ್ರಗಾಮಿ (LWE) ಪೀಡಿತ ಪ್ರದೇಶಗಳಲ್ಲಿ ಕಾರ್ಯತಂತ್ರ ರೂಪಿಸುವಲ್ಲಿ ಇವರ ಪಾತ್ರ ದೊಡ್ಡದಿದೆ.

➤ ಕೆ. ವಿಜಯ್ ಕುಮಾರ್ ಅವರ ಈ ಗೌರವವು ಕೇವಲ ವ್ಯಕ್ತಿಗತ ಸಾಧನೆಯಲ್ಲ, ಬದಲಿಗೆ ಭಾರತದ ಆಂತರಿಕ ಭದ್ರತೆಯನ್ನು ಬಲಪಡಿಸಲು ಶ್ರಮಿಸಿದ ಶಿಸ್ತಿನ ಪೊಲೀಸ್ ವ್ಯವಸ್ಥೆಗೆ ಸಂದ ಗೌರವವಾಗಿದೆ.

## ತ್ರಿವರ್ಣ ಧ್ವಜ ಅನಾವರಣದಲ್ಲಿ ಇತಿಹಾಸ ನಿರ್ಮಿಸಿದ ಫ್ಲೈಟ್ ಲೆಫ್ಟಿನೆಂಟ್ ಅಕ್ಷಿತಾ ಧನಕರ್



➤ ನವದೆಹಲಿಯಲ್ಲಿ ನಡೆದ 77ನೇ ಗಣರಾಜ್ಯೋತ್ಸವದ ಸಂಭ್ರಮದಲ್ಲಿ ಹರಿಯಾಣದ ಹೆಣ್ಣುಮಗಳು, ಫ್ಲೈಟ್ ಲೆಫ್ಟಿನೆಂಟ್

ಅಕ್ಷಿತಾ ಧನಕರ್ (Akshita Dhankar) ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೊಂದಿಗೆ ರಾಷ್ಟ್ರಧ್ವಜವನ್ನು ಅನಾವರಣಗೊಳಿಸುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ. ಇದು ಭಾರತೀಯ ಸಶಸ್ತ್ರ ಪಡೆಗಳಲ್ಲಿ ಮಹಿಳಾ ಶಕ್ತಿಯ ಉದಯದ ಸಂಕೇತವಾಗಿ ಹೊರಹೊಮ್ಮಿದೆ.

➤ ಫ್ಲೈಟ್ ಲೆಫ್ಟಿನೆಂಟ್ ಅಕ್ಷಿತಾ ಧನಕರ್: ಇವರು ಹರಿಯಾಣದ ಕಾಸಿನಿ (Kasni) ಗ್ರಾಮದವರು. ಇವರ ತಂದೆಯೂ ಸಹ ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸಿದ್ದು, ಬಾಲ್ಯದಿಂದಲೇ ಅಕ್ಷಿತಾ ಅವರಿಗೆ ಸೈನ್ಯಕ್ಕೆ ಸೇರುವ ಸ್ಫೂರ್ತಿ ನೀಡಿದ್ದರು. ದೆಹಲಿಯ ಶ್ರೀ ಗುರು ತೇಗ್ ಬಹದ್ದೂರ್ ಖಾಲ್ಸಾ ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ NCC ಸೇರಿದ್ದ ಇವರು, 'ಕೆಡೆಟ್ ಸಾರ್ಜೆಂಟ್ ಮೇಜರ್' ಆಗಿ ಶಿಸ್ತು ಮತ್ತು ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡಿದ್ದರು.

**➤ ವೃತ್ತಿಜೀವನ:**

=> ಅಕ್ಷಿತಾ ಅವರು AFCAT ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಮೈಸೂರಿನ ವಾಯುಪಡೆ ಆಯ್ಕೆ ಮಂಡಳಿ (AFSB) ಮೂಲಕ ಆಯ್ಕೆಯಾದರು.

=> 2023ರ ಜೂನ್‌ನಲ್ಲಿ ವಾಯುಪಡೆಯ 'ಅಡ್ಮಿನಿಸ್ಟ್ರೇಷನ್' ವಿಭಾಗಕ್ಕೆ ಫ್ಲೈಯಿಂಗ್ ಆಫೀಸರ್ ಆಗಿ ನಿಯೋಜನೆಗೊಂಡರು. ಅಲ್ಪಾವಧಿಯಲ್ಲೇ ತಮ್ಮ ದಕ್ಷತೆಯ ಮೂಲಕ 'ಫ್ಲೈಟ್ ಲೆಫ್ಟಿನೆಂಟ್' ಆಗಿ ಪದೋನ್ನತಿ ಪಡೆದಿದ್ದಾರೆ.

➤ ಅಕ್ಷಿತಾ ಧನಕರ್ ಅವರ ಈ ಸಾಧನೆಯು ಭಾರತೀಯ ರಕ್ಷಣಾ ವಲಯದಲ್ಲಿ ಮಹಿಳೆಯರಿಗೆ ಸಿಗುತ್ತಿರುವ ಹೆಚ್ಚಿನ ಆದ್ಯತೆ ಮತ್ತು ನಾಯಕತ್ವದ ಅವಕಾಶಗಳಿಗೆ ಸಾಕ್ಷಿಯಾಗಿದೆ. ಗ್ರಾಮೀಣ ಭಾಗದ ಪ್ರತಿಭೆಗಳು ದೇಶದ ಉನ್ನತ ಮಟ್ಟದ ಗೌರವಕ್ಕೆ ಪಾತ್ರರಾಗಬಲ್ಲರು ಎಂಬುದಕ್ಕೆ ಇವರು ಉದಾಹರಣೆಯಾಗಿದ್ದಾರೆ.

## ಮ್ಯಾನ್ಮಾರ್ ಸ್ಟೈಜಿಕಲ್ ಸ್ಟ್ರೈಕ್: ಶೌರ್ಯ ಚಕ್ರದಿಂದ ಬಯಲಾದ ರಹಸ್ಯ




➤ ಭಾರತ ಸರ್ಕಾರವು ಜುಲೈ 2025ರಲ್ಲಿ ಮ್ಯಾನ್ಮಾರ್ ಗಡಿಯುದ್ದಕ್ಕೂ ಭಾರತೀಯ ಸೇನೆಯು ನಡೆಸಿದ ರಹಸ್ಯ ಮಿಲಿಟರಿ ಕಾರ್ಯಾಚರಣೆಯನ್ನು ಮೊದಲ ಬಾರಿಗೆ ಅಧಿಕೃತವಾಗಿ ಒಪ್ಪಿಕೊಂಡಿದೆ. ಈ ಪ್ರಮುಖ ವಿಷಯವು ಇತ್ತೀಚೆಗೆ ಪ್ರಕಟವಾದ ಶೌರ್ಯ ಚಕ್ರ ಪ್ರಶಸ್ತಿಯ ಉಲ್ಲೇಖದ (Citation) ಮೂಲಕ ಬೆಳಕಿಗೆ ಬಂದಿದೆ.

➤ ಜುಲೈ 11 ರಿಂದ 13, 2025 ರ ನಡುವೆ ಮ್ಯಾನ್ಮಾರ್‌ನಲ್ಲಿರುವ ದೇಶವಿರೋಧಿ ಗುಂಪುಗಳ ಶಿಬಿರಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿತ್ತು.ಈ ನಿಖರ ದಾಳಿಯಲ್ಲಿ ಒಂಬತ್ತು ಶಸ್ತ್ರಸಜ್ಜಿತ ಉಗ್ರರನ್ನು ಹತ್ಯೆ ಮಾಡಲಾಗಿದ್ದು, ಇದರಲ್ಲಿ ಪ್ರಮುಖ ನಾಯಕರು ಸೇರಿದ್ದಾರೆ. ಈ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ 21 ಪ್ಯಾರಾ (ಸ್ಪೆಷಲ್ ಫೋರ್ಸಸ್) ನ ಲೆಫ್ಟಿನೆಂಟ್ ಕರ್ನಲ್ ಘಾಟಗೆ ಆದಿತ್ಯ ಶ್ರೀಕುಮಾರ್ ಅವರಿಗೆ ಭಾರತದ ಮೂರನೇ ಅತ್ಯುನ್ನತ ಶಾಂತಿಕಾಲದ ಶೌರ್ಯ ಪ್ರಶಸ್ತಿಯಾದ 'ಶೌರ್ಯ ಚಕ್ರ' ನೀಡಿ ಗೌರವಿಸಲಾಗಿದೆ.

➤ 2025ರ ಜುಲೈನಲ್ಲಿ ಮ್ಯಾನ್ಮಾರ್‌ನಲ್ಲಿರುವ ನಿಷೇಧಿತ ULFA-I ಸಂಘಟನೆಯ ಶಿಬಿರಗಳ ಮೇಲೆ ಡ್ರೋನ್ ದಾಳಿ ನಡೆದ ವರದಿಗಳಾಗಿದ್ದವು. ಆ ಸಮಯದಲ್ಲಿ ಭಾರತೀಯ ಸೇನೆಯು ಇದರಲ್ಲಿ ತನ್ನ ಪಾತ್ರವಿಲ್ಲ ಎಂದು ನಿರಾಕರಿಸಿತ್ತು. ಆದರೆ ಈಗ ಶೌರ್ಯ ಚಕ್ರದ ಅಧಿಕೃತ ದಾಖಲೆಗಳು ಈ ಕಾರ್ಯಾಚರಣೆಯನ್ನು ಖಚಿತಪಡಿಸಿವೆ.

➤ ಕಾರ್ಯತಂತ್ರದ ಮಹತ್ವ: ಮಿಲಿಟರಿ ಕಾರ್ಯಾಚರಣೆಗಳ ವಿವರಗಳನ್ನು ಗೌಪ್ಯವಾಗಿಡುವುದು ಸಾಮಾನ್ಯ. ಆದರೆ, ಇಂತಹ ಶೌರ್ಯ ಪ್ರಶಸ್ತಿಗಳ ಮೂಲಕ ಮಾಹಿತಿಯನ್ನು ಹಂಚಿಕೊಳ್ಳುವುದು ಭಾರತದ ಸೈನ್ಯದ ಶಕ್ತಿ ಮತ್ತು ಗಡಿ ಭದ್ರತೆಯ ಕುರಿತಾದ ದೃಢ ಸಂಕಲ್ಪವನ್ನು ಜಗತ್ತಿಗೆ ಸಾರುತ್ತದೆ.

## WPL ಇತಿಹಾಸದಲ್ಲಿ ಸುವರ್ಣಾಕ್ಷರ: ಲೀಗ್‌ನ ಚೊಚ್ಚಲ ಶತಕ ಸಿಡಿಸಿ ದಾಖಲೆ ಬರೆದ ನ್ಯಾಟ್ ಶಿವರ್ ಬ್ರಂಟ್





➤ ಮಹಿಳಾ ಪ್ರೀಮಿಯರ್ ಲೀಗ್ (WPL) ಆರಂಭವಾಗಿ ಮೂರು ಆವೃತ್ತಿಗಳ ನಂತರ, ಕ್ರಿಕೆಟ್ ಅಭಿಮಾನಿಗಳು ಕಾಯುತ್ತಿದ್ದ ಕ್ಷಣ ಬಂದಿದೆ. ಇಂಗ್ಲೆಂಡ್‌ನ ಅನುಭವಿ ಆಲ್‌ರೌಂಡರ್ ಹಾಗೂ ಮುಂಬೈ ಇಂಡಿಯನ್ಸ್ ತಂಡದ ಆಟಗಾರ್ತಿ ನ್ಯಾಟ್ ಶಿವರ್ ಬ್ರಂಟ್, ಈ ಲೀಗ್‌ನ ಇತಿಹಾಸದಲ್ಲೇ ಮೊದಲ ಶತಕ ಬಾರಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಸೋಮವಾರ(26-01-2026) ವಡೋದರದ ಕೋತಂಬಿ ಕ್ರೀಡಾಂಗಣದಲ್ಲಿ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (RCB) ವಿರುದ್ಧದ ಪಂದ್ಯದಲ್ಲಿ ಬ್ರಂಟ್ ಈ ಐತಿಹಾಸಿಕ ಸಾಧನೆ ಮಾಡಿದರು.

➤ ನ್ಯಾಟ್ ಶಿವರ್ ಬ್ರಂಟ್ ಕೇವಲ 57 ಎಸೆತಗಳಲ್ಲಿ ಅಜೇಯ 100 ರನ್ (16 ಬೌಂಡರಿ, 1 ಸಿಕ್ಸರ್) ಸಿಡಿಸಿದರು. ಇವರು 32 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರೆ, ಮುಂದಿನ 50 ರನ್‌ಗಳನ್ನು ಕೇವಲ 25 ಎಸೆತಗಳಲ್ಲಿ ಚಚ್ಚಿದರು. ಬ್ರಂಟ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ಎರಡನೇ ವಿಕೆಟ್‌ಗೆ ಹೇಲಿ ಮ್ಯಾಥ್ಯೂಸ್ (56 ರನ್) ಅವರೊಂದಿಗೆ ಸೇರಿ ಬ್ರಂಟ್ 131 ರನ್‌ಗಳ ಅಮೋಘ ಜೊತೆಯಾಟವಾಡಿದರು. ನಂತರ ನಾಯಕಿ ಹರ್ಮನ್ ಪ್ರೀತ್ ಕೌರ್ (20 ರನ್) ಅವರೊಂದಿಗೆ 42 ರನ್ ಸೇರಿಸಿದರು.

➤ ಡಬ್ಲ್ಯುಪಿಎಲ್ ಇತಿಹಾಸದಲ್ಲಿ ಈವರೆಗೆ ಯಾರೂ ಶತಕ ಬಾರಿಸಿರಲಿಲ್ಲ.ಕಳೆದ ಆವೃತ್ತಿಯಲ್ಲಿ ಆರ್‌ಸಿಬಿಯ ಜಾರ್ಜಿಯಾ ವೋಲ್ ಯುಪಿ ವಾರಿಯರ್ಸ್ ವಿರುದ್ಧ ಗಳಿಸಿದ್ದ 99 ರನ್ ಈವರೆಗಿನ ಗರಿಷ್ಠ ಸ್ಕೋರ್ ಆಗಿತ್ತು. ಪ್ರಸಕ್ತ ಟೂರ್ನಿಯಲ್ಲಿ ಸ್ಮೃತಿ ಮಂದಾನ 96 ರನ್ ಗಳಿಸಿ ಶತಕದ ಹತ್ತಿರ ಬಂದು ಔಟಾಗಿದ್ದರು.

➤ ಈಗಾಗಲೇ ಪ್ಲೇ-ಆಫ್ ಹಂತಕ್ಕೆ ಲಗ್ಗೆ ಇಟ್ಟಿರುವ ಆರ್‌ಸಿಬಿ ತಂಡಕ್ಕೆ ಈ ಪಂದ್ಯ ಅತ್ಯಂತ ನಿರ್ಣಾಯಕವಾಗಿದೆ. ಒಂದು ವೇಳೆ ಈ ಬೆಟ್ಟದಂತಹ ಗುರಿಯನ್ನು ಬೆನ್ನಟ್ಟಿ ಗೆಲುವು ಸಾಧಿಸಿದರೆ, ಆರ್ ಸಿಬಿ ನೇರವಾಗಿ ಫೈನಲ್ ಪ್ರವೇಶಿಸುವ ಅವಕಾಶ ಹೊಂದಿದೆ.



## ಭಾರತ-ಕೆನಡಾ ದ್ವಿಪಕ್ಷೀಯ ಸಂಬಂಧ: ಹೊಸ ಮೈತ್ರಿಯತ್ತ ಹೆಜ್ಜೆ



➤ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಟ್ಟುನಿಟ್ಟಾದ ಆರ್ಥಿಕ ನೀತಿಗಳು ಮತ್ತು ಕೆನಡಾದ ಮೇಲೆ ಹೇರಲಾಗಿರುವ ಸುಮಾರು 35% ರಷ್ಟು ಪ್ರತಿಸುಂಕದ (Retaliatory Tariffs) ಹಿನ್ನೆಲೆಯಲ್ಲಿ, ಕೆನಡಾ ಈಗ ತನ್ನ ಆರ್ಥಿಕ ಭದ್ರತೆಗಾಗಿ ಭಾರತದತ್ತ ಮುಖ ಮಾಡಿದೆ. ಅಮೆರಿಕದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಮಾರುಕಟ್ಟೆಯನ್ನು ವೈವಿಧ್ಯಗೊಳಿಸುವುದು ಪ್ರಧಾನಿ ಮಾರ್ಕ್ ಕಾರ್ನಿ ಅವರ ಮುಖ್ಯ ಉದ್ದೇಶವಾಗಿದೆ.

➤ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರು ಮಾರ್ಚ್‌ನಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದು, 2030ರ ವೇಳೆಗೆ 50 ಶತಕೋಟಿ ಡಾಲರ್ ವ್ಯಾಪಾರ ಗುರಿಯೊಂದಿಗೆ ಯುರೇನಿಯಂ, ಇಂಧನ ಮತ್ತು ಕೃತಕ ಬುದ್ಧಿಮತ್ತೆ ವಲಯಗಳಲ್ಲಿ ನಿರ್ಣಾಯಕ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ.

**➤ ದ್ವಿಪಕ್ಷೀಯ ಮಾತುಕತೆಯ ಮುಖ್ಯಾಂಶಗಳು:**

=> CEPA ಒಪ್ಪಂದದ ಪುನರಾರಂಭ: ಭಾರತ ಮತ್ತು ಕೆನಡಾ ನಡುವೆ ಸ್ಥಗಿತಗೊಂಡಿದ್ದ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (CEPA) ಮಾತುಕತೆಗಳು ಮಾರ್ಚ್‌ನಲ್ಲಿ ಅಧಿಕೃತವಾಗಿ ಪುನರಾರಂಭಗೊಳ್ಳಲಿವೆ.

=> ಯುರೇನಿಯಂ ಪೂರೈಕೆ: ಭಾರತದ ನಾಗರಿಕ ಪರಮಾಣು ಇಂಧನದ ಅಗತ್ಯತೆಗಳನ್ನು ಪೂರೈಸಲು ಸುಮಾರು 2.8 ಶತಕೋಟಿ ಕೆನಡಿಯನ್ ಡಾಲರ್ ಮೌಲ್ಯದ, 10 ವರ್ಷಗಳ ಅವಧಿಯ ಯುರೇನಿಯಂ ಪೂರೈಕೆ ಒಪ್ಪಂದಕ್ಕೆ ಸಹಿ ಬೀಳುವ ಸಾಧ್ಯತೆಯಿದೆ.

=> ಸಂಬಂಧಗಳ ಸುಧಾರಣೆ: ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಅವಧಿಯಲ್ಲಿ ಖಲಿಸ್ತಾನಿ ವಿಚಾರವಾಗಿ ಹಳಸಿದ್ದ ರಾಜತಾಂತ್ರಿಕ ಸಂಬಂಧಗಳನ್ನು ಸುಧಾರಿಸಲು ಮಾರ್ಕ್ ಕಾರ್ನಿ ಆದ್ಯತೆ ನೀಡಿದ್ದಾರೆ. ಇತ್ತೀಚೆಗೆ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ನಡೆಸಿದ ಮಾತುಕತೆಯು ಈ ಪ್ರಕ್ರಿಯೆಗೆ ವೇಗ ನೀಡಿದೆ.

➤ ಕೆನಡಾವು ತನ್ನ ರಫ್ತನ್ನು ಅಮೆರಿಕದ ಹೊರತಾಗಿ ಇತರ ದೇಶಗಳಿಗೆ ವಿಸ್ತರಿಸಲು ಮುಂದಾಗಿದೆ. ಭಾರತದ ಬೃಹತ್ ಮಾರುಕಟ್ಟೆ, ಇಂಧನ ಬೇಡಿಕೆ ಮತ್ತು ತಂತ್ರಜ್ಞಾನ ವಲಯವು ಕೆನಡಾಕ್ಕೆ ಪೂರಕವಾಗಿವೆ. ಇದೇ ವೇಳೆ ಕೆನಡಾದ ಪೆನ್ಷನ್ ಫಂಡ್ ಗಳು ಭಾರತದಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರಿಸುತ್ತಿರುವುದು ಭಾರತದ ಆರ್ಥಿಕತೆಗೆ ವರದಾನವಾಗಲಿದೆ.

➤ ಮಾರ್ಕ್ ಕಾರ್ನಿ ಅವರು ಕೆನಡಾ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್‌ನ ಮಾಜಿ ಗವರ್ನರ್ ಆಗಿದ್ದು, ಅವರ ಆರ್ಥಿಕ ಜಾಣ್ಮೆಯು ಭಾರತ-ಕೆನಡಾ ನಡುವಿನ ಹೊಸ "ವ್ಯಾಪಾರ ಯುಗ"ಕ್ಕೆ ಮುನ್ನುಡಿ ಬರೆಯುವ ನಿರೀಕ್ಷೆಯಿದೆ.

## ಜನವರಿ-27:ವಿಶ್ವ 'ರಾಷ್ಟ್ರೀಯ ಭೌಗೋಳಿಕ ದಿನ'




➤ ಪ್ರತಿ ವರ್ಷ ಜನವರಿ 27 ರಂದು ವಿಶ್ವದಾದ್ಯಂತ 'ರಾಷ್ಟ್ರೀಯ ಭೌಗೋಳಿಕ ದಿನ'ವನ್ನು (National Geographic Day) ಆಚರಿಸಲಾಗುತ್ತದೆ. ಜನವರಿ 27 1888ರಲ್ಲಿ ಸ್ಥಾಪನೆಯಾದ ನ್ಯಾಷನಲ್ ಜಿಯೊಗ್ರಾಫಿಕ್ ಸೊಸೈಟಿಯ ಗೌರವಾರ್ಥವಾಗಿ ಈ ದಿನವನ್ನು ಆಚರಿಸಲಾಗುತ್ತದೆ. 2026ರ ಸಾಲಿನ ಆಚರಣೆಯು ಕೇವಲ ಭೂಮಿಯ ಅನ್ವೇಷಣೆಗೆ ಸೀಮಿತವಾಗದೆ, ಪರಿಸರ ಸಂರಕ್ಷಣೆ ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವಕ್ಕೆ (Climate Resilience) ಹೆಚ್ಚಿನ ಒತ್ತು ನೀಡಿದೆ.

ಧ್ಯೇಯ: ಅನ್ವೇಷಣೆ, ವೈಜ್ಞಾನಿಕ ಸಂಶೋಧನೆ ಮತ್ತು ಪರಿಸರ ಸಂರಕ್ಷಣೆ.

**➤ 2026ರ ಪ್ರಮುಖ ವಿಷಯಗಳು :**

=> ರಿಸ್ಟೋರೇಶನ್ ಸ್ಟೋರಿಟೆಲ್ಲಿಂಗ್ (Restoration Storytelling): ಪರಿಸರವನ್ನು ಪುನರುಜ್ಜೀವನಗೊಳಿಸುವುದು ಮತ್ತು ಜೀವವೈವಿಧ್ಯವನ್ನು ಸಂರಕ್ಷಿಸುವ ಕಥೆಗಳಿಗೆ ಈ ಬಾರಿ ಆದ್ಯತೆ ನೀಡಲಾಗಿದೆ. ತಂತ್ರಜ್ಞಾನದ ನೆರವಿನಿಂದ ಪರಿಸರದಲ್ಲಿನ ಬದಲಾವಣೆಗಳನ್ನು ಪತ್ತೆಹಚ್ಚುವುದು ಇದರ ಮುಖ್ಯ ಉದ್ದೇಶ.

=> ಮ್ಯೂಸಿಯಂ ಆಫ್ ಎಕ್ಸ್‌ಪ್ಲೋರೇಶನ್ (Museum of Exploration): ವಾಷಿಂಗ್ಟನ್ ಡಿ.ಸಿ.ಯಲ್ಲಿ ಈ ವರ್ಷ ನ್ಯಾಷನಲ್ ಜಿಯೊಗ್ರಾಫಿಕ್‌ನ ನೂತನ 'ಮ್ಯೂಸಿಯಂ ಆಫ್ ಎಕ್ಸ್‌ಪ್ಲೋರೇಶನ್' ಉದ್ಘಾಟನೆಯಾಗುತ್ತಿದೆ. ಇದು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸಂವಾದಾತ್ಮಕ (Interactive) ಅನುಭವಗಳ ಮೂಲಕ ಜಗತ್ತಿನ ವಿಸ್ಮಯಗಳನ್ನು ಜನರಿಗೆ ಪರಿಚಯಿಸಲಿದೆ.

=> ಸಕ್ರಿಯ ಪ್ರವಾಸೋದ್ಯಮ (Active Travel - 2026 Zeitgeist): ಪರಿಸರ ಸ್ನೇಹಿ ಪ್ರಯಾಣ ಮತ್ತು ಉದ್ದೇಶಪೂರ್ವಕ ಪ್ರವಾಸಗಳಿಗೆ (Eco-conscious journeys) ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಇದರಲ್ಲಿ 'ರನ್-ಕೇಶನ್ಸ್' (Runcations) ನಂತಹ ಸಕ್ರಿಯ ಅನುಭವಗಳು ಸೇರಿವೆ.

=> ಡಿಜಿಟಲ್ ಮತ್ತು ದೃಶ್ಯ ಪ್ರಭಾವ: ವರ್ಚುವಲ್ ರಿಯಾಲಿಟಿ (VR) ಮತ್ತು ಅತ್ಯುನ್ನತ ಗುಣಮಟ್ಟದ ಛಾಯಾಗ್ರಹಣದ ಮೂಲಕ ಸಾಂಸ್ಕೃತಿಕ ಸಂರಕ್ಷಣೆ ಮತ್ತು ವೈಜ್ಞಾನಿಕ ಆವಿಷ್ಕಾರಗಳನ್ನು ಜನರಿಗೆ ತಲುಪಿಸಲಾಗುತ್ತಿದೆ.

➤ ಈ ವರ್ಷದ ಆಚರಣೆಯಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ಸಂಶೋಧನಾ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಂಡಿದ್ದವು. ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದಲ್ಲಿ ಯುವಜನತೆಯ ನಾಯಕತ್ವವನ್ನು ಈ ದಿನವು ಎತ್ತಿ ತೋರಿಸಿದೆ. ಸುಸ್ಥಿರ ಜೀವನಶೈಲಿ ಮತ್ತು ಪರಿಸರ ಜವಾಬ್ದಾರಿಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ವಿವಿಧ ಚರ್ಚಾಗೋಷ್ಠಿಗಳನ್ನು ಆಯೋಜಿಸಲಾಗಿತ್ತು.

➤ 2026ರ ರಾಷ್ಟ್ರೀಯ ಭೌಗೋಳಿಕ ದಿನವು ತಂತ್ರಜ್ಞಾನ ಮತ್ತು ಕಥೆ ಹೇಳುವ ಕಲೆಯ ಮೂಲಕ ಸಂಕೀರ್ಣ ಜಾಗತಿಕ ಸಮಸ್ಯೆಗಳನ್ನು ಸರಳವಾಗಿ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ.

➤ ಭಾರತದ ಪ್ರಖ್ಯಾತ ಭೂಗೋಳಶಾಸ್ತ್ರಜ್ಞ ಚಂದ್ರಶೇಖರ್ ಧುಂಡಿರಾಜ್ ದೇಶಪಾಂಡೆ ಅವರ ಜನ್ಮದಿನದ ಸ್ಮರಣಾರ್ಥವಾಗಿ ಪ್ರತಿ ವರ್ಷ ಜನವರಿ 14 ರಂದು ಭಾರತದಾದ್ಯಂತ 'ಭೌಗೋಳಿಕ ದಿನ'ವನ್ನು ಆಚರಿಸಲಾಗುತ್ತದೆ.

## UGC ಹೊಸ ನಿಯಮಗಳು 2026: ಉನ್ನತ ಶಿಕ್ಷಣದಲ್ಲಿ ಜಾತಿ ತಾರತಮ್ಯಕ್ಕೆ ಮುಕ್ತಿ




➤ ಭಾರತೀಯ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಬೇರುಸಹಿತ ಕಿತ್ತೆಸೆಯಲು ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC- University Grants Commission (India's statutory body for higher education standards & funding).'ಸಮಾನತೆಯ ಪ್ರಚಾರ (Promotion of Equity) ನಿಯಮಗಳು 2026' ಅನ್ನು ಜಾರಿಗೆ ತಂದಿದೆ. ಇದು 2012ರ ಹಳೆಯ ನಿಯಮಗಳ ಬದಲಿಗೆ ಹೆಚ್ಚು ಕಟ್ಟುನಿಟ್ಟಾದ ಮತ್ತು ಕಾನೂನುಬದ್ಧ ಚೌಕಟ್ಟನ್ನು ಒದಗಿಸುತ್ತದೆ.

➤ ಕಳೆದ ಕೆಲವು ವರ್ಷಗಳಲ್ಲಿ (2019-2024) ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ಪ್ರಕರಣಗಳು 118.4% ರಷ್ಟು ಏರಿಕೆಯಾಗಿರುವುದು ಕಳವಳಕಾರಿ ಸಂಗತಿಯಾಗಿದೆ. ರೋಹಿತ್ ವೇಮುಲ ಮತ್ತು ಪಾಯಲ್ ತಡ್ವಿ ಅವರಂತಹ ಪ್ರಕರಣಗಳು ಕ್ಯಾಂಪಸ್‌ಗಳಲ್ಲಿ ತುರ್ತು ಸುಧಾರಣೆಯ ಅಗತ್ಯವನ್ನು ಒತ್ತಿಹೇಳಿದ್ದವು. ಈ ಹಿನ್ನಲೆಯಲ್ಲಿ, ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ರ ಅಡಿಯಲ್ಲಿ ಈ ಹೊಸ ನಿಯಮಗಳನ್ನು ರೂಪಿಸಲಾಗಿದೆ.

**➤ ಹೊಸ ನಿಯಮಗಳ ಪ್ರಮುಖ ಲಕ್ಷಣಗಳು:**

1. OBC ಸಮುದಾಯದ ಸೇರ್ಪಡೆ: ಹಿಂದಿನ ಕರಡುಗಳಲ್ಲಿ ಇಲ್ಲದಿದ್ದರೂ, ಹೊಸ ನಿಯಮಗಳಲ್ಲಿ SC, ST ಗಳೊಂದಿಗೆ ಇತರೆ ಹಿಂದುಳಿದ ವರ್ಗಗಳನ್ನು (OBC) ಸಹ ರಕ್ಷಣಾ ವ್ಯಾಪ್ತಿಗೆ ತರಲಾಗಿದೆ. ಅಲ್ಲದೆ ವಿಕಲಚೇತನರು (PwBD) ಮತ್ತು ಮಹಿಳೆಯರಿಗೂ ಇದು ಅನ್ವಯಿಸುತ್ತದೆ.

2. ಸಮಾನ ಅವಕಾಶ ಕೇಂದ್ರಗಳು (Equal Opportunity Centres): ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯು ಕಡ್ಡಾಯವಾಗಿ ಈ ಕೇಂದ್ರಗಳನ್ನು ಸ್ಥಾಪಿಸಬೇಕು. ಇದು ವಿಫಲವಾದರೆ ಸಂಸ್ಥೆಯ UGC ಮಾನ್ಯತೆ ರದ್ದಾಗುವ ಸಾಧ್ಯತೆ ಇರುತ್ತದೆ.

3. ಸಮಾನತೆ ಸಮಿತಿ (Equity Committees): ಸಂಸ್ಥೆಯ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ಈ ಸಮಿತಿ ಇರಬೇಕು. ಇದರಲ್ಲಿ SC, ST, OBC, PwBD ಮತ್ತು ಮಹಿಳಾ ಪ್ರತಿನಿಧಿಗಳು ಇರುವುದು ಕಡ್ಡಾಯ.

**4. ತ್ವರಿತ ದೂರು ಪರಿಹಾರ:**

=> ದೂರು ಬಂದ 24 ಗಂಟೆಗಳ ಒಳಗಾಗಿ ಸಮಿತಿಯು ಸಭೆ ಸೇರಬೇಕು.

=> ದೂರಿನ ಕುರಿತಾದ ತನಿಖಾ ವರದಿಯನ್ನು 15 ಕೆಲಸದ ದಿನಗಳೊಳಗೆ ಸಲ್ಲಿಸಬೇಕು.

5. 24/7 ಸಹಾಯವಾಣಿ: ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಾಗಿ ದಿನದ 24 ಗಂಟೆಯೂ ಲಭ್ಯವಿರುವ ಸಹಾಯವಾಣಿ ಮತ್ತು ಆನ್ ಲೈನ್ ದೂರು ದಾಖಲಿಸುವ ವ್ಯವಸ್ಥೆ ಇರಬೇಕು.

6. ಸಂಸ್ಥೆಯ ಮುಖ್ಯಸ್ಥರ ಹೊಣೆಗಾರಿಕೆ: ಕ್ಯಾಂಪಸ್‌ನಲ್ಲಿ ನಡೆಯುವ ಯಾವುದೇ ತಾರತಮ್ಯ ಅಥವಾ ಕಿರುಕುಳಕ್ಕೆ ಸಂಸ್ಥೆಯ ಮುಖ್ಯಸ್ಥರನ್ನೇ (ಕುಲಪತಿಗಳು/ಪ್ರಾಂಶುಪಾಲರು) ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

➤ ನಿಯಮಗಳ ಉಲ್ಲಂಘನೆಗೆ ದಂಡನೆಗಳು: UGC ಮಾರ್ಗಸೂಚಿಗಳನ್ನು ಪಾಲಿಸದ ಶಿಕ್ಷಣ ಸಂಸ್ಥೆಗಳ ವಿರುದ್ಧ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು:

=> UGC ನೀಡುವ ಧನಸಹಾಯ ಮತ್ತು ಯೋಜನೆಗಳಿಂದ ವಂಚಿತಗೊಳಿಸುವುದು.

=> ಪದವಿ ಪ್ರದಾನ ಮಾಡುವ ಅಧಿಕಾರವನ್ನು ಹಿಂಪಡೆಯುವುದು.

=> UGC ಯ ಅಧಿಕೃತ ಮಾನ್ಯತೆ ಪಡೆದ ಸಂಸ್ಥೆಗಳ ಪಟ್ಟಿಯಿಂದ ಹೆಸರನ್ನು ತೆಗೆದುಹಾಕುವುದು.

➤ UGC ಯ ಈ ಕ್ರಾಂತಿಕಾರಿ ಹೆಜ್ಜೆಯು ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯಲು ಸಹಕಾರಿಯಾಗಿದೆ. ಶಿಕ್ಷಣ ಸಂಸ್ಥೆಗಳು ಕೇವಲ ಅಂಕಗಳನ್ನು ನೀಡುವ ಕೇಂದ್ರಗಳಾಗದೆ, ಪ್ರತಿಯೊಬ್ಬ ವಿದ್ಯಾರ್ಥಿಗೂ ಘನತೆ ಮತ್ತು ಸಮಾನ ಗೌರವ ನೀಡುವ ಪವಿತ್ರ ತಾಣಗಳಾಗಬೇಕೆಂಬುದು ಈ ನಿಯಮದ ಆಶಯವಾಗಿದೆ.

## ಪ್ರತಿಷ್ಠಿತ 'ವೈಲಿ ರಿಸರ್ಚ್ ಹೀರೋಸ್' ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಡಾ. ಚಂದ್ರಕಾಂತ್ ಲಹರಿಯಾ!



➤ ಭಾರತದ ಪ್ರಸಿದ್ಧ ಸಾರ್ವಜನಿಕ ಆರೋಗ್ಯ ತಜ್ಞ ಮತ್ತು ಲೇಖಕ ಡಾ. ಚಂದ್ರಕಾಂತ್ ಲಹರಿಯಾ ಅವರು 'ವೈಲಿ ರಿಸರ್ಚ್ ಹೀರೋಸ್ ಪ್ರಶಸ್ತಿ 2025' (Wiley Research Heroes Prize 2025) ಅನ್ನು ಗೆದ್ದಿದ್ದಾರೆ. ಈ ಜಾಗತಿಕ ಗೌರವಕ್ಕೆ ಪಾತ್ರರಾದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಡಾ. ಲಹರಿಯಾ ಅವರಿಗೆ 'ಇಂಪ್ಯಾಕ್ಟ್ ಬಿಯಾಂಡ್ ಅಕಾಡೆಮಿಯ' (Impact Beyond Academia) ವಿಭಾಗದಲ್ಲಿ ಈ ಪ್ರಶಸ್ತಿ ನೀಡಲಾಗಿದೆ.

➤ ಶೈಕ್ಷಣಿಕ ಸಂಶೋಧನೆಗಳು ಕೇವಲ ಪ್ರಬಂಧಗಳಿಗೆ ಸೀಮಿತವಾಗದೆ, ಸಮಾಜ ಮತ್ತು ಸರ್ಕಾರಿ ನೀತಿಗಳ ಮೇಲೆ ನೈಜ ಪ್ರಭಾವ ಬೀರಬೇಕು ಎಂಬ ಉದ್ದೇಶದೊಂದಿಗೆ, ಜಾಗತಿಕವಾಗಿ 2,000ಕ್ಕೂ ಹೆಚ್ಚು ಅಭ್ಯರ್ಥಿಗಳಲ್ಲಿ ಕೇವಲ ಐವರು ಸಾಧಕರನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ.

**➤ ಡಾ. ಚಂದ್ರಕಾಂತ್ ಲಹರಿಯಾ ಅವರ ಸಾಧನೆಗಳು: ಡಾ. ಲಹರಿಯಾ ಅವರು ವೈದ್ಯಕೀಯ ಸಂಶೋಧನೆಯನ್ನು ಸಾಮಾನ್ಯ ಜನರ ಜೀವನ ಸುಧಾರಿಸುವ ನೀತಿಗಳಾಗಿ ಪರಿವರ್ತಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ:**

=> ಆರೋಗ್ಯ ನೀತಿ ರೂಪಿಸುವಿಕೆ: ಭಾರತದ ರಾಷ್ಟ್ರೀಯ ಲಸಿಕಾ ಅಭಿಯಾನ ಮತ್ತು ಆರೋಗ್ಯ ನೀತಿಗಳನ್ನು ರೂಪಿಸುವಲ್ಲಿ ಇವರ ಕೊಡುಗೆ ಅಪಾರ.

=> ಮೊಹಲ್ಲಾ ಕ್ಲಿನಿಕ್‌ಗಳು: ದೆಹಲಿಯ 'ಮೊಹಲ್ಲಾ ಕ್ಲಿನಿಕ್' ಮತ್ತು ಹೈದರಾಬಾದ್‌ನ 'ಬಸ್ತಿ ದವಾಖಾನಾ' ಮಾದರಿಗಳನ್ನು ವಿನ್ಯಾಸಗೊಳಿಸುವಲ್ಲಿ ಅವರು ಕೆಲಸ ಮಾಡಿದ್ದಾರೆ.

=> ಆಯುಷ್ಮಾನ್ ಭಾರತ್: ಭಾರತದ ಮಹತ್ವಾಕಾಂಕ್ಷೆಯ 'ಆಯುಷ್ಮಾನ್ ಭಾರತ್ - ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ' (HWC) ಕಾರ್ಯಕ್ರಮಕ್ಕೆ ಇವರ ಸಂಶೋಧನೆಗಳು ಅಡಿಪಾಯವಾಗಿವೆ.

=> ಲಸಿಕಾ ಅಭಿಯಾನ: ಭಾರತದಲ್ಲಿ ಬಾಲ್ಯದ ಲಸಿಕಾ ವ್ಯಾಪ್ತಿಯನ್ನು 2005 ರಲ್ಲಿದ್ದ ಶೇ. 55 ರಿಂದ 2023 ರ ವೇಳೆಗೆ ಸುಮಾರು ಶೇ. 94 ಕ್ಕೆ ಹೆಚ್ಚಿಸುವಲ್ಲಿ ಇವರ ಸಂಶೋಧನೆಗಳು ನೆರವಾಗಿವೆ.

=> ಸಂಶೋಧನಾ ಪ್ರಬಂಧಗಳು: ಇವರು 150 ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದು, ವಿಶ್ವದ ಅಗ್ರ ಶೇ. 2 ರಷ್ಟು ಸಂಶೋಧಕರ ಪಟ್ಟಿಯಲ್ಲಿದ್ದಾರೆ.

## ಈಶಾನ್ಯ ಭಾರತದ 'ಹಸಿರು ಚಿನ್ನ'ಕ್ಕೆ ಹೊಸ ವೇಗ: ₹82.5 ಕೋಟಿ ಮೌಲ್ಯದ ಬಿದಿರು ಯೋಜನೆಗಳ ಉದ್ಘಾಟನೆ



➤ ಕೇಂದ್ರ ಈಶಾನ್ಯ ವಲಯ ಅಭಿವೃದ್ಧಿ (MDoNER) ಮತ್ತು ಸಂವಹನ ಸಚಿವರಾದ ಜ್ಯೋತಿರಾದಿತ್ಯ ಎಂ. ಸಿಂಧಿಯಾ ಅವರು ಜನವರಿ 26, 2026 ರಂದು ಗುವಾಹಟಿಯಲ್ಲಿ ಈಶಾನ್ಯ ರಾಜ್ಯಗಳ ಆರ್ಥಿಕತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ₹82.5 ಕೋಟಿ ಮೊತ್ತದ ಎರಡು ಪ್ರಮುಖ ಬಿದಿರು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

➤ ಈ ಯೋಜನೆಗಳನ್ನು ಈಶಾನ್ಯ ಮಂಡಳಿ (NEC) ಮತ್ತು ಈಶಾನ್ಯ ಬೆತ್ತ ಮತ್ತು ಬಿದಿರು ಅಭಿವೃದ್ಧಿ ಮಂಡಳಿ (NECBDC) ಮೂಲಕ ಜಾರಿಗೊಳಿಸಲಾಗುತ್ತಿದೆ. ಇದರ ಪ್ರಮುಖ ಉದ್ದೇಶ ಬಿದಿರನ್ನು ಕೇವಲ ಕೃಷಿ ಉತ್ಪನ್ನವಾಗಿ ಉಳಿಸದೆ, ಒಂದು ಸುಸ್ಥಿರ ಕೈಗಾರಿಕಾ ಚಾಲಕ ಶಕ್ತಿಯನ್ನಾಗಿ ಪರಿವರ್ತಿಸುವುದಾಗಿದೆ.

➤ ಸಾಂಪ್ರದಾಯಿಕ ಬಿದಿರು ಕುಶಲಕರ್ಮಿಗಳ ಕ್ಲಸ್ಟರ್‌ಗಳ ಬಲವರ್ಧನೆ: ಈ ಯೋಜನೆಯು ಈಶಾನ್ಯದ ಎಂಟು ರಾಜ್ಯಗಳಾದ ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ,

ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ ಮತ್ತು ತ್ರಿಪುರಾಗಳಲ್ಲಿ ಹರಡಿರುವ ಕುಶಲಕರ್ಮಿಗಳನ್ನು ಕೇಂದ್ರೀಕರಿಸಿದೆ.

=> ತಂತ್ರಜ್ಞಾನದ ಅಳವಡಿಕೆ: ಸಾಂಪ್ರದಾಯಿಕ ವಿಧಾನಗಳ ಜೊತೆಗೆ ಆಧುನಿಕ ಪರಿಕರಗಳನ್ನು (Modern Tools) ಒದಗಿಸುವ ಮೂಲಕ ಉತ್ಪಾದನಾ ವೇಗವನ್ನು ಹೆಚ್ಚಿಸುವುದು.

=> ಕಾಮನ್ ಫೆಸಿಲಿಟಿ ಸೆಂಟರ್ಸ್ (CFCs): ಕುಶಲಕರ್ಮಿಗಳಿಗೆ ಒಂದೇ ಸೂರಿನಡಿ ಸುಧಾರಿತ ಯಂತ್ರೋಪಕರಣಗಳು ಮತ್ತು ಸಂಸ್ಕರಣಾ ಸೌಲಭ್ಯಗಳನ್ನು ಒದಗಿಸುವುದು.

=> ಮಾರುಕಟ್ಟೆ ಕ್ರಾಂತಿ: ಈಶಾನ್ಯದ ಗ್ರಾಮೀಣ ಭಾಗದ ಉತ್ಪನ್ನಗಳು ಈಗ ನೇರವಾಗಿ Amazon ಮತ್ತು Flipkart ನಂತಹ ವೇದಿಕೆಗಳ ಮೂಲಕ ಜಾಗತಿಕ ಗ್ರಾಹಕರನ್ನು ತಲುಪಲಿವೆ. ಇದು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ ಕುಶಲಕರ್ಮಿಗಳಿಗೆ ನೇರ ಲಾಭ ತಂದುಕೊಡಲಿದೆ.

➤ ಇಂಜಿನಿಯರ್ಡ್ ಬಿದಿರು: ಭವಿಷ್ಯದ ಸುಸ್ಥಿರ ಕೈಗಾರಿಕೆ: ಬಿದಿರನ್ನು ಕೇವಲ ಅಲಂಕಾರಿಕ ವಸ್ತುಗಳಿಗೆ ಬಳಸದೆ, ಅದನ್ನು ಕೈಗಾರಿಕಾ ಕಚ್ಚಾವಸ್ತುವಾಗಿ ಬಳಸುವ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿದೆ.

=> ಉತ್ಪಾದನಾ ಕೇಂದ್ರಗಳು: ಅಸ್ಸಾಂನ ಕಾರ್ಬಿ ಆಂಗ್ಲಾಂಗ್ ಮತ್ತು ನಾಗಾಲ್ಯಾಂಡ್‌ನ ಮೊಕೊಕ್ಚುಂಗ್‌ನಲ್ಲಿ ಘಟಕಗಳು ಸ್ಥಾಪನೆಯಾಗುತ್ತಿವೆ.

=> ಪರಿಸರ ಸ್ನೇಹಿ ಪರ್ಯಾಯ: ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್ ಮತ್ತು ಮರಕ್ಕೆ (Timber) ಬೇಡಿಕೆ ಹೆಚ್ಚಿದೆ. ಬಿದಿರಿನಿಂದ ತಯಾರಿಸಿದ ಬೋರ್ಡ್‌ಗಳು, ಪ್ಯಾನಲ್‌ಗಳು ಮತ್ತು ಸುಧಾರಿತ ಪೀಠೋಪಕರಣಗಳು ಪರಿಸರಕ್ಕೆ ಹಾನಿಯಾಗದಂತೆ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಲಿವೆ.

=> ಬೃಹತ್ ಕೃಷಿ: 1,000 ಹೆಕ್ಟೇರ್ ಪ್ರದೇಶದಲ್ಲಿ ಪ್ರಮಾಣೀಕೃತ ಬಿದಿರು ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ, ಇದರಿಂದ ರೈತರಿಗೆ ನಿರಂತರ ಆದಾಯದ ಮೂಲ ಸೃಷ್ಟಿಯಾಗಲಿದೆ.

➤ ಈ ಯೋಜನೆಯ ಕಾರ್ಯತಂತ್ರದ ಮಹತ್ವ:

- ಆಕ್ಟ್ ಈಸ್ಟ್ ಪಾಲಿಸಿ (Act East Policy): ಈಶಾನ್ಯ ರಾಜ್ಯಗಳನ್ನು ಆಗ್ನೇಯ ಏಷ್ಯಾದ ದೇಶಗಳೊಂದಿಗೆ ಆರ್ಥಿಕವಾಗಿ ಬೆಸೆಯಲು ಈ ಯೋಜನೆ ಪೂರಕವಾಗಿದೆ.
- ಆತ್ಮನಿರ್ಭರ ಭಾರತ: ಚೀನಾದಿಂದ ಆಮದು ಮಾಡಿಕೊಳ್ಳುವ ಬಿದಿರು ಉತ್ಪನ್ನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು.
- ನಿವ್ವಳ ಶೂನ್ಯ ಹೊರಸೂಸುವಿಕೆ (Net Zero): ಬಿದಿರು ಹೆಚ್ಚಿನ ಪ್ರಮಾಣದ ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವುದರಿಂದ ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ.
- ಭಾರತೀಯ ಕಾನೂನಿನ ಪ್ರಕಾರ ಬಿದಿರನ್ನು 'ಮರ' ಎಂದು ಪರಿಗಣಿಸದೆ 'ಹುಲ್ಲು' (Grass) ಎಂದು ವರ್ಗೀಕರಿಸಲಾಗಿದೆ (ಇದರಿಂದಾಗಿ ಬಿದಿರನ್ನು ಕಡಿಯಲು ಮತ್ತು ಸಾಗಿಸಲು ಸುಲಭವಾಗುತ್ತದೆ).

➤ ಸಚಿವ ಸಿಂಧಿಯಾ ಅವರ ಪ್ರಕಾರ, ಕಳೆದ 12 ವರ್ಷಗಳಲ್ಲಿ ಈಶಾನ್ಯ ಭಾಗವು ಕೇವಲ ಭೌಗೋಳಿಕ ಗಡಿಯಾಗಿ ಉಳಿಯದೆ, ಭಾರತದ ಅಭಿವೃದ್ಧಿಯ ಮುಂಚೂಣಿಯಲ್ಲಿದೆ. ಈ ಬಿದಿರು ಯೋಜನೆಗಳು ಸ್ಥಳೀಯ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯನ್ನು ಉಳಿಸುವುದರ ಜೊತೆಗೆ ಅವರಿಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡಲಿವೆ.

## ಭಾರತ-EU ಶೃಂಗಸಭೆ 2026: ಐತಿಹಾಸಿಕ 'ಮುಕ್ತ ವ್ಯಾಪಾರ ಒಪ್ಪಂದ' ಕ್ಕೆ ಸಹಿ



➤ ಜನವರಿ 27, 2026 ರಂದು ನವದೆಹಲಿಯಲ್ಲಿ ನಡೆದ 16ನೇ ಭಾರತ-ಐರೋಪ್ಯ ಒಕ್ಕೂಟ (EU) ಶೃಂಗಸಭೆಯಲ್ಲಿ, ದಶಕಗಳಿಂದ ಬಾಕಿ ಉಳಿದಿದ್ದ ಮುಕ್ತ ವ್ಯಾಪಾರ ಒಪ್ಪಂದಕ್ಕೆ (FTA) ಅಧಿಕೃತವಾಗಿ ಸಹಿ ಹಾಕಲಾಯಿತು. ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಇದನ್ನು "Mother of all deals" (ಎಲ್ಲಾ ಒಪ್ಪಂದಗಳ ತಾಯಿ) ಎಂದು ಬಣ್ಣಿಸಿದ್ದಾರೆ.

➤ ಈ ಒಪ್ಪಂದವು ಜಾಗತಿಕ ಜಿಡಿಪಿಯ (GDP) ಸುಮಾರು 25% ರಷ್ಟು ಭಾಗವನ್ನು ಒಳಗೊಂಡಿದೆ.ಭಾರತಕ್ಕೆ ಯುರೋಪಿನ 27 ಸದಸ್ಯ ರಾಷ್ಟ್ರಗಳಿಗೆ ಏಕರೂಪದ ಆದ್ಯತೆಯ ಪ್ರವೇಶ ದೊರೆಯಲಿದೆ. ಇದು ಸುಮಾರು 1.9 ಬಿಲಿಯನ್ ಜನಸಂಖ್ಯೆಯ ಮಾರುಕಟ್ಟೆಯನ್ನು ಸಂಪರ್ಕಿಸುತ್ತದೆ. ವಿಶ್ವದ ಒಟ್ಟು 33 ಟ್ರಿಲಿಯನ್ ಡಾಲರ್ ವ್ಯಾಪಾರದಲ್ಲಿ, ಭಾರತ ಮತ್ತು ಇಯು ಜಂಟಿಯಾಗಿ 11 ಟ್ರಿಲಿಯನ್ ಡಾಲರ್ ಪಾಲನ್ನು ಹೊಂದಿವೆ.

**➤ ಈ ಒಪ್ಪಂದವು ಕೇವಲ ವ್ಯಾಪಾರಕ್ಕೆ ಸೀಮಿತವಾಗಿರದೆ, ಈ ಕೆಳಗಿನ ಕ್ಷೇತ್ರಗಳನ್ನು ಒಳಗೊಂಡಿದೆ:**

=> ತಯಾರಿಕೆ ಮತ್ತು ಸೇವಾ ವಲಯ: ಭಾರತದ ಉತ್ಪಾದನಾ ವಲಯ (Manufacturing) ಮತ್ತು ಸೇವಾ ವಲಯಕ್ಕೆ (Services) ದೊಡ್ಡ ಮಟ್ಟದ ಉತ್ತೇಜನ ಸಿಗಲಿದೆ.

=> ರಕ್ಷಣೆ ಮತ್ತು ಭದ್ರತೆ: ಹೊಸ 'ಡಿಫೆನ್ಸ್ ಫ್ರೇಮ್‌ವರ್ಕ್ ಪ್ಯಾಕ್ಟ್' ಮೂಲಕ ರಕ್ಷಣಾ ಸಹಕಾರವನ್ನು ಬಲಪಡಿಸುವುದು.

=> ಹಸಿರು ಇಂಧನ ಮತ್ತು ಹವಾಮಾನ: ಸುಸ್ಥಿರ ಅಭಿವೃದ್ಧಿ ಮತ್ತು ಹವಾಮಾನ ಬದಲಾವಣೆ ತಡೆಗೆ ಜಂಟಿ ಕಾರ್ಯತಂತ್ರ.

=> ತಂತ್ರಜ್ಞಾನ: ನಿರ್ಣಾಯಕ ತಂತ್ರಜ್ಞಾನಗಳ (Critical Technologies) ವಿನಿಮಯ.

➤ ಕಾರ್ಯತಂತ್ರದ ಪ್ರಾಮುಖ್ಯತೆ (Strategic Significance):

=> ಚೀನಾ-ಅಮೆರಿಕ ಅವಲಂಬನೆ ಇಳಿಕೆ: ಯುರೋಪ್ ರಾಷ್ಟ್ರಗಳು ಚೀನಾ ಮತ್ತು ಅಮೆರಿಕದ ಮೇಲಿನ ಅತಿಯಾದ ಅವಲಂಬನೆಯನ್ನು ಕಡಿಮೆ ಮಾಡಲು ಭಾರತದತ್ತ ಮುಖ ಮಾಡಿವೆ.

=> ಜಾಗತಿಕ ಪೂರೈಕೆ ಸರಪಳಿ: ಜಾಗತಿಕ ಮಾರುಕಟ್ಟೆಯಲ್ಲಿನ ಏರಿಳಿತಗಳ ನಡುವೆ ಸ್ಥಿರವಾದ ಆರ್ಥಿಕ ಸಂಬಂಧವನ್ನು ವೃದ್ಧಿಸುವುದು ಇದರ ಗುರಿ.

=> ನಿಯಮ ಆಧಾರಿತ ಜಾಗತಿಕ ವ್ಯವಸ್ಥೆ: ಎರಡೂ ರಾಷ್ಟ್ರಗಳು ಅಂತರರಾಷ್ಟ್ರೀಯ ನಿಯಮಗಳಿಗೆ ಬದ್ಧವಾಗಿ ಜಾಗತಿಕ ಆರ್ಥಿಕತೆಯನ್ನು ಮರುರೂಪಿಸಲು ನಿರ್ಧರಿಸಿವೆ.

# 28 Jan 2026

## ಜನವರಿ 28 : ಅಂತರರಾಷ್ಟ್ರೀಯ ದತ್ತಾಂಶ ಗೌಪ್ಯತಾ ದಿನ




* ಪ್ರತಿ ವರ್ಷ ಜನವರಿ 28 ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ದತ್ತಾಂಶ ಗೌಪ್ಯತಾ ದಿನ (International Data Privacy Day), ವೈಯಕ್ತಿಕ ಮಾಹಿತಿಯ ರಕ್ಷಣೆ ಮತ್ತು ಆನ್‌ಲೈನ್ ಭದ್ರತೆಯ ಬಗ್ಗೆ ಜಾಗೃತಿ ಮೂಡಿಸುವ ಒಂದು ಜಾಗತಿಕ ಕಾರ್ಯಕ್ರಮವಾಗಿದೆ. ಇದು 1981 ರಲ್ಲಿ ದತ್ತಾಂಶ ರಕ್ಷಣೆಯ ಮೊದಲ ಅಂತರರಾಷ್ಟ್ರೀಯ ಒಪ್ಪಂದವಾದ 'ಕನ್ವೆನ್ಷನ್ 108'ಗೆ ಸಹಿ ಹಾಕಿದ ದಿನವನ್ನು ಸ್ಮರಿಸುತ್ತದೆ.

* ಇತಿಹಾಸ: 2006 ರಲ್ಲಿ ಕೌನ್ಸಿಲ್ ಆಫ್ ಯುರೋಪ್ ದತ್ತಾಂಶ ರಕ್ಷಣಾ ದಿನವನ್ನು ಸ್ಥಾಪಿಸಿತು. ತರುವಾಯ, ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಡೇಟಾ ಗೌಪ್ಯತಾ ದಿನವಾಗಿ ವಿಸ್ತರಿಸಿತು.

* ಉದ್ದೇಶ: ವ್ಯಕ್ತಿಗಳು, ವ್ಯವಹಾರಗಳು ಮತ್ತು ಸರ್ಕಾರಗಳು ತಮ್ಮ ಸೂಕ್ಷ್ಮ ದತ್ತಾಂಶವನ್ನು (Data) ರಕ್ಷಿಸಿಕೊಳ್ಳುವ ಬಗ್ಗೆ ಮತ್ತು ಉತ್ತಮ ಭದ್ರತಾ ಅಭ್ಯಾಸಗಳ ಬಗ್ಗೆ ಅರಿವು ಮೂಡಿಸುವುದು.
* ಮಹತ್ವ: ಡಿಜಿಟಲ್ ಜಗತ್ತಿನಲ್ಲಿ ಹೆಚ್ಚುತ್ತಿರುವ ಸೈಬರ್ ಬೆದರಿಕೆಗಳು ಮತ್ತು ಡೇಟಾ ಉಲ್ಲಂಘನೆಗಳ ಸಂದರ್ಭದಲ್ಲಿ, ಈ ದಿನವು ನಮ್ಮ ವೈಯಕ್ತಿಕ ಮಾಹಿತಿಯ ಮೇಲೆ ನಮಗೆ ಹೆಚ್ಚಿನ ನಿಯಂತ್ರಣವನ್ನು ಒದಗಿಸುವ ಬಗ್ಗೆ ಶಿಕ್ಷಣ ನೀಡುತ್ತದೆ.
* ಭಾರತದ ಬೃಹತ್ ಡಿಜಿಟಲ್ ವಿಸ್ತರಣೆ :
- ಭಾರತ ಇಂದು ವಿಶ್ವದ ಮೂರನೇ ಅತಿದೊಡ್ಡ ಡಿಜಿಟಲೀಕೃತ ಆರ್ಥಿಕತೆಯಾಗಿದೆ. 101.7 ಕೋಟಿಗೂ ಹೆಚ್ಚು ಬ್ರಾಡ್‌ಬ್ಯಾಂಡ್ ಬಳಕೆದಾರರು ಪ್ರತಿದಿನ ಸುಮಾರು 1,000 ನಿಮಿಷಗಳನ್ನು ಆನ್‌ಲೈನ್‌ನಲ್ಲಿ ಕಳೆಯುತ್ತಾರೆ, ಇದಕ್ಕೆ ವಿಶ್ವದ ಕೆಲವು ಅಗ್ಗದ ಡೇಟಾ ದರಗಳು ಬೆಂಬಲ ನೀಡುತ್ತವೆ.
- ಆಧಾರ್, ಯುಪಿಐ, ಮೈಗವ್ ಮತ್ತು ಇ-ಸಂಜೀವನಿ ಮುಂತಾದ ವೇದಿಕೆಗಳು ಆಡಳಿತ ಮತ್ತು ಸೇವಾ ವಿತರಣೆಯನ್ನು ಪರಿವರ್ತಿಸಿವೆ. ಆದಾಗ್ಯೂ, ಈ ಪ್ರಮಾಣವು ಡೇಟಾ ದುರುಪಯೋಗ, ಸೈಬರ್ ವಂಚನೆ ಮತ್ತು ಉಲ್ಲಂಘನೆಯ ಅಪಾಯಗಳನ್ನು ಹೆಚ್ಚಿಸುತ್ತದೆ.
- ಹೆಚ್ಚು ಸೂಕ್ಷ್ಮವಾದ ವೈಯಕ್ತಿಕ ಡೇಟಾವನ್ನು ಪ್ರಕ್ರಿಯೆಗೊಳಿಸಿದಂತೆ, ಗೌಪ್ಯತೆಯ ರಕ್ಷಣೆ ಆಡಳಿತದ ಆದ್ಯತೆಯಾಗುತ್ತದೆ. ಡಿಜಿಟಲ್ ಬೆಳವಣಿಗೆ ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು ಈಗ ಡಿಜಿಟಲ್ ಪ್ರವೇಶವನ್ನು ವಿಸ್ತರಿಸುವಷ್ಟೇ ಮುಖ್ಯವಾಗಿದೆ.

## ವಿಶ್ವಸಂಸ್ಥೆ ಭದ್ರತಾ ಮಂಡಳಿ ಮತ್ತು ಭಾರತದ ಕಾಯಂ ಸದಸ್ಯತ್ವದ ಹಕ್ಕೊತ್ತಾಯ 2026



➤ ಜನವರಿ 26, ಸೋಮವಾರದಂದು ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಉನ್ನತ ಮಟ್ಟದ ಮುಕ್ತ ಚರ್ಚೆಯಲ್ಲಿ "ಅಂತರಾಷ್ಟ್ರೀಯ ಕಾನೂನಿನ ನಿಯಮಗಳ ಪುನರುಚ್ಚಾರ" (Reaffirming International Rule of Law) ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು. ಈ ವೇಳೆ ಭಾರತ ಮತ್ತು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಭದ್ರತಾ ಮಂಡಳಿಯ ಸುಧಾರಣೆಯ ಬಗ್ಗೆ ಮಹತ್ವದ ಮಾತುಗಳನ್ನಾಡಿದ್ದಾರೆ.

➤ ಭಾರತದ ಪ್ರತಿಪಾದನೆ: ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಪಿ. ಹರೀಶ್ ಅವರು ಸೋಮವಾರ ಮಾತನಾಡುತ್ತಾ, ಜಾಗತಿಕ ಆಡಳಿತ ರಚನೆಗಳು ಇಂದಿನ ವಾಸ್ತವಕ್ಕೆ ತಕ್ಕಂತೆ ಬದಲಾಗಬೇಕು. ವಿಶ್ವಸಂಸ್ಥೆಯು ಮೂಲಭೂತವಾಗಿ ಒತ್ತಡಕ್ಕೆ ಒಳಗಾಗಿರುವ ಈ ಸಮಯದಲ್ಲಿ, ಶಾಶ್ವತ ಸದಸ್ಯ ರಾಷ್ಟ್ರಗಳ ಸಂಖ್ಯೆಯನ್ನು ಹೆಚ್ಚಿಸುವುದು ಅನಿವಾರ್ಯ ಎಂದು ಹೇಳಿದರು.

➤ ಪಾರ್ಶ್ವವಾಯು ಪೀಡಿತ ಮಂಡಳಿ: ಅಂತರಾಷ್ಟ್ರೀಯ ಸಂಘರ್ಷಗಳನ್ನು ತಡೆಯುವಲ್ಲಿ ಭದ್ರತಾ ಮಂಡಳಿಯು ವಿಫಲವಾಗುತ್ತಿರುವುದು ಅದರ ವಿಶ್ವಾಸಾರ್ಹತೆಯನ್ನು ಕುಂದಿಸುತ್ತಿದೆ. ಇದು ಮಂಡಳಿಯ "ಕಾರ್ಯವೈಖರಿಯ ಪಾರ್ಶ್ವವಾಯು" (Paralysis) ಎಂದು ಹರೀಶ್ ಬಣ್ಣಿಸಿದರು.

➤ ಗುಟೆರೆಸ್ ಎಚ್ಚರಿಕೆ: ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ಭಾರತದ ನಿಲುವನ್ನು ಬೆಂಬಲಿಸುತ್ತಾ, "ವಿಶ್ವದಾದ್ಯಂತ ಕಾನೂನಿನ ನಿಯಮಗಳ ಬದಲಿಗೆ ಕಾಡಿನ ನಿಯಮ (Law of the jungle) ಜಾರಿಯಾಗುತ್ತಿದೆ" ಎಂದು ಕಳವಳ ವ್ಯಕ್ತಪಡಿಸಿದರು. ಯಾವುದೇ ವಿಳಂಬವಿಲ್ಲದೆ ಮಂಡಳಿಯ ಸುಧಾರಣೆಯಾಗಬೇಕು ಎಂದು ಅವರು ಒತ್ತಿ ಹೇಳಿದರು.

➤ ಬದಲಾದ ಜಾಗತಿಕ ಪರಿಸ್ಥಿತಿ: ವಿಶ್ವಸಂಸ್ಥೆ ಸ್ಥಾಪನೆಯಾಗಿ 80 ವರ್ಷಗಳಾಗಿವೆ. ಕಳೆದ ಎಂಟು ದಶಕಗಳಲ್ಲಿ ಜಾಗತಿಕ ಶಕ್ತಿ ರಾಜಕಾರಣ ಮತ್ತು ಜನಸಂಖ್ಯಾ ಸ್ವರೂಪ ಬದಲಾಗಿದೆ. ಆದರೆ ಮಂಡಳಿಯು ಇನ್ನೂ ಹಳೆಯ ಕಾಲದ ವ್ಯವಸ್ಥೆಯಲ್ಲೇ ಇರುವುದು ಸರಿಯಲ್ಲ ಎಂಬುದು ಭಾರತದ ವಾದ.

➤ ಹೊಸ ಸವಾಲುಗಳು: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರೂಪಿಸುತ್ತಿರುವ 'ಬೋರ್ಡ್ ಆಫ್ ಪೀಸ್' (Board of Peace) ನಂತಹ ಸಮಾನಾಂತರ ವೇದಿಕೆಗಳು ವಿಶ್ವಸಂಸ್ಥೆಯ ಅಧಿಕಾರಕ್ಕೆ ಸವಾಲಾಗುವ ಸಾಧ್ಯತೆಯಿದೆ ಎಂಬ ಅಂಶವನ್ನು ಚರ್ಚೆಯಲ್ಲಿ ಪ್ರಸ್ತಾಪಿಸಲಾಯಿತು.

## ಪೊಲೀಸ್ ಆಡಳಿತದಲ್ಲಿ ಕೃತಕ ಬುದ್ಧಿಮತ್ತೆ (AI): ಮಹಾರಾಷ್ಟ್ರ ಮತ್ತು ದೆಹಲಿ ರಾಜ್ಯಗಳ ಹೊಸ ಹೆಜ್ಜೆ




➤ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಅಪರಾಧ ತಡೆ ಮತ್ತು ತನಿಖೆಯನ್ನು ಚುರುಕುಗೊಳಿಸಲು ಭಾರತದ ಪ್ರಮುಖ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ದೆಹಲಿ ಪೊಲೀಸ್ ಇಲಾಖೆಗಳು ಕೃತಕ ಬುದ್ಧಿಮತ್ತೆ (Artificial Intelligence - AI) ಯೋಜನೆಯನ್ನು ಜಾರಿಗೆ ತಂದಿವೆ. ಜನವರಿ 2026ರ ವೇಳೆಗೆ ಈ ಎರಡೂ ರಾಜ್ಯಗಳು ಕಣ್ಗಾವಲು, ತನಿಖೆ ಮತ್ತು ಮುನ್ಸೂಚನಾ ಪೊಲೀಸಿಂಗ್‌ನಲ್ಲಿ (Predictive Policing) ಗಣನೀಯ ಪ್ರಗತಿ ಸಾಧಿಸಿವೆ.

➤ ಮಹಾರಾಷ್ಟ್ರ ಪೊಲೀಸ್: 'ಮಹಾಕ್ರೈಮ್-ಓಎಸ್ ಎಐ' (MahaCrimeOS AI): ಮಹಾರಾಷ್ಟ್ರವು ಇಡೀ ರಾಜ್ಯಾದ್ಯಂತ ಎಐ ತನಿಖಾ ವ್ಯವಸ್ಥೆಯನ್ನು ಜಾರಿಗೊಳಿಸಿದ ಮೊದಲ ರಾಜ್ಯಗಳಲ್ಲಿ ಒಂದಾಗಿದೆ.

=> ಮಹಾಕ್ರೈಮ್-ಓಎಸ್ (MahaCrimeOS AI): ಮೈಕ್ರೋಸಾಫ್ಟ್ ಸಹಯೋಗದೊಂದಿಗೆ ರಾಜ್ಯದ 1,100 ಪೊಲೀಸ್ ಠಾಣೆಗಳಲ್ಲಿ ಇದನ್ನು ಜಾರಿಗೊಳಿಸಲಾಗಿದೆ. ಇದು ಪೊಲೀಸರಿಗೆ 'ಎಐ ಕೋ-ಪೈಲಟ್' ಆಗಿ ಕೆಲಸ ಮಾಡುತ್ತದೆ.

**=> ಪ್ರಮುಖ ಲಕ್ಷಣಗಳು:**
- ಇದು ಮರಾಠಿ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕಾರ್ಯನಿರ್ವಹಿಸುತ್ತದೆ.
- ಕೈಬರಹದ ಟಿಪ್ಪಣಿಗಳು, ಆಡಿಯೋ ಮತ್ತು ಪಿಡಿಎಫ್ ದಾಖಲೆಗಳನ್ನು ಕ್ಷಣಾರ್ಧದಲ್ಲಿ ವಿಶ್ಲೇಷಿಸುತ್ತದೆ.
- ಸ್ವಯಂಚಾಲಿತವಾಗಿ ಎಫ್‌ಐಆರ್ (FIR) ಕರಡು ಸಿದ್ಧಪಡಿಸುವುದು ಮತ್ತು ತನಿಖಾ ಯೋಜನೆಗಳನ್ನು ರೂಪಿಸುತ್ತದೆ.

=> ಮಾರ್ವೆಲ್ (MARVEL): ಮಹಾರಾಷ್ಟ್ರ ಸರ್ಕಾರವು ಎಐ ಪರಿಕರಗಳನ್ನು ಅಭಿವೃದ್ಧಿಪಡಿಸಲು 'ಮಾರ್ವೆಲ್' ಎಂಬ ವಿಶೇಷ ವಿಭಾಗವನ್ನು ಸ್ಥಾಪಿಸಿದೆ. ಇದು ಅಪರಾಧಗಳು ಹೆಚ್ಚು ನಡೆಯುವ ಸ್ಥಳಗಳನ್ನು (Crime Hotspots) ಗುರುತಿಸಲು ಸಹಾಯ ಮಾಡುತ್ತದೆ.

=> ಪರಿಣಾಮ: ನಾಗ್ಪುರ ಗ್ರಾಮಾಂತರದಲ್ಲಿ ನಡೆದ ಪ್ರಾಯೋಗಿಕ ಯೋಜನೆಯಲ್ಲಿ, ತಿಂಗಳುಗಟ್ಟಲೆ ತೆಗೆದುಕೊಳ್ಳುತ್ತಿದ್ದ ತನಿಖಾ ಸಮಯವನ್ನು ಕೇವಲ ಕೆಲವೇ ದಿನಗಳಿಗೆ ಇಳಿಸಲಾಗಿದೆ.

➤ ದೆಹಲಿ ಪೊಲೀಸ್: 'ಸೇಫ್ ಸಿಟಿ' (Safe City) ಯೋಜನೆ : ದೆಹಲಿ ಪೊಲೀಸರು ರಾಜಧಾನಿಯ ಸುರಕ್ಷತೆಗಾಗಿ ಮತ್ತು ಜನಸಂದಣಿ ನಿಯಂತ್ರಣಕ್ಕಾಗಿ ಎಐ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ.

=> ಎಐ ಕ್ಯಾಮೆರಾಗಳ ಅಳವಡಿಕೆ: 'ಸೇಫ್ ಸಿಟಿ' ಯೋಜನೆಯಡಿ 10,000 ಎಐ ಕ್ಯಾಮೆರಾಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ.

=> ತಂತ್ರಜ್ಞಾನದ ವೈಶಿಷ್ಟ್ಯಗಳು:
- ಮುಖ ಗುರುತಿಸುವಿಕೆ (FRS): ಅನುಮಾನಾಸ್ಪದ ವ್ಯಕ್ತಿಗಳನ್ನು ಜನಸಂದಣಿಯಲ್ಲಿ ಗುರುತಿಸುವುದು.

- ಶಬ್ದ ವಿಶ್ಲೇಷಣೆ: ಗುಂಡಿನ ಸದ್ದು ಅಥವಾ ಕಿರುಚಾಟದಂತಹ ಅಸಹಜ ಶಬ್ದಗಳನ್ನು ಪತ್ತೆಹಚ್ಚಿ ತಕ್ಷಣ ಎಚ್ಚರಿಕೆ ನೀಡುವುದು.

=> ಎಐ ಸ್ಮಾರ್ಟ್ ಗ್ಲಾಸ್ (Smart Glasses): 2026ರ ಗಣರಾಜ್ಯೋತ್ಸವದ ವೇಳೆ ಪೊಲೀಸರು ಸ್ಮಾರ್ಟ್ ಕನ್ನಡಕಗಳನ್ನು ಬಳಸಿದ್ದಾರೆ. ಇವು 65,000 ಅಪರಾಧಿಗಳ ಡೇಟಾಬೇಸ್‌ಗೆ ಸಂಪರ್ಕ ಹೊಂದಿದ್ದು, ಎದುರಿಗಿರುವ ವ್ಯಕ್ತಿ ಅಪರಾಧಿಯೇ ಎಂಬುದನ್ನು ಕ್ಷಣಾರ್ಧದಲ್ಲಿ ತಿಳಿಸುತ್ತವೆ.

=> ಮಾಸ್ಕ್ ಲಿಫ್ಟಿಂಗ್: ಸಿಸಿಟಿವಿ ದೃಶ್ಯಗಳಲ್ಲಿ ಮುಖಕ್ಕೆ ಮಾಸ್ಕ್ ಧರಿಸಿದ್ದರೂ ಎಐ ಮೂಲಕ ಅದನ್ನು "ತೆಗೆದು" ವ್ಯಕ್ತಿಯನ್ನು ಗುರುತಿಸುವ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.

**➤ ಎಐ ಬಳಕೆಯು ಅನೇಕ ಪ್ರಯೋಜನಗಳನ್ನು ಹೊಂದಿದ್ದರೂ, ತಜ್ಞರು ಕೆಲವು ಪ್ರಮುಖ ಎಚ್ಚರಿಕೆಗಳನ್ನು ನೀಡಿದ್ದಾರೆ:**

=> ಗೌಪ್ಯತೆಯ ಹಕ್ಕು: ಸಾರ್ವಜನಿಕ ಸ್ಥಳಗಳಲ್ಲಿ ನಿರಂತರ ನಿಗಾವಣೆ ಇಡುವುದರಿಂದ ನಾಗರಿಕರ ಖಾಸಗಿತನಕ್ಕೆ ಧಕ್ಕೆ ಬರಬಹುದು.


=> ದೋಷಪೂರಿತ ಡೇಟಾ: ಹಳೆಯ ಪೊಲೀಸ್ ದಾಖಲೆಗಳಲ್ಲಿ ತಪ್ಪುಗಳಿದ್ದರೆ, ಎಐ ಕೂಡ ಅದೇ ತಪ್ಪುಗಳನ್ನು ಮುಂದುವರಿಸುವ ಅಪಾಯವಿರುತ್ತದೆ.

=> ಜವಾಬ್ದಾರಿ: ಎಐ ವ್ಯವಸ್ಥೆಯು ತಪ್ಪು ನಿರ್ಧಾರ ತೆಗೆದುಕೊಂಡರೆ ಅಥವಾ ಅಮಾಯಕರನ್ನು ಅಪರಾಧಿ ಎಂದು ಗುರುತಿಸಿದರೆ ಯಾರು ಹೊಣೆ ಎಂಬ ಬಗ್ಗೆ ಇನ್ನೂ ಸ್ಪಷ್ಟ ಕಾನೂನು ಮಾರ್ಗಸೂಚಿಗಳಿಲ್ಲ.

=> ಕೇಂದ್ರೀಕೃತ ಅಧಿಕಾರ: ತಂತ್ರಜ್ಞಾನದ ಮೇಲಿನ ಅವಲಂಬನೆಯಿಂದ ಸ್ಥಳೀಯ ಪೊಲೀಸರ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಕಡಿಮೆಯಾಗಬಹುದು.

➤ ಭಾರತೀಯ ನ್ಯಾಯ ಸಂಹಿತೆಯ (BNS) ಅಡಿಯಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ತನಿಖೆ ಪೂರ್ಣಗೊಳಿಸಲು ಎಐ ಅತ್ಯಗತ್ಯವಾಗಿದೆ. ಆದರೆ, ಇದರ ಬಳಕೆಯು ಪಾರದರ್ಶಕವಾಗಿರಬೇಕು ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವಂತಿರಬೇಕು ಎಂಬುದು ತಜ್ಞರ ಆಶಯವಾಗಿದೆ.

## ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಗಾಂಧೀಜಿ ಹೆಸರು: ರಾಜ್ಯ ಸರ್ಕಾರದ ದೊಡ್ಡ ನಿರ್ಧಾರ




➤ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹೊಸ ಬದಲಾವಣೆಯೊಂದು ಬರಲಿದ್ದು, ಕರ್ನಾಟಕದ ಎಲ್ಲಾ 6,000ಕ್ಕೂ ಅಧಿಕ ಗ್ರಾಮ ಪಂಚಾಯಿತಿಗಳಿಗೆ 'ರಾಷ್ಟ್ರಪಿತ ಮಹಾತ್ಮ ಗಾಂಧೀಜಿ' ಅವರ ಹೆಸರನ್ನು ಇಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಕುರಿತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕೃತ ಮಾಹಿತಿ ನೀಡಿದ್ದಾರೆ. ಈ ನಿರ್ಧಾರವು ಕೇವಲ ನಾಮಕರಣಕ್ಕೆ ಸೀಮಿತವಾಗಿರದೆ, ಗಾಂಧೀಜಿಯವರ 'ಗ್ರಾಮ ಸ್ವರಾಜ್ಯ' ಕನಸನ್ನು ಸಾಕಾರಗೊಳಿಸುವ ಒಂದು ಹೆಜ್ಜೆಯಾಗಿದೆ ಎಂದು ಸರ್ಕಾರ ಪ್ರತಿಪಾದಿಸಿದೆ. ಮುಂಬರುವ ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅಧಿಕೃತ ಘೋಷಣೆ ಮಾಡಲಾಗುವುದು.

➤ ಮನರೇಗಾ (MGNREGA) ಮತ್ತು ಗಾಂಧಿ ತತ್ವಗಳ ಸಂಘರ್ಷ: ಡಿ.ಕೆ. ಶಿವಕುಮಾರ್ ಅವರು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಾ, ಗಾಂಧೀಜಿಯವರ ಹೆಸರಿನಲ್ಲಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGA) ಬಗ್ಗೆ ಪ್ರಸ್ತಾಪಿಸಿದರು:

=> ಉದ್ಯೋಗದ ಹಕ್ಕು: ಬಡ ಜನರಿಗೆ ಕೆಲಸ ನೀಡುವ ಮನರೇಗಾ ಯೋಜನೆಯನ್ನು ಕೇಂದ್ರ ಸರ್ಕಾರ ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿದರು.

=> ರಾಜಕೀಯ ಸಂಘರ್ಷ: ಗಾಂಧೀಜಿಯವರನ್ನು ಹತ್ಯೆ ಮಾಡಿದ ವಿಚಾರ ಮತ್ತು ಪ್ರಸ್ತುತ ಯೋಜನೆಯ ಅನುದಾನ ಕಡಿತದ ವಿಚಾರವಾಗಿ ಬಿಜೆಪಿ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

- 73ನೇ ಸಾಂವಿಧಾನಿಕ ತಿದ್ದುಪಡಿ: ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಸಾಂವಿಧಾನಿಕ ಮಾನ್ಯತೆ ನೀಡಿದ ತಿದ್ದುಪಡಿ.
- ಮನರೇಗಾ (MGNREGA): ಈ ಯೋಜನೆಯನ್ನು 2005ರಲ್ಲಿ ಜಾರಿಗೆ ತರಲಾಯಿತು (ಆಗಸ್ಟ್ 25, 2005 ರಂದು ಕಾಯ್ದೆ ಅಂಗೀಕಾರವಾಯಿತು).
- ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ: 1993ರ ಕಾಯ್ದೆಯಡಿ ಕರ್ನಾಟಕದಲ್ಲಿ ಪಂಚಾಯತ್ ವ್ಯವಸ್ಥೆ ಕಾರ್ಯನಿರ್ವಹಿಸುತ್ತದೆ.

➤ ಗ್ರಾಮ ಸ್ವರಾಜ್ಯ'ಕ್ಕೆ ಬಲ ತುಂಬುವ ಪ್ರಯತ್ನ: ಹಳ್ಳಿಗೊಂದು ಶಾಲೆ, ಸಹಕಾರ ಸಂಘ ಮತ್ತು ಪಂಚಾಯತ್ ಇರಬೇಕು ಎಂಬುದು ಗಾಂಧೀಜಿಯವರ ಮೂಲ ಆಶಯವಾಗಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅವರ ಹೆಸರಿಡುವುದು ಸಾಂಕೇತಿಕವಾಗಿ ದೊಡ್ಡ ಬದಲಾವಣೆಗೆ ನಾಂದಿ ಹಾಡಲಿದೆ ಎಂದು ರಾಜ್ಯ ಸರ್ಕಾರ ನಂಬಿದೆ.

## ಮಾದರಿ ಯುವ ಗ್ರಾಮ ಸಭೆ (MYGS): ನವದೆಹಲಿಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ



➤ ಭಾರತದ ಪ್ರಜಾಪ್ರಭುತ್ವದ ಅಡಿಪಾಯವಾಗಿರುವ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯುವ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಮ್ಮಿಕೊಂಡಿದ್ದ 'ಮಾದರಿ ಯುವ ಗ್ರಾಮ ಸಭೆ' (Model Youth Gram Sabha - MYGS) ಅಭಿಯಾನವು ಈಗ ಯಶಸ್ಸಿನ ಶಿಖರ ತಲುಪಿದೆ. ಈ ಉಪಕ್ರಮದ ವಿಜೇತರನ್ನು ಗೌರವಿಸಲು ಜನವರಿ 28, 2026 ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ.

➤ ಕೇಂದ್ರ ಪಂಚಾಯತ್ ರಾಜ್ ರಾಜ್ಯ ಸಚಿವ ಪ್ರೊ. ಎಸ್.ಪಿ. ಸಿಂಗ್ ಬಘೇಲ್ ಮತ್ತು ಶಿಕ್ಷಣ ರಾಜ್ಯ ಸಚಿವ ಡಾ. ಸುಕಾಂತ ಮಜುಂದಾರ್ ಅವರ ನೇತೃತ್ವದಲ್ಲಿ ನಡೆಯಲಿರುವ ಈ ಕಾರ್ಯಕ್ರಮವು, ದೇಶಾದ್ಯಂತ 619 ನವೋದಯ ಮತ್ತು 200 ಏಕಲವ್ಯ ಶಾಲೆಗಳ ಸುಮಾರು 28,000 ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯನ್ನು ಸಂಭ್ರಮಿಸಲಿದೆ.

**➤ ಕಾರ್ಯಕ್ರಮದ ವಿಶೇಷತೆಗಳು:**

=> ಲೈವ್ ಪ್ರಾತ್ಯಕ್ಷಿಕೆಗಳು (Live Mock Sessions): ಉದ್ಘಾಟನಾ ಸಮಾರಂಭದಲ್ಲಿ ಎರಡು ಪ್ರಮುಖ ಶಾಲೆಗಳು ಲೈವ್ ಗ್ರಾಮ ಸಭೆಯನ್ನು ಪ್ರದರ್ಶಿಸಲಿವೆ:

1. ಜವಾಹರ್ ನವೋದಯ ವಿದ್ಯಾಲಯ, ಉನಾ (ಹಿಮಾಚಲ ಪ್ರದೇಶ)
2. ಏಕಲವ್ಯ ಮಾದರಿ ವಸತಿ ಶಾಲೆ, ಕೊಸಾಂಬುಡಾ (ಛತ್ತೀಸ್‌ಗಢ)

=> ಸಮಗ್ರ ಸಂಕಲನ (Compendium) ಬಿಡುಗಡೆ: ಈ ಅಭಿಯಾನವು ದೇಶಾದ್ಯಂತ ವಿದ್ಯಾರ್ಥಿಗಳ ಮೇಲೆ ಬೀರಿದ ಪರಿಣಾಮ ಮತ್ತು ಅದರ ಯಶಸ್ಸಿನ ಹಾದಿಯನ್ನು ದಾಖಲಿಸಿದ ವಿಶೇಷ ಪುಸ್ತಕವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುತ್ತದೆ.

=> ವಿದ್ಯಾರ್ಥಿಗಳು ಇಲ್ಲಿ 'ಸರಪಂಚ್', 'ವಾರ್ಡ್ ಮೆಂಬರ್' ಮತ್ತು 'ಗ್ರಾಮ ಕಾರ್ಯದರ್ಶಿ'ಯಂತಹ ಪಾತ್ರಗಳನ್ನು ನಿರ್ವಹಿಸುವ ಮೂಲಕ ಗ್ರಾಮದ ಬಜೆಟ್ ತಯಾರಿಕೆ ಮತ್ತು ಅಭಿವೃದ್ಧಿ ಯೋಜನೆಗಳ ಬಗ್ಗೆ ಚರ್ಚಿಸುತ್ತಾರೆ.

➤ ಸಂವಿಧಾನದ 73ನೇ ತಿದ್ದುಪಡಿ ಮತ್ತು MYGS: ಈ ಅಭಿಯಾನವು ಭಾರತೀಯ ಸಂವಿಧಾನದ 73ನೇ ತಿದ್ದುಪಡಿ (1992) ಯ ಆಶಯಗಳನ್ನು ಆಧರಿಸಿದೆ. ಈ ತಿದ್ದುಪಡಿಯು ಗ್ರಾಮೀಣ ಭಾರತಕ್ಕೆ ಸ್ವಾಯತ್ತ ಅಧಿಕಾರವನ್ನು ನೀಡಿದ್ದು, ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ:
- ಗ್ರಾಮ ಪಂಚಾಯತ್ (ಗ್ರಾಮ ಮಟ್ಟ)
- ತಾಲ್ಲೂಕು ಪಂಚಾಯತ್ (ಮಧ್ಯಂತರ ಮಟ್ಟ)
- ಜಿಲ್ಲಾ ಪಂಚಾಯತ್ (ಜಿಲ್ಲಾ ಮಟ್ಟ)

ವಿದ್ಯಾರ್ಥಿಗಳಲ್ಲಿ ಈ ಸಾಂವಿಧಾನಿಕ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು MYGS ನ ಮುಖ್ಯ ಗುರಿಯಾಗಿದೆ.

➤ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಯುವಶಕ್ತಿಯ ಪಾತ್ರ ದೊಡ್ಡದು. ಇಂತಹ ಉಪಕ್ರಮಗಳು ಭಾರತವನ್ನು 2047ರ ವೇಳೆಗೆ 'ವಿಕಸಿತ ಭಾರತ'ವನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

## ವಾಶ್ ವಾರಿಯರ್ಸ್: ಗ್ರಾಮೀಣ ಭಾರತದ ಬದಲಾವಣೆಯ ಹರಿಕಾರರು

➤ ನವದೆಹಲಿಯ ಪಿಎಸ್‌ಒಐನಲ್ಲಿ (PSOI) ನಡೆದ ಈ ಸಮಾರಂಭದಲ್ಲಿ ದೇಶದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ನಾಮನಿರ್ದೇಶನಗೊಂಡ 58 'ವಾಶ್ ವಾರಿಯರ್ಸ್' ಭಾಗವಹಿಸಿದ್ದರು. ಈ ಸಾಧಕರು ಜನವರಿ 26, 2026 ರಂದು ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆದ 77ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ 'ವಿಶೇಷ ಅತಿಥಿ'ಗಳಾಗಿ ಪಾಲ್ಗೊಂಡಿದ್ದರು.

➤ ವಾಶ್ ವಾರಿಯರ್ಸ್ ( WaSH - Water, Sanitation, and Hygiene.): ಜಲ ಜೀವನ್ ಮಿಷನ್ (JJM) ಮತ್ತು ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಅಡಿಯಲ್ಲಿ ನೀರು, ನೈರ್ಮಲ್ಯ ಮತ್ತು ನೈರ್ಮಲ್ಯ (WaSH) ವ್ಯವಸ್ಥೆಗಳನ್ನು ಸುಧಾರಿಸಲು ಶ್ರಮಿಸಿದ ತಳಮಟ್ಟದ ನಾಯಕರು. ಈ ಸಾಧಕರು 'ಸ್ವಚ್ಛ ಸುಜಲ ಗ್ರಾಮ'ಗಳಿಂದ ಬಂದವರು. ಅಂದರೆ, ಈ ಗ್ರಾಮಗಳು 'ಹರ್ ಘರ್ ಜಲ್' (ಪ್ರತಿ ಮನೆಗೆ ನಲ್ಲಿ ನೀರು) ಮತ್ತು 'ಒಡಿಎಫ್ ಪ್ಲಸ್ ಮಾಡೆಲ್' (ಬಹಿರಂಗ ಶೌಚ ಮುಕ್ತ ಮಾದರಿ) ಎಂದು ಪ್ರಮಾಣೀಕರಿಸಲ್ಪಟ್ಟಿವೆ.

ಕೇಂದ್ರ ಜಲಶಕ್ತಿ ಸಚಿವ ಶ್ರೀ ಸಿ. ಆರ್. ಪಾಟೀಲ್ ಅವರು ಈ ವಾರಿಯರ್ಸ್ ಜೊತೆ ಸಂವಾದ ನಡೆಸಿ, ಅವರ ಯಶಸ್ಸಿನ ಕಥೆಗಳನ್ನು ಆಲಿಸಿದರು.

➤ ಜಲ ಜೀವನ್ ಮಿಷನ್ ಅಡಿಯಲ್ಲಿ ದೇಶದ ಶೇ. 81.57 ಕ್ಕೂ ಹೆಚ್ಚು ಗ್ರಾಮೀಣ ಮನೆಗಳಿಗೆ ನಲ್ಲಿ ನೀರು ಒದಗಿಸುವ ಮೂಲಕ ಸುಮಾರು 9.5 ಕೋಟಿ ಮಹಿಳೆಯರಿಗೆ ಅನುಕೂಲವಾಗಿದ್ದು, ಅಂದಾಜು 4.5 ಕೋಟಿ ಗಂಟೆಗಳ ಸಮಯ ಉಳಿತಾಯದೊಂದಿಗೆ ಆರೋಗ್ಯ ಮತ್ತು ಜೀವನಮಟ್ಟದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ.

➤ ಪ್ರಮುಖ ಬಿಡುಗಡೆಗಳು ಮತ್ತು ಅಭಿಯಾನಗಳು: ಕಾರ್ಯಕ್ರಮದಲ್ಲಿ ಜಲ ಸಂರಕ್ಷಣೆಗೆ ಸಂಬಂಧಿಸಿದ ಕೆಲವು ಪ್ರಮುಖ ಉಪಕ್ರಮಗಳನ್ನು ಹಂಚಿಕೊಳ್ಳಲಾಯಿತು:

=> "ಪೇಯಜಲ್: ಜನಶಕ್ತಿ ಕಿ ಅಭಿವ್ಯಕ್ತಿ - ಸಂಪುಟ II" (Peyjal: Jan Shakti Ki Abhivyakti): ಈ ಪುಸ್ತಕವು ವಾಶ್ ವಾರಿಯರ್ಸ್ ಜೀವನಗಾಥೆ ಮತ್ತು ಅವರ ಯಶಸ್ಸಿನ ಕಥೆಗಳನ್ನು ಒಳಗೊಂಡಿದೆ.

=> ಯೂತ್ ಫಾರ್ ಗಂಗಾ - ಯೂತ್ ಫಾರ್ ಯಮುನಾ (Youth for Ganga – Youth for Yamuna): ಯುವಜನತೆ ಮತ್ತು ಶಾಲಾ ಮಕ್ಕಳಲ್ಲಿ ನದಿ ಸಂರಕ್ಷಣೆ ಮತ್ತು ಜಲ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸುವ ಅಭಿಯಾನ.

=> ಜಲ ಸಂಚಯ (Jal Sanchay): ಸಮುದಾಯದ ಸಹಭಾಗಿತ್ವದೊಂದಿಗೆ ಮಳೆ ನೀರು ಕೊಯ್ಲು ಮತ್ತು ನೀರಿನ ಮರುಬಳಕೆಗೆ ಒತ್ತು ನೀಡುವುದು.

➤ 2024ರ ಅಂತ್ಯದ ವೇಳೆಗೆ ಪ್ರತಿ ಗ್ರಾಮೀಣ ಮನೆಗೆ ತಲಾ 55 ಲೀಟರ್ ಕುಡಿಯುವ ನೀರನ್ನು ಒದಗಿಸುವುದು (ಪ್ರಸ್ತುತ 2026 ರವರೆಗೆ ವಿಸ್ತರಿತ ಗುರಿಗಳು ಜಾರಿಯಲ್ಲಿವೆ).

## ಭಾರತದ ಮೊದಲ ರಾಷ್ಟ್ರೀಯ ಹೌಸ್ ಹೋಲ್ಡ್ ಇನ್‌ಕಮ್ ಸರ್ವೇ (NHIS)




➤ ಚೆನ್ನೈನಲ್ಲಿ 2026ರ ಜನವರಿ 28-29 ರಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (NSO) ಅಖಿಲ ಭಾರತ ತರಬೇತುದಾರರ ಕಾರ್ಯಾಗಾರವನ್ನು (AIWOT) ಆಯೋಜಿಸಿದೆ. ಇದು ಏಪ್ರಿಲ್ 2026 ರಿಂದ ಆರಂಭವಾಗಲಿರುವ ರಾಷ್ಟ್ರೀಯ ಹೌಸ್‌ಹೋಲ್ಡ್ ಇನ್‌ಕಮ್ ಸರ್ವೇ (NHIS) ಮತ್ತು ಕಾರ್ಪೊರೇಟ್ ಸೇವಾ ವಲಯದ ಉದ್ಯಮಗಳ ವಾರ್ಷಿಕ ಸಮೀಕ್ಷೆ (ASISSE) ಗಾಗಿ ನಡೆಸಲಾಗುತ್ತಿರುವ ಪೂರ್ವಸಿದ್ಧತಾ ಕಾರ್ಯಕ್ರಮವಾಗಿದೆ. ಭಾರತದ ಆರ್ಥಿಕ ಮತ್ತು ಸಾಮಾಜಿಕ ಅಂಕಿಅಂಶಗಳ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲು ಸ್ಥಾಪನೆಯಾಗುತ್ತಿದೆ. ದಶಕಗಳಿಂದ ಇದ್ದ ದತ್ತಾಂಶದ ಕೊರತೆಯನ್ನು ನೀಗಿಸಲು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು (MoSPI) ಎರಡು ಪ್ರಮುಖ ರಾಷ್ಟ್ರವ್ಯಾಪಿ ಸಮೀಕ್ಷೆಗಳಿಗೆ ಚಾಲನೆ ನೀಡುತ್ತಿದೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ತಲುಪಲಾಗದ ಕೆಲವು ಹಳ್ಳಿಗಳನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಅನ್ವಯ

**➤ ರಾಷ್ಟ್ರೀಯ ಹೌಸ್‌ಹೋಲ್ಡ್ ಇನ್‌ಕಮ್ ಸರ್ವೇ (NHIS): ಇದು ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ನಡೆಸಲಾಗುತ್ತಿರುವ ಅಖಿಲ ಭಾರತ ಮಟ್ಟದ ಕುಟುಂಬದ ಆದಾಯದ ಸಮೀಕ್ಷೆಯಾಗಿದೆ. ದೇಶದ ಜನರ ಜೀವನ ಮಟ್ಟ ಮತ್ತು ಆದಾಯದ ಹಂಚಿಕೆಯ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸುವುದು.**

=> ಇದು ಆದಾಯದ ಮಾದರಿಗಳು, ಕಾರ್ಮಿಕ ಶಕ್ತಿ, ಬಂಡವಾಳ ಮತ್ತು ಭೂಮಿಯಿಂದ ಬರುವ ಆದಾಯದ ನಡುವಿನ ಸಂಬಂಧವನ್ನು ವಿಶ್ಲೇಷಿಸಲು ಸಹಾಯ ಮಾಡುತ್ತದೆ.

=> ಸರ್ಕಾರದ ಕಲ್ಯಾಣ ಯೋಜನೆಗಳು (Targeted Interventions) ಅರ್ಹರಿಗೆ ತಲುಪುವಂತೆ ಮಾಡಲು ಈ ದತ್ತಾಂಶ ಸಹಕಾರಿ.

=> ಕುಟುಂಬಗಳ ನಡುವಿನ ಮತ್ತು ವಿವಿಧ ಪ್ರದೇಶಗಳ ನಡುವಿನ ಆದಾಯದ ಅಸಮಾನತೆಯನ್ನು ಹೋಲಿಕೆ ಮಾಡಲು ಇದು ಅವಕಾಶ ನೀಡುತ್ತದೆ.

➤ ಕಾರ್ಪೊರೇಟ್ ಸೇವಾ ವಲಯದ ಉದ್ಯಮಗಳ ವಾರ್ಷಿಕ ಸಮೀಕ್ಷೆ (ASISSE): ಭಾರತದ ಜಿಡಿಪಿಗೆ ಸಿಂಹಪಾಲು ನೀಡುವ ಸೇವಾ ವಲಯದ ದತ್ತಾಂಶಗಳನ್ನು ಕ್ರೋಢೀಕರಿಸಲು ಈ ಸಮೀಕ್ಷೆ ವಿನ್ಯಾಸಗೊಳಿಸಲಾಗಿದೆ. ದೇಶದ ಸಾಂಸ್ಥಿಕ (Incorporated) ಸೇವಾ ವಲಯದ ಬಗ್ಗೆ ಸಮಗ್ರ ಡೇಟಾಬೇಸ್ ಸಿದ್ಧಪಡಿಸುವುದು.

=> ಇದು ಕೇವಲ ನೋಂದಾಯಿತ ಅಥವಾ ಕಾರ್ಪೊರೇಟ್ ಸೇವಾ ಸಂಸ್ಥೆಗಳನ್ನು ಮಾತ್ರ ಒಳಗೊಂಡಿರುತ್ತದೆ.

=> ಒಟ್ಟು ಮೌಲ್ಯವರ್ಧನೆ (GVA), ಸ್ಥಿರ ಬಂಡವಾಳ, ಉದ್ಯೋಗಾವಕಾಶ ಮತ್ತು ವೇತನಗಳ ಬಗ್ಗೆ ರಾಜ್ಯ ಮತ್ತು ಉದ್ಯಮ ಮಟ್ಟದ ಅಂದಾಜುಗಳನ್ನು ಇದು ನೀಡುತ್ತದೆ.

=> ಈ ಸಮೀಕ್ಷೆಯು GSTN (Goods and Services Tax Network) ಚೌಕಟ್ಟನ್ನು ಬಳಸಿಕೊಂಡು ಉದ್ಯಮ-ಆಧಾರಿತ ವಿಧಾನವನ್ನು ಅನುಸರಿಸುತ್ತದೆ.

➤ ಚೆನ್ನೈನಲ್ಲಿ ನಡೆಯುತ್ತಿರುವ ತರಬೇತಿಯಲ್ಲಿ ಭಾಗವಹಿಸುವ ಅಧಿಕಾರಿಗಳು 'ಮಾಸ್ಟರ್ ಟ್ರೈನರ್ಸ್' ಆಗಿ

ಕಾರ್ಯನಿರ್ವಹಿಸಲಿದ್ದಾರೆ. ಇವರು ಮುಂದೆ ಪ್ರಾದೇಶಿಕ ಮಟ್ಟದಲ್ಲಿ ತರಬೇತಿ ನೀಡಲಿದ್ದಾರೆ. ಈ ಸಮೀಕ್ಷೆಯು ಸಂಪೂರ್ಣ ಡಿಜಿಟಲ್ ಆಗಿರುವುದರಿಂದ ದತ್ತಾಂಶದ ನಿಖರತೆ ಮತ್ತು ಗುಣಮಟ್ಟ ಹೆಚ್ಚಿರಲಿದೆ ಎಂದು ನಿರೀಕ್ಷಿಸಲಾಗಿದೆ. ಈ ಸಮೀಕ್ಷೆಯ ತಾಂತ್ರಿಕ ತಂಡದ ನೇತೃತ್ವವನ್ನು ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಸುರ್ಜಿತ್ ಎಸ್. ಭಲ್ಲಾ ಅವರು ವಹಿಸಿದ್ದಾರೆ.

## ಅಜಿತ್ ಪವಾರ್ ಪ್ರಯಾಣಿಸುತ್ತಿದ್ದ ಚಾರ್ಟರ್ಡ್ ವಿಮಾನ ಅಪಘಾತ: ಬಾರಾಮತಿಯಲ್ಲಿ ದುರಂತ



➤ ಬಾರಾಮತಿ, ಪುಣೆ ಜಿಲ್ಲೆ, ಮಹಾರಾಷ್ಟ್ರ ದಲ್ಲಿ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಹಾಗೂ ಎನ್‌ಸಿಪಿ (NCP) ಅಧ್ಯಕ್ಷ ಅಜಿತ್ ಪವಾರ್ ಅವರು ಪ್ರಯಾಣಿಸುತ್ತಿದ್ದ ಚಾರ್ಟರ್ಡ್ ವಿಮಾನವು ಬುಧವಾರ (28-01-2026) ಬೆಳಿಗ್ಗೆ ಬಾರಾಮತಿಯ ರನ್‌ವೇ ಬಳಿ ಪತನಗೊಂಡಿದೆ. ಮುಂಬೈನಿಂದ ಬಾರಾಮತಿಗೆ ತೆರಳುತ್ತಿದ್ದ ಈ ವಿಮಾನವು ಬೆಳಿಗ್ಗೆ ಸುಮಾರು 8:45ಕ್ಕೆ ಅಪಘಾತಕ್ಕೀಡಾಗಿದ್ದು, ಪ್ರಾಥಮಿಕ ವರದಿಗಳ ಪ್ರಕಾರ ವಿಮಾನದಲ್ಲಿದ್ದ ಐವರು ಸಾವನ್ನಪ್ಪಿದ್ದಾರೆ.

➤ ಅಜಿತ್ ಪವಾರ್ ಅವರು ಜಿಲ್ಲಾ ಪರಿಷತ್ ಚುನಾವಣೆಗೆ ಸಂಬಂಧಿಸಿದ ಸಾರ್ವಜನಿಕ ರ್‍ಯಾಲಿಯಲ್ಲಿ ಭಾಗವಹಿಸಲು ಮುಂಬೈನಿಂದ ಬಾರಾಮತಿಗೆ ತೆರಳುತ್ತಿದ್ದರು. ಇಬ್ಬರು ಪೈಲಟ್‌ಗಳು ಸೇರಿದಂತೆ ಒಟ್ಟು ಐವರು ವಿಮಾನದಲ್ಲಿದ್ದರು. ಇದರಲ್ಲಿ ಅಜಿತ್ ಪವಾರ್, ಅವರ ವೈಯಕ್ತಿಕ ಭದ್ರತಾ ಅಧಿಕಾರಿ ಮತ್ತು ಓರ್ವ ಸಹಾಯಕ ಸೇರಿದ್ದರು.ವಿಮಾನವು ಲ್ಯಾಂಡಿಂಗ್ ಆಗುವ ಅಂತಿಮ ಹಂತದಲ್ಲಿದ್ದಾಗ ರನ್‌ವೇ ಹೊಸ್ತಿಲಿನಲ್ಲಿ (Runway Threshold) ಪತನಗೊಂಡಿದೆ. ಅಪಘಾತದ ತಕ್ಷಣ ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಯಿತು.

➤ ಅಜಿತ್ ಪವಾರ್ ಪ್ರಸ್ತುತ ಮಹಾರಾಷ್ಟ್ರದ ಉಪಮುಖ್ಯಮಂತ್ರಿಯಾಗಿದ್ದಾರೆ. ಘಟನೆಯ ಹಿಂದಿನ ದಿನವಷ್ಟೇ ಅವರು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ ಮೂಲಸೌಕರ್ಯ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದರು.

➤ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (DGCA) ಈ ಕುರಿತು ಹೇಳಿಕೆ ನೀಡಿದ್ದು, ಅಪಘಾತದ ನಿಖರ ಕಾರಣ ತಿಳಿಯಲು ತನಿಖೆಗೆ ಆದೇಶಿಸಿದೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ವಿಮಾನವು ಇಳಿಯುವಾಗ ಅಸ್ಥಿರವಾಗಿದ್ದಂತೆ ಕಂಡುಬಂದಿತು ಮತ್ತು ಪತನದ ನಂತರ ಸರಣಿ ಸ್ಫೋಟಗಳು ಸಂಭವಿಸಿದವು.

➤ ಅಜಿತ್ ಪವಾರ್ ಅವರು ಸುಮಾರು ನಾಲ್ಕು ದಶಕಗಳ ಕಾಲ ಮಹಾರಾಷ್ಟ್ರ ರಾಜಕಾರಣದಲ್ಲಿ ಸಕ್ರಿಯರಾಗಿದ್ದರು:
- 1982ರಲ್ಲಿ ಸಕ್ಕರೆ ಸಹಕಾರಿ ಸಂಘದ ಮೂಲಕ ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿದರು.
- 1991ರಲ್ಲಿ ಬಾರಾಮತಿ ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಆಯ್ಕೆಯಾದರು (ನಂತರ ಶರದ್ ಪವಾರ್ ಅವರಿಗಾಗಿ ಸ್ಥಾನ ಬಿಟ್ಟುಕೊಟ್ಟರು).
- ಬಾರಾಮತಿ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ 7 ಬಾರಿ (1991 ರಿಂದ 2024 ರವರೆಗೆ) ಶಾಸಕರಾಗಿ ಆಯ್ಕೆಯಾದರು.
- ಮಹಾರಾಷ್ಟ್ರದ ಇತಿಹಾಸದಲ್ಲಿ ಅತಿ ಹೆಚ್ಚು ಬಾರಿ (6 ಬಾರಿ) ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ದಾಖಲೆ ಇವರ ಹೆಸರಿನಲ್ಲಿದೆ. ಪೃಥ್ವಿರಾಜ್ ಚವಾಣ್, ದೇವೇಂದ್ರ ಫಡ್ನವೀಸ್, ಉದ್ಧವ್ ಠಾಕ್ರೆ ಮತ್ತು ಏಕನಾಥ್ ಶಿಂಧೆ ಅವರ ಸಂಪುಟಗಳಲ್ಲಿ ಈ ಜವಾಬ್ದಾರಿ ನಿರ್ವಹಿಸಿದ್ದರು.

## ಬಾಹ್ಯಾಕಾಶದಲ್ಲಿ ಭಾರತದ ಪ್ರಥಮ 'ಬೆಲೂನ್' ಮನೆ: ಬೆಂಗಳೂರಿನ ಸ್ಟಾರ್ಟ್ ಅಪ್‌ನಿಂದ 'ಅಂತರಿಕ್ಷHAB' ಕ್ರಾಂತಿ



➤ ಬೆಂಗಳೂರು ಮೂಲದ ಸ್ಟಾರ್ಟ್‌ಅಪ್ 'ಆಕಾಶಲಬ್ಧಿ' (Akashalabdhi) ಬಾಹ್ಯಾಕಾಶದಲ್ಲಿ ಮಾನವ ವಾಸಕ್ಕೆ ಯೋಗ್ಯವಾದ 'ಉಬ್ಬಿಸಬಹುದಾದ' (Inflatable) ವಸತಿ ಕೇಂದ್ರವನ್ನು ಸಿದ್ಧಪಡಿಸುವ ಮೂಲಕ ಇತಿಹಾಸ ನಿರ್ಮಿಸಲು ಮುಂದಾಗಿದೆ. ಈ ತಂತ್ರಜ್ಞಾನದಲ್ಲಿ ಭಾರತದ ಮೊದಲ ಹೆಜ್ಜೆ ಇದಾಗಿದ್ದು, ಇತ್ತೀಚೆಗೆ ಸ್ವಿಟ್ಜರ್ಲೆಂಡ್‌ನಲ್ಲಿ ಯಶಸ್ವಿ ಪರೀಕ್ಷೆಗಳನ್ನು ಪೂರೈಸಿದೆ.

➤ 'ಅಂತರಿಕ್ಷHAB' (AntarikshHAB) : ಇದು ಬಾಹ್ಯಾಕಾಶದಲ್ಲಿ ಉಬ್ಬಿಸಬಹುದಾದ ಒಂದು ಮಾಡ್ಯುಲರ್ ವಸತಿ ಕೇಂದ್ರವಾಗಿದೆ. ಸಾಮಾನ್ಯವಾಗಿ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಂತಹ (ISS) ಘಟಕಗಳು ಲೋಹದಿಂದ ಕೂಡಿದ್ದು, ಅವುಗಳನ್ನು ಉಡಾವಣೆ ಮಾಡುವುದು ತುಂಬಾ ದುಬಾರಿ ಮತ್ತು ಕಷ್ಟಕರ. ಆದರೆ, ಅಂತರಿಕ್ಷHAB ಅನ್ನು ಮಡಚಿದ ಸ್ಥಿತಿಯಲ್ಲಿ ರಾಕೆಟ್ ಮೂಲಕ ಕಳುಹಿಸಿ, ಬಾಹ್ಯಾಕಾಶ ತಲುಪಿದ ನಂತರ ಬೆಲೂನ್ ನಂತೆ ಉಬ್ಬಿಸಬಹುದು.

➤ ಜುಲೈನಲ್ಲಿ ಉಡಾವಣೆ : ಜುಲೈನಲ್ಲಿ 70 ಕ್ಯೂಬಿಕ್ ಮೀಟರ್ ಗಾತ್ರದ ಸಣ್ಣ ಮಾದರಿಯನ್ನು ಉಡಾವಣೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ 300 ಕ್ಯೂಬಿಕ್ ಮೀಟರ್ ಗಾತ್ರದ ದೊಡ್ಡ ಹ್ಯಾಬಿಟಾಟ್ ನಿರ್ಮಿಸುವ ಗುರಿ ಇದೆ.

=> ಸ್ಪೇನ್‌ನ PLD Space ರಾಕೆಟ್ ಮೂಲಕ ಇದನ್ನು ಉಡಾವಣೆ ಮಾಡಲಾಗುತ್ತದೆ. ಈ ಯೋಜನೆಗೆ ಯುರೋಪಿಯನ್ ಸ್ಪೇಸ್ ಏಜೆನ್ಸಿ (ESA) ಮತ್ತು ಸ್ವಿಟ್ಜರ್ಲೆಂಡ್‌ನ ಅಂಬರ್ಗ್ ಗ್ರೂಪ್ ಬೆಂಬಲ ನೀಡಿವೆ.

=> ಸ್ವಿಟ್ಜರ್ಲೆಂಡ್‌ನ ಭೂಗತ ಪ್ರಯೋಗಾಲಯವಾದ 'VSH ಹೇಗರ್‌ಬಾಚ್'ನಲ್ಲಿ ಈ ವಸತಿ ಕೇಂದ್ರದ ವಿಕಿರಣ ನಿರೋಧಕ ಶಕ್ತಿ ಮತ್ತು ಬಾಳಿಕೆಯನ್ನು ಪರೀಕ್ಷಿಸಲಾಗಿದೆ.

➤ ಈ ತಂತ್ರಜ್ಞಾನದ ವಿಶೇಷತೆಗಳು:

=> ಕಡಿಮೆ ವೆಚ್ಚ: ಹಗುರವಾದ ವಸ್ತುಗಳಿಂದ ತಯಾರಿಸಲ್ಪಟ್ಟಿರುವುದರಿಂದ ಉಡಾವಣಾ ವೆಚ್ಚ ಗಣನೀಯವಾಗಿ ಕಡಿಮೆಯಾಗುತ್ತದೆ.

=> ಹೆಚ್ಚಿನ ಸ್ಥಳಾವಕಾಶ: ರಾಕೆಟ್‌ನಲ್ಲಿ ಕಡಿಮೆ ಜಾಗ ಆಕ್ರಮಿಸಿಕೊಳ್ಳುವ ಇದು, ಬಾಹ್ಯಾಕಾಶದಲ್ಲಿ ದೊಡ್ಡ ಗಾತ್ರಕ್ಕೆ ವಿಸ್ತರಣೆಯಾಗಿ ಗಗನಯಾತ್ರಿಗಳಿಗೆ ಹೆಚ್ಚು ವಾಸಸ್ಥಳ ನೀಡುತ್ತದೆ.

=> ಸುರಕ್ಷತೆ: ಇದು ಮೈಕ್ರೋ-ಮೆಟಿಯೊರಾಯ್ಡ್‌ಗಳು (ಕ್ಷುದ್ರಗ್ರಹ ಚೂರುಗಳು) ಮತ್ತು ಹಾನಿಕಾರಕ ಬಾಹ್ಯಾಕಾಶ ವಿಕಿರಣಗಳಿಂದ ರಕ್ಷಣೆ ನೀಡುವ ಬಹುಪದರದ ಫ್ಲೆಕ್ಸಿಬಲ್ ರಚನೆಯನ್ನು ಹೊಂದಿದೆ.

=> ಪರಿಸರ ಸ್ನೇಹಿ: ಕಾರ್ಯಾಚರಣೆಯ ನಂತರ ಇದನ್ನು ನಿಯಂತ್ರಿತವಾಗಿ ಮರಳಿ ಭೂಮಿಗೆ ತರಲು (De-orbit) ಸಾಧ್ಯವಿದ್ದು, ಬಾಹ್ಯಾಕಾಶ ತ್ಯಾಜ್ಯವನ್ನು ಕಡಿಮೆ ಮಾಡುತ್ತದೆ.

➤ ಭಾರತವು 'ಗಗನಯಾನ್' ಮಿಷನ್ ಮೂಲಕ ಸ್ವಂತ ಬಾಹ್ಯಾಕಾಶ ನಿಲ್ದಾಣ ನಿರ್ಮಿಸುವ ಕನಸು ಕಾಣುತ್ತಿರುವ ಈ ಸಮಯದಲ್ಲಿ, ಆಕಾಶಲಬ್ಧಿಯಂತಹ ಖಾಸಗಿ ಸಂಸ್ಥೆಗಳ ಈ ಸಾಧನೆ ದೇಶದ ಬಾಹ್ಯಾಕಾಶ ಆರ್ಥಿಕತೆಗೆ (Space Economy) ಹೊಸ ವೇಗ ನೀಡಲಿದೆ. ಈ ಯೋಜನೆಯು ಭಾರತ ಮತ್ತು ಸ್ವಿಟ್ಜರ್ಲೆಂಡ್ ನಡುವಿನ ಉನ್ನತ ತಂತ್ರಜ್ಞಾನ ಸಹಕಾರದ ಸಂಕೇತವೂ ಆಗಿದೆ.




## ಉತ್ತರಾಖಂಡ ಏಕರೂಪ ನಾಗರಿಕ ಸಂಹಿತೆ (UCC) ತಿದ್ದುಪಡಿ 2026




➤ ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ಏಕರೂಪ ನಾಗರಿಕ ಸಂಹಿತೆಯನ್ನು (UCC) ಜಾರಿಗೆ ತಂದ ಹೆಗ್ಗಳಿಕೆಗೆ ಪಾತ್ರವಾಗಿರುವ ಉತ್ತರಾಖಂಡ ಸರ್ಕಾರವು, ಈಗ ತನ್ನ ಮೂಲ ಕಾಯಿದೆಗೆ ಮಹತ್ವದ ತಿದ್ದುಪಡಿಗಳನ್ನು ತಂದಿದೆ. ಜನವರಿ 26, 2026 ರಂದು ರಾಜ್ಯಪಾಲರಾದ ಲೆಫ್ಟಿನೆಂಟ್ ಜನರಲ್ ಗುರ್ಮಿತ್ ಸಿಂಗ್ ಅವರ ಅನುಮೋದನೆಯೊಂದಿಗೆ 'ಉತ್ತರಾಖಂಡ ಏಕರೂಪ ನಾಗರಿಕ ಸಂಹಿತೆ (ತಿದ್ದುಪಡಿ) ಸುಗ್ರೀವಾಜ್ಞೆ, 2026' ಅಧಿಕೃತವಾಗಿ ಜಾರಿಗೆ ಬಂದಿದೆ.

➤ ಉತ್ತರಾಖಂಡವು ಜನವರಿ 27, 2025 ರಂದು ಮೂಲ UCC ಕಾಯಿದೆಯನ್ನು ಜಾರಿಗೆ ತಂದಿತ್ತು. ಇದರ ಮೊದಲ ವಾರ್ಷಿಕೋತ್ಸವದ ಸಂದರ್ಭದಲ್ಲೇ ಆಡಳಿತಾತ್ಮಕ ಸುಧಾರಣೆ ಮತ್ತು ಕಾನೂನಿನ ಸ್ಪಷ್ಟತೆಗಾಗಿ ಸುಮಾರು 15 ಪ್ರಮುಖ ತಿದ್ದುಪಡಿಗಳನ್ನು ತರಲಾಗಿದೆ.

➤ ಪ್ರಮುಖ ತಿದ್ದುಪಡಿಗಳು ಮತ್ತು ಸುಧಾರಣೆಗಳು:

=> ಗುರುತು ಮರೆಮಾಚಿ ವಿವಾಹವಾದರೆ ದಂಡ: ಮದುವೆಯ ಸಂದರ್ಭದಲ್ಲಿ ವ್ಯಕ್ತಿಯು ತನ್ನ ನಿಜವಾದ ಗುರುತನ್ನು (Identity) ಮರೆಮಾಚುವುದು ಅಥವಾ ಸುಳ್ಳು ಮಾಹಿತಿ ನೀಡುವುದು ಈಗ ಮದುವೆಯನ್ನು ರದ್ದುಗೊಳಿಸಲು (Annulment) ಬಲವಾದ ಆಧಾರವಾಗಲಿದೆ. ಬಲವಂತದ ಮದುವೆ, ವಂಚನೆ ಅಥವಾ ಬೆದರಿಕೆ ಹಾಕಿ ಮಾಡುವ ಮದುವೆಗಳನ್ನು ತಡೆಯಲು ಕಠಿಣ ದಂಡನೆಯನ್ನು ವಿಧಿಸಲಾಗಿದೆ.

=> ಸಹಜೀವನ (Live-in Relationship) ಅಂತ್ಯಕ್ಕೆ ಪ್ರಮಾಣಪತ್ರ: ಸಹಜೀವನದಲ್ಲಿರುವ ದಂಪತಿಗಳು ತಮ್ಮ ಸಂಬಂಧವನ್ನು ಕೊನೆಗೊಳಿಸಲು ನಿರ್ಧರಿಸಿದಾಗ, ಈಗ ರಿಜಿಸ್ಟ್ರಾರ್ ಅವರಿಂದ 'ಸಂಬಂಧ ಅಂತ್ಯಗೊಂಡ ಪ್ರಮಾಣಪತ್ರ' (Termination Certificate) ಪಡೆಯಲು ಅವಕಾಶ ನೀಡಲಾಗಿದೆ. ಇದು ಸಂಬಂಧದ ಅಧಿಕೃತ ಮುಕ್ತಾಯಕ್ಕೆ ಸಾಕ್ಷಿಯಾಗಲಿದೆ.

=> ಲಿಂಗ ಸಮಾನತೆ ಮತ್ತು ಒಳಗೊಳ್ಳುವಿಕೆ: ಕಾನೂನಿನಲ್ಲಿ ಈ ಹಿಂದೆ ಬಳಸಲಾಗುತ್ತಿದ್ದ 'ವಿಧವೆ' (Widow) ಎಂಬ ಪದದ ಬದಲಿಗೆ, ಈಗ 'ಜೀವಿತ ಸಂಗಾತಿ' (Spouse) ಎಂಬ ಲಿಂಗ-ತಟಸ್ಥ (Gender-neutral) ಪದವನ್ನು ಬಳಸಲು ತೀರ್ಮಾನಿಸಲಾಗಿದೆ. ಇದು ಮಹಿಳೆ ಮತ್ತು ಪುರುಷರಿಬ್ಬರಿಗೂ ಸಮಾನ ಗೌರವ ನೀಡುವ ಉದ್ದೇಶ ಹೊಂದಿದೆ.

=> ಆಡಳಿತಾತ್ಮಕ ಬದಲಾವಣೆಗಳು: ಮದುವೆ, ವಿಚ್ಛೇದನ ಅಥವಾ ಸಹಜೀವನದ ನೋಂದಣಿಯಲ್ಲಿ ಯಾವುದೇ ಅಕ್ರಮಗಳು ಕಂಡುಬಂದಲ್ಲಿ, ಅದನ್ನು ರದ್ದುಗೊಳಿಸುವ ಅಧಿಕಾರವನ್ನು 'ರಿಜಿಸ್ಟ್ರಾರ್ ಜನರಲ್' ಅವರಿಗೆ ನೀಡಲಾಗಿದೆ. ಒಂದು ವೇಳೆ ಸಬ್-ರಿಜಿಸ್ಟ್ರಾರ್ ನಿಗದಿತ ಅವಧಿಯಲ್ಲಿ ಕ್ರಮ ಕೈಗೊಳ್ಳದಿದ್ದರೆ, ಪ್ರಕರಣವು ಸ್ವಯಂಚಾಲಿತವಾಗಿ ಮೇಲಧಿಕಾರಿಗಳಿಗೆ ವರ್ಗಾವಣೆಯಾಗುವ ವ್ಯವಸ್ಥೆ ಮಾಡಲಾಗಿದೆ.

=> ಹೊಸ ಕಾನೂನುಗಳೊಂದಿಗೆ ಸಮನ್ವಯ: ಈ ತಿದ್ದುಪಡಿಗಳನ್ನು ಭಾರತದ ಇತ್ತೀಚಿನ ಕಾನೂನುಗಳಾದ ಭಾರತೀಯ ನ್ಯಾಯ ಸಂಹಿತೆ (BNS), 2023 ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (BNSS), 2023 ರ ಅಡಿಯಲ್ಲಿ ತರಲಾಗಿದೆ. ದಂಡದ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡುವ ಅವಕಾಶವನ್ನೂ ಕಲ್ಪಿಸಲಾಗಿದೆ.

➤ ವರದಿಗಳ ಪ್ರಕಾರ, ಕಳೆದ ಒಂದು ವರ್ಷದಲ್ಲಿ ಉತ್ತರಾಖಂಡದಲ್ಲಿ ಸುಮಾರು 4 ರಿಂದ 5 ಲಕ್ಷಕ್ಕೂ ಅಧಿಕ ನೋಂದಣಿಗಳು ನಡೆದಿವೆ. ಇದು ರಾಜ್ಯದ ನಾಗರಿಕರು ಏಕರೂಪ ನಾಗರಿಕ ಸಂಹಿತೆಯನ್ನು ವ್ಯಾಪಕವಾಗಿ ಸ್ವೀಕರಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ.

➤ ಉತ್ತರಾಖಂಡ ಸರ್ಕಾರದ ಈ ಕ್ರಮವು ಕೇವಲ ಕಾನೂನು ಸುಧಾರಣೆಯಲ್ಲದೆ, ಸಾಮಾಜಿಕ ಸಾಮರಸ್ಯ ಮತ್ತು ಸಮಾನತೆಯನ್ನು ತರುವ ನಿಟ್ಟಿನಲ್ಲಿ ಒಂದು ದೊಡ್ಡ ಹೆಜ್ಜೆಯಾಗಿದೆ.

# 29 Jan 2026

## ಜನವರಿ 29 : ಭಾರತೀಯ ಸುದ್ದಿ ಪತ್ರಿಕೆ ದಿನ




➤1780 ಜನವರಿ 29ರಂದು ಭಾರತದ ಮೊದಲ ವೃತ್ತಪತ್ರಿಕೆ 'ದಿ ಬೆಂಗಾಲ್ ಗೆಜೆಟ್' ಪ್ರಕಟಗೊಂಡಿತ್ತು. ಪ್ರತಿ ವರ್ಷ ಮೊದಲ ಪತ್ರಿಕೆ ಆರಂಭವಾದ ದಿನವನ್ನು ಜನವರಿ 29 ಅನ್ನು ಭಾರತೀಯ ಸುದ್ದಿ ಪತ್ರಿಕೆ ದಿನವನ್ನಾಗಿ ಆಚರಿಸಲಾಗುತ್ತದೆ.

➤ ಭಾರತದ ಮೊದಲ ಸುದ್ದಿಪತ್ರಿಕೆಯಾದ ಬೆಂಗಾಲ್ ಗೆಜೆಟ್ ಪತ್ರಿಕೆಯನ್ನು ಜೇಮ್ಸ್ ಆಗಸ್ಟಸ್ ಹಿಕ್ಕಿ ಅವರು ಆರಂಭಿಸಿದರು. ಈ ಸುದ್ದಿ ಪತ್ರಿಕೆಯನ್ನು ಹಿಕ್ಕಿ ಗೆಜೆಟ್ ಅಥವಾ ದಿ ಕಲ್ಕತ್ತಾ ಜನರಲ್ ಅಡ್ವರ್ಟೈಸರ್ ಎಂದೂ ಕರೆಯಲಾಗುತ್ತದೆ. ಮೊದಲ ಪತ್ರಿಕೆ ಆರಂಭಿಸಿದ ಹಿಕ್ಕಿಯನ್ನೇ ಭಾರತೀಯ ಪತ್ರಿಕೋದ್ಯಮದ ಪಿತಾಮಹ ಎಂದು ಕರೆಯಲಾಗಿದೆ. ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿಯ ಸಮನ್ಸ್ ಪ್ರಕಾರ ಮೊದಲ ಪತ್ರಿಕೆ ಆರಂಭವಾದ ದಿನವನ್ನು ಪ್ರತಿ ವರ್ಷ ಭಾರತೀಯ ಸುದ್ದಿ ಪತ್ರಿಕೆ ದಿನವನ್ನಾಗಿ ಆಚರಿಸಲಾಗುತ್ತದೆ.

➤ ಜನವರಿ 29 ರಂದು ಆಚರಿಸಲಾಗುವ ಭಾರತೀಯ ವೃತ್ತಪತ್ರಿಕೆ ದಿನವು ಮುದ್ರಣ ಮಾಧ್ಯಮ ಕ್ಷೇತ್ರವನ್ನು ಗೌರವಿಸುವ ದಿನವಾಗಿದೆ. ಸಾರ್ವಜನಿಕರಿಗೆ ಮಾಹಿತಿ ನೀಡುವಲ್ಲಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉತ್ತೇಜಿಸುವಲ್ಲಿ ಪತ್ರಕರ್ತರ ಕೊಡುಗೆಗಳನ್ನು ಗುರುತಿಸುವ ದಿನ ಇದಾಗಿದೆ.

➤ ಕೆಲವರ ದಿನ ಆರಂಭವಾಗುವುದೇ ದಿನ ಪತ್ರಿಕೆಯನ್ನು ಓದುವ ಮೂಲಕ. ಕೈಯಲ್ಲಿ ಒಂದು ಕಪ್ ಕಾಫಿ ಅಥವಾ ಟೀ ಜೊತೆಗೆ ದಿನಪತ್ರಿಕೆಯಿದ್ದರೆ ಸುದ್ದಿಯನ್ನು ಓದುತ್ತಾ ಓದುಗರು ತಮ್ಮ ದಿನವನ್ನು ಆರಂಭಿಸುತ್ತಾರೆ. ರಾಜ್ಯ, ದೇಶ, ವಿದೇಶಗಳಲ್ಲಿ ನಡೆಯುವ ಸುದ್ದಿಗಳನ್ನು ಜನರಿಗೆ ತಲುಪಿಸುವ ದಿನ ಪತ್ರಿಕೆಗಳು ಇವತ್ತಿಗೂ ನಂಬಿಕೆಗೆ ಅರ್ಹವಾಗಿದೆ.

➤ ಸಮಾಜವನ್ನು ಜಾಗೃತಗೊಳಿಸುವಲ್ಲಿ ಗಣನೀಯ ಕೊಡುಗೆ ನೀಡಿದ ಎಲ್ಲ ಪತ್ರಕರ್ತರನ್ನು ನೆನಪಿಸಲಾಗುತ್ತದೆ. ಈ ದಿನದಂದು ಪತ್ರಕರ್ತರ ಹಕ್ಕುಗಳು ಮತ್ತು ಸುರಕ್ಷತೆಯ ಬಗ್ಗೆ ಜಾಗೃತಿ ಅಭಿಯಾನಗಳನ್ನು ನಡೆಸಲಾಗುತ್ತದೆ. ಈ ದಿನದಂದು ಶಾಲಾ ಮಕ್ಕಳಿಗೆ, ಯುವಕರಿಗೆ ಪತ್ರಿಕೋದ್ಯಮದ ಮಹತ್ವ ಮತ್ತು ಇತಿಹಾಸದ ತಿಳಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

**➤ ಕರ್ನಾಟಕದ ಪತ್ರಿಕೋದ್ಯಮ: ಕನ್ನಡದ ಮೊಟ್ಟಮೊದಲ ಪತ್ರಿಕೆಯಾದ 'ಮಂಗಳೂರು ಸಮಾಚಾರ' (Mangalore Samachara) 1843ರಲ್ಲಿ ಜನ್ಮತಾಳಿತು.**

- ಸ್ಥಾಪಕರು: ಬಾಸೆಲ್ ಮಿಷನ್‌ನ ಜರ್ಮನ್ ಪಾದ್ರಿ ಹರ್ಮನ್ ಮೊಗ್ಲಿಂಗ್ (Hermann Mogling).
- ಪ್ರಾರಂಭ: ಜುಲೈ 1, 1843 ರಂದು ಮಂಗಳೂರಿನಲ್ಲಿ ಪ್ರಾರಂಭವಾಯಿತು.
- ಈ ಪತ್ರಿಕೆಯು ಕೇವಲ ಧಾರ್ಮಿಕ ವಿಷಯಗಳಿಗೆ ಸೀಮಿತವಾಗದೆ, ಸ್ಥಳೀಯ ಸುದ್ದಿಗಳು, ಶೈಕ್ಷಣಿಕ ವಿಚಾರಗಳು ಮತ್ತು ಸಾರ್ವಜನಿಕ ಸಮಸ್ಯೆಗಳನ್ನು ಒಳಗೊಂಡಿತ್ತು. ಇದು ಕಲ್ಲಿನ ಅಚ್ಚಿನಲ್ಲಿ (Lithography) ಮುದ್ರಿತವಾಗುತ್ತಿತ್ತು.
- ಸ್ಥಳಾಂತರ: ನಂತರ ಇದು ಬೆಳಗಾವಿಗೆ ಸ್ಥಳಾಂತರಗೊಂಡು 'ಕನ್ನಡ ಸಮಾಚಾರ' ಎಂದು ಮರುನಾಮಕರಣಗೊಂಡಿತು.

## ಭಾರತ ಇಂಧನ ಸಪ್ತಾಹ 2026: ಜಾಗತಿಕ ಇಂಧನ ಹೂಡಿಕೆಯ ಕೇಂದ್ರಬಿಂದುವಾಗಿ ಗೋವಾ

IEW INDIA ENERGY WEEK
27 - 30 JANUARY 2026
ONGC ATI, GOA, INDIA

➤ ಪಣಜಿ, ಗೋವಾ: ಭಾರತದ ಇಂಧನ ಸ್ವಾವಲಂಬನೆ ಮತ್ತು ಸುಸ್ಥಿರತೆಯ ಹಾದಿಯಲ್ಲಿ ಮಹತ್ವದ ಮೈಲಿಗಲ್ಲಾದ 'ಭಾರತ ಇಂಧನ ಸಪ್ತಾಹ 2026' (India Energy Week - IEW) ರ 4ನೇ ಆವೃತ್ತಿಯು ಗೋವಾದಲ್ಲಿ ಅದ್ದೂರಿಯಾಗಿ ಚಾಲನೆ ಪಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಉದ್ಘಾಟಿಸಿದ ಈ ಕಾರ್ಯಕ್ರಮವು, ಭಾರತವನ್ನು ಜಾಗತಿಕ ಇಂಧನ ಶಕ್ತಿಯಾಗಿ ಬಿಂಬಿಸುವಲ್ಲಿ ಯಶಸ್ವಿಯಾಗಿದೆ.

**➤ ಪ್ರಮುಖ ನೀತಿಗಳು:-**

=> ಇಂಧನ ಸೇರ್ಪಡೆ (Energy Addition): ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಹೇಳಿದಂತೆ, ಭಾರತವು ಕೇವಲ ಹಳೆಯ ಇಂಧನ ಮೂಲಗಳನ್ನು ಬದಲಿಸುವುದಲ್ಲ, ಬದಲಿಗೆ ಈಗಿರುವ ವ್ಯವಸ್ಥೆಗೆ ಹೊಸ ಮತ್ತು ಹಸಿರು ಇಂಧನಗಳನ್ನು 'ಸೇರ್ಪಡೆ' ಮಾಡುವತ್ತ ಗಮನ ಹರಿಸುತ್ತಿದೆ. ಇದರಲ್ಲಿ ಜೈವಿಕ ಇಂಧನ, ಹಸಿರು ಹೈಡ್ರೋಜನ್ ಮತ್ತು ಎಲ್.ಎನ್.ಜಿ (LNG) ಪ್ರಮುಖ ಪಾತ್ರ ವಹಿಸಲಿವೆ.

=> ಹೂಡಿಕೆ ಮತ್ತು ಸುಧಾರಣೆಗಳು: ಜಾಗತಿಕ ಹೂಡಿಕೆದಾರರನ್ನು ಆಕರ್ಷಿಸಲು ಭಾರತವು ತನ್ನ ಇಂಧನ ಪರಿಶೋಧನಾ ನೀತಿಗಳಲ್ಲಿ (OALP ಮತ್ತು DSF ಬಿಡ್ಡಿಂಗ್) ಭಾರಿ ಸುಧಾರಣೆಗಳನ್ನು ತಂದಿದೆ. ಇದು ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವ ಗುರಿ ಹೊಂದಿದೆ.

=> ಗೋವಾದ ಹಸಿರು ಸಂಕಲ್ಪ: ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ರಾಜ್ಯವನ್ನು ಸುಸ್ಥಿರ ಅಭಿವೃದ್ಧಿಯ ಮಾದರಿಯನ್ನಾಗಿ ರೂಪಿಸಲು 2050ರ ವೇಳೆಗೆ 100% ನವೀಕರಿಸಬಹುದಾದ ಇಂಧನ ಬಳಸುವ ಗುರಿಯನ್ನು ಘೋಷಿಸಿದ್ದಾರೆ.

➤ ಅಂಕಿ-ಅಂಶಗಳಲ್ಲಿ ಭಾರತದ ಪ್ರಗತಿ (2014 - 2026) : ಕಳೆದ ಒಂದು ದಶಕದಲ್ಲಿ ಭಾರತದ ಇಂಧನ ಮೂಲಸೌಕರ್ಯದಲ್ಲಿ **ಆಗಿರುವ ಬದಲಾವಣೆಗಳು ಹೀಗಿವೆ:**

=> ವಿದೇಶಿ ವಿನಿಮಯ ಉಳಿತಾಯ: ಎಥನಾಲ್ ಮಿಶ್ರಣ ಯೋಜನೆಯಿಂದಾಗಿ ಸುಮಾರು ₹1.59 ಲಕ್ಷ ಕೋಟಿ ವಿದೇಶಿ ವಿನಿಮಯ ಉಳಿತಾಯವಾಗಿದೆ.

=> ಪರಿಸರ ರಕ್ಷಣೆ: 813 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಕಾರ್ಬನ್ ಹೊರಸೂಸುವಿಕೆಯನ್ನು ಕಡಿಮೆ ಮಾಡುವಲ್ಲಿ ಭಾರತ ಯಶಸ್ವಿಯಾಗಿದೆ.

=> ಮೂಲಸೌಕರ್ಯ ವಿಸ್ತರಣೆ: ಸಿಎನ್‌ಜಿ (CNG) ನಿಲ್ದಾಣಗಳು: 2014ರಲ್ಲಿ 968 ಇದ್ದ ನಿಲ್ದಾಣಗಳು ಇಂದು 8,477ಕ್ಕೂ ಹೆಚ್ಚು ಇವೆ. ಮತ್ತು ನೈಸರ್ಗಿಕ ಅನಿಲ ಪೈಪ್‌ಲೈನ್: 25,923 ಕಿಲೋಮೀಟರ್‌ಗೆ ಜಾಲ ವಿಸ್ತರಿಸಲ್ಪಟ್ಟಿದೆ (ಶೇ. 66ರಷ್ಟು ಹೆಚ್ಚಳ).

➤ ಭಾರತ ಇಂಧನ ಸಪ್ತಾಹ 2026 ಕೇವಲ ಒಂದು ಪ್ರದರ್ಶನವಲ್ಲ; ಇದು ಇಡೀ ವಿಶ್ವಕ್ಕೆ ಭಾರತವು ನೀಡುತ್ತಿರುವ 'ಸುಸ್ಥಿರ ಅಭಿವೃದ್ಧಿಯ ಸಂದೇಶ'.

## ವಿಕಸಿತ ಭಾರತ @ 2047: ರಾಷ್ಟ್ರಪತಿಗಳ ಭಾಷಣದೊಂದಿಗೆ ಸಂಸತ್ ಬಜೆಟ್ ಅಧಿವೇಶನಕ್ಕೆ ಅದ್ದೂರಿ ಚಾಲನೆ



ನವದೆಹಲಿ: ಭಾರತದ ಸಂಸತ್ತಿನ 2026ನೇ ಸಾಲಿನ ಬಜೆಟ್ ಅಧಿವೇಶನವು ಜನವರಿ 28, ಬುಧವಾರದಂದು ಅದ್ದೂರಿಯಾಗಿ ಚಾಲನೆ ಪಡೆದಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಲೋಕಸಭೆ ಮತ್ತು ರಾಜ್ಯಸಭೆಗಳ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಐತಿಹಾಸಿಕ ಭಾಷಣದಲ್ಲಿ, 2047ರ ವೇಳೆಗೆ ಭಾರತವನ್ನು 'ವಿಕಸಿತ ರಾಷ್ಟ್ರ'ವನ್ನಾಗಿ ಮಾಡುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸಿದರು.

➤ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮ್ಮ ಭಾಷಣದಲ್ಲಿ ದೇಶದ ಸಮಗ್ರ ಅಭಿವೃದ್ಧಿಯ ಚಿತ್ರಣವನ್ನು ನೀಡಿದ್ದಾರೆ. ಆರ್ಥಿಕವಾಗಿ ಕಳೆದ ದಶಕದಲ್ಲಿ 25 ಕೋಟಿ ಜನರು ಬಹುಆಯಾಮದ ಬಡತನದಿಂದ ಮುಕ್ತರಾಗಿದ್ದು, ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಯು 2014 ರಿಂದ ಈವರೆಗೆ 25 ಕೋಟಿಯಿಂದ 95 ಕೋಟಿಗೆ ಏರಿಕೆಯಾಗಿದೆ. ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುತ್ತಾ, 10 ಕೋಟಿ ಮಹಿಳೆಯರು ಸ್ವಸಹಾಯ ಸಂಘಗಳಲ್ಲಿ ತೊಡಗಿದ್ದು, 2 ಕೋಟಿ 'ಲಖ್ಪತಿ ದೀದಿ'ಯರು ಸೃಷ್ಟಿಯಾಗಿದ್ದಾರೆ ಎಂದು ಅವರು ಶ್ಲಾಘಿಸಿದರು. ಆರ್ಥಿಕ ಮತ್ತು ಕೃಷಿ ವಲಯದಲ್ಲಿ ಭಾರತವು ವಿಶ್ವದ ಅತಿದೊಡ್ಡ ಅಕ್ಕಿ ಉತ್ಪಾದಕ ಹಾಗೂ ಎರಡನೇ ಅತಿದೊಡ್ಡ ಮೀನು ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಿದೆ. ಅಲ್ಲದೆ, ವಂದೇ ಮಾತರಂ ಗೀತೆಯ 150ನೇ ವರ್ಷ ಹಾಗೂ ಬಿರ್ಸಾ ಮುಂಡಾ ಮತ್ತು ಸರ್ದಾರ್ ಪಟೇಲರ 150ನೇ ಜನ್ಮ ಜಯಂತಿಯಂತಹ ಐತಿಹಾಸಿಕ ಮೈಲಿಗಲ್ಲುಗಳನ್ನು ಸ್ಮರಿಸುವ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿದರು.


➤ ಬಜೆಟ್ 2026: ಪ್ರಮುಖ ನಿರೀಕ್ಷೆಗಳು: ಫೆಬ್ರವರಿ 1ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ 9ನೇ ಬಾರಿಗೆ ಬಜೆಟ್ ಮಂಡಿಸಲಿದ್ದಾರೆ. ಈ ಬಾರಿಯ **ವಿಶೇಷತೆಗಳೆಂದರೆ:**

=> ಆರ್ಥಿಕ ಸಮೀಕ್ಷೆ (Economic Survey): ಜನವರಿ 29ರಂದು 2025-26ರ ಆರ್ಥಿಕ ಸಮೀಕ್ಷೆ ಮಂಡನೆಯಾಗಲಿದೆ.

=> ಭಾನುವಾರ ಬಜೆಟ್: ಹಲವು ವರ್ಷಗಳ ನಂತರ ಮೊದಲ ಬಾರಿಗೆ ಭಾನುವಾರದಂದು (ಫೆಬ್ರವರಿ 1) ಕೇಂದ್ರ ಬಜೆಟ್ ಮಂಡನೆಯಾಗುತ್ತಿದೆ.

=> ತೆರಿಗೆ ಸುಧಾರಣೆ: ಹೊಸ ತೆರಿಗೆ ಪದ್ಧತಿಯಲ್ಲಿ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ₹12 ಲಕ್ಷದಿಂದ ₹15 ಲಕ್ಷಕ್ಕೆ ಹೆಚ್ಚಿಸುವ ನಿರೀಕ್ಷೆಯಿದೆ.
=> ರಕ್ಷಣಾ ವಲಯ: ಜಾಗತಿಕ ಸವಾಲುಗಳ ಹಿನ್ನೆಲೆಯಲ್ಲಿ ರಕ್ಷಣಾ ಇಲಾಖೆಗೆ ದಾಖಲೆ ಮೊತ್ತದ ಅನುದಾನ ಸಿಗುವ ಸಾಧ್ಯತೆಯಿದೆ.
➤ 2026ರ ಬಜೆಟ್ ಅಧಿವೇಶನವು ಒಟ್ಟು 65 ದಿನಗಳ ಅವಧಿಯಲ್ಲಿ 30 ಕಲಾಪಗಳನ್ನು ಹೊಂದಿದ್ದು, ಫೆಬ್ರವರಿ 13 ರಿಂದ ಮಾರ್ಚ್ 9 ರವರೆಗೆ ಮಧ್ಯಂತರ ವಿರಾಮದೊಂದಿಗೆ ಏಪ್ರಿಲ್ 2 ರಂದು ಮುಕ್ತಾಯಗೊಳ್ಳಲಿದೆ.

## ದೇಶದಲ್ಲೇ ಮೊದಲ ಹೆಜ್ಜೆ: ಕರ್ನಾಟಕದಲ್ಲಿ 'ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ' ಅಧಿಕೃತವಾಗಿ ಸ್ಥಾಪನೆ




➤ ಬೆಂಗಳೂರು: ಸ್ವಿಗ್ಗಿ, ಜೊಮ್ಯಾಟೊ, ಉಬರ್ ಮತ್ತು ಅಮೆಜಾನ್ ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಹಗಲಿರುಳು ಶ್ರಮಿಸುವ ಗಿಗ್ ಕಾರ್ಮಿಕರಿಗೆ (Gig Workers) ಕರ್ನಾಟಕ ಸರ್ಕಾರವು ಬಂಪರ್ ಕೊಡುಗೆ ನೀಡಿದೆ. ಜನವರಿ 27, 2026 ರಂದು ಅಧಿಕೃತವಾಗಿ 'ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಕಲ್ಯಾಣ ಅಭಿವೃದ್ಧಿ ಮಂಡಳಿ'ಯನ್ನು ರಚಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಮೂಲಕ ಗಿಗ್ ಕಾರ್ಮಿಕರಿಗಾಗಿ ಪ್ರತ್ಯೇಕ ಕಾನೂನುಬದ್ಧ ಮಂಡಳಿ ಸ್ಥಾಪಿಸಿದ ಭಾರತದ ಮೊದಲ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿ ನಿಂತಿದೆ.
**➤ ಮಂಡಳಿಯ ರಚನೆ ಮತ್ತು ಸದಸ್ಯರು: ಈ ಮಂಡಳಿಯು ಒಟ್ಟು 16 ಸದಸ್ಯರನ್ನು ಒಳಗೊಂಡಿದ್ದು, ಕೆಳಗಿನಂತೆ ಸಂಯೋಜನೆಗೊಂಡಿದೆ:**
1. ಅಧ್ಯಕ್ಷರು: ಕಾರ್ಮಿಕ ಸಚಿವರು (ಪದನಿಮಿತ್ತ ಅಧ್ಯಕ್ಷರು - ಪ್ರಸ್ತುತ ಸಂತೋಷ್ ಲಾಡ್).
2. ಸದಸ್ಯ ಕಾರ್ಯದರ್ಶಿ: ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO).
3. ಸರ್ಕಾರಿ ಪ್ರತಿನಿಧಿಗಳು: ಕಾರ್ಮಿಕ ಇಲಾಖೆ, ಐಟಿ-ಬಿಟಿ ಇಲಾಖೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು.
4. ಇತರ ಸದಸ್ಯರು:
- ಗಿಗ್ ಕಾರ್ಮಿಕರ ಸಂಘಗಳಿಂದ 4 ಪ್ರತಿನಿಧಿಗಳು.
- ಅಗ್ರಿಗೇಟರ್ ಪ್ಲಾಟ್‌ಫಾರ್ಮ್‌ಗಳಿಂದ (ಜೊಮ್ಯಾಟೊ, ಅಮೆಜಾನ್, ಉಬರ್ ಇತ್ಯಾದಿ) 4 ಪ್ರತಿನಿಧಿಗಳು.
- ಗಿಗ್ ಆರ್ಥಿಕತೆಯ ಇಬ್ಬರು ತಜ್ಞರು ಮತ್ತು ಒಬ್ಬ ತಾಂತ್ರಿಕ ತಜ್ಞರು.
➤ ಕಲ್ಯಾಣ ನಿಧಿ ಮತ್ತು ಶುಲ್ಕ (Welfare Fee):
=> ಅಗ್ರಿಗೇಟರ್ ಸಂಸ್ಥೆಗಳು ಪ್ರತಿ ವಹಿವಾಟಿನ ಮೇಲೆ ಶೇ. 1 ರಿಂದ 1.5 ರಷ್ಟು ಕಲ್ಯಾಣ ಶುಲ್ಕವನ್ನು ಪಾವತಿಸಬೇಕಾಗುತ್ತದೆ.
=> ಭವಿಷ್ಯದಲ್ಲಿ ನಿಧಿಯ ಕೊರತೆಯಾದಲ್ಲಿ ಈ ಶುಲ್ಕವನ್ನು ಗರಿಷ್ಠ ಶೇ. 5 ರವರೆಗೆ ಹೆಚ್ಚಿಸುವ ಅವಕಾಶವಿದೆ.
=> ಅಗ್ರಿಗೇಟರ್‌ಗಳು ತಮ್ಮಲ್ಲಿ ನೋಂದಾಯಿತವಾಗಿರುವ ಎಲ್ಲಾ ಕಾರ್ಮಿಕರ ಮಾಹಿತಿಯನ್ನು 45 ದಿನಗಳೊಳಗೆ ಮಂಡಳಿಗೆ ಸಲ್ಲಿಸುವುದು ಕಡ್ಡಾಯವಾಗಿದೆ.
**➤ ಮಂಡಳಿಯ ಪ್ರಮುಖ ಉದ್ದೇಶಗಳು:**
=> ಗಿಗ್ ಕಾರ್ಮಿಕರಿಗೆ (ಉದಾ: ಝೊಮ್ಯಾಟೊ, ಸ್ವಿಗ್ಗಿ, ಉಬರ್ ಚಾಲಕರು ಇತ್ಯಾದಿ) ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಕ್ರಮಗಳನ್ನು ಜಾರಿಗೆ ತರುವುದು.
=> ಅಗ್ರಿಗೇಟರ್‌ಗಳಿಂದ (Aggregators) ಕಲ್ಯಾಣ ಶುಲ್ಕವನ್ನು ಸಂಗ್ರಹಿಸುವುದು.
=> ಎಲ್ಲಾ ಗಿಗ್ ಕಾರ್ಮಿಕರಿಗೆ ವಿಶಿಷ್ಟ ಗುರುತಿನ ಸಂಖ್ಯೆ (Unique ID) ನೀಡುವುದು.
➤ ಗಿಗ್ ಕಾರ್ಮಿಕರು (Gig Workers) ಎಂದರೆ ಯಾವುದೇ ಒಂದು ಕಂಪನಿಯಲ್ಲಿ ಖಾಯಂ ಉದ್ಯೋಗಿಯಾಗಿರದೆ, ಆನ್‌ಲೈನ್ ವೇದಿಕೆಗಳ (ಉದಾಹರಣೆಗೆ ಝೊಮ್ಯಾಟೊ, ಸ್ವಿಗ್ಗಿ, ಉಬರ್) ಮೂಲಕ ಸ್ವತಂತ್ರವಾಗಿ ಅಥವಾ ಅಲ್ಪಾವಧಿಯ ಒಪ್ಪಂದದ ಆಧಾರದ ಮೇಲೆ ಕೆಲಸ ಮಾಡುವ ವ್ಯಕ್ತಿಗಳು.

## ಗಣರಾಜ್ಯೋತ್ಸವ 2026: ದೆಹಲಿಯಲ್ಲಿ ಪಂಚಾಯತ್ ಪ್ರತಿನಿಧಿಗಳಿಗೆ ವಿಶೇಷ ಗೌರವ; 'ಪಂಚಮ್' ಚಾಟ್‌ಬಾಟ್ ಅನಾವರಣ



➤ ನವದೆಹಲಿ: ಭಾರತದ 77ನೇ ಗಣರಾಜ್ಯೋತ್ಸವದ ಸಂಭ್ರಮದ ಅಂಗವಾಗಿ ಗ್ರಾಮೀಣ ಭಾರತದ ನಿಜವಾದ ನಾಯಕರಾದ ಪಂಚಾಯತ್ ಪ್ರತಿನಿಧಿಗಳಿಗೆ ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು ದೆಹಲಿಯಲ್ಲಿ ವಿಶೇಷ ಗೌರವ ಸಲ್ಲಿಸಿದೆ. ಸರ್ಕಾರದ ಯೋಜನೆಗಳನ್ನು ಯಶಸ್ವಿಯಾಗಿ ಜನರ ಮನೆಬಾಗಿಲಿಗೆ ತಲುಪಿಸಿದ ಸುಮಾರು 240 ಪಂಚಾಯತ್ ಮುಖ್ಯಸ್ಥರನ್ನು ಗಣರಾಜ್ಯೋತ್ಸವದ ವಿಶೇಷ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು.
➤ ಕೇಂದ್ರ ಪಂಚಾಯತ್ ರಾಜ್ ರಾಜ್ಯ ಸಚಿವ ಪ್ರೊ. ಎಸ್. ಪಿ. ಸಿಂಗ್ ಬಘೇಲ್ ಅವರು ಚುನಾಯಿತ ಪ್ರತಿನಿಧಿಗಳನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಚಿವಾಲಯದ ಕಾರ್ಯದರ್ಶಿ ಶ್ರೀ ವಿವೇಕ್ ಭಾರದ್ವಾಜ್ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.
=> ಗೌರವಿಸಲ್ಪಟ್ಟವರು: ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳನ್ನು (Flagship Schemes) ತಮ್ಮ ಗ್ರಾಮಗಳಲ್ಲಿ ಶೇ. 100 ರಷ್ಟು (Saturation) ಅನುಷ್ಠಾನಗೊಳಿಸಿದ ಸುಮಾರು 240 ಪಂಚಾಯತ್ ಮುಖ್ಯಸ್ಥರು (ಸರಪಂಚರು, ಮುಖಿಯರು, ಗ್ರಾಮ ಪ್ರಧಾನರು).
=> ಒಟ್ಟು ಅತಿಥಿಗಳು: ತಮ್ಮ ಸಂಗಾತಿಗಳೂ ಸೇರಿದಂತೆ ಒಟ್ಟು 450 ವಿಶೇಷ ಅತಿಥಿಗಳು ಈ ಸಂಭ್ರಮದಲ್ಲಿ ಭಾಗಿಯಾಗಿದ್ದರು.
=> ಪ್ರಧಾನಮಂತ್ರಿ ಸಂಗ್ರಹಾಲಯ ಭೇಟಿ: ಅತಿಥಿಗಳು ಭಾರತದ ಆಡಳಿತ ಮತ್ತು ನಾಯಕತ್ವದ ಪ್ರಯಾಣವನ್ನು ತಿಳಿಯಲು ಪ್ರಧಾನಮಂತ್ರಿ ಸಂಗ್ರಹಾಲಯಕ್ಕೆ ಭೇಟಿ ನೀಡಿದರು.
➤ ಪ್ರಮುಖ ಯೋಜನೆಗಳು ಮತ್ತು ಪ್ರಕಟಣೆಗಳ ಬಿಡುಗಡೆ: ಈ ಸಮಾರಂಭವು ಕೇವಲ ಸನ್ಮಾನಕ್ಕೆ ಸೀಮಿತವಾಗದೆ, ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಹಲವು ಡಿಜಿಟಲ್ **ಉಪಕ್ರಮಗಳಿಗೆ ಸಾಕ್ಷಿಯಾಯಿತು:**
1. ಪಂಚಮ್ (PANCHAM) ಚಾಟ್‌ಬಾಟ್: ಯುನಿಸೆಫ್ (UNICEF) ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾದ 'ಪಂಚಾಯತ್ ಅಸಿಸ್ಟೆನ್ಸ್ ಅಂಡ್ ಮೆಸೇಜಿಂಗ್' (PANCHAM) ಎಂಬ ಕೃತಕ ಬುದ್ಧಿಮತ್ತೆ ಆಧಾರಿತ ಚಾಟ್‌ಬಾಟ್ ಅನ್ನು ಬಿಡುಗಡೆ ಮಾಡಲಾಯಿತು. ಇದು ಪಂಚಾಯತ್ ಪ್ರತಿನಿಧಿಗಳಿಗೆ ಸರ್ಕಾರದ ಯೋಜನೆಗಳ ಮಾಹಿತಿ ನೀಡಲು ಮತ್ತು ಸಂವಹನ ನಡೆಸಲು ಸಹಾಯ ಮಾಡುತ್ತದೆ.
2. ಗ್ರಾಮೋದಯ ಸಂಕಲ್ಪ (17ನೇ ಸಂಚಿಕೆ): ಸಚಿವಾಲಯದ ತ್ರೈಮಾಸಿಕ ನಿಯತಕಾಲಿಕೆಯ 17ನೇ ಆವೃತ್ತಿಯನ್ನು ಬಿಡುಗಡೆ ಮಾಡಲಾಯಿತು.
3. PESA ಶ್ರೇಯಾಂಕ 2024-25: ಪೆಸಾ (PESA) ಕಾಯ್ದೆ ಅನುಷ್ಠಾನದಲ್ಲಿ ರಾಜ್ಯಗಳ ಸಾಧನೆಯನ್ನು ಆಧರಿಸಿ ಶ್ರೇಯಾಂಕ ಬಿಡುಗಡೆ ಮಾಡಲಾಯಿತು. ಇದರಲ್ಲಿ ಮಹಾರಾಷ್ಟ್ರ ಪ್ರಥಮ ಸ್ಥಾನ ಪಡೆದರೆ, ಮಧ್ಯಪ್ರದೇಶ ಮತ್ತು ಹಿಮಾಚಲ ಪ್ರದೇಶಗಳು ನಂತರದ ಸ್ಥಾನ ಪಡೆದಿವೆ.

4. ಸೇವೆಯ ವಿತರಣಾ ವರದಿ: ಪಂಚಾಯತ್ ಮಟ್ಟದಲ್ಲಿ ಸೇವೆಗಳ ವಿತರಣೆಯನ್ನು ಬಲಪಡಿಸುವ ಕುರಿತಾದ ತಜ್ಞರ ಸಮಿತಿಯ ವರದಿಯನ್ನು ಪ್ರಕಟಿಸಲಾಯಿತು.

➤ ಸ್ತಬ್ಧಚಿತ್ರದ ವಿಷಯ: ಈ ಬಾರಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಂಚಾಯತ್ ರಾಜ್ ಸಚಿವಾಲಯದ ಸ್ತಬ್ಧಚಿತ್ರವು "ಸ್ವಾಮಿತ್ವ ಯೋಜನೆ: ಆತ್ಮನಿರ್ಭರ ಪಂಚಾಯತ್‌ನಿಂದ ಸಮೃದ್ಧ ಮತ್ತು ಆತ್ಮನಿರ್ಭರ ಭಾರತ" (SVAMITVA Scheme: Aatmanirbhar Panchayat se Samriddh evam Aatmanirbhar Bharat) ಎಂಬ ವಿಷಯವನ್ನು ಆಧರಿಸಿತ್ತು. ಇದು ಗ್ರಾಮಸ್ಥರಿಗೆ ಆಸ್ತಿ ಕಾರ್ಡ್ ನೀಡುವ ಮೂಲಕ ಅವರಲ್ಲಿ ಆರ್ಥಿಕ ಸ್ವಾತಂತ್ರ್ಯ ಮೂಡಿಸುವ ಯೋಜನೆಯನ್ನು ಪ್ರತಿಬಿಂಬಿಸಿತು.

## ಉಜ್ಜಯಿನಿ ಮಹಾಕಾಲೇಶ್ವರ ದೇವಸ್ಥಾನದ 'VIP ದರ್ಶನ' ವಿವಾದ: ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು




➤ ಮಧ್ಯಪ್ರದೇಶದ ಪ್ರಸಿದ್ಧ ಶ್ರೀ ಮಹಾಕಾಲೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿರುವ 'ವಿಐಪಿ(VIP) ದರ್ಶನ' ಹಾಗೂ ಗರ್ಭಗೃಹ ಪ್ರವೇಶವನ್ನು ಆಯ್ದವರಿಗೆ ಮಾತ್ರ ಸೀಮಿತಗೊಳಿಸಿರುವ ವ್ಯವಸ್ಥೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (PIL) ಯನ್ನು ಸುಪ್ರೀಂ ಕೋರ್ಟ್ ಇತ್ತೀಚೆಗೆ ವಜಾಗೊಳಿಸಿದೆ. ಗರ್ಭಗೃಹದಲ್ಲಿ ಪೂಜೆ ಸಲ್ಲಿಸುವುದು ಹಾಗೂ ಜಲಾಭಿಷೇಕ ಮಾಡುವ ಅವಕಾಶವನ್ನು ವಿಐಪಿಗಳಿಗೆ ಮಾತ್ರ ನೀಡಲಾಗುತ್ತಿದೆ ಎಂಬುದು ಸಾಮಾನ್ಯ ಭಕ್ತರ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ ಎಂದು ಅರ್ಜಿಯಲ್ಲಿ ವಾದಿಸಲಾಗಿತ್ತು.

➤ ನ್ಯಾಯಾಲಯದ ಪ್ರಮುಖ ಅವಲೋಕನಗಳು:

=> ನ್ಯಾಯಾಂಗದ ಹಸ್ತಕ್ಷೇಪವಿಲ್ಲ: ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ನೇತೃತ್ವದ ಪೀಠವು, "ಯಾರಿಗೆ ದರ್ಶನ ನೀಡಬೇಕು ಅಥವಾ ನೀಡಬಾರದು ಎಂಬುದು ನ್ಯಾಯಾಲಯದ ನಿರ್ಧಾರವಲ್ಲ. ಇದು ಆಡಳಿತ ಮಂಡಳಿಗೆ ಬಿಟ್ಟ ವಿಚಾರ," ಎಂದು ಸ್ಪಷ್ಟಪಡಿಸಿದೆ.


=> ಸಂವಿಧಾನದ 14ನೇ ವಿಧಿ: ಗರ್ಭಗೃಹದ ಒಳಗೆ ಸಂವಿಧಾನದ 14ನೇ ವಿಧಿಯನ್ನು (ಸಮಾನತೆಯ ಹಕ್ಕು) ಅನ್ವಯಿಸಲು ಪ್ರಾರಂಭಿಸಿದರೆ, ಅದು ನ್ಯಾಯಾಂಗ ವ್ಯಾಪ್ತಿಯನ್ನು ಮೀರಿದಂತಾಗುತ್ತದೆ ಎಂದು ಕೋರ್ಟ್ ಎಚ್ಚರಿಸಿದೆ.

=> VIP ಎಂದರೆ ಯಾರು?: ಮಧ್ಯಪ್ರದೇಶ ಹೈಕೋರ್ಟ್ ಈ ಹಿಂದೆ ನೀಡಿದ್ದ ತೀರ್ಪಿನಲ್ಲಿ, "ಯಾರು VIP ಎಂಬುದನ್ನು ಜಿಲ್ಲಾಧಿಕಾರಿ ಮತ್ತು ದೇವಸ್ಥಾನ ಸಮಿತಿ ನಿರ್ಧರಿಸುತ್ತದೆ. VIP ಎಂಬ ಪದಕ್ಕೆ ಯಾವುದೇ ಕಾನೂನುಬದ್ಧ ವ್ಯಾಖ್ಯಾನವಿಲ್ಲ," ಎಂದು ಹೇಳಿತ್ತು.

➤ ಶ್ರೀ ಮಹಾಕಾಲೇಶ್ವರ ದೇವಸ್ಥಾನ: ಈ ದೇವಸ್ಥಾನವು ಮಧ್ಯಪ್ರದೇಶದ ಉಜ್ಜಯಿನಿ ನಗರದಲ್ಲಿದೆ. ಇದು ಪವಿತ್ರ ಕ್ಷಿಪ್ರ (Shipra) ನದಿಯ ದಂಡೆಯ ಮೇಲಿದೆ. ಭಾರತದಲ್ಲಿರುವ 12 ಪ್ರಸಿದ್ಧ ಜ್ಯೋತಿರ್ಲಿಂಗಗಳಲ್ಲಿ ಇದು ಅತ್ಯಂತ ಪ್ರಮುಖವಾದುದು.ಸಾಮಾನ್ಯವಾಗಿ ಶಿವಲಿಂಗಗಳು ಪೂರ್ವಕ್ಕೆ ಮುಖ ಮಾಡಿರುತ್ತವೆ. ಆದರೆ, ಇಲ್ಲಿನ ವಿಶೇಷತೆಯೆಂದರೆ ಮಹಾಕಾಲೇಶ್ವರ ಲಿಂಗವು ದಕ್ಷಿಣಾಭಿಮುಖವಾಗಿದೆ. ಆದ್ದರಿಂದ ಇದನ್ನು 'ದಕ್ಷಿಣಾಮೂರ್ತಿ' ಎಂದೂ ಕರೆಯುತ್ತಾರೆ.ಈ ದೇವಸ್ಥಾನದ ಅತ್ಯಂತ ವಿಶಿಷ್ಟವಾದ ಸಂಪ್ರದಾಯವೆಂದರೆ ಪ್ರತಿದಿನ ಮುಂಜಾನೆ ನಡೆಯುವ 'ಭಸ್ಮ ಆರತಿ'. ಇದು ವಿಶ್ವದಲ್ಲೇ ಬೇರೆಲ್ಲೂ ನಡೆಯದ ಅಪರೂಪದ ಆಚರಣೆಯಾಗಿದೆ. ಇಲ್ಲಿನ ಶಿವಲಿಂಗವು 'ಸ್ವಯಂಭೂ' (ತಾನಾಗಿಯೇ ಉದ್ಭವಿಸಿದ್ದು) ಎಂದು ನಂಬಲಾಗಿದೆ.

➤ ಇತ್ತೀಚೆಗೆ ಪ್ರಧಾನಮಂತ್ರಿಗಳು ಇಲ್ಲಿ ಅತ್ಯಾಧುನಿಕ ಸೌಲಭ್ಯವುಳ್ಳ 'ಮಹಾಕಾಲ ಲೋಕ' ಕಾರಿಡಾರ್ ಅನ್ನು ಉದ್ಘಾಟಿಸಿದ್ದಾರೆ, ಇದು ಪ್ರವಾಸೋದ್ಯಮದ ದೃಷ್ಟಿಯಿಂದ ಬಹಳ ಪ್ರಮುಖವಾಗಿದೆ.

## ಕೃಷಿ ಕ್ಷೇತ್ರದಲ್ಲಿ ಹೊಸ ಹೆಜ್ಜೆ: ತಮಿಳುನಾಡು FPOಗಳಿಗಾಗಿ ಕೇಂದ್ರ ಸರ್ಕಾರದ ಸಮಿತಿ




➤ ಭಾರತದ ಕೃಷಿ ಕ್ಷೇತ್ರದಲ್ಲಿ 'ರೈತ ಉತ್ಪಾದಕ ಸಂಸ್ಥೆಗಳು' (FPO) ಕ್ರಾಂತಿಕಾರಿ ಬದಲಾವಣೆ ತರುತ್ತಿವೆ. ಇತ್ತೀಚೆಗೆ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶ್ರೀ ಶಿವರಾಜ್ ಸಿಂಗ್ ಚೌಹಾಣ್ ಅವರು ತಮಿಳುನಾಡಿನ ಎಫ್‌ಪಿಒಗಳ ಕಾರ್ಯವೈಖರಿಯನ್ನು ಸುಧಾರಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿದ್ದಾರೆ. ಇತ್ತೀಚೆಗೆ ತಮಿಳುನಾಡಿನ ಈರೋಡ್ ಜಿಲ್ಲೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ರೈತರು ಎದುರಿಸುತ್ತಿರುವ ಮಾರುಕಟ್ಟೆ ಮತ್ತು ತಾಂತ್ರಿಕ ಸವಾಲುಗಳನ್ನು ಗಮನಿಸಿದ ಸಚಿವರು, ಈ ಸಮಸ್ಯೆಗಳಿಗೆ ತಕ್ಷಣದ ಪರಿಹಾರ ಕಂಡುಕೊಳ್ಳಲು ಈ ಸಮಿತಿಯನ್ನು ರಚಿಸಲು ನಿರ್ದೇಶಿಸಿದ್ದಾರೆ.

- ಪರಿಶೀಲನಾ ವ್ಯಾಪ್ತಿ: ಎಫ್‌ಪಿಒಗಳ ಆಡಳಿತ, ವ್ಯಾಪಾರ ಮಾದರಿಗಳು, ತಾಂತ್ರಿಕ ಬೆಂಬಲ ಮತ್ತು ಮಾರುಕಟ್ಟೆ ಸಂಪರ್ಕ.
- ಕಾಲಮಿತಿ: ಈ ಸಮಿತಿಯು ತನ್ನ ಸಮಗ್ರ ವರದಿಯನ್ನು 2 ತಿಂಗಳೊಳಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಿದೆ.

**➤ ಸಮಿತಿಯಲ್ಲಿರುವ ಪ್ರಮುಖ ಸಂಸ್ಥೆಗಳು: ಈ ಸಮಿತಿಯು ಕೇವಲ ಸರ್ಕಾರಿ ಅಧಿಕಾರಿಗಳನ್ನಷ್ಟೇ ಒಳಗೊಂಡಿಲ್ಲ, ಬದಲಾಗಿ ಕೃಷಿ ಕ್ಷೇತ್ರದ ವಿವಿಧ ಆಯಾಮಗಳ ತಜ್ಞರನ್ನು ಹೊಂದಿದೆ:**

1. NABARD: ಹಣಕಾಸು ಮತ್ತು ಸಾಲ ಸೌಲಭ್ಯಗಳ ವಿಶ್ಲೇಷಣೆಗಾಗಿ.
2. NAFED & SFAC: ಮಾರುಕಟ್ಟೆ ಜಾಲ ಮತ್ತು ಸಣ್ಣ ರೈತರ ಒಕ್ಕೂಟಗಳ ಸಬಲೀಕರಣಕ್ಕಾಗಿ.
3. ICAR-NRCB: ತಾಂತ್ರಿಕ ಮಾರ್ಗದರ್ಶನ ನೀಡಲು.
4. NGOಗಳು ಮತ್ತು FPO ಪ್ರತಿನಿಧಿಗಳು: ನೆಲಮಟ್ಟದ ಸಮಸ್ಯೆಗಳನ್ನು ಹಂಚಿಕೊಳ್ಳಲು.

➤ ತಮಿಳುನಾಡಿನ ಆಯ್ದ ಬೆಳೆಗಳ ಮೇಲೆ ವಿಶೇಷ ಗಮನ: ಸಮಿತಿಯು ವಿಶೇಷವಾಗಿ ಬಾಳೆಹಣ್ಣು (Banana): ಮೌಲ್ಯವರ್ಧನೆ ಮತ್ತು ರಫ್ತು, ಹೆಚ್ಚಳ, ಅರಿಶಿನ (Turmeric): ಈರೋಡ್ ಪ್ರಾಂತ್ಯದ ಪ್ರಮುಖ ಬೆಳೆ, ತೆಂಗು ಮತ್ತು ಮರಗೆಣಸು (Coconut & Tapioca), ಸಾವಯವ ಕೃಷಿ: ನೈಸರ್ಗಿಕ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಒದಗಿಸುವುದು. ಈ ಬೆಳೆಗಳನ್ನು ಬೆಳೆಯುವ ರೈತರ ಲಾಭಾಂಶ ಹೆಚ್ಚಿಸಲು ಕಾರ್ಯನಿರ್ವಹಿಸಲಿದೆ:

➤ ಹೋಸ್ಟ್ ಇನ್ಸ್ಟಿಟ್ಯೂಷನ್: ICAR-NRCB : ತಿರುಚಿರಾಪಳ್ಳಿಯಲ್ಲಿರುವ ಬಾಳೆಹಣ್ಣಿನ ರಾಷ್ಟ್ರೀಯ ಸಂಶೋಧನಾ ಕೇಂದ್ರ (NRCB) ಈ ಸಮಿತಿಯ ಆತಿಥೇಯ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ. ಇದು ವರದಿ ತಯಾರಿಕೆಗೆ ಅಗತ್ಯವಾದ ಸಚಿವಾಲಯದ ಬೆಂಬಲ ಮತ್ತು ಲಾಜಿಸ್ಟಿಕ್ಸ್ ಒದಗಿಸುತ್ತದೆ.

## ಶೂನ್ಯ ತ್ಯಾಜ್ಯ ಗುರಿಯತ್ತ ಹೆಜ್ಜೆ: ಏಪ್ರಿಲ್ 1ರಿಂದ ಜಾರಿಗೆ ಬರಲಿರುವ ಪರಿಸರ ನಿಯಮಗಳು-2026




➤ ಕೇಂದ್ರ ಪರಿಸರ ಸಚಿವಾಲಯವು 2016ರ ಹಳೆಯ ನಿಯಮಗಳನ್ನು ರದ್ದುಗೊಳಿಸಿ, ಹೆಚ್ಚು ತಾಂತ್ರಿಕ ಮತ್ತು ಜವಾಬ್ದಾರಿಯುತವಾದ 2026ರ ನಿಯಮಗಳನ್ನು ಜಾರಿಗೆ ತರುತ್ತಿದೆ. ಈ ಹೊಸ ನಿಯಮಗಳು ಏಪ್ರಿಲ್ 1, 2026 ರಿಂದ ಜಾರಿಗೆ ಬರಲಿವೆ. ಇದರ ಮುಖ್ಯ ಉದ್ದೇಶ 'ಶೂನ್ಯ ತ್ಯಾಜ್ಯ' (Zero Waste) ಗುರಿ ತಲುಪುವುದು ಮತ್ತು 'ವೃತ್ತಾಕಾರದ ಆರ್ಥಿಕತೆ' (Circular Economy) ಗೆ ಉತ್ತೇಜನ ನೀಡುವುದಾಗಿದೆ.

➤ 'ಮಾಲಿನ್ಯಕಾರಕವೇ ಪಾವತಿಸಲಿ' (Polluter Pays Principle) : ಈ ತತ್ವದ ಅಡಿಯಲ್ಲಿ, ಯಾರು ಪರಿಸರವನ್ನು ಕಲುಷಿತಗೊಳಿಸುತ್ತಾರೋ ಅಥವಾ ನಿಯಮಗಳನ್ನು ಉಲ್ಲಂಘಿಸುತ್ತಾರೋ ಅವರೇ ಅದರ ಶುದ್ಧೀಕರಣದ ವೆಚ್ಚವನ್ನು ಭರಿಸಬೇಕು. ತಪ್ಪು ಮಾಹಿತಿ ನೀಡುವುದು, ನೋಂದಣಿ ಇಲ್ಲದೆ ತ್ಯಾಜ್ಯ ಘಟಕ ನಡೆಸುವುದು ಅಥವಾ ತ್ಯಾಜ್ಯ ವಿಂಗಡಣೆ ಮಾಡದಿದ್ದಲ್ಲಿ 'ಪರಿಸರ ಪರಿಹಾರ' (Environmental Compensation) ರೂಪದಲ್ಲಿ ದಂಡ ವಿಧಿಸಲಾಗುತ್ತದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು (SPCB) ಈ ದಂಡವನ್ನು ವಿಧಿಸುವ ಅಧಿಕಾರ ಹೊಂದಿವೆ.

➤ ನಾಲ್ಕು ಹಂತದ ಕಡ್ಡಾಯ ವಿಂಗಡಣೆ: ಈ ಹಿಂದೆ ಕೇವಲ ಹಸಿ ಮತ್ತು ಒಣ ತ್ಯಾಜ್ಯಕ್ಕೆ ಪ್ರಾಮುಖ್ಯತೆ ಇತ್ತು. ಆದರೆ ಹೊಸ ನಿಯಮದಂತೆ ಪ್ರತಿಯೊಬ್ಬ ನಾಗರಿಕರು ತ್ಯಾಜ್ಯವನ್ನು ಈ **ಕೆಳಗಿನಂತೆ ನಾಲ್ಕು ಭಾಗಗಳಾಗಿ ವಿಂಗಡಿಸಬೇಕು:**

1. ಹಸಿ ತ್ಯಾಜ್ಯ (Wet Waste): ಜೈವಿಕವಾಗಿ ಕೊಳೆಯುವ ಪದಾರ್ಥಗಳು (ಗೊಬ್ಬರ ಅಥವಾ ಬಯೋ-ಗ್ಯಾಸ್ ತಯಾರಿಕೆಗೆ).
2. ಒಣ ತ್ಯಾಜ್ಯ (Dry Waste): ಮರುಬಳಕೆ ಮಾಡಬಹುದಾದ ವಸ್ತುಗಳು (ಪ್ಲಾಸ್ಟಿಕ್, ಲೋಹ, ಕಾಗದ).
3. ನೈರ್ಮಲ್ಯ ತ್ಯಾಜ್ಯ (Sanitary Waste): ಪರಿಸರಕ್ಕೆ ಹಾನಿಕಾರಕವಾದ ಮತ್ತು ಸೋಂಕು ಹರಡುವ ಸಾಮಗ್ರಿಗಳು (ಸ್ಯಾನಿಟರಿ ಪ್ಯಾಡ್, ಡೈಪರ್ ಇತ್ಯಾದಿ). ಇವುಗಳನ್ನು ಪ್ರತ್ಯೇಕವಾಗಿ ಪೇಪರ್‌ನಲ್ಲಿ ಸುತ್ತಿ ನೀಡಬೇಕು.
4. ವಿಶೇಷ ಕಾಳಜಿ ತ್ಯಾಜ್ಯ (Special Care Waste): ಅಪಾಯಕಾರಿ ಗೃಹಬಳಕೆ ವಸ್ತುಗಳು (ಬ್ಯಾಟರಿ, ಪೇಂಟ್, ಔಷಧಿ, ಥರ್ಮಾಮೀಟರ್).

➤ ಬೃಹತ್ ತ್ಯಾಜ್ಯ ಉತ್ಪಾದಕರ : ಯಾರು ದಿನಕ್ಕೆ 100 ಕೆಜಿಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುತ್ತಾರೋ ಅಥವಾ 20,000 ಚದರ ಮೀಟರ್‌ಗಿಂತ ಹೆಚ್ಚು ವಿಸ್ತೀರ್ಣ ಹೊಂದಿದ್ದಾರೋ ಅವರನ್ನು 'ಬೃಹತ್ ತ್ಯಾಜ್ಯ ಉತ್ಪಾದಕರು' ಎಂದು ಪರಿಗಣಿಸಲಾಗುತ್ತದೆ. ಇವರು ತಮ್ಮ ತ್ಯಾಜ್ಯವನ್ನು ತಾವೇ ಸಂಸ್ಕರಿಸುವುದು ಅಥವಾ 'ವಿಸ್ತೃತ ಬೃಹತ್ ತ್ಯಾಜ್ಯ ಉತ್ಪಾದಕರ ಜವಾಬ್ದಾರಿ' (EBWGR) ಅಡಿಯಲ್ಲಿ ಪ್ರಮಾಣಪತ್ರ ಪಡೆಯುವುದು ಕಡ್ಡಾಯ.

➤ ಆನ್‌ಲೈನ್ ಟ್ರ್ಯಾಕಿಂಗ್ ಮತ್ತು ಪೋರ್ಟಲ್: ತ್ಯಾಜ್ಯ ಸಂಗ್ರಹಣೆಯಿಂದ ಹಿಡಿದು ವಿಲೇವಾರಿಯವರೆಗೆ ಪ್ರತಿಯೊಂದು ಹಂತವನ್ನು ಮೇಲ್ವಿಚಾರಣೆ ಮಾಡಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (CPCB) ಒಂದು ಕೇಂದ್ರೀಕೃತ ಆನ್‌ಲೈನ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಿದೆ.

➤ ಪರಿಸರ ಪರಿಹಾರ (Environmental Compensation): ನಿಯಮ ಉಲ್ಲಂಘಿಸುವವರಿಗೆ, ಸುಳ್ಳು ಮಾಹಿತಿ ನೀಡುವವರಿಗೆ ಅಥವಾ ಅವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡುವವರಿಗೆ ಭಾರಿ ದಂಡ ವಿಧಿಸಲು ಅವಕಾಶ ನೀಡಲಾಗಿದೆ.ಗುಡ್ಡಗಾಡು ಪ್ರದೇಶ ಮತ್ತು ದ್ವೀಪಗಳಿಗೆ ವಿಶೇಷ ನಿಯಮ: ಪ್ರವಾಸಿಗರಿಂದ ಹೆಚ್ಚಿನ ತ್ಯಾಜ್ಯ ಉತ್ಪತ್ತಿಯಾಗುವ ಹಿನ್ನೆಲೆಯಲ್ಲಿ, ಸ್ಥಳೀಯ ಸಂಸ್ಥೆಗಳು ಪ್ರವಾಸಿಗರಿಗೆ 'ಬಳಕೆದಾರರ ಶುಲ್ಕ' (User Fee) ವಿಧಿಸಲು ಈ ನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ.

➤ RDF ಬಳಕೆ ಕಡ್ಡಾಯ: ಕೈಗಾರಿಕೆಗಳು ಮತ್ತು ಸಿಮೆಂಟ್ ಕಾರ್ಖಾನೆಗಳು ತಾವು ಬಳಸುವ ಇಂಧನದಲ್ಲಿ ಶೇ. 5 ರಿಂದ ಶೇ. 15 ರಷ್ಟು RDF (Refuse Derived Fuel) ಅನ್ನು ಬಳಸುವುದನ್ನು ಕಡ್ಡಾಯಗೊಳಿಸಲಾಗಿದೆ.

## 30 Jan 2026

## ಕರ್ನಾಟಕ ರೆಗ್ಯುಲೇಟರಿ ಸ್ಯಾಂಡ್‌ಬಾಕ್ಸ್: ಉದಯೋನ್ಮುಖ ತಂತ್ರಜ್ಞಾನಕ್ಕೆ ಹೊಸ ವೇದಿಕೆ




➤ ಬೆಂಗಳೂರು: ತಂತ್ರಜ್ಞಾನ ಕ್ಷೇತ್ರದಲ್ಲಿ ಸದಾ ಮುಂಚೂಣಿಯಲ್ಲಿರುವ ಕರ್ನಾಟಕ ಸರ್ಕಾರವು ಈಗ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ಉದಯೋನ್ಮುಖ ತಂತ್ರಜ್ಞಾನಗಳ (Emerging Technologies) ಸುರಕ್ಷಿತ ಪರೀಕ್ಷೆ ಮತ್ತು ಅಭಿವೃದ್ಧಿಗಾಗಿ 'ಕರ್ನಾಟಕ ನಾವೀನ್ಯತೆ ಕಾಯ್ದೆ' (Karnataka Innovation Act) ಅಡಿಯಲ್ಲಿ 'ರೆಗ್ಯುಲೇಟರಿ ಸ್ಯಾಂಡ್‌ಬಾಕ್ಸ್' (Regulatory Sandbox) ಚೌಕಟ್ಟನ್ನು ರೂಪಿಸಲು ಸರ್ಕಾರ ಯೋಜಿಸಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ 20ನೇ ಆವೃತ್ತಿಯ 'ಇಂಡಿಯಾ ಡಿಜಿಟಲ್ ಸಮಿತ್' (IDS) 2026 ಉದ್ಘಾಟನಾ ಸಮಾರಂಭದಲ್ಲಿ ಐಟಿ-ಬಿಟಿ ಇಲಾಖೆಯ ಕಾರ್ಯದರ್ಶಿ ಡಾ. ಮಂಜುಳಾ ಎನ್. ಅವರು ಈ ವಿಷಯವನ್ನು ಪ್ರಕಟಿಸಿದರು.

➤ ರೆಗ್ಯುಲೇಟರಿ ಸ್ಯಾಂಡ್‌ಬಾಕ್ಸ್ ಎನ್ನುವುದು ಕೃತಕ ಬುದ್ಧಿಮತ್ತೆ (AI) ನಂತಹ ಹೊಸ ತಂತ್ರಜ್ಞಾನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೊದಲು, ನಿಯಂತ್ರಿತ ಪರಿಸರದಲ್ಲಿ ಪರೀಕ್ಷಿಸುವ ಒಂದು ವಿಶೇಷ ವ್ಯವಸ್ಥೆಯಾಗಿದೆ. ಹೊಸ ಆವಿಷ್ಕಾರಗಳಿಗೆ ಅಡ್ಡಿಯಾಗುವ ಕಾನೂನು ನಿಯಮಗಳನ್ನು ತಾತ್ಕಾಲಿಕವಾಗಿ ಸಡಿಲಿಸಿ, ಸಂಶೋಧನೆಗೆ ಮುಕ್ತ ಅವಕಾಶ ನೀಡುವುದು ಇದರ ಉದ್ದೇಶವಾಗಿದೆ. ನಾವೀನ್ಯತೆಯು ತಾಂತ್ರಿಕ ಬದಲಾವಣೆಗೆ ಅನುಗುಣವಾಗಿ ವೇಗವಾಗಿ ಬೆಳೆಯಲು ಮತ್ತು ಅದೇ ಸಮಯದಲ್ಲಿ ಹೊಣೆಗಾರಿಕೆ, ಸುರಕ್ಷತೆ ಹಾಗೂ ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳಲು ಇದು ಸಹಕಾರಿ.

➤ ಭಾರತದ ಇಂಟರ್ನೆಟ್ ಬಳಕೆ: ಗ್ರಾಮೀಣ ಭಾರತದ ಕ್ರಾಂತಿ: ಇದೇ ಸಂದರ್ಭದಲ್ಲಿ IAMAI ಮತ್ತು ಕಾಂಟರ್ (Kantar) ಸಿದ್ಧಪಡಿಸಿದ 'ಇಂಟರ್ನೆಟ್ ಇನ್ ಇಂಡಿಯಾ ರಿಪೋರ್ಟ್ 2025' ವರದಿಯನ್ನು ಬಿಡುಗಡೆ ಮಾಡಲಾಯಿತು. ಈ ವರದಿಯ ಪ್ರಮುಖ ಅಂಶಗಳು **ಹೀಗಿವೆ:**

=> ಬಳಕೆದಾರರ ಸಂಖ್ಯೆ: 2025ರ ವೇಳೆಗೆ ಭಾರತದಲ್ಲಿ ಸಕ್ರಿಯ ಇಂಟರ್ನೆಟ್ ಬಳಕೆದಾರರ ಸಂಖ್ಯೆ 958 ಮಿಲಿಯನ್ ತಲುಪಿದೆ.

=> ಗ್ರಾಮೀಣ ಪ್ರಾಬಲ್ಯ: ಒಟ್ಟು ಇಂಟರ್ನೆಟ್ ಬಳಕೆದಾರರಲ್ಲಿ ಶೇ. 57 ಕ್ಕೂ ಹೆಚ್ಚು ಮಂದಿ ಗ್ರಾಮೀಣ ಭಾಗದವರು. ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗದಲ್ಲಿ ಇಂಟರ್ನೆಟ್ ಬಳಕೆ 4 ಪಟ್ಟು ವೇಗವಾಗಿ ಬೆಳೆಯುತ್ತಿದೆ.

=> AI ಬಳಕೆ: ಸುಮಾರು ಶೇ. 44 ರಷ್ಟು ಬಳಕೆದಾರರು ಧ್ವನಿ ಹುಡುಕಾಟ (Voice Search), ಚಾಟ್‌ಬಾಟ್‌ಗಳು ಮತ್ತು AI ಫಿಲ್ಟರ್ ಗಳಂತಹ ಸೌಲಭ್ಯಗಳನ್ನು ಬಳಸುತ್ತಿದ್ದಾರೆ.

=> ಕಿರು ವಿಡಿಯೋ (Short Videos): 2025ರಲ್ಲಿ ಕಿರು ವಿಡಿಯೋ ವೀಕ್ಷಕರ ಸಂಖ್ಯೆ 588 ಮಿಲಿಯನ್ ತಲುಪಿದೆ.

➤ ಕರ್ನಾಟಕದ ಕಾರ್ಯತಂತ್ರದ ಮುಖ್ಯಾಂಶಗಳು: ಐಟಿ-ಬಿಟಿ ಇಲಾಖೆಯ ಕಾರ್ಯದರ್ಶಿ ಡಾ. ಮಂಜುಳಾ ಎನ್. ಅವರು ರಾಜ್ಯದ ಕೆಲವು ಪ್ರಮುಖ ಉಪಕ್ರಮಗಳನ್ನು ಉಲ್ಲೇಖಿಸಿದ್ದಾರೆ:

=> Centres of Excellence (CoE): ಸೈಬರ್ ಸೆಕ್ಯೂರಿಟಿ, ಡೇಟಾ ಸೈನ್ಸ್ ಮತ್ತು ಎಐ ಕ್ಷೇತ್ರಗಳಲ್ಲಿ ಪರಿಣತಿ ಪಡೆಯಲು ವಿಶೇಷ ಕೇಂದ್ರಗಳ ಸ್ಥಾಪನೆ.
=> Deep-tech Skilling: ಕೇವಲ ಸಾಫ್ಟ್‌ವೇರ್ ಮಾತ್ರವಲ್ಲದೆ, ಆಳವಾದ ತಾಂತ್ರಿಕ ಜ್ಞಾನವಿರುವ ಪ್ರತಿಭೆಗಳನ್ನು ಸಿದ್ಧಪಡಿಸುವುದು.
=> ರಾಷ್ಟ್ರೀಯ ಎಐ ವಾಸ್ತುಶಿಲ್ಪ: ಭಾರತದ ರಾಷ್ಟ್ರೀಯ ಕೃತಕ ಬುದ್ಧಿಮತ್ತೆ ಚೌಕಟ್ಟಿಗೆ (National AI Architecture) ಕರ್ನಾಟಕವು ತಳಹದಿಯ ಅಗತ್ಯತೆಗಳನ್ನು ಪೂರೈಸುತ್ತಿದೆ.

## ಗಣರಾಜ್ಯೋತ್ಸವ ಪರೇಡ್ 2026 : ಸ್ತಬ್ಧಚಿತ್ರ ವಿಭಾಗದಲ್ಲಿ ಮಹಾರಾಷ್ಟ್ರಕ್ಕೆ ಅಗ್ರಸ್ಥಾನ



➤ 2026ರ ಗಣರಾಜ್ಯೋತ್ಸವದ ಅದ್ದೂರಿ ಪರೇಡ್‌ನಲ್ಲಿ ಭಾಗವಹಿಸಿದ ಅತ್ಯುತ್ತಮ ಸ್ತಬ್ಧಚಿತ್ರಗಳು ಮತ್ತು ಪಥಸಂಚಲನ ತಂಡಗಳ ಫಲಿತಾಂಶವನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ಬಾರಿ ತೀರ್ಪುಗಾರರ ಆಯ್ಕೆ (Judges' Choice) ಮತ್ತು ಸಾರ್ವಜನಿಕರ ಆಯ್ಕೆ (Popular Choice) ಎಂದು ಎರಡು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗಿದೆ.
**➤ ತೀರ್ಪುಗಾರರ ಆಯ್ಕೆ (Judges' Choice Selection):ತಜ್ಞರ ಸಮಿತಿಯು ನೀಡಿದ ಅಂಕಗಳ ಆಧಾರದ ಮೇಲೆ ಘೋಷಿಸಲಾದ ಅಧಿಕೃತ ಪ್ರಶಸ್ತಿಗಳು ಇಲ್ಲಿವೆ:**
=> ಅತ್ಯುತ್ತಮ ಸ್ತಬ್ಧಚಿತ್ರಗಳು (ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ):
1. ಪ್ರಥಮ ಸ್ಥಾನ: ಮಹಾರಾಷ್ಟ್ರ: ವಸ್ತು ವಿಷಯ: "ಗಣೇಶೋತ್ಸವ: ಆತ್ಮನಿರ್ಭರತೆಯ ಸಂಕೇತ". ಇಲ್ಲಿ ಸಾಂಪ್ರದಾಯಿಕ ಕಲೆ ಮತ್ತು ಆಧುನಿಕತೆಯ ಸಮ್ಮಿಲನವನ್ನು ಪ್ರದರ್ಶಿಸಲಾಯಿತು.
2. ದ್ವಿತೀಯ ಸ್ಥಾನ: ಜಮ್ಮು ಮತ್ತು ಕಾಶ್ಮೀರ : ವಸ್ತು ವಿಷಯ: "ಹಸ್ತಕಲೆ ಮತ್ತು ಜಾನಪದ ನೃತ್ಯಗಳು". ಕೇಂದ್ರಾಡಳಿತ ಪ್ರದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಇದು ಬಿಂಬಿಸಿತು.
3. ತೃತೀಯ ಸ್ಥಾನ: ಕೇರಳ: ವಸ್ತು ವಿಷಯ: "ವಾಟರ್ ಮೆಟ್ರೋ ಮತ್ತು 100% ಡಿಜಿಟಲ್ ಸಾಕ್ಷರತೆ". ನವ ಭಾರತದ ತಾಂತ್ರಿಕ ಪ್ರಗತಿಯನ್ನು ಕೇರಳ ಸುಂದರವಾಗಿ ಪ್ರದರ್ಶಿಸಿತು.
=> ಅತ್ಯುತ್ತಮ ಪಥಸಂಚಲನ ತಂಡಗಳು:
- ಮೂರು ಸೇನಾ ಪಡೆಗಳಲ್ಲಿ:ಭಾರತೀಯ ನೌಕಾಪಡೆ (Indian Navy) ತನ್ನ ಅಪ್ರತಿಮ ಶಿಸ್ತು ಮತ್ತು ಸಮನ್ವಯಕ್ಕಾಗಿ ಅಗ್ರಸ್ಥಾನ ಪಡೆದಿದೆ.
- ಅರೆಸೇನಾ ಪಡೆಗಳಲ್ಲಿ: ದೆಹಲಿ ಪೊಲೀಸ್ ಅತ್ಯುತ್ತಮ ಪಥಸಂಚಲನ ನೀಡಿದ ತಂಡವಾಗಿ ಹೊರಹೊಮ್ಮಿದೆ.
=> ಸಚಿವಾಲಯಗಳ ವಿಭಾಗ:
- ಸಂಸ್ಕೃತಿ ಸಚಿವಾಲಯ: "ವಂದೇ ಮಾತರಂ - ರಾಷ್ಟ್ರದ ಆತ್ಮದ ಕೂಗು" ಎಂಬ ವಿಷಯದಡಿ ಸ್ತಬ್ಧಚಿತ್ರ ಪ್ರದರ್ಶಿಸಿ ಮೊದಲ ಬಹುಮಾನ ಪಡೆದಿದೆ. ಇದು ವಂದೇ ಮಾತರಂ ಗೀತೆಯ 150 ವರ್ಷಗಳ ಇತಿಹಾಸವನ್ನು ಸಾರಿತು.
- ವಿಶೇಷ ಪ್ರಶಸ್ತಿ: ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆ (CPWD) ಮತ್ತು 'ವಂದೇ ಮಾತರಂ' ನೃತ್ಯ ತಂಡಕ್ಕೆ ವಿಶೇಷ ಗೌರವ ನೀಡಲಾಗಿದೆ.
➤ ಸಾರ್ವಜನಿಕರ ಆಯ್ಕೆ (Popular Choice - MyGov Poll): ಸಾರ್ವಜನಿಕರು MyGov ಪೋರ್ಟಲ್ ಮೂಲಕ ಮತ ಚಲಾಯಿಸಿ ಆಯ್ಕೆ ಮಾಡಿದ ವಿಜೇತರು:
**=> ಅತ್ಯುತ್ತಮ ಸ್ತಬ್ಧಚಿತ್ರ (ರಾಜ್ಯಗಳು):**
1. ಗುಜರಾತ್: (ವಿಷಯ: ವಂದೇ ಮಾತರಂ - ಸ್ವದೇಶಿ ಮಂತ್ರ)
2. ಉತ್ತರ ಪ್ರದೇಶ: (ವಿಷಯ: ಬುಂದೇಲ್‌ಖಂಡ್ ಸಂಸ್ಕೃತಿ)
3. ರಾಜಸ್ಥಾನ: (ವಿಷಯ: ಬಿಕಾನೆರ್ ಗೋಲ್ಡ್ ಆರ್ಟ್ - ಉಸ್ತಾ ಕಲೆ)
=> ಅತ್ಯುತ್ತಮ ಪಥಸಂಚಲನ (ಸೇನಾ ಪಡೆ): ಅಸ್ಸಾಂ ರೆಜಿಮೆಂಟ್
=> ಅತ್ಯುತ್ತಮ ಪಥಸಂಚಲನ (ಅರೆಸೇನಾ ಪಡೆ): ಸಿಆರ್‌ಪಿಎಫ್

## ಭೂ ಮಾಫಿಯಾಗೆ ಬ್ರೇಕ್: ಉತ್ತರ ಪ್ರದೇಶದಲ್ಲಿ ಆಸ್ತಿ ನೋಂದಣಿಗೆ 'ಆಧಾರ್' ಕಡ್ಡಾಯ




➤ ಲಕ್ನೋ: ಉತ್ತರ ಪ್ರದೇಶ ಸರ್ಕಾರವು ಭೂ ವ್ಯವಹಾರಗಳಲ್ಲಿ ನಡೆಯುವ ಅಕ್ರಮಗಳನ್ನು ತಡೆಗಟ್ಟಲು ಒಂದು ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ. ಫೆಬ್ರವರಿ 1, 2026 ರಿಂದ ಜಾರಿಗೆ ಬರುವಂತೆ, ರಾಜ್ಯದಾದ್ಯಂತ ಎಲ್ಲಾ ಆಸ್ತಿ ನೋಂದಣಿಗಳಿಗೂ ಆಧಾರ್ ದೃಢೀಕರಣವನ್ನು ಕಡ್ಡಾಯಗೊಳಿಸಲಾಗಿದೆ. ಆಸ್ತಿ ಖರೀದಿದಾರರು, ಮಾರಾಟಗಾರರು ಮತ್ತು ಸಾಕ್ಷಿದಾರರು (Witnesses) ಕಡ್ಡಾಯವಾಗಿ ಬಯೋಮೆಟ್ರಿಕ್ ದೃಢೀಕರಣಕ್ಕೆ ಒಳಗಾಗಬೇಕು.
➤ ಈ ಹೊಸ ವ್ಯವಸ್ಥೆಯು ನಕಲಿ ದಾಖಲೆ ಸೃಷ್ಟಿ, ವ್ಯಕ್ತಿಗಳ ಸೋಗು ಹಾಕುವುದು (Impersonation) ಮತ್ತು ಒಂದೇ ಆಸ್ತಿಯನ್ನು ಹಲವರಿಗೆ ಮಾರಾಟ ಮಾಡುವುದನ್ನು ತಡೆಯುತ್ತದೆ. ನೋಂದಣಿ ಕಚೇರಿಯಲ್ಲಿ ಬೆರಳಚ್ಚುಗಳನ್ನು (Fingerprints) ನೀಡಿದ ತಕ್ಷಣ, ಅದು ಆಧಾರ್ ಡೇಟಾಬೇಸ್‌ನೊಂದಿಗೆ ತಾಳೆಯಾಗುತ್ತದೆ. ಮಾಹಿತಿ ಹೊಂದಾಣಿಕೆಯಾಗದಿದ್ದರೆ ನೋಂದಣಿ ಪ್ರಕ್ರಿಯೆ ತಕ್ಷಣವೇ ಸ್ಥಗಿತಗೊಳ್ಳುತ್ತದೆ. ಯಶಸ್ವಿ ದೃಢೀಕರಣದ ನಂತರ, ಸಂಬಂಧಪಟ್ಟ ವ್ಯಕ್ತಿಗಳ ಫೋಟೋಗಳನ್ನು ತೆಗೆದು ತಕ್ಷಣವೇ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ.
➤ ಈ ಹಿಂದೆ ನೋಂದಣಿ ಪ್ರಕ್ರಿಯೆಯು ಕೇವಲ ದಾಖಲೆಗಳ ಆಧಾರದ ಮೇಲೆ ನಡೆಯುತ್ತಿತ್ತು. ಇದರಿಂದಾಗಿ ನಕಲಿ ಗುರುತಿನ ಚೀಟಿಗಳನ್ನು ಬಳಸಿ ಭೂಮಿ ಲಪಟಾಯಿಸುವ ಪ್ರಕರಣಗಳು ಹೆಚ್ಚಾಗಿದ್ದವು. ಉತ್ತರ ಪ್ರದೇಶದ ಅಂಚೆ ಮತ್ತು ನೋಂದಣಿ ಸಚಿವ ರವೀಂದ್ರ ಜೈಸ್ವಾಲ್ ಅವರ ಪ್ರಕಾರ, ಈ ಹೊಸ "ಉತ್ತರ ಪ್ರದೇಶ ಆನ್‌ಲೈನ್ ದಾಖಲೆ ನೋಂದಣಿ ನಿಯಮಗಳು, 2024" (UP Online Document Registration Rules, 2024) ಅಡಿಯಲ್ಲಿ ತಂತ್ರಜ್ಞಾನದ ಬಳಕೆಯು ವ್ಯವಸ್ಥೆಯನ್ನು ಹೆಚ್ಚು ಸುರಕ್ಷಿತಗೊಳಿಸಲಿದೆ.
➤ ಸಾರ್ವಜನಿಕರ ಮೇಲೆ ಪರಿಣಾಮ: ಒಂದೆಡೆ ಆಸ್ತಿ ವ್ಯವಹಾರಗಳು ಸುರಕ್ಷಿತವಾಗುತ್ತಿದ್ದರೆ, ಇನ್ನೊಂದೆಡೆ ಲಕ್ನೋ ಮಹಾನಗರ ಪಾಲಿಕೆಯು ನರ್ಸಿಂಗ್ ಹೋಮ್‌ಗಳು, ಆಸ್ಪತ್ರೆಗಳು ಮತ್ತು ರೆಸ್ಟೋರೆಂಟ್‌ಗಳ ಪರವಾನಗಿ ಶುಲ್ಕವನ್ನು ಹೆಚ್ಚಿಸಿದೆ. ಇದರಿಂದಾಗಿ ಮುಂಬರುವ ದಿನಗಳಲ್ಲಿ ಖಾಸಗಿ ಆರೋಗ್ಯ ಸೇವೆ ಮತ್ತು ಹೊರಗಿನ ಆಹಾರದ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ.

## ಕೇಂದ್ರ ಸರ್ಕಾರದಿಂದ 'ಹೊಸ ಆಧಾರ್ ಮೊಬೈಲ್ ಆ್ಯಪ್' ಬಿಡುಗಡೆ.



➤ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ನಾಗರಿಕರ ಸೌಕರ್ಯಕ್ಕಾಗಿ ಮತ್ತು ಗೌಪ್ಯತೆಯನ್ನು ರಕ್ಷಿಸುವ ಉದ್ದೇಶದಿಂದ ಹೊಸ ಆಧಾರ್ ಮೊಬೈಲ್ ಆ್ಯಪ್ (New Aadhaar App) ಅನ್ನು ಬಿಡುಗಡೆ ಮಾಡಿದೆ. ಈ ಆ್ಯಪ್ ಕೇವಲ ಡಿಜಿಟಲ್ ಕಾರ್ಡ್ ಅಲ್ಲದೆ,

ನಾಗರಿಕರು ತಮ್ಮ ಡೇಟಾದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದುವಂತೆ ವಿನ್ಯಾಸಗೊಳಿಸಲಾಗಿದೆ.

➢ ಆಯ್ದ ಮಾಹಿತಿ ಹಂಚಿಕೆ (Selective Sharing): ಈ ಆ್ಯಪ್‌ನ ಅತ್ಯಂತ ವಿಶಿಷ್ಟ ವೈಶಿಷ್ಟ್ಯವೆಂದರೆ ಮಾಹಿತಿ ಹಂಚಿಕೆಯ ಮೇಲಿನ ನಿಯಂತ್ರಣ. ಉದಾಹರಣೆಗೆ, ಚಿತ್ರಮಂದಿರಗಳಲ್ಲಿ ವಯಸ್ಸಿನ ದೃಢೀಕರಣಕ್ಕೆ ಕೇವಲ ಹುಟ್ಟಿದ ದಿನಾಂಕವನ್ನು ಮಾತ್ರ ಹಂಚಿಕೊಳ್ಳಬಹುದು, ಇಡೀ ಆಧಾರ್ ಸಂಖ್ಯೆ ಅಥವಾ ವಿಳಾಸವನ್ನು ನೀಡುವ ಅಗತ್ಯವಿರುವುದಿಲ್ಲ.

➢ ಒಂದು ಕುಟುಂಬ - ಒಂದು ಆ್ಯಪ್ (One Family – One App): ಈ ಸೌಲಭ್ಯದ ಅಡಿಯಲ್ಲಿ ಒಬ್ಬ ವ್ಯಕ್ತಿಯು ತನ್ನ ಮೊಬೈಲ್‌ನಲ್ಲಿ ಗರಿಷ್ಠ 5 ಆಧಾರ್ ಪ್ರೊಫೈಲ್‌ಗಳನ್ನು ನಿರ್ವಹಿಸಬಹುದು. ಇದು ಮಕ್ಕಳು ಮತ್ತು ಹಿರಿಯ ನಾಗರಿಕರ ಆಧಾರ್ ನಿರ್ವಹಣೆಯನ್ನು ಸುಲಭಗೊಳಿಸುತ್ತದೆ.

➢ ಮುಖದ ಮೂಲಕ ದೃಢೀಕರಣ (Face Verification): ಇಂಟರ್ನೆಟ್ ಇಲ್ಲದಿದ್ದರೂ ಆಫ್‌ಲೈನ್ ಕ್ಯೂಆರ್ ಕೋಡ್ (QR Code) ಮೂಲಕ ಗುರುತು ದೃಢೀಕರಿಸಬಹುದು. ಅಲ್ಲದೆ, ಪೇಪರ್ ರಹಿತ ಪರಿಶೀಲನೆಗೆ ಮುಖದ ದೃಢೀಕರಣ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

➢ ಬಯೋಮೆಟ್ರಿಕ್ ಲಾಕ್: ಬಳಕೆದಾರರು ಒಂದೇ ಕ್ಲಿಕ್‌ನಲ್ಲಿ ತಮ್ಮ ಬೆರಳಚ್ಚು ಅಥವಾ ಕಣ್ಣಿನ ಪಾಪೆಯ (Iris) ಮಾಹಿತಿಯನ್ನು ಲಾಕ್ ಅಥವಾ ಅನ್‌ಲಾಕ್ ಮಾಡಬಹುದು.

➢ ಮನೆಯಲ್ಲೇ ಮೊಬೈಲ್ ಸಂಖ್ಯೆ ಅಪ್‌ಡೇಟ್: ಈ ಆ್ಯಪ್ ಮೂಲಕ ನಾಗರಿಕರು ಆಧಾರ್ ಕೇಂದ್ರಕ್ಕೆ ಹೋಗದೆ ತಮ್ಮ ಮೊಬೈಲ್ ಸಂಖ್ಯೆ ಮತ್ತು ವಿಳಾಸವನ್ನು ನವೀಕರಿಸಬಹುದು (ಇದಕ್ಕೆ ಸುಮಾರು ₹75 ಶುಲ್ಕ ನಿಗದಿಪಡಿಸಲಾಗಿದೆ).

➢ ಈ ಆ್ಯಪ್ ಹೋಟೆಲ್ ಚೆಕ್-ಇನ್, ವಿಮಾನ ನಿಲ್ದಾಣ ಪ್ರವೇಶ, ಆಸ್ಪತ್ರೆ ದಾಖಲಾತಿ ಮತ್ತು ಗಿಗ್ ವರ್ಕರ್ಸ್ (Gig Workers) ದೃಢೀಕರಣದಂತಹ ಸಂದರ್ಭಗಳಲ್ಲಿ ಭೌತಿಕ ಕಾರ್ಡ್ ಅಥವಾ ಫೋಟೋಕಾಪಿ ನೀಡುವ ಅಗತ್ಯವನ್ನು ತಪ್ಪಿಸುತ್ತದೆ. ಇದು ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯ್ದೆ (DPDP Act) ಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತದೆ.

## ಏಷ್ಯಾ ಉತ್ಪಾದನಾ ಸೂಚ್ಯಂಕ 2026: ಭಾರತಕ್ಕೆ 6ನೇ ಸ್ಥಾನ




➢ ಜಾಗತಿಕ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿರುವ ಭಾರತವು ಉತ್ಪಾದನಾ ವಲಯದಲ್ಲಿ ಸ್ಥಿರವಾದ ಪ್ರಗತಿ ಸಾಧಿಸುತ್ತಿದೆ. ಇತ್ತೀಚೆಗೆ ಹಾಂಗ್‌ಕಾಂಗ್ ಮೂಲದ ಹೂಡಿಕೆ ಸಲಹಾ ಸಂಸ್ಥೆ 'ಡೆಜಾನ್ ಶಿರಾ ಅಂಡ್ ಅಸೋಸಿಯೇಟ್ಸ್' ಬಿಡುಗಡೆ ಮಾಡಿದ 'ಏಷ್ಯಾ ಉತ್ಪಾದನಾ ಸೂಚ್ಯಂಕ (AMI)-2026' ವರದಿಯಲ್ಲಿ ಭಾರತವು ಏಷ್ಯಾದ 11 ಪ್ರಮುಖ ಆರ್ಥಿಕತೆಗಳ ಪೈಕಿ 6ನೇ ಸ್ಥಾನವನ್ನು ಉಳಿಸಿಕೊಂಡಿದೆ.

➢ ಈ ಸೂಚ್ಯಂಕವು ಏಷ್ಯಾದ ದೇಶಗಳಲ್ಲಿ ಉತ್ಪಾದನಾ ಸೌಲಭ್ಯಗಳು ಎಷ್ಟು ಸ್ಪರ್ಧಾತ್ಮಕವಾಗಿವೆ ಎಂಬುದನ್ನು ಐದು ಪ್ರಮುಖ ಮಾನದಂಡಗಳ ಆಧಾರದ ಮೇಲೆ ಅಳೆಯುತ್ತದೆ. ಅವುಗಳೆಂದರೆ: ಮೂಲಸೌಕರ್ಯ (Infrastructure), ಕಾರ್ಮಿಕ ಶಕ್ತಿ (Labor Force), ಮಾರುಕಟ್ಟೆ ಪ್ರವೇಶ (Market Access), ನಿಯಂತ್ರಕ ವಾತಾವರಣ (Regulatory Environment), ಪೂರೈಕೆ ಸರಪಳಿಯ ಸ್ಥಿತಿಸ್ಥಾಪಕತ್ವ (Supply Chain Resilience)

➢ **'ಏಷ್ಯಾ ಉತ್ಪಾದನಾ ಸೂಚ್ಯಂಕ (AMI)-2026'**

1. ಚೀನಾ: ಸತತ ಮೂರನೇ ವರ್ಷವೂ ಪ್ರಥಮ ಸ್ಥಾನದಲ್ಲಿದೆ.
2. ಮಲೇಷ್ಯಾ: ಗಮನಾರ್ಹ ಸುಧಾರಣೆ ಕಂಡು ಎರಡನೇ ಸ್ಥಾನಕ್ಕೇರಿದೆ.
3. ವಿಯೆಟ್ನಾಂ: ಕಳೆದ ವರ್ಷಕ್ಕಿಂತ ಒಂದು ಸ್ಥಾನ ಕುಸಿದು ಮೂರನೇ ಸ್ಥಾನದಲ್ಲಿದೆ.

4 and 5 . ಸಿಂಗಾಪುರ ಮತ್ತು ದಕ್ಷಿಣ ಕೊರಿಯಾ: ಕ್ರಮವಾಗಿ 4 ಮತ್ತು 5ನೇ ಸ್ಥಾನದಲ್ಲಿವೆ.

6. ಭಾರತ: ತನ್ನ 6ನೇ ಸ್ಥಾನವನ್ನು ಕಾಯ್ದುಕೊಂಡಿದೆ.

➢ ಭಾರತವು ಜಾಗತಿಕ ಉತ್ಪಾದನಾ ಹಬ್ ಆಗುವ ಹಾದಿಯಲ್ಲಿ ಪ್ರಬಲವಾದ ಸಕಾರಾತ್ಮಕ ಅಂಶಗಳನ್ನು ಹೊಂದಿದೆ. ದೇಶದ ಬೃಹತ್ ಮತ್ತು ಯುವ ಜನಸಂಖ್ಯೆಯು ವಿಶಾಲವಾದ ಕಾರ್ಮಿಕ ಶಕ್ತಿಯನ್ನು ಒದಗಿಸುವುದಲ್ಲದೆ, ದೊಡ್ಡ ಮಟ್ಟದ ಆಂತರಿಕ ಮಾರುಕಟ್ಟೆಯನ್ನೂ ಸೃಷ್ಟಿಸಿದೆ. ಸರ್ಕಾರದ 'ಮೇಕ್ ಇನ್ ಇಂಡಿಯಾ' ಮತ್ತು 'ಪಿಎಲ್ಐ' (PLI) ಯೋಜನೆಗಳು ಕೈಗಾರಿಕಾ ಬೆಳವಣಿಗೆಗೆ ವೇಗ ನೀಡುತ್ತಿದ್ದು, ದೇಶದ ಬಲವಾದ ಆರ್ಥಿಕ ಅಡಿಪಾಯವು ಹೂಡಿಕೆದಾರರಲ್ಲಿ ಭರವಸೆ ಮೂಡಿಸಿದೆ.

➢ ಆದಾಗ್ಯೂ, ಭಾರತವು ಕೆಲವು ಪ್ರಮುಖ ಸವಾಲುಗಳನ್ನು ಎದುರಿಸುತ್ತಿದೆ. ಮುಖ್ಯವಾಗಿ, ಲಾಜಿಸ್ಟಿಕ್ಸ್ ವೆಚ್ಚ ಹೆಚ್ಚಿರುವುದು ಮತ್ತು ತೆರಿಗೆ ನೀತಿಗಳಲ್ಲಿನ ಸಂಕೀರ್ಣತೆ (ಉನ್ನತ ಕಾರ್ಪೊರೇಟ್ ತೆರಿಗೆ) ಅಂತರಾಷ್ಟ್ರೀಯ ಸ್ಪರ್ಧೆಯಲ್ಲಿ ಹಿನ್ನಡೆ ಉಂಟುಮಾಡುತ್ತಿವೆ. ಇದರೊಂದಿಗೆ ಭೂ ಸುಧಾರಣೆ, ಕಾರ್ಮಿಕ ಕಾನೂನುಗಳ ಸಂಕೀರ್ಣತೆ ಮತ್ತು ಇತರ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳ (FTA) ಕೊರತೆಯು ಭಾರತದ ಉತ್ಪಾದನಾ ಸಾಮರ್ಥ್ಯದ ಪೂರ್ಣ ಬಳಕೆಗೆ ತಡೆಯೊಡ್ಡುತ್ತಿವೆ.

➢ ಪ್ರಸ್ತುತ ಭಾರತದ ಜಿಡಿಪಿಯಲ್ಲಿ ಉತ್ಪಾದನಾ ವಲಯದ ಪಾಲು ಶೇ. 16-17 ರಷ್ಟಿದೆ. 2047ರ ವೇಳೆಗೆ 'ವಿಕಸಿತ ಭಾರತ' ನಿರ್ಮಾಣವಾಗಬೇಕಾದರೆ, ಭಾರತವು ಏಷ್ಯಾದ 'ಉತ್ಪಾದನಾ ಇಂಜಿನ್' ಆಗಿ ಬದಲಾಗಬೇಕಿದೆ. ಇದಕ್ಕಾಗಿ ಕೈಗಾರಿಕಾ ಕ್ಲಸ್ಟರ್‌ಗಳನ್ನು ಬಲಪಡಿಸುವುದು ಮತ್ತು ವ್ಯಾಪಾರ ಮಾಡುವಿಕೆಯನ್ನು (Ease of Doing Business) ಮತ್ತಷ್ಟು ಸರಳೀಕರಿಸುವುದು ತುರ್ತು ಅಗತ್ಯವಾಗಿದೆ.

## ತೈವಾನ್‌ನ ಮೊದಲ ಸ್ವದೇಶಿ ಜಲಾಂತರ್ಗಾಮಿ: ನಾರ್ವಾಲ್ (Narwhal)



➢ ತೈವಾನ್ ತನ್ನ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಚೀನಾದ ನೌಕಾಪಡೆಯ ಸವಾಲುಗಳನ್ನು ಎದುರಿಸಲು 'ನಾರ್ವಾಲ್' ಹೆಸರಿನ ಜಲಾಂತರ್ಗಾಮಿಯನ್ನು ಅಭಿವೃದ್ಧಿಪಡಿಸಿದೆ. ಜನವರಿ 29, 2026 ರಂದು ದಕ್ಷಿಣ ತೈವಾನ್‌ನ ಕಾವೊಸಿಯುಂಗ್ (Kaohsiung) ಬಂದರಿನಲ್ಲಿ ಈ ನೌಕೆಯು ಮೊದಲ ಬಾರಿಗೆ ನೀರಿನ ಅಡಿಯಲ್ಲಿ ಸಂಚರಿಸುವ ಪ್ರಯೋಗವನ್ನು (Shallow-water submerged navigation test) ಯಶಸ್ವಿಯಾಗಿ ಮುಗಿಸಿದೆ.

➢ ಚೀನಾವು ತೈವಾನ್ ಅನ್ನು ತನ್ನದೇ ಭೂಭಾಗವೆಂದು ಪ್ರತಿಪಾದಿಸುತ್ತಿದೆ ಮತ್ತು ನಿರಂತರವಾಗಿ ಮಿಲಿಟರಿ ತಾಲೀಮುಗಳ ಮೂಲಕ ಒತ್ತಡ ಹೇರುತ್ತಿದೆ. ಇಂತಹ ಸಂದರ್ಭದಲ್ಲಿ ತೈವಾನ್ 'ಅಸಮಪಾರ್ಶ್ವದ ಯುದ್ಧ' (Asymmetric Warfare) ತಂತ್ರವನ್ನು ಅನುಸರಿಸುತ್ತಿದೆ.

1. ಚೀನಾದ ನೌಕಾಪಡೆಗೆ ತಡೆ: ಚೀನಾವು ಮೂರು ವಿಮಾನವಾಹಕ ನೌಕೆಗಳನ್ನು ಹೊಂದಿದ್ದು, ದೊಡ್ಡ ಮಟ್ಟದ ನೌಕಾ ಶಕ್ತಿಯನ್ನು ಹೊಂದಿದೆ. ತೈವಾನ್‌ನ ಸಣ್ಣ ಆದರೆ ಶಕ್ತಿಶಾಲಿ ಜಲಾಂತರ್ಗಾಮಿಗಳು ಚೀನಾದ ಹಡಗುಗಳನ್ನು ತಡೆಯಲು ಸಹಕಾರಿ.
2. ಸ್ವಾವಲಂಬನೆ: ರಾಜತಾಂತ್ರಿಕವಾಗಿ ಪ್ರತ್ಯೇಕಿಸಲ್ಪಟ್ಟಿದ್ದರೂ, ತೈವಾನ್ ಅಮೆರಿಕ ಮತ್ತು ಬ್ರಿಟನ್‌ನಂತಹ ದೇಶಗಳ ತಾಂತ್ರಿಕ

ಸಹಾಯದಿಂದ ಈ ನೌಕೆಯನ್ನು ಅಭಿವೃದ್ಧಿಪಡಿಸುವ ಮೂಲಕ ತನ್ನ ಆತ್ಮನಿರ್ಭರತೆಯನ್ನು ಪ್ರದರ್ಶಿಸಿದೆ.

3. ಸಮುದ್ರ ಮಾರ್ಗಗಳ ರಕ್ಷಣೆ: ಯುದ್ಧದ ಸಮಯದಲ್ಲಿ ತೈವಾನ್‌ನ ಆಮದು ಮತ್ತು ರಫ್ತಿಗೆ ಅಡ್ಡಿಯಾಗದಂತೆ ಸಮುದ್ರ ಮಾರ್ಗಗಳನ್ನು ರಕ್ಷಿಸಲು ಈ ಜಲಾಂತರ್ಗಾಮಿಗಳು ಅತ್ಯಗತ್ಯ.

➤ ತೈವಾನ್ ಈಗ ತನ್ನ ನೌಕಾಪಡೆಯಲ್ಲಿ ಒಟ್ಟು 8 ಜಲಾಂತರ್ಗಾಮಿಗಳನ್ನು ಹೊಂದುವ ಗುರಿ ಹೊಂದಿದೆ. ಪ್ರಸ್ತುತ ನಾರ್ವಾಲ್ ಹಳೆಯ ನೆದರ್ಲ್ಯಾಂಡ್ ನಿರ್ಮಿತ ಜಲಾಂತರ್ಗಾಮಿಗಳೊಂದಿಗೆ ಕಾರ್ಯನಿರ್ವಹಿಸಲಿದೆ.

ಏಷ್ಯಾ ಉತ್ಪಾದನಾ ಸೂಚ್ಯಂಕ 2026: ಭಾರತಕ್ಕೆ 6ನೇ ಸ್ಥಾನ

## 31 Jan 2026

### ಸ್ನೂಕರ್ ಟ್ರಿಕ್ ಶಾಟ್‌ಗಳಲ್ಲಿ ಎರಡು ಗಿನ್ನೆಸ್ ವಿಶ್ವ ದಾಖಲೆಗಳನ್ನು ನಿರ್ಮಿಸಿದ 2 ವರ್ಷದ ಬಾಲಕ ಜೂಡ್ ಓವೆನ್ಸ್



➤ ಸಾಮಾನ್ಯವಾಗಿ ಎರಡು ವರ್ಷದ ಮಕ್ಕಳು ಆಟಿಕೆಗಳೊಂದಿಗೆ ಆಟವಾಡುತ್ತಾ ತೊದಲು ನುಡಿಯುತ್ತಿರುತ್ತಾರೆ. ಆದರೆ ಇಂಗ್ಲೆಂಡ್‌ನ ಮ್ಯಾಂಚೆಸ್ಟರ್‌ನ ಜೂಡ್ ಓವೆನ್ಸ್ (Jude Owens) ಎಂಬ ಎರಡು ವರ್ಷದ ಪುಟಾಣಿ ಮಾತ್ರ ಇಡೀ ವಿಶ್ವವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾನೆ. ಸ್ನೂಕರ್ ಮತ್ತು ಪೂಲ್ ಕ್ರೀಡೆಯಲ್ಲಿ ಅಸಾಧಾರಣ ಪ್ರತಿಭೆ ತೋರಿರುವ ಈತ, ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್ (Guinness World Records) ಪುಸ್ತಕದಲ್ಲಿ ತನ್ನ ಹೆಸರನ್ನು ದಾಖಲಿಸಿದ್ದಾನೆ.

➤ ಜೂಡ್ ಓವೆನ್ಸ್ ನಿರ್ಮಿಸಿದ ಎರಡು ಪ್ರಮುಖ ದಾಖಲೆಗಳು: ಕೇವಲ 2 ವರ್ಷ ವಯಸ್ಸಿನಲ್ಲೇ ಜೂಡ್ ಈ ಕೆಳಗಿನ ಎರಡು ಕಠಿಣ ಸಾಧನೆಗಳನ್ನು ಮಾಡಿ ಇತಿಹಾಸ ಸೃಷ್ಟಿಸಿದ್ದಾನೆ:

1. ಯಂಗೆಸ್ಟ್ ಡಬಲ್ ಪಾಟ್ (Youngest to Double Pot): ಸ್ನೂಕರ್ ಕ್ರೀಡೆಯಲ್ಲಿ ಒಂದೇ ಸ್ಟ್ರೋಕ್ ಮೂಲಕ ಎರಡು ಬೇರೆ ಬೇರೆ ಪಾಕೆಟ್‌ಗಳಿಗೆ ಬಾಲ್ ಹಾಕುವ (Double Pot) ಕಿರಿಯ ವಯಸ್ಸಿನ ಸಾಧಕ ಎಂಬ ಹೆಗ್ಗಳಿಕೆ. (ದಿನಾಂಕ: ಸೆಪ್ಟೆಂಬರ್ 1, 2025)

2. ಯಂಗೆಸ್ಟ್ ಬ್ಯಾಂಕ್ ಶಾಟ್ (Youngest to make a Bank Shot): ಪೂಲ್ ಆಟದಲ್ಲಿ ಬಾಲ್ ಅನ್ನು ಕುಶನ್‌ಗೆ ಬಡಿದು ನಂತರ ಪಾಕೆಟ್‌ಗೆ ಸೇರಿಸುವ 'ಬ್ಯಾಂಕ್ ಶಾಟ್' ಹೊಡೆದ ವಿಶ್ವದ ಅತ್ಯಂತ ಕಿರಿಯ ಆಟಗಾರ. (ದಿನಾಂಕ: ಅಕ್ಟೋಬರ್ 12, 2025)

➤ ಸ್ನೂಕರ್ ಆಟವು ಅತ್ಯಂತ ನಿಖರತೆ (Precision) ಮತ್ತು ಏಕಾಗ್ರತೆಯನ್ನು ಬಯಸುವ ಕ್ರೀಡೆಯಾಗಿದೆ. ದೊಡ್ಡ ಟೇಬಲ್ ಮೇಲೆ ಸಣ್ಣ ಬಾಲ್‌ಗಳನ್ನು ನಿಖರವಾಗಿ ಹೊಡೆಯುವುದು ದೊಡ್ಡವರಿಗೆ ಸವಾಲಿನ ಕೆಲಸ. ಆದರೆ ಜೂಡ್ ಓವೆನ್ಸ್ ಎತ್ತರ ಕಡಿಮೆ ಇದ್ದರೂ, ಸ್ಟೂಲ್ (Stool) ಮೇಲೆ ನಿಂತು ಈ ಸಾಹಸ ಮಾಡುತ್ತಾನೆ.

➤ ಜೂಡ್‌ನ ತಂದೆ ಲೂಕ್ ಪ್ರಕಾರ, ಬಾಲಕನಿಗೆ ಕ್ಯೂ ಸ್ಟಿಕ್ (Cue Stick) ಹಿಡಿದ ಮೊದಲ ದಿನವೇ ಆಟದ ಬಗ್ಗೆ ಅಪಾರ ಆಸಕ್ತಿ ಮೂಡಿತ್ತು. ಭವಿಷ್ಯದಲ್ಲಿ ಜೂಡ್ ವಿಶ್ವ ಸ್ನೂಕರ್ ಚಾಂಪಿಯನ್ ಆಗಲಿ ಎಂಬುದು ತಂದೆಯ ಆಶಯವಾಗಿದೆ. ಸದ್ಯ ಸಾಮಾಜಿಕ ಜಾಲತಾಣಗಳಲ್ಲಿ ಈ ಬಾಲಕನ ಟ್ರಿಕ್ ಶಾಟ್ ವಿಡಿಯೋಗಳು ವೈರಲ್ ಆಗುತ್ತಿದ್ದು, ಕ್ರೀಡಾ ಪ್ರೇಮಿಗಳು ಈತನನ್ನು 'ಸ್ನೂಕರ್ ಶಾರ್ಕ್' ಎಂದು ಕರೆಯುತ್ತಿದ್ದಾರೆ.

### ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 78ನೇ ಪುಣ್ಯಸ್ಮರಣೆ: ರಾಜ್‌ಘಾಟ್‌ನಲ್ಲಿ ಗಣ್ಯರಿಂದ ನಮನ



➤ 1948ರ ಜನವರಿ 30ರಂದು ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ನಾಥೂರಾಮ್ ಗೋಡ್ಸೆಯಿಂದ ಹತ್ಯೆಗೀಡಾದರು. ಅಹಿಂಸೆ ಮತ್ತು ಸತ್ಯದ ಹಾದಿಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಈ ಮಹಾನ್ ಚೇತನದ ಬಲಿದಾನವನ್ನು ಗೌರವಿಸಲು ಮತ್ತು ಅವರ ಸ್ಮರಣೆಗಾಗಿ ಪ್ರತಿವರ್ಷ ಜನವರಿ 30 ಅನ್ನು ದೇಶಾದ್ಯಂತ 'ಹುತಾತ್ಮರ ದಿನ' (Martyrs' Day) ಎಂದು ಆಚರಿಸಲಾಗುತ್ತದೆ. ಈ ವರ್ಷ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 78ನೇ ಪುಣ್ಯತಿಥಿಯನ್ನು (ಹುತಾತ್ಮರ ದಿನ) ದೇಶಾದ್ಯಂತ ಅತ್ಯಂತ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ದೆಹಲಿಯ ಯಮುನಾ ನದಿತೀರದಲ್ಲಿರುವ ಗಾಂಧೀಜಿಯವರ ಸಮಾಧಿ ಸ್ಥಳವಾದ 'ರಾಜ್‌ಘಾಟ್'ನಲ್ಲಿ ರಾಷ್ಟ್ರಪತಿಗಳು ಮತ್ತು ಪ್ರಧಾನಿಯವರು ಪುಷ್ಪನಮನ ಸಲ್ಲಿಸಿದರು.

➤ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಸೇರಿದಂತೆ ಹಲವು ಗಣ್ಯರು ರಾಜ್ ಘಾಟ್‌ಗೆ ಭೇಟಿ ನೀಡಿ ಬಾಪೂಜಿಯವರ ಸ್ಮರಣಾರ್ಥ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸರ್ವಧರ್ಮ ಪ್ರಾರ್ಥನಾ ಸಭೆಯನ್ನು ಆಯೋಜಿಸಲಾಗಿತ್ತು.

➤ ಸಾಮಾಜಿಕ ಜಾಲತಾಣ 'X' ನಲ್ಲಿ ಸಂದೇಶ ಹಂಚಿಕೊಂಡ ಪ್ರಧಾನಿ ಮೋದಿ ಅವರು:ಗಾಂಧೀಜಿಯವರ ಆದರ್ಶಗಳು ಮತ್ತು ಅವರು 'ಸ್ವದೇಶಿ' ವಸ್ತುಗಳಿಗೆ ನೀಡಿದ ಪ್ರಾಮುಖ್ಯತೆಯೇ ಇಂದು ಭಾರತವನ್ನು 'ಸ್ವಾವಲಂಬಿ' (ಆತ್ಮನಿರ್ಭರ) ರಾಷ್ಟ್ರವಾಗುವತ್ತ ಮುನ್ನಡೆಸುತ್ತಿದೆ. ಮತ್ತು ಬಾಪೂಜಿಯವರ ವ್ಯಕ್ತಿತ್ವ ಮತ್ತು ಸಾಧನೆಗಳು ಪ್ರತಿಯೊಬ್ಬ ಭಾರತೀಯನನ್ನು 'ಕರ್ತವ್ಯ'ದ ಹಾದಿಯಲ್ಲಿ ನಡೆಯಲು ಪ್ರೇರೇಪಿಸುತ್ತವೆ ಎಂದು ತಿಳಿಸಿದರು.

➤ ಕೇಂದ್ರ ಸಚಿವ ಅಮಿತ್ ಶಾ ಅಭಿಮತ: ಭಾಷೆ, ಪ್ರಾಂತ್ಯ ಮತ್ತು ಜಾತಿಗಳಿಂದ ವಿಭಜನೆಗೊಂಡಿದ್ದ ಭಾರತವನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಚಳವಳಿಗೆ ಅಪ್ರತಿಮ ಬಲ ನೀಡಿದವರು ಗಾಂಧೀಜಿ. ಅವರ ಸ್ವಚ್ಛತೆ ಮತ್ತು ಸ್ವಾವಲಂಬನೆಯ ಕನಸು ನವ ಭಾರತಕ್ಕೆ ದಾರಿದೀಪವಾಗಿದೆ ಎಂದು ಅಮಿತ್ ಶಾ ಬಣ್ಣಿಸಿದರು.

### ಆರ್ಥಿಕ ಸಮೀಕ್ಷೆ 2025-26: ವಿದೇಶಿ ವಿದ್ಯಾರ್ಥಿಗಳನ್ನು ಸೆಳೆಯಲು ಯೋಗ, ಆಯುರ್ವೇದ ಬ್ರ್ಯಾಂಡಿಂಗ್‌ಗೆ ಒತ್ತು



➤ ನವದೆಹಲಿ: ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಕೇಂದ್ರ ಸರ್ಕಾರವು ಒಂದು ಬೃಹತ್ ನೀಲಿನಕ್ಷೆಯನ್ನು ಸಿದ್ಧಪಡಿಸಿದೆ. 2025-26ರ ಆರ್ಥಿಕ ಸಮೀಕ್ಷೆಯು ಭಾರತವನ್ನು 'ಶೈಕ್ಷಣಿಕ ಪ್ರವಾಸೋದ್ಯಮದ ಕೇಂದ್ರ' (Education Tourism Hub) ಆಗಿ ಪರಿವರ್ತಿಸಲು ಶಿಫಾರಸು ಮಾಡಿದ್ದು, ಇದು ದೇಶದ ಶೈಕ್ಷಣಿಕ ಮತ್ತು ಆರ್ಥಿಕ ಚಿತ್ರಣವನ್ನೇ ಬದಲಿಸುವ ನಿರೀಕ್ಷೆಯಿದೆ.

➤ ಶೈಕ್ಷಣಿಕ ಪ್ರವಾಸೋದ್ಯಮ: ಭಾರತದ ಸಾಂಪ್ರದಾಯಿಕ ಜ್ಞಾನ ಮತ್ತು ಆಧುನಿಕ ಶಿಕ್ಷಣವನ್ನು ಒಟ್ಟುಗೂಡಿಸಿ ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

=> ಭಾರತದ ವಿಶಿಷ್ಟ ಯೋಗ, ಆಯುರ್ವೇದ, ಶಾಸ್ತ್ರೀಯ ಕಲೆ ಮತ್ತು ತತ್ವಶಾಸ್ತ್ರಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ರ್ಯಾಂಡ್ ಮಾಡುವುದು.

=> ಸಮ್ಮರ್ ಸ್ಕೂಲ್‌ಗಳು: ಪ್ರವಾಸಿ ತಾಣಗಳ ಸಮೀಪದಲ್ಲಿ ಅಲ್ಪಾವಧಿಯ ಕೋರ್ಸ್‌ಗಳನ್ನು ಆರಂಭಿಸಿ, ವಿದೇಶಿ ವಿದ್ಯಾರ್ಥಿಗಳಿಗೆ ಒಂದು ಸೆಮಿಸ್ಟರ್‌ನ ತರಬೇತಿ ನೀಡುವುದು.

=> ಭಾರತೀಯ ವಿದ್ಯಾರ್ಥಿಗಳು ವಿದೇಶದಲ್ಲಿ ವ್ಯಾಸಂಗಕ್ಕಾಗಿ ವ್ಯಯಿಸುತ್ತಿರುವ ಬಿಲಿಯನ್‌ಗಟ್ಟಲೆ ವಿದೇಶಿ ವಿನಿಮಯವನ್ನು ಉಳಿಸುವುದು ಮತ್ತು ವಿದೇಶಿ ವಿದ್ಯಾರ್ಥಿಗಳನ್ನು ಭಾರತಕ್ಕೆ ಆಕರ್ಷಿಸುವ ಮೂಲಕ ಆದಾಯ ಗಳಿಸುವುದು.

➤ ಪ್ರಸ್ತುತ ಭಾರತದ ಶಿಕ್ಷಣದ ಸ್ಥಿತಿ-ಗತಿ: ವರದಿಯ ಪ್ರಕಾರ, ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ವಿದೇಶಿ ವಿದ್ಯಾರ್ಥಿಗಳ ಪಾಲು ಅತ್ಯಂತ ಕಡಿಮೆ ಇದೆ:ಭಾರತಕ್ಕೆ ಬರುವ ಪ್ರತಿ ಒಬ್ಬ ವಿದೇಶಿ ವಿದ್ಯಾರ್ಥಿಗೆ ಪ್ರತಿಯಾಗಿ 28 ಭಾರತೀಯ ವಿದ್ಯಾರ್ಥಿಗಳು ವಿದೇಶಕ್ಕೆ ಹೋಗುತ್ತಿದ್ದಾರೆ. ಪ್ರಸ್ತುತ ಭಾರತದಲ್ಲಿ ಕೇವಲ 49,000 ವಿದೇಶಿ ವಿದ್ಯಾರ್ಥಿಗಳಿದ್ದಾರೆ, ಇದು ದೇಶದ ಒಟ್ಟು ಉನ್ನತ ಶಿಕ್ಷಣ ದಾಖಲಾತಿಯ ಕೇವಲ 0.10% ಮಾತ್ರ.

**➤ ಪ್ರಮುಖ ಶಿಫಾರಸುಗಳು ಮತ್ತು ಕ್ರಮಗಳು**

1.GIFT City ಮಾದರಿ: ಗುಜರಾತ್‌ನ ಗಿಫ್ಟ್ ಸಿಟಿಯಲ್ಲಿ ಈಗಾಗಲೇ ಆಸ್ಟ್ರೇಲಿಯಾದ ಡೀಕಿನ್ ಮತ್ತು ವೊಲೊಂಗೊಂಗ್ ವಿಶ್ವವಿದ್ಯಾಲಯಗಳು ಕಾರ್ಯಾಚರಣೆ ಆರಂಭಿಸಿವೆ.

2. ಅವಳಿ ಪದವಿಗಳು (Dual Degrees): ವಿದೇಶಿ ವಿವಿಗಳ ಜೊತೆ ಕೈಜೋಡಿಸಿ ಜಂಟಿ ಪದವಿ ನೀಡಲು ಉತ್ತೇಜನ.

3. ಮೂಲಸೌಕರ್ಯ ವೃದ್ಧಿ: ಗ್ರಾಮೀಣ ಭಾಗದ ಶಿಕ್ಷಣದ ಮೂಲಸೌಕರ್ಯದ ಅಸಮತೋಲನವನ್ನು ಸರಿಪಡಿಸುವುದು.

4. ವೀಸಾ ಸರಳೀಕರಣ: ತ್ವರಿತ ವೀಸಾ ವಿತರಣೆ ಮತ್ತು ಶಿಕ್ಷಣದ ನಂತರ ಇಂಟರ್ನ್‌ಶಿಪ್‌ಗೆ ಅವಕಾಶ.

➤ ಎಚ್ಚರಿಕೆಯ ಕರೆ: ಗ್ರಾಮೀಣ ಶಿಕ್ಷಣದ ಸವಾಲುಗಳು : ಕೇವಲ ಅಂತರಾಷ್ಟ್ರೀಯ ಮಟ್ಟದ ಮೇಲೆ ಗಮನ ಹರಿಸದೆ, ತಳಮಟ್ಟದ ಶಿಕ್ಷಣ ವ್ಯವಸ್ಥೆಯನ್ನೂ ಸುಧಾರಿಸಬೇಕೆಂದು ಸಮೀಕ್ಷೆ ಎಚ್ಚರಿಸಿದೆ.

- ಗ್ರಾಮೀಣ ಭಾಗದ 54% ಶಾಲೆಗಳು ಕೇವಲ ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾಗಿವೆ.
- ಕೇವಲ 17.1% ಗ್ರಾಮೀಣ ಶಾಲೆಗಳಲ್ಲಿ ಮಾತ್ರ ಮಾಧ್ಯಮಿಕ ಶಿಕ್ಷಣ ಲಭ್ಯವಿದ್ದು, ಇದು ಉನ್ನತ ಶಿಕ್ಷಣದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ.

## ಭಾರತದ ಮೊದಲ AI-ಚಾಲಿತ ವಿಶ್ವವಿದ್ಯಾಲಯ ಮೀರತ್‌ನಲ್ಲಿ ಸ್ಥಾಪನೆ



➤ ಭಾರತವು ಜಾಗತಿಕ ತಂತ್ರಜ್ಞಾನದ ಹಬ್ ಆಗಿ ಹೊರಹೊಮ್ಮುತ್ತಿರುವ ಈ ಹೊತ್ತಿನಲ್ಲಿ, ದೇಶದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಆಧುನೀಕರಿಸಲು ಕೇಂದ್ರ ಸರ್ಕಾರವು ಒಂದು ಐತಿಹಾಸಿಕ ಹೆಜ್ಜೆ ಇರಿಸಿದೆ. ಕೇಂದ್ರ ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವು (MSDE), ಮೀರತ್‌ನ ಚೌಧರಿ ಚರಣ್ ಸಿಂಗ್ ವಿಶ್ವವಿದ್ಯಾಲಯ (CCSU) ಮತ್ತು ಜಾಗತಿಕ ತಂತ್ರಜ್ಞಾನ ದೈತ್ಯ ಗೂಗಲ್ (Google) ಸಂಸ್ಥೆಯೊಂದಿಗೆ ಕೈಜೋಡಿಸಿ ದೇಶದ ಮೊತ್ತಮೊದಲ AI-ಚಾಲಿತ ವಿಶ್ವವಿದ್ಯಾಲಯ ಸ್ಥಾಪನೆಗೆ ಚಾಲನೆ ನೀಡಿದೆ.

➤ ದೆಹಲಿಯಲ್ಲಿ ಜನವರಿ 28, 2026 ರಂದು ನಡೆದ 'ಗೂಗಲ್ ಎಐ ಫಾರ್ ಲರ್ನಿಂಗ್ ಫೋರಮ್'ನಲ್ಲಿ ಈ ಮಹತ್ವದ ಘೋಷಣೆ ಮಾಡಲಾಗಿದೆ. ಗೂಗಲ್ ಸಂಸ್ಥೆಯು ತನ್ನ ಅತ್ಯಾಧುನಿಕ 'ಜೆಮಿನಿ AI' (Gemini AI) ತಂತ್ರಜ್ಞಾನವನ್ನು ಭಾರತೀಯ ಶಿಕ್ಷಣ ವ್ಯವಸ್ಥೆಗೆ ಧಾರೆ ಎರೆಯಲು ಒಪ್ಪಂದ ಮಾಡಿಕೊಂಡಿದೆ.

**➤ ಈ ಯೋಜನೆಯ ಪ್ರಮುಖ ಅಂಶಗಳು:**

=> ಪೈಲಟ್ ಪ್ರಾಜೆಕ್ಟ್: ಮೀರತ್‌ನ CCSU ವಿಶ್ವವಿದ್ಯಾಲಯವು ಈ ಯೋಜನೆಯಡಿ ಭಾರತದ ಮೊದಲ ಪೈಲಟ್ (ಪ್ರಾಯೋಗಿಕ) ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ.

=> ಮಾರ್ಗದರ್ಶಿ ಚೌಕಟ್ಟು: ಈ ವಿಶ್ವವಿದ್ಯಾಲಯದ ಯಶಸ್ಸಿನ ಆಧಾರದ ಮೇಲೆ ದೇಶದ ಸುಮಾರು 50,000 ಕಾಲೇಜುಗಳು ಮತ್ತು 1,200 ವಿಶ್ವವಿದ್ಯಾಲಯಗಳಲ್ಲಿ AI ಅಳವಡಿಸಲು 'ರಾಷ್ಟ್ರೀಯ ಅತ್ಯುತ್ತಮ ಅಭ್ಯಾಸ ಚೌಕಟ್ಟು' (National Best Practice Framework) ಸಿದ್ಧಪಡಿಸಲಾಗುವುದು.

=> ವೈಯಕ್ತಿಕ AI ಶಿಕ್ಷಕರು (AI Tutors): ವಿದ್ಯಾರ್ಥಿಗಳಿಗೆ ತಮ್ಮದೇ ಆದ ವೇಗದಲ್ಲಿ ಕಲಿಯಲು ಸಹಾಯ ಮಾಡಲು ಗೂಗಲ್‌ನ 'ಜೆಮಿನಿ' ಪ್ಲಾಟ್‌ಫಾರ್ಮ್ ಆಧಾರಿತ ವೈಯಕ್ತೀಕರಿಸಿದ AI ಟ್ಯೂಟರ್‌ಗಳನ್ನು ಒದಗಿಸಲಾಗುವುದು.

➤ ಗೂಗಲ್ ಜೆಮಿನಿ ಮತ್ತು ಜೆಇಇ (JEE) ಅಭ್ಯಾಸ ಪರೀಕ್ಷೆ: ಈ ಯೋಜನೆಯ ಅಡಿಯಲ್ಲಿ ಗೂಗಲ್ ತನ್ನ ಅತ್ಯಾಧುನಿಕ 'ಜೆಮಿನಿ AI' ಪ್ಲಾಟ್‌ಫಾರ್ಮ್ ಅನ್ನು ಭಾರತೀಯ ವಿದ್ಯಾರ್ಥಿಗಳಿಗಾಗಿ ಮುಕ್ತಗೊಳಿಸಿದೆ. ವಿಶೇಷವಾಗಿ ಜೆಇಇ ಮೇನ್ಸ್ (JEE Mains) **ಆಕಾಂಕ್ಷಿಗಳಿಗೆ ಇದು ವರದಾನವಾಗಲಿದೆ.**

=> ವೈಯಕ್ತಿಕ ಕಲಿಕೆ (Personalized Learning): ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಯ ವೇಗ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಜೆಮಿನಿ AI ಪರೀಕ್ಷಾ ಮಾದರಿಯನ್ನು ವಿನ್ಯಾಸಗೊಳಿಸುತ್ತದೆ.

=> ತಕ್ಷಣದ ವಿಶ್ಲೇಷಣೆ: ಪರೀಕ್ಷೆ ಮುಗಿದ ಕೂಡಲೇ, ವಿದ್ಯಾರ್ಥಿಯು ಮಾಡಿದ ತಪ್ಪುಗಳೇನು? ಆ ತಪ್ಪುಗಳನ್ನು ಸರಿಪಡಿಸಿಕೊಳ್ಳುವುದು ಹೇಗೆ? ಎಂಬ ಬಗ್ಗೆ ಆಳವಾದ ವಿಶ್ಲೇಷಣೆಯನ್ನು (In-depth Feedback) ಈ ತಂತ್ರಜ್ಞಾನ ನೀಡುತ್ತದೆ.

=> ಜಾಗತಿಕ ಸ್ಥಾನಮಾನ: ಕಲಿಕೆಗಾಗಿ ಅತಿ ಹೆಚ್ಚು AI ತಂತ್ರಜ್ಞಾನವನ್ನು ಬಳಸುತ್ತಿರುವ ದೇಶಗಳಲ್ಲಿ ಭಾರತವು ಇಂದು ವಿಶ್ವದಲ್ಲೇ ಪ್ರಥಮ ಸ್ಥಾನದಲ್ಲಿದೆ ಎಂದು ಶೃಂಗಸಭೆಯಲ್ಲಿ ವರದಿ ಮಾಡಲಾಗಿದೆ.

➤ ರಾಷ್ಟ್ರೀಯ ನೀತಿ ಮತ್ತು ಬೆಂಬಲ: ಈ ಉಪಕ್ರಮವು ಕೇಂದ್ರ ಸರ್ಕಾರದ 'ಡಿಜಿಟಲ್ ಇಂಡಿಯಾ' ಮತ್ತು 'ಮೇಕ್ ಇನ್ ಇಂಡಿಯಾ' ಅಭಿಯಾನಗಳಿಗೆ ಪೂರಕವಾಗಿದೆ. ಇದು ಸ್ಮಾರ್ಟ್ ಕೃಷಿ, ಹವಾಮಾನ ಮುನ್ಸೂಚನೆ ಮತ್ತು ಭಾರತೀಯ ಭಾಷೆಗಳ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಹೊಸ ಸಂಶೋಧನೆಗಳಿಗೆ ನಾಂದಿ ಹಾಡಲಿದೆ.

## ವಿಶ್ವಸಂಸ್ಥೆ ಭದ್ರತಾ ಮಂಡಳಿ ಸುಧಾರಣೆ: ಭಾರತದ ಕಾಯಂ ಸದಸ್ಯತ್ವಕ್ಕೆ ವಿಶ್ವ ನಾಯಕರ ವ್ಯಾಪಕ ಬೆಂಬಲ



➤ ನ್ಯೂಯಾರ್ಕ್: ಜಾಗತಿಕ ಸವಾಲುಗಳು ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು (UNSC) ಕಾಲಕ್ಕೆ ತಕ್ಕಂತೆ ಬದಲಾಗುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಭಾರತದ ಕಾಯಂ ಸದಸ್ಯತ್ವದ ಹಕ್ಕೊತ್ತಾಯಕ್ಕೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಸೇರಿದಂತೆ ಹಲವು ರಾಷ್ಟ್ರಗಳು ಭರ್ಜರಿ ಬೆಂಬಲ ವ್ಯಕ್ತಪಡಿಸಿವೆ.

➤ ಪ್ರಧಾನ ಕಾರ್ಯದರ್ಶಿಯವರ ಹೇಳಿಕೆ: ವಿಶ್ವಸಂಸ್ಥೆಯ ಈ ವರ್ಷದ (2026) ಆದ್ಯತೆಗಳ ಕುರಿತು ಮಾತನಾಡಿದ ಆಂಟೋನಿಯೊ ಗುಟೆರೆಸ್, "ಭದ್ರತಾ ಮಂಡಳಿಯಲ್ಲಿ ಏಷ್ಯಾ,

ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕ ರಾಷ್ಟ್ರಗಳ ಪ್ರಾತಿನಿಧ್ಯ ಕಡಿಮೆಯಿದೆ. ಇದು ಬದಲಾಗಲೇಬೇಕು," ಎಂದು ಪ್ರತಿಪಾದಿಸಿದ್ದಾರೆ. ಅಸಮತೋಲನ ನಿವಾರಣೆ: ಪ್ರಸ್ತುತ ಭದ್ರತಾ ಮಂಡಳಿಯು 8 ದಶಕಗಳ ಹಿಂದಿನ ಹಳೆಯ ವ್ಯವಸ್ಥೆಯನ್ನೇ ಅವಲಂಬಿಸಿದೆ. ಇಂದಿನ ಭೌಗೋಳಿಕ ರಾಜಕೀಯ ವಾಸ್ತವಗಳಿಗೆ ತಕ್ಕಂತೆ ಭಾರತದಂತಹ ಪ್ರಬಲ ರಾಷ್ಟ್ರಗಳು ಕಾಯಂ ಸದಸ್ಯರಾಗುವುದು ಅಗತ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

➤ ವೀಟೋ ಅಧಿಕಾರದ ಮಿತಿ: ಹತ್ಯಾಕಾಂಡ ಅಥವಾ ಮಾನವೀಯತೆಯ ವಿರುದ್ಧದ ಅಪರಾಧಗಳ ಸಂದರ್ಭದಲ್ಲಿ ಕಾಯಂ ಸದಸ್ಯ ರಾಷ್ಟ್ರಗಳ 'ವೀಟೋ' (Veto Power) ಅಧಿಕಾರಕ್ಕೆ ಮಿತಿ ಹೇರುವ ಪ್ರಸ್ತಾವನೆಯನ್ನು ಅವರು ಬೆಂಬಲಿಸಿದ್ದಾರೆ.

➤ ಭಾರತದ ನಿಲುವು ಮತ್ತು ಹಕ್ಕೊತ್ತಾಯ: ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಪಿ. ಹರೀಶ್ ಅವರು ಮಾತನಾಡಿ, "ಅಂತರಾಷ್ಟ್ರೀಯ ಕಾನೂನಿನ ಪರಿಣಾಮಕಾರಿ ಜಾರಿಗೆ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವುದು ಅನಿವಾರ್ಯ. ಸದ್ಯದ ವ್ಯವಸ್ಥೆಯು ಕೇವಲ ಕೆಲವು ರಾಷ್ಟ್ರಗಳ ಹಿತಾಸಕ್ತಿಯನ್ನು ಕಾಪಾಡುತ್ತಿದ್ದು, ಇದರಿಂದ ವಿಶ್ವಸಂಸ್ಥೆಯ ವಿಶ್ವಾಸಾರ್ಹತೆ ಕುಗ್ಗುತ್ತಿದೆ," ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

➤ ಸುಧಾರಣೆಗೆ ಅಡ್ಡಿಯಾಗಿರುವ ಅಂಶಗಳು: ವಿಶ್ವಸಂಸ್ಥೆಯ ಸುಧಾರಣೆಯನ್ನು ವಿರೋಧಿಸುವ ರಾಷ್ಟ್ರಗಳ ಬಗ್ಗೆ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ ಗುಟೆರೆಸ್, "ಯಾರು ವಿಶ್ವಸಂಸ್ಥೆಯು ಪರಿಣಾಮಕಾರಿಯಾಗಿಲ್ಲ ಎಂದು ಟೀಕಿಸುತ್ತಾರೋ, ಅವರೇ ಸುಧಾರಣಾ ಪ್ರಕ್ರಿಯೆಯನ್ನು ತಡೆಯುತ್ತಿದ್ದಾರೆ," ಎಂದು ಚುಚ್ಚಿದ್ದಾರೆ.

- ವೀಟೋ ಪವರ್ ಪಾಲಿಟಿಕ್ಸ್: ಸದ್ಯದ ಐದು ಕಾಯಂ ಸದಸ್ಯ ರಾಷ್ಟ್ರಗಳು (P5) ತಮ್ಮ ಸರ್ವಾಧಿಕಾರವನ್ನು ಬಿಟ್ಟುಕೊಡಲು ಹಿಂಜರಿಯುತ್ತಿವೆ.
- Uniting for Consensus (UfC): ಇಟಲಿ ಮತ್ತು ಪಾಕಿಸ್ತಾನದಂತಹ ರಾಷ್ಟ್ರಗಳು ಕಳೆದ ದಶಕದಿಂದಲೂ ಮಾತುಕತೆಯ ಪ್ರಕ್ರಿಯೆಯನ್ನು ವಿಳಂಬ ಮಾಡುತ್ತಿವೆ.

**➤ ಭಾರತಕ್ಕೆ ಕಾಯಂ ಸದಸ್ಯತ್ವ ಏಕೆ ಬೇಕು?**

1. ಜಾಗತಿಕ ನಿರ್ಧಾರಗಳಲ್ಲಿ ಭಾಗವಹಿಸುವಿಕೆ: ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿ ಭಾರತಕ್ಕೆ ಜಾಗತಿಕ ಶಾಂತಿ ಮತ್ತು ಭದ್ರತೆಯ ನಿರ್ಧಾರಗಳಲ್ಲಿ ಪ್ರಮುಖ ಪಾತ್ರವಿರಬೇಕು.
2. ವೀಟೋ ಅಧಿಕಾರ: ಯಾವುದೇ ಪ್ರಮುಖ ನಿರ್ಣಯಗಳನ್ನು ತಡೆಯುವ ಅಥವಾ ಮಾರ್ಪಡಿಸುವ ಶಕ್ತಿ ಸಿಗುತ್ತದೆ.
3. ಅಭಿವೃದ್ಧಿಶೀಲ ರಾಷ್ಟ್ರಗಳ ಧ್ವನಿ: ಜಾಗತಿಕ ದಕ್ಷಿಣದ (Global South) ರಾಷ್ಟ್ರಗಳ ಪರವಾಗಿ ಧ್ವನಿ ಎತ್ತಲು ಭಾರತಕ್ಕೆ ಈ ಸ್ಥಾನ ಅತ್ಯಗತ್ಯ

**➤ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು (UNSC) :** ಇದು ವಿಶ್ವಸಂಸ್ಥೆಯ ಅತಿ ಪ್ರಮುಖವಾದ 'ಕಾರ್ಯಾಂಗ' ಅಂಗವಾಗಿದೆ. ಜಾಗತಿಕವಾಗಿ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು ಇದರ ಪ್ರಾಥಮಿಕ ಜವಾಬ್ದಾರಿಯಾಗಿದೆ. ಭದ್ರತಾ ಮಂಡಳಿಯು ಒಟ್ಟು 15 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿರುತ್ತದೆ:

- ಕಾಯಂ ಸದಸ್ಯರು (Permanent Members - P5): ಇವರು 5 ರಾಷ್ಟ್ರಗಳು - ಅಮೆರಿಕ (USA), ರಷ್ಯಾ, ಚೀನಾ, ಫ್ರಾನ್ಸ್ ಮತ್ತು ಯುನೈಟೆಡ್ ಕಿಂಗ್‌ಡಮ್ (UK). ಈ ರಾಷ್ಟ್ರಗಳಿಗೆ 'ವೀಟೋ' (Veto) ಎಂಬ ವಿಶೇಷ ಅಧಿಕಾರವಿರುತ್ತದೆ.
- ತಾತ್ಕಾಲಿಕ ಸದಸ್ಯರು: ಇನ್ನುಳಿದ 10 ರಾಷ್ಟ್ರಗಳನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2 ವರ್ಷಗಳ ಅವಧಿಗೆ ಆಯ್ಕೆ ಮಾಡುತ್ತದೆ.

## 'ವಿಕಸಿತ ಭಾರತ' ಗುರಿಗೆ ಅಂತರರಾಷ್ಟ್ರೀಯ ಬೆಂಬಲ: ಭಾರತ-ವಿಶ್ವಬ್ಯಾಂಕ್ ನಡುವೆ ಹೊಸ CPF ಒಪ್ಪಂದ




➤ ಭಾರತವನ್ನು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ 'ವಿಕಸಿತ ಭಾರತ' (Viksit Bharat) ಕನಸಿಗೆ ಜಾಗತಿಕ ಮಟ್ಟದಲ್ಲಿ ದೊಡ್ಡ ಬೆಂಬಲ ಸಿಕ್ಕಿದೆ. ಭಾರತ ಮತ್ತು ವಿಶ್ವಬ್ಯಾಂಕ್ ಗುಂಪು (World Bank Group) ಶುಕ್ರವಾರ (30-01-2026) ಹೊಸ 'ದೇಶ ಪಾಲುದಾರಿಕೆ ಚೌಕಟ್ಟು' (Country Partnership Framework - CPF) ಅನ್ನು ಘೋಷಿಸಿದ್ದು, ಮುಂದಿನ ಐದು ವರ್ಷಗಳ ಕಾಲ ಪ್ರತಿ ವರ್ಷ ಸುಮಾರು 8 ರಿಂದ 10 ಬಿಲಿಯನ್ ಡಾಲರ್ (ಅಂದಾಜು 65,000 ರಿಂದ 80,000 ಕೋಟಿ ರೂ.) ಹಣಕಾಸಿನ ನೆರವು ನೀಡಲು ಒಪ್ಪಿಗೆ ಸೂಚಿಸಿವೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ವಿಶ್ವಬ್ಯಾಂಕ್ ಅಧ್ಯಕ್ಷ ಅಜಯ್ ಬಂಗಾ ಅವರ ನಡುವೆ ನಡೆದ ಮಾತುಕತೆಯ ನಂತರ ಈ ಮಹತ್ವದ ನಿರ್ಧಾರ ಹೊರಬಿದ್ದಿದೆ.

➤ CPF (ದೇಶ ಪಾಲುದಾರಿಕೆ ಚೌಕಟ್ಟು): ಇದು ವಿಶ್ವಬ್ಯಾಂಕ್ ಮತ್ತು ಭಾರತದ ನಡುವಿನ ಸಹಕಾರದ ಒಂದು ಆಯಕಟ್ಟಿನ ಮಾರ್ಗಸೂಚಿಯಾಗಿದೆ. ಇದು ಕೇವಲ ಸಾಲ ನೀಡುವುದಕ್ಕೆ ಸೀಮಿತವಾಗದೆ, ತಾಂತ್ರಿಕ ನೆರವು, ಜಾಗತಿಕ ಜ್ಞಾನ ಹಂಚಿಕೆ ಮತ್ತು ಸಂಸ್ಥೆಗಳನ್ನು ಬಲಪಡಿಸುವ ಗುರಿಯನ್ನು ಹೊಂದಿದೆ.

➤ ಹೊಸ ಒಪ್ಪಂದದ ಪ್ರಮುಖ ಗುರಿಗಳು: ಈ ಹೊಸ ಚೌಕಟ್ಟಿನಡಿಯಲ್ಲಿ ನಾಲ್ಕು ಪ್ರಮುಖ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ:

- ಹಳ್ಳಿಗಳ ಆರ್ಥಿಕ ಚೇತರಿಕೆ ಮತ್ತು ರೈತರ ಆದಾಯ ಹೆಚ್ಚಳಕ್ಕೆ ಒತ್ತು.
- ವಾಸಯೋಗ್ಯ ನಗರಗಳ ನಿರ್ಮಾಣ ಮತ್ತು ಮೂಲಸೌಕರ್ಯ ಅಭಿವೃದ್ಧಿ.
- ಶಿಕ್ಷಣ, ಆರೋಗ್ಯದಲ್ಲಿ ಹೂಡಿಕೆ ಹಾಗೂ ಇಂಧನ ಭದ್ರತೆಯ ಬಲವರ್ಧನೆ.ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ಆರ್ಥಿಕತೆಯನ್ನು ಸಜ್ಜುಗೊಳಿಸುವುದು.

➤ ಈ ಒಪ್ಪಂದದ ಅತಿ ಮುಖ್ಯ ಅಂಶವೆಂದರೆ ಉದ್ಯೋಗ ಸೃಷ್ಟಿ. ಪ್ರತಿ ವರ್ಷ ಭಾರತದಲ್ಲಿ ಸುಮಾರು 1.2 ಕೋಟಿ ಯುವಕರು ಉದ್ಯೋಗ ಮಾರುಕಟ್ಟೆಗೆ ಸೇರುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (MSME) ಉತ್ತೇಜನ ನೀಡಲು ಮತ್ತು ಖಾಸಗಿ ಹೂಡಿಕೆಯನ್ನು ಆಕರ್ಷಿಸಲು ಈ ಹಣವನ್ನು ಬಳಸಲಾಗುತ್ತದೆ.

➤ ವಿಶ್ವಬ್ಯಾಂಕ್ : 1944ರ ಬ್ರೆಟ್ಟನ್ ವುಡ್ಸ್ ಸಮ್ಮೇಳನದಲ್ಲಿ ಸ್ಥಾಪನೆಯಾದ ಜಾಗತಿಕ ಹಣಕಾಸು ಸಂಸ್ಥೆಯಾಗಿದ್ದು, ವಾಷಿಂಗ್ಟನ್ ಡಿ.ಸಿ.ಯಲ್ಲಿ ತನ್ನ ಪ್ರಧಾನ ಕಚೇರಿಯನ್ನು ಹೊಂದಿದೆ. ಪ್ರಸ್ತುತ ಭಾರತೀಯ ಮೂಲದ ಅಜಯ್ ಬಂಗಾ ಇದರ ಅಧ್ಯಕ್ಷರಾಗಿದ್ದು, ಬಡತನ ನಿರ್ಮೂಲನೆ ಮತ್ತು ಸಮೃದ್ಧಿಯ ಹಂಚಿಕೆ ಇದರ ಮುಖ್ಯ ಧ್ಯೇಯವಾಗಿದೆ. ಈ ಸಂಸ್ಥೆಯು IBRD (ಮಧ್ಯಮ ಆದಾಯದ ದೇಶಗಳಿಗೆ ಸಾಲ), IDA (ಬಡ ರಾಷ್ಟ್ರಗಳಿಗೆ ರಿಯಾಯಿತಿ ಸಾಲ), IFC, MIGA ಮತ್ತು ICSID ಎಂಬ ಐದು ಅಂಗಸಂಸ್ಥೆಗಳನ್ನು ಒಳಗೊಂಡಿದೆ.

## ಜನವರಿ 31: ಅಂತರಾಷ್ಟ್ರೀಯ ಜೀಬ್ರಾ ದಿನ




➤ ಪ್ರತಿ ವರ್ಷ ಜನವರಿ 31 ರಂದು ವಿಶ್ವದಾದ್ಯಂತ 'ಅಂತರಾಷ್ಟ್ರೀಯ ಜೀಬ್ರಾ ದಿನ'ವನ್ನು ಆಚರಿಸಲಾಗುತ್ತದೆ. ಪ್ರಕೃತಿಯ ಅದ್ಭುತ ಸೃಷ್ಟಿಯಾದ ಜೀಬ್ರಾಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅವುಗಳ ಸಂರಕ್ಷಣೆಗೆ ಒತ್ತು ನೀಡುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.ಅಂತರಾಷ್ಟ್ರೀಯ ಜೀಬ್ರಾ ದಿನವನ್ನು ಸ್ಮಿತ್ಸೋನಿಯನ್ ರಾಷ್ಟ್ರೀಯ ಮೃಗಾಲಯ ಮತ್ತು ಕನ್ಸರ್ವೇಶನ್ ಬಯಾಲಜಿ ಇನ್‌ಸ್ಟಿಟ್ಯೂಟ್‌ನಂತಹ ಪ್ರಮುಖ ವನ್ಯಜೀವಿ ಸಂರಕ್ಷಣಾ ಸಂಸ್ಥೆಗಳು ಪ್ರಾರಂಭಿಸಿದವು.

➤ ಕಳೆದ ಕೆಲವು ದಶಕಗಳಿಂದ ಆಫ್ರಿಕಾದಲ್ಲಿ ಜೀಬ್ರಾಗಳ ಆವಾಸಸ್ಥಾನಗಳ ನಾಶ ಮತ್ತು ಬೇಟೆಯಾಡುವಿಕೆಯಿಂದಾಗಿ ಅವುಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿರುವ ಹಿನ್ನಲೆಯಲ್ಲಿ ಈ ದಿನದ ಆಚರಣೆ ಜಾರಿಗೆ ಬಂದಿತು.

➤ ವಿಶ್ವದಲ್ಲಿ ಪ್ರಮುಖವಾಗಿ ಮೂರು ಜಾತಿಯ ಜೀಬ್ರಾಗಳು ಕಂಡುಬರುತ್ತವೆ:

1. ಗ್ರೇವಿಸ್ ಜೀಬ್ರಾ (Grevy's Zebra): ಇದು ಜೀಬ್ರಾಗಳಲ್ಲೇ ಅತ್ಯಂತ ದೊಡ್ಡದಾದ ತಳಿಯಾಗಿದ್ದು, ಪ್ರಸ್ತುತ ಐಯುಸಿಎನ್ (IUCN) ಕೆಂಪು ಪಟ್ಟಿಯಲ್ಲಿ ಅಳಿವಿನಂಚಿನಲ್ಲಿರುವ (Endangered) ಪ್ರಾಣಿ ಎಂದು ಗುರುತಿಸಲ್ಪಟ್ಟಿದೆ. ಇವು ಪ್ರಮುಖವಾಗಿ ಪೂರ್ವ ಆಫ್ರಿಕಾದ ಕೀನ್ಯಾ ಮತ್ತು ಇಥಿಯೋಪಿಯಾದ ಅರೆ-ಶುಷ್ಕ ಪ್ರದೇಶಗಳಲ್ಲಿ ಕಂಡುಬರುತ್ತವೆ.
2. ಪರ್ವತ ಜೀಬ್ರಾ (Mountain Zebra): ಹೆಸರೇ ಸೂಚಿಸುವಂತೆ ಇವು ಗುಡ್ಡಗಾಡು ಮತ್ತು ಪರ್ವತ ಪ್ರದೇಶಗಳಲ್ಲಿ ವಾಸಿಸಲು ಇಷ್ಟಪಡುತ್ತವೆ. ಇವುಗಳನ್ನು ಅಸುರಕ್ಷಿತ (Vulnerable) ವರ್ಗಕ್ಕೆ ಸೇರಿಸಲಾಗಿದ್ದು, ಇವುಗಳ ಸಂತತಿ ಹೆಚ್ಚಾಗಿ ದಕ್ಷಿಣ ಆಫ್ರಿಕಾ, ನಮೀಬಿಯಾ ಮತ್ತು ಅಂಗೋಲಾದಲ್ಲಿ ಕಂಡುಬರುತ್ತದೆ.
3. ಬಯಲು ಜೀಬ್ರಾ (Plains Zebra): ಇದು ಜೀಬ್ರಾಗಳಲ್ಲೇ ಅತ್ಯಂತ ಸಾಮಾನ್ಯ ಮತ್ತು ಹೆಚ್ಚು ಜನಪ್ರಿಯವಾದ ತಳಿಯಾಗಿದೆ. ಇವುಗಳನ್ನು ಅಳಿವಿನ ಸಮೀಪವಿರುವ (Near Threatened) ಎಂದು ವರ್ಗೀಕರಿಸಲಾಗಿದ್ದು, ಪೂರ್ವ ಮತ್ತು ದಕ್ಷಿಣ ಆಫ್ರಿಕಾದ ವಿಶಾಲವಾದ ಹುಲ್ಲುಗಾವಲು ಪ್ರದೇಶಗಳಲ್ಲಿ ಇವುಗಳನ್ನು ದೊಡ್ಡ ಹಿಂಡುಗಳಲ್ಲಿ ಕಾಣಬಹುದು.

**➤ ಪರಿಸರ ವ್ಯವಸ್ಥೆಯಲ್ಲಿ ಜೀಬ್ರಾಗಳ ಮಹತ್ವ:**

- ಹುಲ್ಲುಗಾವಲು ನಿರ್ವಹಣೆ: ಜೀಬ್ರಾಗಳು ಒರಟಾದ ಮತ್ತು ಗಟ್ಟಿಯಾದ ಹುಲ್ಲನ್ನು ತಿನ್ನುತ್ತವೆ. ಇದರಿಂದ ಇತರ ಸಣ್ಣ ಸಸ್ಯಾಹಾರಿ ಪ್ರಾಣಿಗಳಿಗೆ ಮೃದುವಾದ ಹುಲ್ಲು ಲಭ್ಯವಾಗುವಂತೆ ಮಾಡುತ್ತದೆ.
- ಜೀವವೈವಿಧ್ಯದ ಕೊಂಡಿ: ಇವು ಸಿಂಹ, ಚಿರತೆ ಮತ್ತು ಹೈನಾ ಅಂತಹ ಮಾಂಸಾಹಾರಿ ಪ್ರಾಣಿಗಳಿಗೆ ಪ್ರಮುಖ ಆಹಾರದ ಮೂಲವಾಗಿವೆ.
- ವಲಸೆ ಮತ್ತು ಬೀಜ ಪ್ರಸರಣ: ಜೀಬ್ರಾಗಳ ಸುದೀರ್ಘ ವಲಸೆಯು ಪರಿಸರ ವ್ಯವಸ್ಥೆಯಲ್ಲಿ ಪೋಷಕಾಂಶಗಳ ಚಲನೆಗೆ ಮತ್ತು ಬೀಜಗಳ ಹರಡುವಿಕೆಗೆ ಸಹಾಯ ಮಾಡುತ್ತದೆ.

**➤ ಜೀಬ್ರಾಗಳ ಬಗ್ಗೆ ಆಸಕ್ತಿದಾಯಕ ಸಂಗತಿಗಳು:**

- ಪ್ರತಿಯೊಂದು ಜೀಬ್ರಾದ ದೇಹದ ಮೇಲಿರುವ ಪಟ್ಟೆಗಳು ಮನುಷ್ಯರ 'ಫಿಂಗರ್‌ಪ್ರಿಂಟ್'ಗಳಂತೆ ವಿಶಿಷ್ಟವಾಗಿರುತ್ತವೆ. ಯಾವುದೇ ಎರಡು ಜೀಬ್ರಾಗಳ ಪಟ್ಟೆಗಳು ಒಂದೇ ತರ ಇರುವುದಿಲ್ಲ
- ಇವುಗಳ ಪಟ್ಟೆಗಳು ಸೂರ್ಯನ ಶಾಖವನ್ನು ನಿಯಂತ್ರಿಸಲು ಮತ್ತು ಕೀಟಗಳಿಂದ ರಕ್ಷಣೆ ಪಡೆಯಲು ಸಹಾಯ ಮಾಡುತ್ತವೆ.
- ಜೀಬ್ರಾಗಳು ಯಾವಾಗಲೂ ಹಿಂಡುಗಳಲ್ಲಿ ವಾಸಿಸುತ್ತವೆ. ಇವುಗಳ ಗುಂಪನ್ನು 'ಡ್ಯಾಝಲ್' (Dazzle) ಎಂದು ಕರೆಯಲಾಗುತ್ತದೆ.

## ಭಾರತೀಯ ರೈಲ್ವೆಯಲ್ಲಿ ಹಸಿರು ಕ್ರಾಂತಿ: ದೇಶದ ಮೊದಲ 'LNG-Diesel' ದ್ವಿ-ಇಂಧನ ರೈಲು ಆರಂಭ



➤ ಭಾರತೀಯ ರೈಲ್ವೆಯು 2030ರ ವೇಳೆಗೆ 'ನಿವ್ವಳ ಶೂನ್ಯ ಇಂಗಾಲ ಹೊರಸೂಸುವಿಕೆ' (Net-Zero Carbon Emission) ಗುರಿಯನ್ನು ತಲುಪಲು ಪಣತೊಟ್ಟಿದೆ. ಈ ಮಹತ್ವದ ಗುರಿಯ ಭಾಗವಾಗಿ, ದೇಶದ ಮೊತ್ತಮೊದಲ ಎಲ್‌ಎನ್‌ಜಿ-ಡೀಸೆಲ್ ದ್ವಿ-ಇಂಧನ (LNG-Diesel Dual-Fuel) ಚಾಲಿತ ಡೆಮು (DEMU) ರೈಲನ್ನು ಗುಜರಾತ್‌ನ ಅಹಮದಾಬಾದ್‌ನಲ್ಲಿ ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗಿದೆ.

**➤ ತಾಂತ್ರಿಕ ವಿಶೇಷತೆಗಳು:**

=> ಇಂಜಿನ್ ಸಾಮರ್ಥ್ಯ: 1,400 HP (ಹಾರ್ಸ್ ಪವರ್) ಸಾಮರ್ಥ್ಯದ ಡೀಸೆಲ್ ಎಂಜಿನ್‌ಗಳನ್ನು ದ್ವಿ-ಇಂಧನ ವ್ಯವಸ್ಥೆಗೆ ಮಾರ್ಪಡಿಸಲಾಗಿದೆ.

=> ಇಂಧನ ಶೇಖರಣೆ: ರೈಲಿನ ಪ್ರತಿಯೊಂದು ಚಾಲನಾ ಪವರ್ ಕಾರ್‌ನಲ್ಲಿ (DPC) ಸುಮಾರು 2,200 ಲೀಟರ್ ಸಾಮರ್ಥ್ಯದ ಎಲ್ ಎನ್‌ಜಿ ಟ್ಯಾಂಕ್‌ಗಳನ್ನು ಅಳವಡಿಸಲಾಗಿದೆ.

=> ಕಾರ್ಯಾಚರಣೆ ವ್ಯಾಪ್ತಿ: ಒಂದು ಬಾರಿ ಪೂರ್ಣ ಟ್ಯಾಂಕ್ ಇಂಧನ ತುಂಬಿಸಿದರೆ ಈ ರೈಲು ಸುಮಾರು 222 ಕಿಲೋಮೀಟರ್ ಗಳವರೆಗೆ ಸಂಚರಿಸಬಲ್ಲದು.

=> ಮಿಶ್ರಣ: ಈ ವ್ಯವಸ್ಥೆಯಲ್ಲಿ ಡೀಸೆಲ್ ಬಳಕೆಯನ್ನು ಸುಮಾರು ಶೇ. 40 ರಷ್ಟು ಕಡಿತಗೊಳಿಸಿ, ಅದರ ಬದಲಿಗೆ ಎಲ್‌ಎನ್‌ಜಿ ಬಳಸಲಾಗುತ್ತದೆ.

**➤ ಆರ್ಥಿಕ ಮತ್ತು ಪರಿಸರ ಲಾಭಗಳು:**

=> ವೆಚ್ಚ ಉಳಿತಾಯ: ಪ್ರತಿ ಚಾಲನಾ ಪವರ್ ಕಾರ್‌ನಿಂದ ವರ್ಷಕ್ಕೆ ಸುಮಾರು ₹11.9 ಲಕ್ಷ ಉಳಿತಾಯವಾಗಲಿದ್ದು, ಎಂಟು ಕೋಚ್‌ಗಳ ಒಂದು ಸಂಪೂರ್ಣ ರೈಲು ಸೆಟ್‌ನಿಂದ ವರ್ಷಕ್ಕೆ ₹23.9 ಲಕ್ಷ ಇಂಧನ ವೆಚ್ಚ ಉಳಿತಾಯವಾಗಲಿದೆ.

=> ಮಾಲಿನ್ಯ ನಿಯಂತ್ರಣ: ಎಲ್‌ಎನ್‌ಜಿ ಬಳಕೆಯಿಂದ ಇಂಗಾಲದ ಡೈಆಕ್ಸೈಡ್ ($CO_2$), ನೈಟ್ರೋಜನ್ ಆಕ್ಸೈಡ್ ($NO_x$) ಮತ್ತು ಸಣ್ಣ ಕಣಗಳ (Particulate Matter) ಹೊರಸೂಸುವಿಕೆ ಗಣನೀಯವಾಗಿ ಕಡಿಮೆಯಾಗುತ್ತದೆ.

=> ಶಬ್ದ ಮಾಲಿನ್ಯ: ಡೀಸೆಲ್ ರೈಲುಗಳಿಗೆ ಹೋಲಿಸಿದರೆ ಇವು ಶೇ. 30-40 ರಷ್ಟು ಕಡಿಮೆ ಶಬ್ದ ಉಂಟುಮಾಡುತ್ತವೆ.

➤ ಸದ್ಯಕ್ಕೆ ಅಹಮದಾಬಾದ್ ವಿಭಾಗದಲ್ಲಿ ಪ್ರಾಯೋಗಿಕವಾಗಿ ಯಶಸ್ವಿಯಾಗಿರುವ ಈ ತಂತ್ರಜ್ಞಾನವನ್ನು, ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆಯ (RDSO) ಅನುಮೋದನೆಯ ನಂತರ ದೇಶಾದ್ಯಂತ ಇನ್ನೂ 8 ರಿಂದ 10 ರೈಲುಗಳಿಗೆ ವಿಸ್ತರಿಸಲು ರೈಲ್ವೆ ಇಲಾಖೆ ನಿರ್ಧರಿಸಿದೆ.

## ವಿಂಗ್ಸ್ ಇಂಡಿಯಾ 2026: ವಿಮಾನಯಾನ ಕ್ಷೇತ್ರದಲ್ಲಿ ಉತ್ತರಾಖಂಡಕ್ಕೆ 'ಅತ್ಯುತ್ತಮ ರಾಜ್ಯ' ಪ್ರಶಸ್ತಿ



➤ ಹೈದರಾಬಾದ್: ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಭಾರತದ ಅತಿದೊಡ್ಡ ಪ್ರದರ್ಶನವಾದ 'ವಿಂಗ್ಸ್ ಇಂಡಿಯಾ 2026' (Wings

India 2026) ರ ಸಮಾರೋಪ ಸಮಾರಂಭದಲ್ಲಿ ಉತ್ತರಾಖಂಡ ರಾಜ್ಯವು "ವಿಮಾನಯಾನ ಪರಿಸರ ವ್ಯವಸ್ಥೆಯ ಉತ್ತೇಜನಕ್ಕಾಗಿ ಅತ್ಯುತ್ತಮ ರಾಜ್ಯ" (Best State for Promotion of Aviation Ecosystem) ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

➤ ವಿಂಗ್ಸ್ ಇಂಡಿಯಾ 2026: ಇದು ನಾಗರಿಕ ವಿಮಾನಯಾನ ಸಚಿವಾಲಯ (MoCA) ಮತ್ತು ಫಿಕ್ಕಿ (FICCI) ಜಂಟಿಯಾಗಿ ಆಯೋಜಿಸುವ ದ್ವೈವಾರ್ಷಿಕ (ಎರಡು ವರ್ಷಕ್ಕೊಮ್ಮೆ ನಡೆಯುವ) ಅಂತರಾಷ್ಟ್ರೀಯ ಪ್ರದರ್ಶನವಾಗಿದೆ. 2026ರ ಜನವರಿ 29 ರಿಂದ 31 ರವರೆಗೆ ಹೈದರಾಬಾದ್‌ನ ಐತಿಹಾಸಿಕ ಬೇಗಂಪೇಟೆ ವಿಮಾನ ನಿಲ್ದಾಣದಲ್ಲಿ ಈ ಕಾರ್ಯಕ್ರಮ ನಡೆಯಿತು.

➤ ಉತ್ತರಾಖಂಡದ ಸಾಧನೆ: ಪರ್ವತ ಪ್ರದೇಶಗಳ ಸವಾಲುಗಳ ನಡುವೆಯೂ ಉತ್ತರಾಖಂಡ ಸರ್ಕಾರವು ವಿಮಾನಯಾನ ಸಂಪರ್ಕವನ್ನು ವೃದ್ಧಿಸಲು ಕೈಗೊಂಡ ಕ್ರಮಗಳನ್ನು ತಜ್ಞರ ಸಮಿತಿ ಶ್ಲಾಘಿಸಿದೆ:

=> ಚಾರ್ ಧಾಮ್ ಯಾತ್ರೆಯ ಡಿಜಿಟಲೀಕರಣ ಮತ್ತು ಸುಲಭ ಲಭ್ಯತೆ: ಕೇದಾರನಾಥ, ಬದರಿನಾಥ ಸೇರಿದಂತೆ ನಾಲ್ಕು ಧಾಮಗಳಿಗೆ ಹೆಲಿಕಾಪ್ಟರ್ ಬುಕಿಂಗ್‌ನಲ್ಲಿ ಪಾರದರ್ಶಕತೆ ತರಲು IRCTC ಮೂಲಕ ಆನ್‌ಲೈನ್ ಟಿಕೆಟಿಂಗ್ ವ್ಯವಸ್ಥೆ ಜಾರಿಗೊಳಿಸಿರುವುದು.

=> ಹೆಲಿ-ಆಂಬ್ಯುಲೆನ್ಸ್ ಸೇವೆ: ಗುಡ್ಡಗಾಡು ಪ್ರದೇಶಗಳಲ್ಲಿ ತುರ್ತು ಚಿಕಿತ್ಸೆಯ ಅಗತ್ಯವಿರುವ ರೋಗಿಗಳನ್ನು ಏರ್‌ಲಿಫ್ಟ್ ಮಾಡುವ ಮೂಲಕ ಸಾವಿರಾರು ಜೀವಗಳನ್ನು ಉಳಿಸಿರುವುದು.

=> UDAN ಯೋಜನೆ ಅಡಿ ಹೊಸ ಮಾರ್ಗಗಳು: ಕೇಂದ್ರದ 'ಉಡೇ ದೇಶ್ ಕಾ ಆಮ್ ನಾಗರಿಕ್' (UDAN) ಯೋಜನೆಯನ್ನು ಸಮರ್ಪಕವಾಗಿ ಬಳಸಿ, ಡೆಹ್ರಾಡೂನ್‌ನಿಂದ ಪಿತೋರಗಢ್ ಮತ್ತು ಮುನ್ಸಿಯಾರಿಯಂತಹ ಗಡಿ ಭಾಗಗಳಿಗೆ ವಿಮಾನ ಸಂಪರ್ಕ ಕಲ್ಪಿಸಿರುವುದು.

=> ಮೂಲಸೌಕರ್ಯ ಅಭಿವೃದ್ಧಿ: ಹಲ್ದ್ವಾನಿ ಮತ್ತು ನೈನಿತಾಲ್ ಭಾಗಗಳಲ್ಲಿ ಹೊಸ ಹೆಲಿಪೋರ್ಟ್‌ಗಳ ನಿರ್ಮಾಣ ಮತ್ತು ಡೆಹ್ರಾಡೂನ್‌ನ ಜಾಲಿ ಗ್ರಾಂಟ್ ವಿಮಾನ ನಿಲ್ದಾಣದ ಆಧುನೀಕರಣ.

## ನವದೆಹಲಿಯಲ್ಲಿ 2ನೇ ಭಾರತ-ಅರಬ್ ವಿದೇಶಾಂಗ ಸಚಿವರ ಸಭೆ



➤ ಭಾರತ ಮತ್ತು ಅರಬ್ ಜಗತ್ತಿನ ನಡುವಿನ ಐತಿಹಾಸಿಕ ಬಾಂಧವ್ಯವು ಇಂದು ಹೊಸ ಎತ್ತರಕ್ಕೆ ಏರಿದೆ. ನವದೆಹಲಿಯಲ್ಲಿ ನಡೆಯುತ್ತಿರುವ 2ನೇ ಭಾರತ-ಅರಬ್ ವಿದೇಶಾಂಗ ಸಚಿವರ ಸಭೆ (IAFMM) ಕೇವಲ ರಾಜತಾಂತ್ರಿಕ ಸಭೆಯಲ್ಲ, ಇದು ಏಷ್ಯಾದ ಎರಡು ಪ್ರಬಲ ವಲಯಗಳ ನಡುವಿನ ಆರ್ಥಿಕ ಮತ್ತು ಭದ್ರತಾ ಮೈತ್ರಿಯ ಸಂಕೇತವಾಗಿದೆ. ಭಾರತ ಮತ್ತು ಅರಬ್ ಎಮಿರೇಟ್ಸ್ (UAE) ಜಂಟಿಯಾಗಿ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿವೆ.ಅರಬ್ ಲೀಗ್‌ನ ಎಲ್ಲಾ 22 ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಮತ್ತು ಅರಬ್ ಲೀಗ್‌ನ ಪ್ರಧಾನ ಕಾರ್ಯದರ್ಶಿಗಳು ಈ ಐತಿಹಾಸಿಕ ಸಭೆಯಲ್ಲಿ ಭಾಗವಹಿಸಿದ್ದಾರೆ.

- ಮೊದಲ ಭಾರತ-ಅರಬ್ ವಿದೇಶಾಂಗ ಸಚಿವರ ಸಭೆಯು 2016ರಲ್ಲಿ ಬಹ್ರೇನ್‌ನ ಮನಾಮದಲ್ಲಿ ನಡೆದಿತ್ತು. ಬರೋಬ್ಬರಿ 10 ವರ್ಷಗಳ ಸುದೀರ್ಘ ಅಂತರದ ನಂತರ ಎರಡನೇ ಸಭೆ ನಡೆಯುತ್ತಿರುವುದು ವಿಶೇಷ.
- 2022ರ ಮಾರ್ಚ್‌ನಲ್ಲಿ ಭಾರತ ಮತ್ತು ಅರಬ್ ಲೀಗ್ ಸಂವಾದ ಪ್ರಕ್ರಿಯೆಯನ್ನು ಅಧಿಕೃತವಾಗಿ ಸಾಂಸ್ಥಿಕಗೊಳಿಸಲು (Institutionalization) ಸಹಿ ಹಾಕಿದವು. ಇದು ನಿರಂತರ ಸಂವಹನಕ್ಕೆ ಅಡಿಪಾಯ ಹಾಕಿಕೊಟ್ಟಿದೆ.

➤ ಪ್ರಧಾನಿ ನರೇಂದ್ರ ಮೋದಿಯವರು ಅರಬ್ ನಿಯೋಗವನ್ನು ಬರಮಾಡಿಕೊಂಡು, ಅರಬ್ ರಾಷ್ಟ್ರಗಳೊಂದಿಗೆ ಭಾರತ ಹೊಂದಿರುವ ಗಾಢವಾದ ಜನ-ಜನರ ನಡುವಿನ ಸಂಬಂಧವನ್ನು (People-to-People ties) ಶ್ಲಾಘಿಸಿದರು. ಸಭೆಯಲ್ಲಿ ಮುಖ್ಯವಾಗಿ **ಐದು ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ:**

=> ಇಂಧನ ಭದ್ರತೆ (Energy Security): ಭಾರತಕ್ಕೆ ಅತಿ ಹೆಚ್ಚು ಕಚ್ಚಾ ತೈಲ ಪೂರೈಸುವ ರಾಷ್ಟ್ರಗಳೆಂದರೆ ಅರಬ್ ರಾಷ್ಟ್ರಗಳು. ಈ ಸಂಬಂಧವನ್ನು ಕೇವಲ 'ಖರೀದಿದಾರ-ಮಾರಾಟಗಾರ' ಸಂಬಂಧದಿಂದ ದಾಟಿ 'ತಂತ್ರಜ್ಞಾನ ಪಾಲುದಾರಿಕೆ'ಗೆ ಕೊಂಡೊಯ್ಯುವುದು ಈ ಸಭೆಯ ಗುರಿ.

=> ಆಹಾರ ಭದ್ರತೆ (Food Security): ಭಾರತವು ಅರಬ್ ರಾಷ್ಟ್ರಗಳಿಗೆ ಪ್ರಮುಖ ಕೃಷಿ ಉತ್ಪನ್ನಗಳ ರಫ್ತುದಾರನಾಗಿದ್ದು, 'ಇಂಡೋ-ಅರಬ್ ಫುಡ್ ಕಾರಿಡಾರ್' ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಗಿದೆ.

=> ತಂತ್ರಜ್ಞಾನ ಮತ್ತು ಹೂಡಿಕೆ: ಸೌದಿ ಅರೇಬಿಯಾ ಮತ್ತು ಯುಎಇಯಂತಹ ರಾಷ್ಟ್ರಗಳು ಭಾರತದ ಡಿಜಿಟಲ್ ಮೂಲಸೌಕರ್ಯ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಬಿಲಿಯನ್ ಡಾಲರ್ ಹೂಡಿಕೆ ಮಾಡಲು ಆಸಕ್ತಿ ತೋರಿವೆ.

➤ ಪ್ರಾದೇಶಿಕ ಶಾಂತಿ ಮತ್ತು ಪ್ಯಾಲೆಸ್ಟೈನ್ ವಿಚಾರ: ಪ್ರಧಾನಿ ಮೋದಿಯವರು ಈ ಸಭೆಯಲ್ಲಿ ಪ್ಯಾಲೆಸ್ಟೈನ್ ವಿಚಾರವಾಗಿ ಭಾರತದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ: ಭಾರತವು ಮೊದಲಿನಿಂದಲೂ 'ಟೂ-ಸ್ಟೇಟ್ ಸೊಲ್ಯೂಷನ್' (ಎರಡು ರಾಷ್ಟ್ರಗಳ ಪರಿಹಾರ) ಅನ್ನು ಬೆಂಬಲಿಸುತ್ತಾ ಬಂದಿದೆ ಮತ್ತು ಗಾಜಾ ಶಾಂತಿ ಯೋಜನೆಯನ್ನು ಬೆಂಬಲಿಸುವ ಮೂಲಕ, ಮಧ್ಯಪ್ರಾಚ್ಯದಲ್ಲಿ ಸ್ಥಿರತೆಯನ್ನು ಕಾಪಾಡುವಲ್ಲಿ ಅರಬ್ ಲೀಗ್‌ನ ಪಾತ್ರವನ್ನು ಭಾರತ ಶ್ಲಾಘಿಸಿದೆ.

## ಗುಜರಾತ್‌ನಲ್ಲಿ 'ಮುಖ್ಯಮಂತ್ರಿ ಗ್ರಾಮೋತ್ಥಾನ ಯೋಜನೆ'ಗೆ ಚಾಲನೆ: 2,666 ಹಳ್ಳಿಗಳಿಗೆ ಸಿಗಲಿದೆ ಹೊಸ ಪಂಚಾಯತ್ ಕಚೇರಿ ಭಾಗ್ಯ



➤ ಗ್ರಾಮೀಣ ಭಾಗದ ಜನರಿಗೆ ನಗರ ಮಟ್ಟದ ಸೌಲಭ್ಯಗಳನ್ನು ಒದಗಿಸುವ ಉದ್ದೇಶದೊಂದಿಗೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಶುಕ್ರವಾರ (30-01-2026) 'ಮುಖ್ಯಮಂತ್ರಿ ಗ್ರಾಮೋತ್ಥಾನ ಯೋಜನೆ' (Mukhyamantri Gramotthan Yojana - MGY) ಗೆ ಅಧಿಕೃತವಾಗಿ ಚಾಲನೆ ನೀಡಿದ್ದಾರೆ. ಆನಂದ್ ಜಿಲ್ಲೆಯ ಭದ್ರಾನ್‌ನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ ಒಟ್ಟು 663 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ 2,666 ಗ್ರಾಮ ಪಂಚಾಯತ್ ಕಚೇರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

➤ ಈ ಯೋಜನೆಯು ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಂತರವನ್ನು ಕಡಿಮೆ ಮಾಡುವ (Rural-Urban Divide) ಗುರಿಯನ್ನು ಹೊಂದಿದೆ. ಹಳ್ಳಿಗಳಲ್ಲಿ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ.

- ಗ್ರಾಮ ಕೇಂದ್ರಗಳ ಅಭಿವೃದ್ಧಿ: ಆಯ್ದ ಗ್ರಾಮಗಳನ್ನು ಆರ್ಥಿಕ ಬೆಳವಣಿಗೆಯ ಕೇಂದ್ರಗಳನ್ನಾಗಿ ಪರಿವರ್ತಿಸುವುದು.
- ಮೂಲಸೌಕರ್ಯ ವೃದ್ಧಿ: ನಗರಗಳಲ್ಲಿ ಇರುವಂತೆ ಉತ್ತಮ ರಸ್ತೆ, ಒಳಚರಂಡಿ ಮತ್ತು ವಿದ್ಯುತ್ ಸೌಲಭ್ಯಗಳನ್ನು ಗ್ರಾಮಗಳಿಗೆ ತಲುಪಿಸುವುದು.

- ಆಡಳಿತಾತ್ಮಕ ಬಲವರ್ಧನೆ: ಪಂಚಾಯತ್ ಕಚೇರಿಗಳ ಜೊತೆಗೆ 'ತಲಾಟಿ ನಿವಾಸ' (Talati Awas) ಕಟ್ಟಡಗಳನ್ನು ನಿರ್ಮಿಸುವ ಮೂಲಕ ಗ್ರಾಮ ಮಟ್ಟದ ಆಡಳಿತವನ್ನು ಚುರುಕುಗೊಳಿಸುವುದು.

**➤ ಮೊದಲ ಹಂತದ ವಿಶೇಷತೆಗಳು:**

1. ತಾಲ್ಲೂಕು ಕೇಂದ್ರಗಳಿಗೆ ಆದ್ಯತೆ: ಮೊದಲ ಹಂತದಲ್ಲಿ ತಾಲ್ಲೂಕು ಕೇಂದ್ರಗಳಾಗಿ ಕಾರ್ಯನಿರ್ವಹಿಸುವ 114 ಹಳ್ಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.
2. ಸೌಲಭ್ಯಗಳು: ಆಧುನಿಕ ರಸ್ತೆ ಜಾಲ, ಭೂಗತ ಒಳಚರಂಡಿ ವ್ಯವಸ್ಥೆ, ಸೋಲಾರ್ ಬೀದಿ ದೀಪಗಳು ಮತ್ತು ಇ-ಗ್ರಾಮ್ (e-Gram) ಮೂಲಕ ಡಿಜಿಟಲ್ ಆಡಳಿತ ಸೌಲಭ್ಯಗಳನ್ನು ನೀಡಲಾಗುವುದು.
3. ಮುಂದಿನ ಹಂತದಲ್ಲಿ 10,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಎಲ್ಲಾ ಗ್ರಾಮಗಳಿಗೆ ಈ ಯೋಜನೆಯನ್ನು ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ.







